# ಕಾಪಾಲಿಕರು ಮತ್ತು ಕಾಳಾಮುಖರು

## ಕಣ್ಮರೆಯಾದ ಎರಡು ಶೈವ ಸಂಪ್ರದಾಯಗಳು



ಇಂಗ್ಲಿಷ್ ಮೂಲ

**ಡೇವಿಡ್ ಎನ್. ಲಾರೆಂಜೆನ್**

ಕನ್ನಡಕ್ಕೆ ಅನುವಾದ

**ವಿರೂಪಾಕ್ಷ ಕುಲಕರ್ಣಿ**

ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಬೆಂಗಳೂರು - ೨

# ಕಾಪಾಲಿಕರು ಮತ್ತು ಕಾಳಾಮುಖರು

## ಕಣ್ಮರೆಯಾದ ಎರಡು ಶೈವ ಸಂಪ್ರದಾಯಗಳು

ಇಂಗ್ಲಿಷ್ ಮೂಲ

ಡೆವಿಡ್ ಎನ್. ಲಾರೆಂಜೆನ್

ಕನ್ನಡಕ್ಕೆ

ವಿರೂಪಾಕ್ಷ ಕುಲಕರ್ಣಿ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಜೆ. ಸಿ. ರಸ್ತೆ

ಬೆಂಗಳೂರು - 2

'KAPALIKARU MATTUA KALAMUKHARU' : KANMAREYADA ERADU SAIVA SAMPRADAYAGALU

(The Kāpālikas and Kālāmukhas : Two lost S'aivite Sects)

Original : David N. Lorenzen

Translated into kannada : Virupax Kulkarni, Pune

Pages : 8 + XII + 330

Price Rs.100/-

Kannada First Impression : 2005

ISBN : 81-7713-186-9



Publisher :
**N. Thippeswamy**
Administrator
Kannada Book Authority
Kannada Bhavana, J.C. Road,
Bangalore - 560 002.

DTP :
**JN Computer Graphics**
Bangalore - 40.

Printed at :
**Sreeranga Printers Pvt. Ltd.,**
# 517, Samudra Gupta Maurya Road,
Bhavani Nagar, Bangalore - 560 019.
Ph : 2667 9333, 2652 4757

# ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು - ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು - ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯ ಸಾಧನೆಯನ್ನು ಘೇರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿಕೊಂಡ ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ, ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾ ದೇವಿಯವರ ಜ್ಞಾನಶಕ್ತಿ ೨ x ೨ = ೪ ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹು ಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರ ಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು ? ಇದು ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ ಭಾಷೆಯನು ಹೊರಗಿಡುವುದು ;

ಆಡಳಿತ ಶಿಕ್ಷಣ ಸಂಪರ್ಕ ಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ ಬಹದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಗತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ , ಬೆಳೆದುಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದುವಚನ, ನುಡಿ ಟಠಡಢಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ , ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾ ವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ. ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದು ಕೊಂಡು ಜಂಗಮಶೀಲವಾಗಬೇಕಿದೆ. ಅತಿರೇಕಗಳ ಅವಾಂತರದಿಂದ ಸಮುದಾಯ ವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಆದ್ದರಿಂದ ಅಕ್ಷರ ಲೋಕ ಸೃಜನಶೀಲತೆ ಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಆಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತ ಗೊಂಡಾಗ ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೆಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ

ನಮ್ಮಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಮಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ನ ಖಣ ವಿಷಯಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆ ಬೆಳೆಯಬೇಕಿದೆ. ಕನ್ನಡದ ಜ್ಞಾನ ಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ.

ಹಿಂದಣ ಅನಂತವನು ಮುಂದಣ ಅನಂತವನು
ಒಂದು ದಿನ ಒಳಕೊಂಡಿತ್ತು ನೋಡಾ
ಒಂದು ದಿನವನೊಳಕೊಂಡು ಮಾತಾಡುವ ಮಹಾಂತನ
ಕಂಡು ಬಲ್ಲವರಾರಯ್ಯ
ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ
ಅಂತೆ ಹೋದರು ಕಾಣಾ ಗುಹೇಶ್ವರ

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನ ಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕನದ ಒಳಮುಖೀದರ್ಶನ ದೀಪ್ತಿ ಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕ ಜೀವನ ಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮ ವೆಂದರೆ, **ಜೀವನ** ವೈವಿಧ್ಯತೆಯ ಬಹುಮುಖೀ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ ಅಸಮಾನತೆಯ ಪ್ರಮಾಣ ವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು ಮಾನವಕೋಟಿಯನ್ನು ಸಂರಕ್ಷಿಸಬಲ್ಲ

ಶಕ್ತಿ ಅಕ್ಷರಲೋಕಕ್ಕಿದೆ. ಏಕರೂಪೀ ಗುಣದಿಂದ ಕೂಡಿದ ಗಣಕೀಕರಣದ ಏಕಾಧಿಪತ್ಯಕ್ಕಿಂತ ಬಹುರೂಪಿ ಗುಣದ ಪ್ರತಿಭಾ ಸಂಪನ್ನತೆಯಿಂದ ಹೊಳೆದ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ. ವೈವಿಧ್ಯತೆಗಳೊಳಗಿನ ಸೃಜನಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳು ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಾಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅರ್ಥದ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತು ದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ. ವಾಚನಾಭಿರುಚಿಯನ್ನು ಬೆಳೆಸುವ ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು ಹಾಗೂ ಓದುಗರ ನಡುವೆ ಚಿಂತನಾ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

❖ ❖ ❖

ಕಾಪಾಲಿಕ ಮತ್ತು ಕಾಳಾಮುಖ ಭಾರತದಲ್ಲಿ ಮಧ್ಯಯುಗದಲ್ಲಿದ್ದ ಎರಡು ಶೈವ ಪಂಥಗಳು. ಭಾರತದ ನೆಲದಲ್ಲಿ ಹುಟ್ಟಿದ ಯಾವುದೇ ಧಾರ್ಮಿಕ ಪಂಥ ಏಕಗಾಮಿಯಾಗಿ ಹರಿದದ್ದಿಲ್ಲ. ತನ್ನ ಕಾಲದಲ್ಲಿ ಪ್ರಬಲವಾಗಿದ್ದ ಅನ್ಯಧರ್ಮೀಯ ಪಂಥಗಳ ಜೊತೆಗೆ ವಾಗ್ವಾದಗಳನ್ನು ಸೃಷ್ಟಿಸಿಕೊಂಡು ಆರೋಪ ಪ್ರತ್ಯಾರೋಪಗಳ ಸಮರಮುಖೀ ವಾತಾವರಣದಲ್ಲಿ ಉಸಿರಾಡಿದ್ದೇ ಹೆಚ್ಚು. ಸಿದ್ಧಾಂತ ಶಿಖಾಮಣಿಗಳ ಅರ್ಥಸಂಕೋಚ ದೃಷ್ಟಿ ಹಾಗೂ ಮತೀಯ ತತ್ವನಿಷ್ಠೆಯ ಜಡಭಾವದ ಪರಿಣಾಮ ಈ ಸಮರಮುಖೀ ವಾತಾವರಣ. ಈ ಕಾರಣದಿಂದಾಗಿಯೇ ಕಾಳಾಮುಖ ಮತ್ತು ಕಾಪಾಲಿಕಗಳು ತಮಗೆ ಸಂಬಂಧಿಸಿದ ಯಾವುದೇ ಆಕರ ಗ್ರಂಥಗಳನ್ನು ಉಳಿಸಿಕೊಳ್ಳದೇ ಹೋದವು. ಈ ಎರಡೂ ಪಂಥಗಳ ಅಧ್ಯಯನಕ್ಕೆ ಎದುರಾಳಿ ಪಂಥಗಳಲ್ಲಿ ವಿರೋಧಭಾವದಲ್ಲಿ

ದಾಖಲಾದಂತೆ ಉಳಿದಿರುವ ವಿಚಾರಗಳನ್ನು ಸಂಗ್ರಹಿಸುವುದರ ಜೊತೆಗೆ ಲಭ್ಯವಿರುವ ಅಪರೂಪದ ಇತರೆ ಆಕರಗಳನ್ನೂ ಸಂಗ್ರಹಿಸಿ ವ್ಯಾಪಕ ಕ್ಷೇತ್ರಕಾರ್ಯದ ಮುಖೇನ ವಿದ್ವಾಂಸರಾದ ಡೇವಿಡ್ ಎನ್. ಲಾರೆಂಜನ್ ಅವರು ಕಾಪಾಲಿಕರು ಕಾಳಾಮುಖರು – ಎರಡು ಶೈವಸಂಪ್ರದಾಯಗಳು – ಎಂಬ ಕೃತಿಯನ್ನು ರಚನೆ ಮಾಡಿದ್ದಾರೆ. ಈ ಎರಡೂ ಸಿದ್ಧಾಂತ ಮತ್ತು ಸಂಪ್ರದಾಯಗಳ ಮತಾಚರಣೆಗಳನ್ನು ಕುರಿತಾಗಿ ಇರುವ ವಿಭಿನ್ನ ಬಗೆಯ ವ್ಯಾಖ್ಯಾನಗಳನ್ನು ವಿಶ್ಲೇಷಿಸುವಾಗ ಲೇಖಕರು ತೋರುವ ಎಚ್ಚರ ಸತ್ಯಶೋಧಕ ಭಾವದ ವಿವೇಕದಿಂದ ಕೂಡಿದೆ. ಕಾಪಾಲಿಕರ ಕೈಯೊಳಗಿನ ತಲೆಯೋಡನ್ನು ಕುರಿತಾಗಿ ಇರುವ ವಿಭಿನ್ನ ಮಾದರಿಯ ಕಥನಗಳನ್ನೇ ವ್ಯಾಖ್ಯಾನಿಸುವಾಗ ಕಾಪಾಲಿಕರ ಮತಾಚರಣೆಯ ಪರಮಗುರಿಯಾದ ಶಿವನೊಂದಿಗಿನ ಅವರ ಆಧ್ಯಾತ್ಮಿಕ ಐಕ್ಯತೆಯ ಅಂಶವನ್ನು ಮರೆಯದೆ ಕಥನಗಳ ಸತ್ಯಾಸತ್ಯತೆಯನ್ನು ಒರೆಹಚ್ಚುತ್ತಾರೆ. ಹಾಗೆಯೇ ಕಾಳಾಮುಖ ಸಂಪ್ರದಾಯದ ಎರಡು ಮುಖ್ಯ ಶಾಖೆಗಳಾದ ಶಕ್ತಿ ಪರಿಷತ್ತು ಹಾಗೂ ಸಿಂಹ ಪರಿಷತ್ತುಗಳ ಸೈದ್ಧಾಂತಿಕ ವ್ಯತ್ಯಾಸಗಳನ್ನು ಗ್ರಹಿಸುವಾಗಲೂ ಇವರು ತೋರುವ ಭಾಷಿಕ ಮೂಲದ ವಿಶ್ಲೇಷಣೆ ಇವರ ವೈಜ್ಞಾನಿಕ ದೃಷ್ಟಿಯ ನಿಖರತೆಯನ್ನು ತೋರುತ್ತದೆ. ಕಾಪಾಲಿಕ ಹಾಗೂ ಕಾಳಾಮುಖ ಸಂಪ್ರದಾಯಗಳನ್ನು ಕೇಂದ್ರವಾಗಿಟ್ಟುಕೊಂಡು ಹರಿಯುವ ಇವರ ವಿಶ್ಲೇಷಣೆ ಶೈವ ಪಂಥದ ಇತರ ಸಂಪ್ರದಾಯಗಳ ಬಗೆಗಿನ ಎಷ್ಟೋವಿಚಾರಗಳನ್ನು ಪ್ರಾಸಂಗಿಕವಾಗಿ ಪ್ರಸ್ತಾಪಿಸುತ್ತದೆ; ತುಂಬಾ ಸೂಕ್ಷ್ಮದಲ್ಲಿ ಈ ಸಂಪ್ರದಾಯಗಳ ನಡುವಿನ ಅಂತರ್ ಸಂಬಂಧಗಳನ್ನು ವಿವರಿಸುತ್ತದೆ.

ಇಂಥ ವೈಚಾರಿಕ ನಿಖರತೆಯ ವೈಜ್ಞಾನಿಕ ದೃಷ್ಟಿಕೋನದ ಸಂಶೋಧನ ಗ್ರಂಥವನ್ನು ಶ್ರೀ ವಿರೂಪಾಕ್ಷ ಕುಲಕರ್ಣಿ ಅವರು ಕನ್ನಡಕ್ಕೆ ಒದಗಿಸಿದ್ದಾರೆ. ಈ ಕೃತಿ ಕನ್ನಡಕ್ಕೆ ಅನುವಾದವಾಗಲು ಮುಖ್ಯ ಕಾರಣಕರ್ತರು, ವಿದ್ವಾಂಸರಾದ ಪ್ರೊ॥ ಎಂ.ಎಂ. ಕಲಬುರ್ಗಿ ಮಾಸ್ತರು.

ಕನ್ನಡ ಪುಸ್ತಕ ಪ್ರಾಧಿಕಾರದ ಅನುವಾದ ಮಾಲೆಯಲ್ಲಿ ಈ ಕೃತಿಯನ್ನು ಪ್ರಕಟಿಸಲು ಅನುಮತಿ ನೀಡಿದಂತೆ ಈ ಇಬ್ಬರು ಮಹನೀಯರು ಸಹಕರಿಸಿದ್ದಾರೆ. ಪ್ರಾಧಿಕಾರದ ಈ ಇಬ್ಬರು ಮಹನೀಯರು ಸಹಕರಿಸಿದ್ದಾರೆ. ಪ್ರಾಧಿಕಾರದ ಈ ಹಿಂದಿನ ಅಧ್ಯಕ್ಷರಾಗಿದ್ದ ಪ್ರೊ। ಮಲ್ಲೇಪುರಂ ಜಿ. ವೆಂಕಟೇಶ ಮತ್ತು ಸದಸ್ಯ ಬಳಗದವರು ಈ ಕೃತಿಯ ಪ್ರಕಟಣೆಗೆ ಒಪ್ಪಿಗೆ ನೀಡಿದ್ದು ಶ್ಲಾಘನೀಯ ವಿಚಾರ. ಈ ಎಲ್ಲ ಮಹನೀಯರಿಗೆ ಕನ್ನಡ ಪುಸ್ತಕ ಪ್ರಾಧಿಕಾರದ ಪರವಾಗಿ ಆತ್ಮೀಯ ವಂದನೆಗಳು.

**ಪ್ರೊ॥ ಎಸ್. ಜಿ. ಸಿದ್ಧರಾಮಯ್ಯ**
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

# ಪರಿವಿಡಿ

# ಸಂಕ್ಷಿಪ್ತ ಪದಗಳ ಪಟ್ಟಿ

| | | |
|---|---|---|
| ABORI | : | Annals of the Bhandarkar Oriental Research Institute [Poona]. |
| ARMAD | : | Annual Report of the Mysore Archaeological Department. |
| BSOS | : | Bulletin of the School of Oriental Studies [London]. |
| CII | : | Corpus' Inscriptionum Indicarum. |
| EC | : | Epigraphia Carnatica. |
| EI | : | Epigraphia Indica. |
| ERE | : | Encyclopaedia of Religion and Ethics, ed. James Hastings. |
| GSS | : | Goraksa-siddhānta-samgraha, ed. G. N. Kavirāja. |
| HAS | : | Hyderabad Archaeological Series. |
| HDS | : | History of Dharma ś āstra by P. V. Kane. |
| HTR | : | Harvard Theological Review. |
| IA | : | Indian Antiquary. |
| IHQ | : | Indian Historical Quarterly [Calcutta]. |
| IIJ | : | Indo-Iranian Journal [The Hague]. |
| JAnSB | : | Journal of the Anthropological Society of Bombay. |
| JAOS | : | Journal of the American Oriental Society. |
| JBBRAS | : | Journal of the Bombay Branch of the Royal Asiatic Society. |
| JBRS | : | Journal of Bihar Research Society. |
| JGRS | : | Journal of the Gujarat Research Society. |
| JIH | : | Journal of Indian History [Trivandrum]. |
| JOIB | : | Journal of the Oriental Institute, Baroda. |
| JORM | : | Journal of Oriental Research, Madras. |
| JRAS | : | Journal of the Royal Asiatic Society [London]. |
| JRASB | : | Journal of the Royal Asiatic Society of Bengal. |
| QJMS | : | Quarterly Journal of the Mythic Society [Bangalore]. |
| SBE | : | Sacred Books of the East, ed. F. Max Muller. |
| SII | | South Indian Inscriptions. |
| TAS | : | Travancore Archaeological Series. |

# ಅನುವಾದಕನ ಮಾತು

ಕನ್ನಡದ ಹಿರಿಯ ಸಂಶೋಧಕರಾದ ಡಾ. ಎಂ. ಎಂ. ಕಲಬುರ್ಗಿಯವರೊಂದಿಗಿನ ನನ್ನ ಪರಿಚಯ ಒಂದೆರಡು ವರ್ಷಗಳಷ್ಟು ಇತ್ತೀಚಿನದು. ಮರಾಠಿಯ ಹಿರಿಯ ತಲೆಮಾರಿನ ಪ್ರಾಧ್ಯಾಪಕರಾದ ಪ್ರೊ. ಶ್ರೀ. ರ. ಭಿಡೆ ಅವರು ಕಲಬುರ್ಗಿಯವರನ್ನು ಪುಣೆಯ ಕೆಲವು ವಿದ್ವಾಂಸರಿಗೆ ಪರಿಚಯಿಸಿದರು. ಮೊದಲ ಭೇಟಿಯಿಂದ ಹಿಡಿದು, ಅವರು ಪುಣೆಗೆ ಬಂದಾಗಲೆಲ್ಲ ದೀರ್ಘವಾದ ಚರ್ಚೆ, ಹರಟೆಗಳು ಸಾಗುತ್ತಲೇ ಬಂದಿವೆ. ಅವುಗಳ ಫಲಿತವೆಂದರೆ ಕಲಬುರ್ಗಿಯವರ ಯತ್ನಗಳಿಂದಾಗಿ ಮರಾಠಿಯ ಹಿರಿಯ ಸಂಶೋಧಕರಾದ ಡಾ॥ ರಾ . ಚಿಂ. ಢೇರೆಯವರ ಐದು ಸಂಶೋಧನ ಕೃತಿಗಳು ಬೇರೆ ಬೇರೆಯವರಿಂದ ಕನ್ನಡಕ್ಕೆ ಅನುವಾದಗೊಂಡು ಪ್ರಕಟವಾದುದು ; ನನ್ನ ಪತ್ನಿ ಉಮಾ ಅವರ ಒಂದು ಕನ್ನಡ ಅನುವಾದವೂ ಬೆಳಕು ಕಂಡುದು.

ಕಲಬುರ್ಗಿಯವರು ಕಳೆದ ವರ್ಷ ಪುಣೆಗೆ ಬಂದಾಗ, 'ಇಂಗ್ಲೀಷ್‌ನಿಂದ ಕನ್ನಡಕ್ಕೆ ಅನುವಾದಿಸುತ್ತೀರಾ?', ಎಂದು ಕೇಳಿದರು. ಈ ಮೊದಲು ನಾನು ಬರಹಗಳನ್ನು ಅನುವಾದಿಸಿದ್ದುದನ್ನು ಹೇಳಿದೆ. ಆಗ ಅವರು ಅಮೇರಿಕೆಯ ಸಂಶೋಧಕ ಡಿ. ಎನ್. ಲಾರೆಂಜೆನ್ ಅವರ ' ಕಾಪಾಲಿಕ ಮತ್ತು ಕಾಳಾಮುಖ ' ರನ್ನು ಕುರಿತಾದ ಪುಸ್ತಕದ ಅನುವಾದಕ್ಕಾಗಿ ಸೂಚಿಸಿದರು. ಒಪ್ಪಿಕೊಂಡೆ. ಅವರೇ ಇಲ್ಲಿಯ ಭಂಡಾರಕರ ಪ್ರಾಚ್ಯ ಸಂಶೋಧನ ಸಂಸ್ಥೆಯಿಂದ ಈ ಪುಸ್ತಕದ ಛಾಯಾಪ್ರತಿಯನ್ನು ಒದಗಿಸಿದರು.

ಶ್ರೀ ಲಾರೆಂಜೆನ್ನರು ಅನುವಾದಕ್ಕಾಗಿ ಸಂತೋಷದಿಂದ ಒಪ್ಪಿಗೆ ನೀಡಿದರಲ್ಲದೆ, ದಿಲ್ಲಿಯ ಪ್ರಕಾಶಕರಾದ ಮೋತೀಲಾಲ ಬನಾರಸೀದಾಸರು ಇವರ ಎರಡನೆಯ ಆವೃತ್ತಿಯನ್ನು ಹೊರ ತಂದಿದ್ದು, ತಾವು ಅದರಲ್ಲಿ ಎರಡು ಹೊಸ ಪರಿಶಿಷ್ಟಗಳನ್ನು ಸೇರಿಸಿದುದನ್ನೂ ತಿಳಿಸಿದರು.

ಈ ಆವೃತ್ತಿಯನ್ನೂ ತರಿಸಿಕೊಂಡು ಅನುವಾದ ಶುರುಮಾಡಿದೆ. ವಿಷಯ ನನ್ನದಲ್ಲವಾದುದರಿಂದ ಅದರ ಪರಿಕಲ್ಪನೆಗಳು, ಹಾಗೂ ಪರಿಭಾಷೆಯ ಪದಗಳು ನನ್ನೆದುರು ಹಲವು ಅಡೆತಡೆಗಳನ್ನೊಡ್ಡಿದವು. ಕಲಬುರ್ಗಿಯವರು ಅವುಗಳನ್ನು ನಿವಾರಿಸಿದರು. ಅಲ್ಲದೆ ಮೈಸೂರು ವಿಶ್ವವಿದ್ಯಾಲಯದ ಇಂಗ್ಲೀಷ-ಕನ್ನಡ ನಿಘಂಟು ನನಗೆ ತುಂಬ ನೆರವು ನೀಡಿತು. ನನ್ನ ಮೊದಲ ಕರಡನ್ನು ಓದಿ, ಕಲಬುರ್ಗಿಯವರು ಸಲಹೆ ಸೂಚನೆಗಳನ್ನು ನೀಡಿದರು.

ಮೂಲ ಕನ್ನಡ ಶಾಸನಗಳು ಲಾರೆಂಜೆನ್ ಅವರಿಂದ ಆಂಗ್ಲಭಾಷೆಗೆ ಅನುವಾದಗೊಂಡು, ಈಗ ಮತ್ತೆ ನನ್ನಿಂದ ಕನ್ನಡಕ್ಕೆ ಅನುವಾದಗೊಂಡವು. ಹೀಗಾಗಿ ಮೂಲ ಪಾಠದೊಂದಿಗೆ ತಾಳೆ ನೋಡುವುದೂ ಅಗತ್ಯವಿತ್ತು. ಮೂಲ ಶಾಸನ ಪಾಠಗಳು ಪುಣೆಯಲ್ಲಿ ದೊರಕದಿರುವುದರೊಂದಿಗೆ ಹಳಗನ್ನಡದ ನನ್ನ ಅರಿವಿಗೆ ಮಿತಿಯಿರುವ ಸಮಸ್ಯೆಯೂ ಇದ್ದಿತು. ಕಲಬುರ್ಗಿಯವರು ಈ ಹೊಣೆಯನ್ನೂ ಹೊತ್ತುಕೊಂಡರು. ಅವರಿಗೆ ಹೇಗೆ ಕೃತಜ್ಞತೆಗಳನ್ನು ಸಲ್ಲಿಸಬೇಕೆಂಬುದೇ ತಿಳಿಯುತ್ತಿಲ್ಲ.

ಅನುವಾದದ ನನ್ನ ಕೆಲಸ ಸಾಗಿರುವಾಗಲೇ ಅದರ ಪ್ರಕಟಣೆಗಾಗಿ ಕೋರಿ 'ಕನ್ನಡ ಪುಸ್ತಕ ಪ್ರಾಧಿಕಾರ' ಕ್ಕೆ ಬರೆದೆ. ಅಧ್ಯಕ್ಷರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರು ಕೈಬರಹ ತಯಾರಾಗುತ್ತಲೇ ಕಳಿಸಿ ಕೊಡಬೇಕೆಂದು ತಿಳಿಸಿದರು. ಕೈಬರಹ ತಲುಪುತ್ತಲೇ 'ಸ್ಥಾಯಿ ಸಭೆ 'ಯು ಅದರ ಪ್ರಕಟಣೆಗೆ ಒಪ್ಪಿಗೆ ನೀಡಿದುದನ್ನು ತತ್ಪರತೆಯಿಂದ ತಿಳಿಸಿದರು. ಇವರೆಲ್ಲರ ಯತ್ನಗಳಿಂದಾಗಿ ಅಂದವಾದ ಈ ಕೃತಿ ಪ್ರಕಟವಾಯಿತು. ಕನ್ನಡ ಪುಸ್ತಕ ಪ್ರಾಧಿಕಾರಕ್ಕೂ, ಅದರ ಅಧಿಕಾರಿಗಳೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ. ಪರಿಷ್ಕರಣ ಸಂದರ್ಭದಲ್ಲಿ ನೆರವಾದ ಡಾ. ಸಿ. ಆರ್. ಯರವಿನತೆಲಿಮಠ ಅವರಿಗೂ ಆಭಾರಿಯಾಗಿದ್ದೇನೆ.

ಈ ಕೃತಿಯ ಅನುವಾದದಲ್ಲಿ ನನ್ನ ಮಡದಿ ಉಮಾ ಹಾಗೂ ನನ್ನ ತಮ್ಮನ ಮಗ ಅಭಿಜಿತರು ವಿಶಿಷ್ಟ ಪದಸೂಚಿಯನ್ನು ತಯಾರಿಸಿ ಕೊಡುವುದರಿಂದ ಹಿಡಿದು, ಹಲವು ಬಗೆಯಾಗಿ ಸಹಕರಿಸಿರುವರೆಂಬುದನ್ನು ಇಲ್ಲಿ ನೆನೆಯುತ್ತೇನೆ.

ಈ ಕನ್ನಡ ಕೃತಿಯು ವಿದ್ವಾಂಸರಂತೆಯೇ ಸಾಮಾನ್ಯರಿಗೂ ಕೂಡ ಒಂದು ಒಳ್ಳೆಯ ಓದಿನ ಸಾಮಗ್ರಿಯನ್ನು ಒದಗಿಸುವಂತಿದೆ. ಕನ್ನಡಕ್ಕೆ ತುಂಬ ಉಪಯುಕ್ತವಾದ ಒಂದು ಆಕರ ಗ್ರಂಥವನ್ನು ಒದಗಿಸಿ ಕೊಟ್ಟ ನೆಮ್ಮದಿ ನನ್ನದು.

ಪುಣೆ

೨೨-೫-೨೦೦೪ ವಿರೂಪಾಕ್ಷ ಕುಲಕರ್ಣಿ

# ಮುನ್ನುಡಿ

## (ಮೊದಲ ಮುದ್ರಣ)

ಈ ಅಧ್ಯಯನವು ಕಾಪಾಲಿಕ ಮತ್ತು ಕಾಳಾಮುಖ ಎಂಬೆರಡು ಕಣ್ಮರೆಯಾದ ಶೈವ ಸಂಪ್ರದಾಯಗಳನ್ನು ಕುರಿತು ಸಾಧ್ಯವಿದ್ದ ಮಟ್ಟಿಗಿನ ಒಂದು ಪರಿಪೂರ್ಣವಾದ ವಿವರಣೆಯನ್ನು ನೀಡಲು ಯತ್ನಿಸಲಿದೆ. ಕ್ರಿಸ್ತಮತದ ಸಂದರ್ಭದಲ್ಲಿ 'ಪಂಥ' ದ ಪರಿಕಲ್ಪನೆಯು ಮೂರು ಮುಖ್ಯ ಲಕ್ಷಣಗಳನ್ನು ಒಳಗೊಳ್ಳುತ್ತದೆ: (ನಿರ್ದಿಷ್ಟ ಆರಾಧನೆಯ ರೀತಿಯನ್ನು ಒಳಗೊಂಡ) ವಿಶಿಷ್ಟವಾದ ಸಿದ್ಧಾಂತ, ಯತಿ ಪರಂಪರೆ ಹಾಗೂ ಸರಿಯಾಗಿ ವ್ಯಾಖ್ಯೆಗೆ ಒಳಪಟ್ಟುದೂ, ಏಕಮಾತ್ರವೂ ಆದ ಸಾಮಾನ್ಯ ಜನ ಸಮುದಾಯ. ಕ್ರೈಸ್ತಪಂಥಗಳೊಂದಿಗೆ ಹೋಲಿಸಿದರೆ ಹಿಂದೂ 'ಪಂಥ'ಗಳ ರಚನೆಯು ಖಚಿತವಾದ ಆಕಾರವಿಲ್ಲದುದಾಗಿದೆ. ಬಹಳಷ್ಟು ಸಂದರ್ಭಗಳಲ್ಲಿ ಧಾರ್ಮಿಕ ಸಂಘಟನೆಗಿಂತ ಸಿದ್ಧಾಂತ ಹಾಗೂ ಉಪಾಸನೆಯ ಪದ್ಧತಿಗಳಿಗೆ ಹೆಚ್ಚಿನ ಒತ್ತನ್ನು ನೀಡಲಾಗುತ್ತದೆ. ಈ ಅಧ್ಯಯನದಲ್ಲಿ ಚರ್ಚೆಗೆ ಒಳಪಡಿಸಲಾದ ಕಾಪಾಲಿಕ, ಕಾಳಾಮುಖ ಹಾಗೂ ಪಾಶುಪತ ಸಂಪ್ರದಾಯಗಳಿಗೆ ಹಲವು ಸಲ ಬಳಸಲಾದ ಸಂಸ್ಕೃತದ ಪದಗಳೆಂದರೆ, ' ದರ್ಶನ' , ' ಸಮಯ' , ಹಾಗೂ ' ಮತ' . ಈ ಪದಗಳ ಮೂಲ ಅರ್ಥ, 'ಸಿದ್ಧಾಂತ'. ಮೇಲಿನ ಈ ಮೂರೂ ಸಮುದಾಯಗಳಿಗೆ ತಮ್ಮದೇ ಆದ ಯತಿ ಪರಂಪರೆಯಿತ್ತು. ಇವರಲ್ಲೆಲ್ಲ ಕಾಳಾಮುಖರು ಹೆಚ್ಚು ಉತ್ತಮವಾದ ಬಗೆಯಲ್ಲಿ ಸಂಘಟಿತರಾಗಿದ್ದುದು ಕಂಡುಬರುತ್ತದೆ. ಪ್ರತಿಯೊಂದು ಮಠವು ಒಬ್ಬ ಮಠಾಧಿಪತಿಯ ನಾಯಕತ್ವದಲ್ಲಿದ್ದು ಇಂತಹ ಹಲವಾರು ಕಾಳಾಮುಖಮಠಗಳು ತಮ್ಮ ಸುತ್ತಲಿನ ದೇವಾಲಯಗಳನ್ನು ನಿಯಂತ್ರಿಸುತ್ತಿದ್ದವು. ಆದರೂ ಇವರ ಮೂರರಲ್ಲಿ ಒಂದು ಗುಂಪು ತನ್ನದೇ ಆದ ಒಂದು ಜನಸಮುದಾಯವನ್ನು ಹೊಂದಿತ್ತೇ? ಎಂಬ ಬಗೆಗೆ ಸಂದೇಹವಿದೆ. ಸಾಮಾನ್ಯನಾದ ಒಬ್ಬ ಒಕ್ಕಲಿಗನಾಗಲೀ ಇಲ್ಲವೆ ಒಬ್ಬ ವ್ಯಾಪಾರಿಯಾಗಲೀ ತನ್ನನ್ನು ಒಬ್ಬ ಬೌದ್ಧ, ಜೈನ, ವೈಷ್ಣವ ಇಲ್ಲವೆ ಶೈವನೆಂದು ಕರೆದುಕೊಂಡಿರಬಹುದಾದರೂ ತನ್ನನ್ನು ಒಬ್ಬ ಕಾಪಾಲಿಕ, ಕಾಳಾಮುಖ ಇಲ್ಲವೆ ಪಾಶುಪತನೆಂದು ಕರೆದುಕೊಂಡಿರುವ ಸಾಧ್ಯತೆ ಕಡಿಮೆ. ವ್ಯಕ್ತಿಗಳು ತಮ್ಮ ಧರ್ಮಕ್ಕೆ ನಿಷ್ಠೆಯನ್ನು ಕಳೆದುಕೊಂಡೆವೆಂದು ಭಾವಿಸದೆಯೇ ಬೇರೆ ಬೇರೆ ಯತಿ ಪರಂಪರೆಗಳಿಗೆ, ಇಷ್ಟೇ ಏಕೆ, ತಮ್ಮ ಎದುರಾಳಿ 'ಪಂಥ' ಗಳಿಗೆ ಕೂಡ ಬೆಂಬಲವನ್ನು ನೀಡುತ್ತದ್ದ ಸಂಗತಿಯು ಶಾಸನಗಳಲ್ಲಿ ಕಂಡು ಬರುತ್ತದೆ. ಈ ಕಾರಣದಿಂದಾಗಿ ಕಾಪಾಲಿಕ, ಕಾಳಾಮುಖ ಹಾಗೂ ಪಾಶುಪತ 'ಸಂಪ್ರದಾಯ'ಗಳನ್ನು ಕುರಿತು ಮಾತನಾಡುವ ಬದಲು, ಅವುಗಳ 'ಮಠಕ್ಕೆ ಸಂಬಂಧಿಸಿದ

ಪರಂಪರೆ' ಗಳನ್ನು ಕುರಿತು ಮಾತನಾಡುವುದು ಹೆಚ್ಚು ಸೂಕ್ತವೆನ್ನಿಸೀತು. ಆದರೆ ' ಮಠದ ಪರಂಪರೆ' ಯ ಲ್ಲಿ ಬೇರೆಯದೇ ಆದ ಸೈದ್ಧಾಂತಿಕ ಇಲ್ಲವೆ ಆಧ್ಯಾತ್ಮಿಕ ನೆಲೆ ಧ್ವನಿತಗೊಳ್ಳದ ಕಾರಣ ನಾವು 'ಸಂಪ್ರದಾಯ' ಎಂಬ ಪದದ ಬಗೆಗೆ ನಮ್ಮ ದಿಯನ್ನು ತಳೆಯಲಿರುವೆವು.

ದುರ್ದೈವದ ಸಂಗತಿಯೆಂದರೆ ಇಂದು ಕಾಪಾಲಿಕ ಇಲ್ಲವೆ ಕಾಳಾಮುಖರ ಅದಾವುದೇ ಧಾರ್ಮಿಕ ಗ್ರಂಥವು ಉಳಿದಿಲ್ಲ. ಅವರ ಎದುರಾಳಿಗಳು ನೀಡಿದ ವಿವರಗಳಿಂದಲೇ ಇವರ ಭಾವಚಿತ್ರಗಳನ್ನು ಸಿದ್ಧಪಡಿಸಬೇಕಷ್ಟೆ. ಅಲ್ಲದೆ ಕಾಳಾಮುಖರ ಸಂದರ್ಭದಲ್ಲಿ, ಅವರ ದೇವಾಲಯಗಳಿಗೆ ನೀಡಲಾದ ದತ್ತಿಗಳನ್ನು ಕುರಿತು ಶಾಸನಗಳಲ್ಲಿ ದೊರಕುವ ಮಾಹಿತಿಯಿಂದಲೂ ನೆರವು ದೊರಕುತ್ತದೆ. ಯಾಮುನಾಚಾರ್ಯರ ಹಾಗೂ ಅವರ ಶಿಷ್ಯನಾದ ರಾಮಾನುಜರ ಇವೆರಡು ಸಂಪ್ರದಾಯಗಳನ್ನು ಕುರಿತಾದ ಹೇಳಿಕೆಗಳು ಒಂದು ಉತ್ತಮವಾದ ಆರಂಭ ಬಿಂದುವನ್ನು ಒದಗಿಸುತ್ತವೆ.

ಈ ಇಬ್ಬರೂ ವೈಷ್ಣವ ಯತಿಗಳ ಹೇಳಿಕೆಗಳನ್ನು ಕಾಪಾಲಿಕರ ಕುರಿತಾದ ಸಂಸ್ಕೃತದ ಬಹಳಷ್ಟು ವರ್ಣನೆಗಳು ದೃಢಪಡಿಸುವವಲ್ಲದೆ ವಿಸ್ತರಿಸುತ್ತವೆ. ಈ ಸಂದರ್ಭದಲ್ಲಿ ವಿಶಿಷ್ಟ ಮಹತ್ವವನ್ನು ಹೊಂದಿದ ಎರಡು ನಾಟಕಗಳೆಂದರೆ ಭವಭೂತಿಯ ' ಮಾಲತಿ-ಮಾಧವ' ಹಾಗೂ ಕೃಷ್ಣಮಿಶ್ರನ 'ಪ್ರಬೋಧ ಚಂದ್ರೋದಯ'ಗಳು. ಶಂಕರಾಚಾರ್ಯರ ಚರಿತ್ರೆಯನ್ನು ಕುರಿತ ವಿವರಗಳನ್ನು ಒದಗಿಸುವ ಕೃತಿಗಳೆಂದರೆ ಮಾಧವಾಚಾರ್ಯರ 'ಶಂಕರ ದಿಗ್ವಿಜಯ' ಹಾಗೂ ಆನಂದಗಿರಿಯ 'ಶಂಕರ ವಿಜಯ'ಗಳು. ಕಾಪಾಲಿಕರನ್ನು ಕುರಿತಾದ ಈ ಮೂಲಗಳೆಲ್ಲವೂ ಸುಮಾರಾಗಿ ಕಟ್ಟುಕಥೆಗಳು ಹಾಗೂ ಹಗೆತನದ ದೃಷ್ಟಿಕೋನಗಳಿಂದ ಬರೆದವುಗಳಾಗಿದ್ದರೂ, ಅವು ಒದಗಿಸುವ ಚಿತ್ರವು ಸಮಂಜಸವೆನ್ನಿಸುವ ಮಟ್ಟಿಗೆ ಸಪ್ರಮಾಣದ್ದೆಂದು ಖಚಿತಪಡಿಸುವ ಮಟ್ಟಿಗೆ ಅದು ಸಾಕಷ್ಟು ವಿವರವೂ, ಸುಸಂಗತವೂ ಆಗಿದೆ. ಕಾಪಾಲಿಕರವುಗಳು ಎಂದೆನ್ನಬಹುದಾದ ದೇವಾಲಯಗಳ ಸಂಶೋಧನೆಗಳಿಂದ ದೊರೆತ ಎರಡು ಇಲ್ಲವೆ ಮೂರು ಶಾಸನಗಳು ಏನಿಲ್ಲೆಂದರೂ ಅವರ ಅಸ್ತಿತ್ವವನ್ನು ಕುರಿತು ನಮ್ಮಲ್ಲಿ ಭರವಸೆಯನ್ನು ಹುಟ್ಟಿಸುತ್ತವೆ.

ಯಾಮುನಾಚಾರ್ಯರು ಹಾಗೂ ರಾಮಾನುಜರ ಟೀಕೆಗಳ ಹೊರತಾಗಿ ಕಾಳಾಮುಖರ ಬಗೆಗಿರುವ ಮೂಲಗಳೆಂದರೆ ಶಾಸನಗಳು. ಕಾಳಾಮುಖ ದೇವಾಲಯಗಳಿಗೆ ನೀಡಲಾದ ಎಲ್ಲಕ್ಕೂ ಹೆಚ್ಚಿನ ದತ್ತಿಗಳು ದೊರೆತಿರುವುದು ಇಂದಿನ ಕರ್ನಾಟಕ ಪ್ರಾಂತದಲ್ಲಿ.ಇವೆಲ್ಲ ಸುಮಾರು ಕ್ರಿ.ಶ. ಹನ್ನೊಂದನೆಯ ಹಾಗೂ ಹನ್ನೆರಡನೆಯ ಶತಮಾನದವುಗಳು. ಹೆಚ್ಚಾಗಿ ನಾಡನುಡಿಯಾದ ಕನ್ನಡದಲ್ಲಿರುವ ಇವು, ಸಾಮಾನ್ಯವಾಗಿ ಸಂಪ್ರದಾಯದ ಸಿದ್ಧಾಂತ ಹಾಗೂ ಒಳಪಂಗಡಗಳ ವಿವರಗಳನ್ನು ಒದಗಿಸುವುದಕ್ಕಿಂತಲೂ ಹೆಚ್ಚಿನ ಐತಿಹಾಸಿಕ ಮಾಹಿತಿಯನ್ನು ಒದಗಿಸುತ್ತವೆ. ಅವುಗಳಲ್ಲಿರುವ ಧಾರ್ಮಿಕ ಮಾಹಿತಿಯು ಯಾಮುನಾಚಾರ್ಯ ಹಾಗೂ ರಾಮಾನುಜರ ಹೇಳಿಕೆಗಳನ್ನು ದೃಢಪಡಿಸುವ ಬದಲು,

ಅಲ್ಲಗಳೆಯುವಂತೆ ಕಾಣುತ್ತದೆ. ಎಲ್ಲಕ್ಕೂ ಹೆಚ್ಚು ಮಹತ್ವದ ಸಂಗತಿಯೆಂದರೆ ಈ ಶಾಸನಗಳು, ಕಾಳಾಮುಖರನ್ನು ಪಾಶುಪತರ ಒಂದು ಉಪಶಾಖೆಯೆಂದು ನಮೂದಿಸಿರುವುದು. ಈವರೆಗೂ ಉಳಿದುಕೊಂಡಿರುವ ಧಾರ್ಮಿಕ ಗ್ರಂಥ ಹಾಗೂ ಶಾಸನಗಳಿಂದಾಗಿ ಪಾಶುಪತ ಸಂಪ್ರದಾಯದ ಬಗೆಗೆ ಸಾಕಷ್ಟು ತಿಳಿದಿದೆ.

ಕೆಲವು ಜನ ಆಧುನಿಕ ವಿದ್ವಾಂಸರು ಮಾತ್ರ ಕಾಪಾಲಿಕ ಇಲ್ಲವೆ ಕಾಳಾಮುಖರತ್ತ ತುಂಬ ಗಮನವನ್ನು ಹರಿಸಿರುವರು. ಹೆಸರಾದ ಚರ್ಚೆಗಳಲ್ಲಿ ಒಂದೆಂದರೆ ಆರ್. ಜಿ. ಭಾಂಡಾರಕರರ, ' Vaiṣṇavism, Saivism and Minor Religious Systems' (1913), ಎಂಬ ಪುಸ್ತಕ. ಭಾಂಡಾರಕರರು ರಾಮಾನುಜ, ಮಾಧವಾಚಾರ್ಯ, ಆನಂದಗಿರಿ ಹಾಗೂ ಭವಭೂತಿಯರನ್ನು ಕುರಿತು ಸಂಕ್ಷಿಪ್ತ ಕಥನಗಳಿಗೆ ತಮ್ಮನ್ನು ಮಿತಪಡಿಸಿಕೊಂಡಿರುವರು. ರಾಮಾನುಜರ ಕಥನದಲ್ಲಿ 'ಕಾಪಾಲಿಕ ಹಾಗೂ ಕಾಳಾಮುಖ ಸಂಪ್ರದಾಯಗಳ ನಡುವೆ ಒಂದು ಬಗೆಯ ಗೊಂದಲ ಇರುವಂತೆ ಕಾಣುತ್ತದೆ'ಎಂಬುದಾಗಿ ಭಾಂಡಾರಕರರು ಒಪ್ಪಿಕೊಳ್ಳುತ್ತಾರಾದರೂ ಕಾಳಾಮುಖರದು 'ತೀರ ಅತಿರೇಕಕ್ಕೆ ತಲುಪಿದ ಸಂಪ್ರದಾಯ'ಎಂಬುದಾಗಿಯೂ ಅವರು ಸ್ವೀಕರಿಸುತ್ತಿರುವಂತಿದೆ. ಮುಂದಿನ ಕಾಲದಲ್ಲಿ ಹಲವು ಜನ ಲೇಖಕರು ಈ ಅಭಿಪ್ರಾಯವನ್ನು ಒಪ್ಪಿಕೊಂಡಿದ್ದಾರೆ. ಆದರೆ ಅವರೀ ಅಭಿಪ್ರಾಯ ಸರಿಯಾದುದಲ್ಲ ಎಂಬುದು ನನ್ನ ಭಾವನೆ. ಕಾಳಾಮುಖರನ್ನು ಕುರಿತಾದ ಒಂದು ನಿಜವಾದ ಚಿತ್ರವನ್ನು ಪಡೆಯಬೇಕಿದ್ದರೆ ಅವರ ಶಾಸನಗಳನ್ನು ಕೂಲಂಕಷವಾಗಿ ಗಮನಿಸಲೇಬೇಕಿದೆ. ಕಾಳಾಮುಖರ ಶಾಸನಗಳನ್ನು ಕುರಿತು ಎಲ್ಲ ಸಂಗತಿಗಳನ್ನು ಒಳಗೊಳ್ಳುವ ವ್ಯಾಪಕವಾದ ಅಧ್ಯಯನದ ಒಂದು ಯತ್ನ ಈವರೆಗೂ ನಡೆದಿಲ್ಲವಾದರೂ ಬಳ್ಳಿಗಾವಿಯ ಶಕ್ತಿಪರಿಷತ್ತಿನ ಕಾಳಾಮುಖರನ್ನು ಕುರಿತು,ತಕ್ಕದಾದ ಚರ್ಚೆಗಳು ಜೆ. ಎಫ್. ಫ್ಲೀಟ್ ಇವರ 'Inscriptions at Ablur' ಹಾಗೂ ಡಾ. ಎ. ವೆಂಕಟ ಸುಬ್ಬಯ್ಯನವರ 'A Twelth Century University in Mysore' ಗಳಲ್ಲಿ ಕಾಣಸಿಗುತ್ತವೆ. 'Epigraphica Carnatica' ದಲ್ಲಿ ಬಲು ದೊಡ್ಡ ಸಂಖ್ಯೆಯ ಕಾಳಾಮುಖ ಶಾಸನಗಳು ಬಿ. ಎಲ್. ರೈಸ್ ಇವರಿಂದ ಅನುವಾದಗೊಂಡಿವೆ; ಸಂಪಾದನೆಗೊಂಡಿವೆ. ಬೇರೆಲ್ಲ ಶಾಸನಗಳು ಬೇರೆ ಬೇರೆ ವಿದ್ವಾಂಸರಿಂದ ' Epigraphica Indica', 'South Indian Inscriptions', 'Indian Antiquary' ಹಾಗೂ ಇನ್ನಿತರ ನಿಯತಕಾಲಿಕೆಗಳಲ್ಲಿ ಸಂಪಾದನೆಗೊಂಡಿವೆಯಲ್ಲದೆ ಹಲವು ಸಲ ಅನುವಾದಗೊಂಡಿವೆ. ಕಾಪಾಲಿಕರನ್ನು ಕುರಿತು ಕೇವಲ ಒಬ್ಬ ಆಧುನಿಕ ವಿದ್ವಾಂಸರ ಹೆಸರನ್ನು ವಿಶೇಷವಾಗಿ ನಮೂದಿಸಬೇಕಿದೆ. ಅವರೆಂದರೆ ಕೆ. ಕೆ. ಹಂಡಿಕಿ (Handiqui) ಅವರು. ಸೋಮದೇವನ 'ಯಶಸ್ತಿಲಕ' ಕ್ಕೆ ಇರುವ ಹತ್ತನೆಯ ಶತಶತಮಾನದ ಹಿನ್ನೆಲೆಯನ್ನು ಕುರಿತಾದ ತಮ್ಮ ತೀಕ್ಷ್ಣಬುದ್ಧಿಯ ಅಧ್ಯಯನ ಹಾಗೂ ಶ್ರೀಹರ್ಷನ 'ನೈಷಧಚರಿತ' ದ ಅನುವಾದದಲ್ಲಿ 'ಸೋಮಸಿದ್ಧಾಂತ' ವನ್ನು ಕುರಿತಾದ ತಮ್ಮ ಟಿಪ್ಪಣಿಯಲ್ಲಿ ಅವರು ಈ ಸಂಪ್ರದಾಯಕ್ಕಾಗಿ ಹಲವಾರು ಪುಟಗಳನ್ನು ಮೀಸಲಾಗಿರಿಸಿದ್ದಾರೆ. ನಾನು ಆರನೆಯ ಅಧ್ಯಾಯದ ಆರಂಭದಲ್ಲಿ

ಪಾಶುಪತರನ್ನು ಕುರಿತಾದ ಹಲವಾರು ಆಧುನಿಕ ಅಧ್ಯಯನಗಳನ್ನು ಒಳಗೊಳ್ಳುವ ಸಾಕಷ್ಟು ವ್ಯಾಪಕವಾದ ಒಂದು ಪಟ್ಟಿಯನ್ನು ನೀಡಿದ್ದೇನೆ.

ಈಗಿನ ನನ್ನೀ ಅಧ್ಯಯನದಲ್ಲಿ ನಾನು ಮೊದಲ ಬಾರಿಗೆ ಕಾಪಾಲಿಕರು ಹಾಗೂ ಕಾಳಾಮುಖರನ್ನು ಕುರಿತು ಉಪಲಬ್ಧವಿದ್ದ ಆಕರ ಸಾಮಗ್ರಿಯನ್ನೆಲ್ಲ ಒಂದೆಡೆ ಕಲೆಹಾಕಲು ಹಾಗೂ ಇವೆರಡು ಸಂಪ್ರದಾಯಗಳ ಇತಿಹಾಸ, ಸಿದ್ಧಾಂತಗಳು, ಮತ್ತು ಮತಾಚರಣೆಗಳನ್ನು ಕುರಿತು ಸುಸಂಗತವಾದ ಒಂದು ಕಥನವನ್ನು ಹೊರತರಲು ಯತ್ನಿಸಿದ್ದೇನೆ.

ಕಾಪಾಲಿಕರ ಸಂದರ್ಭದಲ್ಲಿ ಮೊದಲಿಗೆ ಈ ಆಕರ ಸಾಮಗ್ರಿಯನ್ನು ,ಸಾಧ್ಯವಿದ್ದಷ್ಟು ಮಟ್ಟಿಗೆ ಓದಿಕೊಳ್ಳಬಹುದಾದ ರೂಪದಲ್ಲಿ ನೀಡಿ ಅದರ ವಿಶ್ಲೇಷಣೆಯನ್ನು ಮುಂದಿನ ಅಧ್ಯಾಯಕ್ಕಾಗಿ ಕಾದಿರಿಸಿದ್ದೇನೆ. ಈ ಬಗೆಯ ಏರ್ಪಾಡಿನಿಂದಾಗಿ ಮಹತ್ವದ ಸಂದರ್ಭಗಳನ್ನೆಲ್ಲ ಹತ್ತಾರು ಸಲ ಪುನರಾವೃತ್ತಿಗೆ ಒಳಪಡಿಸುವುದನ್ನು ಅಗತ್ಯದ್ದನ್ನಾಗಿ ಮಾಡಿದೆ. ಈ ಬಗೆಗೆ ಓದುಗರಿಂದ ತಾಳ್ಮೆಯನ್ನು ಕೋರುತ್ತೇನೆ. ಎಲ್ಲೆಡೆಗೆ ತುಣುಕು ತುಣುಕಾಗಿ ಹರಡಿ ಹಂಚಿದ ಪುರಾವೆಗಳಿಂದಾಗಿ ಕಾಪಾಲಿಕ ಸಂಪ್ರದಾಯ ಹಾಗೂ ಸಿದ್ಧಾಂತಗಳ ಮರುರಚನೆಯು ಊಹೆಯನ್ನು ಆಧರಿಸಿದುದೆಂಬ ಸಂಗತಿಯನ್ನು ಒಪ್ಪಿಕೊಳ್ಳಬೇಕಿದೆ. ಹೀಗಾಗಿ, ನನ್ನ ಹೇಳಿಕೆಗಳನ್ನು ಮತ್ತೆ ಮತ್ತೆ, ಸ್ವಲ್ಪ ಸ್ವಲ್ಪವಾಗಿ ಮಾರ್ಪಡಿಸಬೇಕಾಗಿ ಬಂದಿದೆ. ಅದಕ್ಕಾಗಿ ನಾನು ಬಳಸಿಕೊಂಡ ಪದಗಳಾಗಲಿ, ನುಡಿಗಟ್ಟುಗಲಾಗಲಿ ಈ ಬಗೆಯವು: 'ಬಹುಶಃ', 'ಸಾಧ್ಯ', 'ಇದ್ದರೂ ಇರಬಹುದು', 'ಎಂದು ಕಾಣುತ್ತದೆ', 'ಸೂಚಿಸುವಂತಿದೆ', ಮುಂ. ಎಲ್ಲಕ್ಕೂ ಹೆಚ್ಚಿನ ಮಹತ್ವದ ಸಂಗತಿಯೆಂದರೆ ಕಾಪಾಲಿಕರ 'ಮಹಾವ್ರತ'ವೆಂಬ ಒಂದು ವಿಚಿತ್ರವಾದ ವ್ರತವನ್ನು ಗುರುತಿಸಿ ಅದನ್ನು ಬಣ್ಣಿಸುವುದು. ಅವರ ಅಸಾಂಪ್ರದಾಯಿಕವೆನ್ನಿಸಿದ ಯತಿತ್ವದ ಹಲವು ಆಚರಣೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವಲ್ಲಿ ಈ ವ್ರತವು ಒಂದು ಬೀಗದ ಕೈ ಎನ್ನಿಸಿದೆಯೆಂದು ನಂಬಿದ್ದೇನೆ.

ತಾಂತ್ರಿಕ ಮತವು ವಾದಗಳಿಗೆ ಎಡೆಮಾಡಿಕೊಡಬಲ್ಲ ಅಂತಸ್ಸಾಮರ್ಥ್ಯವನ್ನು ಹೊಂದಿದ ವಿಷಯವಾಗಿದ್ದು, ಈ ಕುರಿತಾದ ನನ್ನ ಕೆಲವು ಅಭಿಪ್ರಾಯಗಳು ಭಾರತೀಯ ಧರ್ಮ ಪ್ರತಿಮೆಯ ಬಗೆಗೆ ಕಾಳಜಿಯುಳ್ಳವರನ್ನು ಕೆರಳಿಸುವ ಸಾಧ್ಯತೆಯಿದೆ. ನಾನು ಸಾಧಿಸಬೇಕಿದ್ದ ನನ್ನ ಸ್ವಾರ್ಥಗಳಲ್ಲಿ ಬೇಕೆಂದೇ ಭಾರತೀಯವೆನ್ನುವ ಅದಾವ ಸಂಗತಿಗಳಿಗೂ ಮಸಿ ಬಳಿಯುವಂಥದೇನೂ ಇಲ್ಲವಲ್ಲದೆ ಎಲ್ಲ ಬಗೆಯ ಸಂದರ್ಭಗಳಲ್ಲೂ ಆಯಾ ಪುರಾವೆಗಳ ಕುಪತ್ತಿಗೆ ಸರಿಹೊಂದಬಲ್ಲ ಹಾಗೂ ಎಲ್ಲಕ್ಕೂ ಹೆಚ್ಚು ವಿವೇಕಪೂರ್ಣವಾದ ತೀರ್ಮಾನಗಳನ್ನು ಕೈಕೊಳ್ಳಲು ಯತ್ನಿಸಿದ್ದೇನೆ.

ಕಾಳಾಮುಖರನ್ನು ಕುರಿತಾದ ಅತ್ಯಂತ ಸಮೃದ್ಧವಾದ ಶಾಸನಗಳ ಪುರಾವೆಗಳನ್ನು ಓದಲು ಅನುಕೂಲವಾಗುವ ರೂಪದಲ್ಲಿ ನಿರೂಪಿಸುವುದು ಇದಕ್ಕೂ ಹೆಚ್ಚಿನ ಕಷ್ಟದ ಕಾಯಕವಾಗಿತ್ತು. ನನ್ನ ಮುಖ್ಯ ಗುರಿಯೆಂದರೆ ಹತ್ತರಿಂದ ಹದಿಮೂರನೆಯ ಶತಮಾನಗಳ

ಕಾಲಾವಧಿಯಲ್ಲಿ ಈ ಸಂಪ್ರದಾಯಕ್ಕೆ ಕರ್ನಾಟಕ ಪ್ರಾಂತದಲ್ಲಿದ್ದ ಎಲ್ಲಕ್ಕೂ ಹೆಚ್ಚಿನ ಮಹತ್ವವನ್ನು ಎತ್ತಿ ತೋರಿಸುವುದಲ್ಲದೆ, ರಾಮಾನುಜ, ಆರ್. ಜಿ. ಭಾಂಡಾರಕರ ಹಾಗೂ ಇತರರು ಗಡಿಪಾರುಮಾಡಿ ತಾಂತ್ರಿಕತೆಯ ಸೆರೆಮನೆಗೆ ದೂಡಿದ ಅದನ್ನು ಆ ಸೆರೆಯಿಂದ ಬಿಡಿಸಿ, ಕಾಪಾಡುವುದಾಗಿದೆ.

ಕೊನೆಯ ಅಧ್ಯಾಯವು ಕಾಳಾಮುಖರ ಸಂಪ್ರದಾಯ ಹಾಗೂ ಅದಕ್ಕೂ ಹೆಚ್ಚು ವಿಶೇಷವಾಗಿ ಪಾಶುಪತ-ಕಾಳಾಮುಖ ಯತಿಯಾದ ಲಕುಲೀಶನ ಕಾಲ ಹಾಗೂ ಜೀವನವನ್ನು ಕುರಿತು ಚರ್ಚಿಸುತ್ತದೆ. ನನ್ನ ಈ ಬಹಳಷ್ಟು ಷರಾಗಳೆಲ್ಲ ವಿಮರ್ಶೆಯ ಬಗೆಯವು ಹಾಗೂ ಆಧುನಿಕ ವಿದ್ವಾಂಸರ ತೀರ್ಮಾನಗಳ ಬಗೆಗೆ ಎಚ್ಚರಿಕೆಯನ್ನು ನೀಡುವಂಥವುಗಳಾಗಿವೆ. ಈ ಸಂಪ್ರದಾಯದ ಮೂಲವು ಭೂತಪ್ರೇತಗಳನ್ನು ಆರಾಧಿಸುವ ಮಾಂತ್ರಿಕ ಪಂಥದಲ್ಲಿದೆಯೆಂದು ಹೇಳುವ ಪ್ರಾಧ್ಯಾಪಕ ಇಂಗಾಲ್ಲರ (Ingall) ಸಿದ್ಧಾಂತವನ್ನು ಕುರಿತಾದ ವಿಮರ್ಶೆಯನ್ನು ಕೆಲಮಟ್ಟಿಗಿನ ತಲ್ಲಣದೊಂದಿಗೆ ಇದಕ್ಕೆ ಸೇರಿಸಲಾಗಿದೆ.

ಹಲವು ಬಗೆಯ ತಾಂತ್ರಿಕ ವಿವರಗಳನ್ನು ಇಲ್ಲಿ ನಮೂದಿಸಲೇಬೇಕು. ಬಹಳಷ್ಟು ಭಾಗಕ್ಕಾಗಿ ನಾನು ಬಳಸಿಕೊಂಡ ವಿಮರ್ಶೆಯ ಸಲಕರಣೆಯು ಕೆ. ಎಲ್. ಟುರಾಬಿಯನ್ ಇವರ 'A manual For Writers of Term Papers, Theses and Dissertations' ವನ್ನು ಆಧರಿಸಿದೆ. ಬೇರೆ ವಿದ್ವಾಂಸರ ಅನುವಾದಗಳಿಗೆ ನನ್ನ ಅನುವಾದಗಳನ್ನು ಸೇರ್ಪಡಿಸುವ ಸಂದರ್ಭಗಳಲ್ಲಿ ಮುಖ್ಯವಾಗಿ ಕಂಸಗಳನ್ನು ಬಳಸಲಾಗಿದೆ. ನನ್ನದೇ ಆದ ಅನುವಾದಗಳಿಗೆ ಮಾಡಿದ ಹೆಚ್ಚಿನ ಸೇರ್ಪಡೆಗಳನ್ನು ಅವತರಣ ಚಿಹ್ನೆಗಳಿಂದ ನಮೂದಿಸಲಾಗಿದೆ. 'ಶೈವೈಟ್' ಹಾಗೂ 'ಶೈವ' ಪದಗಳನ್ನು ಬಳಸಲಾಗಿದ್ದು ಮೊದಲನೆಯದನ್ನು ಶಿವನ ಉಪಾಸನೆಯನ್ನು ಕೈಕೊಳ್ಳುವವರಿಗಾಗಿ, ಅಂದರೆ ಶಿವೋಪಾಸಕರಿಗಾಗಿಯಾದರೆ, ಎರಡನೆಯದನ್ನು ಶೈವಸಿದ್ಧಾಂತವನ್ನು ಅನುಸರಿಸುವ ಶಿವೋಪಾಸಕರಿಗಾಗಿ ಬಳಸಲಾಗಿದೆ. ಭಾರತೀಯ ಊರುಗಳ ಹೆಸರುಗಳನ್ನು ಆಂಗ್ಲಲಿಪಿಯಲ್ಲಿ ಬರೆಯುವುದು ಯಾವಾಗಲೂ ಒಂದು ಸಮಸ್ಯೆ. ಭಾರತ ಸರಕಾರದಿಂದ ಪ್ರಕಟಗೊಂಡ Road Map of India (2nd Edition) ದಿಂದ ಸಾಧಾರಣವಾಗಿ ಈ ಪದಗಳನ್ನು ಎತ್ತಿಕೊಂಡಿದ್ದೇನೆ. ಈ ನಕಾಶೆಯಲ್ಲಿ ಕಾಣಸಿಗದ ಊರು ಹಾಗೂ ಗ್ರಾಮಗಳಿಗಾಗಿ ನನ್ನ ಆಕರಗಳಲ್ಲಿಯ ಕಾಗುಣಿತ (Spelling) ಗಳನ್ನು ಬಳಸಿಕೊಂಡಿದ್ದೇನೆ.

ಸಂಸ್ಕೃತದ ಪದಗಳ ಲಿಪ್ಯಂತರಕ್ಕಾಗಿ ಬಹಳಷ್ಟು ಜನ ಭಾರತೀಯ ಶಾಸ್ತ್ರವೇತ್ತರು (ಇಂಡಾಲಾಜಿಸ್ಟ್) ಬಳಸುವ ಪದ್ಧತಿಯನ್ನೇ ನಾನೂ ಬಳಸಿಕೊಂಡಿದ್ದೇನೆ. ಅನುನಾಸಿಕ ವ್ಯಂಜನಗಳ ಸಂಯೋಜನೆಗಳನ್ನು ಮೋನಿಯರ್-ವಿಲಿಯಮ್‌ರವರ 'Sanskrit-English Dictionary' ಯನ್ನು ಅನುಸರಿಸಿ ಲಿಪ್ಯಂತರಗೊಳಿಸಲಾಗಿದೆ. ಹೀಗಾಗಿ Śaṃkara ಎಂದು ಬರೆದಿರುವೆನೇ ಹೊರತು Ṣankara ಎಂದಲ್ಲ. ಇದಕ್ಕೂ ಹೆಚ್ಚಿಗೆ, 'c' ಹಾಗೂ 'ch' ಗಳ ನಡುವಣ ಗೊಂದಲವನ್ನು ತಪ್ಪಿಸಲೆಂದು ನಾನು ಬೇರೆ ವಿದ್ವಾಂಸರ ಪುಸ್ತಕ ಹಾಗೂ ಲೇಖನಗಳ

ಶೀರ್ಷಿಕೆಗಳಲ್ಲಿ ಮಾರ್ಪಾಟುಗಳನ್ನು ಮಾಡದೆ ಹೋದರೂ ಅವರ ಅವತರಣಿಕೆ ಹಾಗೂ ಅನುವಾದಗಳಲ್ಲಿ ಬರುವ ಸಂಸ್ಕೃತ ಪದಗಳಿಗಾಗಿ ಒಂದೇ ಬಗೆಯ ಕಾಗುಣಿತಗಳನ್ನು ಯೋಜಿಸಿದ್ದೇನೆ. ಸಂಸ್ಕೃತದಿಂದ ಕೈಕೊಳ್ಳಲಾಗಿರುವ ಅನುವಾದಗಳೆಲ್ಲ ನನ್ನವು. ಬೇರೆಯವರ ಅನುವಾದಗಳಿಗೆ ಅವರ ಹೆಸರನ್ನು ನಮೂದಿಸಲಾಗಿದೆ. ಕನ್ನಡ ನುಡಿಯನ್ನು ಕುರಿತಾದ ನನ್ನ ಅರಿವಿಗೆ ಒಂದು ಮಿತಿ ಇರುವ ಕಾರಣ ಈ ನುಡಿಯಲ್ಲಿರುವ ಕಾಳಾಮುಖ ಶಾಸನಗಳಿಗಾಗಿ ಸಾಮಾನ್ಯವಾಗಿ ರೈಸ್, ಫ್ಲೀಟ್, ಬಾರ್ನೆಟ್ಟ್ ಹಾಗೂ ಬೇರೆಯವರ ಅನುವಾದಗಳನ್ನು ಅವಲಂಬಿಸಿದ್ದೇನೆ. ಮಿಶಿಗನ್ ಪ್ರಾಂತದ ವಿಶ್ವವಿದ್ಯಾಲಯದ ಡಾ. ಎಚ್. ಉಲ್ರಿಚ್ (Ullrich) ಹಾಗೂ ಪುಣೆಯ ಡೆಕ್ಕನ್ ಕಾಲೇಜಿನ ಪ್ರಾಧ್ಯಾಪಕರಾದ ಎಚ್. ಎಸ್. ಬಿಳಿಗಿರಿಯವರಿಂದ ನನಗೆ ನೆರವು ದೊರೆತಿದೆ. ಹೊಂಬಳದ ಬೊಂತೆಯ ಮುನಿಯ ಸಾಹಸಕೃತ್ಯಗಳನ್ನು ಬಣ್ಣಿಸುವ ಬಲು ಮಹತ್ವದ ಶಾಸನವನ್ನು ಉತ್ತಮವಾಗಿ ಅನುವಾದಿಸಿ ಕೊಟ್ಟುದಕ್ಕಾಗಿ ನಾನು ಪ್ರಾ. ಬಿಳಿಗಿರಿಯವರಿಗೆ ವಿಶೇಷವಾಗಿ ಕೃತಜ್ಞನಾಗಿದ್ದೇನೆ.

ಇನ್ನೂ ಹಲವು ಜನರು ಸೂಚನೆ, ವಿಮರ್ಶೆ ಹಾಗೂ ಭಾಷೆಯ ನೆರವನ್ನು ನೀಡಿರುವರು. ಡೆಕ್ಕನ್ ಕಾಲೇಜಿನ ಶ್ರೀ ವೇಣುಗೋಪಾಲನ್, ಆಸ್ಟ್ರೇಲಿಯದ ನ್ಯಾಶನಲ್ ಯುನಿವರ್ಸಿಟಿಯ ಪ್ರಾ. ಜೆ. ಡಬ್ಲ್ಯು. ಡೆ. ಜೊಂಗ್, ಡಾ. ಎಸ್. ಎ. ಎ. ರಿಝವಿ ಹಾಗೂ ಡಾ. ಕೆ. ಎಚ್. ಜೆ. ಗಾರ್ಡಿನರ ಹಾಗೂ ಮಿಶಿಗನ್ ವಿಶ್ವವಿದ್ಯಾಲಯದ ಡಾ. ಟಿ. ಆರ್. ಟ್ರೌಮನ್ ಇವರೆಲ್ಲರಿಗೆ ನನ್ನ ವಿಶೇಷವಾದ ಕೃತಜ್ಞತೆಗಳು ಸಲ್ಲುತ್ತವೆ. ಪ್ರಾಚೀನ ಭಾರತದ ನನ್ನ ಆರಂಭದ ಹಂತಗಳಲ್ಲಿ ನನಗೆ ನೀಡಿದ ಸೂಚನೆಗಳು ಹಾಗೂ ಪ್ರೋತ್ಸಾಹನೆಗಳಿಗಾಗಿ ವಿಂಡ್ಸರ ವಿಶ್ವವಿದ್ಯಾಲಯದ ಪ್ರಾ. ಜೆ. ಡಬ್ಲ್ಯು. ಸ್ಪೆಲ್ಲಮನ್ ಹಾಗೂ ಸ್ಕೂಲ್ ಆಫ್ ಓರಿಯೆಂಟಲ್ ಮತ್ತು ಆಫ್ರಿಕನ್ ಸ್ಟಡೀಸ್‌ನ ಡಾ. ಜೆ. ಜಿ. ಡೆ ಕಾಸ್ಪರಿಸ್ (De Casparis) ಹಾಗೂ ಶ್ರೀ ಜೆ.ಈ.ಬಿ.ಗ್ರೇ ಇವರಿಗೆ ಋಣಿಯಾಗಿರುವೆ. ಇದೆಲ್ಲಕ್ಕಿಂತಲೂ ನನ್ನ ಹೆಚ್ಚಿನ ಉಪಕಾರ ಸ್ಮರಣೆಯ ಋಣ ಸಲ್ಲಬೇಕಿದ್ದುದು ಅನುಭವಶಾಲಿ ಹಾಗೂ ನನ್ನ ನಂಬಿಕೆಯ ಸಲಹೆಗಾರರಾದ (ಮೆಂಟರ್) ಪ್ರಾ.ಎ.ಎಲ್.ಬಶಮ್ ಅವರಿಗೆ. ಈಗಿನ ಈ ಕೃತಿ ತಯಾರಾದದ್ದು ಅವರ ಮೇಲ್ವಿಚಾರಣೆಯಲ್ಲಿ ಸಿದ್ಧಪಡಿಸಲಾದ ನನ್ನ ಪ್ರೌಢ ಪ್ರಬಂಧವನ್ನಾಧರಿಸಿ. ಅದಕ್ಕಾಗಿ ಅವರು ಕೈ ಬಿಗಿಹಿಡಿಯದೆ ಸಲಹೆ, ನೆರವು ಹಾಗೂ ಉತ್ತೇಜನೆಗಳನ್ನು ಧಾರಾಳವಾಗಿ ನನಗೆ ನೀಡಿದರು.

ನನ್ನೀ ಅಧ್ಯಯನಕ್ಕಾಗಿ ಹಣಕಾಸಿನ ನೆರವು ದೊರೆತದ್ದು ನನ್ನ ಹೆತ್ತವರಿಂದ, ನನ್ನ ಮಡದಿಯಿಂದ, 'ದಿ ಅಮೇರಿಕನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್'ದಿಂದ ಹಾಗೂ ಆಸ್ಟ್ರೇಲಿಯನ್ ನ್ಯಾಶನಲ್ ಯುನಿವರ್ಸಿಟಿಯಿಂದ. ಮೊದಲ ಮೂವರ ನೆರವು ಭಾರತದಲ್ಲಿಯ ನನ್ನ ಒಂದು ವರ್ಷಕ್ಕಾಗಿ ಒಂದು ಅಮೌಲ್ಯವಾದ ಕೊಡುಗೆಯೆನ್ನಿಸಿದೆ. ಈ ಕೃತಿಯಲ್ಲಿರುವ ವಿವರಗಳ ಹೊಣೆ 'ಅಮೆರಿಕನ್ ಇನ್‌ಸ್ಟಿಟ್ಯೂಟ್'ದ್ದಾಗಲಿ, ಇಲ್ಲವೆ 'ಆಸ್ಟ್ರೇಲಿಯನ್ ನ್ಯಾಶನಲ್ ಯುನಿವರ್ಸಿಟಿ'ಯದ್ದಾಗಲಿ ಅಲ್ಲ.

# ಮುನ್ನುಡಿ

## (ಎರಡನೆಯ ಮುದ್ರಣ)

'ಕಾಪಾಲಿಕರು ಮತ್ತು ಕಾಳಾಮುಖರು ' ಪುಸ್ತಕವು ಮಧ್ಯಯುಗದ ಭಾರತದ ಎರಡು ಶೈವ ಪಂಥಗಳನ್ನು ಕುರಿತಾದ ಒಂದು ಪ್ರಮಾಣ ಗ್ರಂಥವೆಂದು ಮನ್ನಣೆಯನ್ನು ಪಡೆದಿದೆಯಾದರೂ, ಭಾರತ ಹಾಗೂ ಅಮೇರಿಕೆಯ ಥಾಮ್ಸನ್ ಪ್ರೆಸ್ ಮತ್ತು ಕ್ಯಾಲಿಫೋರ್ನಿಯಾ ಯುನಿವರ್ಸಿಟಿ ಪ್ರೆಸ್ಸುಗಳ ಜಂಟಿ ಪ್ರಕಟಣೆಯಾಗಿಯೂ ಭಾರತದಲ್ಲಿ ಈ ಪುಸ್ತಕದ ಹಂಚಿಕೆ ಏನೇನೂ ಸಮಾಧಾನಕರವಾಗಿರಲಿಲ್ಲ. ಮೋತೀಲಾಲ ಬನಾರಸಿದಾಸ ಇವರಿಂದ ಪ್ರಕಟಣೆಗೊಳ್ಳುತ್ತಿರುವ ಈ ಹೊಸ ಮುದ್ರಣವು ಈ ಸಮಸ್ಯೆಯನ್ನು ಬಲು ದೊಡ್ಡ ಪ್ರಮಾಣದಲ್ಲಿ ಬಗೆಹರಿಸೀತೆಂಬ ನಿರೀಕ್ಷೆಯಿದೆ. ಈ ಮುದ್ರಣವು, ಪ್ರಸ್ತುತ ಸಂಪ್ರದಾಯಗಳಿಗೆ ಸಂಬಂಧಿಸಿದ, ಹೊಸ ಶೋಧಗಳನ್ನು ಸಂಕ್ಷಿಪ್ತಗೊಳಿಸಿ ಪರಿಶಿಷ್ಟ ರೂಪದಲ್ಲಿ ಸೇರಿಸಲು ಮತ್ತು 1972ರಲ್ಲಿ ಈ ಪುಸ್ತಕವು ಪ್ರಕಟಗೊಂಡಂದಿನಿಂದ ವಿದ್ವಾಂಸರು ಪ್ರಕಟಿಸಿದ ವಿಶ್ಲೇಷಣೆಗಳನ್ನು ಅಳವಡಿಸಲು ನನಗೆ ಒಂದು ಅವಕಾಶವನ್ನು ಒದಗಿಸಿದೆ. ಕೆಲವೊಂದು ಚಿಕ್ಕಪುಟ್ಟ ತಿದ್ದುಪಡಿಗಳನ್ನು ಬಿಟ್ಟರೆ ಈ ಪುಸ್ತಕದ ಮೂಲ ಪಠ್ಯವು ಭದ್ರವಾಗಿಯೇ ಇದೆ. ಎರಡೂ ಹೊಸ ಪರಿಶಿಷ್ಟಗಳಲ್ಲಿ ವಿವರಿಸಲಾದ ಹಾಗೂ ಚರ್ಚಿಸಲಾದ ಸಾಮಗ್ರಿಯನ್ನು ಗ್ರಂಥ ವಿವರಣ ಪಟ್ಟಿ ಹಾಗೂ ವಿಶಿಷ್ಟ ಪದಸೂಚಿಗಳಲ್ಲಿ ಸೇರಿಸಲಾಗಿಲ್ಲ. ಆದರೆ ಪರಿಶಿಷ್ಟಗಳ ಟಿಪ್ಪಣಿ ಹಾಗೂ ಚಾರಿತ್ರಿಕ ಆಧಾರಗಳಲ್ಲೆಲ್ಲ ಸಾಕಷ್ಟು ಮಟ್ಟಿಗೆ ಅಡ್ಡ ಸಂದರ್ಭಗಳನ್ನು ನೀಡಲಾಗಿದೆ. ಈ ಹೊಸ ಮುದ್ರಣದ ರಕ್ಷಾಪುಟದ ಮೇಲಿನ ಛಾಯಾಚಿತ್ರವು ಎದ್ದುನಿಂತ ಲಕುಲೀಶನ ಶಿಲ್ಪದ್ದಿದ್ದು ಅದು ಆಲಂರಪುರದಲ್ಲಿ (ಮೆಹಬೂಬನಗರ., ಆಂಧ್ರ ಪ್ರದೇಶ ) ದೊರೆತಿದ್ದು 10-11ನೆಯ ಶತಮಾನದ್ದಾಗಿದೆ. ವಾರಣಾಸಿಯ ರಾಮನಗರದಲ್ಲಿರುವ 'ಅಮೇರಿಕನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್' ಸಂಸ್ಥೆಯು ಮೂಲ ಛಾಯಾಚಿತ್ರವನ್ನು ದಯಪಾಲಿಸಿದೆ.

ಹೊಸ ದಿಲ್ಲಿ
ಏಪ್ರಿಲ್ , 1990

**ಡೆವಿಡ್ ಎನ್. ಲಾರೆಂಜೆನ್**

# ಅಧ್ಯಾಯ - ೧

# ನಾಲ್ಕು ಶೈವ ಸಂಪ್ರದಾಯಗಳು

## ಬ್ರಹ್ಮಸೂತ್ರ ಭಾಷ್ಯ

ಬ್ರಹ್ಮಸೂತ್ರ ii. 2.37 ಕ್ಕೆ ಸಂಸ್ಕೃತದಲ್ಲಿ ಭಾಷ್ಯ ಬರೆದವರು ಶಿವಭಕ್ತಿ ಹಾಗೂ ಆಧ್ಯಾತ್ಮಿಕ ದ್ವೈತವಾದಗಳನ್ನು ಪ್ರತಿಪಾದಿಸುವ ಧಾರ್ಮಿಕ ಪಂಥಗಳ ಸಿದ್ಧಾಂತ ಹಾಗೂ ಆಚರಣೆಗಳನ್ನು ಟೀಕಿಸುತ್ತಾರೆ. ಇದರಲ್ಲಿ ಶಂಕರಾಚಾರ್ಯರು (ಇಸವಿ 788-820) ಮಾಹೇಶ್ವರರನ್ನು ಕುರಿತು ಮಾತ್ರ ಉಲ್ಲೇಖಿಸುತ್ತಾರೆ.[1] ಇವರ ಭಾಷ್ಯದಿಂದ ಸ್ಫುಟಗೊಳ್ಳುವ ಸಂಗತಿಯೆಂದರೆ, ಮಾಹೇಶ್ವರರು ಕೂಡ ಪಾಶುಪತರೇ ಆಗಿದ್ದರೆಂಬುದು. ವಾಚಸ್ಪತಿಮಿಶ್ರರು (ಇಸವಿ 850) ಮಾಹೇಶ್ವರರನ್ನು ನಾಲ್ಕು ಪಂಗಡಗಳಾಗಿ ವಿಂಗಡಿಸುತ್ತಾರೆ. ಅವು : ಶೈವ, ಪಾಶುಪತ, ಕಾಪಾಲಿಕ ಹಾಗೂ ಕಾರುಣಿಕ ಸಿದ್ಧಾಂತಿನ್.[2] ಭಾಸ್ಕರಾಚಾರ್ಯರು (ಇಸವಿ 850) ಈ ವಿಂಗಡಣೆಯನ್ನು ಪುನರಾವರ್ತಿಸುವರಾದರೂ ಕಾರುಣಿಕ ಸಿದ್ಧಾಂತಿಗಳ ಸ್ಥಾನದಲ್ಲಿ ಕಾಠಕ ಸಿದ್ಧಾಂತಿಗಳನ್ನು ಸೇರಿಸುತ್ತಾರೆ.[3] ಬೇರೆ ಭಾಷ್ಯಕಾರರು ಕೊನೆಯ ಪಂಗಡವನ್ನು ಕಾರುಕ ಸಿದ್ಧಾಂತಿಗಳೆಂದು ಕರೆಯುತ್ತಾರೆ.[4] ರಾಮಾನುಜರ ಗುರುಗಳಾದ ಯಾಮುನಾಚಾರ್ಯರು (ಇಸವಿ

1. ಬ್ರಹ್ಮಸೂತ್ರ ಭಾಷ್ಯ, ಸಂ. ಬಿ. ಶಾಸ್ತ್ರಿ, ii. 2. 37.
2. ಭಾಮತೀ, ಸಂ. ಬಿ. ಶಾಸ್ತ್ರಿ, ii.2.37.
3. ಬ್ರಾಹ್ಮಣಸೂತ್ರ ಭಾಷ್ಯ, ಸಂ. ಪಿ. ಕೆ. ದ್ವಿವೇದಿನ್, ii.2.37.
4. ಆರ್. ಜಿ. ಭಾಂಡಾರಕರ, Vaisṇavism Śaivism and Minor Religious Systems. ಪು. 121. ಈ ಹೆಸರು ಎಮ್. ಮೋನಿಯರ ವಿಲಿಯಮ್ಸ್‌ರ Sanskrit-English Dictionaryಯಲ್ಲಿ ಇದ್ದರೂ ನಾವು ಇದನ್ನು ಕುರಿತಾದ ಭಾಷ್ಯವನ್ನು ಕಂಡಿಲ್ಲ.

1050) ತಮ್ಮ 'ಆಗಮ ಪ್ರಾಮಾಣ್ಯ'[5] ಹೆಸರಿನ ಗ್ರಂಥದಲ್ಲಿ ಶೈವರು, ಪಾಶುಪತರು, ಕಾಪಾಲಿಕರು ಹಾಗೂ ಕಾಳಾಮುಖರನ್ನೆಲ್ಲ ಸೇರಿಸಿಯೇ ಪಟ್ಟಿ ಮಾಡುತ್ತಾರೆ. ರಾಮಾನುಜರು (ಇಸವಿ 1017-1137) 'ಶ್ರೀ ಭಷ್ಯ'ದಲ್ಲಿ[6] ತಮ್ಮ ಗುರುಗಳ ಬಹುಪಾಲು ಬಾಷ್ಯವನ್ನು ಶಬ್ದಶಃ ಪುನರಾವರ್ತಿಸಿರುವರು. ತರುವಾಯದ ಬಹಳಷ್ಟು ಜನ ಭಾಷ್ಯಕಾರರೂ ಯಾಮುನಾಚಾರ್ಯರ ವಿಂಗಡಣೆಯನ್ನೇ ಅನುಸರಿಸುವಂತೆ ಕಾಣುತ್ತದೆ. ಕಾರುಕರು, ಕಾರುಣಿಕರು, ಕಾಠಕ ಸಿದ್ಧಾಂತಿಗಳನ್ನು ಕುತೂಹಲಕರವಾಗಿ ಬಣ್ಣಿಸಲಾಗಿದೆಯಾದರೂ ಅವರೆಲ್ಲರೂ ಕಾಳಾಮುಖ ಸಂಪ್ರದಾಯಕ್ಕೆ ಸೇರಿದವರೇ.

ಯಾಮುನಾಚಾರ್ಯರು ಹಾಗೂ ರಾಮಾನುಜರ ಭಾಷ್ಯಗಳು ಬೆಲೆಬಾಳುವ ಮಾಹಿತಿಯನ್ನು ಒಳಗೊಂಡಿವೆಯಾದರೂ ಆಧುನಿಕ ವಿದ್ವಾಂಸರು ಅವುಗಳನ್ನು ಕುರಿತು ಎಳ್ಳಷ್ಟೂ ವಿಮರ್ಶಿಸದೆಯೇ ಇದ್ದಕ್ಕಿದ್ದ ಹಾಗೆಯೇ ಅವುಗಳನ್ನು ಸ್ವೀಕರಿಸಿರುವರು. ರಾಮಾನುಜರ 'ಶ್ರೀಭಾಷ್ಯ'ವು ಕೆಲವೆಡೆ ಸಂದಿಗ್ಧತೆಗಳಿಂದ ಕೂಡಿದುದುದಾಗಿದ್ದು ಕಾಳಾಮುಖರನ್ನು ಕುರಿತಾದ ಅವರ ವಿವರಗಳು ಬೇರೆ ಬೇರೆ ಮೂಲಗಳಲ್ಲಿ ಇದೇ ಕಾಳಾಮುಖರನ್ನು ಕುರಿತು ತಿಳಿದು ಬಂದ ಸಂಗತಿಗಳೊಡನೆ ಯಾವಾಗಲೂ ಸುಸಂಗತವಾಗಿರುತ್ತವೆ, ಎನ್ನುವಂತಿಲ್ಲ.[7] ಇದಲ್ಲದೆ, ರಾಮಾನುಜರು ಈ ನಾಲ್ಕೂ ಸಂಪ್ರದಾಯಗಳ ಬಗೆಗೆ ಸ್ಪಷ್ಟವೂ, ಸುಸಂಗತವೂ ಆದ ಭಿನ್ನತೆಯನ್ನು ಕಾಪಾಡಿಕೊಂಡಿಲ್ಲ. ಅವರು ಈ ಪಂಥಗಳನ್ನೆಲ್ಲ ಕೆಲವೊಮ್ಮೆ ಒಟ್ಟುಗೂಡಿಸಿ ಮತ್ತೆ ಕೆಲವೊಮ್ಮೆ ಬಿಡಿ ಬಿಡಿಯಾಗಿ ವರ್ಣಿಸುತ್ತಾರೆ. ಅವರು ಮೊದಲಿಗೆ ಗುರುತಿಸುವುದು ಪಶುಪತಿಯ ಸಿದ್ಧಾಂತವನ್ನು ಅನುಸರಿಸುವ ನಾಲ್ಕು ಸಂಪ್ರದಾಯಗಳನ್ನು. ತರುವಾಯ ಮತ್ತೆ ಈ ಮುಂದಿನದನ್ನು ಅದಕ್ಕೆ ಸೇರಿಸುತ್ತಾರೆ:

> ಇವೆಲ್ಲವು ಈ ಲೋಕ ಹಾಗೂ ಪರಲೋಕದಲ್ಲಿ ಆನಂದಾವಸ್ಥೆ ಪಡೆಯುವುದನ್ನು ಕುರಿತ ವಾಸ್ತಸತೆ ಹಾಗೂ ಆಧಾರಭೂತ ಕಲ್ಪನೆ (Hypothesis)ಯನ್ನು ವಿಶ್ಲೇಷಿಸುತ್ತವಾದರೂ, ಇವು ವೇದಗಳಿಗೆ ವಿರೋಧಿಯಾದವುಗಳು. ಇವು ಸಾಧನಭೂತ ಹಾಗೂ ಭೌತಿಕ ಕಾರಣಗಳ (ನಿಮಿತ್ತೋಪದಾನಯೋರಭೇದಮ್) ನಡುವೆ ಭಿನ್ನತೆಯನ್ನು ಉಂಟುಮಾಡುತ್ತವೆ; ಮತ್ತು ಪಶುಪತಿಯನ್ನು ಸಾಧನಭೂತ ಕಾರಣ (ಆದರೆ ವಿಶ್ವದ ಭೌತಿಕ ಕಾರಣನಲ್ಲ) ಎಂದು ಅಂಕಿತಪಡಿಸುತ್ತವೆ.[8]

---

5. ಶ್ರೀಹರ್ಷನ 'ನೈಷಧಚರಿತ', ಪು. 664, ಕುರಿತಾದ ಕೆ. ಕೆ. ಹಂಡಿಕಿ ಅವರ ಟಿಪ್ಪಣಿಗಳಲ್ಲಿ ಉದ್ಧೃತ.
6. ಸಂ. ಆರ್. ಡಿ. ಕರಮರಕರ, ii.2.35-37.
7. ಯಾಮುನರ 'ಆಗಮಪ್ರಾಮಾಣ್ಯ'ದ ಇಡಿಯ ಪಾಠ ನಮಗೆ ದೊರಕದೆ ಹೋದ ಕಾರಣ ನಾವು ರಾಮಾನುಜರ 'ಶ್ರೀ ಭಾಷ್ಯ'ವನ್ನೇ ಅನುಸರಿಸಲಿದ್ದೇವೆ. ಅದರ ಅನುವಾದಗಳೆಲ್ಲ ನಮ್ಮವೇ ಆಗಿವೆ.
8. ii.2. 35-37.

ಈ ಬಗೆಯಲ್ಲಿ ನಾಲ್ಕೂ ಸಂಪ್ರದಾಯಗಳು ಒಂದೇ ಮಾದರಿಯಾಗಿ ಕಾಣುತ್ತವೆ. ಇದು ತೀರ ಹೆಚ್ಚಿನ ಸರಳೀಕರಣವಾಗಿ ಕಾಣುವುದು ಎಂಬಲ್ಲಿ ಸಂದೇಹವೇ ಇಲ್ಲವಾದರೂ, ಈ ಪ್ರತಿಯೊಂದು ಸಂಪ್ರದಾಯವು ಖಂಡಿತ ದ್ವೈತ ತತ್ವಜ್ಞಾನವನ್ನು ಪರ್ಯಾಲೋಚನೆಗಾಗಿ ಮುಂದಿರಿಸಿರಲು ಸಾಕು.

ರಾಮಾನುಜರು ಮುಂದಕ್ಕೆ ಕಪಾಲ (ಕಾಪಾಲಿಕ) ಪೂಜಾ ವಿಧಾನವನ್ನು ಕುರಿತು ಈ ರೀತಿ ಚರ್ಚಿಸುತ್ತಾರೆ :

> ಕಾಪಾಲಿಕರು ಹೀಗೆ ಸಾರುತ್ತಾರೆ: 'ಯಾವನು ಆರು ಮುದ್ರೆಗಳ (ಮುದ್ರಿಕಾಷಟ್ಕ) ತಿರುಳನ್ನು ಬಲ್ಲನೋ, ಯಾವನು ಎಲ್ಲಕ್ಕೂ ಹೆಚ್ಚು ಉನ್ನತವಾದ ಮುದ್ರೆಯಲ್ಲಿ ಪಳಗಿದವನೋ ಹಾಗೂ ಯಾವನು ಯೋನಿಮುಖದಲ್ಲಿ ಆಸನಸ್ಥನಾದಂತೆ (ಭಗಾಸನಸ್ಥ) ತನ್ನ ಮೇಲೆ ಮನಸ್ಸನ್ನು ಕೇಂದ್ರೀಕರಿಸಿ ಧ್ಯಾನವನ್ನು ಮಾಡುವನೋ, ಅವನು ನಿರ್ವಾಣವನ್ನು ಹೊಂದುತ್ತಾನೆ.' ಆರು ಮುದ್ರೆಗಳನ್ನು ಕುರಿತು ಅವರು ಹೀಗೆ ವ್ಯಾಖ್ಯಾನಿಸುತ್ತಾರೆ: ಕಂಠಿಕಾ (ಕೊರಳ ಸರ),[9] ರುಚಕ (ಬೇರೊಂದು ಬಗೆಯ ಕೊರಳ ಒಡವೆ), ಕುಂಡಲ (ಕಿವಿಯುಂಗುರ), ಶಿಖಾಮಣಿ (ಚಂಡಿಕೆಯ ಮೇಲೆ ತೊಡಲಾಗುವ ಒಂದು ರತ್ನ), ಭಸ್ಮ ಹಾಗೂ ಜನಿವಾರ. ಈ ಬಗೆಯ ಮುದ್ರೆಗಳನ್ನು ಧರಿಸುವವನು ಈ ಲೋಕದಲ್ಲಿ ಮರುಹುಟ್ಟನ್ನು ಪಡೆಯನು.[10]

ಯಾಮುನಾಚಾರ್ಯರು ಇನ್ನೊಂದು ಮುಖ್ಯವಾದ ಸಂಗತಿಯನ್ನು ಸೇರಿಸುತ್ತಾರೆ. ಅವರು ಈ ಜನರಲ್ಲಿ ಇನ್ನೆರಡು ಉಪಮುದ್ರೆಗಳಾದ ತಲೆ ಬುರುಡೆ (ಕಪಾಲ) ಹಾಗೂ ದೊಣ್ಣೆ (ಖಟ್ವಾಂಗ) ಗಳಿವೆಯೆಂದು ತಮ್ಮೀ ಸೇರ್ಪಡೆಯಲ್ಲಿ ಹೇಳುತ್ತಾರೆ.[11] ಬಹಳಷ್ಟು ಜನ ಶೈವಯತಿಗಳು ತಮ್ಮ ಮೈಗಳಿಗೆ ಭಸ್ಮವನ್ನು ಬಳಿದುಕೊಳ್ಳುತ್ತಾರೆ. ಅಲ್ಲದೆ ಜನಿವಾರಗಳನ್ನು ತೊಡುತ್ತಾರೆ. ಆದರೆ ತಲೆ ಬುರುಡೆ ಹಾಗೂ ಖಟ್ವಾಂಗಗಳು ಬಹುಮಟ್ಟಿಗೆ ಕಾಪಾಲಿಕರಿಗೆ ಮಾತ್ರ ವಿಶಿಷ್ಟವಾದವುಗಳು. ಹಲವಾರು ಆಕರಗಳಲ್ಲಿ ಕಾಪಾಲಿಕರ ಕಿವಿಯುಂಗುರಗಳಿಗಾಗಿ ಕುಂಡಲ ಎಂಬ ಪದವನ್ನು ಬಳಸಲಾಗಿದೆ. ಭವಭೂತಿಯ 'ಮಾಲತೀ ಮಾಧವ'ದಲ್ಲಿ ಒಬ್ಬಳು ಕಾಪಾಲಿಕಳ ಹೆಸರು ಕಾಪಾಲಕುಂಡಲಾ ಎಂದಾಗಿದೆ.[12] ಖಡ್ಗಮೃಗದ

9. ಯಾಮುನಾಚಾರ್ಯರು 'ಕಂಠಿಕಾ'ದ ಬದಲು 'ಕರ್ಣಿಕಾ' ಎಂದು ಓದುತ್ತಾರೆ. ಉದ್ಧೃತ, ಶ್ರೀ ಹರ್ಷ, ಪು. 664 ದಲ್ಲಿ.
10. ii. 2. 35-37.
11. ಉದ್ಧೃತ, ಶ್ರೀ ಹರ್ಷ, ಪು. 644 ದಲ್ಲಿ.
12. ಮುಂದೆ ನೋಡಿ. pp. 56- 57.

ಕೋಡು ಇಲ್ಲವೆ ಇನ್ನಿತರ ವಸ್ತುಗಳಿಂದ ತಯಾರಿಸಲಾದ ದೊಡ್ಡ ಆಕಾರದ ಕಿವಿಯುಂಗುರಗಳು ತಾಂತ್ರಿಕ ಯತಿಗಳ ಪಂಗಡಕ್ಕೆ ಸಂಬಂಧ ಪಟ್ಟುದಾದ 'ಕಾನಫಟಾ' ಯೋಗಿಗಳಲ್ಲಿ (ಕಾನ= ಕಿವಿ, ಫಟಾ= ಹರಿದ) ಎದ್ದು ಕಾಣುವ ಒಂದು ಲಕ್ಷಣ ಎನ್ನಿಸಿದೆ. ಅವರ ಕಿವಿಯುಂಗುರಗಳು ಮೂಲದಲ್ಲಿ ಎರಡು ಬಗೆಯವು-ಚಪ್ಪಟೆಯಾಗಿರುವ 'ದರ್ಶನ' ಹಾಗೂ ದುಂಡನೆಯ 'ಕುಂಡಲ'. ಇವೆರಡನ್ನೂ 'ಮುದ್ರೆಗಳು' ಎಂದು ಗುರುತಿಸಲಾಗುತ್ತದೆ.[13] ಪಾಶುಪತ-ಕಾಳಾಮುಖ ಯತಿಯಾದ ಲಕುಲೀಶನ ವಿಗ್ರಹಗಳು ಕೂಡ ಸಾಮಾನ್ಯವಾಗಿ ದೊಡ್ಡದಾದ ಕಿವಿಯುಂಗುರಗಳನ್ನು ತೋರ್ಪಡಿಸುತ್ತವೆ. ರಾಮಾನುಜರ ಪಟ್ಟಿಯಲ್ಲಿ ನಮೂದಿಸಲಾದ ಬೇರೆ ಮುದ್ರೆಗಳಾದ ಕೊರಳ ಒಡವೆಗಳು ಹಾಗೂ ಶಿಖಾಮಣಿಗಳು ವಿಶೇಷವಾಗಿ ಕಾಪಾಲಿಕರ ಸಂದರ್ಭದಲ್ಲಿ ಇನ್ನೆಲ್ಲೂ ಇಲ್ಲ.

'ಎಲ್ಲಕ್ಕೂ ಉನ್ನತವಾದ ಮುದ್ರೆಯಲ್ಲಿ ಪರಿಣತನು' ಇಲ್ಲವೆ 'ಮುದ್ರೆಗಳಲ್ಲಿ (ಬಳಕೆಯಲ್ಲಿ) ಎಲ್ಲಕ್ಕೂ ಹೆಚ್ಚಿನ ಕುಶಲತೆಯುಳ್ಳವನು' ಎಂಬ ನುಡಿಗಟ್ಟನ್ನು ಅರ್ಥೈಸುವುದು ತುಂಬ ಕಷ್ಟದ್ದು. ಇದನ್ನು ಆರ್. ಜಿ. ಭಾಂಡಾರಕರರು, 'ಅವುಗಳ [ಆರು ಮುದ್ರೆಗಳ] ಬಳಕೆಯಲ್ಲಿ ಕುಶಲನಾದವನು'[14] ಎಂದು ವಿವರಿಸುತ್ತಾರೆ. ಆದರೆ ಈ ಮುದ್ರೆಗಳನ್ನು 'ಬಳಸುವುದು' ಹೇಗೆಂಬುದನ್ನು ಕಂಡುಕೊಳ್ಳುವುದು ಅಷ್ಟೇನೂ ಹಗುರಲ್ಲ. ತಾಂತ್ರಿಕ ಸಾಹಿತ್ಯದಲ್ಲಿ ಮುದ್ರೆ ಎಂದರೆ ತಾಂತ್ರಿಕ ಕೇಂದ್ರೀಯ ಆಚರಣೆಯ (ಪಂಚ ಮಕಾರ ಸಾಧನಾ) ಮುಖ್ಯ ಘಟಕಗಳನ್ನು, ಅವುಗಳ ಹೆಸರುಗಳಿಂದ ಸೂಚಿಸುವ ಐದು ಮಕಾರಗಳಲ್ಲಿ ಒಂದು. ಈ ಐದು ಮಕಾರಗಳು ಹೀಗಿವೆ: 'ಮದ್ಯ', ' ಮಾಂಸ', 'ಮತ್ಸ್ಯ' (ಮೀನು), 'ಮುದ್ರಾ' ಹಾಗೂ 'ಮೈಥುನ' (ಸಂಭೋಗ). ಇಲ್ಲಿ 'ಮುದ್ರಾ' ಎಂಬ ಪದಕ್ಕೆ ಹಲವು ಅರ್ಥಗಳಿವೆ. ಹಿಂದೂ ತಂತ್ರಗಳಲ್ಲಿ ಈ ಪದವು ಸಾಮಾನ್ಯವಾಗಿ ಹುರಿದ ಕಾಳು, ಮನೆ ಹುರುಳಿಯ ಕಾಳು ಇಲ್ಲವೆ ಕಾಮೋದ್ದೀಪನವನ್ನು ಉಂಟುಮಾಡುವ ಯಾವುದೇ ಬಗೆಯ ಧಾನ್ಯವನ್ನು ನಿರ್ದೇಶಿಸುತ್ತದೆ.[15] ಇದಕ್ಕೆ ಬದಲಾಗಿ ಇದೇ ಪದವು ಬೌದ್ಧ ತಾಂತ್ರಿಕ ಕೃತಿಗಳಲ್ಲಿ ತಾಂತ್ರಿಕ ಆಚರಣೆಯ ಸಂದರ್ಭದ ಹೆಣ್ಣು ಜೊತೆಗಾರ್ತಿಯನ್ನು ನಿರ್ದೇಶಿಸುತ್ತದೆ. ಬೌದ್ಧ ತಾಂತ್ರಿಕ ಯೋಗದಲ್ಲಿ , 'ಬೋಧಿಚಿತ್ತವನ್ನು ನಿರ್ಮಿಸುವ ನಾಲ್ಕು ಹಂತಗಳಿಗೆ, 'ಮುದ್ರೆಗಳು,' ಎಂದೆನ್ನಲಾಗುತ್ತದೆ. ಇವೆಂದರೆ 'ಕರ್ಮಮುದ್ರಾ', 'ಧರ್ಮಮುದ್ರಾ', 'ಮಹಾಮುದ್ರಾ' ಹಾಗೂ 'ಸಮಯ ಮುದ್ರಾ'ಗಳು.[16] ತಾಂತ್ರಿಕವಲ್ಲದ ಮತಾಚಾರ ಹಾಗೂ ತಾಂತ್ರಿಕ ಕೃತಿಗಳಲ್ಲಿ ಕೂಡ ಹಲವು ಸಲ 'ಮುದ್ರಾ' ಪದವು ಹೆಚ್ಚಾಗಿ ಕೈಗಳ ಚಲನೆಗಳಿಂದ ತಯಾರಿಸಲಾಗುವ ಬಗೆ ಬಗೆಯ

---

13. ಜಿ. ಎಸ್. ಘುರ್ಯೆ, Indian Sadhus, pp. 135-136.
14. ಮೇಲಿನದೇ ಪು. 127.
15. ಎ. ಭಾರತಿ, The Tantric Tradition, ಪು. 242.
16. ಎಸ್. ಬಿ. ದಾಸಗುಪ್ತಾ, An Introduction to Tantric Buddhism, pp. 174- 75.

ಧಾರ್ಮಿಕ ಭಂಗಿಗಳನ್ನು ಸೂಚಿಸುತ್ತದೆ. ಮೇಲ್ಗಡೆಯಲ್ಲಿ 'ಆರು ಮುದ್ರೆಗಳ ಕಟ್ಟು' ('ಮುದ್ರಾ ಷಟ್ಕ')ದ ಸಂದರ್ಭದಲ್ಲಿ ನಮೂದಿಸಲಾದಂತೆ ಈ ಪದದ ಅರ್ಥವು ಸಾಮಾನ್ಯವಾಗಿ 'ಗುರುತು' ಅಥವಾ 'ಮುದ್ರಾ' ಎಂದಾಗಿದೆ. ರಾಮಾನುಜರ ನುಡಿಗಟ್ಟನ್ನು ಕುರಿತು ಭಾಂಡಾರಕರರು ಕೈಕೊಂಡ ಅರ್ಥವಿಶ್ಲೇಷಣೆಯು ಇನ್ನಷ್ಟು ಉತ್ತಮವಾದುದಾದರೂ 'ಮುದ್ರಾ' ಪದಕ್ಕೆ ಇನ್ನೂ ಹತ್ತು ಹಲವು ಅರ್ಥಗಳಿರಲು ಸಾಕು.

'ಯೋನಿಮುಖದಲ್ಲಿ ಸ್ಥಿತನಾದ ಆತ್ಮ'[17]ನ ಮೇಲೆ ಚಿತ್ತವನ್ನು ಕೇಂದ್ರೀಕರಿಸುವ ಧ್ಯಾನಧಾರಣೆಯು ಬೌದ್ಧ ತಾಂತ್ರಿಕರ 'ಬುದ್ಧತ್ವವು ಹೆಣ್ಣಿನ ಯೋನಿ ಮುಖದಲ್ಲಿ ನೆಲೆಸಿದೆ,[18] ಎಂದೆನ್ನುವ ಸಾರ್ವತ್ರಿಕ ತತ್ತ್ವವನ್ನು ಜ್ಞಾಪಕಕ್ಕೆ ತಂದುಕೊಡುವಂತಿದೆ. 'ಭಗ' (ಯೋನಿಮುಖ)ಎಂಬ ಪದಕ್ಕೆ ಕೂಡ ಹಲವು ವಿಧದ ಅರ್ಥಗಳಿದ್ದು, ಬೌದ್ಧತಂತ್ರಗಳಲ್ಲಂತೂ ಇನ್ನಷ್ಟು ಹೆಚ್ಚು. ಅವುಗಳ ಹಲವು ಗ್ರಂಥಗಳು ಆರಂಭಗೊಳ್ಳುವುದೇ ಈ ಪದದಿಂದ: ' ಒಂದು ಕಾಲಕ್ಕೆ ತಥಾಗತರೆಲ್ಲರ ಸ್ವಾಮಿಯು .... ವಜ್ರ ಹೆಣ್ಣುಗಳ ಯೋನಿಮುಖಗಳಲ್ಲಿ ನೆಲೆಸಿದ್ದನು.'[19] ಇದು, ಭಾರತಿ ಅವರು ಯಾವುದನ್ನು ಅಂತಃ ಪ್ರವಾಹವನ್ನು ಹೊಂದಿದ 'ಸಂಧಾ ಪರಿಭಾಷೆ' ಎಂದು ಕರೆಯುವರೋ ಅದಕ್ಕೊಂದು ಉದಾಹರಣೆಯೆನ್ನಿಸಿದೆ. ಈ ಸಂಧಾ ಪರಿಭಾಷೆಯಲ್ಲಿ ಆಧ್ಯಾತ್ಮಿಕ ಅಥವಾ ಅತೀಂದ್ರಿಯ ಪರಿಕಲ್ಪನೆಗಳನ್ನು [20]'ಗುರಿಯಾಗಿ' ಇರಿಸಿಕೊಂಡು, ಅದಕ್ಕಾಗಿ ಮತ್ತೆ ಮತ್ತೆ ಶೃಂಗಾರದ ಪದಗಳನ್ನು ಬಳಸಲಾಗುತ್ತದೆ. ಇಲ್ಲಿ ಭಾಷ್ಯಕಾರರು 'ಭಗ' ವನ್ನು ' ಆಕಾಶ ತತ್ತ್ವ' ( ಖ-ಧಾತು) ಅಥವಾ 'ಬರಿದು' (ಶೂನ್ಯತಾ) ಹಾಗೂ ಹೆಣ್ಣಾಗಿ ಮೈದಳೆದು ಬಂದ ಜ್ಞಾನೋದಯವೆನ್ನಿಸಿದ [21] ಪ್ರಜ್ಞಾ ಎಂಬುದಾಗಿ ವಿವರಿಸುತ್ತಾರೆ.

'ಮಹಾನಿರ್ವಾಣತಂತ್ರ' ದಂತಹ ಹೆಸರಾದ, ಆದರೂ ತುಂಬ ತಡವಾಗಿ ಒಪ್ಪಿಕೊಳ್ಳಲಾದ ಶೈವತಾಂತ್ರಿಕ ಸಾಹಿತ್ಯದಲ್ಲಿ 'ನಿರ್ವಾಣ' ಪದವನ್ನು ಬಳಸಲಾಗಿದೆಯಾದರೂ 'ನಿರ್ವಾಣ'ಕ್ಕೆ ಸರಿಸಮನಾದ ಹಿಂದೂ ಪದವಾದ ' ಮೋಕ್ಷ' ಅಥವಾ 'ಮುಕ್ತಿ'ಯನ್ನು ಬಳಸುವುದರ ಬದಲು 'ನಿರ್ವಾಣ' ಪದವನ್ನೇ ಬಳಸಲಾದುದು ಇನ್ನೊಮ್ಮೆ ಬೌದ್ಧ ಅಥವಾ ವಜ್ರಯಾನದ ಸಂದರ್ಭವನ್ನು ಸೂಚಿಸುತ್ತದೆ. ಬೌದ್ಧರೊಂದಿಗಿರುವ ಇನ್ನೊಂದು ಸಂಬಂಧವು ಸಹಜಿಯಾ

---

17. ಭಗಾಸನಸ್ಥಂ ಆತ್ಮಾನಂ ಧ್ಯಾತ್ವಾ.
18. ಉದಾಹರಿಸಿದವರು, L. de la Vallee Poussin, 'Tantrism (Buddhist)', ERE, XII, 196.
19. 'ಏಕಸ್ಮಿನ್ ಸಮಯೇ ಭಗವಾನ್ ಸರ್ವತಥಾಗತಕಾಯವಾಕ್‌ಚಿತ್ತಹೃದಯಃ ವಜ್ರಯೋಷಿತ್‌ಭಗೇಷು ವಿಜಹಾರ.' ಅನುವಾದ, ಭಾರತಿ, ಪು. 170.
20. ಅದೇ, ಪು. 173.
21. ದಾಸಗುಪ್ತಾ, pp. 105, 120-21.

ಬೌದ್ಧ ಸಂತನಾದ ಕಾಣ್ಹಪಾದ ಎಂಬವನ ದೇಶೀಯ ಹಾಡುಗಳಲ್ಲಿ ('ಚರ್ಯಾ'ಗಳಲ್ಲಿ) ಕಂಡು ಬರುತ್ತದೆ. ಅವನು ಕಾಪಾಲಿಕರನ್ನು ಪರಿಪೂರ್ಣತೆಯ ಅವಸ್ಥೆಯನ್ನು ತಲುಪಿದ ಯೋಗಿಗಳ ಸಾಲಿಗೆ ಸೇರಿಸುತ್ತಾನೆ.[22] ವಜ್ರಯಾನ ಸಾಹಿತ್ಯವು ಹಿಂದೂ ತಂತ್ರಗಳು ಉಲ್ಲೇಖಿಸುವುದಕ್ಕಿಂತಲೂ ಹೆಚ್ಚಿಗೆ ಕಾಪಾಲಿಕರ ಪೂಜಾವಿಧಾನಗಳಿಗೆ ವಿಶಿಷ್ಟವೆನ್ನಿಸಿದ ಎಲುವುಗಳು, ನೆತ್ತರು, ಮಾಂಸ ಹಾಗೂ ತಲೆಬುರುಡೆಗಳಂತಹ ಧಾರ್ಮಿಕ ವಿಧಿಗಳ ಸಾಧನ ಸಾಮಗ್ರಿಗಳನ್ನು ಕುರಿತು ಉಲ್ಲೇಖಿಸುತ್ತದೆ.

ಇಷ್ಟಾಗಿಯೂ, ಸಂಸ್ಕೃತದ ಆಕರಗಳೆಲ್ಲ, ಕಾಪಾಲಿಕರು ಹಿಂದೂ ದೇವತೆಯಾದ ಭೈರವ ಶಿವ ಹಾಗೂ ಅವನ ಗಣವನ್ನು ಆರಾಧಿಸುತ್ತಾರೆಂದು ಸಾಧಿಸುತ್ತವೆ. ಹೀಗಾಗಿ, ಕಾಪಾಲಿಕರದು ಒಂದು ಶೈವ ಸಂಪ್ರದಾಯವಾಗಿತ್ತು, ಎಂಬ ಬಗೆಗೆ ಯಾವುದೇ ಸಂದೇಹವಿಲ್ಲ. ಬೌದ್ಧರ ಜೊತೆಗಿನ ಇವರ ಸಮಾಂತರತೆಗಳಿಂದಾಗಿ ಇವರು ಬೌದ್ಧ ತಾಂತ್ರಿಕರೊಂದಿಗೆ ಒಂದು ಬಗೆಯ ಸಮಾಂತರ ಸಂಬಂಧವನ್ನು ಹೊಂದಿದ್ದರೆಂದು ನಿರ್ದೇಶಿಸುವಂತಿದ್ದರೂ ಹೆಚ್ಚು ಪುರಾವೆಗಳಿಲ್ಲದ ಕಾರಣ ಈ ಸಂಬಂಧವು ಯಾವ ಬಗೆಯಾಗಿತ್ತೆಂಬುದನ್ನು ಊಹಿಸುವುದು ನಿರರ್ಥಕವಾದ ಸಂಗತಿ. ಯಾಮುನಾಚಾರ್ಯರು ಹಾಗೂ ರಾಮಾನುಜರು ಈ ನಾಲ್ಕು ಸಂಪ್ರದಾಯಗಳಲ್ಲಿ ಕೊನೆಯದಾದ ಕಾಳಾಮುಖ ಸಂಪ್ರದಾಯವನ್ನು ಕುರಿತು ತಮ್ಮ ಭಾಷ್ಯಗಳಲ್ಲಿ ಪ್ರಸ್ತಾವಿಸುತ್ತಾರೆ. ಈ ಸಂಪ್ರದಾಯವು ಹೆಚ್ಚಾಗಿ ಹನ್ನೊಂದು ಹಾಗೂ ಹನ್ನೆರಡನೆಯ ಶತಮಾನಗಳ ನಡುವಿನ ಕಾಲಾವಧಿಯ ದಕ್ಷಿಣ ಭಾರತದಲ್ಲಿ, ಇದಕ್ಕೂ ಹೆಚ್ಚಿಗೆ ಕರ್ನಾಟಕ ಪ್ರದೇಶದಲ್ಲಿ ಪ್ರಭಾವಿಯಾಗಿದ್ದ ಕಾರಣ ಈ ಲೇಖಕರಿಬ್ಬರೂ ಈ ಯತಿಗಳನ್ನು ಹತ್ತಿರದಿಂದ ಬಲ್ಲವರಾಗಿದ್ದರೆಂದು ಕಾಣುತ್ತದೆ. ಯಾಮುನಾಚಾರ್ಯರು ತಮ್ಮ ಬಾಳಿನ ಬಹಳಷ್ಟು ಕಾಲವನ್ನು ಕಾಂಚಿಯಲ್ಲಿ ಕಳೆದರೆಂದು ನಂಬಲಾಗಿದೆ. ಅವರ ಶಿಷ್ಯನು ತನ್ನ ಬಹಳಷ್ಟು ಕಾಲವನ್ನು ಈ ನಗರ ಹಾಗೂ ನೂರೈವತ್ತು ಮೈಲು ದಕ್ಷಿಣಕ್ಕಿರುವ ಶ್ರೀ ರಂಗಮ್‌ಗಳಲ್ಲಿ ಕಳೆದನು. ರಾಮಾನುಜರು ಭಾರತದ ಬೇರೆ ಬೇರೆ ಭಾಗಗಳಲ್ಲೂ ಯಾತ್ರೆಗಳನ್ನು ಕೈಕೊಂಡವರು. ಸಮಕಾಲೀನವಾದ ಕಾಳಾಮುಖ ಮಠಗಳು ಮದ್ರಾಸು ಪ್ರದೇಶದ ಚಿಂಗಲ ಪೇಟೆ ಜಿಲ್ಲೆಯ ತಿರುವಾನಕ್ಕೊಯಿಲ್, ಉತ್ತರ ಅರ್ಕಾಟ ಜಿಲ್ಲೆಯ ವೇಡಲ್, ತಂಜಾವೂರ ಜಿಲ್ಲೆಯ ಕೊಯಿಲ್ ತೇವರಾಯನಪೆಟ್ಟೈ ಹಾಗೂ ತಿರುಚಿರಪಲ್ಲಿ ಜಿಲ್ಲೆಯ ಕೊಡುಂಬಾಲೂರುಗಳಲ್ಲಿದ್ದವು. ಈ ಊರುಗಳು ಕಾಂಚಿ ಇಲ್ಲವೆ ಶ್ರೀರಂಗಮ್‌ದಿಂದ ಹೆಚ್ಚೇನೂ ದೂರದಲ್ಲಿಲ್ಲ.[23]

ಏನಿದ್ದರೂ ರಾಮಾನುಜರು ಈ ಸಂಪ್ರದಾಯವನ್ನು ಕುರಿತು ಬಿಡಿಸಿದ ಚಿತ್ರಣವು

---

22. ಎಸ್. ಬಿ. ದಾಸಗುಪ್ತಾ, ' Obscure Religious Cults', pp. 57-58,90,103-104.
23. ಮುಂದೆ ನೋಡಿ, pp. 165-67.

ಕಾಳಾಮುಖರ ಶಾಸನಗಳಿಂದ ಇಲ್ಲವೆ ಅವರ ಪೋಷಕ ಸಂಪ್ರದಾಯವಾದ ಪಾಶುಪತರ ಸಾಹಿತ್ಯ ಕೃತಿಗಳಿಂದ ದೊರಕುವಂಥದರಿಂದ ತುಂಬ ಭಿನ್ನವಾದುದು. 'ಶ್ರೀ ಭಾಷ್ಯ' ii. 2. 35 -37 ಹೀಗೆನ್ನುತ್ತದೆ:

> ಕಾಳಾಮುಖರು ಇಹಲೋಕ ಹಾಗೂ ಪರಲೋಕಗಳಲ್ಲಿ ಎಲ್ಲ ಬಗೆಯ ಆಸೆಗಳನ್ನು ಈಡೇರಿಸಿಕೊಳ್ಳುವಿಕೆಯನ್ನು ಭದ್ರಪಡಿಸಿಕೊಳ್ಳುವ ತಮ್ಮ ಗುರಿಗಾಗಿ ( ಈ ಮುಂದಿನ ಸಂಗತಿಯನ್ನು ) ಒಂದು ಸಾಧನವೆಂದು ಮುಂದಿರಿಸುತ್ತಾರೆ: ತಲೆ ಬುರುಡೆಯ ಭಿಕ್ಷಾಪಾತ್ರೆಯಲ್ಲಿ ಉಣ್ಣುವುದು, ಮೈಗೆ ಚಿತಾಭಸ್ಮವನ್ನು ಬಳಿದುಕೊಳ್ಳುವುದು (ಸ್ನಾನ ), ಅಂಥ ಭಸ್ಮವನ್ನು ಸೇವಿಸುವುದು, ಜೊತೆಗೆ ಒಂದು ದೊಣ್ಣೆಯನ್ನು (ಲಗುಡ) ಇರಿಸಿಕೊಳ್ಳುವುದು, ಒಂದು ಮದ್ಯಪಾತ್ರೆಯನ್ನು (ಸುರಾ) ಹೊಂದಿರುವುದು, ಹಾಗೂ ದೇವತೆಗಳ ಪೂಜೆಗಾಗಿ (ದೇವಪೂಜಾ) ಅದನ್ನು ಬಳಸುವುದು, ಮುಂ.

ಈ ಬಣ್ಣನೆಯ ಬಹುಪಾಲು ಕಾಪಾಲಿಕರಿಗೆ ಮಾತ್ರ ಸರಿಹೊಂದುಂಥದು. ಬೇರೆ ಆಕರಗಳಲ್ಲಿ ಎರಡು ಸಂಗತಿಗಳು ಮಾತ್ರ ಕಾಳಾಮುಖರಿಗೆ ಸಂಬಂಧಪಟ್ಟಿವೆ. ಇವೆಂದರೆ ಭಸ್ಮಸ್ನಾನ ಹಾಗೂ ದೊಣ್ಣೆ (ಲಗುಡ) 'ಪಾಶುಪತಸೂತ್ರ' ದಲ್ಲಿ[24] ವಿಧಿಸಲಾದ ಕೇಂದ್ರಭೂತ ಮತಾಚರಣೆಗಳಲ್ಲಿ ಭಸ್ಮಸ್ನಾನವು ಒಂದು. ಈ ಕೃತಿಯ ಲೇಖಕ ಎಂದೆನ್ನಲಾಗುವ ಲಕುಲೀಶನನ್ನು ಪಾಶುಪತರು ಹಾಗೂ ಕಾಳಾಮುಖರಿಬ್ಬರೂ ಬಲು ಗೌರವದಿಂದ ಕಾಣುತ್ತಾರೆ. ಅವನ ಹೆಸರೇ ಸೂಚಿಸುವಂತೆ ಅವನೂ ಕೂಡ ಒಂದು ದೊಣ್ಣೆಯನ್ನು ಹಿಡಿದುಕೊಳ್ಳುವವನಾಗಿದ್ದನು (ಲಕುಲ)[25]. ಲಕುಲ ಹಾಗೂ ಲಗುಡ ಪದಗಳು ಸಮಾನಾರ್ಥದವುಗಳು ಹಾಗೂ ವ್ಯುತ್ಪತ್ತಿಶಾಸ್ತ್ರದ ದೃಷ್ಟಿಯಿಂದಲೂ ಸಮಾನವಾದವುಗಳು. ಅದಕ್ಕೆ ಎದುರಾಗಿ ಕಾಪಾಲಿಕರು ಸಾಮಾನ್ಯವಾಗಿ ಒಂದು ಖಟ್ವಾಂಗವನ್ನು ಇಲ್ಲವೆ ಒಂದು ತ್ರಿಶೂಲವನ್ನು ಹೊಂದಿರುತ್ತಾರೆ. ಯಾಮುನಾಚಾರ್ಯರು 'ಆಗಮಪ್ರಾಮಾಣ್ಯ'ದ ಬೇರೊಂದೆಡೆಯಲ್ಲಿ ನಾಲ್ಕು ಆಯಾಮಗಳನ್ನು ಹೊಂದಿದ ತಂತ್ರಗಳಾದ ಶೈವ, ಪಾಶುಪತ, ಸೌಮ್ಯ ಹಾಗೂ ಲಾಗುಡಗಳನ್ನು ಕುರಿತು ಹೇಳುತ್ತಾರೆ.[26] ಈ ಸಂಗತಿ ನಾಲ್ಕು ಸಂಪ್ರದಾಯಗಳಾದ ಶೈವ, ಪಾಶುಪತ, ಕಾಪಾಲ ಹಾಗೂ ಕಾಳಾಮುಖಗಳಿಗೆ ಸ್ಪಷ್ಟವಾಗಿ ಸರಿಹೊಂದುತ್ತದೆ.

---

24. ಸಂ. ಆರ್. ಎ. ಶಾಸ್ತ್ರಿ, i. 2.

25. ಮುಂದೆ ನೋಡಿ, ಪು. 108.

26. 'ಶ್ರೀಹರ್ಷ'ದಲ್ಲಿ ಉದ್ಧರಿಸಲಾದುದು. ಪು. 643.

ತಲೆ ಬುರುಡೆಯ ಪಾತ್ರೆಯಲ್ಲಿ ಉಣ್ಣುವುದು ಹಾಗೂ ಮದ್ಯದ ಪಾತ್ರೆಯಿಂದ ದೇವತೆಗಳನ್ನು ಪೂಜಿಸುವುದೆಲ್ಲ ಹೆಚ್ಚಾಗಿ ಕಾಪಾಲಿಕರಿಗೆ ಸಂಬಂಧಿಸಿದ ಸಂಗತಿಗಳು, ಕಾಳಾಮುಖರಿಗಲ್ಲ. ಸಂಸ್ಕೃತದ ಆಕರಗಳು ಸಾಮಾನ್ಯವಾಗಿ ಕಾಪಾಲಿಕರನ್ನು ತಲೆ ಬುರುಡೆಯನ್ನು ಹಿಡಿದುಕೊಂಡು ಭಿಕ್ಷೆ ಕೇಳುತ್ತ ಅಲೆಯುವವರು ಹಾಗೂ ಐಹಿಕ ಮತ್ತು ಧಾರ್ಮಿಕ ಆಚರಣೆಗಳಿಗಾಗಿ ಕೂಡ ಧಾರಾಳವಾಗಿ ಮದ್ಯವನ್ನು ಸೇವಿಸುವ ಬೂಟಾಟಿಕೆಯ ಬೈರಾಗಿಗಳಾಗಿ ಚಿತ್ರಿಸುತ್ತವೆ. ಅವರು ಸತ್ತವರ ಚಿತಾಭಸ್ಮವನ್ನು ಬಳಿದು ಕೊಳ್ಳುವವರು. ಆದರೆ ಅವರದನ್ನು ಸೇವಿಸುತ್ತಾರೆಂದು ಯಾವ ಆಕರಗಳೂ ಸಾಧಿಸುವುದಿಲ್ಲ.

ರಾಮಾನುಜರ ಕಥನದಲ್ಲಿ ಕಂಡುಬರುವ ಕಾಪಾಲಿಕ ಹಾಗೂ ಕಾಳಾಮುಖರನ್ನು ಕುರಿತಾದ ಗೊಂದಲವು ಆರ್. ಜಿ. ಭಾಂಡಾರಕರರ ಗಮನಕ್ಕೆ ಬಂದಿದ್ದು ಅವರು ( ಪು. 128) ' ಜನರು ಅವರಿಬ್ಬರ ನಡುವೆ ಅಂತಹ ತೀವ್ರವಾದ ವ್ಯತ್ಯಾಸವನ್ನು ಮಾಡಿರಲಿಕ್ಕಿಲ್ಲ' ಎಂಬ ತೀರ್ಮಾನಕ್ಕೆ ಬಂದಿದ್ದಾರೆ ಜಿ. ಎಸ್. ಘುರ್ಯೆ ಅವರು (ಪು. 128) ಸೂಚಿಸುವಂತೆ ಕಾಳಾಮುಖರ ಹೆಚ್ಚು ಶಾಸನಗಳುಳ್ಳ ಕಾಲವಾದ ಹನ್ನೆರಡನೆಯ ಶತಮಾನದ ಹೊತ್ತಿಗೆ ಈ ಸಂಪ್ರದಾಯವು 'ಆಕ್ಷೇಪಣೆಗೆ ಒಳಗಾಗುವ ತನ್ನೆಲ್ಲ ಆಚರಣೆಗಳನ್ನು ಕಳಚಿಕೊಂಡು ಪರಿಶುದ್ಧವಾದರೂ ಆಗಿತ್ತು, ಇಲ್ಲವೆ ಹೆಚ್ಚು ಆಕ್ಷೇಪಾರ್ಹ ಎನ್ನಿಸಿದವುಗಳನ್ನು ಅದುಮಿಯಾದರೂ ಇಟ್ಟಿತ್ತು.'ಭಾಂಡಾರಕರರ ತಾತ್ವಿಕ ಅಭಿಪ್ರಾಯವು ಬಹಳಷ್ಟು ಮಟ್ಟಿದೆ ತೋರಿಕೆಯದಾಗಿ ಮಾತ್ರವಿದ್ದು ಅದು ಸಮಾಧಾನಕರವಂತೂ ಅಲ್ಲವೇ ಅಲ್ಲ. ಇವೆರಡೂ ಸಂಪ್ರದಾಯಗಳಲ್ಲಿ ತುಂಬ ವ್ಯತ್ಯಾಸಗಳಿದ್ದವು. ಅವುಗಳನ್ನು ಬೇರೆ ಬೇರೆಯಾಗಿ ಗುರುತಿಸುವುದು ಹೇಗೆಂಬುದು ಯಾಮುನ ಹಾಗೂ ರಾಮಾನುಜರಿಗೆ ತಿಳಿದಿರಲೇಬೇಕು. ಎಲ್ಲಕ್ಕೂ ಹಳೆಯ ದಾಖಲೆ ಎನ್ನಿಸಿದ ಕಾಳಾಮುಖರ ಕ್ರಿ.ಶ.810ರ ಶಾಸನವು ತರುವಾಯದ ಯಾವುದೇ ಶಾಸನಗಳಿಗಿಂತ ಧಾರ್ಮಿಕ ಉಗ್ರಗಾಮಿತ್ವವನ್ನು ಕುರಿತಾದ ಪುರಾವೆಯನ್ನೇನೂ ಒದಗಿಸುವುದಿಲ್ಲ , ಎಂಬುದನ್ನು ಗಣನೆಗೆ ತೆಗೆದುಕೊಳ್ಳಲು ಘುರ್ಯೆಯವರ ತಾತ್ವಿಕ ಅಭಿಪ್ರಾಯವು (ಥಿಯರಿ) ಸೋಲುತ್ತದೆ. ಬೇರೊಬ್ಬನಾದರೆ ಇದಕ್ಕಿಂತಲೂ ಹೆಚ್ಚಿನ ಕುಟಿಲ ವಿವರಣೆಯನ್ನು ನೀಡಬಲ್ಲನು. ಯಾಮುನ ಹಾಗೂ ರಾಮಾನುಜರ ಕಾಲಕ್ಕೆ ಕಾಳಾಮುಖರು ಬಲು ವೇಗದಿಂದ ಪ್ರಸಿದ್ಧಿಯ ಜೊತೆಗೆ ದಕ್ಷಿಣ ಭಾರತದಲ್ಲಿ ರಾಜಾಶ್ರಯವನ್ನೂ ಕೂಡ ಪಡೆಯತೊಡಗಿದ್ದರು. ಈ ವೈಷ್ಣವ ಯತಿಗಳಿಬ್ಬರೂ ತಮ್ಮೀ ಮಹತ್ವದ ಎದುರಾಳಿಗಳನ್ನು ಮಾನನಷ್ಟಕ್ಕೆ ಈಡುಮಾಡಲೆಂದೇ ಇವೆರಡೂ ಶೈವಸಂಪ್ರದಾಯಗಳ ಬಗೆಗೆ ಗೊಂದಲವನ್ನು ಹುಟ್ಟಿಸಿರಲು ಸಾಕು.

'ಶ್ರೀ ಭಾಷ್ಯ'ವು ii. 2. 35-37 ಮುಂದುವರಿಯುತ್ತ 'ಶೈವಾಗಮಗಳ'ಲ್ಲಿ ಬಣ್ಣಿಸಲಾದ ಒಂದು ಪಟ್ಟಿಯನ್ನು ಹೀಗೆ ನೀಡುತ್ತದೆ: ' ಕೈಯಲ್ಲಿ ರುದ್ರಾಕ್ಷಿಯ ಮಾಲೆ, ಜಡೆಗಟ್ಟಿದ ತಲೆಗೂದಲು, ತಲೆ ಬುರುಡೆಯ ಭಿಕ್ಷಾಪಾತ್ರೆ, ಮೈಗೆ ಬಳಿದುಕೊಂಡ ಭಸ್ಮ, ಮುಂ.'

ರಾಮಾನುಜರು ತಲೆ ಬುರುಡೆಯೊಂದನ್ನು ಹೊರತುಪಡಿಸಿ ಮಿಕ್ಕ ವಸ್ತುಗಳನ್ನು ಶೈವ ಪಂಥಕ್ಕೆ ಆರೋಪಿಸುತ್ತಾರೆ. ಆದರೆ ಇದು (ತಲೆ ಬುರುಡೆ) ಶೈವರಿಗೆ ಸಂಬಂಧಿಸಿದುದಲ್ಲ. ಮಿಕ್ಕೆಲ್ಲ ವಸ್ತುಗಳು ಸನ್ಯಾಸಿಗಳ ವೇಷಭೂಷಣಗಳಾಗಿವೆಯೆಂದು ಅವರು ತಿಳಿಯುತ್ತಾರೆ.

ಕಾಳಾಮುಖ ಯತಿಗಳ ಒಂದೇ ಒಂದು ಶಾಸನದಲ್ಲಿರುವ ವರ್ಣನೆಯೊಂದಿಗೆ ಈ ಪಟ್ಟಿಯನ್ನು ಹೋಲಿಸಿ ನೋಡುವಂತಿದೆ. ಬೆಳಗಾವಿ ಜಿಲ್ಲೆಯ ಮುನವಳ್ಳಿಯ ಕ್ರಿ.ಶ. 1252-53ಯ ಶಾಸನವು ಕಾಳಾಮುಖ 'ರಾಯರಾಜಗುರು'ವೆನ್ನಿಸಿದ ಸರ್ವೇಶ್ವರದೇವನನ್ನು 'ಯಾವನ ದೇಹಕ್ಕೆ ಭಸ್ಮವನ್ನು ಬಳಿದುಕೊಳ್ಳಲಾಗಿದ್ದಿತೋ, ಯಾವನು ತನ್ನ ಟೊಂಕಕ್ಕೆ ಬಟ್ಟೆಯ ಚಿಕ್ಕ ತುಂಡನ್ನು ಮತ್ತು ಕೂದಲುಗಳುಳ್ಳ ಚಿಗರೆಯ ಚರ್ಮವನ್ನು ಸುತ್ತಿಕೊಂಡಿದ್ದನೋ, ಯಾವನು ಕೈಯಲ್ಲಿ ರುದ್ರಾಕ್ಷಿಯ ಮಾಲೆಯನ್ನು ಹಿಡಿದುಕೊಂಡಿದ್ದನೋ.......'[27] ಎಂದು ಹೊಗಳುತ್ತದೆ.ಕೌಪೀನ ಹಾಗೂ ಚಿಗರೆಯ ಚರ್ಮಗಳಂತೆಯೇ ಭಸ್ಮ ಹಾಗೂ ರುದ್ರಾಕ್ಷಗಳು ಶೈವಯತಿಗಳ ಪ್ರಮಾಣೀಕೃತ ಸಲಕರಣೆಗಳು. ತಲೆ ಬುರುಡೆಯ ಪಾತ್ರೆ ಇಲ್ಲವೆ ಮದ್ಯಪಾತ್ರೆಯನ್ನು ಕುರಿತು ಅದಾವ ಉಲ್ಲೇಖವಿಲ್ಲ.

ರಾಮಾನುಜರ 'ಶ್ರೀಭಾಷ್ಯ'ವು ii. 2.35-37, ಕಾಪಾಲವ್ರತವನ್ನು ಹೀನೈಸುವ ಈ ಬಣ್ಣನೆಯೊಂದಿಗೆ ಮುಕ್ತಾಯಗೊಳ್ಳುತ್ತದೆ:

> ಇದೇ ರೀತಿಯಾಗಿ ಅವರು (? = ' ಶೈವಾಗಮಗಳು', ನಾಲ್ಕು ಸಂಪ್ರದಾಯಗಳು, ಕಾಪಾಲಿಕರು) ಹೇಳುವುದೇನೆಂದರೆ, ಕೆಳಜಾತಿಗಳಿಗೆ ಸೇರಿದ ಜನ ಕೂಡ ಕೆಲವು ವಿಶೇಷವಾದ ಮತಾಚರಣೆಗಳಿಂದ ಬ್ರಾಹ್ಮಣರ ಹಾಗೂ ಸರ್ವೋಚ್ಚ ಆಶ್ರಮದ (= ಸಂನ್ಯಾಸ, ಭಿಕ್ಷು) ಸ್ಥಾನವನ್ನು ಪಡೆಯಬಲ್ಲರೆಂದು. ( ಏಕೆಂದರೆ,) ' ಕೇವಲ ದೀಕ್ಷೆಯ ಪ್ರಕ್ರಿಯೆಯಿಂದಾಗಿ ಯಾವೊಬ್ಬನು ತತ್‌ಕ್ಷಣ ಬ್ರಾಹ್ಮಣನಾಗಿ ಬಿಡುತ್ತಾನೆ. ಕಾಪಾಲ ವ್ರತವನ್ನು ಆಚರಿಸುವುದರಿಂದ ಯಾವನೇ ಆಗಲಿ, ಒಬ್ಬ ಮಹಾ ಯತಿಯಾಗಿಬಿಡುತ್ತಾನೆ' (ಎಂದು ಹೇಳಲಾಗಿದೆ.)

ಇದನ್ನು ಈ ಕೆಳಗಿನ 'ಕುಲಾರ್ಣವ ತಂತ್ರ'ದ ಒಂದು ಪದ್ಯದೊಡನೆ ಹೀಗೆ ಹೋಲಿಸಬಹುದು: ' ಶೂದ್ರನ ಶೂದ್ರತ್ವವು ಕಳೆಯಿತು ಹಾಗೂ ಬ್ರಾಹ್ಮಣನ (ವಿಪ್ರ) ಬ್ರಾಹ್ಮಣತ್ವವು ಕಳೆಯಿತು; ದೀಕ್ಷೆಯಿಂದ ಪವಿತ್ರನನ್ನಾಗಿ ಮಾಡಲಾದವನಿಗೆ ಜಾತಿಭೇದಗಳಿಲ್ಲ.'[28] ಜಾತಿಪ್ರಜ್ಞೆಯ ಬಗೆಗಿನ ವಿರೋಧವು ತಾಂತ್ರಿಕ ಆರಾಧನೆಯ ಒಂದು

27. ಜೆ. ಎಫ್. ಫ್ಲೀಟ್ (ಸಂ. ಮತ್ತು ಅನು.), 'Sanskrit and Old Canarese Inscriptions Relating to Yadava Kings of Devagiri', JBBRAS, XII (1876), 40.
28. ಸಂ. ಟಿ. ವಿದ್ಯಾರತ್ನ, xiv.91.

ಸಾಮಾನ್ಯ ಲಕ್ಷಣವಾಗಿದ್ದು ಸಂಸ್ಕೃತ ಸಾಹಿತ್ಯದಲ್ಲಿ ಬರುವ ಕಾಪಾಲಿಕರು ಅದನ್ನು ಸತತವಾಗಿ ಅವಲಂಬಿಸಿರುವರು. ಆಧುನಿಕ ದೃಷ್ಟಿಕೋನದಿಂದ ಕಂಡಾಗ ಈ ವಿರೋಧವು ಪ್ರಶಂಸೆಗೆ ಪಾತ್ರವೆನ್ನಿಸಬಹುದಾದರೂ ರಾಮಾನುಜರಂತಹ ಸಂಪ್ರದಾಯವಾದೀ ಲೇಖಕರಿಗೆ ಇದು ಜಾತಿಯ ಮೇಲಿನ ದಾಳಿ, ಅಂದರೆ ದೇವನಿರ್ಮಿತ ಇಡಿಯ ಸಾಮಾಜಿಕ ವ್ಯವಸ್ಥೆಯ (ವರ್ಣಾಶ್ರಮ ಧರ್ಮದ) ಮೇಲಿನ ದಾಳಿಯೆನ್ನಿಸಿತ್ತು.

ತಾಂತ್ರಿಕರಿಂದ ನಡೆವ ಜಾತಿಯನ್ನು ತಳ್ಳಿಹಾಕುವ ಕ್ರಿಯೆಗೆ ಕೂಡ ತನ್ನದೇ ಆದ ಒಂದು ಮಿತಿಯಿದೆ ಎಂಬ ಸಂಗತಿಯನ್ನು ರಾಮಾನುಜರು ಗಮನಿಸಲೊಲ್ಲರು. ಬಹಳಷ್ಟು ತಾಂತ್ರಿಕ ಕೃತಿಯಲ್ಲಿ ಜಾತಿಯ ನಿರಾಕರಣೆ ನಡೆಯುತ್ತಿದ್ದುದು ಕೇವಲ ಮತಾಚರಣೆಯ ಸನ್ನಿವೇಶಗಳಲ್ಲಿ ಮಾತ್ರ. ದಿನನಿತ್ಯದ ಬಳಕೆಯಲ್ಲಿ ಜಾತಿಭೇದಗಳನ್ನು ಪಾಲಿಸಲಾಗುತ್ತವೆ. ಹೀಗಾಗಿ ' ಕುಲಾರ್ಣವ ತಂತ್ರ' ವು viii. 101, ಹೀಗೆನ್ನುತ್ತದೆ: ' ಈ ಚಕ್ರದಲ್ಲಿ (ಪೂಜಾ ಚಕ್ರ) ಜಾತಿಭೇದಗಳಿಲ್ಲ. (ಇದರಲ್ಲಿರುವ) ಪ್ರತಿಯೊಬ್ಬನೂ ಶಿವಸಮಾನನೆಂದು ಸಾರಲಾಗುತ್ತದೆ.' ಇಷ್ಟಾಗಿಯೂ ಈ ಗ್ರಂಥವು ಬೇರೆಡೆಗಳಲ್ಲಿ ಬೇರೆ ಬೇರೆ ವರ್ಗಗಳವರಿಗೆ ಬೇರೆ ಬೇರೆ ಕಾಲಾವಧಿಯ ಅಧ್ಯಯನಗಳನ್ನು ವಿಧಿಸುತ್ತದೆ. 'ಮಹಾನಿರ್ವಾಣ ತಂತ್ರ'ವು ಯಾವುದೇ ಬಗೆಯ ಮಾರ್ಪಾಟುಗಳಿಲ್ಲದೆ, ವರ್ಗಭೇದಗಳನ್ನು ಒಪ್ಪಿಕೊಳ್ಳುವಂತೆ ಕಾಣುತ್ತದೆ.[29] ಮತಾಚರಣೆಗಳ ಸಂದರ್ಭದಲ್ಲಿ ಜಾತಿಯ ಬಂಧನಗಳನ್ನು ಮೀರುವುದಕ್ಕೂ ತರ್ಕಸಮ್ಮತವಾದ ಭೌತಿಕ ವಾದಗಳಿಗೂ ಆದಾವುದೇ ಸಂಬಂಧವಿಲ್ಲ. ಇದು ಆಧ್ಯಾತ್ಮಿಕತೆಯ ತಿರುವು ಮುರುವಿನ ಭಾಗ ಹಾಗೂ ಮೌಲ್ಯಗಳ ಪುನರ್ಮೌಲ್ಯೀಕರಣದ ಕ್ರಿಯೆಯಾಗಿದ್ದು, 'eine unwertung aller Werte,' ಆರಾಧನೆಯ ಪವಿತ್ರ ವಲಯದಲ್ಲಿ ಮಾತ್ರ ಸರಿಯಾದುದು. ವಿರುದ್ಧವಾದ ಸಂಗತಿಗಳು ಮತಾಚರಣೆಗಳ ಲೋಕೋತ್ತರ ವಿಶ್ವದಲ್ಲಿ ಒಂದುಗೂಡುವುದಲ್ಲದೆ ಸ್ಥಳಗಳನ್ನು ಬದಲಾಯಿಸಿಕೊಳ್ಳುತ್ತವೆ. ಎಲ್ಲಕ್ಕೂ ಕೆಳಗಿನದು ಎಲ್ಲಕ್ಕೂ ಮೇಲಿನದಾದರೆ, ಎಲ್ಲಕ್ಕೂ ಮೇಲಿನದು ಎಲ್ಲಕ್ಕೂ ಕೆಳಗಿನದು.[30] ಜಾತಿಯ ಸಂದರ್ಭದಲ್ಲಿ ನೋಡುವುದಾದರೆ ಕಾಣ್ಹಪಾದನ ತಾಂತ್ರಿಕ ಬೌದ್ಧ ಗೀತೆಗಳಲ್ಲಿ[31] ಡೊಂಬೀ (ಮಡಿವಾಳಗಿತ್ತಿ)ಯನ್ನು ದೇವತ್ವಕ್ಕೆ ಏರಿಸುವ ಮೂಲಕ ಈ ಅತೀಂದ್ರಿಯವಾದಿ ತತ್ವವು ತುತ್ತತುದಿಗೇರುತ್ತದೆ.

## ಪುರಾಣಗಳು ಹಾಗೂ ಇನ್ನಿತರ ಆಕರಗಳು

ಹಲವು ಪುರಾಣಗಳು ಹಾಗೂ ಕೆಲವು ಕೃತಿಗಳು ಬ್ರಹ್ಮಸೂತ್ರದ ಭಾಷ್ಯಕಾರರು ಹೇಳುವ ನಾಲ್ಕು ಸಂಪ್ರದಾಯಗಳನ್ನು ಇಡಿಯಾಗಿ ಇಲ್ಲವೆ ಅವುಗಳಲ್ಲಿಯ ಕೆಲವನ್ನು

29. ಸಂ. ಮತ್ತು ಅನು. ಜೆ ವುಡ್‌ರಾಫ್, (Woodroffe), chap. viii.

30. ನೋಡಿ, ಭಾರತಿ, ಪು. 234 ಮತ್ತು M. Eliade, Yoga: Immortality and Freedom, ಪು. 261.

31. ಬ್ರಹ್ಮಸೂತ್ರ ಭಾಷ್ಯ ii. 2. 37.

ಪಟ್ಟಿಮಾಡಿವೆ. ಈ ಕೆಳಗಿನ ತಃಖ್ತೆಯು ಈ ಭಾಷ್ಯಗಳನ್ನು ಬೇರೆ ಆಕರಗಳೊಂದಿಗೆ ತುಲನೆ ಮಾಡುತ್ತದೆ:

| | | | |
|---|---|---|---|
| ಭಾಸ್ಕರಾಚಾರ್ಯ[32] | ಕಾಪಾಲಿಕ<br>ಕಾಠಕ-ಸಿದ್ಧಾಂತಿನ್ | ಪಾಶುಪತ<br>ಶೈವ | |
| ವಾಚಸ್ಪತಿ ಮಿಶ್ರ[33] | ಕಾಪಾಲಿಕ<br>ಕಾರುಣಿಕ-<br>ಸಿದ್ಧಾಂತಿನ್ | ಪಾಶುಪತ<br>ಶೈವ | |
| ಯಾಮುನಾಚಾರ್ಯ[34]<br>ಮತ್ತು ರಾಮಾನುಜ[35] | ಕಾಪಾಲಿಕ,<br>ಕಾಳಾಮುಖ | ಪಾಶುಪತ<br>ಶೈವ | |
| ಯಾಮುನಾಚಾರ್ಯ[36] | ಸೌಮ್ಯ<br>ಲಾಗುಡ | ಪಾಶುಪತ<br>ಶೈವ | |
| ಕೂರ್ಮ ಪುರಾಣ | ಕಾಪಾಲ[37]<br>ನಾಕುಲ ಅಥವಾ<br>ಲಾಕುಲ | ಪಾಶುಪತ | ಅಲ್ಲದೆ ವಾಮ, ಭೈರವ<br>ಮತ್ತು ಪಂಚರಾತ್ರ |
| | ಸೋಮ[38]<br>ಲಾಕುರ ಅಥವಾ<br>ಲಾಂಜನ ಅಥವಾ<br>ವಾಕುಲ | ಪಾಶುಪತ | ಅಲ್ಲದೆ<br>ವಾಮ ಮತ್ತು ಭೈರವ |
| | ಸೋಮ,[39]<br>ಲಾಂಗಲ,<br>(ಲಾಗುಡ) | ಪಾಶುಪತ | ಅಲ್ಲದೆ<br>ವಾಮ ಮತ್ತು ಭೈರವ |

32. ಬ್ರಹ್ಮಸೂತ್ರ ಭಾಷ್ಯ ii. 2. 37.
33. ಬ್ರಾಹ್ಮತೀ ii. 2. 37.
34. ಆಗಮ ಪ್ರಾಮಾಣ್ಯ, ಉದ್ಧೃತ, 'ಶ್ರೀಹರ್ಷದಲ್ಲಿ, ಪು. 643.
35. 'ಶ್ರೀ ಭಾಷ್ಯ' ii. 35-37.
36. ಉದ್ಧೃತ, ಶ್ರೀಹರ್ಷದಲ್ಲಿ, ಪು. 643.
37. ಸಂ. ಎನ್. ಮುಖೋಪಾದ್ಯಾಯ, i. 16 (ಪು. 184).
38. ii. 12( ಪು. 740). ಲಾಕುಲವು ತಪ್ಪಿ ಲಾಕುರ ಆಗಿರಬಹುದು.
39. 'ಉಪರಿಭಾಗ'. 37.147, ಹಂಡಿಕಿಯಿಂದ ಉದ್ಧೃತ, ಪು. 463. ಈ ಸಂದರ್ಭವು ಪುರಾಣದ ಯಾವ ಆವೃತ್ತಿಯಿಂದ ಬಂದುದೆಂಬುದು ನಮಗೆ ತಿಳಿದಿಲ್ಲ. ಈ ಪದ್ಯವನ್ನು ಕುರಿತು ಭಾಷ್ಯವನ್ನು ಮಾಡುತ್ತ ಅಪ್ಪಯ್ಯ ದೀಕ್ಷಿತರು (ಅದೇ ಉದ್ಧರಣೆ) ಲಾಂಗಲ (ನೇಗಿಲು)ಕ್ಕೆ ಬದಲಾಗಿ ಲಾಗುಡ (ದೊಣ್ಣೆಯನ್ನು ಹಿಡಿದುಕೊಂಡ) ಎಂದು ಓದುತ್ತಾರೆ. ಲಾಗುಡವು ಒಳ್ಳೆಯ ಪಾಠ.

| | | | |
|---|---|---|---|
| ನಾರಾದೀಯ ಪು.[40] | ಕಾಪಾಲ<br>ಮಹಾವ್ರತಧರ | ಪಾಶುಪತ<br>ಸಿದ್ಧಾಂತ<br>ಮಾರ್ಗ | |
| ಶಿವ ಪು. ವಾಯ<br>ವೀಯ ಸಂಹಿತಾ[41] | ಕಾಪಾಲ<br>ಮಹಾವ್ರತಧರ | ಪಾಶುಪತ<br>ಸಿದ್ಧಾಂತ -<br>ಮಾರ್ಗ | |
| ಸ್ಕಂದ ಪು.[42] | ಕಂಕಾಲ<br>ಕಾಳಮುಖ | ಪಾಶುಪತ<br>ಶೈವ | ಅಲ್ಲದೆ ಮಹಾವ್ರತ |
| ಸ್ಕಂದ ಪು. ಸೂತ<br>ಸಂಹಿತಾ[43] | ಕಾಪಾಲ,<br>ಲಾಕುಲ | ಪಾಶುಪತ | ಅಲ್ಲದೆ ಸೋಮ |
| ಸ್ವಯಂಭೂ ಪು.[44] | ಸೋಮ<br>ವಾ (ಲಾ)ಕುಲ | ಪಾಶುಪತ<br>ಶೈವ | |
| ವಾಮನ ಪು. | ಕಾಪಾಲಿಕ[45]<br>ಕಾಲದಮನ | ಪಾಶುಪತ<br>ಶೈವ | |
| | ಮಹಾವ್ರತಿನ್[46]<br>ಕಾಳಾಮುಖ | ಪಾಶುಪತ<br>ಶೈವ | ಅಲ್ಲದೆ<br>ಮಹಾಪಾಶುಪತ<br>ಮತ್ತು ಇನ್ನು ಹಲವು |
| ವಶಿಷ್ಠ ಮತ್ತು<br>ಲಿಂಗ ಪು. ಗಳು[47] | ಸೋಮ<br>ನಾಕುಲ | | ಅಲ್ಲದೆ ಲೋಕಾಯತ<br>ಮತ್ತು ಭೈರವ |

---

40. 'ಉತ್ತರ ಖಂಡ'. 30. 103, ಉದ್ಧೃತ, ಎ. ಪಿ. ಕರಮರಕರ, 'The Vratya or Dravidian systems', ಪು. 220.
41. ಮಲ್ಲಿಕಾರ್ಜುನಶಾಸ್ತ್ರಿ, ii. 24. 177.
42. 'ಅರುಣಾಚಲ-ಮಾ'. 10. 65, ಉದ್ಧೃತ ಕರಮರಕರ, ಪು. 220.
43. ಸಂ. ವಿ. ಎಸ್. ಪಣಶೀಕರ, 'ಯಜ್ಞವೈಭವಖಂಡ'. 22. 3.
44. ಉದ್ಧೃತ, 'ಈಶಾನ ಶಿವಗುರು ಪದ್ಧತಿ'. ಭಾಗ. III, ಕ್ರಿಯಾಪದ, ಅಧ್ಯಾಯ, i, ಉದ್ಧೃತ, ವಿ. ಎಸ್. ಪಾಠಕ, 'Hisroty of saiva Cults in Northern India from Inscriptions,' ಪು. 3.
45. ವೆಂಕಟೇಶ್ವರ ಪ್ರೆಸ್ ಮುದ್ರಣ, iv. 87.
46. lxvii.10-20.
47. 'ತಂತ್ರಾಧಿಕಾರಿನಿರ್ಣಯ'ದಿಂದ ಈ ಎರಡು ಪುರಾಣದವೆಂದು ಹೇಳಲಾದ ಒಂದು ಪದ್ಯದಲ್ಲಿ, ಉದ್ಧೃತ, ಸಿ. ಚಕ್ರವರ್ತಿ, Tantras': studies on their Religion and Literature. ಪು. 51.

| | | | |
|---|---|---|---|
| ಆನಂದಗಿರಿ [48] | | ಪಾಶುಪತ<br>ಶೈವ | ಅಲ್ಲದೆ<br>ಉಗ್ರ, ರೌದ್ರ, ಭಟ್ಟ<br>ಮತ್ತು ಜಂಗಮ. |
| ರಾಜಶೇಖರ [49] | ಮಹಾವ್ರತಧರ<br>ಕಾಳಾಮುಖ | ಪಾಶುಪತ<br>ಶೈವ | |
| ಶಕ್ತಿ ಸಂಗಮ<br>ತಂತ್ರ [50] | ಕಾಳಾಮುಖ | ಪಾಶುಪತ,<br>ಶೈವ | ಅಲ್ಲದೆ ಇತರ 6 |
| ಸಿದ್ಧ ಸಿದ್ಧಾಂತ<br>ಪದ್ಧತಿ [51] | ಕಾಪಾಲಿಕ<br>ಕಾಳಾಮುಖ | ಪಾಶುಪತ<br>ಶೈವ | ಅಲ್ಲದೆ ಮಹಾವ್ರತಧರ<br>ಮತ್ತು ಇತರ 5 |
| ಸುಪ್ರಭೇದಾಗಮ [52] | ಸೌಮ್ಯ<br>ಲಾಕುಲ | ಪಾಶುಪತ<br>ಶೈವ | |
| ಮಲ್ಕಾಪುರಮ್<br>ಶಿಲಾಶಾಸನ[53] | ಶಿವಶಾಸನ<br>ಕಾಲಾನನ | ಪಾಶುಪತ<br>ಶೈವ | |

ಈ ತಃಖ್ತೆಯಿಂದ ಸ್ಪಷ್ಟಗೊಳ್ಳುವ ಸಂಗತೆಯೆಂದರೆ ಈ ಸಂಪ್ರದಾಯಗಳಿಗೆ ಹಲವು ಪರ್ಯಾಯ ಹೆಸರುಗಳಿದ್ದುವೆಂಬುದು. ಬಲು ಮುಖ್ಯವಾದ ಏರುಪೇರುಗಳೆಂದರೆ: ಕಾಳಾಮುಖರಿಗಾಗಿ ಲಾಕುಲ, ನಾಕುಲ ಮತ್ತು ಲಾಗುಡ; ಕಾಪಾಲಿಕರಿಗಾಗಿ ಸೋಮ ಮತ್ತು ಸೌಮ್ಯ ಹಾಗೂ ಕಾಪಾಲ, ಕಾಳಾಮುಖರಿಬ್ಬರಿಗಾಗಿ ಒಟ್ಟಾಗಿ ಮಹಾವ್ರತಧರ, ಎನ್ನುವವು. ಮಲ್ಕಾಪುರಮ್ ಶಾಸನದ 'ಶಿವ ಶಾಸನ' ಎಂಬ ಪದವು ಕಾಪಾಲಿಕರಿಗೆ ಅನ್ವಯಿಸುತ್ತದೆಂದೇನೂ ಇಲ್ಲ. ಏಕೆಂದರೆ ಈ ಗುರುತಿಸುವಿಕೆಯು ಸರ್ವಸಮ್ಮತ ನಾಲ್ಕು ಬಗೆಯ ವಿಂಗಡಣೆಯನ್ನು[54]

---

48. 'ಶಂಕರ ವಿಜಯ'. ಉದ್ಧೃತ, ಪಾಠಕ, ಪು. 4.
49. 'ಷಡ್ದರ್ಶನ ಸಮುಚ್ಚಯ', ಉದ್ಧೃತ, ಪಾಠಕ, ಪು. 21. ಪಾಠಕರು 2ನೆಯ ಪುಟದ ಮೇಲೆ ಈ ಶ್ಲೋಕವು ಹರಿಭದ್ರನ 'ಷಡ್ದರ್ಶನ ಸಮುಚ್ಚಯ'ಕ್ಕೆ ಸೇರಿದ್ದೆಂದು ತಪ್ಪಾಗಿ ಹೇಳುತ್ತಾರೆ.
50. ಸಂ. ಬಿ. ಭಟ್ಟಾಚಾರ್ಯ, i. 5. 92. 93.
51. ಉದ್ಧೃತ, ಪಾಠಕ, ಪು. 26.
52. ಉದ್ಧೃತ, ಪಾಠಕ, ಪು. 3.
53. 'Journal of the Andhra Historical Research Society', IV, 147, ಉದ್ಧೃತ, ಪಾಠಕ, ಪು. 3.
54. ಈ ಶ್ಲೋಕವು ಹೀಗೆನ್ನುತ್ತದೆ: 'ಉಪೇಯುಷಾಂ ಶೈವತಪೋಧನಾನಾಂ, ಕಾಲಾನನಾನಾಂ, ಶಿವಶಾಸನಾನಾಮ್ II ವಿದ್ಯಾರ್ಥಿನಾಂ ಪಾಶುಪತವ್ರತಾನಾಂ ಅಪಿ ಅನ್ನವಸ್ತ್ರಾದಿ ಸಮರ್ಪಣಾಯII'. ಉದ್ಧೃತ, ಪಾಠಕ, ಪು. 3. ಈ ಶ್ಲೋಕದಲ್ಲಿರುವ ನಾಲ್ಕು ಪದಗಳಲ್ಲಿ ಕೆಲವು ಪದಗಳು ನಾಮಪದಗಳಾಗಿರದೆ ವಿಶೇಷಣ ಪದಗಳಾಗಿರಲು ಸಾಕು.

ಮಾತ್ರ ಹೋಲುತ್ತದೆ. 'ಸ್ಕಂದ ಪುರಾಣ'ದ್ವಾದ 'ಕಂಕಾಲ' (ಎಲುವಿನ ಹಂದರ) ಎನ್ನುವ ಪದವು ಬಹಳಷ್ಟು ಖಚಿತವಾಗಿ ಕಾಪಾಲಿಕ ಸಂಪ್ರದಾಯವನ್ನು ಸೂಚಿಸುತ್ತಿದೆಯಾದರೆ ಪಟ್ಟಿಯಲ್ಲಿ ಐದನೆಯದಾದ ಮಹಾವ್ರತ ಎಂಬ ಪದ ಕೂಡ ಹಲವು ಬಾರಿ ಇದೇ ಸಂಪ್ರದಾಯವನ್ನು ಸೂಚಿಸುತ್ತದೆ. ಮಲ್ಕಾಪುರಮ್ ಶಾಸನದ 'ಕಾಳಾನನ' (ಕಪ್ಪು ಮೋರೆಯವ) ಎಂಬ ಪದವು 'ಕಾಳಾಮುಖ' ಎನ್ನುವ ಪದದ ಸಮಾನಾರ್ಥಿಯಾಗಿದೆಯಷ್ಟೆ. ಕೊಡುಂಬಾಲೂರಿನಲ್ಲಿದ್ದ (ತಿರುಚಿನಾಪಲ್ಲಿ ಜಿಲ್ಲೆ ) ಒಬ್ಬ ಕಾಳಾಮುಖ ಯತಿಗೆ ನೀಡಲಾದ ಹತ್ತನೆಯ ಶತಮಾನದ ಒಂದು ದತ್ತಿಯು ಇದೇ ರೀತಿಯಾಗಿ, ಅವನ ಮಠದಲ್ಲಿ ವಾಸವಾಗಿದ್ದ ಐವತ್ತು ಜನ ಅಸಿತವಕ್ತ್ರ (ಕಪ್ಪು ಮುಖದ) ಯತಿಗಳನ್ನು ಕುರಿತು ನಮೂದಿಸುತ್ತದೆ.[55]. 'ವಾಮನ ಪುರಾಣ' ದ 'ಕಾಲದಮನ' (ಕಾಲವನ್ನು ಮೆಟ್ಟುವ) ಎಂಬ ಪದದ ಅರ್ಥವು ಬೇರೆಯದಾದರೂ ಅದು 'ಕಾಳಾಮುಖ' ಹಾಗೂ 'ಕಾಳಾನನ' ಪದಗಳ ಬೇರೊಂದು ಸ್ಪಷ್ಟವಾದ ಏರುಪೇರಾಗಿದೆ. 'ಕಾಲದಮನ ಸಿದ್ಧಾಂತ'ದ ಸಂಸ್ಥಾಪಕನ ಹೆಸರು ಕಾಲಾಸ್ಯ (ಕಪ್ಪು ಮೋರೆಯವ) ಎಂದಾಗಿತ್ತು.[56]

ಹೆಚ್ಚಿನ ಆಕರಗಳೆಲ್ಲ ಈ ಸಂಪ್ರದಾಯಗಳನ್ನು ಪಟ್ಟಿಮಾಡಿವೆ ಇಲ್ಲವೆ ಅವುಗಳ ಸಿದ್ಧಾಂತಗಳೆಲ್ಲ ಶಿವನಿಂದ ಅಪೌರುಷೇಯವಾಗಿ ವ್ಯಕ್ತಪಡಿಸಲಾದವುಗಳೆಂದು ಹೇಳುತ್ತವೆ. ಕೆಲವು ಕೃತಿಗಳು ಬಹಿರಂಗವಾಗಿಯೇ ಈ ಸಂಪ್ರದಾಯಗಳನ್ನು ಖಂಡಿಸುತ್ತವೆ. 'ಕೂರ್ಮ ಪುರಾಣ'ದಲ್ಲಿ ಶಿವ ಹೀಗೆನ್ನುತ್ತಾನೆ: 'ಈ ವಿಶ್ವದ ಗೊಂದಲಗಳಿಗೆ ಮೂಲಗಳೆನ್ನಿಸುವ ಬೇರೆ ಬಗೆಯ ಶಾಸ್ತ್ರಗಳನ್ನು ಘೋಷಿಸಿದ್ದೇನೆ. ಅವು ವೇದಗಳ ಉಕ್ತಿಗಳಿಗೆ ಎದುರಾದವುಗಳು. ವಾಮ, ಪಾಶುಪತ, ಸೋಮ, ಲಾಂಗಲ ಹಾಗೂ ಭೈರವ (ಶಾಸ್ತ್ರ) ಗಳು ವೇದಗಳಿಗೆ ಹೊರಗಿನವಿದ್ದು ಅವುಗಳಿಗೆ ಸೇವೆಯನ್ನು ಸಲ್ಲಿಸತಕ್ಕದ್ದಲ್ಲ.'[57] ಯಾಮುನಾಚಾರ್ಯರೂ ಕೂಡ ಅಷ್ಟೇ ಟೀಕಿಸುವವರಾಗಿದ್ದಾರೆ: 'ಶೈವ, ಪಾಶುಪತ, ಸೌಮ್ಯ ಹಾಗೂ ಲಾಗುಡರು ತಂತ್ರಗಳ ನಾಲ್ಕು ವರ್ಣವಿಭಜನೆಗಳಾಗಿವೆ. ಯಾರೂ (ವೇದಗಳ ಕಾರ್ಯಾಚರಣೆಗಳೊಂದಿಗೆ ಇವುಗಳ) ಕಲಬೆರಕೆಯನ್ನು ಮಾಡಕೂಡದು.[58] ಆದರೂ 'ಸ್ಕಂದ ಪುರಾಣ' ವು ಒಂದು ಹಂತದಲ್ಲಿ, ಇಪ್ಪತ್ತೆಂಟು ಆಗಮಗಳ ಪೈಕಿ ಐದು ಆಗಮಗಳು ಮುಕ್ತಿ ಮಾರ್ಗದತ್ತ ಕೊಂಡೊಯ್ಯುವವೆಂದು ಸಾರುತ್ತದೆ. ಇವೆಂದರೆ : ಕಾಳಾಮುಖ, ಕಂಕಾಲ, ಶೈವ, ಪಾಶುಪತ ಹಾಗೂ ಮಹಾವ್ರತ ಇವುಗಳು.[59]

---

55. ಕೆ. ಎ. ಎಸ್. ಶಾಸ್ತ್ರಿ, 'The Kadumbatur Inscriptions of Vikrama Kēsari,' JORM, VII (1933), 9.
56. 'ವಾಮನ ಪುರಾಣ' vi. 90.
57. 'ಉಪರಿಭಾಗ'. 37. 146-47, ಉದ್ಧೃತ, ಹಂಡಿಕಿ, ಪು. 463 (ನನ್ನ ಅನುವಾದ).
58. ಅದೇ ಉದ್ಧೃತ.
59. 'ಅರುಣಾಚಲ-ಮಾ'. 10.55, ಉದ್ಧೃತ, ಕರಮರಕರ, ಪು. 220.

'ವರುಣ ಪುರಾಣ' vi.86-92ರ ನಿರೂಪಣೆಗಳು ಎಲ್ಲಕ್ಕೂ ಹೆಚ್ಚು ಕುತೂಹಲಕರವಾದವುಗಳು. ಅದರ ಹೇಳಿಕೆಯೆಂದರೆ ಬ್ರಹ್ಮನು ಹರ (ಶಿವ) ನನ್ನು ಪೂಜಿಸಲೆಂದು ನಾಲ್ಕು ಸಂಪ್ರದಾಯಗಳನ್ನು ನಿರ್ಮಿಸಿ ಪ್ರತಿಯೊಂದಕ್ಕೆ ಒಂದೊಂದು ಶಾಸ್ತ್ರವನ್ನು ನೀಡಿದನೆಂಬುದು. ಈ ಸಂಪ್ರದಾಯಗಳೆಂದರೆ : ' ಮೊದಲನೆಯದು ಶೈವ, ತರುವಾಯ ಪಾಶುಪತ -----ತರುವಾಯ ಮೂರನೆಯದಾದ ಕಾಲದಮನ ಹಾಗೂ ನಾಲ್ಕನೆಯದು ಕಾಪಾಲಿಕ.' ತರುವಾಯ, ಈ ಗ್ರಂಥಪಾಠವು ಪ್ರತಿಯೊಂದರ ಮೂಲವನ್ನು ಕುರಿತು ಇತಿಹಾಸದ ಆಭಾಸವನ್ನುಂಟು ಮಾಡುವ ವಿವರಗಳನ್ನು ಈ ರೀತಿ ನೀಡುತ್ತದೆ:

> ವಸಿಷ್ಠನ ಅಕ್ಕರೆಯ ಮಗನಾದ ಶಿವನು ತಾನೇ ಶಕ್ತಿಯಾಗಿದ್ದನು. ತರುವಾಯದಲ್ಲಿ ಗೋಪಾಯನನು ಅವನ ಶಿಷ್ಯನಾದನು.....
>
> ಭಾರದ್ವಾಜ ಋಷಿಯು ಮಹಾಪಾಶುಪತನಾಗಿದ್ದನು. ಅರಸನಾದ ಸೋಮಕೇಶ್ವರನು ಅವನ ಶಿಷ್ಯನಾಗಿದ್ದನು....
>
> ಕಾಲಾಸ್ಯದೇವನು ಆಪಸ್ತಂಭ ಋಷಿಯಾಗಿದ್ದನು. ಅವನ ಶಿಷ್ಯನ ಹೆಸರು ಕ್ರಾಥೇಶ್ವರ ಎಂದಾಗಿತ್ತು-----
>
> ಧನದನು ಮಹಾವ್ರತಿಯಾಗಿದ್ದನು. ಬಲಶಾಲಿ, ಒಬ್ಬ ಮಹಾನ್ ಋಷಿ ಹಾಗೂ ಹುಟ್ಟಿನಿಂದ ಶೂದ್ರನಾದ ಅರ್ಣೋದರನು ಅವನ ಶಿಷ್ಯನಾಗಿದ್ದನು.

ಇಲ್ಲಿಯ ಗುರುಗಳು ಹಾಗೂ ಸಿದ್ಧಾಂತಗಳ ನಡುವಿನ ಸಂಬಂಧ ಮೇಲ್ನೋಟಕ್ಕೆ ಹೀಗೆ ಕಾಣುವಂತಿದೆ: ಶಕ್ತಿ ಮತ್ತು ಶೈವ, ಭಾರದ್ವಾಜ ಮತ್ತು ಪಾಶುಪತ, ಆಪಸ್ತಂಭ ಮತ್ತು ಕಾಲದಮನ (ಕಾಳಾಮುಖ), ಧನದ ಮತ್ತು ಕಾಪಾಲಿಕ. ಧಾರ್ಮಿಕ ಸಂಸ್ಥಾಪಕರ ಹಿಂದಿರುವ ಈ ಕಾರಣಗಳು ಅಸ್ಪಷ್ಟವಾಗಿವೆ. ಶಕ್ತಿ, ಭಾರದ್ವಾಜ ಮತ್ತು ಆಪಸ್ತಂಭರೆಲ್ಲ ಹೆಸರಾದ ಋಷಿಗಳು. ಧನದ ದುಡ್ಡಿನ ದೇವರು. ಆಪಸ್ತಂಭನ ಅಪವಾದವೊಂದನ್ನು ಬಿಟ್ಟು ಇನ್ನಾರೂ, ಇನ್ನೆಲ್ಲೂ ಈ ಸಂಪ್ರದಾಯಗಳೊಡನೆ ಜೋಡಿಸಲ್ಪಟ್ಟಿಲ್ಲ. ಮದ್ರಾಸಿನ ಉತ್ತರ ಅರ್ಕಾಟ ಜಿಲ್ಲೆಯ ವೇಡಲ್ ಎಂಬಲ್ಲಿಯ ಅಪೂರ್ಣಶಾಸನವೊಂದು ಹಾರಿತ ಗೋತ್ರದ ಕಾಳಾಮುಖಿ ದಶಪುರಿಯನ್ ಹಾಗೂ ಆಪಸ್ತಂಭ 'ಸೂತ್ರ'ಗಳನ್ನು ನಮೂದಿಸುತ್ತದೆ.[60] ಕಾಪಾಲಿಕ 'ಶಾಸ್ತ್ರ' ವೆಂಬುದು ಧನದ ಹಾಗೂ ಅವನ ಬಲಶಾಲಿಯೂ, ಶೂದ್ರ ಶಿಷ್ಯನೂ ಆದ ಅರ್ಣೋದಯರದೆಂದು ಹೇಳುವುದು. ಈ ಸಿದ್ಧಾಂತದ ಐಹಿಕತೆ ಹಾಗೂ ಹೀನ ಮಟ್ಟದ

---

60. ನೋಡಿ ವಿ. ರಂಗಾಚಾರ್ಯ, 'Inscriptions of the Madras Presidency', II, 1162.

ಇದರ ಅಂತಸ್ತನ್ನು ಒತ್ತಿ ಹೇಳುತ್ತದೆ. ನಾಲ್ವರು ಶಿಷ್ಯಂದಿರಾದ ಅರ್ಣೋದರ, ಗೋಪಾಯನ, ಸೋಮಕೇಶ್ವರ ಹಾಗೂ ಕ್ರಾಥೇಶ್ವರರನ್ನು ಗುರುತಿಸಲಾಗದು. ಶಿವ, ಮಹಾಪಾಶುಪತ, ಕಾಲಾಸ್ಯ ಹಾಗೂ ಮಹಾವ್ರತಿನ್ ಎಂಬವುಗಳೆಲ್ಲ ಶಿವನ ಹೆಸರುಗಳೆಂಬುದು ಸ್ಪಷ್ಟ.

'ವಾಮನ ಪುರಾಣ' lxvii.1-40 ವು 'ಗಣಗಳ' ಹಾಗೂ 'ಪ್ರಮಥ'ರ ಬೆಂಬಲವಿರುವ ಶಿವ ಮತ್ತು ಅಸುರರ ನಡುವೆ ನಡೆದ ಒಂದು ಕಾಳಗವನ್ನು ಕುರಿತು ಹೇಳುತ್ತದೆ. ಶೈವರು, ಪಾಶುಪತರು, ಕಾಳಾಮುಖರು, ಮಹಾವ್ರತಿಗಳು, ನಿರಾಶ್ರಯರು ಹಾಗೂ ಮಹಾಪಾಶುಪತರೆಲ್ಲ ಶಿವನ ಮೈತ್ರಿಕೂಟವನ್ನು ಸೇರಿದವರು. ಶಿವನು ಈ ಕೊನೆಯ ಗುಂಪನ್ನು ಹೆಚ್ಚು ವಿಶೇಷವಾಗಿ ಬರಮಾಡಿಕೊಳ್ಳಲು ಕಾರಣವೇನೆಂದರೆ ಅವರು, ಶಿವ ಹಾಗೂ ವಿಷ್ಣುವಿನ ನಡುವೆ ಯಾವುದೇ ಭೇದವನ್ನು ಕಲ್ಪಿಸುತ್ತಿರಲಿಲ್ಲ. ಇಲ್ಲಿ, ಪಾಶುಪತ ಹಾಗೂ ಮಹಾಪಾಶುಪತಗಳು ಎರಡು ಬೇರೆ ಗುಂಪುಗಳಾಗಿ ಕಾಣುತ್ತವೆ.

❖ ❖ ❖

# ಅಧ್ಯಾಯ - ೨

# ಕಾಪಾಲಿಕರ ಆಕರಗಳು

## ಮೊದಲ ಆಕರಗಳು

'ಕಪಾಲಿನ್' (ತಲೆ ಬುರುಡೆ ಹಿಡಿದವನು) ಪದವು ಎಲ್ಲಕ್ಕೂ ಮೊದಲು ಬಹುಮಟ್ಟಿಗೆ 'ಯಾಜ್ಞವಲ್ಕ್ಯಸ್ಮೃತಿ' iii. 243 (ಕ್ರಿ.ಶ.100-300) ರಲ್ಲಿ ಕಂಡು ಬರುತ್ತದೆ. ಈ ಸೂತ್ರವು ಬ್ರಾಹ್ಮಣನನ್ನು ಕೊಂದ ಬ್ರಹ್ಮಹನ್‌ನಿಗಾಗಿ ಒಂದು ಪ್ರಾಯಶ್ಚಿತ್ತವನ್ನು ವಿಧಿಸುತ್ತದೆ. ಅದು ಹೀಗಿದೆ: 'ಒಂದು ತಲೆಬುರುಡೆ (ಶಿರಃ ಕಪಾಲಿ) ಹಾಗೂ (ಕೈಯಲ್ಲಿ) ಒಂದು ದೊಣ್ಣೆ ಹಿಡಿದುಕೊಂಡು ಭಿಕ್ಷೆಯನ್ನು ಬೇಡುತ್ತ ಬದುಕುತ್ತ, (ಭಿಕ್ಷೆ ಕೇಳುವಾಗ) ತನ್ನ ದುಷ್ಕೃತ್ಯಗಳನ್ನು ಸಾರುತ್ತ ಹಾಗೂ ತೀರ ತುಸು ಅನ್ನವನ್ನು ಸೇವಿಸುತ್ತ ಹೋದರೆ ಒಬ್ಬ ಬ್ರಾಹ್ಮಣನ ಕೊಲೆಪಾತಕಿಯು ಹನ್ನೆರಡು ವರ್ಷಗಳ ತರುವಾಯ ಶುದ್ಧನಾಗಲು ಸಾಧ್ಯ.'[1] ಇನ್ನಿತರ ನ್ಯಾಯಗ್ರಂಥಗಳು ಕೂಡ ಹೆಚ್ಚು ಕಡಿಮೆ ಇಂಥದೇ ಪ್ರಾಯಶ್ಚಿತ್ತವನ್ನು ವಿಧಿಸುತ್ತವಾದರೂ ಅವಾವವೂ 'ಕಪಾಲಿನ್' ಪದವನ್ನು ಬಳಸಿಲ್ಲ. ಈ ಪ್ರಾಯಶ್ಚಿತ್ತ ಹಾಗೂ ಕಾಪಾಲಿಕ ಸಂಪ್ರದಾಯದ ನಡುವೆ ಮುಖ್ಯವಾದ ಒಂದು ಸಂಬಂಧ ಇದ್ದೇ ಇದೆಯಾದರೂ [2] ಮೇಲಿನ ಉದ್ಧರಣೆಯಲ್ಲಿ ಮಾತ್ರ 'ಕಪಾಲಿನ್' ಪದಕ್ಕೆ 'ತಲೆ ಬುರುಡೆಯನ್ನು ಹಿಡಿದುಕೊಂಡವನು' ಎಂಬ ಅರ್ಥವಷ್ಟೇ ಇದೆ. ಅದು ಕಪಾಲಿಗಳ ಒಂದು ಸಂಪ್ರದಾಯ ಇಲ್ಲವೆ ಪಂಗಡ ಇರುವುದನ್ನು ಸೂಚಿಸುವುದಿಲ್ಲ.

---

1. ಎಂ. ಎಸ್. ಆರ್. ಆಚಾರ್ಯ.
2. ಕೆಳಕ್ಕೆ ನೋಡಿ, pp. 73-82

'ಮೈತ್ರಾಯಣೀಯ ಉಪನಿಷತ್ತು' ಡಂಬಾಚಾರದಿಂದ ಕೆಂಪು ಬಟ್ಟೆಗಳು (ಕಷಾಯ) ಹಾಗೂ ಕಿವಿ ಯುಂಗುರಗಳನ್ನು (ಕುಂಡಲ) ತೊಡುವ ಕೆಲ ಕಾಪಾಲಿಕರ ಸಂಪರ್ಕ ಹೊಂದಲು ಅಯೋಗ್ಯರಾದ ವ್ಯಕ್ತಿಗಳೊಂದಿಗೆ ಸೇರ್ಪಡಿಸುತ್ತದೆ.[3] ಕಾಪಾಲಿಕ ಸಂಪ್ರದಾಯದ ಒಬ್ಬನನ್ನು ಸೂಚಿಸುವಂತಿದ್ದರೂ ಈ ಪರಿಚ್ಛೇದವು ಪ್ರಕ್ಷೇಪ ಇಲ್ಲವೆ ಪರಿಶಿಷ್ಟವಾಗಿದ್ದು ಸಾಕಷ್ಟು ಮುಂದಿನ ಕಾಲದ್ದಾಗಿರುವ ಸಾಧ್ಯತೆಯಿದೆ.[4]

ಪ್ರಾಕೃತದ 'ಗಾಥಾ ಸಪ್ತಶತಿ' ಯು ಕ್ರಿ.ಶ. ಒಂದನೇ ಶತಮಾನದ ಸಾತವಾಹನ ಅರಸನಾದ ಹಾಲ ಎನ್ನುವವನದೆಂದು ಹೇಳುವ, ಒಂದು ಪರಂಪರೆಯಿದೆ. ಆದರೆ ಅದನ್ನು ಸಂಕಲನಗೊಳಿಸಿದುದು ಮೂರರಿಂದ ಐದನೆಯ ಶತಮಾನಗಳ ನಡುವಿನ ಕಾಲದಲ್ಲಿ. ಅದರಲ್ಲಿ ಒಬ್ಬಳು 'ಹೊಸ' ಕಾಪಾಲಿಕಳನ್ನು ಬಣ್ಣಿಸುವ ಒಂದು ಪದ್ಯವಿದೆ. ಈಕೆ ಎಡೆಬಿಡದೆ ತನ್ನ ನಲ್ಲನ ಚಿತಾಭಸ್ಮವನ್ನು ಬಳಿದುಕೊಳ್ಳುತ್ತಿರುತ್ತಾಳೆ.[5] 'ಹೊಸ' (ನವ) ಪದದ ಅರ್ಥವು 'ಯುವ' ಎಂದಿಷ್ಟೇ ಆಗಿರದಿದ್ದರೆ ಅವಳು ಅವನ ಸಾವಿನ ಸಮಯದಲ್ಲಿ ಕಾಪಾಲಿಕ ವ್ರತವನ್ನು ಸ್ವೀಕರಿಸಿದಳೆಂಬುದು ಸೂಚಿತವಾಗುತ್ತದೆ. ಇದು ಕಾಪಾಲಿಕ ಸಂಪ್ರದಾಯವನ್ನು ಕುರಿತಾದ ತೀರ ಮೊದಲ ಒಳ್ಳೆಯ ಸಂದರ್ಭವಾಗಿದೆ.

ಕ್ರಿಸ್ತಶಕ ಆರಂಭ ಕಾಲದ ಭೌದ್ಧಗ್ರಂಥವಾದ 'ಲಲಿತ ವಿಸ್ತರ'ದಲ್ಲಿ, ದೇಹಕ್ಕೆ ಭಸ್ಮವನ್ನು ಬಳಿದುಕೊಂಡು, ಕೆಂಪು ಬಟ್ಟೆಗಳನ್ನು (ಕಷಾಯ) ತೊಟ್ಟುಕೊಂಡು, ತಲೆಗಳನ್ನು ಬೋಳಿಸಿಕೊಂಡು, ತ್ರಿದಂಡ, ಪಾತ್ರೆ, ತಲೆ ಬುರುಡೆ ಹಾಗೂ ಖಟ್ವಾಂಗವನ್ನು ಹಿಡುದುಕೊಂಡು ಶುದ್ಧರಾಗ ಬಯಸುವ ಕೆಲವು 'ಮುಠ್ಠಾಳ'ರನ್ನು ಕುರಿತು ನಮೂದಿಸಲಾಗಿದೆ.[6] ಈ ಜನರು ಕೂಡ ಕಾಪಾಲಿಕರಾಗಿರುವ ಸಾಧ್ಯತೆಯಿದೆ.

ಆರರಿಂದ ಏಳನೆಯ ತಶತಮಾನದ ಹೊತ್ತಿಗೆ ಕಾಪಾಲಿಕ ಯತಿಗಳನ್ನು ಕುರಿತಾದ ಸಂದರ್ಭಗಳು ಬಹುಮಟ್ಟಿಗೆ ಎಲ್ಲರಿಗೂ ತಿಳಿದಿದ್ದವು. ಜ್ಯೋತಿರ್ವಿಜ್ಞಾನಿ ಹಾಗೂ ಗಣಿತಿಯಾದ ವರಾಹಮಿಹಿರನು (ಇಸವಿ 500-575) ತನ್ನ 'ಬ್ರಹತ್ ಸಂಹಿತೆ'ಯಲ್ಲಿ ix.25 ಕಾಪಾಲಿಕರ ವ್ರತವನ್ನು ಕುರಿತು ಹೀಗೆ ನಮೂದಿಸುತ್ತಾನೆ: ' ರೋಹಿಣಿಯ (ನಕ್ಷತ್ರ ಪುಂಜದ) ತೇರು (ಶುಕ್ರ ಗ್ರಹದಿಂದ) ತಡೆಗಟ್ಟಲ್ಪಟ್ಟಾಗ, ಈ ಭೂಮಿಯು ತಾನೊಂದು ಪಾಪವನ್ನು

3. ಸಂ. ಮತ್ತು ಅನು. ಜೆ. ಎ. ಬಿ. van Buitenen, vii. 8.

4. ಅದೇ pp. 88-89.

5. ಸಂಸ್ಕೃತದ 'ಛಾಯೆ' ಹೀಗಿದೆ: 'ಜಾರ ಶ್ಮಶಾನ ಸಮುದ್ಭವ ಭೂತಿ ಸುಖ ಸ್ಪರ್ಶಸ್ವೇದ ಶಿಲಾಂಗ್ಯಾ:l. ನ ಸಮಾಪ್ಯತೇನವ ಕಾಪಾಲಿಕ್ಯಾ ಉದ್ಧೂಲನಾರಂಭ : ll ಕಾವ್ಯಾಮಾಲಾ ಆವೃತ್ತಿ, ಪ. 408.

6. ಸಂ. ಪಿ. ಎಲ್. ವೈದ್ಯ, ಅಧ್ಯಾಯ xvii (ಪು. 183).

ಎನಗಿದಂತೆ[7] ಕೂದಲು ಹಾಗೂ ಎಲುವುಗಳಿಂದ ಸಿಂಗರಿಸಿಕೊಂಡು ಕಾಪಾಲವ್ರತವನ್ನು ಆಚರಿಸುತ್ತಿರುವಂತೆ ಗೋಚರಿಸುತ್ತದೆ.' ಈ ಸಂಗತಿಯು ಒಬ್ಬ ಬ್ರಹ್ಮಹನ್‌ನ ಪ್ರಾಯಶ್ಚಿತ್ತಕ್ಕೆ ಮಾತ್ರ ಸಂಬಂಧ ಪಟ್ಟುದಾಗಿರಬಹುದಾದರೂ ಇದೇ ಕೃತಿಯ lxxxvii.22 ನೆಯ ಪದ್ಯವು ಕಾಪಾಲಿಕ ಯತಿಗಳನ್ನು ಕುರಿತು ಸ್ಪಷ್ಟವಾಗಿ ಹೀಗೆ ನಮೂದಿಸುತ್ತದೆ: ' (Spoke of a 'Cycle of Quarters' ಎನ್ನಿಸಿದ) ನೈಋತ್ಯ ದಿಕ್ಕಿನಲ್ಲಿ (ಒಂದು ಶಾಂತವಾದ ಶಕುನವು) ಇರುವಾಗ, ಒಂದು ಆಕಳು, ಒಬ್ಬ ಆಟಗಾರ (ಕ್ರೀಡಕ) ಅಥವಾ ಒಬ್ಬ ಕಾಪಾಲಿಕನು ಬರುತ್ತಿರುವುದು ಕಂಡಿತೆಂದರೆ ಅದನ್ನು ಕಂಡವನಿಗೆ ಒಂದು ಎತ್ತು ಲಭಿಸುವುದು. (ಇದಲ್ಲದೆ) ಕಪ್ಪು ಕಡಲೆ, ಕುದುರೆ ಕಡಲೆಯ ಕಾಳುಗಳು, ಮುಂತಾದವುಗಳಲ್ಲದೆ ಆಹಾರ (ಕೂಡ ಸಿಗುತ್ತದೆ.)'

ವರಾಹಮಿಹಿರನು ತನ್ನ 'ಬೃಹಜ್ಜಾತಕ'ದಲ್ಲಿ xv.1. ಒಂದೊಂದು ಆಕಾಶಸ್ಥ ಕಾಯದ ಪ್ರಭಾವದಡಿ ಜನಿಸಿದ ಒಬ್ಬೊಬ್ಬ[8] ಸಂನ್ಯಾಸಿಯಂತೆ ಅವರ ಒಟ್ಟು ಏಳು ವರ್ಗಗಳನ್ನು ಕ್ರಮವಾಗಿ ನಮೂದಿಸುತ್ತಾನೆ. ಅವನು ಅವುಗಳನ್ನು ಹೀಗೆ ಪಟ್ಟಿ ಮಾಡುತ್ತಾನೆ: ಶಾಕ್ಯರು ಮಂಗಳದ, ಆಜೀವಿಕರು ಬುಧಗ್ರಹದ, ಭಿಕ್ಷುಗಳು ಗುರುಗ್ರಹದ, ವೃದ್ಧರು ಚಂದ್ರಗ್ರಹದ, ಚರಕರು ಶುಕ್ರಗ್ರಹದ, ನಿರ್ಗ್ರಂಥರು ಶನಿಗ್ರಹದ ಹಾಗೂ ವನ್ಯಾಶನರು ಸೂರ್ಯನ ಪ್ರಭಾವದಡಿ ಜನಿಸಿದವರು. ಹತ್ತನೆಯ ಶತಮಾನದ ಭಾಷ್ಯಕಾರನಾದ ಉತ್ಪಲನು (ಅಥವಾ ಭಟ್ಟೋತ್ಪಲನು)ಹೇಳುವುದೇನೆಂದರೆ ವೃದ್ಧರು ವೃದ್ಧಶ್ರಾವಕರು ಇಲ್ಲವೆ ಕಾಪಾಲಿಕರು ಎಂಬುದಾಗಿಯೂ ಗುರುತಿಸಲ್ಪಡುತ್ತಾರೆ.[9] ಐದನೆಯ ಶತಮಾನದ ಜೈನ ತತ್ವವೇತ್ತನಾದ ಕಾಲಕಾಚಾರ್ಯನಿಂದ ರೂಪಿಸಲಾದ ಇಂಥದೇ ಒಂದು ವರ್ಗೀಕರಣವನ್ನು ಕುರಿತು ಉತ್ಪಲನು ಉಲ್ಲೇಖಿಸುತ್ತಾನೆ. ಈ ವರ್ಗಿಕರಣವು ಸೂರ್ಯನನ್ನು ತಪಸ್ವಿಗಳ ಜತೆಗೆ , ಚಂದ್ರನನ್ನು ಕಾಪಾಲಿಕರೊಂದಿಗೆ, ಮಂಗಳನನ್ನು ರಕ್ತ ಪಾತರೊಂದಿಗೆ, ಬುಧನನ್ನು ಏಕದಂಡಿಗಳೊಂದಿಗೆ, ಗುರುಗ್ರಹವನ್ನು ಯತಿಗಳೊಂದಿಗೆ, ಶುಕ್ರನನ್ನು ಚರಕರೊಂದಿಗೆ ಹಾಗೂ ಶನಿಗ್ರಹವನ್ನು ಕ್ಷಪಣಕರೊಂದಿಗೆ ಜೋಡಿಸುತ್ತದೆ[10]. ಉತ್ಪಲನು ವರಾಹಮಿಹಿರನ ಗ್ರಂಥ ಪಾಠವನ್ನು ಕುರಿತು

---

7. ಸಂ. ಎಚ್. ಕೆರ್ನ. 'ಪಂಚ ತಂತ್ರ' i.234 (ಸಂ. ಎನ್. ಆರ್. ಆಚಾರ್ಯ)ದಲ್ಲಿ ಈ ಪದ್ಯದ ತುಸು ಬೇರೆ ಪಾಠವು ದೊರಕುತ್ತದೆ. ಇದು 'ಕಾಪಾಲ ವ್ರತ'ದ ಬದಲು 'ಕಾಪಾಲಿಕ ವ್ರತ' ಎಂದು ನಮೂದಿಸುತ್ತದೆ. ಹಾಗೆಯೇ 'ಕೂದಲು ಹಾಗೂ ಎಲುವಿನ ತುಣುಕಗಳ' ಬದಲು 'ಭಸ್ಮ ಹಾಗೂ ಎಲುವಿನ ತುಣುಕಗಳು' ಎಂದಾಗಿದೆ.

8. ಸಂ. ಮತ್ತು ಅನು. ವಿ. ಎಸ್. ಶಾಸ್ತ್ರಿ. ನೋಡಿ ಎ. ಎಲ್. ಭಾಶಮ್, ' History and Doctrines of the Ājīvikas'. pp. 168-71.

9. 'ಕ್ಷಪಾಕರಃ ಚಂದ್ರೋ ಯದಾ ವೃದ್ಧಃ ವೃದ್ಧ ಶ್ರಾವಕಃ ಕಾಪಾಲಿಕಃ ವೃತ್ತಭಂಗಭಯಾತ್ 'ಶ್ರಾವಕಶಬ್ದೋತ್ರ ಲುಪ್ತೋ ದ್ರಷ್ಟವ್ಯಃ'. ಭಾಷ್ಯ, 'ಬೃಹಜ್ಜಾತಕ' xv. 1 (1963 ಮುಂಬಯಿ ಆವೃತ್ತಿ).

10. ಅದೇ.

ಇನ್ನೊಮ್ಮೆ ವಿವರವನ್ನು ನೀಡುತ್ತ ಹೀಗೆನ್ನುತ್ತಾನೆ : 'ಇಲ್ಲಿ, ವೃದ್ಧಶ್ರಾವಕ ಈ ಪದವು ಮಹೇಶ್ವರನಲ್ಲಿ ಆಶ್ರಯವನ್ನು ಪಡೆಯಲೆಂದು ಯತ್ನಿಸುವವರನ್ನು ಹಾಗೂ ಆಜೀವಕ ಪದವು ನಾರಾಯಣನಲ್ಲಿ ಆಶ್ರಯವನ್ನು ಪಡೆಯಲು ಯತ್ನಿಸುವ ಅಲೆಮಾರಿ ಬೈರಾಗಿಗಳನ್ನು ಸೂಚಿಸುತ್ತದೆ.[11] ಆಜೀವಿಕರ ಮೇಲೆ ನಾರಾಯಣನ ಪೂಜೆಯನ್ನು ಆರೋಪಿಸುವುದು ತಪ್ಪು. ಇದು ಕಾಲಕಾಚಾರ್ಯರನ್ನು ಏಕದಂಡಿಗಳೊಂದಿಗೆ ಸಮೀಕರಿಸುವ ಯತ್ನವನ್ನು ಆಧರಿಸಿದ ಸಂಗತಿಯಾಗಿ ಕಾಣುತ್ತದೆ.[12] ವೃದ್ಧರು ಅಥವಾ ವೃದ್ಧ ಶ್ರಾವಕರನ್ನು ಕಾಪಾಲಿಕರೆಂದು ಗುರುತಿಸುವುದು ಸರಿಯಾಗಿದ್ದರೆ, ಅವರು ಮಹೇಶ್ವರನನ್ನು ಪೂಜಿಸುತ್ತಾರೆಂದು ಸಾಧಿಸುವುದು ಕೂಡ ಸರಿಯಾಗಿಯೇ ಇದೆ. ವರಾಹಮಿಹಿರನು ತನ್ನ 'ಬೃಹದ್ ಸಂಹಿತಾ'ದಲ್ಲಿ 1i.20 ಇನ್ನೊಮ್ಮೆ ವೃದ್ಧಾಶ್ರಾವಕರನ್ನು ಕುರಿತು ಹೀಗೆ ಉಲ್ಲೇಖಿಸುತ್ತಾನೆ:' (ವೃದ್ಧಶ್ರಾವಕನ) ಕಣ್ಣೆದುರಿನಲ್ಲಿರುವಾಗ ಜನರು ಕಣಿ ಹೇಳುವವನನ್ನು ತಮ್ಮ ಗೆಳೆಯರ ಇಲ್ಲವೆ ಜೂಜಾಟದ ಬಗೆಗೆ ಕೇಳುತ್ತಾರೆ; ಒಬ್ಬ ಒಳ್ಳೆಯ ಮನೆತನದ (ಸುಪರಿವಾರ) ಸಂನ್ಯಾಸಿಯ ಕಣ್ಣೆದುರಿನಲ್ಲಿರುವಾಗ ಅವರ ಪ್ರಶ್ನೆ ಒಬ್ಬ ಸೂಳೆ, ಒಬ್ಬ ಅರಸು ಇಲ್ಲವೆ ಹೆರಿಗೆಯಲ್ಲಿರುವ ಹೆಂಡತಿಯನ್ನುಕುರಿತಾಗಿರುತ್ತದೆ.'[13] ಈ ಪದ್ಯದ ಅನುವಾದಕರಾದ ಎಚ್. ಕೆರ್ನ್ ಅವರು ಬಹುಮಟ್ಟಿಗೆ ಒಂದು ಭಾಷ್ಯವನ್ನಾಧರಿಸಿ ವೃದ್ಧಶ್ರಾವಕರನ್ನು 'ತಲೆ ಬುರುಡೆಯನ್ನು ಹಿಡಿದುಕೊಂಡಿರುವ ಶೈವ ಸಂನ್ಯಾಸಿ' ಎಂಬ ಅನುವಾದವನ್ನು ನೀಡುತ್ತಾರೆ. ನಾವು ಕಾಪಾಲಿಕರನ್ನು ಈ ಹೆಸರಿನಿಂದ ಕರೆಯುವ ಬೇರೊಂದು ಉದಾಹರಣೆಯನ್ನು ಕಂಡಿಲ್ಲ.

ಹೆಸರಾಂತ ಚೀನೀ ಪ್ರವಾಸಿಗ, ಹುಯೇನ್ ತ್ಸಾಂಗ್‌ನು ದಕ್ಷಿಣ ಏಶಿಯಾದ ತನ್ನ ಪ್ರಯಾಣದ ಕಾಲಕ್ಕೆ (ಕ್ರಿ.ಶ.630-644) ತಾನು ಬೆಟ್ಟಿಕೊಟ್ಟ ಊರುಗಳಲ್ಲಿ ವಾಸಿಸಿದ ಹಲವು ಬಗೆಯ ಬೌದ್ಧ ಹಾಗೂ ಇತರ ಸಂಪ್ರದಾಯಗಳ ತುಲನಾತ್ಮಕ ಸಾಮರ್ಥ್ಯಗಳನ್ನು ಕುರಿತು ಸಂಕ್ಷಿಪ್ತವಾಗಿ ಕಥನಮಾಡುತ್ತಾನೆ. ಅವನು ಪೂರ್ವ ಅಫಘಾನಿಸ್ತಾನದ[14] ಆಧುನಿಕ ನುರಿಸ್ತಾನದ ಕಾಪಿಶಾ ಎಂಬಲ್ಲಿ ಸುಮಾರು ಒಂದು ನೂರಕ್ಕಿಂತಲೂ ಹೆಚ್ಚು ಬೌದ್ಧ ಮಠಗಳಿರುವುದನ್ನು ಕಂಡನು. ಅವನು ಹೀಗೆನ್ನುತ್ತಾನೆ: ' ದೇವತೆಗಳ ಸುಮಾರು ಹತ್ತು ದೇವಾಲಯಗಳಿವೆ. ಅಲ್ಲದೆ ಸುಮಾರು ಒಂದು ಸಾವಿರದಷ್ಟು ಪಾಷಂಡಿ ಸಂಪ್ರದಾಯಗಳಿವೆ (ಹಲವು ಬಗೆಯ ಮತಗಳು). ಬೆತ್ತಲೆ ಬೈರಾಗಿಗಳಿರುವರು. ಭಸ್ಮವನ್ನು ಬಳಿದುಕೊಳ್ಳುವ ಬೇರೆ ಬಗೆಯ ಜನ ಹಾಗೂ ಎಲುವುಗಳಿಂದ ಮಾಲೆಗಳನ್ನು ಮಾಡಿ ತಲೆಗೆ ಕಿರೀಟದ ಹಾಗೆ ಕಟ್ಟಿಕೊಳ್ಳುವ ಜನ ಕೂಡ

---

11. ಅದೇ ಗ್ರಂಥಪಾಠವು 'ಮಹೇಶ್ವರ'ವನ್ನು ತಪ್ಪಾಗಿ 'ಮಾಹೇಶ್ವರ' ಎಂದು ಸಮೂದಿಸುತ್ತದೆ.
12. ನೋಡಿ ಬಾಶಮ್, pp. 170-74.
13. ಅನು. ಎಚ್. ಕೆರ್ನ್, JRAS, n.s. VI (1873)87 ಈ ಅಧ್ಯಾಯವು ಕೃತಕವಾಗಿರಬಹುದೆಂದು ಕೆರ್ನ್ ನಂಬುತ್ತಾರೆ.
14. ನೋಡಿ ಟಿ. ವಾಟ್ಟರ್ಸ್, 'On Yuan chwang's Travels in India', 1,123-24.

ಇರುವರು.'[15] ಬೀಲ್ ಇವರು ಈ ಜನಗಳನ್ನು ದಿಗಂಬರ ಜೈನ, ಪಾಶುಪತ ಹಾಗೂ ಕಪಾಲಧಾರಿ ಅಂದರೆ ಕಾಪಾಲಿಕರೆಂದು ಗುರುತಿಸುತ್ತಾರೆ[16] . ಬೇರೆಡೆಯಲ್ಲಿ ಹುಯೇನ್ ತ್ಸಾಂಗ್‌ನು ಭಾರತದಲ್ಲಿ ತಾನು ಕಂಡ ಹಲವಾರು ಜನ ಬೌದ್ಧರಲ್ಲದ ಯತಿಗಳ ಒಂದು ಸಾಮಾನ್ಯವಾದ ಬಣ್ಣನೆಯನ್ನು ಹೀಗೆ ನೀಡುತ್ತಾನೆ:

> ಪಾಷಂಡಿಗಳು ತೊಡುವ ಬಟ್ಟೆಗಳು ಹಾಗೂ ಒಡವೆಗಳು ಹಲವು ಬಗೆಯವುಗಳೂ, ಸಂಕೀರ್ಣ ಸ್ವರೂಪದವೂ ಆಗಿವೆ. ಕೆಲವರು ನವಿಲು ಗರಿಗಳನ್ನು ನೆಟ್ಟುಕೊಳ್ಳುತ್ತಾರೆ, ತಲೆ ಬುರುಡೆಯ ಎಲುವಿನಿಂದ ತಯಾರಿಸಿದ ಕೊರಳ ಹಾರಗಳನ್ನು ಕೆಲವರು ಒಡವೆಗಳಂತೆ ಧರಿಸುತ್ತಾರೆ ----- ;
>
> ಕೆಲವರ ಮೈ ಮೇಲೆ ಬಟ್ಟೆಗಳು ಇರುವುದಿಲ್ಲ, ಆದರೂ ಅವರು ಬೆತ್ತಲಾಗಿಯೇ ಹೊರಟು ಬಿಡುತ್ತಾರೆ----- ;
>
> ಕೆಲವರು ಮರದ ಎಲೆಗಳನ್ನಾಗಲಿ, ಕಪ್ಪು ಬಟ್ಟೆಗಳನ್ನಾಗಲಿ ತೊಡುತ್ತಾರೆ; ಕೆಲವರು ತಮ್ಮ ತಲೆಗೂದಲುಗಳನ್ನು ಕಿತ್ತಿ ತೆಗೆಯುತ್ತಾರೆ. ಹಾಗೂ ತಮ್ಮ ಮೀಸೆಗಳನ್ನು ಕತ್ತರಿಸಿ ಚೆಲ್ಲುತ್ತಾರೆ; ಉಳಿದವರಿಗೆ ಕಲ್ಲಿ ಮೀಸೆಗಳಿದ್ದು ಅವರ ತಲೆಗೂದಲು ಜಡೆಗಟ್ಟಿರುತ್ತದೆ. ಉಡುಗೆ ಒಂದೇ ತೆರನಾಗಿರದು. ಅದರ ಬಣ್ಣ ಕೆಂಪವಿರಲಿ ಇಲ್ಲವೆ ಬಿಳಿಯಾಗಿರಲಿ ಅದು ಸ್ಥಿರವಾದುದಲ್ಲ.[17]

ನವಿಲು ಗರಿಗಳನ್ನು ಧರಿಸುವವರು, ಬೆತ್ತಲಾಗಿ ಸುತ್ತಾಡುವವರು ಹಾಗೂ ತಮ್ಮ ತಲೆಗೂದಲನ್ನು ಕಿತ್ತೆಸೆಯುವ ಈ ಸಂನ್ಯಾಸಿಗಳು ಬಹಳಷ್ಟು ಮಟ್ಟಿಗೆ ಜೈನರಾಗಿರಲು ಸಾಕು. ಬೀಲ್ ಅವರು ಸೂಚಿಸುವಂತೆ ತಲೆ ಬುರುಡೆಗಳ ಕೊರಳ ಮಾಲೆಗಳನ್ನು ಧರಿಸುವವರು ಕಾಪಾಲಿಕರಾಗಿರುವ ಸಾಧ್ಯತೆ ಹೆಚ್ಚು. ಬೇರೆಯವರನ್ನಾದರೆ ಇಷ್ಟೊಂದು ಸಹಜವಾಗಿ ಗುರುತಿಸಲಾಗದು.

ಹುಯೇನ್ ತ್ಸಾಂಗ್‌ನು ಭಾರತಕ್ಕೆ ಭೇಟಿಯಿತ್ತುದು ಸ್ಥಾಣೇಶ್ವರದ ಹರ್ಷವರ್ಧನನ ಆಳ್ವಿಕೆಯ ಕಾಲಕ್ಕೆ ( ಕ್ರಿ. ಶ. 606-647). ಈ ಅರಸನ ಸಮಕಾಲೀನನೂ, ಚರಿತ್ರಕಾರನೂ ಆದ ಬಾಣಭಟ್ಟನು ತನ್ನ 'ಹರ್ಷ ಚರಿತ' ಹಾಗೂ 'ಕಾದಂಬರೀ'ಗಳಲ್ಲಿ ಅರಸನ ಓಲಗ ಹಾಗೂ ರಾಜ್ಯಗಳನ್ನು ಸ್ಪಷ್ಟವಾಗಿ ಚಿತ್ರಿಸುತ್ತಾನೆ. ಇವೆರಡೂ ಕೃತಿಗಳು ಏಳನೆಯ ಶತಮಾನದ ವರೆಗೆ ಬುಡಕಟ್ಟು ಹಾಗೂ ಅಭಿವೃದ್ಧಿ ಹೊಂದಿದವರ ತಾಂತ್ರಿಕ ಪೂಜಾವಿಧಾನಗಳು ಬಹಳಷ್ಟು

---

15. ಬೀಲ್ (ಅನು), 'Chinese Accounts of India, 1. 117-18.
16. ಅದೇ ಪು. 118.
17. ಅನು. ಅದೇ, II, 134.

ಭಾಗಗಳಲ್ಲಿ ಹಬ್ಬಿಕೊಂಡಿದ್ದವೆಂಬುದನ್ನು ತೋರಿಸುತ್ತವೆ. 'ಕಾದಂಬರಿ'ಯಲ್ಲಿ ವಿಂಧ್ಯಪರ್ವತದಲ್ಲಿ ನೆಲೆಸಿದ ಶಬರರ ಕಾಡು ಬಣದ 'ಒಂದು ಧರ್ಮ ಎಂದರೆ ಚಂಡಿಕಾ ದೇವತೆಗೆ ಮಾನವಮಾಂಸದ ನೈವೇದ್ಯವನ್ನು ನೀಡುವುದು,'[18] ಹಾಗೂ ಅವರ ಮುಂದಾಳುಗಳ ಹೆಗಲುಗಳು 'ಚಂಡಿಕೆಗೆ ನೆತ್ತರಿನ ನೈವೇದ್ಯವನ್ನು ನೀಡಲೋಸುಗ ಬಳಸಲಾಗುವ ಹರಿತವಾದ ಶಸ್ತ್ರಗಳಿಂದ ಹಲವು ಸಲ ಉಂಟಾದ ಗಾಯಗಳ ಕಲೆಗಳಿಂದ ಕೂಡಿದವುಗಳು'[19] ಎಂಬುದು ಪೂಜಾವಿಧಾನದ ಮೂಲಮಾದರಿಯನ್ನು ಪ್ರತಿನಿಧಿಸುತ್ತದೆ. ಹಿಂದೂಕರಿಸಲಾದ (' ಹಿಂದುಐಜ್ಡ್' - Eliade) ಅಥವಾ ಸಂಸ್ಕೃತಗೊಳಿಸಲಾದ ('ಸಂಸ್ಕೃತೈಜ್ಡ್' - ಶ್ರೀನಿವಾಸ) ಮಾದರಿಗಳನ್ನು ಬುಡಕಟ್ಟು ಜನಾಂಗಗಳ ಈ ಬಗೆಯ ಮತಾಚರಣೆಗಳಲ್ಲಿ ಸೇರ್ಪಡೆಮಾಡುವುದರಿಂದ, ಈ ಬುಡಕಟ್ಟು ರಕ್ಷಕ ದೇವರುಗಳನ್ನು ಹಿಂದೂ ದೇವರುಗಳಾದ ಭೈರವ, ಕಾಲಿ, ಮತ್ತು ಚಂಡಿಕಾ ಮೊದಲಾದ ದೇವತೆಗಳೊಂದಿಗೆ ಜೊತೆಗೂಡಿಸುವುದರಿಂದ ತುಸುಮಟ್ಟಿಗೆ ಮೇಲ್ಮಟ್ಟವನ್ನು ಸಾಧಿಸಬಹುದು.

ಬಾಣನು 'ಕಾದಂಬರಿ'ಯಲ್ಲಿ ಉಜ್ಜಯನಿಯ ರಾಣಿಯಾದ ವಿಲಾಸವತಿಯು ಒಂದು ಗಂಡುಮಗುವನ್ನು ಪಡೆಯಲೆಂದು ಕೈಕೊಂಡ ಬಗೆಬಗೆಯ ಧಾರ್ಮಿಕ ಕೃತ್ಯ ಹಾಗೂ ದಾನಧರ್ಮಗಳಂತಹ ಜನೋಪಯೋಗಿ ಕಾರ್ಯಗಳನ್ನು ಕುರಿತು ಬಣ್ಣಿಸುತ್ತಾನೆ:

> ಅವಳು ಒಂದೇ ಸವನೆ ಉರಿಸಲಾಗುತ್ತಿದ್ದ ಗುಗ್ಗುಳದಿಂದಾಗಿ, ಕತ್ತಲುಗಟ್ಟಿದ [ಚಂಡಿಕಾಳ] ದೇವಾಲಯದಲ್ಲಿ ದೊಣ್ಣೆಗಳಿಂದ ತಯಾರಿಸಿ, ಹಸಿರು ಹುಲ್ಲಿನಿಂದ ಹೊದಿಸಲಾದ ಹಾಸಿಗೆಯ ಮೇಲೆ ಒರಗುತ್ತಿದ್ದಳು----;ಕೃಷ್ಣ ಪಕ್ಷದ ಹದಿನಾಲ್ಕನೆಯ ಇರುಳಲ್ಲಿ ಅವಳು ನಾಲ್ಕು ದಾರಿಗಳು ಕೂಡುವಲ್ಲಿ [ಮಹಾಮಾಂತ್ರಿಕರಿಂದ][20] ಬರೆಯಲಾದ ಒಂದು ವರ್ತುಳದ ಮಧ್ಯದಲ್ಲಿ ಎದ್ದು ನಿಲ್ಲುತ್ತಿದ್ದಳು ----;ಅವಳು ಸಿದ್ಧರ ಮಠಗಳನ್ನು ಗೌರವಿಸುತ್ತಿದ್ದಳು ಹಾಗೂ ಸುತ್ತಲಲ್ಲಿರುವ ಮಾತೃಕೆಯರ ಮನೆಗಳಿಗೆ ಹೋಗಿಬರುತ್ತಿದ್ದಳು-----; ಅವಳು ಭೂರ್ಜ ಎಲೆಗಳ ಮೇಲೆ ಹಳದಿ ಬಣ್ಣದ ಅಕ್ಷರಗಳಿಂದ ಬರೆಯಲಾದ ಮಂತ್ರಗಳಿರುವ ಸಣ್ಣ ಸಣ್ಣ ಸಂಪುಟಗಳನ್ನು ತನ್ನ ಜೊತೆಗೆ ಒಯ್ಯುತ್ತಿದ್ದಳು; ------ಅವಳು ದಿನಾಲು ಸಂಜೆಗೆ ತೋಳಗಳಿಗಾಗಿ ಮಾಂಸದ ತುಣುಕುಗಳನ್ನು ಎಸೆಯುತ್ತಿದ್ದಳು; ಅವಳು ಪಂಡಿತರಿಗೆ ತನ್ನ ಕನಸಿನಲ್ಲಿಯ ಅಚ್ಚರಿಯ ಸಂಗತಿಗಳನ್ನು

---

18. ಅನು ಸಿ. ಎಮ್. ರಿಡ್ಡಿಂಗ್, ಪು. 28. ಸಂ. ಕಾಣೆ, vol. I text p. 20.
19. ಅನು. ರಿಡ್ಡಿಂಗ್ ಪು. 28. ಸಂ. ಕಾಣೆ, Vol.I, text p. 20.
20. 'ಮಹಾನರೇಂದ್ರ'. ರಿಡ್ಡಿಂಗರ ಅನುವಾದ, ' the king himself', ಎಂದು ಆಗಿರಲಿಕ್ಕಿಲ್ಲ.

ಅರುಹುತ್ತಿದ್ದಳು; ಅಲ್ಲದೆ ದಾರಿಗಳ ಕತ್ತರಿಯಲ್ಲಿ ಶಿವನಿಗೆ ನೈವೇದ್ಯವನ್ನು ಅರ್ಪಿಸುತ್ತಿದ್ದಳು.[21]

ಇವೆಲ್ಲ ಧಾರ್ಮಿಕ ಆಚರಣೆಗಳು ಶಬರ ಎಂಬ ಬುಡಕಟ್ಟಿನ ತಂಡದವರಿಗಿಂತ ಮೇಲು ಮಟ್ಟದ ಸಂಸ್ಕೃತಗೊಂಡ ಮತಾಚರಣೆಗಳನ್ನು ನಿರ್ದೇಶಿಸುತ್ತವಾದರೂ ಅವಳ ಈ ಬಹಳಷ್ಟು ಸಾಹಸ ಕೃತ್ಯಗಳು ತಾಂತ್ರಿಕ ಆರಾಧನೆಯನ್ನು ಫಲವತ್ತೆಯ ಮೂಲ ಮಾಂತ್ರಿಕ ಮಾದರಿಯೊಡನೆ ಒಂದುಗೂಡಿಸುತ್ತವೆ. ಉದಾಹರಣೆಗೆ, ಆಚರಣೆ ಹಾಗೂ ಧಾರ್ಮಿಕ ಆಚರಣೆಗಳು ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಕತ್ತರಿ ದಾರಿಯಲ್ಲಿ ಜರುಗುತ್ತವೆ. [22]

ಇದಕ್ಕಿಂತಲೂ ಹೆಚ್ಚಿನ ರಕ್ತಪಾತಗಳಿಂದ ಕೂಡಿದ ಮೂಲ ಮಾದರಿಯದಾದ ಮಾಂತ್ರಿಕತೆ ಹಾಗೂ ತಾಂತ್ರಿಕತೆಯ ಸಂಪೂರ್ಣ ಒಂದಾಗುವಿಕೆಯನ್ನು 'ಹರ್ಷ ಚರಿತೆ'ಯಲ್ಲಿ ಬಣ್ಣಿಸಲಾಗಿದೆ. ಹರ್ಷನ ತಂದೆ ಬೇನೆ ಬಿದ್ದಾಗ ಅವನ ಸಾವನ್ನು ತಪ್ಪಿಸಲೆಂದು ನಗರದ ಸಾಮಾನ್ಯ ಪ್ರಜೆಗಳು ಹಲವು ಬಗೆಯ ಪ್ರಾಯಶ್ಚಿತ್ತ ಕೃತಿಗಳನ್ನು ಎಸಗುತ್ತಾರೆ. ಅವು ಹೀಗಿವೆ:

> ಯುವ ಕಲಾವಿದರು ತಾಯಂದಿರನ್ನು (ಮಾತೃಕಾ) ಸಮಾಧಾನ ಪಡಿಸಲೆಂದು ದೀಪಗಳಿಂದ ತಮ್ಮನ್ನು ಸುಟ್ಟುಕೊಳ್ಳುತ್ತಿದರು. ಒಂದು ಊರಲ್ಲಂತೂ ಒಬ್ಬ ದ್ರವಿಡನು ಒಬ್ಬ ವೇತಾಳನಿಗೆ ಒಂದು ತಲೆಬುರುಡೆಯನ್ನು ನೀಡಿ ಮನವಿ ಮಾಡಿಕೊಳ್ಳಲು ಸಿದ್ಧನಾಗಿದ್ದನು. ಇನ್ನೊಂದೆಡೆಯಲ್ಲಿ ಒಬ್ಬ ಆಂಧ್ರದವನು ಚಂಡಿಕಾಳ ದಯೆಯನ್ನು ಸಂಪಾದಿಸಲೆಂದು ಕೋಟೆಯ ಮಣ್ಣು ದಿಬ್ಬದ ರಕ್ಷಕ ಗೋಡೆಯ ಹಾಗೆ ತನ್ನ ಕೈ ತೋಳುಗಳನ್ನು ಚಾಚಿದ್ದನು. ಬೇರೊಂದೆಡೆಯಲ್ಲಿ ಯುವ ಸೇವಕರು ತಮ್ಮ ತಲೆಗಳ ಮೇಲೆ ಉರಿಯುತ್ತ ಕರಗುತ್ತಿರುವ ಗುಗ್ಗುಳವನ್ನು ಹಿಡಿದುಕೊಂಡು ಮಹಾಕಾಲನನ್ನು ಶಾಂತಗೊಳಿಸಲು ಯತ್ನಿಸುತ್ತಿದ್ದರು. ಇನ್ನೊಂದೆಡೆ, ಬಳಗದವರ ಗುಂಪೊಂದು ಚೂಪಾದ ಚೂರಿಗಳಿಂದ ತಮ್ಮ ಮೈ ಮಾಂಸಗಳನ್ನು ಕತ್ತರಿಸಿ ತೆಗೆದು ಅವುಗಳಿಂದ ನೈವೇದ್ಯವನ್ನು ತೋರಿಸುವ ತೀವ್ರವಾದ ಅಭಿಲಾಷೆಯನ್ನು ಹೊಂದಿದ್ದರು. ಇನ್ನೆಲ್ಲೋ ಯುವ

---

21. ಅನು ರಿಡ್ಡಿಂಗ್, pp. 55-56, ಸಂ. ಕಾಣೆ, Vol. I, text pp. 42-43.

22. ಕತ್ತರಿ ರಸ್ತೆಗಳಲ್ಲಿ ನಡೆವ ಆರಾಧನೆಯನ್ನು ಕುರಿತಾದ ಚರ್ಚೆಗಾಗಿ, ನೋಡಿ ಡಿ. ಡಿ. ಕೋಸಂಬಿ, 'Myth and Reality', chap iii. ಪ್ರಾಚೀನ ಗ್ರೀಸಿನಲ್ಲಿ ಹರ್ಮಿಸ್‌ನು ಕತ್ತರಿ ರಸ್ತೆಗಳ ಹಾಗೂ ಫಲವತ್ತೆಯ ಮುಖ್ಯ ದೇವತೆಯೂ ಆಗಿದ್ದನು. ನೋಡಿ ಎನ್. ಒ. ಬ್ರೌನ್. 'Hermes the Thief'.

ಪ್ರೇಮಿಗಳು ಮತ್ತೆ ಬಹಿರಂಗದಲ್ಲಿಯೇ ಮಾನವ ಮಾಂಸವನ್ನು ಮಾರತೊಡಗಿದ್ದರು.[23]

ರುದ್ರಭೂಮಿಯ ಪಿಶಾಚಿಗಳಿಗೆ ಮಾಡಲಾಗುವ ಮಾನವ ಮಾಂಸದ ಮಾರಾಟವನ್ನು ಕುರಿತು ಭವಭೂತಿಯ 'ಮಾಲತಿ ಮಾಧವ', 'ಕಥಾ ಸರಿತ್ಸಾಗರ' ಹಾಗೂ ಸಂಸ್ಕೃತದ ಇನ್ನಿತರ ಕೃತಿಗಳಲ್ಲಿ ನಮೂದಿಸಲಾಗಿದೆ. ಸೋಮದೇವನ 'ಯಶಸ್ತಿಲಕ'ವು (ಕ್ರಿ. ಶ. 959) ತಮ್ಮ ದೇಹದಿಂದಲೇ ಮಾಂಸವನ್ನು ಕತ್ತರಿಸಿ ಅದನ್ನು ಮಾರಾಟ ಮಾಡುವ ಮಹಾವ್ರತಿಗಳ ನಾಯಕರನ್ನು ಕುರಿತು ನಮೂದಿಸುತ್ತದೆ.[24] 'ಮಹಾವ್ರತಿನ್' ಪದವನ್ನು ಸಾಮಾನ್ಯವಾಗಿ ಕಾಪಾಲಿಕರು ಎಂಬರ್ಥದಲ್ಲಿ ಬಳಸಲಾಗುತ್ತದೆ.[25] ಮೇಲಿನ ಪರಿಚ್ಛೇದದಲ್ಲಿ ಬಂದಿರುವ, ಹಾಗೂ ವೇತಾಳನಿಗೆ ತನ್ನ ರುಂಡವನ್ನು ಅರ್ಪಿಸಬಯಸುವ ದ್ರಾವಿಡನು ಕೂಡ ಒಬ್ಬ ಕಾಪಾಲಿಕ ಇಲ್ಲವೆ ಅವನಿಗೆ ತೀರ ಹತ್ತಿರದ ನಂಟುಳ್ಳ ಒಬ್ಬ ಯತಿಯನ್ನು ಪ್ರತಿನಿಧಿಸುತ್ತಿರಬಹುದೆನ್ನಿಸುತ್ತದೆ.

'ಕಾದಂಬರಿ'ಯಲ್ಲಿ ದಕ್ಷಿಣ ಭಾರತದ ಒಬ್ಬ ತಾಂತ್ರಿಕ ಯತಿಯನ್ನು ಬಲು ವಿಸ್ತಾರದಿಂದ ಬಣ್ಣಿಸಲಾಗಿದೆ. ಈ 'ದ್ರವಿಡ ಧಾರ್ಮಿಕ'ನು ಉಜ್ಜಯನಿಯ ದಾರಿಯ ಮೇಲಿದ್ದ ಚಂಡಿಕಾ ದೇವಾಲಯದ ಆಡಳಿತಗಾರನಾಗಿರುವನು. ಈ ದೇವಾಲಯದ ಒಂದು ಸ್ಥಳದಲ್ಲಿ 'ಹಣ್ಣುಗಳಂತಿರುವ ತಲೆ ಬುರುಡೆಗಳ ರಾಶಿಗಳೊಂದಿಗೆ ------ಪಶುಬಲಿಯನ್ನು ಕೊಡುವುದನ್ನು ತೋರಿಸಲಾಗಿದೆ.'[26] ಅಲ್ಲಿಯ ಧಾರ್ಮಿಕನು ಮೂರ್ಖತನದ ಪ್ರಾಯಶ್ಚಿತ್ತಗಳಿಂದಾಗಿ ಕುಂಟನೂ, ಅಂಗವಿಹೀನನೂ ಆಗಿದ್ದು ಅವನು ಪ್ರಯಾಣಿಕರೊಂದಿಗೂ, ಕಾಡು ಪ್ರಾಣಿಗಳೊಂದಿಗೂ ಕಾದಾಡುವನು. ಅವನ ಪೂಜಾವಿಧಾನದ ತಾಂತ್ರಿಕ ಲಕ್ಷಣಗಳಿಗೆ ಈ ಕೆಳಗಿನ ಕೆಲವು ವಿಶೇಷಣ ಪದಗಳಿಂದ ಒತ್ತು ದೊರಕುತ್ತದೆ:

> ಅವನ ಹಣೆಯ ಮೇಲೊಂದು ಗಂಟು ಬೆಳೆಯಹತ್ತಿತ್ತು. ಅವನು (ಒಂದೇ ಸವನೆ) ಅಂಬಿಕೆಯ (ಚಂಡಿಕಾ ವಿಗ್ರಹದ) ಪಾದಗಳಿಗೆ ಬೀಳುತ್ತಿದ್ದ ಕಾರಣ ಅದು ಕಪ್ಪುಗಟ್ಟಿತ್ತು-----ಅವನು ಪಾದರಸದ ಮದ್ದುಗಳನ್ನು ಸೇವಿಸುತ್ತ ಬೇಕೆಂದೇ ಬೇಗನೆ ಜ್ವರ ಬರುವ ಹಾಗೆ ಮಾಡಿಕೊಂಡಿದ್ದನು. ಅವನು ಮುಪ್ಪಿನವನಾಗಿದ್ದರೂ ತನ್ನನ್ನು ದಕ್ಷಿಣ ನಾಡಿನ

---

23. ಅನು. ಈ ಬಿ. ಕೊವೆಲ್ ಮತ್ತು ಎಫ್. ಡಬ್ಲ್ಯು ಥಾಮಸ್, pp. 135-36. ಸಂ. ಪಿ. ವಿ. ಕಾಣೆ, part II, text p. 21.

24. ನೋಡಿ ಕೆ. ಕೆ. ಹಂಡಿಕಿ, pp. 358-59.

25. ಮುಂದೆ ನೋಡಿ, pp. 73-82.

26. ಸಂ. ಕಾಣೆ, vol. II, Text p. 67.

ಸಾರ್ವಭೌಮನನ್ನಾಗಿ ಮಾಡಬೇಕೆಂದು ದುರ್ಗೆಯನ್ನು ಪೀಡಿಸುತ್ತಿದ್ದನು. .....ಅವನು ಕೆಂಬಣ್ಣದ ಅರಗಿನ ಅಕ್ಷರಗಳಿಂದ (ಬರೆಯಲಾದ) ಕಣ್ಕಟ್ಟು, ತಂತ್ರ ಮತ್ತು ಮಂತ್ರಗಳದಾದ ಹೊಗೆ (ಬಣ್ಣದ)ಯ ತಾಳೆ ಗರಿಗಳ ಮೇಲಿನ ಕೈ ಬರಹಗಳ ಒಂದು ಸಂಗ್ರಹವನ್ನು ತಯಾರಿಸಿಕೊಂಡಿದ್ದನು. ಅವನು ಮಹಾಪಾಶುತರ ಪುರಾತನ ಬೋಧನೆಯಾದ ಮಹಾಕಾಲ ಸಿದ್ಧಾಂತವನ್ನು ಬರೆದಿಟ್ಟಿದ್ದನು-----ಅವನು (ಕುಬೇರನ ಒಂಬತ್ತು)ಸಂಪತ್ತುಗಳ ಬಗೆಗೆ (ಒಂದೇ ಸವನೆ) ಬಡಬಡಿಸುವ ಕಾಯಿಲೆಯನ್ನು ವ್ಯೆದಳೆದು ಬಂದಿದ್ದನಲ್ಲದೆ ಧಾತುವಿದ್ಯೆಯ (ವಿಷಯ) ಬಗೆಗೆ ಗಾಳಿಯ ಹೊಡೆತಕ್ಕೆ ಸಿಕ್ಕಿದವನಂತೆ ಆಗುತ್ತಿದ್ದನು------ ಅವನು ಅದೃಶ್ಯನಾಗುವುದನ್ನು ಕುರಿತಾದ ಮಂತ್ರ ಸಾಧನೆಯ ತನ್ನ ಗ್ರಹಿಕೆಯನ್ನು ಹೆಚ್ಚಿಸಿಕೊಂಡಿದ್ದನಲ್ಲದೆ ಶ್ರೀಪರ್ವತವನ್ನು ಕುರಿತಾದ ಸಾವಿರಾರು ಅದ್ಭುತವಾದ ಕಥೆಗಳನ್ನು ತಿಳಿದಿದ್ದನು----ಅವನು ಅದೆಷ್ಟೋ ಸಲ (ದೇವಾಲಯದಲ್ಲಿ ವಾಸಿಸುತ್ತಿದ್ದ) ವಿದೇಶೀಯರಾದ ಮುಪ್ಪಿನ ಸಂನ್ಯಾಸಿನಿಯರ ಮೇಲೆ ಸ್ತ್ರೀವಶೀಕರಣದ ಪುಡಿಯನ್ನು (Subdue powders) ಬಳಸುತ್ತಿದ್ದನು-----[27]

ಗಮನಾರ್ಹವಾದ ಈ ಪರಿಚ್ಛೇದವು ತಾಂತ್ರಿಕ ಕೈ ಬರಹಗಳಂತೆಯೇ ಧಾತುವಿದ್ಯೆ ಹಾಗೂ ದೀರ್ಘಾಯುಷ್ಯವನ್ನು ಒದಗಿಸುವ (ರಸಾಯನ)ಪಾದರಸದ ಮದ್ದುಗಳನ್ನು ಕುರಿತಾದ ಎಲ್ಲಕ್ಕೂ ಹಳೆಗಾಲದ ಸಂದರ್ಭಗಳನ್ನು ನಮಗೆ ಒದಗಿಸುತ್ತದೆ. 'ಮಂತ್ರ ಸಾಧನ' ಎನ್ನುವುದು (ಮಂತ್ರಗಳ ಸಾಧನೆಯನ್ನು ಕೈಕೊಳ್ಳುವುದು) ಒಂದು ವಿಶಿಷ್ಟವಾದ ತಾಂತ್ರಿಕ ಪದವಾಗಿದೆ. ಬಾಣನ ಕಾಲದವರೆಗೆ ತಾಂತ್ರಿಕ ಪೂಜಾ ಪದ್ಧತಿಯು ಪೂರ್ತಿ ಬೆಳೆದಿತ್ತಲ್ಲದೆ ಅದು ದಕ್ಷಿಣ ಭಾರತದಲ್ಲಿಎದ್ದು ಕಾಣುವ ಹಾಗೆ ಕೇಂದ್ರೀಕೃತಗೊಂಡಿತ್ತೆಂಬುದು ಈ ನಿಜ ಸಂಗತಿಗಳಿಂದ ಕಂಡು ಬರುತ್ತದೆ.

ಮಹಾಪಾಶುಪತರ ಬೋಧನೆಗಳು ಹಾಗೂ ಶ್ರೀಪರ್ವತದ ಸಂದರ್ಭಗಳು ನಮ್ಮ ದೃಷ್ಟಿಕೋನದಿಂದ ಬಲು ಕುತೂಹಲಕರ. ಏಕೆಂದರೆ ಇವೆರಡೂ ಸಂಗತಿಗಳು ಈ ಅನುಯಾಯಿಗಳನ್ನು ಕಾಪಾಲಿಕ ಹಾಗೂ ಕಾಳಾಮುಖರೊಡನೆ ಜೋಡಿಸುತ್ತಿರುವಂತೆ ಕಾಣುತ್ತದೆ. 'ವಾಮನ ಪುರಾಣ'ವು ಮಹಾಪಾಶುಪತನೆಂದರೆ ಪಾಶುಪತ ಸಿದ್ಧಾಂತದ ಪ್ರಚಾರಕ್ಕಾಗಿ ಭಾರದ್ವಾಜನ ಅವತಾರವನ್ನು ತಳೆದು ಬಂದ ಶಿವನ ಒಂದು ರೂಪವೆಂದು ನಮೂದಿಸುತ್ತದೆಂದು ಕಾಣುತ್ತದೆ. ಆದರೆ ಬೇರೆಡೆಗೆ ಅದು ಶೈವರು, ಪಾಶುಪತರು,

---

27. ಸಂ. ಕಾಣೆ, vol. II, text pp. 68-69. ನನ್ನದು ಕಾಣೆಯವರ ಇಂಗ್ಲಿಷ್ ಟಿಪ್ಪಣಿಯನ್ನಾಧರಿಸಿದ ಸಡಿಲಾದ ಅನುವಾದವಾಗಿದೆ.

ಕಾಳಾಮುಖರು, ಮಹಾವ್ರತಿಗಳು, ನಿರಾಶ್ರಯರು ಹಾಗೂ ಮಹಾಪಾಶುಪತರನ್ನು ಬೇರೆ ಬೇರೆ ಪಂಗಡದವರೆಂದು ಸಮರ್ಥಿಸುತ್ತದೆ.[28] ಮಹಾ ಪಾಶುಪತರು ಸಾಮಾನ್ಯ ಪಾಶುಪತರಿಗಿಂತ ಸ್ವಲ್ಪಮಟ್ಟಿಗಾದರೂ ಬೇರೆಯಾಗಿದ್ದರೆಂದು ಸೂಚಿಸಲು ಬೇರೆ ಹಲವಾರು ಆಕರಗಳು ತಮ್ಮ ಬೆಂಬಲವನ್ನು ಒದಗಿಸುತ್ತವೆ. ಹಂಡಿಕಿ ಅವರು ಸೂಚಿಸುವಂತೆ (ಪು. 241) (ಹತ್ತನೆಯ ಶತಮಾನದ ಉತ್ತರ ಭಾಗದಲ್ಲಿ)ಉದಯನನು ಮಹಾಪಾಶುಪತರನ್ನು ಕುರಿತು ಉಲ್ಲೇಖಿಸುತ್ತಾನಲ್ಲದೆ (ಹನ್ನೊಂದನೆಯ ಶತಮಾನದ) ವರದರಾಜ ಹಾಗೂ ಶಂಕರ ಮಿಶ್ರ (ಇಸವಿ 1600) ಇವರಿಬ್ಬರೂ ಮಹಾವ್ರತವನ್ನು ಆಚರಿಸುವ ಪಾಶುಪತರಾಗಿದ್ದರೆಂದು ಅವರನ್ನು ಗುರುತಿಸುತ್ತಾನೆ. 'ಕಾದಂಬರಿ'ಗೆ ಸುಮಾರಾಗಿ ಸಮಕಾಲೀನವಾದ ದಕ್ಷಿಣ ಭಾರತದ ಒಂದು ನಾಟಕವಾದ ಮಹೇಂದ್ರವರ್ಮನ 'ಮತ್ತ ವಿಲಾಸ'ವು ಕಾಪಾಲಿಕರನ್ನು ಮಹಾಪಾಶುಪತರೆಂದು ಕರೆಯುವಂತಿದೆ.[29] ಬೆಳಗಾವಿ ಜಿಲ್ಲೆಯ ಕ್ರಿ.ಶ.1148 ಹಾಗೂ 1219-20ರ ಕಾಲದ ಎರಡು ಶಾಸನಗಳಲ್ಲಿ ಕಂಡು ಬರುವ ಒಂದು ಪದ್ಯವು ಕಾಳಾಮುಖರನ್ನು ಮಹಾಪಾಶುಪತ ಹಾಗೂ ಮಹಾವ್ರತಿನ್ ಎಂಬೆರಡೂ ಹೆಸರುಗಳಿಂದ ಗುರುತಿಸುವಂತೆ ಕಾಣುತ್ತದೆ.[30] ಈ ಆಕರವು ತುಸು ಮಟ್ಟಿಗೆ ಗೊಂದಲದಿಂದ ಕೂಡಿದೆ. ಏಕೆಂದರೆ ಕಾಪಾಲಿಕರಿಗೆ ಸಾಮಾನ್ಯವಾಗಿ ಈ ಹೆಸರನ್ನು ಕೊಡಲಾಗುತ್ತದಾದರೂ ಕಾಳಾಮುಖ ಹಾಗೂ ಕಾಪಾಲಿಕ ಮಹಾವ್ರತಗಳು ತುಂಬ ಬೇರೆ ವ್ರತಗಳಾಗಿರುವ ಸಾಧ್ಯತೆಯಿದೆ.[31] ಇನ್ನು ಕೆಲವು ಶಾಸನಗಳೂ ಕೂಡ ಕಾಳಾಮುಖ ಯತಿಗಳನ್ನು ಮಹಾವ್ರತಿನ್‌ರೆಂದಿದ್ದಿವೆ. ಕಾಳಾಮುಖರು ಸಾದಾ ಪಾಶುಪತರಿಗೆ ತೀರ ಹತ್ತಿರದ ನಂಟನ್ನು ಪಡೆದವರಾದ ಕಾರಣ ಮಹಾಪಾಶುಪತರನ್ನು ಕಾಪಾಲಿಕರು ಇಲ್ಲವೆ ಪಾಶುಪತರೊಂದಿಗೆ ಜೋಡಿಸುವ ಬದಲು ಕಾಳಾಮುಖರೊಂದಿಗೆ ಜೋಡಿಸುವುದು ಹೆಚ್ಚು ಉತ್ತಮ, ಎಂಬುದು ನಮ್ಮ ಅಭಿಪ್ರಾಯ. ಏನಿದ್ದರೂ, ಕಾಳಾಮುಖ ಇಲ್ಲವೆ ಪಾಶುಪತ ಸಂಪ್ರದಾಯಗಳು ತಾಂತ್ರಿಕ ಲಕ್ಷಣಗಳನ್ನು ಹೊಂದಿದವಾಗಿ ಗುರುತಿಸಲ್ಪಡುತಿದ್ದವು ಎನ್ನಲು ಯಾವುದೇ ಪುರಾವೆಯಿಲ್ಲ. ಈ ಕಾರಣದಿಂದಾಗಿ ಬಾಣನ ದ್ರವಿಡ ಧಾರ್ಮಿಕನಿಂದ ಬರೆದಿರಿಸಲಾದ ಮಹಾಪಾಶುಪತ ಬೋಧನೆಗಳೆಂದರೆ ಕಾಪಾಲಿಕ ಸಿದ್ಧಾಂತಗಳಾಗಿದ್ದವೇ

---

28. ಮೇಲ್ಪದಿಗೆ ನೋಡಿ, pp. 11-12.
29. ಸಂ. ಟಿ. ಜಿ. ಶಾಸ್ತ್ರಿ, ಪು. 26. ಅನು. ಎಲ್. ಡಿ. ಬಾರ್ನೆಟ್, BSOS, V (1930), 715. ಬಾರ್ನೆಟ್ಟರು ಈ ಪದದ ಮಹತ್ವವನ್ನು ಅರಿತುಕೊಳ್ಳದೆ ಅದನ್ನು 'ನೋಬಲ್ ಪಾಶುಪತ' ಎಂಬುದಾಗಿ ಅನುವಾದಿಸಿದರು. ಹೀಗೆ ಮಾಡುವಾಗ ಇದು ನಾಟಕದಲ್ಲಿ ಕಾಣಿಸಿಕೊಳ್ಳುವ ಪಾಶುಪತನನ್ನು ಸೂಚಿಸುತ್ತದೆಂದು ಅವರು ಬಗೆದರು. ಆದರೆ ಸಂದರ್ಭವು ಇದು ಹೀಗಿರುವ ಸಾಧ್ಯತೆಯನ್ನು ತಳ್ಳಿ ಹಾಕುತ್ತದೆ.
30. ಆರ್. ಎಸ್. ಪಂಚಮುಖಿ (ಸಂ.), 'Karnatak Inscriptions', 1, 34 ಮತ್ತು ಜೆ. ಎಫ್. ಫ್ಲೀಟ್, 'A Series of Sanskrit and Old Canarese Inscriptions Relating to the Ratta Chieftains of Soundatti and Belgaum', JBBRAS, X (1871-74), 247.
31. ಮುಂದೆ ನೋಡಿ, pp. 73-82.

ಹೊರತು ಕಾಳಾಮುಖ ಸಿದ್ಧಾಂತಗಳಾಗಿರಲಿಲ್ಲ. ಇದು 'ಮತ್ತ ವಿಲಾಸ'ದ ಸಂದರ್ಭಕ್ಕೂ ಸರಿ ಹೊಂದುವಂತಿದೆ. ಇನ್ನಷ್ಟು ಹೆಚ್ಚಿನ ಪುರಾವೆಗಳು ದೊರಕದೇ ಹೋದರೆ ಮಹಾಪಾಶುಪತ ಹೆಸರನ್ನು ಕುರಿತಾದ ಕಾಳಾಮುಖ, ಕಾಪಾಲಿಕ ಹಾಗೂ ಪಾಶುಪತರ ನಡುವಿನ ಘರ್ಷಣೆಯಿಂದ ಕೂಡಿದ ಬೇಡಿಕೆಯ ಸಮಸ್ಯೆಯನ್ನು ಪೂರ್ತಿಯಾಗಿ ಬಗೆ ಹರಿಸಲಾಗದು.

ದ್ರಾವಿಡ ಧಾರ್ಮಿಕನ ಶ್ರೀ ಪರ್ವತವನ್ನು ಕುರಿತಾದ ಅದ್ಭುತ ಕಥೆಗಳ ಸಂದರ್ಭದಲ್ಲೂ ಸುಮಾರಾಗಿ ಇದೇ ಬಗೆಯ ಸಮಸ್ಯೆಯು ಎದುರಾಗುತ್ತದೆ. ಆಂಧ್ರ ಪ್ರದೇಶದ ಕರ್ನೂಲ ಜಿಲ್ಲೆಯಲ್ಲಿರುವ ಹೆಸರಾದ ಯಾತ್ರಾಸ್ಥಳವು ಭವಭೂತಿಯ 'ಮಾಲತಿ ಮಾಧವ'ದಲ್ಲಿ ಕಾಪಾಲಿಕರ ಬೀಡಾಗಿದೆ. ಆದರೆ ಹನ್ನೊಂದನೆಯ ಶತಮಾನದ ಶಾಸನಗಳಲ್ಲಿ ಇದನ್ನು ಒಂದು ಕಾಳಾಮುಖ ತೀರ್ಥಕ್ಷೇತ್ರ ಎಂದು ನಮೂದಿಸಲಾಗಿದೆ.[32]

ಬಾಣನು ತನ್ನ 'ಹರ್ಷ ಚರಿತ್ರೆ'ಯಲ್ಲಿ ಒಬ್ಬ ಶೈವ ಯತಿಯ ಇನ್ನಷ್ಟು ಹೆಚ್ಚಿನ ಸಹೃದಯ ಚಿತ್ರವನ್ನು ನೀಡಿದ್ದಾನೆ. ಹರ್ಷನ ಪೂರ್ವಿಕನಾದ ಪುಷ್ಪಭೂತಿಯೊಂದಿಗೆ ಸ್ನೇಹವನ್ನು ಹೊಂದಿದ್ದ ಭೈರವಾಚಾರ್ಯನೂ ಕೂಡ ದಕ್ಷಿಣ ಭಾರತದವನೇ (ದಾಕ್ಷಿಣಾತ್ಯ) ಆಗಿದ್ದನಲ್ಲದೆ ಅವನು ಕಾಪಾಲಿಕರಿಗೆ ಸೂಕ್ತವೆನ್ನಿಸಿದ ತಾಂತ್ರಿಕ ವಿಧಿಗಳನ್ನು ಆಚರಿಸುತ್ತಿದ್ದನು. ಅವನ ಮೂವರು ಶಿಷ್ಯಂದಿರಲ್ಲಿ ಒಬ್ಬನಾದ ಕರ್ಣತಾಲನು ಒಬ್ಬ ದ್ರಾವಿಡನಾಗಿದ್ದು ಇನ್ನೊಬ್ಬನಾದ ಟಿಟ್ಟಿಭನು ತಲೆ ಬುರುಡೆಯ ಒಂದು ಭಿಕ್ಷಾ ಪಾತ್ರೆಯನ್ನು (ಭಿಕ್ಷಾಕಾಪಾಲ) ಖರ್ಜೂರ ಮರದ ಪೆಟ್ಟಿಗೆಯಲ್ಲಿ ಇಟ್ಟುಕೊಳ್ಳುತ್ತಿದ್ದನು.[33] ಭೈರವಾಚಾರ್ಯನ ಹೆಸರು ಕಾಪಾಲಿಕರಂತಹ ತಾಂತ್ರಿಕ ಪಂಗಡದವರಿಂದ ವಿಶೇಷವಾಗಿ ಗೌರವಿಸಲ್ಪಡುವ ಶಿವನ ಭೈರವರೂಪವನ್ನು ಸೂಚಿಸುತ್ತದೆ. ಬಾಣನು ಅವನನ್ನು ಹೀಗೆ ಪರಿಚಯಿಸುತ್ತಾನೆ: 'ದಕ್ಷನ ಯಜ್ಞವನ್ನು ಕಿತ್ತೆಸೆಯುವಲ್ಲಿ ಎರಡನೆಯವನೇ ಆದ, ದಕ್ಷಿಣದವನಾದ, ನಾನಾ ಬಗೆಯ ಶಾಸ್ತ್ರಗಳ ಪಾರಮ್ಯದಿಂದಾಗಿ, ಇಡಿಯ ಮಾನವ ಜಗತ್ತಿನ ತುಂಬೆಲ್ಲ ಸಾವಿರಾರು ಜನ ಶಿಷ್ಯರನ್ನು ಹರಡಿರುವನೆಂಬಂತಿದ್ದ ತನ್ನ ಸಾಮರ್ಥ್ಯಗಳಿಂದಾಗಿ, ಹೆಸರುವಾಸಿಯಾದ ಭೈರವಾಚಾರ್ಯ ಎಂಬವನು ಒಬ್ಬ ಮಹಾನ್ ಶೈವಯತಿಯಾಗಿದ್ದನು.[34]

ಇಲ್ಲಿ, 'ಒಬ್ಬ ಮಹಾನ್ ಶೈವಯತಿ' (ಮಹಾಶೈವ) ಎಂದು ಅನುವಾದಿಸಲಾದ ಪದವು ವಿಶಿಷ್ಟವಾದ ಒಂದು ಪಂಥ ಇಲ್ಲವೆ ಯತಿ ಸಂಪ್ರದಾಯವನ್ನು ಸೂಚಿಸುವಂತಿಲ್ಲ. ಇದು ಶಿವನಲ್ಲಿರುವ ಅವನ ದೃಢವಾದ ಭಕ್ತಿಯನ್ನು ತೋರಿಸುವ ಬಣ್ಣನೆಯ ಒಂದು ಪದ ಮಾತ್ರವಾಗಿದೆ. ದಕ್ಷನ ಯಜ್ಞವನ್ನು ಕಿತ್ತೆಸೆದ ಮೊದಲಿಗನೆಂದರೆ ಶಿವನೇ ಅಹುದು. ಶಿವನು

---

32. ಮುಂದೆ ನೋಡಿ, pp. 50-51.
33. ಸಂ. ಕಾಣೆ, Part I, text p. 46.
34. ಅನು. ಕೊವೆಲ್ ಮತ್ತು ಥಾಮಸ್, ಪು. 85.' ಸಂ. ಕಾಣೆ, Part I, text ಪು. 45.

ಬ್ರಹ್ಮನ ಐದನೆಯ ತಲೆಯನ್ನು ತುಂಡರಿಸಿ ಚೆಲ್ಲಿದ ತರುವಾಯ ತಾನು ಕಪಾಲಿನ್ ಆದ ಕಾರಣ ದಕ್ಷನು ಅವನನ್ನು ತನ್ನ ಯಜ್ಞಕ್ಕೆ ಆಮಂತ್ರಿಸಲು ನಿರಾಕರಿಸಿದನೆಂದು ಒಂದೇ ಒಂದು ಪುರಾವೆಯೆನ್ನಿಸಿದ 'ವಾಮನ ಪುರಾಣ'ದಲ್ಲಿ ಹೇಳಲಾಗಿದೆ.[35] ಶಿವ ಕಪಾಲಿನ್ ಅಥವಾ ಕಪಾಲೇಶ್ವರನು ಕಾಪಾಲಿಕಯತಿಗಳ ದೇವತ್ವದ ಮೂಲಮಾದರಿ ಎನ್ನಿಸಿದ್ದಾನೆ.[36]

ಶಿವನು (ಪರಮೇಶ್ವರ) ನಿಷ್ಠಾವಂತ ಆರಾಧಕನಾದ ಪುಷ್ಪಭೂತಿಯೆಂಬ ಅರಸನಿಗೆ ಮಹಾನ್ ಯತಿಯೆನ್ನಿಸಿದ ಈ ಭೈರವಾಚಾರ್ಯನ ಬಗೆಗೆ ತಿಳಿದು ಬರುತ್ತಲೇ ಅವನು ಈ ಆಚಾರ್ಯನಿಗೆ ತನ್ನ ಗೌರವಗಳನ್ನು ಸಲ್ಲಿಸಬೇಕೆನ್ನುವ ತನ್ನ ಇಚ್ಛೆಯನ್ನು ವ್ಯಕ್ತಪಡಿಸಿದನು. ಅವರಿಬ್ಬರ ಭೇಟಿಯನ್ನು ಗೊತ್ತು ಪಡಿಸಲಾಯಿತು. ಪುಷ್ಪಭೂತಿಯು ಮಾತೃಗಳ ಪುರಾತನ ದೇವಾಲಯದ ಬಳಿ ನೆಟ್ಟು ಬೆಳೆಯಿಸಿದ ಬಿಲ್ವ ಮರಗಳಿದ್ದ ತಾಣಕ್ಕೆ ಹೋಗಿ ತಲುಪಿದನು. ಆ ಯತಿಯನ್ನು ಕುರಿತು ಮುಂದಕ್ಕೆ ಬರುವ ಬಣ್ಣನೆ ಇಲ್ಲಿ ಇಡಿಯಾಗಿ ನಮೂದಿಸಲಾಗದಷ್ಟು ದೀರ್ಘವಾಗಿದೆ. ಹೀಗಾಗಿ ಅದರ ಕುತೂಹಲಕರವಾದ ಕೆಲವು ಭಾಗಗಳನ್ನಷ್ಟೇ ಗಮನಿಸಬೇಕು.[37] ಪುಷ್ಪಭೂತಿಯು ಭೈರವಾಚಾರ್ಯನನ್ನು ಹೀಗೆ ಕಂಡನು: '(ಅವನು)ಚಿಗರೆಯ ಚರ್ಮದ ಮೇಲೆ ಕುಳಿತಿದ್ದನು. ಈ ಚರ್ಮವನ್ನು ಆಕಳ ಸಗಣಿಯಿಂದ ಸಾರಿಸಿದ ನೆಲದ ಮೇಲೆ ಹಾಸಲಾಗಿತ್ತು. ಅದರ ಅಂಚಿನೊಡನೆ ಭಸ್ಮದ ರೇಷೆಗಳಿಂದ ಗುರುತುಗಳನ್ನು ಮಾಡಲಾಗಿತ್ತು.' ಕಾಂತಿಯಿಂದ ಕೂಡಿದ ಅವನ ದೇಹವು 'ಮಾನವನ ಮಾಂಸವನ್ನು ಮಾರಿ ಕೊಂಡುಕೊಳ್ಳಲಾದ' ಕೆಂಪು ರಂಜಕದ ದ್ರವದಂತಿತ್ತು. ಅವನ ತಲೆಗೂದಲುಗಲು ಬೈರಾಗಿಗಳ ಶೈಲಿಯಲ್ಲಿ ಜಡೆಗಟ್ಟಿತ್ತಲ್ಲದೆ (ಜಟೀಕೃತ) ರುದ್ರಾಕ್ಷದ ಕಾಯಿ ಹಾಗೂ ಕವಡೆ (ಶೆಲ್) ಮಾಲೆಯಿಂದ ಅದನ್ನು ಕಟ್ಟಲಾಗಿತ್ತು. 'ಹಣೆಯ ಮೇಲೆ ಅಡ್ಡವಾಗಿ ಬಳಿದ ಭಸ್ಮದ ಗುರುತು ಕಾಣುತ್ತಿತ್ತು. 'ಅವನ ನಾಲಗೆಯ ತುದಿಯ ಮೇಲೆ ವಿಶ್ರಮಿಸುತ್ತಿದ್ದ ಇಡಿಯ ಶೈವಧರ್ಮಶಾಸ್ತ್ರದ (ಶೈವ ಸಂಹಿತಾ) ಹೆಚ್ಚಿನ ಭಾರದಿಂದಾಗಿ' ಅವನ ಕೆಳತುಟಿ ಕಿಂಚಿತ್ತು ಜೋಲು ಬಿದ್ದಿತ್ತು. ಅವನು ಒಂದು ಜತೆ ಸ್ಫಟಿಕದ ಕಿವಿಯುಂಗುರಗಳನ್ನು (ಸ್ಫಟಿಕ ಕುಂಡಲ) ಧರಿಸಿದ್ದನು ಒಂದು ಮುಂದೋಳಿಗೆ ಕಬ್ಬಿಣದ ಕಡಗವನ್ನು, ನಾನಾ ಬಗೆಯ ಮೂಲಿಕೆಗಳ ಮಂತ್ರಿಸಲಾದ ದಾರದಿಂದ (ಮಂತ್ರಸೂತ್ರ) ಕಟ್ಟಿಕೊಂಡಿದ್ದನು, ......ಪೂಜ್ಯ ಶಿವನಿಂದ

---

35. ii. 17 to iv 1. ಸೋಮದೇವನ 'ಕಥಾ ಸರಿತ್ಸಾಗರ' i. 1 23 ff. (ಸಂ. ದುರ್ಗಾ ಪ್ರಸಾದ ಮತ್ತು ಕೆ. ಪಿ. ಪರಬ), ಕೊರಳಿಗೆ ತಲೆಬುರುಡೆಯ ಮಾಲೆಯನ್ನು ತೊಟ್ಟ ಕಾರಣ ಶಿವನನ್ನು ಆಮಂತ್ರಿಸಲಾಗಿರಲಿಲ್ಲ. 'ಪದ್ಮ' ಹಾಗೂ 'ಭಾಗವತ ಪುರಾಣ'ಗಳಲ್ಲಿ ಇದೇ ಬಗೆಯ ವಿವರಣೆಗಳನ್ನು ನೀಡಲಾಗಿದೆ. ನೋಡಿ 'ವಿಷ್ಣು ಪುರಾಣ', ಎಚ್. ಎಚ್. ವಿಲ್ಸನ್ (ಅನು.), pp. 55-56.

36. ಕೆಳಕ್ಕೆ ನೋಡಿ. pp. 77-81.

37. ಈ ಅನುವಾದಗಳು ಕೊವೆಲ್ ಮತ್ತು ಥಾಮಸ್‌ರವು, pp. 263-65. ಈ ಗ್ರಂಥಪಾಠದ ಸಂಪಾದನೆ ಕಾಣೆಯವರಿಂದ, Part I, text pp. 46-47.

ಮುರಿದು ಬಿಡಲಾದ ಪೂಷಣನ ಒಂದು ಹಲ್ಲಿನಂತಹ ಕವಡೆಯ ಒಂದು ತುಣುಕನ್ನು ಧರಿಸಿದ್ದನು.'[38] ಅವನು ತನ್ನ ಬಲಗೈಯಲ್ಲಿ ಹಿಡಿದುಕೊಂಡ ಜಪಮಾಲೆಯನ್ನು ಜಲಚಕ್ರದ ಹಾಗೆ ತಿರುಗಿಸುತ್ತಿದ್ದನು. ಅವನ ಗಡ್ಡ ಬಲು ದಟ್ಟವಿತ್ತು. ಅವನು ಕೌಪೀನವನ್ನು ತೊಟ್ಟು ಯತಿಯ ಶಾಲನ್ನು (ಯೋಗ ಪಟ್ಟಕ) ಹೊದೆದುಕೊಂಡಿದ್ದನು. 'ಅವನ ಪಕ್ಕಕ್ಕೆ ತುದಿಗೆ ಕಬ್ಬಿಣದ ಕೊಕ್ಕೆಯಿರುವ ಒಂದು ಬಿದಿರು ಕೋಲು ಯಾವಾಗಲೂ ಇರುತ್ತಿತ್ತು.'[39] ಅದು ಆನೆಯನ್ನು ಓಡಿಸಲು ಬಳಸಲಾಗುವ ಚುಚ್ಚುಗೋಲಿನಂತೆ ಕಾಣುತ್ತಿತ್ತು. ಅವನು ಬಾಲ್ಯದಿಂದಲೇ ಬ್ರಹ್ಮಚರ್ಯ ವ್ರತವನ್ನು ಆಚರಿಸುತ್ತ ಬಂದಿದ್ದನು.[40] 'ಶುದ್ಧತೆಯಲ್ಲಿ ಪರಮೋಚ್ಚನು' ಹಾಗೂ 'ಬುದ್ಧಿಮತ್ತೆಯಲ್ಲಿ ಎಲ್ಲರನ್ನೂ ಮೀರಿಸುವವನು' ಆದ ಅವನು 'ಪಶುಪತಿಯ ಪಾದಧೂಳಿಯಿಂದ ತನ್ನ ತಲೆಯನ್ನು ಶುದ್ಧಗೊಳಿಸಿಕೊಂಡು, ಕೈಲಾಸದಂತೆ, ಶಿವನ ಸ್ವರ್ಗದಂತೆ, ಮಾಹೇಶ್ವರನ ಗಣಗಳ ಬೀಡಿನಂತೆ' ಇದ್ದನು.

ಒಂದು ದಿನ ಭೈರವಾಚಾರ್ಯನು ಮಹಾಕಾಲಹೃದಯ ಎನ್ನುವ ಶಕ್ತಿಶಾಲಿಯಾದ ಒಂದು ಮಹಾಮಂತ್ರವನ್ನು ಪೂರ್ತಿಗೊಳಿಸುವಲ್ಲಿ ತನಗೆ ನೆರವಾಗುವಂತೆ ಅರಸನನ್ನು ಕೇಳಿದನು. ಹಿಂದೊಮ್ಮೆ ಅವನು ಒಂದು ಮಹಾರುದ್ರಭೂಮಿಯಲ್ಲಿ 'ಕಲ್ಪದಲ್ಲಿ ವಿಧಿಸಲಾದ ಇಡಿಯಾಗಿ ಕಪ್ಪಗಿನ ಮಾಲೆಗಳು, ಬಟ್ಟೆಗಳು ಹಾಗೂ ಲೇಪನಗಳೊಂದಿಗೆ ತಗ್ಗು ಧ್ವನಿಯಲ್ಲಿ ಸಲ್ಲಿಸಲಾದ ಒಂದು ಕೋಟಿ ಪ್ರಾರ್ಥನೆಗಳಿಂದ----'ಇದನ್ನು ಆಚರಿಸಲು ಶುರು ಮಾಡಿದ್ದನು. ಅವನ ಗುರಿ ಒಬ್ಬ ವೇತಾಳನನ್ನು ಗೆದ್ದುಕೊಳ್ಳುವುದಾಗಿತ್ತು. ಅರಸನು ನೆರವಿಗೆ ಬರವುದಾಗಿ ಒಪ್ಪಿಕೊಂಡು 'ಕೃಷ್ಣ ಪಕ್ಷದ ಹದಿನಾಲ್ಕನೆಯ ರಾತ್ರಿ ಶುರುವಾಗುವ ಹೊತ್ತಿಗೆಂದರೆ ಆ ಮಹಾರುದ್ರಭೂಮಿಯ ಬಳಿಯಲ್ಲಿದ್ದ ಒಂದು ಬರಿದಾದ ಮನೆಗೆ .....'[41] ಆಗಮಿಸಿದನು :

> ತನ್ನ ತಲೆಗೆ ಕಪ್ಪು ರುಮಾಲು ಸುತ್ತಿಕೊಂಡು, ಕಪ್ಪು ಲೇಪನಗಳನ್ನು ಪೂಸಿಕೊಂಡು, ಕಪ್ಪು ತಾಯಿತಗಳನ್ನು [ಪ್ರತಿಸರ] ಕಟ್ಟಿಕೊಂಡು ಹಾಗೂ ಕಪ್ಪು ಬಟ್ಟೆಗಳನ್ನು ತೊಟ್ಟುಕೊಂಡು, ಕಮಲ ಪರಾಗದಂತೆ ಬಿಳಿಯ ಭಸ್ಮದಿಂದ ಬರೆಯಲಾದ ದೊಡ್ಡದಾದ ವರ್ತುಳದ ಕೇಂದ್ರಬಿಂದುವಿನಲ್ಲಿ ಕುಳಿತಿರುವ ಭೈರವಾಚಾರ್ಯನನ್ನು ಹೀಗೆ ಕಾಣಬಹುದಿತ್ತು....ಅವನು ಹೆಣದ ಬಾಯಲ್ಲಿ ಉರಿಯುತ್ತಿರುವ ಜ್ವಾಲೆಯಲ್ಲಿ ಅಗ್ನಿ ಕಾರ್ಯವನ್ನು

---

38. ಪೂಷಣನು ದಕ್ಷನ ಯಜ್ಞವನ್ನು ನಾಶಪಡಿಸುವ ಕಾಲಕ್ಕೆ ತನ್ನ ಪಲ್ಲನ್ನು ಕಳೆದುಕೊಂಡನು.

39. 'ವೈಣವೇನ ವಿಶಾಖಿಕಾದಂಡೇನ'. 'ವಿಶಾಖಿಕಾ'ದ ಅರ್ಥ ಅಸ್ಪಷ್ಟ.

40. 'ಕುಮಾರ ಬ್ರಹ್ಮಚಾರಿಣಮ್'. ಕೊವೆಲ್ ಮತ್ತು ಥಾಮಸ್‌ರು ಇದನ್ನು 'Chaste as a boy' (ಬಾಲಕನಂತೆ ಪವಿತ್ರನು) ಎಂಬುದಾಗಿ ತಪ್ಪು ಅನುವಾದ ಮಾಡುತ್ತಾರೆ.

41. ಅನು. ಕೊವೆಲ್ ಮತ್ತು ಥಾಮಸ್, pp. 90-91. ಸಂ. ಕಾಣೆ, Part 1, text pp. 39-50.

ಆರಂಭಿಸಿದನು. ಅದಕ್ಕೆ ಕಪ್ಪು ಎಳ್ಳು ಕಾಳುಗಳನ್ನು ಎಸೆಯುವುದೆಂದರೆ ವಿದ್ಯಾಧರನಾಗುವ ತನ್ನ ಆತುರದಲ್ಲಿ ಅವನು ತನ್ನ ಮರ್ತ್ಯ ಅವಸ್ಥೆಗೆ ಕಾರಣವಾದ ಕೊಳೆಯ ಅಣುಗಳನ್ನು ನಾಶಪಡಿಸುತ್ತಿರುವನೋ, ಎನ್ನುವಂತೆ ಕಾಣುತ್ತಿದ್ದಿತು.[42]

ಅವನು ಗೂಢಶಕ್ತಿಯ ತನ್ನ ಮಂತ್ರಗಳನ್ನು ಮಣಮಣಗುಟ್ಟುತ್ತಿರುವಾಗ ಅವನ ಶಿಷ್ಯಂದಿರು ಹಾಗೂ ಅರಸನು ಅವನ ಸುತ್ತಲಲ್ಲಿ ನಾಲ್ಕು ಭಾಗಗಳಾಗಿ ಕುಳಿತಿದ್ದರು. ಆಗ ನೆಲದ ಬಿರುಕಿನಿಂದ ಒಮ್ಮೆಲೆ ಒಂದು ಚೇತನವು (ಪುರುಷ) ನೆಗೆದೆದ್ದು ನಿಂತಿತು. ನಾಗ ಶ್ರೀಕಂಠನೆಂಬ ಈ ಚೇತನವು ಅರಸ ಹಾಗೂ ಭೈರವಾಚಾರ್ಯನ ಮೂರು ಜನ ಶಿಷ್ಯಂದಿರ ಮೇಲೆ ದಾಳಿಯಿಕ್ಕಿತು. ಭೈರವಾಚಾರ್ಯನಿಂತ ಪಡೆದ ಅಟ್ಟಹಾಸವೆಂಬ ಕತ್ತಿಯಿಂದ ಅರಸನು ಈ ನಾಗನನ್ನು ಕತ್ತರಿಸಿ ಚೆಲ್ಲಲು ಹವಣಿಸಿದನು. ಆದರೆ ಆ ಚೇತನವು ಜನಿವಾರವನ್ನು ತೊಟ್ಟದ್ದರಿಂದ ಅವನು ಅದಕ್ಕೆ ಕೊನೆಯ ಏಟನ್ನು ಹಾಕಲು ಹಿಂಜರಿದನು. ಆಗ ಲಕ್ಷ್ಮಿಯು ಅರಸನ ಶ್ರದ್ಧಾಭಕ್ತಿಗಳನ್ನು ಕಂಡು, ಪ್ರಬಲರಾದ ರಾಜರ ಪರಂಪರೆಗೆ ಮೂಲ ಪುರುಷನಾಗುವೆಯೆಂದು ಅಭಯವನ್ನಿತ್ತು ಅವನನ್ನು ಹರಸಿದಳು. ತನ್ನ ಮತಾಚರಣೆಯನ್ನು ಪೂರ್ತಿಗೊಳಿಸಿದ ತರುವಾಯ ಭೈರವಾಚಾರ್ಯನು 'ಕೂದಲ ಕಟ್ಟು (Lock), ಕಿರೀಟ, ಕಿವಿಯುಂಗುರಗಳು, ಕೊರಳ ಸರ, ತೋಳುಬಂದಿ, ನಡುಪಟ್ಟಿ, ಸುತ್ತಿಗೆ ಹಾಗೂ ಕತ್ತಿಗಳನ್ನು' ಪಡೆದು ವಿದ್ಯಾವಿಹಾರನಾದನು.[43]

ನಮಗೆ ತಿಳಿದಿರುವಮಟ್ಟಿಗೆ ಮಹಾಕಾಲಹೃದಯ ಎಂಬ ಮೋಡಿ (Spell) ಸಂಸ್ಕೃತ ವಾಙ್ಮಯದಲ್ಲಿ ಇನ್ನೆಲ್ಲೂ, ಉಲ್ಲೇಖಿಸಲಾಗಿಲ್ಲ. ಬಾಣನ ಈ ಸ್ಪಷ್ಟವಾದ ಬಣ್ಣನೆಯಿಂದಾಗಿ ಅವನ ಮನದಲ್ಲಿ ಇಂಥದೊಂದು ನಿಜವಾಗಿ ನಡೆದ ಆಚರಣೆಯ ಕಲಾಪ ಇದ್ದಿತೆಂದು ಕಾಣುತ್ತದೆ. ಇಲ್ಲಿ ಎಲ್ಲಕ್ಕೂ ಹೆಚ್ಚಿನ ಗಮನಾರ್ಹವಾದ ಸಂಗತಿಯೆಂದರೆ ಬಾಣನು ಭೈರವಾಚಾರ್ಯನನ್ನು ತುಂಬ ಸಹೃದಯತೆಯಿಂದ ಚಿತ್ರಿಸಿದುದು. ಅವನೊಬ್ಬ ದುರುಳ ಮಾಂತ್ರಿಕನಾಗಿರದೆ, ಯೋಗ್ಯತೆಯುಳ್ಳ ಯತಿ, ಸ್ನೇಹಿತ ಹಾಗೂ ಬಾಣನಿಗೆ ಆಶ್ರಯದಾತ ಮನೆತನದ ಆತ್ಮವಿಶ್ವಾಸವುಳ್ಳ ಒಬ್ಬ ಸಂಸ್ಥಾಪಕನಾಗಿದ್ದಾನೆ. ಇದರಿಂದಾಗಿ ನಾವು ತರ್ಕಿಸಬಹುದಾದ ಸಂಗತಿ ಎಂದರೆ ಹದಿನೇಳನೆಯ ಶತಮಾನದ ಹೊತ್ತಿಗೆ ತಾಂತ್ರಿಕ ಮತವಲ್ಲದೆ ವಾಮಾಚಾರದ್ದೆಂದು ಹೇಳಲಾಗುವ ಮತವೂ ಕೂಡ ಹಲವು ಜನ ಗಣ್ಯರು ಹಾಗೂ ವಿದ್ವಾಂಸರಿಂದ ಸ್ವೀಕೃತವಾಗಿತ್ತು ಹಾಗೂ ಬೆಂಬಲವನ್ನು ಪಡೆದಿದ್ದಿತು ಎಂಬುದು. ಈ ಬಹಳಷ್ಟು ಜನ ಯತಿಗಳ ನಡತೆಯು, ನಾವು ನಂಬಬೇಕೆಂದು ಇವರ ಟೀಕಾಕಾರರು

---

42. ಅನು. ಕೊವೆಲ್ ಮತ್ತು ಥಾಮಸ್, ಪು. 92. ಸಂ. ಕಾಣೆ, Part I, text p. 51.

43. ಅನು. ಕೊವೆಲ್ ಮತ್ತು ಥಾಮಸ್, pp. 93-97. ಸಂ. ಕಾಣೆ, Part I, text pp. 51-54.

ಬಯಸಿದುದಕ್ಕಿಂತಲೂ ಹೆಚ್ಚು ಜಾಗರೂಕತೆಯಿಂದ ಕೂಡಿದುದಾಗಿರುತ್ತಿತ್ತು, ಎಂದು ಕೂಡ ಈ ಸಂಗತಿಯನ್ನಾಧರಿಸಿದ ಅನುಮಾನಕ್ಕೆ ನಾವು ಸಹಜವಾಗಿ ಬರಲು ಸಾಧ್ಯ. ಮಧ್ಯಯುಗದ ಶುರುವಿನಲ್ಲಿ ಕಾಪಾಲಿಕರಿಗೂ ಆಳುವವರ ಬೆಂಬಲ ಲಭ್ಯವಿತ್ತೆಂಬುದು ಪಶ್ಚಿಮ ಬಾರತದ ಎರಡು ಶಾಸನಗಳಿಂದ ತಿಳಿದು ಬರುತ್ತದೆ.[44] ಸಾರ್ವಜನಿಕರಿಂದ ಈ ಪರಂಪರೆಗೆ ಇರುವ ಬೆಂಬಲವು ಭವಭೂತಿಯ 'ಮಾಲತಿ ಮಾಧವ'ದಲ್ಲಿ ಕಂಡು ಬರುತ್ತದೆ. ಖಳನಾಯಕರಿಬ್ಬರೂ ಕಾಪಾಲಿಕರಾಗಿದ್ದರೂ, ಜೊತೆಗೆ ನಾಯಕ, ಯೋಗಿನಿಯಾದ ಸೌದಾಮಿನಿ ಕೂಡ ಕಾಪಾಲಿಕ ವ್ರತವನ್ನು ಆಚರಿಸುವವರಾಗಿದ್ದಾರೆ.[45]

ಬಾಣನ ಈ ಭೈರವಾಚಾರ್ಯನ ಪ್ರತಿರೂಪವೊಂದು ದಂಡಿಯ'ದಶಕುಮಾರ ಚರಿತ' (ಏಳನೆಯ ಶತಮಾನ)ದಲ್ಲಿ ಕಾಣಿಸಿಕೊಳ್ಳುತ್ತದೆ.[46] ಹತ್ತು ಜನ ಪ್ರಮುಖ ರಾಜಕುಮಾರರಲ್ಲಿ ಒಬ್ಬನಾದ ಮುಂತ್ರಗುಪ್ತನು ಕಲಿಂಗಧ ರಾಜಧಾನಿಯ ಹೊರಬದಿಯಲ್ಲಿದ್ದ ಸ್ಮಶಾನದ ಬಳಿಯ ಕಾಡಿನಲ್ಲಿ ದುಷ್ಟ ಬೈರಾಗಿಯನ್ನು ಕಂಡನು. ಈ ಅರಸುಗುವರನು ಗಂಡ ಹೆಂಡತಿಯರಾದ ಇಬ್ಬರು ಆಳುಗಳ ಮಾತುಗಳನ್ನು ಕದ್ದು ಆಲಿಸಿದನು. ತಮ್ಮ ಒಡೆಯನಾದ ಮಾಂತ್ರಿಕನು (ದಗ್ಧಸಿದ್ಧ), ತಾವಿಬ್ಬರೂ ಸಂತಸವಾಗಿ ಇರಲು ಬಿಡುವುದೇ ಇಲ್ಲವೆಂದು ಗೋಣಗಿಕೊಳ್ಳುತ್ತಿದ್ದರು. ಯಾರಾದರೂ ಹೊರಗಿನವರು ಬಂದು 'ಈ ದುರುಳ ಮಂತ್ರವಾದಿಯ ಮಾಂತ್ರಿಕ ಸಾಮರ್ಥ್ಯಕ್ಕೆ ತಡೆ ಹಾಕಬೇಕು'ಎಂದು ಕರೆಕೊಟ್ಟರು[47]. ಅರಸುಗುವರನಾದ ಮಂತ್ರಗುಪ್ತನು ಆ ಸಿದ್ಧನಾರು? ಹಾಗೂ ಅವನ ಸಿದ್ಧಿ ಎಂಥದು? ಎಂಬುದನ್ನು ಕಂಡು ಹಿಡಿಯಲೆಂದು ಅವರನ್ನು ಹಿಂಬಾಲಿಸಿ ಹೋಗುತ್ತಾನೆ. ತುಸು ದೂರ ನಡೆದಾದ ಬಳಿಕ ಅವನು ಆ ಸಿದ್ಧನನ್ನು ಕಂಡನು. ಮಾವನವ ಎಲುವಿನ ತುಣುಕುಗಳಿಂದ ತಯಾರಿಸಿದ ಒಡವೆಗಳಿಂದ ಅವನ ದೇಹವು ಸಿಂಗರಿಸಲ್ಪಟ್ಟಿತ್ತು. ಅದಕ್ಕೆ ಭಸ್ಮವನ್ನು ಬಳಿಯಲಾಗಿತ್ತು. ಯತಿಗಳಂತೆ ಜಡೆಗಟ್ಟಿದ ಅವನ ತಲೆಗೂದಲುಗಳು ಕೋಲ್ಮಿಂಚಿನ ಹಾಗೆ ಮಿಂಚುತ್ತಿದ್ದವು. ಅವನ ಎಡಗೈಯು ಎಳ್ಳು ಕಾಳು ಹಾಗೂ ಸಾಸಿವೆ ಕಾಳುಗಳನ್ನು ಬೆಂಕಿಗೆ ಎಸೆಯುವಾಗ ಅವು ಸಿಡಿದೇಳುತ್ತಿದ್ದವು. ಮಾಂತ್ರಿಕನು ಕಳಿಂಗದ ರಾಜನ ಕುವರಿಯಾದ ಕನಕಲೇಖಾಳನ್ನು ಕರೆತರುವಂತೆ ತನ್ನ ಆಳಿಗೆ ಅಪ್ಪಣೆ ಮಾಡಿದನು. ಆಳು ಅವಳನ್ನು ಕರೆತಂದನು. ಆಗ ಮಂತ್ರವಾದಿಯು ತನ್ನ ಕತ್ತಿಯಿಂದ ಆ ಅರಸುಗುವರಿಯ ತಲೆಯನ್ನು ಕತ್ತರಿಸಿ ಚೆಲ್ಲಲು ಹವಣಿಸಿದನು. ತತ್‌ಕ್ಷಣ ಮಂತ್ರಗುಪ್ತನು ಮುನ್ನುಗ್ಗಿ ಬಂದು, ಅವನ ಕತ್ತಿಯನ್ನು

---

44. ಕೆಳಕ್ಕೆ ನೋಡಿ, pp. 27-31.
45. ಸಂ. ಮತ್ತು ಅನು. ಸಿ. ಆರ್. ದೇವಧರ ಮತ್ತು ಎನ್. ಜಿ. ಸುರು, ಅಂಕ 1, ಪದ್ಯ 15ರ ತರುವಾಯ.
46. ಸಂ. ಮತ್ತು ಅನು. ಪಿ. ಸತಕೊಪನ್, ಪಿ. ಅನಂತಾಚಾರ್ಯ, ಮತ್ತು ಭಕ್ತವತ್ಸಲಮ್.
47. 'ಅಸ್ಮಾಣಕ ನರೇಂದ್ರಸ್ಯ...... ಸಿಧ್ಯಂತರಾಯಃ' ಸಂ. ಅದೇ. ಪದ್ಯ ಪುಟ 213-14.

ತಡೆಹಿಡಿದನಲ್ಲದೆ ಅದೇ ಕತ್ತಿಯಿಂದ ಆ ಮಾಂತ್ರಿಕನ ತಲೆಯನ್ನೇ ಕಡಿದು ನೆಲಕ್ಕುರುಳಿಸಿದನು.[48] ಈ ಕಥೆಯು ಭವಭೂತಿಯ 'ಮಾಲತಿ ಮಾಧವ'ದಲ್ಲಿ ಬರುವ ಇದೇ ಬಗೆಯ ಕಾಪಾಲಿಕ ಪ್ರಕರಣಕ್ಕೆ ಆಧಾರವನ್ನು ಒದಗಿಸಿರಲು ಸಾಕು.[49]

ಹಲವಾರು ಆಕರಗಳು ಕಾಪಾಲಿಕರು ಹಾಗೂ ದಕ್ಷಿಣ ಭಾರತದ ತಾಂತ್ರಿಕ ಯತಿಗಳ ಪುರಾತನ ಅಸ್ತಿತ್ವವನ್ನು ದೃಢೀಕರಿಸುತ್ತವೆ. ಬಾಣನ ಕೃತಿ ಹಾಗೂ 'ಮಾಲತಿ ಮಾಧವ'ದಲ್ಲಿ ನಾವು ಈಗಾಗಲೇ ಕಾಪಾಲಿಕರು ಶ್ರೀ ಪರ್ವತದೊಡನೆ ಹೊಂದಿದ್ದ ಒಡನಾಟಗಳನ್ನು ಗಮನಿಸಿದ್ದೇವೆ. ದಕ್ಷಿಣಭಾರತದ ಎಲ್ಲಕ್ಕೂ ಹೆಚ್ಚು ಮುಖ್ಯವಾದ ಆಕರ ಎಂದರೆ 'ಮತ್ತ ವಿಲಾಸ'. ಒಂದಂಕಿನ ಈ ಪ್ರಹಸನವು ಕ್ರಿ. ಶ. 600 ಹಾಗೂ 630ಗಳ ನಡುವೆ ಕಾಂಚಿಯನ್ನು ಆಳುತ್ತಿದ್ದ ಪಲ್ಲವ ರಾಜನಾದ ಮಹೇಂದ್ರವರ್ಮನ್‌ನಿಂದ ವಿರಚಿತ. ಈ ನಾಟಕದ ಮುಖ್ಯ ಪಾತ್ರವಾದ ಒಬ್ಬ ಕಪಾಲಿನ್ ಯತಿಯು ರಾಜಧಾನಿಯ ಬಳಿಯಲ್ಲಿದ್ದ ಏಕಾಂಬಿರನಾಥನ ದೇವಾಲಯದಲ್ಲಿ ವಾಸಿಸಿದ್ದಾನೆ. ಈ ಕೃತಿಯನ್ನು ಕುರಿತು ಕೆಳಕ್ಕೆ ಇನ್ನಷ್ಟು ವಿವರವಾಗಿ ಚರ್ಚಿಸುವಾ.[50] ಮಹೇಂದ್ರವರ್ಮನ್‌ನ ಸಮಕಾಲಿನನೂ, ಶೈವ ನಾಯ್ನಾರನೂ ಆದ ಅಪ್ಪರ್ ಎನ್ನುವವನು ತನ್ನ ನಾಡುನುಡಿಯ ಹಾಡುಗಳಲ್ಲಿ ಶೈವರು, ಪಾಶುಪತರು ಹಾಗೂ ಕಾಪಾಲಿಕರನ್ನು ಕುರಿತು ಉಲ್ಲೇಖಿಸುತ್ತಾನೆ.[51] ಮದ್ರಾಸಿನ ಉಪನಗರವಾದ ಮೈಲಾಪುರದಲ್ಲಿ ಇರುವ ಕಪಾಲೀಶ್ವರ ದೇವಾಲಯವು ಇನ್ನೊಬ್ಬ ನಾಯ್ನಾರನಾದ ಸಂಬಂಧರ್‌ನ (ಕ್ರಿ. ಶ. 644-660) ಒಂದು ಹಾಡಿನ ವಿಷಯವಾಗಿದೆ.[52] ಆರನೆಯ ಇಲ್ಲವೆ ಏಳನೆಯ ಶತಮಾನದ ತಮಿಳು ಮಹಾಕಾವ್ಯವಾದ 'ಮಣಿಮೇಖಲೈ'ದಲ್ಲಿ ಕಾಪಾಲಿಕ ಯತಿಗಳನ್ನು ಕುರಿತು ಇನ್ನೊಂದು ಕಿರಿದಾದ ಸಂದರ್ಭವು ಬರುತ್ತದೆ.[53]

ಹಲವಾರು ಪುರಾಣಗಳಲ್ಲಿ ಕಾಪಾಲಿಕರನ್ನು ತುಂಬ ಕೀಳುಗೆಯ್ಯಲಾಗಿದೆ. ಹಲವು ಭಾಗಗಳಿಂದ ಕೂಡಿದ ಈ ಗ್ರಂಥಗಳ ಕಾಲವನ್ನು ನಿರ್ಧರಿಸುವುದು ಅಸಾಧ್ಯವೇ ಎನ್ನಿಸುವಂತಿದ್ದರೂ ಅವುಗಳಲ್ಲಿ ಕೆಲವು, ಅಂದರೆ 'ಬ್ರಹ್ಮಾಂಡ', 'ವಾಯು' ಹಾಗೂ 'ಮತ್ಸ್ಯ'

---

48. ಅದೇ, text pp. 213-15.
49. ಮುಂದೆ ನೋಡಿ, pp. 56-57.
50. ಮುಂದೆ ನೋಡಿ, pp. 54-55.
51. ನೋಡಿ ಎಮ್. ಎ. ಡಿ. ರಂಗಸ್ವಾಮಿ, 'The Religion and Philosophy of Tēvāram', Book 1, ಪು. 392.
52. 'Tēvāram' ii. 183, cited by ಟಿ. ವಿ. ಮಹಾಲಿಂಗಮ್, 'The pāśupatas in South India'., JIH, XXVII (1949), 47.
53. vi. 86, ಉದ್ಧೃತ, ಕೆ. ಎ. ಎನ್. ಶಾಸ್ತ್ರಿ, 'The Cōlas', ಪು. 94 ನೋಡಿ ಎಸ್. ಕೆ. ಅಯ್ಯಂಗಾರ, 'Manimēkhalai in its Historical setting,' ಪು. 126.

ಪುರಾಣಗಳು ಕ್ರಿ.ಶ. ಮೂರರಿಂದ ಏಳನೆಯ ಶತಮಾನಗಳಷ್ಟು ಹಿಂದಿನ ಕಾಲದವು. ಕಲಿಯುಗವು ಪೂರ್ತಿ ಪ್ರಭುತ್ವದಲ್ಲಿದ್ದಾಗ ಕಾಷಾಯಿನ್ನರು, ನಿರ್ಗ್ರಂಥರು, ಕಾಪಾಲಿಕರು, ವೇದಗಳನ್ನು ಮಾರುವವರು. ತೀರ್ಥವನ್ನು ಮಾರುವವರು ಹಾಗೂ ವರ್ಣಾಶ್ರಮ ಧರ್ಮಕ್ಕೆ ವಿರೋಧಿಗಳಾದ ಬೇರೆ ಪಾಷಂಡಿ ಮತಗಳು ತಲೆಯೆತ್ತುತ್ತವೆ, ಎಂದು 'ವಾಯು', 'ಬ್ರಹ್ಮಾಂಡ' ಹಾಗೂ 'ಕೂರ್ಮ' ಪುರಾಣಗಳು ಒತ್ತಿ ಹೇಳುತ್ತವೆ.[54] ಸ್ವಯಂಭುವು (ಶಿವನು) ಎಲ್ಲಕ್ಕೂ ಮೊದಲಿಗೆ ಪಾಶುಪತಯೋಗವನ್ನು ಹಾಗೂ ಎಲ್ಲಕ್ಕೂ ಕೊನೆಯಲ್ಲಿ ಕಾಪಾಲ ಯೋಗವನ್ನು ಸೃಜಿಸಿದನೆಂದು 'ಬ್ರಹ್ಮಾಂಡ'ವು ii.116-17, ಸಾಧಿಸುತ್ತದೆ. 'ಸ್ಕಂದಪುರಾಣ'ವು ಪರಮೇಶ್ವರಿದೇವಿಯ ಪೂಜೆಯ ಭಾಗವಾಗಿ ಕಾಪಾಲಿಕರಿಗೆ ಹಾಗೂ ಗಂಡು, ಹೆಣ್ಣು ದಸ್ಯುಗಳಿಗೆ ಮದಿರೆಯ ಪಾತ್ರೆಗಳನ್ನು (ಸುರಾಸವ) ಹಂಚಬೇಕೆಂದು ವಿಧಿಸುತ್ತದೆ.[55]

## ಕಾಪಾಲಿಕ ಶಾಸನಗಳು

ಕಾಪಾಲಿಕರನ್ನು ಕುರಿತಾದ ಆಕರಗಳು ತೀರ ಕಡಿಮೆ. ಕೇವಲ ಎರಡು ಶಾಸನಗಳು ಕಾಪಾಲಿಕರೆಂದು ಖಚಿತವಾಗಿ ಕಾಣುವ ಮಹಾವ್ರತಯತಿಗಳಿಗೆ ನೀಡಲಾದ ಕಾಣಿಕೆಗಳನ್ನು ಉಲ್ಲೇಖಿಸುತ್ತವೆ. ಇದಲ್ಲದೆ ಕಾಪಾಲಿಕ ಪದವು ದಕ್ಷಿಣ ಕರ್ನಾಟಕ ಪ್ರಾಂತದ ಅವರ ಮುಖ್ಯ ಎದುರಾಳಿಗಳಾದ ಜೈನರಿಗೆ ಅರ್ಪಿಸಲಾದ ಬೇರೆ ಮೂರು ಶಾಸನಗಳಲ್ಲಿ ಕಾಣಿಸಿಕೊಳ್ಳುತ್ತದೆ. ಈ ಮೂರರಲ್ಲಿ ಎರಡು ಶಾಸನಗಳು ಹೆಸರಾದ ಶ್ರವಣ ಬೆಳ್ಗೊಳದವಾದರೆ ಒಂದು, ಮೈಸೂರು ಜಿಲ್ಲೆಯ ನರಸೀಪುರ ತಾಲೂಕಿನ ತಿರುಮಕೂಡಲದ್ದು. ಶ್ರವಣಬೆಳ್ಗೊಳದಲ್ಲಿರುವ ಶಾಸನ ಎಲ್ಲಕ್ಕೂ ಪ್ರಾಚೀನದ್ದಾಗಿದ್ದು, ಅದು ಪಶ್ಚಿಮದ ಗಂಗ ಅರಸನಾದ ಮುಮ್ಮಡಿ ಮಾರಸಿಂಹನು (ಕ್ರಿ.ಶ.690-974) ಜೈನ ಸಲ್ಲೇಖನ ವ್ರತದಿಂದ (ಸಾವು ಬರುವವರೆಗಿನ ಉಪವಾಸ) ತೀರಿ ಕೊಂಡುದನ್ನು ಉಲ್ಲೇಖಿಸುತ್ತದೆ.[56] ಇದನ್ನು ಸಂಸ್ಕೃತ ಹಾಗೂ ಹಳಗನ್ನಡಗಳಲ್ಲಿ ಬರೆಯಲಾಗಿದೆ. ಲೇಖಕನು ಮಾರಸಿಂಹನನ್ನು ಕಾಪಾಲಿಕರ ದೇವನಾದ ಶಿವನೊಡನೆ ಈ ರೀತಿ ಹೋಲಿಸುತ್ತಾನೆ:

ಮಾಂಡಲಿಕತ್ರಿನೇತ್ರನ (ಮಾಂಡಲಿಕರಲ್ಲಿ ತ್ರಿನೇತ್ರನಂತೆ ಅಥವಾ ಶಿವನಂತೆ

---

54. 'ವಾಯು ಪುರಾಣ', ಆನಂದಾಶ್ರಮ ಆವೃತ್ತಿ, I viii. 64-65; 'ಬ್ರಹ್ಮಾನಂದ ಪುರಾಣ,' ವೆಂಕಟೇಶ್ವರ ಪ್ರೆಸ್ ಆವೃತ್ತಿ, ii. 31.64-66; ಮತ್ತು 'ಕೂರ್ಮ ಪುರಾಣ' i. 30 (ಪು. 304). 'ಮತ್ಸ್ಯ ಪುರಾಣ'ದಲ್ಲಿ (ಆನಂದಾಶ್ರಮ ಆವೃತ್ತಿ, cxliv. 40) ಕಾಪಾಲಿಕರನ್ನು ಕಲಿಯುಗದ ಪ್ರಜೆಗಳಲ್ಲಿ ಸೇರ್ಪಡಿಸಲಾಗಿದೆ.

55. ವೆಂಕಟೇಶ್ವರ ಪ್ರೆಸ್ ಆವೃತ್ತಿ, 'ಪ್ರಭಾಸಖಂಡ'. 87.51-52.

56. ಸಂ. ಮತ್ತು ಅನು. ಆರ್. ನರಸಿಂಹಾಚಾರ, EC, Vol (rev.ed.), no. 59. ಅಲ್ಲದೆ ಸಂ. ಮತ್ತು ಅನು. ಜೆ. ಎಫ್. ಫ್ಲೀಟ್, ಶ್ರವಣ ಬೆಳ್ಗೊಳ ಶಾಸನ, ಮಾರಸಿಂಹನದು II, EI. V (1898-99). 151-80.

ಇದ್ದವನು) ವೈಭವವು ------ಹೀಗೆ ಹೆಸರಾಗಿದ್ದಿತು: ಕಾಪಾಲಿಕರು, ಅದೇ ತಾನೆ ಕಡಿದು ಚೆಲ್ಲಿದ ಪಲ್ಲವರ ತಲೆಗಳನ್ನು ಒಂದು ದಾರದಲ್ಲಿ ಪವಣಿಸಿ ಹಗೆಗಳ ಮಾಂಡಲಿಕರೆದುರು ಹೀಗೆ ಉದ್ಘೋಷಿಸುತ್ತಾರೆ- 'ಅಹೋ!ದಾರದಲ್ಲಿ ಪವಣಿಸಲು ನಿಮ್ಮ ಶಿರಚ್ಛೇದನಕ್ಕೆ ಮತ್ತು ಅವಕಾಶ ಮಾಡಿ ಕೊಡಬೇಡಿ. ನಮ್ಮ ಮಾತನ್ನು ಕೇಳಿರಿ ಮತ್ತು ಅವನ (ಮಾಂಡಲಿಕ ತ್ರಿನೇತ್ರನ) ಅಡಿಯಾಳುಗಳಾಗಿ ನೆಮ್ಮದಿಯಿಂದ ಬಾಳಿರಿ'.[57]

ಈ ಪ್ಯಾರಾದ ಸ್ಪಷ್ಟವಾದ ಉದ್ದೇಶವು ಅರಸನ ಸಾಂಪ್ರದಾಯಿಕ ಹಗೆಗಳಾದ ಪಲ್ಲವರ ಬಗೆಗಿನ ಅವನ ಕ್ರೌರ್ಯವನ್ನು ಎತ್ತಿ ತೋರಿಸುವುದಾಗಿದೆ. ಅಂದ ಮಾತ್ರಕ್ಕೆ ಅದು ಶೈವವಾದದ ಬಗೆಗೆ ಯಾವುದೇ ಬಗೆಯ ಸಹಾನುಭೂತಿಯನ್ನು ಹೊಂದಿದೆ, ಎಂದೇನೂ ಅಲ್ಲ. ಕಾಪಾಲಿಕರು ಧಾರ್ಮಿಕ ಕೂಲಿಯ ಸಿಪಾಯಿಗಳಾಗಿ ಇಲ್ಲವೆ ಕಾಳಗದ ಕಣದ ಮೇಲಿನ ಕಸಗುಡಿಸುವವರಾಗಿ ಕಾಣುತ್ತಾರೆ. ಅವರು ಧಾರ್ಮಿಕ ಕೂಲಿಯ ಸಿಪಾಯಿ ಹೋರಾಟಗಾರರಾಗಿರುವ ಸಾಧ್ಯತೆಯು ಮಾಧವಾಚಾರ್ಯರ 'ಶಂಕರ ದಿಗ್ವಿಜಯ'ದಲ್ಲಿ [58] ಯೋಧರಂತಿರುವ ಕಾಪಾಲಿಕರ ತಂಡದ ಬಣ್ಣನೆಯಿಂದ ಸ್ಪಷ್ಟಗೊಳ್ಳುತ್ತದೆ. ಶಾಸನದಲ್ಲಿ ನಮೂದಿತರಾದ ಈ ಕಾಪಾಲಿಕರು ಯಾವ ದಾರದಲ್ಲಿ ರಾಜನ ಹಗೆಗಳಾದ ಪಲ್ಲವರ ತಲೆಗಳನ್ನು ಪವಣಿಸಿ ಇರಿಸಿದರೋ, ಅವೆಂದರೆ ಈ ಯತಿಗಳ ತಲೆಬುರುಡೆಗಳ ಸಾಂಪ್ರದಾಯಿಕ ಕೊರಳ ಹಾರಗಳಾಗಿವೆಯೆಂದು ಕಾಣುತ್ತದೆ.

ಕರ್ನಾಟಕದ ಉಳಿದೆರಡು ಶಾಸನಗಳು ಸಂಸ್ಕೃತದಲ್ಲಿ ಬರೆದವುಗಳಾಗಿದ್ದು ಅವು ಹನ್ನೆರಡನೆಯ ಶತಮಾನದಿಂದೀಚಿನವುಗಳು. ಇವುಗಳಲ್ಲಿ ಶ್ರವಣಬೆಳ್ಗೊಳ ಶಾಸನವು, ಜೈನಗುರುವಾದ ಮಲ್ಲಿಸೇಣ ಮಲಧಾರಿದೇವನು 'ಸಲ್ಲೇಖನ'ದಿಂದ ಕ್ರಿ.ಶ. 1129ರಲ್ಲಿ ಮರಣ ಹೊಂದಿದುದರ ಸ್ಮಾರಕವಾಗಿದೆ.[59] ಇದೇ ಬಗೆಯಾಗಿ ನರಸೀಪುರ ತಾಲೂಕಿನ ತಿರುಮಕೂಡಲದ ಕ್ರಿ.ಶ. 1183ರ ಶಾಸನವು ಚಂದ್ರಪ್ರಭನೆಂಬ ಗುರುವಿನ ಸ್ಮಾರಕವಾಗಿದೆ.[60] ಇವೆರಡೂ ಶಾಸನಗಳು ದೀರ್ಘವಾದ ಗುರು ಪರಂಪರೆಯ ಯತಿಗಳ ಸಾವನ್ನು ನಮೂದಿಸುತ್ತವೆ. ಈ ಪರಂಪರೆಗಳು, ಇವರಿಬ್ಬರೂ ಯತಿಗಳು ಒಂದೇ ಗುರು ಪರಂಪರೆಯವರಾಗಿದ್ದರೆಂದು ತೋರಿಸುತ್ತವೆ. ಮಲ್ಲಿಸೇಣನ ಹೆಸರು ಮುಂದಿನ ಶಾಸನಗಳಲ್ಲಿ ಕಂಡು ಬರುವುದಿಲ್ಲ. ಅದನ್ನು

---

57. ಅನು. ನರಸಿಂಹಾಚಾರ. ಗ್ರಂಥಪಾಠವು ಕನ್ನಡದಲ್ಲಿದೆ.
58. ಮುಂದೆ ನೋಡಿ, pp. 39-46.
59. ಸಂ. ಮತ್ತು ಅನು. ಆರ್. ನರಸಿಂಹಾಚಾರ, EC, Vol. II (rev. ed.), no. 67. ಅಲ್ಲದೆ ಸಂ. ಮತ್ತು ಅನು. E. Hultzsch, 'Shravana Belgola Epitaph of Mallisena', EI III (1894-95), 184-207.
60. ಅನು. Hultzsch, EI, III, vs. 26.

ಅಳಿಸಿ ಹಾಕಿದ್ದರೆ ಮಾತು ಬೇರೆ. ಇವೆರಡೂ ಶಾಸನಗಳು ವಿಮಲಚಂದ್ರನೆಂಬ ಒಬ್ಬ ಪ್ರಾಚೀನ ಯತಿಯನ್ನು ಕುರಿತ ಒಂದು ಪದ್ಯವನ್ನು ಉದ್ಧರಿಸುತ್ತವೆ. ಈತನು ಕಾಪಾಲಿಕರು ಹಾಗೂ ಇನ್ನಿತರ ಎದುರಾಳಿಗಳನ್ನು ಉದ್ದೇಶಿಸಿ ವಾದಕ್ಕೆ ಆಹ್ವಾನಿಸುವ ಎಂದು ಓಲೆಯನ್ನು ಬರೆದು ನೇತುಬಿಟ್ಟಿದ್ದನು. ಅದರ ಒಕ್ಕಣೆ ಹೀಗಿತ್ತು:

> ಉನ್ನತ ಮನಸ್ಸಿನವನೂ, ಆಶಾಂಬರನೂ (ಅಂದರೆ ದಿಗಂಬರ) ಆದ ವಿಮಲಚಂದ್ರನು, ಸಮರ್ಥ ಅರಸರ ಕುದುರೆ ಹಾಗೂ ಆನೆಗಳ ಸಂದಣಿಯಿಂದ ತುಂಬಿರುತ್ತಿದ್ದ ಶತ್ರು ಭಯಂಕರನ ವಿಶಾಲವಾದ ಅರಮನೆಯ ಹೆಬ್ಬಾಗಿಲಿಗೆ ಶೈವ, ಪಾಶುಪತ, ತಥಾಗತನ (ಬೌದ್ಧ) ಅನುಯಾಯಿ, ಕಾಪಾಲಿಕ (ಹಾಗೂ) ಕಾಪಿಲರನ್ನು ಉದ್ದೇಶಿಸಿ ಬರೆದ ಒಂದು ಓಲೆಯನ್ನು ಆತುರದಿಂದ ಅಂಟಿಸಿದನು.[61]

ಶತ್ರುಭಯಂಕರ ಎನ್ನುವುದು ಒಂದು ಅಂಕಿತ ನಾಮವಾಗಿದ್ದರೆ ಈ ವ್ಯಕ್ತಿಯನ್ನು ಕಂಡು ಹಿಡಿಯಲು ಸಾಧ್ಯವಿಲ್ಲ. ಇದರಿಂದಾಗಿ ವಿಮಲಚಂದ್ರನ ಕಾಲವು ಅನಿರ್ಧಾರಿತವಾಗಿ ಉಳಿದಿದೆ. ಈ ತೊಂದರೆಗಳನ್ನು ಇನ್ನಷ್ಟು ಹೆಚ್ಚಿಸಲೆಂಬಂತೆ ಯತಿಗಳ ಪಟ್ಟಿಯು 'ಒಂದಕ್ಕೊಂದು ಸಂಬಂಧಪಟ್ಟುದೂ, ಪೂರ್ತಿಯಾದುದೂ ಆಗಿಲ್ಲ. ಇಷ್ಟೇ ಅಲ್ಲದೆ ಅದು ಕರಾರುವಕ್ಕಾಗಿ ಕ್ರಮಬದ್ಧವಾಗಿದೆಯೆಂದು ಸ್ಥಾಪಿಸಲು ಬಾರದಂತೆಯೂ ಇದೆ.'[62] ಆದರೆ ಈ ಪಟ್ಟಿಯ ಬಹಳಷ್ಟು ಭಾಗವು ಕ್ರಮಬದ್ಧವಾಗಿರುವ ಕಾರಣ ಈ ಯತಿಗಳ ಕಾಲಾವಧಿಗಳನ್ನು ನಿರ್ಧರಿಸಬಹುದಾಗಿದೆ. ಮಲ್ಲಿಷೇಣನ ಶಾಸನದಲ್ಲಿ ಹೆಸರಿಸಲಾದ ನಲವತ್ತು ಜನ ಯತಿಗಳಲ್ಲಿ ವಿಮಲಚಂದ್ರನು ಹತ್ತೊಂಬತ್ತನೆಯವನು. ವಾದಿರಾಜನಿಂದ ಕ್ರಿ.ಶ.1025ದಲ್ಲಿ ರಚಿಸಲಾದ 'ಪಾರ್ಶ್ವನಾಥ ಚರಿತ್ರೆ'ಯಲ್ಲಿ ವಿಮಲಚಂದ್ರನು ಸಿಂಹಪುರದ ಶ್ರೀಪಾಲನ ಶಿಷ್ಯನಾದ ಮತಿಸಾಗರನ ಶಿಷ್ಯನಾಗಿದ್ದನೆಂದು ಹೇಳಲಾಗಿದೆ.[63] ಆದರೆ ಸಮಾಧಿಲೇಖನದ ಪಟ್ಟಿಯಲ್ಲಿ ಹದಿನೆಂಟನೆಯ ಯತಿಯು ಪುಷ್ಪಸೇನ ಎನ್ನುವವನು. ಅವನು ಹದಿನೇಳನೆಯ ಕ್ರಮಾಂಕದವನಾದ ಅಕಲಂಕನ ಸಮಕಾಲೀನನು. ಅಕಲಂಕನು ಸಾಹಸತುಂಗನೆಂಬ ಅರಸನನ್ನು ಉದ್ದೇಶಿಸಿ ಬರೆದ ಮೂರು ಪದ್ಯಗಳನ್ನು ಉದ್ಧರಿಸಲಾಗಿದೆ. ಕೊನೆಯ ಪದ್ಯದಲ್ಲಿ ಅವನು 'ಧೂರ್ತ ಅರಸನಾದ ಹಿಮಶೀತಲನ ಓಲಗದಲ್ಲಿ ನಾನು ಬೌದ್ಧರ ಜನಜಂಗುಳಿಯನ್ನೆಲ್ಲ ಹಿಮ್ಮೆಟ್ಟಿಸುವೆನು'ಎಂದು[64] ಸಾಧಿಸುತ್ತಾನೆ. ಅಕಲಂಕನ ಸಾಹಸಕೃತ್ಯಗಳನ್ನು ಇತರ ಜೈನ

---

61. ಅನು. Hultzsch, EI, III. vs. 26.
62. ಅದೇ, ಪು. 185.
63. ನರಸಿಂಹಾಚಾರ, EC, II (rev. ed.), ಪು. 84.
64. ಅನು. ಅದೇ, no. 67.

ಕೃತಿಗಳಾದ 'ರಾಜಾವಲಿ ಕಥೆ', 'ಅಕಲಂಕಚರಿತ', 'ಅಕಲಂಕಸ್ತೋತ್ರ' ಹಾಗೂ ಜಿನಸೇನನ 'ಆದಿ ಪುರಾಣ'ಗಳಲ್ಲಿ ಬಣ್ಣಿಸಲಾಗಿದೆ.[65] ಈ ಕೃತಿಗಳು ಕಾಂಚಿಯನ್ನು ಹಿಮಶೀತಲನ ರಾಜಧಾನಿಯೆಂದು ಗುರುತಿಸುತ್ತವೆ. 'ಅಕಲಂಕಚರಿತ'ದ ಹೇಳಿಕೆಯಂತೆ ಅಕಲಂಕನು 'ವಿಕ್ರಮಾರ್ಕ ಶಕಾಬ್ದೀಯ'ಎಂದು ಗುರುತಿಸಲ್ಪಡುವ 700ನೆಯ ಶಕ ವರ್ಷದಲ್ಲಿ ಬೌದ್ಧರನ್ನು ಸೋಲಿಸಿದನು.[66] ಅಸ್ಪಷ್ಟವಾದ ಈ ಪದವು ವಿಕ್ರಮ ಇಲ್ಲವೆ ಶಕ ಕಾಲಗಣನೆಯನ್ನು ಸೂಚಿಸುತ್ತಿರಲು ಸಾಕು. ಎರಡನೆಯ ಕೃತಿಯನ್ನು ಅವಲಂಬಿಸಿದರೆ, ಈ ಪ್ರದೇಶದಲ್ಲಿ ಬಳಸಲಾಗುವ ಶಕದ ಪ್ರಕಾರ ಈ ಕಾಲವು ಕ್ರಿ. ಶ. 642-43 ಎಂದಾಗುತ್ತದೆ. ಮೂರನೆಯ ಕೃತಿಯು ಅವನ ವಿಜಯದ ಕಾಲವನ್ನು ಶಾಲಿವಾಹನ ಶಕ 710ರ ತರುವಾಯದ 'ಹಿಮ ಶೀತಲ ಮಹಾರಾಜನ' ಆಳ್ವಿಕೆಯ ಅವಧಿಯೆಂದು ಹೇಳುತ್ತದೆ.[67] ಇದು ಕ್ರಿ.ಶ.787-88 ಕ್ಕೆ ಸಮನಾದುದು. ಬಿ. ಎಲ್. ರೈಸ್ ಅವರು ಹೇಳುವಂತೆ '(ಅಕಲಂಕನ ವಿಜಯದ) ಈ ಕಾಲವನ್ನು ಗೊತ್ತುಪಡಿಸಲು 'ಜೈನರ ಬಳಿಯಿರುವ ಮಿತಿಯು ಸ್ಮಾರಕದ ವಾಕ್ಯವಾದ 'ಸಪ್ತ ಶೈಲಾದ್ರ' ಎಂಬುದಾಗಿದೆ. ಇದಕ್ಕೆ ಸಮಾನವಾದ ವರ್ಷವೆಂದರೆ 777 ಶಕ=855 ಕ್ರಿ. ಶ.[68] ಈ ಕಾಲಲೇಖನವು (ಕ್ರೋನೋಗ್ರಾಮ್) ಬರಿ ಒಂದು ಗೂಢವಾದ ಸಂಖ್ಯೆ ಅಷ್ಟೇ. ಜಿನಸೇನನ 'ಆದಿಪುರಾಣದ ಕಾಲವು ಸರಿಯಾಗಿದ್ದರೆ (ಕ್ರಿ.ಶ.782ರಿಂದ 838ರ ನಡುವೆ)[69] ಅಕಲಂಕನಿಗಾಗಿ ಕ್ರಿ.ಶ.855 ನೆಯ ವರ್ಷವು ತುಂಬ ತಡವಾದುದು, ಎನಿಸುತ್ತದೆ. ಪಲ್ಲವರು ಎಂಟನೆಯ ಶತಮಾನದಲ್ಲಿ ಕಾಂಚಿಯನ್ನು ಆಳುತ್ತಿದ್ದರು. ಆದರೆ ಅವರ ಪೈಕಿಯ ಯಾವ ಅರಸನ ಹೆಸರು ಕೂಡ ಹಿಮಶೀತಲನೆಂದು ಇರಲಿಲ್ಲ. ಆದರೂ ಅಕಲಂಕನನ್ನು ಇದೇ ಕಾಲಾವಧಿಗೆ ಸೇರಿಸುವುದು ಎಲ್ಲಕ್ಕೂ ಉತ್ತಮ. ಅಂದ ಬಳಿಕ ಅಕಲಂಕನು ಯಾವ ಅರಸನ ಎದುರು ತನ್ನ ಕೇಳಿಕೆಯನ್ನಿರಿಸಿದನೋ ಆ ಸಾಹಸತುಂಗನೆಂದರೆ ರಾಷ್ಟ್ರಕೂಟ ಅರಸನಾದ ದಂತಿದುರ್ಗ (ಕ್ರಿ. ಶ. 733-758) ನಾಗಿರಲು ಸಾಕು.[70] ವಿಮಲಚಂದ್ರನು ಅಕಲಂಕನ ಬಲು ದೀರ್ಘಕಾಲದ ತರುವಾಯ ಬಂದವನಾಗಿದ್ದರೆ, ಅವನು ಒಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಜೀವಿಸಿರಲೇಬೇಕು. ಮಲ್ಲಿಷೇಣನ ಪಟ್ಟಿಯ 21ನೆಯ ಕ್ರಮಾಂಕದ ಯತಿಯಾದ ಪರವಾದಿ ಮಲ್ಲನು ಕೃಷ್ಣರಾಜನೆಂಬ ಅರಸನ ಎದುರಿನಲ್ಲಿ ವಾದಮಾಡಿದನೆಂದು ಹೇಳಲಾಗಿದೆ. ಇವನೆಂದರೆ ಕ್ರಿ.ಶ.877 ಮತ್ತು 913ರ ನಡುವಿನ ಕಾಲದಲ್ಲಿ ಆಳಿದ ರಾಷ್ಟ್ರಕೂಟ ಇಮ್ಮಡಿ

---

65. ನೋಡಿ Hultzsch, EI III, 187.

66. ನೋಡಿ ನರಸಿಂಹಾಚಾರ, EC, II (rev. ed.), ಪು. 84.

67. ಟೆಯ್ಲರ, 'Catalogue', III, 436f, cited by Hultzsch, EI, III, 187.

68. Ec, II, intro. ಪು. 45.

69. Hultzsch, EI, III, 187.

70. ನೋಡಿ ಬಿ. ಎ. ಸಲೆಟೋರ್, 'Mediaeval Jainism, pp. 34-37.

ಕೃಷ್ಣನಾಗಿರಬಹುದು.[71]

ಈ ರೀತಿ ಕರ್ನಾಟಕದ ಈ ಮೂರು ಶಾಸನಗಳು ಸೂಚಿಸುವುದೇನೆಂದರೆ ಕಾಪಾಲಿಕರು ಒಂಬತ್ತು ಹಾಗೂ ಹತ್ತನೆಯ ಶತಮಾನಗಳಲ್ಲಿ ದಕ್ಷಿಣ ಮೈಸೂರು ಪ್ರದೇಶದಲ್ಲಿ ನೆಲೆಸಿದ್ದರೆಂದು. ಈ ಸಂಗತಿಯು ಕರ್ನಾಟಕ ಪ್ರದೇಶದಲ್ಲಿ ಸಂಚರಿಸುವಾಗ ಶಂಕರಾಚಾರ್ಯರು ಈ ಯತಿಗಳೊಡನೆ ಹೋರಾಡಿದ ಆಖ್ಯಾಯಿಕೆಯನ್ನು ನಂಬಲರ್ಹವನ್ನಾಗಿ ಮಾಡುತ್ತದೆ.[72] ಮಹೇಂದ್ರವರ್ಮನ 'ಮತ್ತ ವಿಲಾಸ'ದಿಂದ ನಮಗೆ ಈಗಾಗಲೇ ತಿಳಿದು ಬಂದಿರುವ ಸಂಗತಿಯೆಂದರೆ ಏಳನೆಯ ಶತಮಾನದ ಶುರುವಿನಿಂದಲೇ ಕಾಪಾಲಿಕರು ದಕ್ಷಿಣ ಭಾರತದಲ್ಲಿ ನೆಲೆಸಿದುದು.[73] ಈಗ ಮಹಾವ್ರತ ಯತಿಗಳಿಗೆ ನೀಡಲಾದ ದಾನಗಳನ್ನು ಕುರಿತ ಎರಡು ಶಾಸನಗಳನ್ನು ಇಲ್ಲಿ ಚರ್ಚಿಸಬಹುದು. ಇಲ್ಲಿ ದಾನ ಸ್ವೀಕರಿಸಿದ ಯತಿಗಳು ಪಶ್ಚಿಮ ಭಾರತದಿಂದ ಬಂದ ಕಾಪಾಲಿಕರಾಗಿರುವ ಸಾಧ್ಯತೆಯಿದೆ. ಇವೆರಡೂ ಶಾಸನಗಳು ಈ ಯತಿಗಳನ್ನು ಕಾಪಾಲಿನ್ ಅಥವಾ ಕಾಪಾಲೇಶ್ವರ ರೂಪದ ಶಿವನೊಂದಿಗೆ ಜೋಡಿಸುತ್ತವೆ. ಮೊದಲಿನ ಶಾಸನ ತಾಮ್ರಪಟದ್ದಿದ್ದು, ಇಮ್ಮಡಿ ಪುಲಕೇಶಿಯ ಸೋದರಳಿಯ ಹಾಗೂ ಜಯಸಿಂಹನ ಮಗನಾದ ಪೂರ್ವ ಚಾಲುಕ್ಯರ ನಾಗವರ್ಧನನು ಏಳನೆಯ ಶತಮಾನದ ಮಧ್ಯದ ಸುಮಾರಿಗೆ ಬರೆಯಿಸಿದುದಾಗಿದೆ.[74] ಇದು ನಾಸಿಕ ಜಿಲ್ಲೆಯ ಇಗತಪುರಿ ಬಳಿಯಲ್ಲಿರುವ ನಿರ್ಪಣ ಎಂಬ ಊರಿನ ನಿವಾಸಿಯೊಬ್ಬನ ಬಳಿ ದೊರೆತಿದೆ. ನಾಗವರ್ಧನನು ಅಂದಿನ ಹಾಗೂ ಮುಂದಿನ ಅರಸರೆಲ್ಲರಿಗೂ ಹೀಗೆ ಅರುಹಿದ್ದಾನೆ:

> ನಿಮಗಿದು ತಿಳಿದಿರಲಿ. ಏನೆಂದರೆ------ಬಲಾಮ್ಮ ಠಕ್ಕುರರ ಕೋರಿಕೆಯ ಮೇರೆಗೆ ಗೋಪರಾಷ್ಟ್ರ ಜಿಲ್ಲೆಯಲ್ಲಿರುವ ಬಲೆಗ್ರಾಮವನ್ನು------- ದೇವಾಲಯದ (ದೇವನಾದ) ಕಾಪಾಲೇಶ್ವರನ ಗುಗ್ಗುಳ ಪೂಜೆ ಮತ್ತು ------ಅಲ್ಲಿ (ದೇವಾಲಯದಲ್ಲಿ)ವಾಸಿಸುವ ಮಹಾನ್ ಯತಿಗಳಿಗೆಂದು (ಮಹಾವ್ರತಿನ್) ನಮ್ಮಿಂದ ನೀಡಲಾಗಿದೆ.[75]

ಈ ಬಲೆಗ್ರಾಮ ಎಂದರೆ ಇಗತಪುರಿಯ ಈಶಾನ್ಯಕ್ಕೆ ಸುಮಾರು ಹನ್ನೆರಡು ಮೈಲುಗಳ

---

71. ನೋಡಿ, ರೈಸ, EC, II, intro. p. 47.
72. ಕೆಳಕ್ಕೆ ನೋಡಿ, ಪು. 43.
73. ಮೇಲಕ್ಕೆ ಪು. 23.
74. ಸಂ. ಮತ್ತು ಅನು. ಜೆ. ಎಫ್. ಫ್ಲೀಟ್, 'Sanskrit and Old Canarese Inscriptions', IA, IX (1880), 123-25. ಅಲ್ಲದೆ ಸಂ. ಮತ್ತು ಅನು. ಆರ್. ಜಿ. ಭಾಂಡಾರಕರ, 'A Revised Transcript and Translation of a Chālukya Copper-plate Grant,' JBBRAS, XIV (1878-80), 16-28.
75. ಅನು. ಫ್ಲೀಟ್, IA, IX, 125.

ಅಂತರದ ಮೇಲಿರುವ ಇಂದಿನ ಬೆಲಗಮ್-ತರಾಳ್ವಾ ಎಂದು ಗುರುತಿಸಲಾಗಿದೆ.[76] ಈ ದೇವನನ್ನು ಕಾಪಾಲೇಶ್ವರ (ಕಾಪಾಲರ ದೇವ) ಎಂದು ಕರೆಯಲಾಗುವುದೇ ಹೊರತು ಕಪಾಲೇಶ್ವರ (ತಲೆ ಬುರುಡೆಯ ದೇವರು) ಎಂದಲ್ಲ; ಎಂಬ ಸಂಗತಿ ದೇವಾಲಯದಲ್ಲಿರುವ ಮಹಾವ್ರತಿನ್ನರು ಕಾಪಾಲಿಕರಾಗಿದ್ದರೆಂಬುದನ್ನು ದೃಢಪಡಿಸಲು ನೆರವಾಗುತ್ತದೆ. ಗುಗ್ಗುಳಪೂಜೆ ಎನ್ನುವ ಪದ ಬಹುಮಟ್ಟಿಗೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವವನ ತಲೆಯ ಮೇಲೆ ಉರಿಯುತ್ತಿರುವ ಗುಗ್ಗುಳವನ್ನು ಇರಿಸುವ ಒಂದು ವಿಧಿಯಾಗಿರಲು ಸಾಕು. ಹರ್ಷನ ತಂದೆಯ ಸಾವನ್ನು ತಪ್ಪಿಸಲೆಂದು ಅವನ ಪ್ರಜೆಗಳು ಪ್ರಾಯಶ್ಚಿತ್ತವನ್ನು ಅದಾವ ಬಗೆಯಲ್ಲಿ ಕೈಕೊಂಡಿದ್ದರೆಂಬುದನ್ನು ಆಗಲೆ ಗಮನಿಸಿದ್ದೇವೆ.[77] ಹರ್ಷನ ಪೂರ್ವಜನಾದ ಪುಷ್ಪಭೂತಿಯ ಗುರುವಾದ ಭೈರವಾಚಾರ್ಯನೂ ಈ ವಿಧಿಯನ್ನು ಕೈಕೊಂಡಿದ್ದನು.[78] ಸೋಮದೇವನ 'ಯಶಸ್ತಿಲಕದಲ್ಲಿ ಭಕ್ತರು ಚಂಡಮಾರಿಯ ದೇವಾಲಯದಲ್ಲಿ ತಮ್ಮ ತಲೆಗಳ ಮೇಲೆ ಉರಿಯುವ ಗುಗ್ಗುಳಗಳನ್ನು ಇರಿಸಿಕೊಳ್ಳುತ್ತಿದ್ದರೆಂದು ಹಾಗೂ ತಮ್ಮ ದೇಹಗಳಿಂಕದ ಕತ್ತರಿಸಿ ತೆಗೆದ ಮಾಂಸವನ್ನು ಮಾರುತ್ತಿದ್ದರೆಂದು ಹೇಳಲಾಗಿದೆ.[79]

ಕಾಪಾಲಿಕರ ಇನ್ನೊಂದು ತಾಮ್ರಪಟದ ಶಾಸನವು ಬಡೋದಾ ಜಿಲ್ಲೆಯ ತಿಲಕವಾಡಾ ಎಂಬಲ್ಲಿ ನರ್ಮದಾ ಹೊಳೆಯ ಪಾತ್ರದಲ್ಲಿ ದೊರಕಿದೆ.[80] ಅದು, ಶ್ರೀಘಂಟೇಶ್ವರನ ದೇವಾಲಯಕ್ಕೆಂದು ವಿಲುಹಜ ಎಂಬ ಗ್ರಾಮವನ್ನು ಕಾಣಿಕೆಯಾಗಿ ನೀಡಲಾದುದನ್ನು ನಮೂದಿಸುತ್ತದೆ. ಮಣಾ ಮತ್ತು ನರ್ಮದಾ ಹೊಳೆಗಳ ಸಂಗಮದ ಮೇಲಿರುವ ಮಹೇಶ್ವರನ ದೇವಾಲಯದಿಂದ ಈ ಶಾಸನವನ್ನು ಜಾರಿಗೊಳಿಸಲಾಗಿದೆ. ಕ್ರಿ.ಶ. 1047ರಲ್ಲಿ, ಪರಮಾರ ಅರಸನಾದ ಭೋಜ ಎನ್ನುವವನ ಒಬ್ಬ ಮಾಂಡಲಿಕ ಇಲ್ಲವೆ ಅಧಿಕಾರಿಯು ಈ ದತ್ತಿಯನ್ನು ನೀಡಿರುವನು. 'ಒಬ್ಬ ಮಹಾವ್ರತಧರನೂ, ದೇಹರೂಪಿಯಾದ ಶಂಕರನಂತಿದ್ದ ಒಬ್ಬ ಕಪಾಲಿಕನೂ ಆದ ದಿನಕರನೆಂಬ 'ಮುನಿ'ಯು' ಈ ದತ್ತಿಯನ್ನು ಸ್ವೀಕರಿಸಿದ್ದಾನೆ.[81] ಹನ್ನೆರಡನೆಯ ಶತಮಾನದ ವರೆಗಾದರೂ ಕಾಪಾಲಿಕರು ಗುಜರಾತದಲ್ಲಿ ನೆಲೆಸಿದ್ದರೆಂಬ ಸಂಗತಿ ಯಶಪಾಲನ 'ಮೋಹರಾಜ ಪರಾಜಯ'ದಿಂದ ನಮಗೆ ತಿಳಿದುಬಂದಿದೆ.[82]

---

76. ಅದೇ, ಪು, 123.

77. ಮೇಲಕ್ಕೆ ನೋಡಿ, ಪು. 17.

78. ಸಂ. ಕಾಣೆ, Part I, text. p. 46.

79. ನೋಡಿ ಕೆ. ಕೆ. ಹಂಡಿಕಿ. pp. 22, 358.

80. ಸಂ. ಮತ್ತು ಅನು. ಜೆ. ಎಸ್. ಕುಡಾಳಕರ, 'A Note on Tilak ẉ ad ā Copper-plate of the Time of King Bhoja Param āra of M ālw ā,' in All India Confrence, 'Proceedings and Transactions of 1st session, Poona, 1919, II,319-326.

81. ಅದೇ ಪು. 324 (ನನ್ನ ಅನುವಾದ).

82. ಮುಂದೆ ನೋಡಿ, ಪು. 52.

ಭಾರತದ ವಿವಿಧ ಹಲವಾರು ಶಾಸನಗಳು ಕಪಾಲೇಶ್ವರ ದೇವಾಲಯಗಳನ್ನು ಕುರಿತು ಉಲ್ಲೇಖಿಸುತ್ತವಾದರೂ ಇವುಗಳಲ್ಲಿ ಒಂದಾದರೂ ದೇವಾಲಯದಲ್ಲಿ ಮಹಾವ್ರತಿನ್‌ರಾಗಲಿ ಇಲ್ಲವೆ ಕಾಪಾಲಿಕ ಯತಿಗಳು ವಾಸಿಸುತ್ತಿದ್ದುದನ್ನಾಗಲೀ ಹೇಳುವುದಿಲ್ಲ. ಹಿಮಾಚಲ ಪ್ರದೇಶದ ಕಾಂಗ್ರಾ ಜಿಲ್ಲೆಯ ನಿರ್ಮಂಡ ಗ್ರಾಮದಲ್ಲಿ ದೊರೆತ ಮಹಾಸಾಮಂತ ಹಾಗೂ ಮಹಾರಾಜ ಸಮುದ್ರಸೇನನ ತಾಮ್ರ ಪಟದ ಶಾಸನವೊಂದು ಒಂದು ಗ್ರಾಮವನ್ನು ನಿರ್ಮಂಡದ ಅಗ್ರಹಾರದಲ್ಲಿದ್ದ ಅಥರ್ವವೇದದ ಬ್ರಾಹ್ಮಣರಿಗೆ ಕಾಣಿಕೆಯಾಗಿ ನೀಡಿದುದನ್ನು ನಮೂದಿಸುತ್ತದೆ.[83] ಕಪಾಲೇಶ್ವರನಿಗೆ ಮೀಸಲಾದ ದೇವಾಲಯದ ಮಿಹಿರೇಶ್ವರ ರೂಪದ ಶಿವನ ಪೂಜೆಗಾಗಿ ಒತ್ತಾಸೆಯನ್ನು ನೀಡಲೆಂದು ಈ ಕಾಣಿಕೆಯನ್ನು ನೀಡಲಾಗಿತ್ತು. ಶರ್ವವರ್ಮನ್‌ನೆಂಬ ರಾಜನು 'ಕಪಾಲೇಶ್ವರ ದೇವರ ಈ ಹಿಂದಿನ ಪ್ರತಿಷ್ಠಾಪನೆಯ ಕಾಲಕ್ಕೆ' ನೆಲವನ್ನು ನೀಡಿದ್ದನೆಂದು ಹೇಳಲಾಗಿದೆ. ಫ್ಲೀಟ್‌ರಿಂದ ಈ ಯಾವ ಅರಸನನ್ನೂ ಗುರುತಿಸಲು ಸಾಧ್ಯವಾಗಿಲ್ಲ. ಆದರೆ ಈ ದತ್ತಿ ಶಾಸನವು ಸುಮಾರು ಕ್ರಿ. ಶ. ಏಳನೆಯ ಶತಮಾನದ್ದೆಂದು ಅವರು ಊಹಿಸಿದರು. ಈ. ಎ. ಪೈರ್ಸ್ ಅವರು ಸೂಚಿಸುವಂತೆ ಈ ಸರ್ವವರ್ಮನ್‌ನೆಂದರೆ ಕ್ರಿ. ಶ. 576-580[84]ರ ನಡುವಿನ ಕಾಲದಲ್ಲಿ ಆಳುತ್ತಿದ್ದ ಇದೇ ಹೆಸರಿನ ಮೌಖರಿಯ ಅರಸನಂಥವನೇ ಆಗಿರುವ ಸಾಧ್ಯತೆಯಿದೆ. ಅಥರ್ವವೇದ ಬ್ರಾಹ್ಮಣರು ವಾಸ್ತವದಲ್ಲಿ ಕಾಪಾಲಿಕರಾಗಿದ್ದರೆ, ಆ ಸಂಪ್ರದಾಯವು ತಾನು ಈ ವೇದವನ್ನು ಅನುಸರಿಸುತ್ತಿರುವುದಾಗಿ ಸಾಧಿಸುವಂತೆ ತೋರುತ್ತದೆ. ಹಲವು ಶೈವತಂತ್ರಗಳು ಇದರಲ್ಲಿಯೇ ತಮ್ಮ ಅಧಿಕಾರದ ಮೂಲವನ್ನು ಕಂಡುಕೊಳ್ಳುತ್ತವೆ.[85]

ಕರ್ನಾಟಕದ ಹಾಸನ ಜಿಲ್ಲೆಯ ಲಕ್ಕುಂದ ಗ್ರಾಮದ ಒಂದು ಕನ್ನಡ ಶಾಸನವು 'ಬ್ರಾಹ್ಮಣ ಕುಟುಂಬಕ್ಕೆ ಅಲಂಕಾರದಂತಿದ್ದ ಹಾಗೂ ನೆದುನಾಡಿನ ನೆಕುಂದದ [=ಲಕ್ಕುಂದ] ಕಪಾಲೇಶ್ವರ ದೇವರ 'ಬ್ರಹ್ಮಾಧಿರಾಯ' (ಮತ್ತು) 'ಮೂಲಿಗ' ನಾದ[86] ಮಲ್ಲಿದೇವ ಎಂಬವನಿಂದ ವಾಸಂತಿಕಾದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸಲಾದುದನ್ನು' ನಮೂದಿಸುತ್ತದೆ. ಶಾಸನದ ಕಾಲವನ್ನು ಶಕೆ 777 ಎಂದು ನಮೂದಿಸಲಾಗಿದ್ದು, ಅದರ ಲಿಪಿಯು ಹತ್ತನೆಯ ಶತಮಾನದ ಮಾದರಿಯದಾಗಿದೆ.

ರಾಜಸ್ಥಾನದ ಹಿಂದಿನ ಕೊತಹ ಸಂಸ್ಥಾನದಲ್ಲಿ ಇರುವ ಕವಾಲ್ಜಿ (ಕಪಾಲಿನ್) ದೇವರ ಆಧುನಿಕ ದೇವಾಲಯದ ಒಂದು ಶಾಸನದ ಆರಂಭದಲ್ಲಿ ಗಣೇಶ ಹಾಗೂ

83. ಸಂ. ಮತ್ತು ಅನು. ಜೆ. ಎಫ್. ಫ್ಲೀಟ್, CII, III, 286-91.

84. 'The maukharis', p. 91.

85. ನೋಡಿ ಚಕ್ರವರ್ತಿ, pp. 10-14.

86. ಸಂ. in ARMAD 1940, pp. 145-46.

ಕಪಾಲೀಶ್ವರರನ್ನು ಕುರಿತಾದ ಒಂದು ಪದ್ಯವಿದೆ.[87] ಈ ಶಾಸನದ ಮಿತಿಯು ಕ್ರಿ. ಶ. 1288 ಎಂದಾಗಿದ್ದು ಅದು ರನಥಂಬೋರದ ಚಾಹಮಾನ ರಾಜನಾದ ಹಮ್ಮೀರನ ಆಳ್ವಿಕೆಯ ಕಾಲದ್ದಾಗಿದೆ. ಕಪಾಲೀಶ್ವರನನ್ನು ಕುರಿತು ಅಶುದ್ಧವಾದ ಸಂಸ್ಕೃತದಲ್ಲಿ ಬರೆಯಲಾದ ಅರೆ ಪದ್ಯವು ದೇಹವನ್ನು ಅಂದಗೆಡಿಸುವ ಕಾಯಿಲೆಗಳ ಪರಿಹಾರದ ಬಗೆಗೆ ಈ ದೇವರಲ್ಲಿ ವಿಶೇಷ ಸಾಮರ್ಥ್ಯವಿದೆ ಎಂಬುದಾಗಿ ಹೀಗೆ ಸೂಚಿಸುತ್ತದೆ:

> ಕಪಾಲೀಶ್ವರ ದೇವನು ದಯಮಾಡಿ ಜನ (ರಿಂದ) ನಿರೀಕ್ಷಿಸಲಾದುದನ್ನು ಮೈದಳೆದು ಬರುವಂತೆ ಮಾಡಲಿ ಹಾಗೂ ಕುಷ್ಠ ರೋಗ, ಆನೆಕಾಲು ರೋಗ ಹಾಗೂ ಚರ್ಮದ ಮೇಲೆ ಹುಟ್ಟಿಕೊಳ್ಳುವ ಗುಳ್ಳೆಗಳಿಂದಾಗಿ ಅಂದಗೆಟ್ಟ ದೇಹಗಳ ನೋವನ್ನು ಪರಿಹರಿಸಲಿ.[88]

ಮೈಸೂರು ಜಿಲ್ಲೆಯ ಅಂಬಲೆಯಲ್ಲಿ ಇರುವ ಕವಿಲೇಶ್ವರ ದೇವಾಲಯದ ಹದಿಮೂರನೆಯ ಶತಮಾನದ ಶಾಸನಗಳು ಕಪಾಲೇಶ್ವರನಿಗೆ ಅರ್ಪಿಸಲಾದ ಸಂಗತಿಗಳ ವಿವರಗಳನ್ನು ಒಳಗೊಂಡಿವೆ.[89] ಇವುಗಳಲ್ಲಿ ಒಂದನೆಯದು ಕೇರಳದ ಒಂದು ತಾಲೂಕು ಕೇಂದ್ರವಾದ ತಿರುವಲ್ಲ ಅಥವಾ ತಿರುವಲ್ಲವಾಲ ಎಂಬಲ್ಲಿರುವ ಒಂದು ವಿಷ್ಣು ದೇವಾಲಯದ (ಹುಜೂರ ಟ್ರೆಶರಿ ಪ್ಲೇಟುಗಳು) ಕಾಪಾಲಿಂಗಮ್‌ವನ್ನು ಹಾಗೂ ಎರಡನೆಯದು ವೇಳೂರು ಗ್ರಾಮದಲ್ಲಿದ್ದ ಕಾಫಾಲೀಶ್ವರನ ದೇವಾಲಯವನ್ನು ಕುರಿತು ಉಲ್ಲೇಖಿಸುತ್ತದೆ.[90] ಮೊದಲಿನ ಬಸ್ತರ ಪ್ರಾಂತದ ಕ್ರಿ.ಶ.1100ರ ಸುಮಾರಿನ ಒಂದು ಶಾಸನವು ಕಾಪಾಲಿಕ ಎಂಬ ಒಂದು ಗ್ರಾಮವನ್ನು ಕುರಿತು ಉಲ್ಲೇಖಿಸುತ್ತದೆ.[91]

ಮದ್ರಾಸಿನ ಒಂದು ಉಪನಗರವಾದ ಮೈಲಾಪುರದಲ್ಲಿ ಎಲ್ಲಕ್ಕೂ ಹೆಸರಾದ ಕಪಾಲೇಶ್ವರನ ದೇವಾಲಯ ಒಂದಿದೆ. ಏಳನೆಯ ಶತಮಾನದ ಶೈವಯತಿಯಾದ ತಿರುನಾನ ಸಂಬಂಧರ್ ಎನ್ನುವವನು ಸತ್ತ ಹುಡುಗಿಯೊಬ್ಬಳನ್ನು ಈ ಸ್ಥಳದಲ್ಲಿ ಜೀವಂತಗೊಳಿಸಿದನಂತೆ. ಅವಳ ತಂದೆಯು ತನ್ನ ಮಗಳ ಎಲುವುಗಳನ್ನು ಒಂದು ಮಣ್ಣಿನ ಮಡಕೆಯಲ್ಲಿ ಜೋಪಾನವಾಗಿ

---

87. ಸಂ. ಆರ್. ಆರ್. ಹಲ್ದರ್, 'Inscriptions of the Times of Hammir of Ranthambhor, dated (v. s) 1345,' EI, XIX, 45-52.

88. 'ಪದ್ರು ಶ್ಲೀಪದ ಕುಷ್ಠ ದುಷ್ಟ ವಪು(ಷ)ಆಂ ಆ(ಧ್)ಇ(ಂ) ವಿನಿ(ಘ್)ನ(ನ್ಸ್)ಣಾಂ ಕಾರುಣ್ಯೇನ ಸಮಿಹಿತಂ ವಿತನುತಾಂ(ದೆ)ವಾಃ ಕಪಾಲೀಶ್ವರಃ' ಸಂ. ಅದೇ, ಪು. 49.

89. ಸಂ. ಮತ್ತು ಅನು. ಬಿ. ಎಲ್. ರೈಸ್, EC, IV, Part II, nos, Y1, 6,7 and 8.

90. ಸಂ. ಟಿ. ಎ. ಜಿ. ರಾವ, 'The Huzur Treasury Plates Belonging to the Vishnu Temple at Tiruvalla,' TAS, II, 156 and 142.

91. ಸಂ. ಆರ್. ಬಿ. ಎಚ್. ಲಾಲ, 'Kuruspal stone Inscription of Some s varadeva,' EI, X, 25-31.

ಇರಿಸಿದ್ದನಂತೆ.[92] ಇಂದು ಇಲ್ಲಿರುವ ದೇವಾಲಯವು ತೀರ ಇತ್ತೀಚಿನ ಕಟ್ಟಡವಾಗಿದೆ.

ಶಿವ ಕಪಾಲಿನ್ ಅಥವಾ ಕಪಾಲೇಶ್ವರನ ಪುರಾಣಕಥೆಯೊಡನೆ ಜೋಡಿಸಲಾದ ಒಂದು ತೀರ್ಥಕ್ಷೇತ್ರವೆಂದರೆ ವಾರಣಾಸಿಯ ಗಂಗಾ ದಡದ ಮೇಲಿರುವ ಕಪಾಲಮೋಚನ ತೀರ್ಥ. ಇದೇ ಸ್ಥಾನದಲ್ಲಿ ಶಿವನನ್ನು ಶಾಪಮುಕ್ತನನ್ನಾಗಿ ಮಾಡಲಾಯಿತು ಮತ್ತು ಅವನಿಗೆ ತಲೆಬುರುಡೆಯ ಭಿಕ್ಷಾಪಾತ್ರೆಯನ್ನು ತ್ಯಜಿಸುವ ಅನುಮತಿಯನ್ನು ನೀಡಲಾಯಿತು.[93] ಗಾಹಡವಲ ರಾಜನಾದ ಗೋವಿಂದ ಚಂದ್ರನ (ಕ್ರಿ.ಶ.1114-54) ಒಂದು ತಾಮ್ರಪಟ ಶಾಸನವು ಹೇಳುವಂತೆ ಆ ರಾಜನು ಈ ಸ್ಥಾನದಲ್ಲಿ ಮಿಂದು ವ್ಯಾಸನೆಂಬ ಒಬ್ಬ ಬ್ರಾಹ್ಮಣನಿಗೆ ಒಂದು ಗ್ರಾಮವನ್ನು ಕಾಣಿಕೆಯಾಗಿ ನೀಡಿದನು.[94]

ಕೆ. ಸಿ. ಪಾಣಿಗ್ರಹಿ ಅವರು ಒಡಿಸಾದ ಭುವನೇಶ್ವರದಲ್ಲಿರುವ ಹೆಸರಾಂತ ವೈತಾಲ ದೇವಾಲಯವು ಮೂಲದಲ್ಲಿ ಕಾಪಾಲಿಕರದಾಗಿತ್ತೆಂದು ವಾದಿಸುತ್ತಾರೆ.[95] ಸುಮಾರು ಎಂಟನೆಯ ಶತಮಾನದ ಈ ದೇವಾಲಯದಲ್ಲಿ ಚಾಮುಂಡಾ ಮುಖ್ಯ ದೇವತೆಯಾಗಿದ್ದಾಳೆ. ಮೊದಲು ಇದಕ್ಕೆ ಈ ದೇವತೆಯ ಹೆಸರನ್ನೇ ಇಟ್ಟಿರುವ ಸಾಧ್ಯತೆ ಹೆಚ್ಚು. 'ಸ್ವರ್ಣಾದ್ರಿ ಮಹೋದಯ'ವು ಹೇಳುವ 'ಕೆರೆಯ ಪಶ್ಚಿಮಕ್ಕೆ ಅನತಿ ದೂರದಲ್ಲಿಯೇ ಒಂದೆಡೆ ತಲೆ ಬುರುಡೆಗಳ ಕೊರಳ ಮಾಲೆಯನ್ನು ಹಾಕಿಕೊಂಡವಳಾದ ಪೂಜ್ಯ ಚಾಮುಂಡಾ ದೇವಿಯು ಇರುವಳು------'ಹಾಗೂ ಅವಳ ರೂಪವು ಭಯಂಕರವಿದ್ದು ಅವಳನ್ನು ಕಾಪಾಲಿನಿಯೆಂದೆನ್ನಲಾಗುತ್ತದೆ'[96] ಎಂಬ ವಿವರಣೆಯು ವೈತಾಲ ದೇವಾಲಯವನ್ನೇ ನಿರ್ದೇಶಿಸುತ್ತದೆ. ಚಾಮುಂಡಾ ಎಂದರೆ ಕಾಪಾಲಿನಿ ಎನ್ನುವುದನ್ನು ಇತ್ಯರ್ಥದ ಒಂದು ಪುರಾವೆಯೆಂದು ಪರಿಗಣಿಸಲಾಗದಿದ್ದರೂ, ದೇವಾಲಯದ ಕಾಪಾಲಿಕ ಆರಾಧನೆ, ಗರ್ಭಗುಡಿಯ ಒಳಬದಿಗೆ ಸುತ್ತಲೂ ಕೆತ್ತಲಾದ ಭಯಂಕರವಾದ ದೇವತೆಗಳು ಹಾಗೂ ಗೋಡೆಗಳು ಮತ್ತು ಭಿತ್ತಿನ ನಡುವಿರುವ ಮಿಥುನ ವಿಗ್ರಹಗಳು ಏನಿಲ್ಲೆಂದರೆ ತಾಂತ್ರಿಕ ಪ್ರಭಾವವನ್ನಾದರೂ ತೋರ್ಪಡಿಸುತ್ತವೆ.

ಒಂದು ಕಾಲಕ್ಕೆ ಕಾಪಾಲಿಕರೊಂದಿಗೆ ಜೋಡಿಸಲ್ಪಟ್ಟಿರಬಹುದಾದ ಇನ್ನೊಂದು ದೇವಾಲಯವೆಂದರೆ ನೇಪಾಳದ ಕಠಮಾಂಡುವಿನ ಬಳಿಯಲ್ಲಿರುವ ಹೆಸರಾದ ಪಶುಪತಿದೇವಾಲಯ. ಸಂಸ್ಕೃತದಲ್ಲಿ ಬರೆಯಲಾದ ಹಾಗೂ ಜಿಷ್ಣುಗುಪ್ತನೆಂಬ (ಕ್ರಿ.ಶ.630) ಅರಸನ ಆಳ್ವಿಕೆಯ ಕಾಲದ್ದಾದ ಇಲ್ಲಿಯ ಒಂದು ಶಾಸನವು 'ಮಹಾಸ್ವಾಮಿನ್, ಧರ್ಮ----

---

92. ನೋಡಿ ವಿ. ವೆಂಕಯ್ಯ, 'Triplicane Inscription of Dantivarman', EI, VIII, 290.
93. ಕೆಳಕ್ಕೆ ನೋಡಿ, pp. 77-80.
94. ಸಂ. ಎಫ್. ಕೈಲಹಾರ್ನ್, 'Twenty-one Copper-plates of the Kings of Kanauj; (Vikrama-Samvat 1171-1233,' EI, IV, 97-129. (plate no. H).
95. 'Archaeological Remains at Bhubaneswar', pp. 61, 233-34.
96. ಉದ್ಧೃತ ಅದೇ, p. 233.

-ಹಾಗೂ ಮುಂಡಶೃಂಖಲಿಕ ಪಾಶುಪತಾಚಾರ್ಯ ಗುಂಪಿನ ಸೋಮಖಡ್ಡುಕ-----'[97] ಇವರಿಗೆ ನೀಡಲಾದ ದತ್ತಿಯನ್ನು ನಮೂದಿಸುತ್ತದೆ. ಮುಂಡಶೃಂಖಲಿಕ (ರುಂಡಗಳ ಮಾಲೆಯನ್ನು ಧರಿಸುವವ) ಪದವು ಪಾಶುಪತರಿಗಿಂತ ಹೆಚ್ಚು ಕಾಪಾಲಿಕರಿಗೆ ಸರಿ ಹೊಂದುತ್ತದೆ. ಸೋಮಖಡ್ಡುಕ ಪದವು (ಚಂದ್ರಹಾರವನ್ನು ಧರಿಸುವ) ವಿಶಿಷ್ಟವಾದುದಾದರೂ ಅದು ಕಾಪಾಲಿಕ ಸಿದ್ಧಾಂತದ ಹೆಸರಾದ 'ಸೋಮ ಸಿದ್ಧಾಂತ' ವನ್ನು ನೆನಪಿಗೆ ತಂದುಕೊಡುತ್ತದೆ.[98]

ಕಪಾಲೇಶ್ವರ ಅಥವಾ ಕಪಾಲಭೈರವದೇವನ ಹಾಗೂ ಕಾಪಾಲಿಕಾ ಅಥವಾ ಕಪಾಲಭೈರವಿದೇವಿಯ ಶಿಲ್ಪಗಳು ಮಧ್ಯಯುಗದ ಶುರುವಿನ ದಕ್ಷಿಣಭಾರತದ ಹಲವಾರು ದೇವಾಲಯಗಳಲ್ಲಿರುವುದು ಕಂಡು ಬರುತ್ತದೆ.[99] ಈ ಬಗೆಯ ಶಿಲ್ಪಗಳಿರುವುದಾಗಲಿ ಇಲ್ಲವೆ ಇಡಿಯ ದೇವಾಲಯವೊಂದನ್ನೇ ಕಪಾಲೇಶ್ವರನಿಗಾಗಿ ಮೀಸಲಾಗಿರಿಸುವುದಾಗಲಿ ತನ್ನಷ್ಟಕ್ಕೇ ಕಾಪಾಲಿಕರ ಪ್ರಭಾವದ ಒಂದು ರುಜುವಾತು ಎನ್ನಿಸಲಾರದಾದರೂ ನಾಸಿಕ ಮತ್ತು ಬರೋದಾ ಜಿಲ್ಲೆಗಳ ಕೆಲವು ತಾಮ್ರಪಟಗಳ ದತ್ತಿಗಳು ಈ ಯತಿಗಳಲ್ಲಿ ಕೆಲವರಾದರೂ ಕಪಾಲೇಶ್ವರದೇವಾಲಯಗಳ ಪಾರುಪತ್ಯೆಗಾರರಾಗಿದ್ದರೆಂಬುದನ್ನು ನಿದರ್ಶಿಸುತ್ತವೆ.

## ಶಂಕರಾಚಾರ್ಯರು ಹಾಗೂ ಕಾಪಾಲಿಕರು

ಕಾಪಾಲಿಕರನ್ನು ಕುರಿತಾದ ಬೆಲೆಬಾಳುವ ಸಾಹಿತ್ಯವು ಮಹಾಪುರುಷರಾದ ಶಂಕರಾಚಾರ್ಯರ (ಕ್ರಿ.ಶ.788-820) ಪವಾಡ ಸದೃಶವಾದ ಚರಿತ್ರೆಯಲ್ಲಿ ಕಾಣಸಿಗುತ್ತದೆ. ಇಂದು ಚಾಲ್ತಿಯಲ್ಲಿರುವ ಚರಿತ್ರೆಗಳಲ್ಲೆಲ್ಲ ತುಂಬ ಮಹತ್ವದವುಗಳು, ಬಹಳಷ್ಟು ಮಟ್ಟಿಗೆ ತೀರ ಹಳೆಗಾಲದ ಚರಿತ್ರೆಗಳೆಂದರೆ ಶಂಕರರ ಶಿಷ್ಯನಾದ ಆನಂದಗಿರಿಯದು ಎಂದೆನ್ನಲಾಗುವ 'ಶಂಕರ ವಿಜಯ'[100] ಹಾಗೂ ವಿಜಯ ನಗರ ಸಾಮ್ರಾಜ್ಯದ ಹೆಸರಾದ ಯತಿ, ಮಾಧವಾಚಾರ್ಯ ಉರ್ಫ ವಿದ್ಯಾರಣ್ಯರದು ಎಂದೆನ್ನಲಾಗುವ 'ಶಂಕರ ದಿಗ್ವಿಜಯ'.[101] ಈ

---

97. ಸಂ. ಮತ್ತು ಅನು. ಬಿ. ಇಂದ್ರಜಿ ಮತ್ತು Bühler, 'Inscriptions from Nepal', IA, IX (1880), 174.

98. ಮುಂದೆ ನೋಡಿ, pp. 82-83.

99. ನೋಡಿ ARMAD 1930, pp. 20,46; ARMAD 1932, p. 11; ARMAD 1933, pp, 46-47, 95; ARMAD 1934, p. 41; ARMAD 1935, pp. 44-45, 48; ARMAD 1936, p. 32, ARMAD 1937, pp. 3,45,58, ARMAD 1938, p. 5; ARMAD 1939, pp. 55,57,72; ARMAD 1940, p. 34; ARMAD 1945, p. 33.

100. ಸಂ. ಜೆ. ತರ್ಕಪಂಚಾನನ.

101. ಸಂ. ಧನಪತಿಸೂರಿಯಯ 'ಡಿಂಡಿಮ'ದ ಭಾಷ್ಯದೊಂದಿಗೆ, ಆನಂದಾಶ್ರಮದ ಆವೃತ್ತಿ. ಶಂಕರರ ಅನ್ಯೂ ಹಲವಾರು ಇಂಥ ಚರಿತ್ರೆಗಳಿವೆಯಾದರೆ ಅವೆಲ್ಲ ಸಾಮಾನ್ಯವಾದವುಗಳಲ್ಲದೆ ತರುವಾಯದ ಕಾಲದವುಗಳು. ಈ ವರೆಗೆ ಕೆಲವೇ ಪ್ರಕಟಣೆಗೊಂಡಿವೆ. ವ್ಯಾಸಾಚಲರ 'ಶಂಕರ ವಿಜಯ'ವನ್ನು ಒಳಗೊಂಡ (ಸಂ. ಟಿ. ಚಂದ್ರಶೇಖರನ್) ಹೊತ್ತಿಗೆಯು ಮಾಧವರ ಬಹಳಷ್ಟು ಪದ್ಯಗಳನ್ನು ಕಡವಾಗಿ ಎತ್ತಿಕೊಂಡಿದ್ದು, ಅವುಗಳನ್ನು ಅತಾರ್ಕಿಕವಾಗಿ ಮರು ಹೊಂದಿಸಲಾಗಿದೆ.

ಎರಡನೆಯ ಕೃತಿಯನ್ನು ಕುರಿತಾದ ಧನಪತಿಸೂರಿಯ 'ಡಿಂಡಿಮ' ಎಂಬ ಭಾಷ್ಯವು ಹೆಚ್ಚಿನ ಕೆಲವು ವಿವರಗಳನ್ನು ಸೇರ್ಪಡಿಸುವುದಾದರೂ ಮುಖ್ಯವಾಗಿ ಅದು ಆನಂದಗಿರಿಯ ಬರವಣಿಗೆಯಿಂದ ಸಂಗ್ರಹಿಸಲಾದುದು. ಇದಕ್ಕಿಂತಲೂ ಗಮನಾರ್ಹವಾದ ಬೇರೊಂದು ಆಖ್ಯಾಯಿಕೆಯು ಕಾನಫಟಾ ಕೃತಿಯಾದ 'ಗೋರಕ್ಷ ಸಿದ್ಧಾಂತ ಸಂಗ್ರಹ'ದಲ್ಲಿ ಕಂಡುಬರುತ್ತದೆ.[102] ಇವುಗಳಲ್ಲಿಯ ಅದಾವ ಆಕರವೂ ಐತಿಹಾಸಿಕ ನಿರ್ದಿಷ್ಟತೆಯನ್ನು ಪಡೆದುದಲ್ಲ. ಇವೆಲ್ಲವು ಆ ಮಹಾ ದೇವತಾಶಾಸ್ತ್ರಜ್ಞನ ಸಾವು, ಹಾಗೂ ಅವನನ್ನು ಕುರಿತು ನಡೆದ ಕೊನೆಯ ರಚನೆಯ ನಡುವಣ ಶತಮಾನಗಳ ಕಾಲಾವಧಿಯಲ್ಲಿ ಮುಂದಿನ ತಲೆಮಾರುಗಳಿಗೆ ನೀಡುತ್ತ ಬಂದ, ಬಣ್ಣ ಬಳಿದು ಸಿಂಗರಿಸುತ್ತ ಬಂದ, ಕಥಾಸಂಕಲನಗಳಾಗಿವೆ. ತೀರ ಆಧುನಿಕ ಅಧಿಕೃತ ವ್ಯಕ್ತಿಗಳು ಒಪ್ಪಿಕೊಳ್ಳುವಂತೆ 'ಶಂಕರ ವಿಜಯ'ದ ಲೇಖಕನು ಶಂಕರಾಚಾರ್ಯರ ಶಿಷ್ಯನಾದ ಆನಂದಗಿರಿಯಾಗಿರದೆ ಹದಿನೈದನೆಯ ಶತಮಾನದ, ಖಚಿತವಾಗಿ ಗೊತ್ತಿಲ್ಲದ ಬೇರೊಬ್ಬನಾಗಿರುತ್ತಾನೆ. ವಿಜಯ ನಗರದ ರಾಜಗುರುವಾದ ಮಾಧವಾಚಾರ್ಯರು 'ಶಂಕರ ದಿಗ್ವಿಜಯ'ದ ಲೇಖಕರಾಗಿರದೆ, ತರುವಾಯದ ಕಾಲದಲ್ಲಿ ಅವರ ಹೆಸರಿನಿಂದ ಬೇರೊಬ್ಬನು ಬರೆದಿದ್ದಾನೆಂದು ಹಲವು ಜನ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. [103] ಶಂಕರಾಚಾರ್ಯರ ಶಿಷ್ಯನು 'ಶಂಕರ ವಿಜಯ'ವನ್ನು ಬರೆದಿರಲಿಕ್ಕಿಲ್ಲವಾದರೂ, 'ಶಂಕರ ದಿಗ್ವಿಜಯ'ದ ಸಂಸ್ಕೃತ ಶ್ಲೋಕಗಳು ಶ್ರೇಷ್ಠ ಗುಣಮಟ್ಟದವುಗಳಾದ ಕಾರಣ ಮಾಧವ-ವಿದ್ಯಾರಣ್ಯರು ಇದರ ಲೇಖಕರಾಗಿರುವಲ್ಲಿ ನಮಗಂತೂ ಅಭ್ಯಂತರ ಕಾಣುತ್ತಿಲ್ಲ. 'ಡಿಂಡಿಮ' ಭಾಷ್ಯವು ಇವೆರಡೂ ಕೃತಿಗಳ ತರುವಾಯದ ಕಾಲದ್ದಾಗಿರಲೇಬೇಕು. 'ಗೋರಕ್ಷ ಸಿದ್ಧಾಂತ ಸಂಗ್ರಹ'ವು (ಇನ್ನು ಮುಂದೆ-ಗೋಸಿಸಂ)ಮಧ್ಯಯುಗದ ಉತ್ತರಾರ್ಧದ್ದಾಗಿದೆ.

ಮೇಲಿನ ಕೃತಿಗಳಲ್ಲಿ ಒಟ್ಟಾರೆ ಬೇರೆ ಬೇರೆ ಮೂರು ಆಖ್ಯಾಯಿಕೆಗಳಿವೆ. ಇವುಗಳಲ್ಲಿ ಮೊದಲನೆಯದೆಂದರೆ ಮಾಧವರ ಕೃತಿ. ಇದರಲ್ಲಿ ಹಾಗೂ ಗೋಸಿಸಂನಲ್ಲಿ ಶಂಕರಾಚಾರ್ಯರು ಉಗ್ರಭೈರವನೆಂಬ ವಿಶ್ವಾಸಘಾತಕನಾದ ಒಬ್ಬ ಕಾಪಾಲಿಕನಿಗೆ ಎದುರಾಗುತ್ತಾರೆ. ಮಾಧವರ ಹಾಗೂ ಆನಂದಗಿರಿಯ ಕೃತಿಗಳಲ್ಲಿರುವ ಎರಡನೆಯ ಆಖ್ಯಾಯಿಕೆಯಲ್ಲಿ ಶಂಕರರು ಕರ್ನಾಟಕದ ಕ್ರಕಚನೆಂಬ ಒಬ್ಬ ಯೋಧನೊಡನೆ ಕಾಳಗಕ್ಕೆ ನಿಲ್ಲುತ್ತಾರೆ. ಮೂರನೆಯ ಆಖ್ಯಾಯಿಕೆಯ ಶಂಕರರು ಜಾತಿಹೀನ, ಸೌಖ್ಯತತ್ತ್ವವಾದಿ ಎನ್ನಿಸಿದ ಉನ್ಮತ್ತ ಭೈರವನೊಂದಿಗೆ

102. ಸಂ. ಜಿ. ಎಸ್. ಕವಿರಾಜ. ಈ ಕೃತಿಯು ಗೋರಖನಾಥನದೆಂದು ಹೇಳಲಾಗಿದೆ. ಆದರೆ ಇದು ತರುವಾದ ಬೇರೆ ಬೇರೆ ಲೇಖಕರಿಂದ ಬರೆಯಲಾದ ನಿಬಂಧ ಹಾಗೂ ಕಥೆಗಳ ಒಂದು ಸಂಗ್ರಹವಾಗಿದೆ.

103. ಸರ್ಕಾರ, 'A History of Dasanami Naga Sanyasis (sic), p. 20 ಜಿ. ಎಸ್. ಘುರ್ಯೆ. ('Indian Sadhus, pp. 82-83) ಇವರು ಮಾಧವ-ವಿದ್ಯಾರಣ್ಯರನ್ನು ಲೇಖಕರೆಂದು ಒಪ್ಪಿಕೊಳ್ಳುವುದಲ್ಲದೆ 'ಶಂಕರ ವಿಜಯ'ದ ಆನಂದಗಿರಿಯನ್ನು ಹನ್ನೊಂದರಿಂದ ಹನ್ನೆರಡನೆಯ ಶತಮಾನಕ್ಕೆ ಸೇರಿಸುತ್ತಾರೆ.

ವಾದಕ್ಕೆ ಇಳಿದುದು 'ಆನಂದಗಿರಿ'ಯಲ್ಲಿ ಕಂಡು ಬರುವುದಲ್ಲದೆ ಇದನ್ನೇ ಧನಪತಿಸೂರಿಯ ಇದೇ ಬಗೆಯ ಮಾತುಗಳಲ್ಲಿ ಇನ್ನೊಮ್ಮೆ ಹೇಳಲಾಗಿದೆ. ಈಗ ಈ ಮೂರು ಆಖ್ಯಾಯಿಕೆಗಳನ್ನು ಚರ್ಚಿಸಬಹುದು.

## ಶಂಕರರು ಹಾಗೂ ಉಗ್ರಭೈರವ

ಉಗ್ರಭೈರವನೊಂದಿಗೆ ನಡೆದ ಶಂಕರರ ಭೇಟಿಯು ಕೃಷ್ಣಾ ನದಿಗುಂಟ ಇರುವ ಅದಾವುದೋ ತಾಣದಲ್ಲಿ ನಡೆಯಿತೆಂದು ಕಾಣುತ್ತದೆ. ಇದು ಬಹಳಷ್ಟು ಮಟ್ಟಿಗೆ ಶ್ರೀ ಶೈಲದ (ಶ್ರೀ ಪರ್ವತ)[104] ಬಳಿಯದಾಗಿರುವ ಸಾಧ್ಯತೆಯಿದೆ. ಮಾಧವಾಚಾರ್ಯರು ತಮ್ಮ ಕಥೆಯನ್ನು (xi.1-2) ಹೀಗೆ ಆರಂಭಿಸುತ್ತಾರೆ:

> ಒಂದು ಸಲ ಪೌಲಸ್ತ್ಯ ಋಷಿಯಂತೆ (= ಸೀತೆಯನ್ನು ಅಪಹರಿಸಿದ ರಾವಣನ ಆಗಿನ ವೇಷ)ಮಾರುವೇಷವನ್ನು ತೊಟ್ಟು, ದುರುಳ ಕೃತ್ಯಗಳಲ್ಲಿ ತೊಡಗುವ ಒಬ್ಬ ಕಾಪಾಲಿಕನು ಹೊರಟು, ತನ್ನ ಮನದಿಚ್ಛೆಯನ್ನು ಈಡೇರಿಸಿಕೊಳ್ಳುವ ಮುನ್ನವೇ ಅಪಾರವಾದ ಮಾಟದ ಸಾಮರ್ಥ್ಯವುಳ್ಳ (ಮಾಯಾ)ಒಬ್ಬ ಯತಿಯನ್ನು (ಶಂಕರ) ಎದುರಾದನು.

ಇನ್ನು ತನ್ನಾಸೆ ಕೈಗೂಡಿದಂತೆಯೇ ಸರಿ, ಎಂದುಕೊಂಡ ಉಗ್ರಭೈರವನು ಶಂಕರರನ್ನು ಸಮೀಪಿಸಿ ಅವರು ಬೇಸತ್ತು ಹೋಗುವಷ್ಟು ಅವರ ಮುಖಸ್ತುತಿಯನ್ನು ಕೈಕೊಂಡನು. ಆಮೇಲೆ ಆ ಕಾಪಾಲಿಕ ತಾನು 'ಸಾಧಿಸಲು ಹೊರಟುದೇನನ್ನು' (xi. 9-12) ಎಂಬುದನ್ನು ಹೀಗೆ ವಿವರಿಸಿದನು:

> ನಾನು ಕಪಾಲಿನ್‌ನನ್ನು (ಶಿವ) ಪ್ರಸನ್ನಗೊಳಿಸಿಕೊಳ್ಳಲು ಯತ್ನಿಸಿ ಆ ಮೂಲಕ ನನ್ನ ಗುರಿಯನ್ನು ತಲುಪಲಿರುವೆನು.
>
> ಸದೇಹನಾಗಿ ಕೈಲಾಸಕ್ಕೆ ಹೋಗಿ ಈಶನೊಂದಿಗೆ (ಶಿವ) ಆಟವಾಡಲೆಂದು ನಾನು ಇಡಿಯ ಒಂದು ನೂರು ವರ್ಷಗಳ ಕಾಲ ದೇಹದಂಡನೆಯ ಮೂಲಕ ಬಲು ಘೋರವಾದ ತಪಸ್ಸನ್ನು ಆಚರಿಸಿ ಆ ಉಗ್ರನನ್ನು (ಶಿವ) ಒಲಿಸಿಕೊಂಡೆನು.

---

104. ಸ್ಥಳವನ್ನು ಸ್ಪಷ್ಟವಾಗಿ ಹೇಳಲಾಗಿಲ್ಲ. ಆದರೆ ಈ ಮೊದಲ 'ಸರ್ಗ'ದಲ್ಲಿ ಶಂಕರರು ಶ್ರೀ ಶೈಲದಿಂದ ಈ ಹೊಳೆಗುಂಟ ಪಯಣಿಸುತ್ತಿದ್ದರೆಂದು ಹೇಳಲಾಗಿದೆ. ಮಾಧವರ ಗ್ರಂಥ ಪಾಠದಲ್ಲಿ ಕಾಪಾಲಿಕನ ಹೆಸರನ್ನು ನಮೂದಿಸಿಲ್ಲ. ಆದರೆ ಅದು ಭಾಷ್ಯ ಹಾಗೂ 'ಗೋಪಿಸಂ'ಗಳಲ್ಲಿ ಕಂಡುಬರುತ್ತದೆ.

> ಪ್ರಸನ್ನನಾದ ಗಿರೀಶನು (ಶಿವ) ನನಗೆ ಇಂತೆಂದನು: 'ನನ್ನನ್ನು ಸಂತುಷ್ಟನನ್ನಾಗಿ ಮಾಡಬೇಕಿದ್ದರೆ ನೀನು ಒಬ್ಬ ಸರ್ವಜ್ಞನಾದ ಸಾಧು ಇಲ್ಲವೆ ಒಬ್ಬ ಅರಸನ ತಲೆಯನ್ನು ತುಂಡರಿಸಿ ಚೆಲ್ಲು. ಅಂದರೆ, ಮಾನವರೆಲ್ಲರೂ ಬಯಸುವ (ಅಂತಿಮವಾದ) ಗುರಿಯನ್ನು (ನೀನು) ತಲುಪುವೆ;
>
> ಇಷ್ಟು ನುಡಿದವನೇ ಮಹೇಶನು ಅದೃಶ್ಯನಾಗಿಬಿಟ್ಟನು. ಅದನ್ನು ಪಡೆದುಕೊಳ್ಳುವ ಆಸೆಯಿಂದಾಗಿ ಅಂದಿನಿಂದಲೇ ನಾನು ಅಲೆಮಾರಿಯಾಗಿ ಸುತ್ತುತ್ತಲೇ ಇರುವೆನು. ಆದರೂ ಈವರೆಗೂ (ತಾನಾಗಿಯೇ ಒಪ್ಪಿಕೊಂಡು ಸಿದ್ಧನಾಗುವ) ಒಬ್ಬ ಅರಸನಾಗಲಿ, ಒಬ್ಬ ಸರ್ವಜ್ಞ ಸಾಧುವಾಗಲಿ ನನಗೆ ಕಂಡೇ ಇಲ್ಲ.

ಅವನ ಮನದಲ್ಲಿದ್ದ ಸಂಗತಿಯ ಬಗೆಗೆ ಅದಾವ ಸಂದೇಹವೂ ಉಳಿದಿರಲಿಲ್ಲ.

ತಾನು ಸೂಚಿಸಿದ ಬೇಡಿಕೆಗೆ ಶಂಕರನನ್ನು ಒಪ್ಪಿಸಲೆಂದು ಉಗ್ರಭೈರವನು ಮುಂದುವರಿದು, ಒಬ್ಬನು ತಾನಾಗಿಯೇ ಬಲಿ ಹೋಗುವುದರಿಂದಾಗಿ ದೊರಕಬಹುದಾದ ಬಲು ದೊಡ್ಡ ಲಾಭಗಳನ್ನು ಕುರಿತು ತುಂಬ ಮೆಚ್ಚುಗೆಯ ಮಾತುಗಳನ್ನಾಡಿದನು (xi. 13-16):

> ವಿಶ್ವದ ಒಳಿತಿಗಾಗಿ ಅಲೆಯುತ್ತಿರುವ ನಿನ್ನಂತಹ ಒಬ್ಬ ಸರ್ವಜ್ಞನಾದ ಸಾಧುವು ನನಗೀಗ ಕಂಡುದು ನನ್ನ ಅದೃಷ್ಟವೆಂದೇ ಭಾವಿಸಿದ್ದೇನೆ. ಶೀಘ್ರವಾಗಿ (ನನ್ನ ಗುರಿಯ) ಉಳಿದ ಭಾಗವೆಲ್ಲ ಈಡೇರಲಿದೆ. ಏಕೆಂದರೆ, ಸೂಕ್ತವಾದ ದರ್ಶನ ದೊರಕುತ್ತಲೆ (ಸಂದರ್ಶನಾಂತ) ಮಾನವರ ಬಂಧನ ತಾನಾಗಿಯೇ ಕಳಚಿ ಬೀಳುತ್ತದೆ.
>
> ನನ್ನ ಯಶಸ್ಸಿಗಾಗಿ (ಸಿದ್ಧಿ) ನನಗೆ ಅಭಿಷಿಕ್ತನಾದ ಒಬ್ಬ ದೊರೆಯ ತಲೆ ಇಲ್ಲವೆ ಮುನೀಶ್ವರನೊಬ್ಬನ ತಲೆ ಅಗತ್ಯದ್ದಾಗಿದೆ. ಆದರೆ ಮೊದಲಿನದನ್ನು (ಪಡೆಯಬಹುದೆಂದು) ನಾನು ಊಹಿಸಲಾರೆನಾದ್ದರಿಂದ ಇನ್ನು ಮುಂದಿನ ಸಂಗತಿ ನಿನಗೇ ಬಿಟ್ಟದ್ದು.
>
> ನಿನ್ನ ತಲೆಯನ್ನು ಅರ್ಪಿಸಿದೆಯಾದರ ನೀನು ವಿಶ್ವಕ್ಕೇನೆ ಬೆರಗು ಉಂಟುಮಾಡುವಂತಹ ಕೀರ್ತಿವಂತನಾಗಲಿರುವೆ, ನಾನು ಯಶಸ್ಸನ್ನು (ಸಿದ್ಧಿ) ಹೊಂದಲಿರುವೆ. ಅಯ್ಯಾ, ಪುರುಷೋತ್ತಮನೆ! ಈ ದೇಹದ ನಶ್ವರತೆಯನ್ನು ಕುರಿತು ಧ್ಯಾನಿಸಿಯಾದ ಬಳಿಕವೇ ನಿನಗೆ ಹಿತವೆಂದು ಕಂಡಂತೆ ಮಾಡು.

ನನಗದು ಬೇಕೆಂದು ನಾನಾಗಿಯೇ ಕೇಳಲಾರೆ (ಶಬ್ದಶಃ -ನನ್ನ ಮನಸ್ಸು ಕೇಳಲಾರದು). ತನ್ನೆಲ್ಲ ಆಸೆಗಳನ್ನು ಈಡೇರಿಸುವ ಈ ತನ್ನ ದೇಹವನ್ನು ಯಾವನು ತಾನೆ (ಒಪ್ಪಿಗೆಯಿಂದ) ತ್ಯಜಿಸಿಯಾನು? (ಆದರೆ, ಭೌತಿಕ ಆಸೆಗಳ ಬಗೆಗೆ) ನಿರ್ಮೋಹಿಯಾಗಿರುವ ನೀನು ನಿನ್ನ ದೇಹವನ್ನು ಲೆಕ್ಕಿಸುವವನಲ್ಲ. (ನೀನು) ನಿನ್ನ ದೇಹವನ್ನು ಧರಿಸಿದುದು (ಕೇವಲ) ಬೇರೆಯವರ ಹಿತಕ್ಕಾಗಿಯೆಂದು.

ಇಲ್ಲಿ, ಅವನು ಶಂಕರರ ವೇದಾಂತದ ಸಿದ್ಧಾಂತಗಳನ್ನು ಅವರಿಗೇ ತಿರುಗು ಮಂತ್ರವಾಗಿ ಬಳಸಲು ಹವಣಿಸಿರುವನು.

ತರುವಾಯ ಉಗ್ರಭೈರವನು ತೋರಿಕೆಯ ವಿನಯಶೀಲತೆಯಿಂದ ತನ್ನನ್ನು ತಮ್ಮ ಸ್ವಾರ್ಥಗಳನ್ನೇ ಕುರಿತು ಯೋಚಿಸುವ ಹಾಗೂ ಇನ್ನೊಬ್ಬರ ನೋವುಗಳ ಅರಿವಿಲ್ಲದವರೊಂದಿಗೆ ಹೋಲಿಸಿಕೊಳ್ಳುತ್ತಾನೆ. ಈ ಬಗೆಯ ಜನರೆಂದರೆ ತೊಂಬತ್ತೊಂಬತ್ತು ವ್ರತಗಳನ್ನು ಹಾಳು ಮಾಡಲೆಂದು ದಧ್ಯಂಚ ಋಷಿಯಿಂದ ಒಂದು ಎಲುವನ್ನು ಕದ್ದೊಯ್ದ ಇಂದ್ರನಂಥವರು, ಎಂದೆನ್ನುತ್ತಾನೆ. ಇನ್ನೊಬ್ಬರಿಗಾಗಿ ತಮ್ಮ ನಶ್ವರ ದೇಹವನ್ನು ತೊರೆದುಬಿಡುವ ದಧ್ಯಂಚನಂಥ ವ್ಯಕ್ತಿಗಳು ನಿರ್ವಿಕಲ್ಪವಾದ ಕೀರ್ತಿಶರೀರವನ್ನು (ಯಶಃ ಶರೀರ) ಪಡೆಯುತ್ತಾರೆ. ಅವರ ಅಮೌಲ್ಯವಾದ ಈ ಸದ್ಗುಣಗಳು ಇಡಿಯ ಮಾನವ ಕುಲಕ್ಕೆಲ್ಲ ಸಂತಸ ನೀಡಿವೆ. ಇದೇ ಬಗೆಯ ಹಲವಾರು ಪದ್ಯಗಳ ತರುವಾಯ ಉಗ್ರಭೈರವ ಕೊಟ್ಟ ಕೊನೆಗೆ ತನ್ನ ಕೋರಿಕೆಯನ್ನು (xi. 24) ಈ ರೀತಿ ಸಲ್ಲಿಸುತ್ತಾನೆ: 'ನೀನು (ನಿನ್ನ) ತಲೆಯನ್ನು (ನನಗೆ) ದಯಪಾಲಿಸು. ಅಯ್ಯಾ ಭಗವಂತನೇ, ನಿನಗೆ ನನ್ನ ಗೌರವಗಳು ಸಲ್ಲಲಿ!' ಕಾಪಾಲಿಕನ ಆ ವಾದಸರಣಿಯಿಂದಾಗಿ ಖಂಡಿತವಾಗಿಯೂ ಶಂಕರರ ಮನಕರಗಿ ಅವರು ಅವನ ಮನದಿಚ್ಛೆಯನ್ನು ಈಡೇರಿಸುವುದಾಗಿ ಒಪ್ಪಿಕೊಂಡರು. ಶಂಕರರು (xi. 25), ' ಈ ಲೋಕದಲ್ಲಿ ಮಾನವ ದೇಹ ಕೊಳೆತಕ್ಕೆ (ಈಡಾಗುವಂಥದೆಂಬುದನ್ನು) ಬಲ್ಲ ಅದಾವ ನಿಜವಾದ ಸಾಧುವು, ದೈನ್ಯತೆಯಿಂದ ಬೇಡಿಕೊಳ್ಳುವವನ ಕೋರಿಕೆಯನ್ನು ಮನ್ನಿಸಿ ಅದನ್ನು ಪೂರ್ತಿಗೊಳಿಸದಿರಲು ಸಾಧ್ಯ?" ಎಂದು ನುಡಿದರು. ಶಂಕರರು ತಮ್ಮದೇ ಆದ ದೇವತಾಶಾಸ್ತ್ರವನ್ನು (ಥಿಯೋಲಾಜಿ) ಪಾಲಿಸುವುದು ಅಗತ್ಯದ್ದಾಗಿದ್ದಿತು. ಆತ್ಮವೇ ಪರಮಸತ್ಯ. ಹೀಗಾಗಿ ದೇಹದ ಅವಸ್ಥೆ ಹೇಗೆಂಬುದು ಮುಖ್ಯವಲ್ಲ. ಅದು ಮಾಯೆಯಿಂದ ನಿರ್ಮಿತಿಗೊಂಡುದಷ್ಟೇ. ಅದೇನಿದ್ದರೂ ತನ್ನ ಶಿಷ್ಯಂದಿರು ತನ್ನ ಇಂತಹ ಸಾಹಸಕ್ಕೆ ಒಪ್ಪಿಗೆಯನ್ನು ನೀಡಲಾರರೆಂದರಿತು ಶಂಕರರು ಉಗ್ರಭೈರವನಿಗೆ ತಮ್ಮೊಬ್ಬರನ್ನೇ ಗುಟ್ಟಾಗಿ ಬಂದು ಕಾಣುವಂತೆ ಹೇಳಿದರು. ಹೀಗೆ ಅವರಿಬ್ಬರೂ ತಮ್ಮ ಈ ಕರಾರಿಗೆ ಮುದ್ರೆಯನ್ನೊತ್ತಿದರು. ತರುವಾಯ, ಶಂಕರರು ತಮ್ಮ ಶಿಷ್ಯರಿಗೆ ತಿಳಿಯದಂತೆ ಗುಟ್ಟಾಗಿ ಒಂದೆಡೆಗೆ ತೆರಳಿದರು.

ಉಗ್ರಭೈರವನು ಕಾಪಾಲಿಕ ವಿಶೇಷ ಲಾಂಛನಗೊಳಿಂದಿಗೆ ತನ್ನ ಬಹುಮಾನವನ್ನು ಪಡೆಯಲು ಮತ್ತೆ ಅಲ್ಲಿ ಹೋದನು (xi. 30-32):

> ಆ ಯೋಗಿಯು (ಉಗ್ರಭೈರವನು) ತನ್ನ ಕೈಯಲ್ಲಿ ಒಂದು ತ್ರಿಶೂಲವನ್ನು ಹಿಡಿದುಕೊಂಡು, (ಹಣೆಗೆ) ಭಸ್ಮದ ಮೂರು ಪಟ್ಟಿಗಳನ್ನು ಬಳಿದುಕೊಂಡು, ಸುತ್ತಲೂ (ಎಚ್ಚರದಿಂದ) ಕಣ್ಣಾಡಿಸುತ್ತ, ಎಲುವುಗಳ ಸರಮಾಲೆಯ ಒಡವೆಗಳನ್ನು (ತೊಟ್ಟು), ಪ್ರಜ್ವಲಿಸುವ ಹಾಗೂ ನಶೆಯಿಂದ ಸುತ್ತಲೂ ಗರಗರನೆ ಸುತ್ತುವ ತನ್ನ ಕಣ್ಣುಗಳನ್ನು ಹೊತ್ತು ಆ ಯತಿಯ ಸ್ಥಾನಕ್ಕೆ ಹೋಗಿ ತಲುಪಿದನು......
>
> (ಕಾಪಾಲಿಕನು) ಆ ಭೈರವ ರೂಪದಲ್ಲಿ ಇರುವುದನ್ನು ಗಮನಿಸಿ ಆ ಯತಿಯು ತನ್ನ ದೇಹವನ್ನು ತ್ಯಜಿಸಲು ತೀರ್ಮಾನಿಸಿದನು.

ತರುವಾಯ ಶಂಕರರು 'ತಮ್ಮನ್ನು ತಾವು ಆತ್ಮಾವಸ್ಥೆಗೆ ಎತ್ತಿಕೊಂಡರು (ಆತ್ಮಾನಂ ಆತ್ಮನಿ ಉದಯುಂಕ್ತ). ' ಸೂಕ್ತವೆನ್ನಿಸಿದ ಯೋಗಾಸನದಲ್ಲಿ (ಸಿದ್ಧಾಸನ)ಕುಳಿತುಕೊಂಡು ಅವರು (xi. 35)' 'ಸಮಾಧಿಯವಸ್ಥೆಯಲ್ಲಿರುವಾಗ, ಸೃಷ್ಟಿಗೊಂಡ ಇಡಿಯ ವಿಶ್ವವನ್ನೇ ಮರೆತುಬಿಟ್ಟರು.' ಈ ಆಸನದಲ್ಲಿ ಕುಳಿತಿರುವ ಅವರನ್ನು ಕಂಡು, ಉಗ್ರಭೈರವನ ಹೆದರಿಕೆ ತೊಲಗಿ ಹೋಗಿ, ಅವನು ಅವರನ್ನು ತನ್ನ ತ್ರಿಶೂಲದಿಂದ ಇರಿಯಲು ಸಿದ್ಧನಾದನು. ಅವನು ಶಂಕರರ ಮೇಲೆರಗಬೇಕೆನ್ನುವಷ್ಟರಲ್ಲಿಯೇ ಆ ಯತಿಯ ಶಿಷ್ಯನಾದ ಪದ್ಮಪಾದನು ತನ್ನ ಮಂತ್ರ ಸಾಮರ್ಥ್ಯದಿಂದ ಇದನ್ನರಿತನು (xi. 38,42):

> ಆಗ, ಸ್ಮರಿಸುವವರ ನೋವುಗಳನ್ನು ಪರಿಹರಿಸುವ, ಹಾಗೂ ಪ್ರಹ್ಲಾದನಲಿರುವ ನರಸಿಂಹನ (ವಿಷ್ಣುವಿನ ಅವತಾರ) ಪರಮೋಚ್ಚವಾದ ಸಾಮರ್ಥ್ಯವನ್ನು ಜ್ಞಾಪಿಸಿಕೊಂಡು, ಆ ಮಂತ್ರಪಾರಂಗತನು (ಮಂತ್ರಸಿದ್ಧ ಪದ್ಮಪಾದನು) ತಾನೇ ನರಸಿಂಹನಾಗಿ (ಅವತಾರ) ಉಗ್ರಭೈರವನ ದುರುದ್ದೇಶದಿಂದ ಕೂಡಿದ ದುಸ್ಸಾಹಸವನ್ನು ಅರಿತುಕೊಂಡನು-----.
>
> ಅವನು ಪ್ರಚಂಡವಾದ ವೇಗದಿಂದ ಧಾವಿಸಿ---- ತ್ರಿಶೂಲದಿಂದ ಇರಿಯುವುದರಲ್ಲಿದ್ದ (ಆ ಕಾಪಾಲಿಕನ) ಎದೆಯನ್ನು-----ತನ್ನ ಪಂಜಗಳಿಂದ ಬಗೆದುಬಿಟ್ಟನು.

ಈ ಪ್ರತಿಭಟನೆಯನ್ನು ಕುರಿತಾದ ಮಾಧವರ ಪಾಠವು ಇಲ್ಲಿಗೆ ಮುಕ್ತಾಯಗೊಳ್ಳುತ್ತದೆ.

'ಗೋರಕ್ಷ ,ಸಿದ್ಧಾಂತಸಂಗ್ರಹ'ವು ಕಾನಫಟಾ ಇಲ್ಲವೆ ಕೆಲವೊಮ್ಮೆ ನಾಥಸಿದ್ಧರ

ಧರ್ಮವೆಂದು ಕರೆಯಲಾಗುವ ಗೋರಖನಾಥ (ಗೋರಕ್ಷನಾಥ) ಸಂಪ್ರದಾಯಕ್ಕೆ ಸೇರಿದ ಗ್ರಂಥವಾಗಿದೆ. ಈ ಸಂಪ್ರದಾಯದ ಅನುಯಾಯಿಗಳ ಬಹಳಷ್ಟು ತಾಂತ್ರಿಕ ಆಚರಣೆಗಳು ಕಾಪಾಲರಿಗೆ ಸೇರಿದವುಗಳೆಂದು ಹೇಳಲಾಗುತ್ತದೆ. 'ಗೋಸಿಸಂ'ನ ಹೇಳಿಕೆಯಂತೆ (ಪು. 16) ಇದರ ತತ್ತ್ವಜ್ಞಾನವು 'ದ್ವೈತ ಹಾಗೂ ಅದ್ವೈತಗಳೆರಡಕ್ಕಿಂತಲೂ ಮೇಲಿನದು (ದ್ವೈತಾದ್ವೈತವಿವರ್ಜಿತ)'. ಸನ್ನಿವೇಶ ಹೀಗಿರುವ ಕಾರಣ ಶಂಕರ ಹಾಗೂ ಉಗ್ರಭೈರವರ ಆಖ್ಯಾಯಿಕೆಯನ್ನು ಕುರಿತಾದ 'ಗೋಸಿಸಂ'ನ ಪಾಠವು ಈ ಅದ್ವೈತ ಯತಿಗೆ ಕಡಿಮೆ ಅನುಕೂಲದ್ದಾಗಿರುವಂತೆ ಕಾಣುತ್ತದೆ. ಇಲ್ಲಿ, ಶಂಕರರ ಧಾರ್ಮಿಕ ನಂಬಿಕೆಗಳಿಗೆ ಸವಾಲೊಡ್ಡಿ ಅವುಗಳ ಸಾಚಾತನವನ್ನು ಪರೀಕ್ಷಿಸಲೋಸುಗ ದೇವನಾದ ಶ್ರೀ ಭೈರವನು ಖುದ್ದಾಗಿ ಉಗ್ರಭೈರವನ ರೂಪವನ್ನು ತಳೆದನು. ಮಾರುವೇಷದ ಈ ದೇವನು (ಶಂಕರರ) ಬಳಿಸಾರಿ ಅವರಿಗೆ ಹೀಗೆಂದನು (ಪು. 16): ' ಅಯ್ಯಾ, ನೀವೊಬ್ಬ ಯತಿಗಳು.(ಆದುದರಿಂದ) ಶತ್ರುಮಿತ್ರರ ಬಗೆಗೆಲ್ಲ ನಿಃಪಕ್ಷಪಾತಿಗಳು ಹಾಗೂ ಸುಖದುಃಖಗಳಂತಹ ದ್ವಂದ್ವ ಪದಗಳ ಬಗೆಗೆ ಅನಾಸಕ್ತರು.'ಅವನು ಕೂಡಲೇ ಯತಿಯ ತಲೆಯನ್ನು ಶ್ರೀ ಭೈರವನ ಬಲಿಯಾಗಿ ಕೇಳಿದನು. ಅವನು ಇದರ ಮೂಲಕ ತನ್ನ ವ್ರತವನ್ನು ಪೂರ್ಣಗೊಳಿಸಲಿದ್ದನು. ಆಗ ಶಂಕರರು ತಮಗಿದ್ದ ಪರ್ಯಾಯಗಳನ್ನೆಲ್ಲ ಕುರಿತು ಕೂಲಂಕಷವಾಗಿ ಆಲೋಚಿಸಿದರು. (ಪು. 16):

> (ಕಾಪಾಲಿಕನ ಕೋರಿಕೆಯ ಮೇರೆಗೆ) ಇದನ್ನು ನಡೆಯಿಸಿ ಕೊಡದಿದ್ದರೆ ಅದ್ವೈತವು ನಾಶಹೊಂದಲಿದೆ (ಅದ್ವೈತ ಹಾನಿ). ಏಕೆಂದರೆ, ಇದರಿಂದಾಗಿ ಶತ್ರುವಿನ ಜೊತೆಗೆ ನಿಃಪಕ್ಷಪಾತವಾದ ನಡುವಳಿಕೆ ಇಲ್ಲವೆಂದಾದೀತು. ಇದನ್ನು ನಡೆಯಿಸಿಕೊಟ್ಟರೂ ಕೂಡ ಸೋಲು (ಅಷ್ಟೇ ಖಂಡಿತ). ಇಂಥ ಇಬ್ಬಗೆಯ ಯೋಚನೆಯಿಂದ ಕೂಡ (ಶುದ್ಧ ಅದ್ವೈತದ) ಸೋಲು ತಪ್ಪಿದ್ದಲ್ಲ.

ಸಮಾಧಾನಕರವಲ್ಲದ ಇವೆರಡೂ ಪರ್ಯಾಯಗಳು ಆ ಮಹಾಯತಿಯನ್ನು ಪೂರ್ತಿಯಾಗಿ ಗೊಂದಲಕ್ಕೆ ಸಿಲುಕಿಸಿಬಿಟ್ಟವು. ಹೀಗಾಗಿ ಅವರು ಏನನ್ನೂ ಹೇಳಲು ಅಸಮರ್ಥರಾದರು. ಮಾಧವರು ಹೆಚ್ಚುಕಡಿಮೆ ಇಂಥದೇ ಸಮಸ್ಯೆಯನ್ನು ಮುಂದಿರಿಸಿದರಾದರೂ ಅವರು ತಮ್ಮ ಸಾಮಾನ್ಯಜ್ಞಾನದಿಂದ ಪದ್ಮಪಾದನು ಅಡ್ಡ ಬರುವಂತೆ ಮಾಡಿ, ಈ ಸಂಗತಿಗಳು ತತ್ತ್ವಜ್ಞಾನದ ಕೊನೆಯಂಚಿನ ಅಸಂಬದ್ಧತೆಯನ್ನು ತಲುಪುವುದನ್ನು ತಪ್ಪಿಸಿರುವರು. 'ಗೋಸಿಸಂ'ವು ಈ ಪ್ರಕರಣವನ್ನು ಉಳಿಸಿಕೊಳ್ಳುತ್ತದಾದರೂ ಅದನ್ನು ಹಾಗೆಯೇ ಇರಲು ಬಿಡುವುದಿಲ್ಲ. ನೃಸಿಂಹರೂಪದ ಪದ್ಮಪಾದನಿಂದ[105] ದಾಳಿಗೀಡಾದ ಬಳಿಕ ಉಗ್ರಭೈರವನು ತನ್ನ ನಿಜ ರೂಪವಾದ ಶ್ರೀಭೈರವನಾಗಿ ಪ್ರತ್ಯಕ್ಷನಾಗುತ್ತಾನೆ. ಆಮೇಲೆ ಗುಡುಗಿನಂತಹ ಆಳವಾದ ಧ್ವನಿಯಲ್ಲಿ ಶಂಕರರಿಗೆ ಹೀಗೆ ಹೇಳುತ್ತಾನೆ:

105. 'ಗೋಸಿಸಂ'ದಲ್ಲಿ ಪದ್ಮಪಾದನ ಹೆಸರಿನ ಮೂರನೆಯ ಸ್ವರಾಕ್ಷರ ದೀರ್ಘವಾಗಿದೆ.

ಅಯ್ಯಾ ಇದು ಅದ್ವೈತಕ್ಕೆ ಒದಗಿ ಬಂದಿರುವ ಸೋಲು. ಶತ್ರುಮಿತ್ರರೆಲ್ಲ ಒಂದೆನ್ನುವ ಮಾತಿನ ಗತಿಯೇನು? ಮಲ್ಲನೊಬ್ಬನು ತಾನು ನೆಲಕ್ಕುರುಳಿ ತನ್ನೆದುರಾಳಿ ಮಲ್ಲನನ್ನೂ ನೆಲಕ್ಕುರುಳಿಸುವಂತೆ ನಾನು ನನ್ನ ದೇಹವನ್ನೇ ನಾಶಪಡಿಸುವ ಮೂಲಕ (ನನ್ನ) ಎದಿರಾಳಿಯ (ಅಂದರೆ ನಿಮ್ಮ) ಸೈದ್ಧಾಂತಿಕ ನಾಶವನ್ನು ಸಾಧಿಸಿದ್ದೇನೆ. ಅಲ್ಲದೆ ನಿಮಗೆ ನಿಮ್ಮ ಹಣೆ ಬರಹ ತಪ್ಪಿದ್ದಲ್ಲ. ಎದ್ದೇಳಿ! ನೀವು ಹೋರಾಡಲೇಬೇಕು! [106]

ಶಂಕರರಂತೂ ಪೂರ್ತಿ ಸ್ತಂಭೀಭೂತರಾಗಿಬಿಟ್ಟರು. ( ಪು.17) :

> '(ನಾನು ಹೋರಾಟಕ್ಕಿಳಿದರೆ) ಆಗ, (ನಾನು) ಆರಂಭಿಸಿದ ಈ ಕಾರ್ಯ ತೊಂದರೆಗೀಡಾಗುವುದು. ಏಕೆಂದರೆ ನ್ಯಾಸಿನ್‌ರ (=ಸಂನ್ಯಾಸಿನ್‌ರ, ಅಂದರೆ ನನ್ನ ಸಿದ್ಧಾಂತಕ್ಕೇನೆ) ಕ್ರಿಯಾಕರಣವು (ಮತದ ಕ್ರಿಯೆ ಇಲ್ಲವೆ ಆಚರಣೆಯು) ಒಂದು (ಸೂಕ್ತವಾದ ) ಸಿದ್ಧಾಂತವಲ್ಲ', ಎಂದು ಯೋಚಿಸಿದ ಅವರು, ಕಾಪಾಲಿಕನ ಅಪ್ಪಣೆಯಂತೆ ಹೋರಾಡಲು ಅಸಮರ್ಥರಾದರು. 'ನನ್ನ ಸಿದ್ಧಾಂತದ ಮೇರೆಗೆ ಅಕ್ರಿಯತೆ [ಕ್ರಿಯೆಯನ್ನು ಕೈಕೊಳ್ಳದಿರುವುದು] ಸೂಕ್ತವಾದುದು', (ಎಂದು ಯೋಚಿಸಿ) ಅದ್ವೈತದ ಬಗೆಗಿನ ತಮ್ಮ ನಿಷ್ಠೆಗನುಸರಿಸಿ ಅವರು ನಿಶ್ಚಲರಾಗಿ ನಿಂತುಕೊಂಡರು.

ಆಗ ಕಾಪಾಲಿಕನು ತನ್ನಲ್ಲಿ ಯೋಗ ಸಾಮರ್ಥ್ಯವನ್ನು (ಯೋಗ ಮಾಯಾ) ಹುಟ್ಟಿಸಿಕೊಂಡು, ಶಂಕರ ಹಾಗೂ ಅವರ ಶಿಷ್ಯಂದಿರ ತಲೆಗಳನ್ನು ತುಂಡರಿಸಿ ಚೆಲ್ಲಲು ಅದನ್ನು ಬಳಸಿಕೊಂಡನು. ಆದರೆ ಅವರನ್ನು ಆಮೇಲೆ ಜೀವಂತ ಮಾಡಲಾಯಿತು. 'ಆಗ ನಿಜವಾದ ವಿರಕ್ತಿ ಹುಟ್ಟಿಕೊಂಡಿತು' ಎಂದು 'ಗೋಸಿಸಂ' ಹೇಳುತ್ತದೆ (ಪು. 17).

'ಗೋಸಿಸಂ'ದ ಲೇಖಕನು ಶಂಕರರ ಅಕ್ರಿಯತೆಯನ್ನು (ಮತಾಚರಣೆಯ ಬಗೆಗಿನ ಕ್ರಿಯಾಹೀನತೆ ಅಥವಾ ಅದನ್ನು ಆಚರಿಸದಿರುವುದು) ಕುರಿತಾದ ಒತ್ತನ್ನು ಖಂಡಿಸ ಬಯಸುತ್ತಾನೆಂಬುದು ಸ್ಪಷ್ಟವಾಗಿದ್ದರೂ, ಅವನು ಅದಾವುದೇ ವ್ಯಾವಹಾರಿಕ ಪರ್ಯಾಯವನ್ನು ನಿಜವಾಗಿಯೂ ಒದಗಿಸಿಲ್ಲ. ಶಂಕರರು ಎದುರಾಗಿ ನಿಂತು ಹೋರಾಡಿದ್ದೇ ಆದಲ್ಲಿ ಅಥವಾ ಹೋರಾಡದೆ ಇದ್ದಲ್ಲಿಯಾಗಲಿ ಅವರ ನಾಶ ಖಚಿತವಿತ್ತು. ವಿರೋಧಾಭಾಸದ ಈ ಇಕ್ಕಟ್ಟು ಒಂದರ್ಥದಲ್ಲಿ 'ದ್ವೈತ ಹಾಗೂ ಅದ್ವೈತಗಳಾಚೆಗೆ' ಎಂದೆನ್ನುವ ಸಿದ್ಧಾಂತಕ್ಕೆ ಹೆಚ್ಚು ಸಮರ್ಪಕವಾಗಿದೆ. ಇದೇ ಬಗೆಯ ಉಕ್ತಿಗಳು ಬೇರೆ ತಾಂತ್ರಿಕ ಪಠ್ಯಗಳಲ್ಲೂ ಕಂಡಬರುತ್ತವೆ.

---

106. pp. 16-17. ಈ ಪರಿಚ್ಛೇದದ ಹಾಗೂ ಇದರ ತರುವಾಯದ ಸಂಸ್ಕೃತವು ಹೆಚ್ಚು ಅನಾಗರಿಕವಾಗಿದೆ. ನಿರೂಪಣೆಯ ಕೆಲ ಭಾಗವಂತೂ ಮನಬಂದಂತಿದೆ.

ಉದಾಹರಣೆಗೆ, 'ಕುಲಾರ್ಣವ ತಂತ್ರ'ದಲ್ಲಿ ಶಿವನು 'ಕೆಲವರು ದ್ವೈತವನ್ನು ಸ್ವೀಕರಿಸುವವರಾದರೆ ಇನ್ನು ಕೆಲವರು ಅದ್ವೈತವನ್ನು. (ಆದರೆ) ಅವರು ದ್ವೈತ ಹಾಗೂ ಅದ್ವೈತಗಳಾಚೆಯ ನನ್ನ ಮೂಲತತ್ವವನ್ನು ಅರಿಯಲಾರರು' [107] ಎಂದು ಸಾರುತ್ತಾನೆ. ಕಾನಫಟಾ ಸಾಹಿತ್ಯದಲ್ಲಾಗಲಿ ಇಲ್ಲವೆ ತಾಂತ್ರಿಕ ಸಾಹಿತ್ಯದಲ್ಲಾಗಲಿ ಅಂತಹ ಹೆಚ್ಚಿನ ಆಧ್ಯಾತ್ಮಿಕ ಚಿಂತನೆಗಳೇನೂ ಇಲ್ಲ. ಅವೆಲ್ಲ ಬಹುಮಟ್ಟಿಗೆ ಸಾಂಪ್ರದಾಯಿಕ ಪದ್ಧತಿ, ಪೂರ್ವಕಲ್ಪನೆ ಹಾಗೂ ವಾದಗಳನ್ನು ಸಡಿಲಾಗಿ ಸಂಶ್ಲೇಷಣೆಗೆ ಒಳಪಡಿಸುವ ಮಟ್ಟಿಗೆ ತೃಪ್ತಿಯನ್ನು ತಳೆಯುತ್ತವೆ. 'ದ್ವೈತ ಹಾಗೂ ಅದ್ವೈತಗಳಾಚೆ' ಎಂದೆನ್ನುವ ನುಡಿಗಟ್ಟುಗಳು ತಾಂತ್ರಿಕ ಸಿದ್ಧಾಂತಗಳ 'ಧಾರ್ಮಿಕ' ಶ್ರೇಷ್ಠತ್ವವನ್ನು ಕೆಲಮಟ್ಟಿಗೆ ಸಾರುತ್ತವಷ್ಟೆ. ತತ್ವಜ್ಞಾನದ ತರ್ಕಸಮ್ಮತವಾದ ಸ್ಥಾನವನ್ನೇನೂ ಅವು ಸೂಚಿಸುವುದಿಲ್ಲ. ಒಂದರ್ಥದಲ್ಲಿ ಅವೆಲ್ಲವುಗಳೆಂದರೆ ತರ್ಕಸಮ್ಮತವಾದ ಆಧ್ಯಾತ್ಮಿಕತೆಯ ನಿರಾಕರಣೆಗಳಾಗಿವೆ. ಇದು ಜ್ಞಾನವಾಗಿರದೆ, ಒಂದು ಮತಾಚರಣೆ, ಉಪಾಸನೆ ಹಾಗೂ ಮನೋಭೌತಿಕ ಶಾಖೆಯಾಗಿದ್ದು (ಯೋಗ) ಈ ಯತಿ ಮಠಗಳು ಅದಕ್ಕೆ ಒತ್ತುಕೊಡುತ್ತವಷ್ಟೆ. ಈ ಸಂದರ್ಭದಲ್ಲಿ, 'ಗೋಸಿಸಂ'ವು ಕಾರ್ಯಾಚರಣೆಯ ಒಂದು ಪರ್ಯಾಯಿ ಮಾರ್ಗವನ್ನು ಸೂಚಿಸಬೇಕಿಲ್ಲ. ಲೇಖಕನು ಶಂಕರರ ನಿಲುವಿನ ಅಪೂರ್ಣತೆಯನ್ನು ಮಾತ್ರ ತೋರಿಸಿಕೊಟ್ಟರೆ ಆಯಿತು. ಎದುರಾಗಿ ನಿಂತು ಹೋರಾಡುವ ಅಪ್ಪಣೆಯೆಂದರೆ 'ಅಕ್ರಿಯ' ಸಿದ್ಧಾಂತದ ಸೋಲುಣ್ಣುವ ಅದರ ಸ್ವಭಾವವನ್ನು ಗುರುತಿಸುವ ಒಂದು ಪ್ರತೀಕವೆಂದು ಮಾತ್ರ ಪರಿಗಣಿಸಲು ಸಾಧ್ಯ. ಹೀಗಾಗಿ ಶಂಕರರ ತಲೆಯನ್ನು ತುಂಡರಿಸಿ ಚೆಲ್ಲುವುದು ನಿಜವಾದ ವಿರಕ್ತಿ (ವಿರಾಗ) ಹುಟ್ಟಿಕೊಳ್ಳುವ ಒಂದು ಸಂದರ್ಭವೆನ್ನಿಸಿದೆ.[108]

ಉಗ್ರಭೈರವ ಕಾಪಾಲಿಕನನ್ನು ಕುರಿತು 'ಗೋಸಿಸಂ'ನ ಮನೋಭಾವವು ಅಸ್ಪಷ್ಟವಾಗಿದೆ. ಶ್ರೀಭೈರವನು ಶಂಕರರಿಗೆ ಸವಾಲೊಡ್ಡಲೆಂದು ಇಂಥ ರೂಪವನ್ನು ಧರಿಸುವನಾದರೂ ಉಗ್ರಭೈರವನನ್ನು ಹೊಗಳಲಾಗಿಲ್ಲ ಇಲ್ಲವೆ ತೆಗಳಲಾಗಿಲ್ಲ. ಏನಿದ್ದರೂ ಕಾಪಾಲಿಕ ಹಾಗೂ ಕಾನಫಟಾ ಮಠಗಳು ಒಂದೇ ಬಗೆಯ ತಾಂತ್ರಿಕ ಪರಂಪರೆಗೆ ಸೇರಿದವುಗಳಾದ್ದರಿಂದ ಕಾನಫಟಾರ ಮನೋಭಾವವು ಬಹುಮಟ್ಟಿಗೆ ಅನುಕೂಲದ್ದಾಗಿರುವ ಸಾಧ್ಯತೆಯನ್ನು ಯಾರೇ ಆದರೂ ಕಂಡುಕೊಳ್ಳುವಂತಿದೆ. ಈ ಸಂಗತಿ ಹೀಗಿದೆ ಎಂಬುದು 'ಗೋಸಿಸಂ' ನ ಮುಂದಿನ ಪರಿಚ್ಛೇದಗಳಿಂದ ಸ್ಪಷ್ಟವಾಗುತ್ತದೆ. ಒಂದನೆಯ ಪರಿಚ್ಛೇದದಲ್ಲಿ

---

107. ಸಂ. ಟಿ. ವಿದ್ಯಾರತ್ನ, i. 110.

108. 'ಗೋಸಿಸಂ'ವು ಶಂಕರರನ್ನು ಟೀಕಿಸಲು ಬಯಸುವುದಷ್ಟೇ ಅಲ್ಲದೆ ಅವರನ್ನು ಕಾನಫಟಾ ಪರವಾದವರೆಂದು ಸಾಧಿಸಬಯಸುತ್ತದೆ. ಈ ಪರಿಚ್ಛೇದದ ಮುಂದಿನ ಭಾಗವು ವಿಷ್ಣು, ಶಿವ ಮತ್ತು ಶಕ್ತಿಯ ಆರಾಧನೆಯಿಂದಾದ ಶಂಕರರ ಮುನ್ನಡೆಯಿಂದ ಹಿಡಿದು ಮಹಾಸಿದ್ಧರಿಂದ ಅವರಿಗಾದ ಅಂತಿಮ ಜ್ಞಾನೋದಯದ ವರೆಗೆ ಹಾಗೂ ಅವರು ಹಿಡಿದ ನಾಥರ ಮಾರ್ಗದವರೆಗೆ (ನಾಥ ಮಾರ್ಗ) ಬಣ್ಣಿಸುತ್ತದೆ.

ಲೇಖಕನು ನಾಥಸಿದ್ಧರ ಸಿದ್ಧಾಂತದ ಶ್ರೇಷ್ಠತೆಯನ್ನು ಕುರಿತು ಒತ್ತಿ ಹೇಳುವನಾದರೂ ಕಾಪಾಲಿಕ ಸಂಪ್ರದಾಯಕ್ಕೆ ಗುಣವನ್ನು ಆರೋಪಿಸಿ ಕ್ರಮಬದ್ಧತೆಯನ್ನು ನೀಡುತಾನೆ (ಪು. 18):

> ನಿಜವಾಗಿಯೂ, ಈ (ಸಿದ್ಧರು) ಕಾಪಾಲಿಕನ ಬಗೆಗಿನ ತಮ್ಮ ಶ್ರದ್ಧೆಯಿಂದಾಗಿ ಕಾಪಾಲಿಕ ಸಿದ್ಧಾಂತವನ್ನು ಎತ್ತಿ ಹಿಡಿಯುವ[109] ರಾದರೂ ನಿಜ (ಸಂಗತಿ ಮಾತ್ರ) ಹೀಗಿಲ್ಲ. ನಮ್ಮ ಸಿದ್ಧಾಂತವು ಎಲ್ಲ ಬಗೆಯ ಭೌತಿಕ ಬಂಧನಗಳಾಚೆಯದು (ಅವಧೂತ).
>
> ಇದಲ್ಲದೆ ಕಾಪಾಲಿಕ ಸಿದ್ಧಾಂತವಾದರೂ ನಾಥ (ಶಿವ)ನಿಂದಲೇ ಬಿಡಿಸಿ ತೋರಿಸಲಾದುದು. ನಾಥನು ಈ ಸಂಪ್ರದಾಯವನ್ನು ಬಿಡಿಸಿ ತೋರಿಸಿದ್ದನು.

ಈ ಲೇಖಕನು ಮುಂದೆ ಕಾಪಾಲಿಕ ಸಿದ್ಧಾಂತವನ್ನು ವಿವರಿಸುವವರಾದ ಹನ್ನೊಂದು ಜನ ಯತಿಗಳ ಒಂದು ಪಟ್ಟಿಯನ್ನು 'ಶಾಬರ ತಂತ್ರ' ದಿಂದ ಉದ್ಧರಿಸುತ್ತಾನೆ. ಈ ಹೆಸರುಗಳು ಹೀಗಿವೆ: ಆದಿನಾಥ, ಅನಾದಿ, ಕಾಲ, ಅತಿಕಾಲ,[110] ಕರಾಲ, ವಿಕರಾಲ, ಮಹಾಕಾಲ, ಕಾಲಭೈರವ, ಬಟುಕ, ಭೂತನಾಥ, ವೀರನಾಥ ಹಾಗೂ ಶ್ರೀಕಂಠ. ಈ ಹನ್ನೆರಡು ಜನರಿಗೆ ಹನ್ನೆರಡು ಜನ ಶಿಷ್ಯಂದಿರಿದ್ದರು. ಅವರೆಂದರೆ: ನಾಗಾರ್ಜುನ, ಜಡಭರತ, ಹರಿಶ್ಚಂದ್ರ, ಸತ್ಯನಾಥ, ಭೀಮನಾಥ, ಗೋರಕ್ಷ, ಚರಪಟ, ಅವಧ್ಯ, ವೈರಾಗ್ಯ, ಕಂಠಧಾರಿನ್, ಜಲಂಧರ, ಹಾಗೂ ಮಲಯಾರ್ಜುನ. ಈ ಶಿಷ್ಯಂದಿರು '(ಕಾಪಾಲಿಕ) ಸಂಪ್ರದಾಯದ ಮೂಲ ಪ್ರವರ್ತಕರು (ಮಾರ್ಗ ಪ್ರವರ್ತಕರು),'[111] ಇವುಗಳ ಪೈಕಿ ಹಲವು ಹೆಸರುಗಳು ಎಂಬತ್ನಾಲ್ಕು ಸಿದ್ಧರ ಹಾಗೂ ಒಂಬತ್ತು ಜನ ನಾಥರುಗಳುಳ್ಳ 'ಕಾನಫಟಾ'ದ ಪಟ್ಟಿಗಳಲ್ಲಿ ಮರುಕಳಿಸುತ್ತವೆ. ಇವುಗಳಲ್ಲೆಲ್ಲ ಹೆಚ್ಚು ಗಮನಾರ್ಹವಾದ ಹೆಸರೆಂದರೆ ಸ್ವತಃ ಗೋರಖನಾಥನದೇ (ಗೋರಕ್ಷ) ಆಗಿದೆ.[112] ಈ ಹೇಳಿಕೆ ಹಾಗೂ ಕಾನಫಟಾ ಆರಾಧನಾ ಪದ್ಧತಿಗಳ ಸಮಾನ ಗುಣಲಕ್ಷಣಗಳನ್ನಾಧರಿಸಿ ಕೆಲವು ಜನ ಆಧುನಿಕ ಅಧಿಕೃತ ವ್ಯಕ್ತಿಗಳು ನಂಬುವ ಒಂದು ಸಂಗತಿ ಎಂದರೆ ಎರಡನೆಯ ಈ ಸಂಪ್ರದಾಯ (School) ಎಂದರೆ ಪ್ರಾಚೀನ ಕಾಲದ ಕಾಪಾಲಿಕ ಸಂಪ್ರದಾಯದ ಸ್ಥಿತ್ಯಂತರಗೊಂಡ ಸಂಸ್ಥೆಯಾಗಿದೆ ಎಂಬುದು.[113] ಏನಿದ್ದರೂ

---

109. ಇದು ಈ ಹಿಂದಿನ ಉಗ್ರಭೈರವ ಅಧ್ಯಾಯಕ್ಕೆ ಸಂಬಂಧಿಸಿದಂತಿದೆ.
110. ಎಸ್. ಬಿ. ದಾಸಗುಪ್ತಾ ('Obscure --- ' ಪು. 207) 'ಅತಿಕಾಲಕ'ವನ್ನು 'ವೈಕಾಲಿಕ'ದಿಂದ ಬದಲಾಯಿಸುತ್ತದೆ. ಅವರು ಈ ಒಕ್ಕಣೆಯನ್ನು ಎಲ್ಲಿಂದ ಪಡೆದರೆಂಬುದು ನಮಗೆ ಗೊತ್ತಿಲ್ಲ.
111. 'ಗೋಸಿಸ', pp. 18-19.
112. ಬೇರೆ ಬೇರೆ ಕಾಪಾಲಿಕ ಪಟ್ಟಿಗಳ ಸಾರಾಂಶಗಳಿಗಾಗಿ, ನೋಡಿ ಎಸ್. ಬಿ. ದಾಸಗುಪ್ತಾ, 'Obscure --- ' pp. 202-10.
113. ಘುರ್ಯೆ, ಪು. 128. ಅಲ್ಲದೆ ನೋಡಿ ಜೆ. ಡಬ್ಲ್ಯು. ಬ್ರಿಗ್ಸ್, 'Gorakhnāth and the Kānphata Yogīs,' p. 218.

ಇತ್ತೀಚಿನ 'ಗೋಸಿಸಂ' ಒಂದು ಐತಿಹಾಸಿಕ ದಾಖಲೆಯೆಂದು ವಾಸ್ತವದಲ್ಲಿ ನಿರುಪಯೋಗಿಯಾಗಿದೆಯಲ್ಲದೆ, ಇವೆರಡು ಸಂಪ್ರದಾಯಗಳ ನಡುವಣ ಸಮಾನತೆಯ ಸಂಗತಿಗಳಾದ ಮಾಂಸಸೇವನೆ, ಮದ್ಯಸೇವನೆ, ಯೋಗದ ಮೂಲಕ ಸಾಮರ್ಥ್ಯಗಳನ್ನು ಪಡೆಯುವುದು, ರುದ್ರಭೂಮಿಗಳಲ್ಲಿ ವಾಸಿಸುವುದು ಹಾಗೂ ಇನ್ನಿತರ ಈ ಬಗೆಯ ಸಂಗತಿಗಳು ಇಡಿಯ ತಾಂತ್ರಿಕ ಸಂಪ್ರದಾಯಕ್ಕೆಯೇ ಸಮಾನವಾದವುಗಳು. ಹೀಗಾಗಿ ಐತಿಹಾಸಿಕ ಊಹೆಗಳನ್ನಾಧರಿಸಿದ ಈ ಬಗೆಯ ಸಂಗತಿಗಳ ಬೆಲೆ ಸೊನ್ನೆಯೆಂದೇ ನಾವು ಭಾವಿಸುತ್ತೇವೆ.

ಮುಂದೆ, 'ಗೋಸಿಸಂ'ದ ಲೇಖಕನು ಒಂದು ಪ್ರಶ್ನೆಯನ್ನೆತ್ತುತ್ತಾನೆ ಪು. 20). ಅದೆಂದರೆ: 'ಕಾಪಾಲಿಕ ಮಾರ್ಗವನ್ನು ತೆರೆದು ತೋರಿಸಲು ಕಾರಣನೇನು?' ಎಂಬ ಪ್ರಶ್ನೆ. ಇದಕ್ಕೆ ಒಂದು ಆಖ್ಯಾಯಿಕೆಯಲ್ಲಿ ಉತ್ತರ ದೊರಕುತ್ತದೆ. ಒಂದು ಸಲ ವಿಷ್ಣುವಿನ ಇಪ್ಪತ್ನಾಲ್ಕು ಜನ ಅವತಾರ ಪುರುಷರು ಜಂಬದಿಂದ ನಶೆಯೇರಿದರು (ಮದ, ಹಾಗೂ = ಮದ್ಯ). ಮರ್ತ್ಯ ಪ್ರಾಣಿಗಳು ತಮ್ಮನ್ನು ತಾವು ಸಂತಸಪಡಿಸಿಕೊಳ್ಳುವಂತೆಯೇ ವರಾಹ (ಕಾಡು ಹಂದಿ), ನೃಸಿಂಹ (ಮಾನವ ಸಿಂಹ) ಹಾಗೂ ಇನ್ನಿತರ ಅವತಾರಗಳು ಕಾಡು ಪ್ರಾಣಿಗಳನ್ನು ಬೆದರಿಸುತ್ತ, ಪಟ್ಟಣ ಹಾಗೂ ಗ್ರಾಮಗಳನ್ನು ಮೆಟ್ಟಿ ಹಾಕುತ್ತ ಹಾಗೂ ಬೇರೆ ಬಗೆಯ ತುಂಟಾಟಗಳನ್ನು ಆಡುತ್ತ ಭೂಮಿಯನ್ನು ಒಡೆದು ಬಿಡಲು ಆರಂಭಿಸಿದವು. ಕೃಷ್ಣನಲ್ಲಿ ಮಹಾಭಾರತದ ಭಾವನೆಗಳು ತುಂಬಿಕೊಂಡಿದ್ದವು. ಅಲ್ಲದೆ ಪರಶುರಾಮನು ಒಬ್ಬ ಕ್ಷತ್ರಿಯನ ತಪ್ಪಿನಿಂದಾಗಿ ಅಸಂಖ್ಯ ಕ್ಷತ್ರಿಯರನ್ನೆಲ್ಲ ಸಂಹಾರಗೊಳಿಸಿದನು. ಇವೆಲ್ಲ ನೀಚ ಕೃತ್ಯಗಳಿಂದ ಕೆರಳಿದ ನಾಥನು ಇಪ್ಪತ್ನಾಲ್ಕು ಜನ ಕಾಪಾಲಿಕರ ರೂಪಗಳನ್ನು ಧರಿಸಿದನು.[114] ಮುಂದೆ ನಡೆದ ಕಾಳಗದಲ್ಲಿ ಕಾಪಾಲಿಕರು ಅವತಾರಗಳ ತಲೆಗಳನ್ನು ತುಂಡರಿಸಿ ಚೆಲ್ಲಿ ಅವುಗಳ ತಲೆಬುರುಡೆಗಳನ್ನು ತಮ್ಮ ಕೈಯಲ್ಲಿ ಹಿಡಿದುಕೊಂಡು, ಎಲ್ಲೆಡೆಗಳಲ್ಲಿ ಅಲೆದಾಡಲು ಶುರು ಮಾಡಿದರು. ಕಾಪಾಲಿಕ ಸಂಪ್ರದಾಯ ಹುಟ್ಟಿದುದು ಹೀಗೆ. ತಮ್ಮ ತಲೆಗಳನ್ನು ಕಳೆದುಕೊಂಡ ಕಾರಣ ಆ ಅವತಾರಗಳ ಜಂಬ ಇಳಿಯಿತು. ಇದರ ಫಲವೆಂದರೆ ಅವರಿಗೊಂದು ವರವನ್ನು ನೀಡಲಾದುದು. ನಾಥರು ಅವರ ತಲೆಬುರುಡೆಗಳನ್ನು ಅವರವರ ದೇಹಗಳಿಗೆ ಅಂಟಿಸಿ ಅವರೆಲ್ಲರನ್ನು ಜೀವಂತರನ್ನಾಗಿ ಮಾಡಿದರು.[115]

ಉಗ್ರಭೈರವನ ಆಖ್ಯಾಯಿಕೆಯ ಐತಿಹಾಸಿಕ ಬೆಲೆ ಏನೇ ಆಗಿದ್ದರೂ ಈ ಆಖ್ಯಾಯಿಕೆ ಹಾಗೂ ಈ ಮಿಥ್ ಕೂಡಿ ಇವು ತಾಂತ್ರಿಕ ಸಂಪ್ರದಾಯ ಹಾಗೂ ಬ್ರಾಹ್ಮಣ್ಯದ

---

114. ಈ ಮೊದಲು ನಮೂದಿಸಲಾದಂತೆ ಇವರು ಇದೇ ಹನ್ನೆರಡು ಜನ ಶಿಕ್ಷಕರು ಹಾಗೂ ಹನ್ನೆರಡು ಜನ ವಿದ್ಯಾರ್ಥಿಗಳೆಂದು ಕಾಣುತ್ತದೆ.

115. 'ಗೋಸಿಸಂ,' ಪು. 20. ಕೃಷ್ಣನನ್ನು ಅವನ ವ್ಯಭಿಚಾರದ ಭಾವನೆಗಳಿಂದಾಗಿ (ವ್ಯಭಿಚಾರೀಭಾವ) ಪ್ರತ್ಯೇಕಿಸಲಾಗಿದೆ ಎಂಬುದನ್ನು ಗಮನಿಸಿ. ಬಹಳಷ್ಟು ಸಲ ತಾಂತ್ರಿಕರ ಮೇಲೆಯೇ ಈ ಅಪಾದನೆಯನ್ನು ಹೊರಿಸಲಾಗುತ್ತದೆ.

ಸಾಂಪ್ರದಾಯಿಕತೆಗಳ ನಡುವೆ ಇರುವ ಹಗೆತನವನ್ನು ಪ್ರತಿಬಿಂಬಿಸುತ್ತವೆ. 'ಗೋಸಿಸಂ'ದ ಲೇಖಕನು ಕಾನಫಟಾ ಇವರ ವಾದದ ಬದಿಯನ್ನು ಪ್ರತಿನಿಧಿಸಲೆಂದು ಸಿದ್ಧರ ಬದಲು ಕಾಪಾಲಿಕರನ್ನು ಆಯ್ದುಕೊಂಡಿರುವ ಈ ನಿಜಸಂಗತಿಯು ಸೂಚಿಸುವುದೇನೆಂದರೆ, ಇವೆರಡೂ ಸಂಪ್ರದಾಯಗಳು ಪರಸ್ಪರ ಸ್ನೇಹಭಾವವನ್ನು ಮಾತ್ರ ಹೊಂದಿದ್ದವಷ್ಟೇ ಅಲ್ಲದೆ, ಅವರ ಈ ಕಥೆಗಳು ತುಂಬ ಜನಜನಿತವಾಗಿದ್ದವೆಂದು. ಮಾಧವಾಚಾರ್ಯರ, ಉಗ್ರಭೈರವನನ್ನು ಕುರಿತಾದ ವೇದಾಂತಿಕ ಗ್ರಂಥಪಾಠವು ಕಾನಫಟಾರನ್ನು ಕುರಿತಾದ 'ಗೋಸಿಸಂ'ದ ಕಥನಕ್ಕಿಂತಲೂ ಖಂಡಿತವಾಗಿಯೂ ಹಿಂದಿನ ಕಾಲದ್ದು.

ವಿಷ್ಣುವಿನ ಅವತಾರಗಳು ಹಾಗೂ ಇಪ್ಪತ್ನಾಲ್ಕು ಜನ ಕಾಪಾಲಿಕರ ನಡುವೆ ನಡೆದ ಕಾಳಗವೆಂದರೆ ಈ ಮೊದಲ ಆಕರಗಳಲ್ಲಿ ಬಣ್ಣಿಸಲಾದ ಜೈನರು ಹಾಗೂ ಕಾಪಾಲಿಕರ ನಡುವಣ ಘರ್ಷಣದ ಮುಂದುವರಿದ ಪ್ರತಿಫಲನವಾಗಿರುವ ಸಾಧ್ಯತೆಯಿದೆ. ಭಾರತದ ಹಲವು ಭಾಗಗಳಲ್ಲಿ ವೈಷ್ಣವರು ಜೈನರಿಗಿಂತ ಹೆಚ್ಚಿನ ಜನಪ್ರಿಯತೆ ಹಾಗೂ ಪ್ರಾಭಾವಗಳನ್ನು ಹೊಂದಿರುವರಲ್ಲದೆ, ಅವರು ತಾಂತ್ರಿಕ ಶೈವಸಂಪ್ರದಾಯವನ್ನು ಕುರಿತಾದ ಜೈನರ ಹಗೆತನವನ್ನು ಹಿಡಿದು ಹಲವಾರು ನಂಬಿಕೆ ಹಾಗೂ ಆಚರಣೆಗಳನ್ನು ಕೂಡ ಹೀರಿಕೊಂಡಿರುವರು.[116]

## ಶಂಕರರು ಹಾಗೂ ಕ್ರಕಚ ಅಥವಾ ಬೋಧೋಲ್ಬಣ-ನಿತ್ಯಾನಂದ

ಈ ಆಖ್ಯಾಯಿಕೆಯ ಸಂದರ್ಭದಲ್ಲೂ ಕೂಡ ಎರಡು ಬಗೆಯ ಕಥನಗಳಿವೆ. ಒಂದು ಮಾಧವರದಾದರೆ ಇನ್ನೊಂದು ಆನಂದಗಿರಿ ಅವರದು. ಇವೆರಡರ ರೂಪುರೇಖೆಗಳು ಬಹುಮಟ್ಟಿಗೆ ಒಂದೇ ಬಗೆಯಾಗಿದ್ದರೂ ಅವುಗಳ ಮುಖ್ಯವ್ಯತ್ಯಾಸಗಳು ತೋರುವ ಅಂಶವೆಂದರೆ ಇವೆರಡೂ ಆಖ್ಯಾಯಿಕೆಗಳು ಬೇರೆ ಬೇರೆ ಸಂಪ್ರಯಗಳಲ್ಲಿ ಹುಟ್ಟಿಬಂದವುಗಳೆಂದು. ಆನಂದಗಿರಿಯು ತನ್ನ ಕಥೆಯನ್ನು ಆರಂಭಿಸುವುದು ಉಜ್ಜಯನಿಯಲ್ಲಾದರೆ, ಮಾಧವರು ಆರಂಭಿಸುವುದು ಕರ್ನಾಟಕದಲ್ಲಿ. ಮಾಧವರು, ಶಂಕರರು ಕಾಪಾಲಿಕನನ್ನು ಕ್ರಕಚನ ವಿರೋಧಿಯೆಂದರೆ, ಆನಂದಗಿರಿಯು ಅವನನ್ನು ಬೋಧೋಲ್ಬಣ ನಿತ್ಯಾನಂದನೆಂದು ಕರೆಯುತ್ತಾನೆ. ಈ ಎರಡನೆಯ ಕಾಪಾಲಿಕನಿಗೆ ಕೂಡ ಬಟುಕನಾಥನೆಂಬ

---

116. ಮುಂದಿನ ಕಾಲದ ವೈಷ್ಣವರ ಮನೋಧರ್ಮಗಳ ಮೇಲೆ ಎದ್ದು ಕಾಣುವ ಜೈನಪ್ರಭಾವದ ಉದಾಹರಣೆ ಎಮ್. ಕೆ. ಗಾಂಧಿಯವರಲ್ಲಿ ಸಿಗುತ್ತದೆ. ಗಾಂಧೀಜಿಯವರ ಕೆಲವು ಯೋಚನೆಗಳು ಕೆಲಮಟ್ಟಿಗೆ ಯುರೋಪಿನ್ ಪೂರ್ವ ನಿದರ್ಶನಗಳಿಂದ (ಪ್ರಿಸೀಡೆಂಟ್ಸ್) ಸ್ಫೂರ್ತಿಯನ್ನು ಪಡೆದವುಗಳಾದರೂ, ಉಳಿದವುಗಳಾದ ಅಹಿಂಸೆಯ ಬಗೆಗಿನ ಶ್ರದ್ಧೆ, ಯತಿತ್ವ, ಸ್ವಚ್ಛತೆ ಹಾಗೂ ಶಾಕಾಹಾರಗಳಂತಹ ಸಂಗತಿಗಳು ಅವರ ಗುಜರಾತಿ ವೈಷ್ಣವ ಹಿನ್ನೆಲೆಯಿಂದ ಬಂದವುಗಳು. ಪುರಾತನ ಕಾಲದಿಂದಲೂ ಗುಜರಾತವು ಜೈನಪ್ರಭಾವದ ಕೇಂದ್ರವಾಗಿದೆ. ಹೀಗಾಗಿ, ಆ ಎಲ್ಲ ನಂಬಿಕೆಗಳು ಹಿಂದು ಧರ್ಮಕ್ಕಿಂತಲೂ ಹೆಚ್ಚು ಜೈನಧರ್ಮದಿಂದ ಪ್ರಚೋದಿತವಾಗಿವೆ.

ಒಬ್ಬ ಶಿಷ್ಯನಿರುವನು. ಆನಂದಗಿರಿಯು ತನ್ನ ಕಥನವನ್ನು ಶಂಕರರು ಹಾಗೂ ಬೋಧೋಲ್ಬಣ ನಿತ್ಯಾನಂದರ ನಡುವೆ ನಡೆದ ದೀರ್ಘವಾದ ಒಂದು ಚರ್ಚೆಯಿಂದ ಆರಂಭಿಸುತ್ತಾನೆ. ಮಾಧವರು ಈ ಚರ್ಚೆಯನ್ನು ಕೈಬಿಟ್ಟಿದ್ದಾರೆ.[117] ಅಲ್ಲದೆ ಅವರು ಆನಂದಗಿರಿಯಿಂದ ಕೈಬಿಡಲಾದ ಕೆಲವು ಅರೆಐತಿಹಾಸಿಕ ಸಂಗತಿಗಳನ್ನು ಹಾಗೂ ಯುದ್ಧವಿವರಗಳನ್ನು ಸೇರಿಸಿದ್ದಾರೆ. ಮಾಧವರ ಕಥನವು ಸಾಮಾನ್ಯವಾಗಿ ಹೆಚ್ಚು ಸುಸಂಗತವೂ, ಪರಿಪೂರ್ಣವೂ ಆಗಿರುವ ಕಾರಣ ನಾವು ನಮ್ಮ ಚರ್ಚೆಯನ್ನು ಬಹಳಷ್ಟು ಮಟ್ಟಿಗೆ ಇದನ್ನಾಧರಿಸಿ ಕೈಕೊಳ್ಳಲಿರುವೆವು.

ಈ ಗ್ರಂಥಪಾಠದ ಹೇಳಿಕೆಯಂತೆ, ಶಂಕರರು ಸರ್ವೋತ್ತಮರಾದ ತಮ್ಮ ಶಿಷ್ಯರನ್ನು ಹಾಗೂ ಸುಧನ್ವನೆಂಬ ಅರಸನನ್ನು ಒಡಗೂಡಿ ದಕ್ಷಿಣ ಭಾರತದ ತೀರ ಕೆಳ ತುದಿಗಿರುವ ಸೇತುವಿನತ್ತ (ರಾಮೇಶ್ವರ) ಯಾತ್ರೆಗೆ ಹೊರಟರು. ಇದು ನಾಲ್ಕೂ ದಿಕ್ಕಗಳನ್ನು ಗೆದ್ದುಕೊಳ್ಳಲೆಂದು (ದಿಗ್ವಿಜಯ) ಹೊರಟ ಪಯಣದ ಆರಂಭವಾಗಿತ್ತು. ಅವರು ರಾಮೇಶ್ವರದಲ್ಲಿ ಹಲವು ಜನ ಅಬ್ರಾಹ್ಮಣರು ಹಾಗೂ ಆರ್ಯರಲ್ಲದ ಶಾಕ್ತರನ್ನು ಭೆಟ್ಟಿಯಾದರು. ಶಂಕರರು ವಾದಸಭೆಗಳಲ್ಲಿ ಅವರನ್ನು ಸೋಲಿಸಿದರು. ಈ ಯತಿಯು ರಾಮನಾಥದೇವನನ್ನು ಗೌರವಿಸಿದರಲ್ಲದೆ ಚೋಳ, ಪಾಂಡ್ಯ ಹಾಗೂ ದ್ರವಿಡರನ್ನು ಮತಾಂತರಗೊಳಿಸಿದರು. ಆಮೇಲೆ ಅವರು ಉತ್ತರದಲ್ಲಿ ಕಾಂಚಿಗೆ ಹೋಗಿ ತಲುಪಿದರು. ಅಲ್ಲಿ ಅವರು ಒಂದು ಅಂದವಾದ ದೇವಾಲಯವನ್ನು ಕಟ್ಟಿಸಿ, ವೇದಗಳಿಂದ ಅಧಿಕೃತರಾದ (ಶ್ರುತಿಸಮ್ಮತ) ಹೆಣ್ಣು ದೇವತೆಗಳ ಪೂಜೆ ಅರ್ಚೆಗಳನ್ನು ಆರಂಭಿಸಿ, ಅವುಗಳನ್ನು ವಿಸ್ತರಿಸಿ ತಾಂತ್ರಿಕರನ್ನು ಸದೆಬಡಿದರು. ಅವರು ಈಶಾನ್ಯದತ್ತ ಹೊರಟು ಆಂಧ್ರದ ಮೂಲಕ ಹಾಯ್ದು, ವೆಂಕಟ ಬೆಟ್ಟಗಳ ಒಡೆಯನಾದ (ವೆಂಕಟಾಚಲೀಶ) ವೆಂಕಟೇಶ್ವರನಿಗೆ ತಮ್ಮ ಗೌರವಗಳನ್ನು ಸಲ್ಲಿಸಿ, ಮುಂದೆ ಸಾಗಿ ವಿದರ್ಭ ರಾಜ್ಯದ ರಾಜಧಾನಿಗೆ (ಪೂರ್ವ ಮಹಾರಾಷ್ಟ್ರ) (xv. 1-7) ಹೋಗಿ ತಲುಪಿದರು:

> ಅಲ್ಲಿ, ಕ್ರಥಕೈಶಿಕರ (ವೈದರ್ಭ) ಅರಸನು ಭಯಭಕ್ತಿಗಳಿಂದ ಅವರನ್ನು ಬಳಿಸಾರಿ, ಪೂಜೆಯನ್ನು ಸಲ್ಲಿಸಿದನು. (ತರುವಾಯ, ಶಂಕರರು) ತಮ್ಮ ಶಿಷ್ಯಂದಿರು 'ಭೈರವತಂತ್ರ'ದ ಅನುಯಾಯಿಗಳ ಪಾಷಂಡಿತನದ ದೃಷ್ಟಿಕೋನವನ್ನು ಮೆಟ್ಟಿ ಹಾಕುವಂತೆ ನೋಡಿಕೊಂಡರು.

ಈ 'ಭೈರವತಂತ್ರದ ಅನುಯಾಯಿಗಳು' ಯಾರೆಂಬುದನ್ನು ಗುರುತಿಸಲಾಗಿಲ್ಲವಾದರೂ ಅವರು ಕಾಪಾಲಿಕರಾಗಿರುವ ಸಾಧ್ಯತೆ ಹೆಚ್ಚು. ಏಕೆಂದರೆ, ಹಲವು ಲೇಖಕರು ಕಾಪಾಲಿಕ ಯತಿಗಳನ್ನು, ಶಿವನ ಭಯಂಕರ ರೂಪದ ಭೈರವನನ್ನು

117. ಈ ಚರ್ಚಾಕೂಡದಲ್ಲಿ ಸಾಕಷ್ಟು ಧಾರ್ಮಿಕ ಮಾಹಿತಿಯಿದೆ. ಅದನ್ನು ಕುರಿತು ಮುಂದೆ ಚರ್ಚಿಸಲಾಗುವುದು. pp. 83-85.

ಆರಾಧಿಸುವವರೆಂದು ಚಿತ್ರಿಸುತ್ತಾರೆ. ಮುಂದೆ ಕ್ರಕಚನೇ 'ಭೈರವಾಗಮಗಳ ತಿರುಳನ್ನು ಕುರಿತು ಗೊಡ್ಡು ಹರಟೆಗಳನ್ನು ಕೊಚ್ಚಿದ'ನೆಂದು ಹೇಳಲಾಗಿದೆ. ಏನಿಲ್ಲೆಂದರೂ, 'ಭೈರವತಂತ್ರ'ದ ಈ ಅನುಯಾಯಿಗಳು ಇದೇ ಬಗೆಯ ಬೇರಾವುದಾದರೂ ತಾಂತ್ರಿಕರ ಪಂಗಡಕ್ಕೆ ಸೇರಿದವರಾಗಿರಲು ಸಾಕು. ಮಾಧವರು ಈ ರೀತಿ ಮುಂದುವರಿಸುತ್ತಾರೆ (xv. 8-9) :

> ತರುವಾಯ ವಿದರ್ಭದ ರಾಜನು ಕರ್ಣಾಟ ನಾಡಿನತ್ತ ತೆರಳ ಬಯಸಿದ ಶಂಕರರಿಗೆ ತಲೆಬಾಗಿ ಇಂತೆಂದನು: ' ಆ ನಾಡು ಕಾಪಾಲಿಕರ ಹಲವಾರು ತಂಡಗಳಿಂದ (ತುಂಬಿರುವ) ಕಾರಣ ನೀವು ಭೇಟಿ ನೀಡಲು ಅನುಕೂಲದ್ದಲ್ಲ.'
>
> 'ನಾನು ಹೀಗೆನ್ನಲು ಕಾರಣ ಏನೆಂದರೆ ಅವರು ನಿಮ್ಮ ಕೀರ್ತಿಯನ್ನು ಸಹಿಸಲಾರರು. ಅವರಲ್ಲಿ ಶೃತಿಗಳ ಬಗೆಗೆ ಗಟ್ಟಾದ ಹಗೆತನ ಇದೆ. ಅವರು ಪ್ರಪಂಚದ ದುರದೃಷ್ಟಗಳಿಂದ ಸಂತಸ ಪಡುವವರೂ, ಗೌರವಾನ್ವಿತ ಜನರ ಬಗೆಗೆ ಹಗೆತನವನ್ನು ತಳೆಯುವವರೂ ಆಗಿದ್ದಾರೆ.'

ಹೇಗಿದ್ದರೂ, ಶಂಕರರ ರಾಜ ಶಿಷ್ಯನಾದ ಸುಧನ್ವನನು ಆ ಯತಿಗೆ ತಾನು ರಕ್ಷಣೆಯನ್ನು ಒದಗಿಸುವುದಾಗಿ ಭರವಸೆಯನ್ನು ನೀಡಿದನು. ಅವರೆಲ್ಲರೂ 'ಕಾಪಾಲಿಕರ ಸಮುದಾಯಗಳನ್ನು ಗೆದೆಯಲೆಂದು' ಮುಂದಕ್ಕೆ ಸಾಗಿದರು (xv. 10-14):

> ಕಾಪಾಲಿಕ ಯತಿಗಳ ಅಗ್ರಗಣ್ಯನಾದ ಕ್ರಕಚನಿಗೆ (ಶಂಕರರ) ಆಗಮನದ ವಾರ್ತೆ ತಿಳಿದುಬರುತ್ತಲೇ ಅವನು ಅವರನ್ನು ಕಾಣಲು ಬಂದನು.
>
> ಸ್ಮಶಾನಭಸ್ಮವನ್ನು (ಪಿತೃಕಾನನಭಸ್ಮನ್) ಬಳಿದುಕೊಂಡವನು, ಕೈಯಲ್ಲಿ ತಲೆಬುರುಡೆಯ ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡವನು, ತ್ರಿಶೂಲವನ್ನು ಧರಿಸಿದವನು ಹಾಗೂ ತನ್ನನ್ನೇ ಹೋಲುವ ಹಲವರನ್ನೊಡಗೂಡಿದವನು, ಅಹಂಕಾರಿ ಹಾಗೂ ಹೆಮ್ಮೆಯ ಆ (ಕಾಪಾಲಿಕನು) ಹೀಗೆಂದನು:
>
> '(ನೀನು) ಭಸ್ಮವನ್ನೇನೋ ಸರಿಯಾಗಿ ಬಳಿದುಕೊಂಡಿರುವೆ.[118] ಕೈಯಲ್ಲಿ ಶುದ್ಧವೂ, ಸೂಕ್ತವೂ ಆದ ತಲೆಬುರುಡೆಯನ್ನು ಹಿಡಿದುಕೊಳ್ಳುವುದನ್ನು ಬಿಟ್ಟು ಅಶುದ್ಧವಾದ ಈ ಮಣ್ಣಿನ ಪಾತ್ರೆಯನ್ನೇಕೆ ಹಿಡಿದುಕೊಂಡಿರುವೆ? (ನೀನು) ಕಪಾಲಿನ್‌ನನ್ನೇಕೆ ಪೂಜಿಸುತ್ತಿಲ್ಲ?'

---

118. ಶಂಕರರು ಶಿವಭಕ್ತರಾಗಿದ್ದರು. ಹೀಗಾಗಿ ಅವರು ಸಾಂಪ್ರದಾಯಿಕವಾದ ಶೈವ ಭಸ್ಮವನ್ನು ಬಳಿದುಕೊಂಡಿದ್ದರು.

'ಅವನು (ಕಪಾಲಿನ್ ಶಿವನು) ಮದ್ಯದಿಂದ (ಮಧು) ಭೈರವ ಪೂಜೆಯನ್ನು ಹಾಗೂ ರಕ್ತಸಿಕ್ತವಾದ ಕಮಲಗಳೆನ್ನಿಸಿದ ಮಾನವರ ರುಂಡಗಳನ್ನು ಸ್ವೀಕರಿಸದೆ ಹೋದರೆ, ಅವನ ದೇಹವು ತನಗೆ ಸರಿಸಮವುಳ್ಳೂ, ತಾವರೆಗಣ್ಣೆನವಳೂ ಆದ ಉಮೆಯ ಅಪ್ಪುಗೆಯಲ್ಲಿ ಸಂತಸವನ್ನು ಪಡೆಯಲಾದರೂ ಹೇಗೆ ಸಾಧ್ಯ?'

ಕ್ರಕಚನು 'ಭೈರವಾಗಮಗಳ'ನ್ನು ಕುರಿತು ಈ ರೀತಿ ಗೊಳ್ಳು ಹರಟೆಗಳನ್ನು ಕೊಚ್ಚಿದ ತರುವಾಯ ಅರಸ ಸುಧನ್ವನನು ಅವನನ್ನು ದೂರಕ್ಕೆ ಅಟ್ಟುವಂತೆ ತನ್ನ ಅಧಿಕಾರಿಗಳಿಗೆ ಅಪ್ಪಣೆ ಮಾಡಿದನು. ಆ ಕಾಪಾಲಿಕನು ಕೆರಳಿ ಈ ಅವಮಾನದ ಸೇಡನ್ನು ತೀರಿಸಿಕೊಳ್ಳಲೆಂದು ತತ್‌ಕ್ಷಣ ತನ್ನ ಅನುಯಾಯಿಗಳೊಂದಿಗೆ ಹಿಂತಿರುಗಿ ಬಂದನು. ಅವರನ್ನು ಬಿಟಸಾರಿದವನೇ, 'ನಿಮ್ಮ ತಲೆಗಳನ್ನು ತುಂಡರಿಸಿ ಚೆಲ್ಲದಿದ್ದರೆ ನನ್ನ ಹೆಸರು ಕ್ರಕಚನಲ್ಲ (ಗರಗಸ)' ಎಂದು ಅಬ್ಬರಿಸಿದನು(xv. 15-17):

> ಅವನು ಕೆರಳಿದ ಕಾಪಾಲಿಕರ ಹಲವಾರು ಗುಂಪುಗಳನ್ನು (ಕುಲಗಳನ್ನು) ಹೊರಕ್ಕೆ ಕಳಿಸಿದನು. ಅವರ ಕೂಗಾಟ, ಅರಚಾಟಗಳು ಜಲಪ್ರಳಯದ ಮೋಡಗಳಂತೆ ಭಯಂಕರವಾಗಿದ್ದವು. ಅವರೆಲ್ಲರೂ ತಮ್ಮ ಆಯುಧಗಳನ್ನು ಆಕಾಶದೆಡೆಗೆ ಎತ್ತಿ ಹಿಡಿದು ದಾಳಿಯಿಟ್ಟರು.

ಶಂಕರರ ಬ್ರಾಹ್ಮಣ ಅನುಯಾಯಿಗಳೆಲ್ಲ ತುಂಬ ಹೆದರಿ ಕಂಗಾಲಾದರು. ಆದರೆ ನಂಬಿಗಸ್ಥನಾದ ಸುಧನ್ವನನು ನುಗ್ಗಿ ಬರುವ ಕಾಪಾಲಿಕರನ್ನು ಎದುರಿಸಿ, ಅವರನ್ನು ಹಿಂದಕ್ಕಟ್ಟಿದನು. ಆಗ ಕ್ರಕಚನು ತನ್ನ ದಾಳಿಯನ್ನು ರಣರಂಗದ ಇನ್ನೊಂದು ಬದಿಗೆ ಸಾಗಿಸಿ ಬ್ರಾಹ್ಮಣರನ್ನು ಮತ್ತೆ ಗೊಂದಲಕ್ಕೆ ಈಡು ಮಾಡಿದನು. ಅವರೆಲ್ಲರೂ ಹತಾಶರಾಗಿ ಶಂಕರರನ್ನು ಮೊರೆಹೊಕ್ಕರು(xv. 21):

119. xv. 26 ಈ ಅಧ್ಯಾಯನವನ್ನು ಕುರಿತು ಆನಂದಗಿರಿಯ ಕಥನವು ಹೋಲಿಕೆಯ ಯೋಗ್ಯತೆಯದು. ತಾನು ಮತ್ತು ತನ್ನ ಶಿಷ್ಯರು ಶಂಕರರಿಂದ ಸೋಲಿಸಲ್ಪಟ್ಟುದನ್ನು ಕಂಡು, ಬೋಧೋಲ್ಬಣ ನಿತ್ಯಾನಂದನು ಆ ಯತಿಯ ಬಳಿಗೆ ಹೋಗಿ ಇಂತೆಂದನು (chap. xx iii) : "ಸಂಹಾರ ಭೈರವನು ನನ್ನಿಂದ ಗೌರವಿಸಲ್ಪಡಬೇಕಿದೆ. 'ಮಂತ್ರಗಳಿಂದ' ಅವನು ಪ್ರತ್ಯಕ್ಷನಾಗುವಂತೆ ನಾನು ಮಾಡುವೆನು. ಅವನು ನಿನ್ನನ್ನು ಹಾಗೂ ನಿನ್ನ ಪರಿವಾರವನ್ನು ಕಬಳಿಸಿಬಿಡುವನು." ಇಷ್ಟು ನುಡಿದವನೇ, ಮತ್ತೆ ಹೂಂಕರಿಸುತ್ತ (ಸದ್ದು), ತನ್ನ ಎಡಗೈಯಿಂದ ಮಾನವ ತಲೆಬುರುಡೆಯನ್ನು ಹಿಡಿದುಕೊಂಡು, ಮಂತ್ರದಿಂದ ಅದನ್ನು ಮದ್ಯದಿಂದ ತುಂಬಿಸಿ, (ಅದರ) ಅರ್ಧವನ್ನು ತಾನೇ ಸೇವಿಸಿ ಹಾಗೂ ಉಳಿದರ್ಧವನ್ನು ತನ್ನ ಶಿಷ್ಯಂದಿರಿಗೆ ಇತ್ತು; ತನ್ನ ದುಂಡನೆಯ ಕೆಂಗಣ್ಣುಗಳಿಂದ ಆಕಾಶದ ಮಧ್ಯ ಭಾಗವನ್ನು ದಿಟ್ಟಿಸಿ ನೋಡುತ್ತ:- ಅವನು ಹೀಗೆಂದನು: 'ಸಂಹಾರಕಾಲ (ಸಂಹಾರದ ಸಮಯ), ಭೈರವ, ಪ್ರಭು ಹಾಗೂ ಈಶ್ವರ ಎನ್ನಿಸಿದ ನೀನು ಬರಬೇಕು. ಬಂದು ಶೀಘ್ರವಾಗಿ ಈ ಸಂನ್ಯಾಸಿ ಹಾಗೂ ಈತನ ಪರಿವಾರವನ್ನು ಕಬಳಿಸಿ ಹಾಕಬೇಕು."

(ಆಗ) ಆ ಯತಿರಾಜನು ಅವರನ್ನು (ಕಾಪಾಲಿಕರನ್ನು) ತನ್ನ ಹುಂಕಾರದಿಂದ (ಹುಂ ಎಂಬ ಧ್ವನಿ, ಒಂದು ಮಂತ್ರ) ಹೊರಹೊಮ್ಮುವ ಜ್ವಾಲೆಗಳಿಂದ ತತ್‌ಕ್ಷಣ ಸುಟ್ಟು-----ಬೂದಿಯನ್ನಾಗಿ ಮಾಡಿದನು.

ಸುಧನ್ವನು ಹಿಂತಿರುಗಿ ಬಂದು ಶಂಕರರ ಗುಂಪನ್ನು ಸೇರಿಕೊಂಡನು. ಅವನು ಒಂದು ಸಾವಿರದಷ್ಟು ತನ್ನ ಬೇರೆ ಹಗೆಗಳನ್ನು ಸಾಮೂಹಿಕವಾಗಿ ಸಂಹರಿಸಿ ಬಂದಿದ್ದನು. ತನ್ನ ಸೈನ್ಯವೆಲ್ಲ ಕಂಗೆಟ್ಟು ಪಲಾಯನಗೆಯ್ಯುವುದನ್ನು ಕಂಡು ಕ್ರಕಚ ಮತ್ತೆ ಶಂಕರರ ಬಳಿಗೆ ಬಂದು ಅವರಿಗೆ ಹೀಗೆಂದನು (xv. 24-25):

> 'ಎಲವೋ, ದುರುಳ ಸಿದ್ಧಾಂತಗಳನ್ನು ಅನುಸರಿಸುವವನೇ, ನನ್ನ ಸಾಮರ್ಥ್ಯವನ್ನು ಗಮನಿಸು! ನೀನಿನ್ನು ನಿನ್ನ ಕರ್ಮಫಲವನ್ನು ಉಣ್ಣಲಿರುವೆ.' (ಕ್ರಕಚನು) ತನ್ನ ಕಣ್ಣುಗಳನ್ನು ಮುಚ್ಚಿಕೊಂಡು ತನ್ನ ಅಂಗೈ ಮೇಲೊಂದು ತಲೆ ಬುರುಡೆಯನ್ನು ಇರಿಸಿಕೊಂಡು ತುಸು ಹೊತ್ತು ಧ್ಯಾನಮಗ್ನನಾದನು.
>
> 'ಭೈರವಾಗಮಗಳ' ಸ್ವಾಮಿಯು ಈ ರೀತಿ ಧ್ಯಾನಿಸಿದ ಬಳಿಕ ತಲೆಬುರುಡೆಯು ಮದ್ಯದಿಂದ (ಸುರಾ) ತುಂಬಿಕೊಂಡಿತು. ಅದರ ಅರ್ಧದಷ್ಟನ್ನು ಸೇವಿಸಿಯಾದ ಬಳಿಕ ಅವನು (ಉಳಿದ) ಅರ್ಧವನ್ನು ಹಿಡಿದೆತ್ತಿ ಭೈರವನನ್ನು ಸ್ಮರಿಸಿದನು.

ತತ್‌ಕ್ಷಣದಲ್ಲಿ ಈ ದೇವನು ಒಬ್ಬ ಮಹಾಕಾಪಾಲಿನ್‌ನ ರೂಪದಿಂದ ಪ್ರತ್ಯಕ್ಷನಾದನು. ಅವನು ಮಾನವನ ತಲೆಬುರುಡೆಗಳ ಕೊರಳ ಹಾರವನ್ನು ತೊಟ್ಟಿದ್ದನು. ಅವನ ತಲೆಗೂದಲು ಜಡೆಗಟ್ಟಿತ್ತು (ಜಟಾ). ಅವನು ತ್ರಿಶೂಲವನ್ನು ಹಿಡಿದುಕೊಂಡಿದ್ದನು. ಅವನು ವಿಕಟವಾದ ಅಟ್ಟಹಾಸವನ್ನು ಗೈದನು. ಕ್ರಕಚನು ಅವನಿಗೆ ಹೀಗೆಂದು ಅಪ್ಪಣೆ ಮಾಡಿದನು (xv. 27):

> 'ಎಲೈ ದೇವನೆ, ನೀನು ನಿನ್ನ (ತೀಕ್ಷ್ಣವಾದ) ನೋಟದಿಂದ ನಿನ್ನ ಭಕ್ತನ ಈ ಹಗೆಯನ್ನು ಸಂಹರಿಸಬೇಕು.' ಆದರೆ, ಅದರ ಬದಲು ಕೆರಳಿದ ಆ (ಮಹಾಕಾಪಾಲಿನ್‌ನು ಹೀಗೆ ಘೋಷಿಸಿದನು): 'ನೀನು ನನ್ನವನ (ಅಂದರೆ ಶಂಕರರ) ವಿರುದ್ಧವೇ ಇಂಥ ಅಪರಾಧವನ್ನು ಎಸಗುವ ಸಾಹಸಕ್ಕಿಳಿದೆಯಾ?' ಎಂದವನೇ ಕ್ರಕಚನ ರುಂಡವನ್ನು ತುಂಡರಿಸಿ ಚೆಲ್ಲಿದನು.

ಇಲ್ಲಿಗೆ ಮಾಧವರ ಕಥನ ಮುಗಿಯುತ್ತದೆ. ಧನಪತಿ ಸೂರಿಯ 'ಡಿಂಡಿಮ' ಭಾಷ್ಯವು ಆನಂದಗಿರಿಯ ಅವೇ ಮಾತುಗಳನ್ನು ಅನುಸರಿಸುತ್ತ, ಕಾಪಾಲಿಕ ಅನುಯಾಯಿಗಳ ಅಂತಿಮ ಮತಾಂತರದವರೆಗೆ ಈ ಕಥೆಯನ್ನು ಮುಂದುವರೆಸುತ್ತದೆ. ಈ ಗ್ರಂಥಪಾಠದಲ್ಲಿ, ದೇವನಾದ ಸಂಹಾರಭೈರವನು ಕೂಡಲೆ ಬೋಧೋಲ್ಬಣ ನಿತ್ಯಾನಂದನನ್ನು ಕೊಲ್ಲಲಿಲ್ಲ. ದೇವನು ಪ್ರತ್ಯಕ್ಷನಾಗುತ್ತಲೇ ಶಂಕರರು ಅವನನ್ನು ಅಭಿನಂದಿಸಿದರು. ತರುವಾಯ, ತಾವು ಕಾಪಾಲಿಕ

ಹಾಗೂ ಅವನ ಅನುಯಾಯಿಗಳ ವಿರುದ್ಧ ಕ್ರಮ ಕೈಗೊಂಡುದನ್ನು ಸಮರ್ಥಿಸಿಕೊಳ್ಳಲೆಂದು, ಅವರು ಅವನೆದುರು ತಮ್ಮ ತತ್ವವಿಚಾರಗಳನ್ನು ನಿರೂಪಿಸಿದರು. ಭೈರವನು ಈ ಯತಿಯ ಮಾತುಗಳನ್ನು ಆಲಿಸಿ ಸಂತುಷ್ಟನಾದನು. ಇಷ್ಟಾಗಿಯೂ ಅವನು ಹೀಗೆಂದು ಆಜ್ಞಾಪಿಸಿದನು: 'ನೀನು ಆ ಕಾಪಾಲಿಕರು ಬ್ರಾಹ್ಮಣ ಮತದ ತತ್ವಗಳನ್ನು ನಂಬುವಂತೆ ಮಾಡಬೇಕು,' ಎಂದನು.[120] ಬೋಧೋಲ್ಬಣನು ಉಚ್ಚರಿಸಿದ ಮಂತ್ರದಿಂದ ಬದ್ಧನಾಗಿ (ಮಂತ್ರಬದ್ಧ) ತಾನು ಪ್ರತ್ಯಕ್ಷನಾದೆನೇ ಹೊರತು, ಆ ಯತಿಯ ಅದಾವುದೇ ಬಗೆಯ ಶ್ರೇಷ್ಠತ್ವದಿಂದಾಗಿ (ನ ಧರ್ಮತಸ್) ಅಲ್ಲವೆಂದು ಆ ದೇವನು ವಿವರಿಸಿದನು. ಇದಾದ ತರುವಾಯ ಸಂಹಾರಭೈರವನು ಅದೃಶ್ಯನಾದನು. ಕಾಪಾಲಿಕ ಸಿದ್ಧಾಂತದ ಬಟುಕರು ಮೊದಲಾದ ಹನ್ನೆರಡು ಬಗೆಗಳ ಅನುಯಾಯಿಗಳು (ಕಾಪಾಲಿಕ ಮತಾನುಗರು) ಶಂಕರರಿಗೆ ತಲೆಬಾಗಿದರು. ಆಗ ಯತಿಗಳು ದಯಾರ್ದ್ರರಾದರು. ಅವರು ಪದ್ಮಪಾದ ಹಾಗೂ ಇನ್ನಿತರ ತಮ್ಮ ಶಿಷ್ಯಂದಿರಿಗೆ ಪಶ್ಚಾತ್ತಾಪ ಹೊಂದಿದ ಪಾಷಂಡಿಗಳನ್ನು ಮತಾಂತರಗೊಳಿಸುವಂತೆ ಹೇಳಿದರು.[121]

ದುರದೃಷ್ಟದ ಸಂಗತಿಯೆಂದರೆ ಭಾಷ್ಯಕಾರರಾಗಲಿ, ಆನಂದಗಿರಿಯಾಗಲಿ ಬಟುಕನಿಂದ ಶುರುವಾಗುವ ಕಾಪಾಲಿಕರ ಈ 'ಹನ್ನೆರಡು ಬಗೆಗಳನ್ನು' ('ದ್ವಾದಶಧಾ') ಗುರುತಿಸದಿರುವುದು. ಆದರೂ, ಬಟುಕನು 'ಗೋರಕ್ಷ ಸಿದ್ಧಾಂತ ಸಂಗ್ರಹ'ದ 'ಶಾಬರ ತಂತ್ರ'ದ ಪಟ್ಟಿಯಲ್ಲಿ ನಮೂದಿಸಲಾದ ಮೊದಲ ಹನ್ನೆರಡು ಜನ ಕಾಪಾಲಿಕ ಯತಿಗಳಲ್ಲಿ ಒಬ್ಬನಾಗಿ ಕಾಣಿಸಿಕೊಳ್ಳುತ್ತಾನೆ.[122] ಈ ಹನ್ನೆರಡು ಜನ ಯತಿಗಳೆಂದರೆ ಹನ್ನೆರಡು ಕಾಪಾಲಿಕ ಸಂಪ್ರದಾಯಗಳ ಸಂಸ್ಥಾಪಕರಾಗಿದ್ದರೆಂಬುದು ಸ್ಪಷ್ಟವಾಗಿದೆ. ಈ ಪಂಥವು ಇಂಥ ಸಂದರ್ಭವಿಲ್ಲದ ಆಕರಗಳಲ್ಲಿ ಕೂಡ ಉಲ್ಲೇಖಿತವಾದುದನ್ನು ಕಂಡಾಗ ಇದಕ್ಕಾಗಿ ವಾಸ್ತವಿಕ ಸಮರ್ಥನೆ ಕೆಲಮಟ್ಟಿಗೆ ಇದ್ದಿರಬಹುದಾಗಿದೆ.

ಈ ಎರಡೂ ಐತಿಹ್ಯಗಳ ಕಾಪಾಲಿಕರಾದ ಕ್ರಕಚ ಹಾಗೂ ಉಗ್ರಭೈರವರ ವ್ಯಕ್ತಿತ್ವಗಳು ತೀರ ಭಿನ್ನವಾದವುಗಳು. ಎರಡನೆಯವನು ಮೋಸವನ್ನು ಬಳಸಿಕೊಂಡರೆ ಮೊದಲನೆಯವನು ಪಾಶವಿ ಸಾಮರ್ಥ್ಯವನ್ನು ಆಯ್ದುಕೊಂಡನು. ಆದರೆ ಕಾಣಲು ಕ್ರಕಚನು ಉಗ್ರಭೈರವನಂತೆಯೇ ಒಬ್ಬ ಮಾದರಿಯ ಕಾಪಾಲಿಕನು. ಅವನು ಸತ್ತವರ ಚಿತಾಭಸ್ಮವನ್ನು ಬಳಿದುಕೊಳ್ಳುತ್ತಾನೆ. ಒಂದು ತ್ರಿಶೂಲ ಹಾಗೂ ಒಂದು ತಲೆ ಬುರುಡೆಯ ಪಾತ್ರೆಯನ್ನು ಹಿಡಿದುಕೊಳ್ಳುತ್ತಾನೆ, ಭೈರವ ಹಾಗೂ ಮಹಾಕಾಪಾಲಿನ್‌ರನ್ನು ಪೂಜಿಸುತ್ತಾನೆ. ಅವನ ಪಠ್ಯಗ್ರಂಥವೆಂದರೆ 'ಭೈರವಾಗಮ', ಮದ್ಯ ಹಾಗೂ ಮಾನವರ ರುಂಡಗಳ ಬಲಿಗಳಿಂದ

---

120. 'ಡಿಂಡಿಮ' ಭಾಷ್ಯ, vs. 8, ಮಾಧವಾಚಾರ್ಯರನ್ನು ಕುರಿತು, xv. 28.

121. ಅದೇ, vss 1-14.

122. ಹಿಂದೆ ನೋಡಿ, pp. 37-38.

ಈ ದೇವರನ್ನು ಗೌರವಿಸುತ್ತಾನಲ್ಲದೆ ಉಮೆಯ ತೋಳುಗಳ ಕೊನೆಯಿಲ್ಲದ ಅಪ್ಪುಗೆಯ ಅವರ್ಣನೀಯವಾದ ಆನಂದವೆಂದರೆ ಮೋಕ್ಷವೆಂದು ಬಗೆಯುತ್ತಾನೆ.

ಕ್ರಕಚನ ಕಾಪಾಲಿಕ ಪಡೆಗಳ ಸ್ಥಾನ ಹಾಗೂ ಆಕಾರಗಳು ಇದಕ್ಕೂ ಹೆಚ್ಚಿನ ವಿವರಣೆಗಳಿಗೆ ಅರ್ಹವಾದವುಗಳು. ಮಾಧವಾಚಾರ್ಯರ ಪಾಠದಲ್ಲಿ, ವಿದರ್ಭದ ರಾಜನು ಕರ್ಣಾಟ ನಾಡಿಗೆ ಹೋಗದಂತೆ ಶಂಕರರನ್ನು ಎಚ್ಚರ ನೀಡಲು ಕಾರಣವೆಂದರೆ ಅಲ್ಲಿ ಕಪಾಲಿನ್‌ರ ಹಲವಾರು ತಂಡಗಳು' ನೆಲೆಸಿರುವವೆಂಬುದು.[123] ಈ ಊರೆಂದರೆ ಉಜ್ಜಯನಿ (ಮೂಲದಲ್ಲಿದ್ದಂತೆ) ಪಟ್ಟಣವೆಂದು ಧನಪತಿಸೂರಿಯು ಟಿಪ್ಪಣಿ ಮಾಡುತ್ತಾನೆ. ಆದರೆ ಇದು ಸರಿಯಿರಲು ಸಾಧ್ಯವಿಲ್ಲ. ಮೇಲ್ನೋಟಕ್ಕೆ, ಈ ಪರಿಚಯದ ಸಂದರ್ಭದಲ್ಲಿ ಅವನು ಆನಂದಗಿರಿಯನ್ನು ಅವಲಂಬಿಸಿದ್ದಾನೆ. ಆನಂದಗಿರಿ ತನ್ನ ಪಾಠವನ್ನು (ಅಧ್ಯಾಯ xxiii) ಹೀಗೆ ಆರಂಭಿಸುತ್ತಾನೆ: 'ಉತ್ತರದ ದಾರಿಯಾಗಿ ಪಯಣ ಮಾಡುತ್ತಿರುವಾಗ, ಶ್ರೀ ಶಂಕರಾಚಾರ್ಯರು----ಉಜ್ಜಯನಿ ಎಂಬ ನಗರವನ್ನು ಕಂಡರು. ಅದು ಕಾಪಾಲಿಕ ಸಂಪ್ರದಾಯದ ಆಚರಣೆಗಳಿಗಾಗಿ ತಮ್ಮನ್ನೇ ಮೀಸಲಾಗಿಟ್ಟುಕೊಂಡ (ಜನರಿಂದ) ತುಂಬಿತ್ತು. ಕರ್ಣಾಟ ನಾಡು ಎಂದರೆ ಬಹುಮಟ್ಟಿಗೆ ಇಂದಿನ ಕರ್ನಾಟಕ ರಾಜ್ಯಕ್ಕೆ ಸಮಾನವಾದ ಪ್ರದೇಶವಾಗಿತ್ತು. ಹೆಸರಾದ ಮಾಲವ ನಗರವಾದ ಉಜ್ಜಯನಿಯು ಎಂದಿಗೂ ಈ ನಾಡಿನಲ್ಲಿ ಸೇರ್ಪಡೆ ಹೊಂದಿರಲಿಲ್ಲ.[124] ಇದರಿಂದ, ಭಿನ್ನ ಭಿನ್ನವಾದ ಎರಡು ಸಂಪ್ರದಾಯಗಳಿದ್ದುವೆಂಬುದು ಸ್ಪಷ್ಟವಾಗುತ್ತದೆ. ಇವೆರಡೂ ಊರುಗಳು ಕಾಪಾಲಿಕರೊಡನೆ ಸಂಪರ್ಕ ಹೊಂದಿರಲು ಸಾಕು.

ಮಾಧವಾಚಾರ್ಯರ 'ಶಂಕರ ದಿಗ್ವಿಜಯ'ವಾಗಲಿ, ಇಲ್ಲವೆ ಆನಂದಗಿರಿಯ 'ಶಂಕರ ವಿಜಯ'ವಾಗಲಿ ಹೆಚ್ಚಿನ ಐತಿಹಾಸಿಕ ನಿರ್ದಿಷ್ಟತೆಯನ್ನೇನೂ ತನ್ನದೆಂದು ಸಾಧಿಸಲಾರದು. ಇವೆರಡೂ (ಕೃತಿಗಳು) ಸುಮಾರಾಗಿ ಹದಿನಾಲ್ಕು ಇಲ್ಲವೆ ಹದಿನೈದನೆಯ ಶತಮಾನದ ಉತ್ಪನ್ನಗಳಾಗಿದ್ದು, ಇವು ತಮ್ಮ ರಚನೆಗಿಂತ ಒಂದು ಇಲ್ಲವೆ ಎರಡು ಶತಮಾನಗಳಷ್ಟು

---

123. ಮಾಧವಾಚಾರ್ಯ xv. II.

124. ಆನಂದಗಿರಿಯ ಹಾಗೂ ಧನಪತಿಸೂರಿಯ ಉಜ್ಜಯನಿಯನ್ನು ಕರ್ನಾಟಕದ ಬಳ್ಳಾರಿ ಜಿಲ್ಲೆಯ ಇದೇ ಹೆಸರಿನ, ವೀರಶೈವರ ಐದು ಪ್ರಮುಖ ಮಠಗಳಲ್ಲಿ ಒಂದೆನಿಸಿರುವ ಪಟ್ಟಣದೊಂದಿಗೆ ಗುರುತಿಸುವ ಆಸೆಯಾಗುತ್ತದೆ. ಈ ಊರಿನ ಮಠವನ್ನು ವೀರಶೈವ ಪರಂಪರೆಯ ಮಹಾನ್ ಆಚಾರ್ಯದಲ್ಲಿ ಒಬ್ಬರಾದ ಮರುಳ ಸಿದ್ಧರಿಂದ ಸ್ಥಾಪಿಸಲಾಗಿದೆ, ಎಂದು ನಂಬಲಾಗುತ್ತದೆ. ನೋಡಿ ಎಮ್. ಆರ್. ಸಾಖರೆ, 'History and Philosophy of Lingayat Religion, pp. 361-62. ದುರದೃಷ್ಟದ ಸಂಗತಿಯೆಂದರೆ, ಆನಂದಗಿರಿಯ ಉತ್ತರದ ದಾರಿಯಾಗಿ ಪಯಣಿಸುತ್ತ' ಶಂಕರರು ಉಜ್ಜಯನಿಯನ್ನು ತಲುಪಿದರು ಎಂಬ ಹೇಳಿಕೆಯು ಈ ಹೋಲಿಕೆಯ ಸಾಧ್ಯತೆ ಕಡಿಮೆ ಎನ್ನುವಂತೆ ಮಾಡುತ್ತದೆ.

ಹಿಂದಿನ ಕಾಲದ ಭಾರತದ ಧಾರ್ಮಿಕ ಸ್ಥಿತಿಯ ಮೇಲೆ ಬೀರುವಷ್ಟೇ ಬೆಳಕನ್ನು ಶಂಕರಾಚಾರ್ಯರ ಕಾಲದ ಧಾರ್ಮಿಕ ಪರಿಸ್ಥಿತಿಯ ಮೇಲೂ ಬೀರುತ್ತವೆ. ಉಗ್ರಭೈರವನಂತೆಯೇ ಕ್ರಕಚನ ಮೂಲ ಬೀಡಾದಂತೆ ಕಾಣುವ ಕರ್ನಾಟಕ ಪ್ರದೇಶವು ಹನ್ನೊಂದರಿಂದ ಹದಿಮೂರನೆಯ ಶತಮಾನದ ಕಾಲಾವಧಿಯಲ್ಲಿ ಕಾಳಾಮುಖರ ಪ್ರಾಬಲ್ಯಕ್ಕೆ ಒಳಗಾಗಿತ್ತು. ಯಾಮುನಾಚಾರ್ಯ ಹಾಗೂ ರಾಮಾನುಜರಂತಹ ಅಧಿಕೃತ ವ್ಯಕ್ತಿಗಳು ಇವೆರಡೂ ಸಂಪ್ರದಾಯ (ಕಾಪಾಲಿಕ, ಕಾಳಾಮುಖ)ಗಳನ್ನು ಒಂದಕ್ಕೊಂದು ಜೋಡಿಸುತ್ತಾರೆ. ಇದಕ್ಕಿಂತಲೂ ಹೆಚ್ಚಾಗಿ ಅವರು ಅವೆರಡೂ ಪಂಥಗಳ ಬಗೆಗೆ ಗೊಂದಲವನ್ನು ಉಂಟುಮಾಡುತ್ತಾರೆ. ಇದರಿಂದ ಮೊದಲ ನೋಟಕ್ಕೆ ಕಂಡು ಬರುವ ಸಂಗತಿಯೆಂದರೆ ಈ ಬಗೆಗೆ ಮಾಧವರು ಕೂಡ ಹೀಗೆಯೇ ನಡೆದುಕೊಂಡಿರಬಹುದೆಂಬುದು. ಕ್ರಕಚನ ಉಡುಗೆ ತೊಡಿಗೆ, ನಡತೆ ಹಾಗೂ ಧಾರ್ಮಿಕ ನಂಬಿಕೆಗಳೆಲ್ಲ ಖಂಡಿತ ಕಾಪಾಲಿಕರವೇ ಆಗಿದ್ದು, ಕಾಳಾಮುಖರವಲ್ಲ. ಆದರೂ ಒಂದು ಮಹತ್ವದ ಸಂಗತಿಯ ಬಗೆಗಂತೂ ಅವನ ಹಾಗೂ ಅವನ ಅನುಯಾಯಿಗಳ ಹೆಚ್ಚಿನ ಒಲವು ಎರಡನೆಯ ಸಂಪ್ರದಾಯದತ್ತ ಇದೆ.

ಮಾಧವರ ಕಥೆಯಲ್ಲಿ, ಕ್ರಕಚನು ಕಾಪಾಲಿಕರ ದೊಡ್ಡ ದೊಡ್ಡ ಗುಂಪುಗಳನ್ನು (ಕಾಪಾಲಿ ಜಾಲಾಃ, ಕಾಪಾಲಿಕ ಜಾಲಕಃ, ಕಾಪಾಲಿನಾಂಕುಲಾನಿ)ತನ್ನ ವಶದಲ್ಲಿ ಇರಿಸಿಕೊಂಡಿದ್ದಾನೆ. ಕಾಪಾಲಿಕರನ್ನು ಪ್ರಧಾನವಾಗಿ ಇರಿಸಿಕೊಂಡ ಬೇರೆ ಕಥೆಯು ಅವರನ್ನು ಒಂಟಿಯಾಗಿ ಅಲೆಯುವ ಯತಿಗಳಾಗಿದ್ದು, ಒಂದೊಂದು ಸಲ ಶಿಷ್ಯರೊಂದಿಗೆ ಕಂಡು ಬರುವವರೆಂದು ಬಣ್ಣಿಸುತ್ತದೆ. ಸಂಘ, ಸಂಸ್ಥೆಗಳು ಇಲ್ಲದ ಕಾರಣ ತುಲನಾತ್ಮಕವಾಗಿ ಕಾಪಾಲಿಕ ಶಾಸನಗಳ ಸಂಖ್ಯೆ ಕಡಿಮೆ ಇರುವ ಸಂಗತಿಯನ್ನು ಸೂಚಿಸುವಂತಿದೆ. ಇದಕ್ಕೆ ಎದುರಾಗಿ ಕಾಳಾಮುಖರು ತಮ್ಮ ಮಠಗಳನ್ನು ಸಂಘಟಿಸಿಕೊಂಡರು. ಮಾಧವರು ಕಾಪಾಲಿಕರ ಪಡೆಗಳಿಗೆ ಕಾಳಾಮುಖ ಮಠಗಳ ಸಂಘಗಳನ್ನು ಮಾದರಿಯನ್ನಾಗಿ ಭಾವಿಸಿದಂತೆ ಕಾಣುತ್ತದೆ. ಯಾಮುನಾಚಾರ್ಯ ಹಾಗೂ ರಾಮಾನುಜರ ಕಥನಗಳಲ್ಲಿ ಇವೆರಡೂ ಸಂಪ್ರದಾಯಗಳನ್ನು ಕುರಿತು ಕಂಡುಬರುವ ಗೊಂದಲ ಉದ್ದೇಶಪೂರ್ವಕವೇ ಆಗಿರುವ ಸಾಧ್ಯತೆಯಿದೆ. ಇದರಿಂದಾಗಿ ಮಾಧವರ ಕೃತಿಯಲ್ಲಿ ಕಾಳಾಮುಖರನ್ನು ಕುರಿತು ಯಾವುದೇ ಉಲ್ಲೇಖ ಇಲ್ಲದಿರುವುದನ್ನು ವಿವರಿಸಲು ನೆರವು ದೊರಕಬಹುದಾಗಿದೆ.

ಆನಂದಗಿರಿಯ 'ಶಂಕರ ವಿಜಯ'ದ ಪ್ರತಿಯೊಂದು ಅಧ್ಯಾಯದಲ್ಲಿ ಶಂಕರರು ಬೇರೆ ಬೇರೆ ಎದುರಾಳಿ ಸಂಪ್ರದಾಯದವರೊಂದಿಗೆ ಚರ್ಚಿಸುತ್ತಾರೆ. ಆದರೆ ಈ ಕೃತಿಯಲ್ಲಿ ಕೂಡ ಕಾಳಾಮುಖರು ಕಾಣಿಸಿಕೊಳ್ಳುವುದೇ ಇಲ್ಲ. ಮಾಳವದ ಉಜ್ಜಯಿನಿ ಎಂದೆಂದಿಗೂ ಕಾಳಾಮುಖ ಕೇಂದ್ರವಾಗಿರಲಿಲ್ಲ. ಅದೇನಿದ್ದರೂ ಆನಂದಗಿರಿಯು ಇವೆರಡೂ ಸಂಪ್ರದಾಯಗಳ ಬಗೆಗೆ ಗೊಂದಲಕ್ಕೆ ಈಡಾಗಿರುವ ಸಾಧ್ಯತೆ ಕಡಿಮೆ. ಭವಭೂತಿಯು ತನ್ನ 'ಮಾಲತಿ ಮಾಧವ'ವನ್ನು ಉಜ್ಜಯಿನಿಯ ದೇವನಾದ ಮಹಾಕಾಲನೊಡನೆ ಅನನ್ಯತೆಯನ್ನು ಹೊಂದಿದ

ಕಾಳಪ್ರಿಯ ದೇವರಿಗಾಗಿ ಬರೆದನೆಂಬ ನಿಜ ಸಂಗತಿಯಿಂದಲೇ , ಈ ಪಟ್ಟಣ ಹಾಗೂ ಕಾಪಾಲಿಕರ ನಡುವೆ ಒಂದು ಬಗೆಯ ಸೂಕ್ಷ್ಮವಾದ ಸಂಬಂಧ ಇರುವುದು ಕಂಡು ಬರುತ್ತದೆ. ಹೇಗಿದ್ದರೂ ಆಧುನಿಕ ನರವಾರದ ಬಳಿಯ, ಉಜ್ಜಯನಿಯಿಂದ 220 ಮೈಲು ಉತ್ತರಕ್ಕಿರುವ ಪಟ್ಟಣವೆಂದು ವಿದ್ವಾಂಸರು ತೀರ್ಮಾನಿಸಿದ ಪದ್ಮಾವತಿಯಲ್ಲಿ ಈ ನಾಟಕ ಶುರುವಾಗುತ್ತದೆ.[125] ಇಂದು ಉಜ್ಜಯನಿಯು ಕಾನಫಟಾ ಯೋಗಿಗಳಿಗೆ ಹೆಸರಾದ ಊರೆನ್ನಿಸಿದೆ.[126] ಸಾಮಾನ್ಯವಾಗಿ ಎಲ್ಲರೂ ಒಪ್ಪಿಕೊಳ್ಳುವಂತೆ ಗೋರಖನಾಥರ ಕಾಲವು 1200 ಕ್ರಿ.ಶ. ಎಂಬುದು ಸರಿಯಾಗಿದ್ದರೆ ಈ ಪಟ್ಟಣವು ಆನಂದಗಿರಿಯ ಕಾಲದವರೆಗೆ (ಸುಮಾರು ಹದಿನೈದನೆಯ ಶತಮಾನ) ಚೆನ್ನಾಗಿಯೇ, ಒಂದು ಕಾನಫಟಾ ಕೇಂದ್ರ ಎನ್ನಿಸಿರಲು ಸಾಕು.[127] ಕಾನಫಟಾ ಯೋಗಿಗಳು ಕೂಡ ಯತಿಮಠಗಳಾಗಿ ಸಂಘಟಿತರಾಗುವವರಾದ ಕಾರಣ ಆನಂದಗಿರಿಯು ಅವರು ಹಾಗೂ ಕಾಪಾಲಿಕರ ನಡುವೆ ಗೊಂದಲಕ್ಕೆ ಸಿಲುಕಿರುವ ಸಾಧ್ಯತೆಯಿದೆ.

ಕ್ರಕಚನ ದೊಡ್ಡ ದೊಡ್ಡ ಯತಿಸಮೂಹಗಳು ಕಾಳಾಮುಖ ಇಲ್ಲವೆ ಕಾನಫಟಾ ಅಥವಾ ಖುದ್ದು ಕಾಪಾಲಿಕ ಸಂಘಟನೆಗಳನ್ನೇ ತಮ್ಮ ಮಾದರಿಯಾಗಿ ಇರಿಸಿಕೊಂಡಿರಲಿ ಆದರೆ, ಅವುಗಳ ಹೋರಾಟದ ಮನೋಧರ್ಮ ಮಾತ್ರ ಎದ್ದು ಕಾಣುವಂಥದು. ಇಷ್ಟಾಗಿಯೂ ಮಧ್ಯಯುಗದ ಭಾರತದಲ್ಲಾಗಲಿ, ಮಧ್ಯಯುಗದ ಯುರೋಪಿನಲ್ಲಾಗಲಿ, ಇಲ್ಲವೆ ಹದಿನಾರನೆಯ ಶತಮಾನದ ಜಪಾನಿನಲ್ಲಾಗಲಿ ಈ ಬಗೆಯ ಧಾರ್ಮಿಕ ಸೈನಿಕ ಪಡೆಗಳಿದ್ದುದು ಎಲ್ಲರಿಗೂ ಗೊತ್ತು. ಯುರೋಪಿನ ಧರ್ಮಯುದ್ಧಗಳು ಹಲವಾರು ಸೈನಿಕ ಪಂಗಡಗಳನ್ನು ಹುಟ್ಟು ಹಾಕಿದವು. ಅವುಗಳಲ್ಲಿ, ಟೆಂಪ್ಲರ್ ಮತ್ತು ಹಾಸ್ಪಿಟಲರ್ ಪಂಗಡಗಳು ತುಂಬ ಹೆಸರಾದವುಗಳು. ಈ ಪಂಗಡಗಳು ತಮ್ಮ ಪವಿತ್ರ ಭೂಮಿಗಾಗಿ ಇಸ್ಲಾಮಿನ ಅರಸುಗುವರರೊಡನೆ ಹೋರಾಡಿದುದಷ್ಟೇ ಅಲ್ಲದೆ ಕೆಲವು ಸಂದರ್ಭಗಳಲ್ಲಿ ತಮ್ಮ ತಮ್ಮವರ ವಿರುದ್ಧ ಅರಸುಗುವರರ ಇವೇ ಸೈನದಳಗಳು ಸೇರಿಕೊಂಡುದೂ ಇದೆ.[128] ಹದಿನಾರನೆಯ ಶತಮಾನದಲ್ಲಿ ಜಪಾನು ಪವಿತ್ರ ಭೂಮಿ (ಜೊಡೊ) ಪಂಥದ ಭಿಕ್ಷುಗಳಿಂದ ನಡೆದ ಇಕ್ಕೊ ಇಕ್ಕಿ ಅಥವಾ ಧರ್ಮಾಂಧವಾದ ಪುನರುಜ್ಜೀವನವಾದದ ಬಂಡಾಯಗಳಿಗೆ ಸಾಕ್ಷಿಯಾಗಿತ್ತು. ಈ ಭಿಕ್ಷುಗಳು ತಮ್ಮ ಪಂಥಾಭಿಮಾನಿ ಹಗೆಗಳೊಂದಿಗೆ ಹೋರಾಡಿದರು. ಕೆಲವೆಡೆಗಳಲ್ಲಂತೂ ಅವರು ಊಳಿಗಮಾನ್ಯ ಒಡೆಯರ ಅಧಿಕಾರಗಳಿಗೂ ಸವಾಲೊಡ್ಡಿದರು.[129]

125. ಈ ನಾಟಕದ ಪು. 4ರ ಮೇಲಿರುವ ದೇವಧರ ಮತ್ತು ಸುರು ಇವರ ಆವೃತ್ತಿಯ ಮುನ್ನುಡಿಯನ್ನು ನೋಡಿ.

126. ಘುರ್ಯೆ, ಪು. 137.

127. ಆನಂದಗಿರಿಯ ಕಾಲವು ಯಾವುದೆಂದು ಖಚಿತಪಟ್ಟಿರದೆ ಇದ್ದರೂ ಅವನು ಮಾಧವರ ತರುವಾಯದ ಕಾಲದಲ್ಲಿ ಜೀವಿಸಿರುವ ಸಾಧ್ಯತೆಯಿದೆ. ಮಾಧವರ ಕಾಲಕ್ಕೆಂದರೆ ಕಾಳಾಮುಖರು ಆಗಲೇ ಇಳಿಮುಖರಾಗಿದ್ದರಿಂದ ಆನಂದಗಿರಿಯು ಅವರನ್ನು ಕಾಪಾಲಿಕರೆಂದು ತಪ್ಪಾಗಿ ಭಾವಿಸಿರುವ ಸಾಧ್ಯತೆಯಿದೆ.

128. ಎ. ಎಸ್. ಅತಿಯ, 'Crusade, Commerce and Culture,' pp. 67-68.

129. ಜಿ. ಬಿ. ಸ್ಯಾನ್ಸಮ್, 'Japan: A Short Cultural history' (rev.ed.), pp. 374-76.

ಭಾರತಮೂಲವಾದ ಧಾರ್ಮಿಕ ಪಂಗಡಗಳು ಪರಸ್ಪರರ ಬಗೆಗೆ ತೋರಿದ ಸಹಿಷ್ಣುತೆಯು ಎಂದಿಗೂ ಒಂದು ಗಮನಾರ್ಹವಾದ ಸಂಗತಿಯಾಗಿ ಉಳಿದಿದೆ. ಹೆಚ್ಚಾಗಿ ರಾಜಾಶ್ರಯಕ್ಕಾಗಿ ಅವುಗಳ ನಡುವಿರುವ ಎದುರಾಳಿತನವು ಕೆಲವೊಮ್ಮೆ ಹಿಂಸೆಯಲ್ಲಿ ಪರಿಣಮಿಸಿದ್ದಿದೆಯಷ್ಟೆ. ಹಿಂದಿನ ಕಾಲದಲ್ಲಿ ಪೈಪೋಟಿಗಳು ನಡೆಯುವುದು ಸಾಮಾನ್ಯವಾಗಿ ಸಾರ್ವಜನಿಕರ ಬೃಹತ್ ವಾದಸಭೆಗಳಲ್ಲಿ. ಹಲವು ಸಲ ಇವು ಪವಾಡಗಳ ಸ್ಪರ್ಧೆಗಳಾಗಿ ಮಾರ್ಪಡುತ್ತಿದ್ದವು. ಬುದ್ಧ ಹಾಗೂ ಆಜೀವಿಕರ ಗುರುವಾದ ಪುರಾಣ ಕಸ್ಸಪರ ನಡುವೆ, ಉತ್ತರ ಭಾರತದ ಶ್ರಾವಸ್ತಿಯಲ್ಲಿ ಇಂಥದೊಂದು ಪೈಪೋಟಿ ನಡೆಯಿತು. ಅದೊಂದು ದೊಂಬಿಯಾಗಿ ಪರಿಣಮಿಸುತ್ತಲೆ ಆಜೀವಿಕರನ್ನು ಅಲ್ಲಿಂದ ಹೊರದೂಡಲಾಯಿತು.[130] ಕೆಲವು ಸಲ ವಾದಸಭೆಯು ರಾಜರುಗಳಿಂದ ಉಂಟಾಗುವ ಹಿಂಸೆಗಳಿಗೂ ಕಾರಣವಾಗುತ್ತಿತ್ತು. ದಕ್ಷಿಣ ಭಾರತದ ಪವಾಡವನ್ನು ಕುರಿತಾದ ಒಂದು ಮಾಹಿತಿಯಂತೆ, ಹೆಸರಾದ 'ನಾಯ್ನಾರ್'ರಾದ ನಾನಸಂಬಂಧರ್ ಇವರು ಜೈನರನ್ನು ವಾದದಲ್ಲಿ ಸೋಲಿಸಿ ಪಾಂಡ್ಯ ರಾಜನನ್ನು ಶೈವಧರ್ಮಕ್ಕೆ ಮತಾಂತರಗೊಳಿಸಿದರು. ಆಮೇಲೆ ಇದೇ ರಾಜನು 8000 ಜನ ಜೈನರನ್ನು ಶೂಲಕ್ಕೇರಿಸಿ ಕೊಂದನು.[131] ಕಾಳಾಮುಖರನ್ನು ಅವರ ವಾದಚಾತುರ್ಯಕ್ಕಾಗಿ ಮೇಲಿಂದ ಮೇಲೆ ಕೊಂಡಾಡಲಾಗಿದೆ. ಬೊಂತೆಯಮುನಿ ಹಾಗೂ ಎದುರಾಳಿಗಳಾದ ತಾರ್ಕಿಕರ[132] ನಡುವಿನ ಬಹಳಷ್ಟು ವಾದಸಭೆಗಳು ಶಾಂತಿಯಿಂದ ಜರುಗಿವೆಯೆಂದು ಕಾಣುತ್ತದೆ. 1160 ಕ್ರಿ.ಶ. ದ ಸುಮಾರಿಗೆ ವೀರಶೈವರ ನಾಯಕನಾದ ಏಕಾಂತದ ರಾಮಯ್ಯ ಹಾಗೂ ಜೈನರ ನಡುವೆ ಕರ್ನಾಟಕದ ಧಾರವಾಡ ಜಿಲ್ಲೆಯ ಅಬ್ಬಲೂರಿನಲ್ಲಿ ಜರುಗಿದ ವಾದ ಹಾಗೂ ಪವಾಡಗಳಿಂದ ಕೂಡಿದ ಸಭೆಯು ಜೈನರ ಸೋಲಿನಲ್ಲಿ ಮುಕ್ತಾಯಗೊಂಡಿತು. ಮೊದಲ ಒಡಂಬಡಿಕೆಯಂತೆ ಸೋತ ಈ ಜೈನರು ಜಿನನ ವಿಗ್ರಹದ ಬದಲಾಗಿ ಶಿವನ ವಿಗ್ರಹವನ್ನು ಸ್ಥಾಪಿಸಲು ನಿರಾಕರಿಸುತ್ತಲೇ ಏಕಾಂತದ ರಾಮಯ್ಯನು ಅವರ ಜಿನಾಲಯದ ಮೇಲೆ ದಂಡೇರಿ ಹೋಗಿ, ಅದರ ಕಾವಲುಗಾರರನ್ನು ಸೋಲಿಸಿ ಅಲ್ಲಿಯ ಸುತ್ತಲ ಕಟ್ಟಡಗಳನ್ನೆಲ್ಲ ನೆಲಸಮ ಮಾಡಿಬಿಟ್ಟನು.[133] ದಶನಾಮಿ ನಾಗಾಜನರ ಆರು ಮುಖ್ಯವಾದ ಆಖಾಡಾಗಳೆಂದರೆ ಭಾರತದಲ್ಲಿ ದಾಖಲಾದ ಎಲ್ಲಕ್ಕೂ ಪುರಾತನ, ಧಾರ್ಮಿಕ ಪಂಗಡಗಳೆನ್ನಿಸಿವೆ. ಆಖಾಡಾಗಳು (ಸೈನ್ಯದಳಗಳು) ಇಂದಿಗೂ ಅಸ್ತಿತ್ವದಲ್ಲಿವೆ. ಇವುಗಳ ಸದಸ್ಯರು ಸಾಮಾನ್ಯವಾಗಿ ಶಂಕರಾಚಾರ್ಯರಿಂದ (ದಶನಾಮಿಗಳು) ಸ್ಥಾಪನೆಗೊಂಡವುಗಳೆಂದು ನಂಬಲಾಗುವ ಹೆಸರಾದ ಹತ್ತು ಶೈವಯತಿಗಳ ಪಂಗಡಗಳಲ್ಲಿ ಒಂದು ಇಲ್ಲವೆ ಒಂದಕ್ಕಿಂತ ಹೆಚ್ಚಿನವುಗಳಿಗೆ ಸೇರಿದವರಾಗಿರುತ್ತಾರೆ. ಜುನಾ

---

130. ನೋಡಿ ಬಶಮ್, pp 84-87.

131. ನೋಡಿ ಕೆ. ಎ. ಎನ್. ಶಾಸ್ತ್ರಿ, 'A History of South India,' ಪು. 413.

132. ಮುಂದೆ ನೋಡಿ, ಪು. 132.

133. ನೋಡಿ ಜೆ. ಎಫ್. ಫ್ಲೀಟ್, 'Inscriptions at Ablur,' EI, V.213-65 (inscription no. E).

ಆಖಾಡಾವನ್ನು (ಹಳೆಯ ಆಖಾಡಾ) ಹಿಂದಕ್ಕೆ ಭೈರವ ಆಖಾಡಾ ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಈ ಕಾಲದಲ್ಲಿ ದತ್ತಾತ್ರೇಯನು ಅದನ್ನು ರಕ್ಷಿಸುವ ದೇವನಾಗಿದ್ದರೂ ಹಿಂದಕ್ಕೆ ಭೈರವನಾಗಿರಲು ಸಾಕು. ಇದರ ಸ್ಥಾಪನೆಯ ಮಿತಿ ಸಂಪ್ರದಾಯದಂತೆ 1146 ಆಗಿದ್ದು ಶ್ರೀ ಘುರ್ಯೆ ಮಾತ್ರ (ಪು.104) ಇದನ್ನು ಹಿಂದಿನ ಕಾಲದ ಕಾಪಾಲಿಕ ಶೈವಸಂಪ್ರದಾಯದಿಂದ ಇಳಿದು ಬಂದುದೆಂದು ನಂಬುತ್ತಾರೆ. ಇದು ಒಳ್ಳೆಯ ಆಸೆ ಹುಟ್ಟಿಸುವ ಯೋಚನೆ. ಹೀಗೆನ್ನಲು ವಿಶೇಷವಾದ ಕಾರಣವೆಂದರೆ ಆಖಾಡಗಳ ಪೈಕಿ ಒಂದು ಆಖಾಡಾದ ಕೇಂದ್ರವು ಉಜ್ಜಯನಿಯಲ್ಲಿ ಇಂದಿಗೂ ಇದೆಯೆಂಬುದು. ಆದರೆ ಕಾಪಾಲಿಕ ಸಂಪ್ರದಾಯದ ಶ್ರದ್ಧೆಯಿಂದ ವೇದಾಂತದ ಶ್ರದ್ಧೆಯತ್ತ ಸಾಗುತ್ತಿರುವ ಸಂಕ್ರಮಣದಲ್ಲಿ ಇದೊಂದು ಆಖಾಡಾ ಬದುಕಿ ಉಳಿದಿರುವುದು ಹೇಗೆ ಎಂಬುದನ್ನು ಕಂಡುಕೊಳ್ಳುವುದು ಕಷ್ಟದ ಕೆಲಸ. ಬೇರೆ ಕೆಲವು ಆಖಾಡಗಳ ಸ್ಥಾಪನೆಯ ಸಾಂಪ್ರದಾಯಿಕ ಮಿತಿಗಳು ಕ್ರಿ.ಶ.647ರಷ್ಟು ಹಿಂದಕ್ಕೆ ಹೋಗುತ್ತವಾದರೂ ನಾಗಾ ಯತಿಗಳನ್ನೊಳಗೊಂಡ ಪ್ರತ್ಯಕ್ಷ ಕಾಳಗದ ತೀರ ಹಿಂದಿನ, ಸಮಂಜಸವಾಗಿ ನಿಜವೆಂದು ಸ್ಥಾಪಿಸಬಹುದಾದ ಮಿತಿಯೆಂದರೆ ಕ್ರಿ.ಶ.1266. ಅವರ ದಾಖಲಿಸಲಾದ ಬಹಳಷ್ಟು ಚಟುವಟಿಕೆಗಳು ಹದಿನಾರರಿಂದ ಹದಿನೆಂಟನೆಯ ಶತಮಾನಗಳಿಗೆ ಒಳಪಟ್ಟಿದ್ದು ಹರಿದ್ವಾರದ ವೈಷ್ಣವ ಬೈರಾಗಿಗಳ ಮೇಲೆ 1760ರಲ್ಲಿ ಪಡೆಯಲಾದ ಮಹತ್ತರ ವಿಜಯದಿಂದಾಗಿ ಈ ಚಟುವಟಿಕೆಗಳು ತಮ್ಮ ಅತ್ಯುನ್ನತ ಬಿಂದುವನ್ನು ತಲುಪುತ್ತವೆ.[134]

ಈ ಹಿಂದಿನ ಚರ್ಚೆಯು ಕುತೂಹಲಕರದ್ದು, ಊಹೆಯನ್ನು ಆಧರಿಸಿದುದು ಎಂಬುದನ್ನು ಒಪ್ಪಿಕೊಂಡರೂ ಮಹತ್ವದ ಘಟನೆಗಳ ಒಂದು ಸರಪಳಿಯನ್ನು ನಿರ್ದೇಶಿಸುತ್ತದೆ. ಶಂಕರರು ಹಾಗೂ ಕಾಪಾಲಿಕ ಯತಿಗಳ ನಡುವೆ ಉಜ್ಜಯನಿ ಇಲ್ಲವೆ ಕರ್ನಾಟಕದ ಯಾವುದೇ ಊರಲ್ಲಿ ಜರುಗಿದ ಐತಿಹಾಸಿಕತೆಯ ದೃಷ್ಟಿಯಿಂದ ಮೊದಲ ವಾದಸಭೆಯು ಒಂದು ದೊಂಬಿಯಲ್ಲಿ ಪರಿವರ್ತಿತಗೊಂಡು, ಅದರಿಂದಾಗಿ ಕಾಪಾಲಿಕರು, ಪಲಾಯನ ಗೈಯುವಂತೆ ಹಾಗೂ ಬಹುಮಟ್ಟಿಗೆ ಕೆಲವರು ಮತಾಂತರಗೊಳ್ಳುವಂತಾಯಿತು. ಮೂಲವಿರೋಧಿಗಳು ಭಾಗಶಃ ಕಾಳಾಮುಖಮಠಗಳ ಯತಿಗಳ ಮಾದರಿಯನ್ನು (ಮಾಧವ) ಅಥವಾ ಮಧ್ಯಯುಗದ ಭಾರತದ (ಆನಂದಗಿರಿ)ಲ್ಲಿ ಹೊಸದಾಗಿ ಉದಯಕ್ಕೆ ಬರುತ್ತಿದ್ದ ಧಾರ್ಮಿಕ ಸೇನಾಪಡೆಗಳ ಮಾದರಿಯನ್ನು ಆಧರಿಸಿ, ಹೋರಾಟ ಸ್ವಭಾವದ ಸನ್ಯಾಸಿಗಳ ವಿಸ್ತೀರ್ಣವಾದ ಸೇನೆ ತಯಾರಾಗುವವರೆಗೆ ಮುಂಬರುವ ಶತಮಾನಗಳಲ್ಲಿ ಈ ಕಥೆಯು ವಿಸ್ತರಿಸುತ್ತ ನಡೆಯಿತು.

## ಶಂಕರರು ಹಾಗೂ ಉನ್ಮತ್ತ ಭೈರವ

ಈ ಆಖ್ಯಾಯಿಕೆಯು ಆನಂದಗಿರಿಯ 'ಶಂಕರ ವಿಜಯ'ದ ಅಧ್ಯಾಯ xxiv ಹಾಗೂ ಮಾಧವರ 'ಶಂಕರ ದಿಗ್ವಿಜಯ'ದ ಅಧ್ಯಾಯ xv. 28ನ್ನು ಕುರಿತಾದ ಧನಪತಿಸೂರಿಯ

134. ಘುರ್ಯೆ, pp. 103-112.

'ಡಿಂಡಿಮ' ಭಾಷ್ಯದಲ್ಲಿ ಕಾಣಿಸಿಕೊಳ್ಳುತ್ತದೆ. ಇವೆರಡೂ ಕಥನಗಳು ಸುಮಾರು ಒಂದೇ ಬಗೆಯವಿದ್ದು ಅವು ಭಾಷ್ಯಕಾರನಲ್ಲಿ ಆನಂದಗಿರಿಯ ಬಗೆಗೆ ಇರುವ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತವೆ. ಆನಂದಗಿರಿಯ ಪ್ರಕಟಗೊಂಡ ಕೃತಿಯ ಪಠ್ಯವು ತಪ್ಪುಗಳಿಂದ ಕೂಡಿರುವ ಕಾರಣ ಸಾಧ್ಯವಿದ್ದಲ್ಲೆಲ್ಲ ನಾವು ಈ ಭಾಷ್ಯವನ್ನೇ ಅನುವಾದಿಸಲಿದ್ದೇವೆ. ಕಥೆಯ ಮುನ್ನುಡಿ[135] ಆನಂದ ಗಿರಿಯ ಕಥನದಲ್ಲಿ ಮಾತ್ರ ಹೊರಕುತ್ತದೆ:

> ಈ ರೀತಿಯಾಗಿ ಪರಿತ್ಯಜಿಸಲಾದ ಬಳಿಕ ಬೇರೆ ಬೇರೆ ಗುಂಪುಗಳಾದ (ವರ್ಣ) ಕಾಪಾಲಿಕರು, ಚಾರ್ವಾಕರು, ಸೌಗತರು, ಕ್ಷಪಣಕರು, ಜೈನರು ಹಾಗೂ ಬೌದ್ಧರು ಮತ್ತೆ ಬೇರೊಂದು ಪಟ್ಟಣದಲ್ಲಿ ಕಾಣಿಸಿಕೊಂಡರು. ಉನ್ಮತ್ತಭೈರವನೆಂಬ ಶೂದ್ರ ಜಾತಿಯ ಒಬ್ಬ ಕಾಪಾಲಿಕನು ಅಲ್ಲಿ (ವಾಸವಾಗಿದ್ದನು). ಅವನ ದೇಹವು ಚಿತಾಭಸ್ಮದಿಂದ ಮುಸುಕಿತ್ತು; ಅವನ ಕೊರಳಲ್ಲಿ ಮಾನವ ತಲೆಬುರುಡೆಗಳ ಹಾರವಿತ್ತು. ಅವನ ಹಣೆಗೆ ದೀಪದ ಕಾಡಿಗೆಯಿಂದ ಮೂರು ಪಟ್ಟಿಗಳನ್ನು ಬಳಿಯಲಾಗಿತ್ತು; ತಲೆಗೂದಲನ್ನೆಲ್ಲ ನೆತ್ತಿಯ ಮೇಲೆ ಕಟ್ಟಿ ಹಾಕಿದ್ದರಿಂದ ಅದು ಜಡೆಗಟ್ಟಿತ್ತು (ಜಟಾಜೂಟ); ತಲೆ ಬುರುಡೆಯ ಒಂದು ಪಾತ್ರೆಯು ಅವನ ಎಡಗೈಯನ್ನು ಅಲಂಕರಿಸಿತ್ತು; ಅವನ ಬಲಗೈ ಎತ್ತರದ ಸದ್ದು ಮಾಡುತ್ತ ಬಾರಿಸಲಾಗುತ್ತಿರುವ ಎರಡು ಗಂಟೆಗಳನ್ನು ಹಿಡಿದುಕೊಂಡಿತ್ತು, ಮತ್ತು ಅವನು ಒಂದೇ ಸವನೆ 'ಓ, ಶಂಭು ಭೈರವ! ಅಹೋ, ಕಾಳೀಶ!' ಎಂದು ಬಾಯಿಂದ ಮಣಮಣಗುಟ್ಟುತ್ತಿದ್ದನು.

ಒಬ್ಬ ಕಾಪಾಲಿಕ ಯತಿಯನ್ನು ಕುರಿತಾದ ಪ್ರಾಚೀನ ಹಾಗೂ ಉತ್ತಮವಾದ ಈ ಬಣ್ಣನೆಯ ಬೆನ್ನಿಗೇನೆ ಅವನ ಸೌಖ್ಯತತ್ವವಾದದ ಸಿದ್ಧಾಂತದ ಬಗೆಗಿನ ಅಣಕದ ನಿರೂಪಣೆಯಿದೆ. ಇದು ಒಬ್ಬ ಕಾಪಾಲಿಕನಿಗಿಂತ ಒಬ್ಬ ಚಾರ್ವಾಕ ಇಲ್ಲವೆ ಒಬ್ಬ ಲೋಕಾಯತಿಕನಿಗೆ ಹೆಚ್ಚು ಸರಿಹೊಂದುವ ಸಿದ್ಧಾಂತವೆನ್ನಿಸಿದೆ. ಉನ್ಮತ್ತಭೈರವನು ಶಂಕರರನ್ನು ಕಾಣಲು ಬಂದನಲ್ಲದೆ ಕಾಪಾಲಿಕ ಸಂಪ್ರದಾಯವು ಬೇರೆಲ್ಲ ಮತಗಳಿಗಿಂತ ಶ್ರೇಷ್ಠವಾದುದೆಂದು ಘೋಷಿಸಿದನು. ಬೋಧೋಲ್ಬಣನ ಶಿಷ್ಯನಾದ ಬಟುಕನಾಥ ಹಾಗೂ ಇನ್ನಿತರ ಕಾಪಾಲಿಕರು ನಿಜವಾದ ಸಂಪ್ರದಾಯದಿಂದ ಅಧಃ ಪತನವನ್ನು ಹೊಂದಿದ ಬಗೆಗೆ ಶೋಕವನ್ನು ವ್ಯಕ್ತಪಡಿಸುತ್ತ ಹೀಗೆಂದನು: 'ಅವರು ತೊಡೆಮ ಹಾಕಿದುದು, ತಾವು ಬ್ರಾಹ್ಮಣ ಜಾತಿಯವರಾಗಿದ್ದೇವೆಂಬ (ಅವರ ಅವಲಂಬನೆಯನ್ನು). ಜಾತಿಯನ್ನು ಕಟ್ಟಿಕೊಂಡು ನಾನೇನೂ ಮಾಡಬೇಕಿಲ್ಲ.' [136]

---

135. ಧನಪತಿಸೂರಿಯು ಈ ಪರಿಚ್ಛೇದವನ್ನು ಕೈಬಿಟ್ಟು, ತನ್ನ ಕಥೆಯನ್ನು ಒಮ್ಮೆಲೇ ಕ್ರಕಚನ ಆಖ್ಯಾಯಿಕೆಯೊಂದಿಗೆ ಶುರು ಮಾಡುತ್ತಾನೆ.

136. ಧನಪತಿಶಾಸ್ತ್ರಿ, vss. 15-16. ಬಟುಕನಾಥನ ಹೆಸರನ್ನು ಆನಂದಗಿರಿ ಹೇಳುತ್ತಾನೆ. ಈ ಭಾಷ್ಯವು 'ಬಟುಕ ಹಾಗೂ ಇತರರು'ಎಂದು ಉಲ್ಲೇಖಿಸುತ್ತದೆ.

ತರುವಾಯ ಅವನು ತನ್ನ ಜಾತಿಯ ನಿರಾಕರಣೆಗಾಗಿ ಒಂದು ಭೌತಿಕ ಸಮರ್ಥನೆಯನ್ನು ನೀಡಿದನು. ನಿಜವಾಗಿಯೂ ಇರುವ ಜಾತಿಗಳು ಎರಡು ಮಾತ್ರ, ಒಂದು, ಗಂಡು ಜಾತಿ ಹಾಗೂ ಇನ್ನೊಂದು, ಹೆಣ್ಣು ಜಾತಿ, ಎಂದು ಅವನು ಸೂಚಿಸಿದನು. ಅವೆರಡರ ನಡುವಣ ನಡೆವಳಿಕೆಗಾಗಿ ಸ್ವೇಚ್ಛಾಚಾರವೇ ಒಂದು ಕ್ರಮಬದ್ಧವಾದ ನಿಯಮ ಎನ್ನಿಸಲು ಕಾರಣವೇನೆಂದರೆ, ಸಂಭೋಗ ಕಾಲದ ಲೈಂಗಿಕ ಕೂಟದಿಂದ ಉಂಟಾಗುವ ಸಂತೋಷವೇ (ಆನಂದ) ಭೈರವನ ನಿಜವಾದ ಸ್ವರೂಪವಾಗಿದ್ದು, ಸಾವಿನ ಕಾಲಕ್ಕೆ ಆ ಬಗೆಯ ಸಂತೋಷವನ್ನು ಪಡೆಯುವುದೆಂದರೇನೆ ಮೋಕ್ಷ, ಎಂದು ಕೂಡ ಅವನು ಒತ್ತಿ ಹೇಳಿದನು.[137]

ಶಂಕರರು ಕಾಪಾಲಿಕನ ಈ ಪಾಷಂಡದ ಮಾತುಗಳನ್ನು ವಿನಯ ಪೂರ್ವಕವಾಗಿಯೇ ಆಲಿಸಿದ ತರುವಾಯ ಹೀಗೆಂದರು (vs. 23) : 'ಅಯ್ಯಾ ಕಾಪಾಲಿಕನೇ, ನೀನು ಬಲು ಚೆನ್ನಾಗಿ ಮಾತನಾಡಿದೆ. (ಆದರೆ) ನಿಜವನ್ನು ನುಡಿಯತಕ್ಕದ್ದು. ನಿನ್ನ ಅಮ್ಮ, ಯಾರ ಮಗಳು?' ತನ್ನ ಅಮ್ಮ ಒಬ್ಬ ದೀಕ್ಷಿತನ (ದೀಕ್ಷೆ ಪಡೆದ ಯತಿ) ಮಗಳಾಗಿದ್ದಳೆಂದು ಉಗ್ರಭೈರವನು ಪ್ರತಿಭಟಿಸಿದ ತರುವಾಯ, ತನ್ನ ನಂಟನ್ನು ಹೀಗೆಂದು ವಿವರಿಸಿದನು ( vss. 23-28) :

> ಅಯ್ಯಾ ಯತಿಯೇ, ಅವನು (ನನ್ನ ಅಮ್ಮನ ಅಪ್ಪನು) ಉತ್ತಮವಾದ ತಾಳೆ ಮರಗಳಿಂದ ಮದ್ಯವನ್ನು ತಯಾರಿಸುತ್ತಾನೆ. ಅದರ ಸವಿಯನ್ನು ಬಲ್ಲವನಾದರೂ ಅವನು ಅದೆಂದಿಗೂ ಅದನ್ನು ಸೇವಿಸಿದವನಲ್ಲ. ಆದರೆ ಒಳ್ಳೆಯ ಆತ್ಮೀಯತೆಯಿಂದ (ಶೀಲವಾನ್)ಅದನ್ನು ಮಾರುತ್ತಾರೆ. ಹೀಗಾಗಿ ಜನ ಯಾವಾಗಲೂ ಅವನನ್ನು ದೀಕ್ಷಿತನೆಂದೇ ಕರೆಯುತ್ತಾರೆ.[138] ಅವನ ಮಗಳು ನನ್ನ ಅಮ್ಮನಾದಳು. ಅಯ್ಯಾ ಯತಿಯೇ, ತನ್ನ ದೇಹವನ್ನೇ ಒಂದು ನೈವೇದ್ಯವೆಂದು ಬಗೆಯುವ ಅವಳು (ತನ್ನಲ್ಲಿಗೆ)ಸಂತೋಷಕ್ಕಾಗಿ ಬರುವ ಪುರುಷರನ್ನು ಯಾವಾಗಲೂ ಆನಂದ ಸಾಗರದಲ್ಲಿ ಮುಳುಗುವಂತೆ ಮಾಡುತ್ತಿದ್ದಳು. ಉನ್ಮತ್ತಭೈರವ ಹೆಸರಿನ (ಈ ವ್ಯಕ್ತಿ) ಅವಳ ಮಗನೆಂಬುದನ್ನು ತಿಳಿದುಕೊ. ನನ್ನ ಅಪ್ಪ ಕೂಡ ಮದ್ಯ ತಯಾರಕನೇ ಆಗಿದ್ದನು.[139] ಈ ಭೂಮಿಯ ಮೇಲೆ ದೇವತೆಗಳೂ (ಸುರ) ಕೂಡ ಅವನನ್ನು ಬಳಿಸಾರಿದ್ದರು. ಆದರೆ ಅವರು ಅಸಹಾಯರಾಗಿ ಓಡಿ ಹೋದರು.

---

137. ಧನಪತಿಸೂರಿ, vss. 17-22. ಮುಂದೆ ನೋಡಿ, pp. 90-92.

138. ಒಬ್ಬ ದೀಕ್ಷಿತನು ದೇವತೆಗಳಿಗೆ ಬಲಿಯ ಆಹುತಿಗಳನ್ನು ಅರ್ಪಿಸುವವನಾದರೆ ತಾನು ಅವುಗಳನ್ನು ಸೇವಿಸುವುದಿಲ್ಲ. ಉನ್ಮತ್ತಭೈರವನ (ತಾಯಿಯ ತಂದೆ) ಅಜ್ಜನು ಮದ್ಯವನ್ನು ಮಾರುವವನಾದರೂ ಅದನ್ನು ಸೇವಿಸುವುದಿಲ್ಲ.

139. ಶ್ಲೇಷೆಗಳನ್ನು ಒಳಗೊಂಡಿರುವ ಪದಗಳಿವೆ. ಸುರಾಕರ (ಮದ್ಯತಯಾರಕ) ಹಾಗೂ ಸುರ-ಆಕರ (ದೇವತೆಗಳ ಸಂಪತ್ತು).

(ಏಕೆಂದರೆ ಅವರಿಗೆ) ಮದ್ಯದ ವಾಸನೆ ಎಂದರೆ ಆಗದು.

ಶಂಕರರು ಉನ್ಮತ್ತಭೈರವನನ್ನು ಹೀಗೆ ಆತ್ಮಭರ್ತ್ಸನೆಗೆ ಈಡು ಮಾಡಿದ ತರುವಾಯ, ಅವನಿಗೆ ಅಲ್ಲಿಂದ ಹೋಗಲು ಹಾಗೂ ಮನಬಂದಂತೆ ಅಲೆಯಲು ಒಳ್ಳೆಯ ಮನದಿಂದ ಆಜ್ಞಾಪಿಸಿದರು. ಆಮೇಲೆ ತಮ್ಮ ಶಿಷ್ಯಂದಿರತ್ತ ಹೊರಳಿ ಶಂಕರರು ಅವರಿಗೆ ಹೀಗೆ ವಿವರಿಸಿದರು (vss. 28-30): ' ನಾನಿಲ್ಲಿಗೆ ಬಂದುದು ಬೇರೆ ಕೆಟ್ಟವಾದ ಸಂಪ್ರದಾಯಗಳನ್ನು ಅಪ್ಪಿಕೊಂಡಿರುವ ಬ್ರಾಹ್ಮಣರನ್ನು ಶಿಕ್ಷಿಸಲು, ಬೇರೆಯವರನ್ನಲ್ಲ. ನೀವಾರೂ ಈತನೊಂದಿಗೆ ಮಾತನಾಡ ಕೂಡದು. ತತ್‌ಕ್ಷಣ ಅವನನ್ನು ದೂರಕ್ಕೆ ಅಟ್ಟಿ ಬಿಡಿ.'

ಈ ಆಖ್ಯಾಯಿಕೆಯು ಸೌಖ್ಯತತ್ವ ವಿಚಾರದ ಸ್ವೈರಾಚಾರಗಳನ್ನು ದೂಷಿಸುವುದಕ್ಕೆ ಒಂದು ಉತ್ತಮವಾದ ಉದಾಹರಣೆಯಾಗಿದ್ದು, ಸಂಪ್ರದಾಯನಿಷ್ಠರಾದ ಲೇಖಕರು ಅದನ್ನು ತಾಂತ್ರಿಕ ಯತಿಗಳಿಗೆ ವಿರುದ್ಧವಾಗಿ ಬಳಸಲು ಇಷ್ಟಪಡುತ್ತಾರೆ. ಈ ದೋಷಾರೋಪಗಳಲ್ಲಿ ಕೆಲವು ವಾಸ್ತವಾಂಶಗಳಿವೆ. ಕಾಮ ಹಾಗೂ ಮದಿರೆಗಳು ತಾಂತ್ರಿಕ ಆಚರಣೆಗಳಲ್ಲಿ ತುಂಬ ಮಹತ್ವದ ಪಾತ್ರವನ್ನು ಖಂಡಿತವಾಗಿಯೂ ವಹಿಸುತ್ತವೆ. ದಕ್ಷಿಣಾಚಾರ ಸಂಪ್ರದಾಯದಲ್ಲಿ ಸರಿಸಮಾನವಾದ ಪರ್ಯಾಯ ಸಂಕೇತಗಳನ್ನು ಒದಗಿಸಲಾಗಿದೆ. ಇಂಥ ಆಚರಣೆಗಳನ್ನು ಕೇವಲ ಮನದ ಮಟ್ಟದಲ್ಲಿ ಅನುಷ್ಠಾನಗಳೆಂದು ಉನ್ನತಗೊಳಿಸಲಾಗಿದೆ. ಆದರೆ ಕಾಪಾಲಿಕರ ವಾಮಾಚಾರದ ಸಂಪ್ರದಾಯದಲ್ಲಿ ನಿಜವಾದ ಹೆಣ್ಣು ಹಾಗೂ ಮದಿರೆಯನ್ನು ಬಳಸಿಕೊಳ್ಳಲಾಗುತ್ತಿತ್ತು. ಏನಿದ್ದರೂ, ಕಾಪಾಲಿಕರು ಸೌಖ್ಯತತ್ವ ವಿಚಾರವರಿದ್ದು ಅವರು ಗಟ್ಟಿಯಾದ ಭೌತಿಕ ತತ್ವಜ್ಞಾನವನ್ನು ಆಧರಿಸಿ, ತಮ್ಮ ಸೌಖ್ಯತತ್ವವಾದವನ್ನು ಸಮರ್ಥಿಸಿಕೊಳ್ಳುತ್ತಿದ್ದರೆಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಹಾಗೆ, ಭೌತಿಕ ತತ್ವವಾದವು ಲೋಕಾಯತರು ಹಾಗೂ ಚಾರ್ವಾಕರ ತತ್ವ ವಿಚಾರಗಳ ಪರಿಧಿಯಲ್ಲಿ ಬರುವಂಥ ಸಂಗತಿಯಾಗಿದೆ, ತಾಂತ್ರಿಕತೆಯಲ್ಲಿ ಅಲ್ಲ. ಅಂದ ಮಾತ್ರಕ್ಕೆ ಬಹಳಷ್ಟು ಜನ ತಾಂತ್ರಿಕ ಯತಿಗಳು ಸ್ವೈರಾಚಾರಿಗಳಾಗಿರಲಿಲ್ಲವೆಂದು ಖಂಡಿತವೂ ಅಲ್ಲ. ಮೋಕ್ಷವನ್ನು ಕುರಿತು ಉನ್ಮತ್ತಭೈರವನ ಸಂಭೋಗೋದ್ರೇಕದ ಪರಿಕಲ್ಪನೆ ಹಾಗೂ ಜಾತಿಯನ್ನು ತ್ಯಜಿಸುವಂತಹ ಸಂಗತಿಗಳು ಬೇರೆ ಬೇರೆ ಆಕರಗಳಿಂದ ತುಣುಕು ತುಣುಕಾಗಿಯೇ ಏಕಾಗಲೊಲ್ಲದು, ತುಸುಮಟ್ಟಿಗೆ ದೃಢಪಡಿಸಲ್ಪಟ್ಟಿವೆ. ಇವುಗಳನ್ನು ಕುರಿತು ಇನ್ನೆಲ್ಲಿಯಾದರೂ ಹೆಚ್ಚು ವಿವರವಾಗಿ ಚರ್ಚಿಸಲಾಗುವುದು.[140]

---

140. ಮುಂದೆ ನೋಡಿ, pp. 90-92, ಮತ್ತು ಮೆಲ್ಗಡೆ. pp. 6-7.

# ಸಂಸ್ಕೃತ ನಾಟಕಗಳಲ್ಲಿ ಕಾಪಾಲಿಕರು

ಕಾಪಾಲಿಕ ಯತಿಗಳ ಖಳಪಾತ್ರಗಳು ಹಲವಾರು ಸಂಸ್ಕೃತ ನಾಟಕಗಳಲ್ಲಿ, ಕಥೆಗಳಲ್ಲಿ ಕಾಣಿಸಿಕೊಳ್ಳುತ್ತವೆ. ಇಂಥ ನಾಟಕಗಳೆಂದರೆ: (1) ಪಲ್ಲವರ ರಾಜನಾದ ಮಹೇಂದ್ರ ವರ್ಮನ್‌ನ 'ಮತ್ತ ವಿಲಾಸ' (ಕ್ರಿ.ಶ.600-630); (2) ಭವಭೂತಿಯ 'ಮಾಲತಿ ಮಾಧವ' (ಇಸವಿ. 725); (3) ಕ್ಷೇಮೀಶ್ವರನ 'ಚಂಡ ಕೌಶಿಕ' (ಇಸವಿ 900-950); (4) ಕೃಷ್ಣಮಿಶ್ರನ 'ಪ್ರಬೋಧ ಚಂದ್ರೋದಯ' (ಇಸವಿ 1050-1100); (5) ಕವಿರಾಜ ಶಂಕಧರನ 'ಲಟಮೇಲಕ' (ಇಸವಿ 1110-50); (6) ರಾಮಚಂದ್ರನ 'ಕೌಮುದೀ ಮಿತ್ರಾನಂದ' (ಇಸವಿ 1143-75), (7) ಇದೇ ಲೇಖಕನ 'ನಲ ವಿಲಾಸ' ಹಾಗೂ (8) ಯಶಪಾಲನ 'ಮೋಹರಾಜಪರಾಜಯ' (ಇಸವಿ 1175).[141] ಕಾಪಾಲಿಕರು ಕಾಣಿಸಿಕೊಳ್ಳುವ ತೀರ ಇತ್ತೀಚಿನ ಎರಡು ಕೃತಿಗಳೆಂದರೆ ಗೋಕುಲನಾಥನ 'ಅಮೃತೋದಯ' (ಕ್ರಿ.ಶ.1693)[142] ಹಾಗೂ ಆನಂದರಾಯಮಖಿನ್ ಇವನಿಗೆ ಅರ್ಪಿಸಲಾದ 'ವಿದ್ಯಾಪರಿಣಯನ' (ಇಸವಿ 1700).[143] ಅವರನ್ನು ಕುರಿತು ಕವಿಕರ್ಣಪೂರನ 'ಚೈತನ್ಯ ಚಂದ್ರೋದಯ'ದಲ್ಲೂ (ಇಸವಿ 1550) ನಮೂದಿಸಲಾಗಿದೆ.[144] ರಾಜಶೇಖರನ ಪ್ರಾಕೃತ ನಾಟಕ 'ಕರ್ಪೂರ ಮಂಜರಿ'ಯು (ಇಸವಿ900) 'ಕುಲ' ಪಥವನ್ನು ಅನುಸರಿಸುವ[145] ಒಬ್ಬ ತಾಂತ್ರಿಕ 'ಮಂತ್ರವಾದಿ ಗುರು'ವಾದ ಭೈರವಾನಂದ ಎನ್ನುವವನನ್ನು

---

141. ಎ. ಬಿ. ಕೀಥ್ (The Sanskrit Drama. p. 254) ಇವರು ಯಶಪಾಲನನ್ನು 'ಕುಮಾರಪಾಲನ ತರುವಾಯ, ಕ್ರಿ. ಶ. 1229-32 ರ ವರೆಗೆ ಆಳಿದ ಅಭಯದೇವ ಅಥವಾ ಅಭಯಪಾಲನ' ಕಾಲದವನೆಂದು ಹೇಳುತ್ತಾರೆ. ಸಿ. ಡಿ. ದಲಾಲರು 'ಮೋಹರಾಜಪರಾಜಯ'ದ ಚತುರವಿಜಯಜಿ ಅವರ ಆವೃತ್ತಿಯ ತಮ್ಮ ಮುನ್ನುಡಿಯಲ್ಲಿ ಯಶಪಾಲನನ್ನು 'ಕ್ರಿ. ಶ. 1229 ರಿಂದ 1232ರ' ವರೆಗೆ ಆಳಿದ ಅಜಯದೇವ ಅಥವಾ ಅಜಯಪಾಲನ ಕಾಲಕ್ಕೆ ಸೇರಿಸುತ್ತಾರೆ. ಗುಜರಾತದ ಚಾಲುಕ್ಯರ ಅರಸನಾದ ಅಜಯಪಾಲನು ಕ್ರಿ. ಶ. 1172 ರಿಂದ 1176ರ ವರೆಗೆ ಆಳಿದನು. ದಲಾಲರಿಂದ ನೀಡಲಾದ ಹಾಗೂ ಕೀಥರಿಂದ ಬಹುಮಟ್ಟಿಗೆ ಅನುಸರಿಸಲಾದ ತಿಥಿಗಳು ವಿಕ್ರಮ ಸಂವತ್ ಕಾಲಗಣನೆಯವೇ ಹೊರತು ಕ್ರಿಸ್ತ ಶಕೆಯವಲ್ಲ. ಕೀಥರು ಅರಸನ ಹೆಸರನ್ನು ಅಜಯಪಾಲ ಎಂದು ಓದುವ ಬದಲು ಅಭಯಪಾಲನೆಂದು ಏಕೆ ಓದುವರೋ, ನಮಗೆ ತಿಳಿಯದು.
142. ಕೀಥರು (ಪು. 343) ಈ ಲೇಖಕನನ್ನು ಹದಿನಾರನೆಯ ಶತಮಾನಕ್ಕೆ ಸೇರಿಸುತ್ತಾರೆ. ಆದರೆ ಇದು ಸರಿಯಲ್ಲ.
143. ಹಂಡಿಕಿ ಅವರು (ಶ್ರೀ ಹರ್ಷ, ಪು. 641) ಈ ನಾಟಕದ (ಪು. 1) ಶಿವದತ್ತ ಹಾಗೂ ಪರಬರ ಆವೃತ್ತಿಯ ಕಿರಿ ಟಿಪ್ಪಣಿಯೊಂದನ್ನು ಅನುಸರಿಸುತ್ತಾರೆ ಹಾಗೂ ಆನಂದರಾಯಮಖಿನ್ ಅವರು ಇವನನ್ನು ಹದಿನೇಳನೆಯ ಶತಮಾನದ ಪೂರ್ವಾರ್ಧಕ್ಕೆ ಸೇರಿಸುತ್ತಾರೆ. ಕೀಥರು (ಪು. 253) ಸರಿಯಾದ ತಿಥಿಯನ್ನು ನೀಡುತ್ತಾರೆ. ಆನಂದರಾಯನ 'ಜೀವಾನಂದ'ದ ಎಮ್. ಡಿ. ಅಯ್ಯಂಗಾರರ ಆವೃತ್ತಿಗಾಗಿ ಅವರೇ ಬರೆದ ಮುನ್ನುಡಿಯನ್ನು ನೋಡಿ.
144. ಸಂ. ಕೇದಾರನಾಥ ಮತ್ತು ಡಬ್ಲ್ಯು. ಎಲ್. ಎಸ್. ಪಣಶೀಕರ, pp. 24-25.
145. ಸಂ. ಎಸ್. ಕೋನೊ (Konow) ಮತ್ತು ಅನು. ಸಿ. ಆರ್. ಲಕ್ಷ್ಮಣ, ವಿಶೇಷವಾಗಿ ನೋಡಿ ಅಂಕ I. vss. 22-25 ಮತ್ತು ಅಂಕ iv, vs. 19.

ಮುಖ್ಯವಾಗಿ ಚಿತ್ರಿಸುತ್ತದೆ. ಕೃಷ್ಣಮಿಶ್ರನ 'ಪ್ರಬೋಧಚಂದ್ರೋದಯ'ವನ್ನು ಆಧರಿಸಿದ 'ರುಚಿಕರಟೀಕಾ'ವು ಸಾಧಿಸುವುದೇನೆಂದರೆ ರಾಜಶೇಖರನ ಭೈರವಾನಂದನು ಕಾಪಾಲಿಕ ಸಿದ್ಧಾಂತವಾದ 'ಸೋಮಸಿದ್ಧಾಂತ'ವನ್ನು ಅನುಸರಿಸುವನೆಂದು.[146] ಆದರೆ, ಕರಾರುವಾಕ್ಕಾಗಿ ನೋಡಿದರೆ ಇದು ನಿಜವಲ್ಲ. 'ಕುಲ ಪಥ'ವು ಕೌಲ ಇವರ ಸಿದ್ಧಾಂತವನ್ನು ನಿರ್ದೇಶಿಸುತ್ತದೆ; ಕಾಪಾಲಿಕರನ್ನಲ್ಲ. ಇವೆರಡೂ ಪಂಥಗಳು ವಾಮಾಚಾರ ಪರಂಪರೆಗೆ ಸೇರಿದವುಗಳಾದರೂ ಇವುಗಳಲ್ಲಿ ಸಾಕಷ್ಟು ಮಟ್ಟಿಗಿನ ಸಾಮ್ಯವೂ ಇತ್ತು. ಕೌಲರು ಯಶಪಾಲನ 'ಮೋಹರಾಜ ಪರಾಜಯ' ಹಾಗೂ ಶಂಕಧರನ 'ಲಟಮೇಲಕ'ದಲ್ಲೂ ಕಾಣಿಸಿಕೊಳ್ಳುತ್ತಾರೆ.

ಈ ನಾಟಕಕಾರರಲ್ಲಿ ಯಾರಿಗೂ ಕಾಪಾಲಿಕರ ಬಗೆಗೆ ಅಂತಹ ಸಹಾನುಭೂತಿಯೇನಿರಲಿಲ್ಲ. ಸಂಪ್ರದಾಯದಂತೆ, ಹೆಸರಾದ ತಮಿಳು ನಾಯ್ನಾರನಾದ ಅಪ್ಪರ್ ಈತನು 'ಮತ್ತ ವಿಲಾಸದ' ರಾಜ ಲೇಖಕನಾದ ಮಹೇಂದ್ರನನ್ನು ಜೈನ ಸಂಪ್ರದಾಯದಿಂದ ಶೈವ ಸಂಪ್ರದಾಯಕ್ಕೆ ಮತಾಂತರಗೊಳಿಸಿದ್ದನು.[147] ಅರಸನ ಸ್ವಂತದ್ದಾದ ತಿರುಚಿರಪಲ್ಲಿ (ತ್ರಿಚಿನಾಪಲ್ಲಿ)ಯ ಶಾಸನವು ನಿರ್ದೇಶಿಸುವಂತೆ ಅವನು ಇನ್ನಾವುದೋ ಮತದಿಂದ ಶೈವ ಸಂಪ್ರದಾಯತ್ತ ಹೊರಳಿದ್ದನು.[148] ತನ್ನ ಮತಾಂತರದ ತರುವಾಯವೇ ಅವನು ಈ ನಾಟಕವನ್ನು ಬರೆದಿದ್ದರೂ ಕಾಪಾಲಿಕರಂತಹ ಪಾಷಂಡಿ ಸಂಪ್ರದಾಯದ ಬಗೆಗೆ ಅವನಿಂದ ಅನುಗ್ರಹವನ್ನು ನಿರೀಕ್ಷಿಸುವಂತಿರಲಿಲ್ಲ. ಭವಭೂತಿಯು ಯಜುರ್ವೇದದ ತೈತ್ತರೀಯ ಶಾಖೆಯನ್ನು ಪಾಲಿಸುವ ಕುಟುಂಬದಿಂದ ಬಂದ ಒಬ್ಬ ಸಂಪ್ರದಾಯನಿಷ್ಠನಾದ ಬ್ರಾಹ್ಮಣನಾಗಿದ್ದನು. ಅವನಲ್ಲಿ ಶಿವೋಪಾಸನೆಯ ಒಲವು ತುಸು ಮಟ್ಟಿಗೆ ಇದ್ದಿರಬಹುದಾದರೂ ಅವನೇನೂ ಕಟ್ಟುನಿಟ್ಟಾದ ಪಂಥಾಭಿಮಾನಿಯಾಗಿರಲಿಲ್ಲ.[149] 'ಚಂಡ ಕೌಶಿಕ'ದ ಲೇಖಕನಾದ ಕ್ಷೇಮೀಶ್ವರನೂ ಒಬ್ಬ ಸಂಪ್ರದಾಯ ನಿಷ್ಠನಾದ ಬ್ರಾಹ್ಮಣನಾಗಿರುವ ಸಾಧ್ಯತೆಯಿದೆ. ಕೃಷ್ಣಮಿಶ್ರನು 'ಅದ್ವೈತ ವೈಷ್ಣವ' ಸಂಪ್ರದಾಯವನ್ನು ಮೆಚ್ಚಿ ಕೊಂಡಾಡಲೆಂದು ತನ್ನ ರೂಪಕ ಕಥೆಯಾದ 'ಪ್ರಬೋಧ ಚಂದ್ರೋದಯ'ವನ್ನು ಬಳಸಿಕೊಂಡಿದ್ದಾನೆ. ಶಂಖಧರನು ಶೈವಸಂಪ್ರದಾಯದ ಸೌಮ್ಯಸ್ವರೂಪದತ್ತ ವಾಲಿದವನು. ಏಕೆಂದರೆ, 'ಲಟಮೇಲಕ'ವು ಶುರುವಾಗುವುದೇ ಗೌರಿ

---

146. ಉದ್ಧೃತ, ಜಿ. ತುಕ್ಕಿ (Tucci). 'Animadversiones Indicae', JRASB, n. s. XXVI (1930), 131.

147. ಆರ್. ಸತ್ಯನಾಥಯ್ಯರ್, ಕೆ. ಆರ್. ಎಸ್. ಅಯ್ಯಂಗಾರ್ ಮತ್ತು ಟಿ. ಎಮ್. ಪಿ. ಮಹಾದೇವನ್ (ಎಲ್ಲರೂ ಆರ್. ಸಿ. ಮಜುಮದಾರ (ಸಂ.), The Classical Age'ದಲ್ಲಿ) ಇವರೆಲ್ಲ ಪ್ರಶ್ನಿಸದೆಯೇ ಈ ಸಂಪ್ರದಾಯವನ್ನು ಒಪ್ಪಿಕೊಳ್ಳುವಂತೆ ಕಾಣುತ್ತದೆ. ಕೆ. ಎ. ಎನ್. ಶಾಸ್ತ್ರಿಯವರು ತಮ್ಮ 'Development of Religion in South India (ಪು. 42). ಈ ಅನನ್ಯತೆಯು ವಿರಳವಾದ ಸಾಕ್ಷ್ಯವನ್ನಾಧರಿಸಿದುದು, ಎನ್ನುವತ್ತ ನಿರ್ದೇಶನ ಮಾಡುತ್ತಾರೆ.

148. ಅದನ್ನೇ ನೋಡಿ.

149. 'ಭವಭೂತಿ' ಎಂದರೆ 'ಶಿವನ ಸಂಪತ್ತು' ಅಥವಾ 'ಶಿವನ ಭಸ್ಮ'.

ಹಾಗೂ ಶಿವರನ್ನು ಪರಿಚಯಿಸುವ ಪದ್ಯಗಳಿಂದ. ರಾಮಚಂದ್ರ ಹಾಗೂ ಯಶಪಾಲರಿಬ್ಬರೂ ಧರ್ಮನಿಷ್ಠ ಜೈನರಾಗಿದ್ದರು.

ಈ ಲೇಖಕರೆಲ್ಲರೂ ಕಾಪಾಲಿಕ ಸಂಪ್ರದಾಯದ ಸ್ವೇಚ್ಛಾಚಾರ ಹಾಗೂ ಕ್ರೂರ ಕಾಮವಿಕಾರಗಳ ಬಗೆಗಿನ ತಮ್ಮ ತಿರಸ್ಕಾರವನ್ನು ವ್ಯಕ್ತ ಪಡಿಸುತ್ತಾರೆ. ಜೈನರ ಬಗೆಗಂತೂ ಈ ಸಂಗತಿ ಇನ್ನಷ್ಟು ನಿಜ. ಅವರ ಅತಿರೇಕಕ್ಕೆ ತಲುಪಿದ ಸಂನ್ಯಾಸ ದರ್ಮವು ಅವರನ್ನು ತಾಂತ್ರಿಕ ಸಂಪ್ರದಾಯಗಳ ನೈಸರ್ಗಿಕ ಹಗೆಗಳನ್ನಾಗಿ ಮಾಡಿದೆ. ಇದಕ್ಕೆ ಬದಲಾಗಿ ಸಂಪ್ರದಾಯನಿಷ್ಠರಾದ ಶೈವಲೇಖಕರು ತೋರುವ ಅಸಡ್ಡೆಯು, ತಮ್ಮ ಪಾಷಂಡಿ ಸೋದರರ ಯಾವುದೇ ಬಗೆಯ ಸಂಪರ್ಕವನ್ನು ಒಪ್ಪಿಕೊಳ್ಳದ ಅವರ ಬಯಕೆಯನ್ನು ಪ್ರತಿಬಿಂಬಿಸುತ್ತದೆ. ಸಾಮರ್ಥ್ಯಶಾಲಿಯಾದ ಒಬ್ಬ ವೈಷ್ಣವನಾದ ಕೃಷ್ಣಮಿಶ್ರನು ಚಾರ್ವಾಕ, ದಿಗಂಬರ, ಬೌದ್ಧ ಹಾಗೂ ಕಾಪಾಲಿಕ ಇವರ ಮೇಲೆ ದಾಳಿ ಇಕ್ಕುವನಾದರೆ ಬಹುಸಂಖ್ಯೆಯಲ್ಲಿರುವ ಗೌರವಾನ್ವಿತ ಶೈವಸಂಪ್ರದಾಯಗಳನ್ನು ಕುರಿತು ಏನನ್ನಾದರೂ ನಮೂದಿಸುವತ್ತ ತನ್ನ ಗಮನವನ್ನು ಹರಿಸನು.

ಈ ನಾಟಕವು ಕಾಪಾಲಿಕರು ನೆಲೆಸಿದ ಭೌಗೋಲಿಕ ಹರಹನ್ನು ಕುರಿತು ತುಸು ಹೆಚ್ಚು ಮಹತ್ವದ ಮಾಹಿತಿಯನ್ನು ಒದಗಿಸುತ್ತದೆ.'ಮತ್ತ ವಿಲಾಸ'ದ ನೆಲೆಯೆಂದರೆ ಮಹೇಂದ್ರನ ರಾಜಧಾನಿಯಾದ ಕಾಂಚಿ. ಈ ನಾಟಕದ ಕಾಪಾಲಿಕಯತಿಯು ಏಕಂಬಮ್ (ಎಂವ್ವವಾಸೀ) ಎಂಬಲ್ಲಿ ನೆಲೆಸಿದ್ದನೆಂದು ಹೇಳಲಾಗಿದೆ.[150] ಇದು ಖಂಡಿತ ಇಂದಿಗೂ ಕಾಂಚೀಪುರಮ್‌ದ ಮಹತ್ವದ ದೇವಾಲಯಗಳಲ್ಲಿ ಒಂದೆನಿಸಿದ ಏಕಾಂಬಿರನಾಥನ ದೇವಾಲಯವನ್ನು ಸೂಚಿಸುತ್ತದೆ. ಈಗಿನ ಕಟ್ಟಡವು ಮಹೇಂದ್ರನ ಕಾಲದ ಬಲು ಮುಂದಿನ ಕಾಲದ್ದಾಗಿ ತೋರುತ್ತದೆ. ಈಗಾಗಲೇ ನಾವು ಗಮನಿಸಿರುವ ಹಾಗೆ ಭವಭೂತಿಯ 'ಮಾಲತಿ ಮಾಧವ'ದ ನೆಲೆ ಬಹುಮಟ್ಟಿಗೆ ಆಗ್ರಾದ ದಕ್ಷಿಣಕ್ಕೆ ಸುಮಾರು 100 ಮೈಲುಗಳ ಅಂತರದ ಮೇಲಿರುವ ಪದ್ಮಾವತಿ ಎಂಬ ಪಟ್ಟಣ. ಕಾಪಾಲಿಕನಾದ ಅಘೋರಘಂಟನು ಪಟ್ಟಣದ ಹೊರಬದಿಗೆ ಇರುವ ಸ್ಮಶಾನಭೂಮಿಯ ಮೇಲಿನ ಕರಾಲಾ ದೇವನ ದೇವಾಲಯದಿಂದ ತನ್ನೆಲ್ಲ ಚಟುವಟಿಕೆಗಳನ್ನು ನಡೆಯಿಸುತ್ತಾನೆ. ಆದರೆ ಈ ಕಾಪಾಲಿಕನ ಮನೆ ಶ್ರೀ ಪರ್ವತದ ಮೇಲಿದೆಯೆಂದು ಹೇಳಲಾಗಿದೆ.[151] ನಾಟಕದ ಬೇರೊಂದು ಪಾತ್ರವು ಸದ್ಗುಣಗಳನ್ನು ಹೊಂದಿದವಳಾದ ಯೋಗಿನಿಯೊಬ್ಬಳದು. ಹೆಸರು ಸೌದಾಮಿನಿ. ಅವಳು 'ಶ್ರೀ ಪರ್ವತದ ಮೇಲೆ ಒಂದು ಕಾಪಾಲಿಕ ವ್ರತವನ್ನು ಆಚರಿಸುತ್ತಿರುವಳು' ಎಂದು ಹೇಳಲಾಗಿದೆ.[152] ಕೊನೆಯಲ್ಲಿ, ಅಘೋರಘಂಟನ ಶಿಷ್ಯಳಾದ ಕಪಾಲಕುಂಡಲಾ ಇವಳ ಮೂಲಕ ನಾಟಕದ ನಾಯಕಿಯಾದ ಮಾಲತಿಯನ್ನು ಅಪಹರಿಸಿ ಇಲ್ಲಿಗೆ ತರಲಾಗುತ್ತದೆ.

150. ಸಂ. ಟಿ. ಜಿ. ಶಾಸ್ತ್ರಿ, ಪು. 13. ಅನು. ಬಾರ್ನೆಟ್ಟ್, BSOS. V. 707.

151. ಅಂಕ I, vs. 15 ದ ನಂತರ.

152. ಅದೇ.

ಒಳ್ಳೆಯ ಹೆಸರಾದ ತೀರ್ಥಕ್ಷೇತ್ರ ಎನ್ನಿಸಿದ ಶ್ರೀಪರ್ವತ (ಶ್ರೀ ಶೈಲಮ್ ಎಂದೂ ಕರೆಯಲಾಗುತ್ತದೆ)ವು ಆಂಧ್ರ ಪ್ರದೇಶದ ಕರ್ನೂಲ ಜಿಲ್ಲೆಯಲ್ಲಿದೆ. ಇದೆಂದರೆ ಶಿವ ಹಾಗೂ ದೇವಿಗೆ ಒಂದು ಪವಿತ್ರ ಸ್ಥಳವಾಗಿದೆ, ಎಂದು ಮಹಾಭಾರತದಲ್ಲಿ ನಮೂದಿಸಲಾಗಿದೆ.[153] ಮತ್ಸ್ಯಪುರಾಣ clxxxi. 28-29 ದಲ್ಲಿ ಶಿವನಿಗೆ ಪವಿತ್ರವೆನ್ನಿಸಿದ ಎಂಟು ಗುಟ್ಟಾದ ಸ್ಥಾನಗಳಲ್ಲಿ ಒಂದೆಂದು ಇದನ್ನು ಪಟ್ಟಿಗೆ ಸೇರ್ಪಡಿಸಲಾಗಿದೆ. ಈ ಸ್ಥಳದಲ್ಲಿರುವ ಮಲ್ಲಿಕಾರ್ಜುನಲಿಂಗವು ಶಿವನ ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದು.[154] ಇಂದು ಈ ದೇವಾಲಯವು ವೀರಶೈವರ ವಿಶೇಷ ಗೌರವಕ್ಕೆ ಪಾತ್ರವಾಗಿದೆ. ಶ್ರೀಪರ್ವತದ ಮೇಲಿರುವ ಮಲ್ಲಿಕಾರ್ಜುನಲಿಂಗದ ಆರಾಧನೆಯ ತೀರ ಮೊದಲನೆಯ ಸಂದರ್ಭವು ಸುಬಂಧುವಿನ 'ವಾಸವದತ್ತಾ' ( ಕ್ರಿ. ಶ. 600) ದಲ್ಲಿ[155] ಹಾಗೂ 'ಪದ್ಮ ಪುರಾಣ' ದಲ್ಲಿ [156] ಸಿಕ್ಕುತ್ತದೆ. ಶಂಕರಾಚಾರ್ಯರು ತಾವಾಗಿ ಶ್ರೀಶೈಲದ ಮೇಲಿರುವ ಈ ದೇವಾಲಯಕ್ಕೆ ಭೇಟಿಯಿತ್ತಿದ್ದರೆಂದು ಮಾಧವರು ಸಾಧಿಸುತ್ತಾರೆ.[157] ಕ್ರಿ. ಶ. 1090ರಲ್ಲಿ ಪರ್ವತಾವಳಿಯ ಕಾಳಾಮುಖಯತಿಯಾದ ರಾಮೇಶ್ವರಪಂಡಿತ ಎನ್ನುವವನು ಈ ಪರ್ವತದ ಮೇಲಿನ ಮಲ್ಲಿಕಾರ್ಜುನ ಶಿಲಾಮಠದ ಅಧಿಪತಿಯಾಗಿದ್ದನು.[158] ಇದಕ್ಕೂ ಕೆಲವು ವರ್ಷಗಳ ಮೊದಲು, 1057 ದಲ್ಲಿ, ಪಶ್ಚಿಮ ಚಾಲುಕ್ಯರ ಅರಸನಾದ ಮೊದಲನೆಯ ಸೋಮೇಶ್ವರನು ಶ್ರೀಶೈಲಕ್ಕೆ ಬಂದು ಮಲ್ಲಿಕಾರ್ಜುನ ದೇವರ ಸಮ್ಮುಖದಲ್ಲಿ, ಕಾಳಾಮುಖಯತಿಯಾದ ಸುರೇಶ್ವರ ಪಂಡಿತನ ಪಾದಗಳನ್ನು ತೊಳೆದನು.[159] ನಾವು ಈಗಾಗಲೇ ಕಂಡುಕೊಂಡಂತೆ ಬಾಣಭಟ್ಟನ 'ಕಾದಂಬರಿ'ಯಲ್ಲಿ[160] ಉಜ್ಜಯನಿ ಬಳಿಯ ಚಂಡಿಕಾ ದೇವಾಲಯದಲ್ಲಿ ವಾಸಿಸುತ್ತಿದ್ದ ದಕ್ಷಿಣ ಬಾರತದ ತಾಂತ್ರಿಕ ಯತಿಯು 'ಶ್ರೀ ಪರ್ವತವನ್ನು ಕುರಿತು ಸಾವಿರಾರು ಅದ್ಭುತವಾದ ಕಥೆಗಳನ್ನು ' ಬಲ್ಲವನಾಗಿದ್ದನು, ಎಂದು ಹೇಳವಾಗಿದೆ. ಬಾಣನು ತನ್ನ 'ಹರ್ಷ ಚರಿತ'ದಲ್ಲಿ ಹರ್ಷನನ್ನು 'ಮಾಂತ್ರಿಕ ಸಾಮರ್ಥ್ಯಗಳ (ಸಿದ್ಧಿಗಳ) ಶ್ರೀಪರ್ವತ' ಎಂದಿದ್ದಾನೆ.[161] ಬಾಣನ ಇವೆರಡು ಸಂದರ್ಭಗಳು ಸೂಚಿಸುವುದೇನೆಂದರೆ ಹದಿನೇಳನೆಯ ಶತಮಾನದ ಪೂರ್ವಾರ್ಧದವರೆಗೆ ಶ್ರೀಪರ್ವತವು ತಾಂತ್ರಿಕ ಆರಾಧನೆಗಳ

---

153. ಆರಣ್ಯಕಪರ್ವನ್. ಸಂ. ವಿ. ಎಸ್. ಸುಖತನಕರ, iii, 83. 16-17.
154. ನೋಡಿ ಪಿ. ವಿ. ಕಾಣೆ. HDS, iv, 678.
155. ಅನು. ಎಲ್. ಎಚ್. ಗ್ರೇ, ಪು. 68.
156. 'ಉತ್ತರ ಖಂಡ', chap. xix. cited by ಹಂಡಿಕಿ. ಪು. 359.
157. 'ಶಂಕರ ದಿಗ್ವಿಜಯ', x. 7-12.
158. ನೋಡಿ ಶಾಸನ ಸಂ. ಮತ್ತು ಅನು. ಪಿ. ಶ್ರೀನಿವಾಸಾಚಾರರಿಂದ, HAS, no. 13, Part II, pp. 25-31.
159. ನೋಡಿ ಶಾಸನ ಸಂ. ಆರ್. ಎಸ್. ಶಾಸ್ತ್ರಿ ಮತ್ತು ಎನ್. ಎಲ್. ರಾವ ಇವರಿಂದ, SII, IX, Part I, no. 119.
160. ಹಿಂದೆ ಪು. 18.
161. ಸಂ. ಕಾಣೆ, part I, text p. 2.

ಕೇಂದ್ರವೆಂದು ಹೆಸರಾಗಿತ್ತೆಂಬುದು. ಆದರೆ ಭವಭೂತಿಯ ಹೊರತಾಗಿ ಕಲ್ಹಣನೊಬ್ಬನೆ ಇದನ್ನು ವಿಶೇಷವಾಗಿ ಕಾಪಾಲಿಕರೊಡನೆ ಜೋಡಿಸಿದ ಲೇಖಕನಾಗಿದ್ದಾನೆ.[162] ಮಲ್ಲಿಕಾರ್ಜುನ ದೇವಾಲಯವು ಹನ್ನೆರಡನೆಯ ಶತಮಾನದ ತುಸು ಹಿಂದಿನ ಕಾಲದಲ್ಲಿ ಕಾಳಾಮುಖರ ಕೈಗೆ ಬಂದಿತು. ಅವರು ಕಾಪಾಲಿಕರೊಡನೆ ಯಾವುದೇ ಬಗೆಯ ಸಂಪರ್ಕವನ್ನು ಇರಿಸಿಕೊಂಡದ್ದೇ ಆದರೆ ಅದು ಯಾವ ಬಗೆಯಾಗಿದ್ದಿತೆಂಬುದನ್ನು ನಾವರಿಯೆವು. ಇವೆರಡೂ ಸಂಪ್ರದಾಯಗಳ ನಡುವೆ ಯಾವಾಗಲೂ ಸ್ನೇಹಮಯ ಸಂಬಂಧಗಳೇ ಇದ್ದಿರುವ ಸಾಧ್ಯತೆ ಕಡಿಮೆ. ಹದಿನಾಲ್ಕನೆಯ ಶತಮಾನದವರೆಗೆ ಕಾಳಾಮುಖರು ವೀರಶೈವರಿಂದ ಸ್ಥಾನಪಲ್ಲಟಗೊಂಡಿದ್ದರು. ಈ ಹೊತ್ತಿಗೆ ಕಾಳಾಮುಖರು ಸುಮಾರಾಗಿ ಹೇಳಹೆಸರಿಲ್ಲವಾಗಿದ್ದರೆಂದು ಕಾಣುತ್ತದೆ.

ಬೇರೆ ಹಲವು ಜನ ನಾಟಕಕಾರರು ಉತ್ತರ ಹಾಗೂ ಪಶ್ಚಿಮ ಭಾರತಗಳಲ್ಲಿದ್ದರು. 'ಚಂಡ ಕೌಶಿಕ'ದ ಲೇಖಕನಾದ ಕ್ಷೇಮಿಶ್ವರನು ಮಹಿಪಾಲನಿಗೆ ತನ್ನ ನಾಟಕವನ್ನು ಅರ್ಪಿಸಿದನು. ಈತನನ್ನು ಕನೋಜದ ಪ್ರತೀಹಾರ ಅರಸನಾದ ಒಂದನೆಯ ಮಹೀಪಾಲನೆಂದು (ಇಸವಿ 912-942) ಗುರುತಿಸಬಹುದು. ಈ ಅರಸನು ರಾಜಶೇಖರನಿಗೂ ಆಶ್ರಯದಾತನಾಗಿದ್ದನು. ಕೃಷ್ಣಮಿಶ್ರನು (ಆಧುನಿಕ ಬುಂದೇಲ ಖಂಡ ಪ್ರದೇಶದ) ಜೆಜಕಾಭುಕ್ತಿಯ ಚಂದೇಲ ಅರಸನಾದ ಕೀರ್ತಿವರ್ಮನ್‌ನಿಗಾಗಿ (ಇಸವಿ 1070-90) 'ಪ್ರಬೋಧ ಚಂದ್ರೋದಯ'ವನ್ನು ರಚಿಸಿದನು. ಗೋಮಿಚಂದ್ರ (ಇಸವಿ 1114-54) ಎಂಬ ಕನೋಜದ ಗಾಹಡವಾಲ ಅರಸನ ಕಾಲಕ್ಕೆ 'ಲಟಮೇಲಕ'ವನ್ನು ಬರೆಯಲಾಯಿತು. ರಾಮಚಂದ್ರ ಹಾಗೂ ಯಶಪಾಲ ಇವರಿಬ್ಬರೂ ಚಾಲುಕ್ಯ ಅರಸನಾದ ಅಜಯಪಾಲನ (ಇಸವಿ 1172-76) ಆಳ್ವಿಕೆಯ ಕಾಲಕ್ಕೆ ಉತ್ತರ ಗುಜರಾತದಲ್ಲಿ ವಾಸಿಸುತ್ತಿದ್ದರು. ಯಶಪಾಲನ 'ಮೋಹರಾಜಪರಾಜಯ'ವು ಅಜಯಪಾಲನ ಮೊದಲಿನವನಾದ ಕುಮಾರಪಾಲನನ್ನು (ಇಸವಿ 1143-72) ಜೈನ ಸಂಪ್ರದಾಯಕ್ಕೆ ಮತಾಂತರಿಸಿದುದನ್ನು ಬಣ್ಣಿಸುತ್ತದೆ. ಈ ಅರಸನ ಹಗೆಗಳಲ್ಲಿ ಒಬ್ಬ ಕಾಪಾಲಿಕನೂ ಇರುವನು. ರಾಮಚಂದ್ರನ, ನಳದಮಯಂತಿಯ ಆಖ್ಯಾಯಿಕೆಯ ಮರುಕಥನವಾದ 'ನಲವಿಲಾಸ'ದಲ್ಲಿ ಕಳಚೂರಿ-ಚೇದಿಯ ಅರಸನಾದ ಚಿತ್ರಸೇನನ ಬೇಹುಗಾರರಾಗಿ ಕೆಲವು ಜನ ಕಾಪಾಲಿಕರು ಕಾಣಿಸಿಕೊಳ್ಳುತ್ತಾರೆ. ಈ ಅರಸನನ್ನು ತ್ರಿಪುರಿಯ (ಮಧ್ಯ ಪ್ರದೇಶದ ಜಬಲಪುರದ ಬಳಿಯ) ಕಲಚೂರಿ ಅರಸರ ಮಾದರಿಯನ್ನು ಇರಿಸಿಕೊಂಡು ತಯಾರಿಸಲಾಗಿದೆ. ಏಕೆಂದರೆ ಇವರಲ್ಲಿ ಒಬ್ಬನಾಗಲಿ ಇಲ್ಲವೆ ಅದಕ್ಕೂ ಹೆಚ್ಚು ಜನ ಅರಸರು ಕುಮಾರಪಾಲನೊಡನೆ ಹೋರಾಡಿದ್ದರೆಂದು ನಂಬಲಾಗಿದೆ.[163] ನಾಟಕದ ಆರಂಭ ವಿದರ್ಭದಲ್ಲಿ.

---

162. ಮುಂದೆ ನೋಡಿ, pp. 66-67.

163. ಆರ್. ಸಿ. ಮಜುಮದಾರ (ಸಂ.) 'The Struggle for Empire', p. 64.

ಕಾಪಾಲಿಕರು ಹಂಚಿಹರಡಿದುದನ್ನು ಕುರಿತಾದ ಎಲ್ಲ ಬಗೆಯ ಮಾಹಿತಿ ಹಾಗೂ ಮಿತಿಗಳನ್ನು ತಾಳೆ ಮಾಡಿ ನೋಡಲಾಗಿ ನಮಗೆ ಕಂಡು ಬರುವುದೇನೆಂದರೆ ಎಂಟನೆಯ ಶತಮಾನದಷ್ಟು ಹಿಂದಿನಿಂದಲೇ ಅವರು ದಕ್ಷಿಣ ಭಾರತದ ತಪ್ಪಲು ಪ್ರದೇಶದ ಹಲವೆಡೆಗಳಲ್ಲಿ ಅಸ್ತಿತ್ವದಲ್ಲಿ ಇದ್ದರೆಂಬುದು. ಕಾಂಚಿ, ಮೈಸೂರಿನ ಕೆಲ ಭಾಗಗಳು, ಪಶ್ಚಿಮ ಹಾಗೂ ಮಧ್ಯ ಮಹಾರಾಷ್ಟ್ರ, ಉಜ್ಜಯಿನಿ, ಮಧ್ಯಪ್ರದೇಶದ ಗ್ವಾಲಿಯರದ ಸುತ್ತಲ ಪ್ರದೇಶ, ಹಾಗೂ ಆಂಧ್ರ ಪ್ರದೇಶದ ಕರ್ನೂಲ ಜಿಲ್ಲೆಗಳೊಂದಿಗೆ ವಿಶೇಷವಾಗಿ ಜೋಡಿಸಲ್ಪಟ್ಟಿರುವರು. ಈ ಕಾಲದ ಹೊತ್ತಿಗೆ ಅವರು ಓರಿಸ್ಸಾದಲ್ಲೂ (ಭುವನೇಶ್ವರ) ಕಾಣಸಿಕ್ಕಿರಲು ಸಾಕು. ಎಂಟನೆಯ ಶತಮಾನದ ತರುವಾಯದ ಆಕರಗಳು ಗುಜರಾತ, ಬುಂದೇಲಖಂಡ, ವಿಂಧ್ಯಪರ್ವತ ಹಾಗೂ ಭಾರತದ ಬೇರೆ ಭಾಗಗಳಲ್ಲಿ ಅವರು ನೆಲೆಸಿದ್ದುದನ್ನು ಸೂಚಿಸುತ್ತವೆ[164]. ಭವಭೂತಿಯ ಅಭಿಪ್ರಾಯದಂತೆ ಕರ್ನೂಲಜಿಲ್ಲೆಯ ಶ್ರೀಪರ್ವತವು ಅವನ ಕಾಲದಲ್ಲಿ ವಿಶೇಷ ಮಹತ್ವವುಳ್ಳ ಕಾಪಾಲಿಕ ಕೇಂದ್ರವೆನ್ನಿಸಿತ್ತು. ಆದರೆ, ಮುಂದಿನ ಶತಮಾನಗಳಲ್ಲಿ ಅವರು ಇವೆಲ್ಲೆಡೆಗಳಲ್ಲಿ ಕಾಳಾಮುಖರಿಂದ ಸ್ಥಾನಪಲ್ಲಟ ಹೊಂದಿದರು. ಒಂಬತ್ತನೆಯ ಶತಮಾನಕ್ಕಿಂತ ಮೊದಲಿನ ಶಾಸನಗಳು ನಮ್ಮಲ್ಲಿಲ್ಲದ ಪ್ರದೇಶಗಳೆಂದರೆ ಬಿಹಾರ, ಉತ್ತರ ಪ್ರದೇಶ (ವಾರಣಾಸಿಯನ್ನುಳಿದು), ರಾಜಸ್ಥಾನ, ಪಂಜಾಬ, ಕಾಶ್ಮೀರ ಹಾಗೂ ಪಶ್ಚಿಮ ಪಾಕಿಸ್ತಾನ, - ಅಂದರೆ ಪುರಾತನ ಆರ್ಯಾವರ್ತವಿಡಿ. ಪಾರಂಪಾರಿಕವಾಗಿ ತಾಂತ್ರಿಕ ಆರಾಧನೆಯ ಭದ್ರ ನೆಲೆಯೆನ್ನಿಸಿದ ಬಂಗಾಲವು ಮೊದಲ ಶಾಸನಗಳಲ್ಲಿ ಪ್ರತಿನಿಧಿತ್ವವನ್ನು ಪಡೆಯದಿದ್ದರೂ ಕಾಣ್ಹಪಾದನು ತನ್ನ ಹಳೆಯ ಬಂಗಾಲಿ ಹಾಡುಗಳಲ್ಲಿ ತನ್ನನ್ನೇ ಒಬ್ಬ ಕಾಪಾಲಿಕನೆಂದು ಕರೆದುಕೊಂಡಿರುವನು.[165] ಕಾಪಾಲಿಕರು ಈಚಿನ ದಿನಗಳಲ್ಲಿ ಕೂಡ ಉತ್ತರ ಬಂಗಾಲ ಹಾಗೂ ಆಸಾಮದ ಕೆಲ ಭಾಗಗಳ ಕಾಡುಗಳಲ್ಲಿ ನೆಲೆಸಿರುವರೆಂಬ ವದಂತಿಗಳಿವೆ. ಈ ವದಂತಿಗಳೆಂದರೆ ಅಡಗೂಲಜ್ಜಿಯ ಕಥೆಗಳಿಗಿಂತ ಹೆಚ್ಚೇನೂ ಆಗಿರದಿದ್ದರೂ ಕೆಲವರು ವಾಮಾಚಾರಿಗಳು ಖಂಡಿತ ಆ ನಾಡಿನಲ್ಲಿ ನೆಲೆಸಿರುವರು.

ಈ ಪುರಾವೆ ತೀರ ವಿರಳ ಅಹುದಾದರೂ ಕಾಪಾಲಿಕರು ದಕ್ಷಿಣಭಾರತ ಇಲ್ಲವೆ ದಕ್ಷಿಣದ ತಪ್ಪಲಿನ ಮೇಲೆ ಹುಟ್ಟಿಬಂದಿರುವಂತೆ ಕಾಣುತ್ತದೆ. ಇದೇನೂ ಅಚ್ಚರಿ ಪಡಬೇಕಾದ ಸಂಗತಿಯಲ್ಲ. ಏಕೆಂದರೆ ಬಲು ಪುರಾತನ ಕಾಲದಿಂದಲೇ ವಿಂಧ್ಯ ಪರ್ವತದ ದಕ್ಷಿಣದ ಬದಿಯ ನಾಡು ಶೈವರ ಪ್ರಾಬಲ್ಯಕ್ಕೆ ಒಳಪಟ್ಟುದು. ತಾಂತ್ರಿಕ ಆರಾಧನೆಯನ್ನು ಕುರಿತಾದ ಎಲ್ಲಕ್ಕೂ ಮೊದಲ ಶಾಸನದ ಸಂದರ್ಭವು ರಾಜಸ್ಥಾನದ ಆಗ್ನೇಯಕ್ಕೆ, ಉಜ್ಜಯನಿಯ ಬಳಿಯಿರುವ ಗಂಗಧರ ಎಂಬಲ್ಲಿ ವಿಶ್ವವರ್ಮನ ಕ್ರಿ.ಶ.423-424 ಶಾಸನದಲ್ಲಿ

164. ಮುಂದೆ ನೋಡಿ, pp. 63-71.

165. ಮುಂದೆ ನೋಡಿ, pp. 69-71.

ಕಂಡುಬರುತ್ತದೆ.[166] ಅದಕ್ಕೂ ಕೆಳಗಿನ, ದಕ್ಷಿಣದ ತಮಿಳುನಾಡಿನ ಬುಡಕಟ್ಟು ಜನಾಂಗಗಳವರು ತಾಂತ್ರಿಕವೆನ್ನಬಹುದಾವ ಮತಾಚರಣೆಗಳಿಂದ ಮುರುಗನ್ ಎಂಬ ದೇವನನ್ನು ಪೂಜಿಸುತ್ತಿದ್ದರು.[167] ಮುಂದೆ ಇದೇ ಮುರುಗನ್ ಶಿವನ ಹೋರಾಟಗಾರ ಮಗ ಸ್ಕಂದನೆಂದು ಗುರುತಿಸಲ್ಪಡಹತ್ತಿದನು.

ಕಾಪಾಲಿಕ ಸಂಪ್ರದಾಯದ ಸ್ಥಾಪನೆಯ ಕಾಲವನ್ನು ಖಚಿತವಾಗಿ ನಿರ್ಧರಿಸಲು ಸಾಧ್ಯವಾಗಿಲ್ಲ. ಆದರೂ ಈ ಯತಿಗಳು 'ಮತ್ತ ವಿಲಾಸ'ದ ಲೇಖಕನಾದ ಮಹೇಂದ್ರನ ಕಾಲಕ್ಕಿಂತ ಒಂದು ಇಲ್ಲವೆ ಎರಡು ಶತಮಾನಗಳಿಗಿಂತ ಹೆಚ್ಚು ಹಿಂದಕ್ಕೆ ಅಸ್ತಿತ್ವದಲ್ಲಿರುವ ಸಾಧ್ಯತೆ ತೀರ ಕಡಿಮೆ. ಕ್ರಿಸ್ತ ಶಕದ ಐದರಿಂದ ಆರನೆಯ ಶತಮಾನದ ನಡುವಿನ ಕಾಲಾವಧಿಯು ಈ ಉಪಖಂಡದ ತಾಂತ್ರಿಕ ವಾಙ್ಮಯದ ಮೊದಲನೆಯ ಅಭಿವೃದ್ಧಿಯನ್ನು ಕೂಡ ನೋಂದಾಯಿಸುತ್ತದೆ. ಹದಿನಾಲ್ಕನೆಯ ಶತಮಾನದ ಹೊತ್ತಿಗೆ ಕಾಪಾಲಿಕರು ನಶಿಶಿ ಹೋಗಿರುವಂತೆ ಕಾಣುತ್ತದೆ. ಬಹುಮಟ್ಟಿಗೆ ಈ ಸಂಪ್ರದಾಯವು ಕಾನಫಟಾ ಹಾಗೂ ಅಘೋರಿಗಳಂತಹ ಬೇರೆ ಶೈವಸಂಪ್ರದಾಯಗಳಿಂದ ಶೋಷಿಸಲ್ಪಟ್ಟಿತೆಂದು ತೋರುತ್ತದೆ.[168]

'ಮತ್ತವಿಲಾಸ', 'ಮಾಲತಿ ಮಾಧವ', 'ಚಂಡ ಕೌಶಿಕ', ಹಾಗೂ 'ಪ್ರಬೋಧಚಂದ್ರೋದಯ' ಎಂಬೀ ನಾಲ್ಕು ನಾಟಕಗಳಲ್ಲಿ ಕಾಪಾಲಿಕ ಪಾತ್ರಗಳಿಗೆ ಮುಖ್ಯವಾದ ಕಾರ್ಯಭಾಗವಿದೆ. ಮಹೇಂದ್ರನ 'ಮತ್ತವಿಲಾಸ'ದ ಕಾಪಾಲಿಕ ಸತ್ಯಸೋಮನೆಂದರೆ ಒಂದು ಇಡಿಯ ಹಾಸ್ಯಪಾತ್ರವಾಗಿದ್ದು ಹಲವು ಮಗ್ಗಲುಗಳಿಂದ ಅದು ಪಾಷಂಡಿ ಕಾಪಾಲಿಕನಾದ ಉನ್ಮತ್ತಭೈರವನನ್ನು ನೆನಪಿಗೆ ತಂದುಕೊಡುತ್ತದೆ. ಬದಲು, 'ಮಾಲತಿ ಮಾಧವ' ಹಾಗೂ 'ಚಂಡ ಕೌಶಿಕ'ಗಳ ಕಾಪಾಲಿಕರು ಕ್ರಕಚ ಹಾಗೂ ಉಗ್ರಭೈರವರ ಹಾಗೆ ಮಹಾಪಾತಕಿಗಳಾದ ವೈರಿಗಳು ಅಲೆಮಾರಿಗಳಾಗಿದ್ದಾರೆ. 'ಪ್ರಬೋಧಚಂದ್ರೋದಯ'ದ ಕಾಪಾಲಿಕನಾದ ಸೋಮಸಿದ್ಧಾಂತನು ಹಾಸ್ಯ ಹಾಗೂ ಹೆದರಿಕೆಯನ್ನು ಹುಟ್ಟಿಸುವ ವಿಶೇಷ ಲಕ್ಷಣಗಳನ್ನು ತೋರ್ಪಡಿಸುತ್ತಾನೆ.

ನಾಟಕದ ತಾತ್ವಿಕ ಹಾಗೂ ಪ್ರಾಯೋಗಿಕ ಅಗತ್ಯಗಳೆರಡೂ ಈ ಸಂನ್ಯಾಸಿಗಳನ್ನು

---

166. ಸಂ. ಮತ್ತು ಅನು. ಜೆ. ಎಫ್. ಫ್ಲೀಟ್, CII, III, 72-79.

167. ನೋಡಿ ಎ. ಎಲ್. ಬಶಮ್. 'The wonder that was India', ಪು. 314. ಅಲ್ಲದೆ ನೋಡಿ ಜೆ. ಎಮ್. ಎನ್. ಪಿಳ್ಳೈ ಅವರ 'Two Thoudand Years of Tamil Literature', pp. 55-81 ದಲ್ಲಿ ಪ್ರಾಚೀನ ಕಾಲದ ತಮಿಳು ಕವನ, 'ತಿರುಮುರುಗನ್‌ರ್ರು ಪದ್ಯೆ'ದ ಅವರದೇ ಆದ ಅನುವಾದವನ್ನು.

168. ಅಘೋರಿಗಳಿಗಾಗಿ ನೋಡಿ, ಎಚ್. ಡಬ್ಲ್ಯು. ಬ್ಯಾರೊ, 'On Aghoris and Aghorapanthis'. 'Journal of the Anthropological Society of Bombay. III (1893), 197-251 ಅಲ್ಲದೆ ನೋಡಿ, ಡಬ್ಲ್ಯು. ಕ್ರೂಕ್, 'Aghori : ERE, I 210-13.

ಬಗೆಬಗೆಯಾಗಿ ನಿರ್ವಹಿಸುವಲ್ಲಿ ಕೆಲಮಟ್ಟಿಗೆ ತಮ್ಮ ಪ್ರಭಾವವನ್ನು ಬೀರಿವೆ. ಮೂಲಭೂತವಾದ ಎಂಟು ಬಗೆಯ ಭಾವನೆಗಳಿಗೆ (ಭಾವ) ಹೊಂದಿಕೊಂಡು ಇರುವಂತಹ ಎಂಟು ಪ್ರಾಥಮಿಕ ಭಾವರಸಗಳು ನಾಟಕದ ಪ್ರತಿಯೊಂದು ಅಂಕ ಹಾಗೂ ಪಾತ್ರವನ್ನು ವಿಶಿಷ್ಟವಾದ ಒಂದೊಂದು ರಸದಿಂದ ತುಂಬಿದ್ದನ್ನಾಗಿ ಮಾಡುವಂತೆ ಸಂಸ್ಕೃತದ ನಾಟಕಕಾರರನ್ನು ಪ್ರೋತ್ಸಾಹಿಸಿದವು.[169] ಈ ತಂತ್ರವು ಕುಶಲವಾದ ಕೈಗಳಿಗೆ ಸಿಕ್ಕಾಗ ಕಣ್ಣು ಕೋರೈಸುವಂತಹ ಧಾರ್ಮಿಕ ಆಚರಣೆಗಳ ಪ್ರಭಾವವನ್ನು ಉಂಟು ಮಾಡಿ ತೋರಿಸಬಹುದಿತ್ತೇನೋ ನಿಜ. ಆದರೆ ಇದು ಯಾವುದೇ ಬಗೆಯ ವಾಸ್ತವ ಅಭಿವ್ಯಕ್ತಿಗೆ ವಿರುದ್ಧವಾಗಿ ನಿಲ್ಲುತ್ತಿತ್ತು. ಹೀಗಾಗಿ ಬಹಳಷ್ಟು ನಾಟಕಗಳ ಕಥಾವಸ್ತುಗಳು ಜನಪ್ರಿಯ ಆಖ್ಯಾಯಿಕೆ ಹಾಗೂ ಮಿಥ್‌ಗಳ ಕರಾರುನಾಮೆ ಅಥವಾ ವಿವರಣೆಗಳಾಗಿವೆ. ಪಾತ್ರಗಳು ಆದರ್ಶ ಮಾದರಿ ಹಾಗೂ ಬಾವುಕತೆಗಳನ್ನು ಪ್ರತಿನಿಧಿಸುವವೇ ಹೊರತು ಜನರನ್ನಲ್ಲ. 'ಮಾಲತಿ ಮಾಧವ'ದಲ್ಲಿ ರಸಸಿದ್ಧಾಂತದ ಪ್ರಭಾವ ಎದ್ದು ಕಾಣುತ್ತದೆ. ನಾಟಕದಲ್ಲಿ ಕಾಪಾಲಿಕರು ಕಾಣಿಸಿಕೊಳ್ಳುವ ಅಂಕವು (ಭಯಂಕರತೆ, ಭಯ ಎಂಬ ಭಾವನೆಗಳನ್ನು ಆಧರಿಸಿ) ಹೆದರಿಕೆಯ ಭಾವನೆ ಹಾಗೂ (ಭೀಭತ್ಸ, ಅಸಹ್ಯ ಬಾವನೆಗಳನ್ನು ಆಧರಿಸಿ) ಜಿಗುಪ್ಸೆಯನ್ನು ಕೆರಳಿಸಲೆಂದಿದ್ದು ಆ ರೀತಿಯಾಗಿ ಈ ಭಾವನೆಗಳು ಮೈದಳೆದು ಬಂದಿವೆ.

'ಮತ್ತ ವಿಲಾಸ'ವು ಒಂದಂಕಿನ ಪ್ರಹಸನವಾಗಿದ್ದು ಸ್ವಾಭಾವಿಕವಾಗಿಯೇ ಹಾಸ್ಯರಸ ಅದರಲ್ಲಿ ಎಲ್ಲಕ್ಕೂ ಹೆಚ್ಚು ಪ್ರಭಾವಿಯಾಗಿದೆ. ಸತ್ಯಸೋಮ ಕುಡಿತದಿಂದ ಅಮಲೇರಿದ ಒಬ್ಬ ಕಪಾಲಿನ್ ಅಥವಾ ಕಾಪಾಲಿಕನಾಗಿದ್ದು ಅವನಷ್ಟೇ ಕುಡಿತದ ಅಮಲೇರಿದ ಅವನ ದಾಸಿಯಾದ ದೇವಸೋಮಾ ಇವರಿಬ್ಬರು ಒಬ್ಬ ಬೌದ್ಧ ಭಿಕ್ಷು, ಒಬ್ಬ ಪಾಶುಪತ ಯತಿ ಹಾಗೂ ಉನ್ಮತ್ತನಾಗಿ ಕೋಲಾಹಲವನ್ನು ಮಾಡುವ ಒಬ್ಬ ಹುಚ್ಚ ಮನುಷ್ಯನನ್ನು ಚಾಟೂಕ್ತಿ, ಚುರುಕು, ಜಾಣ್ಮೆ, ಕುಚೋದ್ಯಗಳಿಂದ ಕೂಡಿದ ಸಂಭಾಷಣೆಗಳಿಗೆ ತೊಡಗಿಸುತ್ತಾರೆ. ರಂಗವನ್ನು ಪ್ರವೇಶಿಸುವಾಗಲೆ ದೇವಸೋಮಾಳಿಗೆ ತನ್ನ ಕುಡಿತ ಹೆಚ್ಚಾಗಿದ್ದು ತಾನಿನ್ನು ಸರಿಯಾಗಿ ಎದ್ದು ನಿಲ್ಲಲ್ಲೂ ಕೂಡ ಸಾಧ್ಯವಿಲ್ಲೆಂಬುದು ತಿಳಿಯುತ್ತದೆ. ಹೀಗಾಗಿ ಅವಳು ಸತ್ಯಸೋಮನನ್ನು ತನ್ನ ನೆರವಿಗಾಗಿ ಕರೆಯುತ್ತಾಳೆ. ಅವನಿಗೂ ಅವಳಷ್ಟೇ ಅಮಲೇರಿದ್ದರಿಂದ ಅವಳನ್ನು ಎತ್ತಲು ಹೋಗಿ ತಾನೂ ಕೆಳಕ್ಕೆ ಕುಸಿಯುತ್ತಾನೆ. ತನ್ನ ಈ ಗೊಂದಲದಲ್ಲೆಲ್ಲ ಅವನು ದೇವಸೋಮಾಳ ಬದಲು ಅವಳನ್ನು ತಪ್ಪಿ ಸೋಮದೇವಾ ಎಂದು ಕರೆಯುತ್ತಾನೆ. ಇದರಿಂದಾಗಿ ಆತ ಇನ್ನೊಬ್ಬಳು ಉಪಪತ್ನಿಯನ್ನು ಹೊಂದಿದ ಟೀಕೆಗೆ ಗುರಿಯಾಗುತ್ತಾನೆ. ಅವನು ತನ್ನೀ ತಪ್ಪಿಗಾಗಿ ಅವಳಿಗೆ ಮದ್ಯದ ಪರಿಹಾರವನ್ನು ನೀಡುವುದಾಗಿ ಆಣೆಯ ಮೇಲೆ ಹೇಳುತ್ತಾನೆ. ಆದರೆ ಆಕೆ, 'ಅಯ್ಯಾ ಧನಿಗಳೇ! ನನಗಾಗಿ ನೀವು ನಿಮ್ಮ ಪವಿತ್ರವಾದ ವ್ರತವನ್ನು ಮುರಿದು ನಿಮ್ಮೀ ಪವಿತ್ರವಾದ ಜೀವನವನ್ನು (ತಪಸ್ಸು) ಹಾಳು ಮಾಡಿಕೊಳ್ಳಬೇಡಿ' ಎಂದೆನ್ನುತ್ತಾಳೆ.

169. ನೋಡಿ keith, pp. 314-26.

ಸಂತಸಭರದಿಂದ ಅವನು ಅವಳನ್ನು ಬರಸೆಳೆದು ಈ ರೀತಿ ಉದ್ಗರಿಸುತ್ತಾನೆ :

*ಧೃರ್ಣ ಧೃರ್ಣ !ಓಮ್ ನಮಃ ಶಿವಾಯ ! ಅಬ್ಬ !*
*ಹೋ, ಹಳೆಗಾಲದಂತೆ, ಚೆಂದದ, ಮೋಜಿನ, ಬಟ್ಟೆಯನುಡು,*
*ಮದಿರೆಯನು (ಸುರಾ)ಸೇವಿಸು , ನಿನ್ನ ದಾಸಿಯ ಕಣ್ಣಲಿ ಕಣ್ಣಿಟ್ಟು ನೋಡು:*
*ಮೋಕ್ಷದ ದಾರಿಯು ಹೀಗಿದೆಯೆಂದು ಕಂಡವನಾದ*
*ನಮ್ಮ ತ್ರಿಶೂಲದಾರಿ ದೇವನು ದೀರ್ಘಯುವಾಗಲಿ!*[170]

ಆಮೇಲೆ ಸತ್ಯಸೋಮ ಜೈನಮುನಿಯ ಮೇಲೆ ಚಮತ್ಕೃತಿಯ ಮಾತುಗಳಿಂದ ದಾಳಿಯಿಕ್ಕುತ್ತಾನೆ. ಅವರಿಬ್ಬರೂ ಜತೆಗೂಡಿ ಕಾಂಚಿಯಲ್ಲಿದ್ದ ಮದ್ಯದ ಅಂಗಡಿಯತ್ತ ಹೊರಡುತ್ತಾರೆ. ಅವನು ಈ ಅಂಗಡಿಯನ್ನು ಬಲಿಸ್ಥಾನದೊಡನೆ ಹೋಲಿಸುತ್ತಾನೆ. ಬಲಿಕೊಡುವ ಅಂಗಳದಲ್ಲಿ 'ಮದ್ಯ ಎಂದರೆ ಸೋಮ, ತೀಕ್ಷ್ಣವಾದ ಮದ್ಯವನ್ನು ಅಭ್ಯಾಸಬಲದಿಂದ ನಿಧಾನವಾಗಿ ಸೇವಿಸುವವರು ಎಂದರೆ ಯತಿಗಳು' ಅಲ್ಲದೆ 'ಮದ್ಯದ ಅಂಗಡಿಯನ್ನು ತೆರೆದವನೆಂದರೆ ಬಲಿಪೀಠದ ಒಡೆಯನು'ಎಂದು ಹೇಳುತ್ತಾನೆ. (ಉನ್ಮತ್ತ ಭೈರವನ ಅಜ್ಞನ ಛಾಯೆಗಳು!) ಈ ಕಾಪಾಲಿಕರಿಬ್ಬರಿಗೂ ದ್ರವರೂಪದ ಭಿಕ್ಷೆಯನ್ನು ಇಕ್ಕಲಾಗುತ್ತದೆ. ಆಗ ಸತ್ಯಸೋಮನಿಗೆ ತನ್ನ ಕಪಾಲಪಾತ್ರೆ ಕಳವಾದುದು ಗಮನಕ್ಕೆ ಬರುತ್ತದೆ. ಇದನ್ನು ಕುರಿತು ಅರೆನಿಮಿಷ ಯೋಚಿಸಿದ ಬಳಿಕ ಅವನು 'ಆವಶ್ಯಕತೆಯ ನಿಯಮ'ವನ್ನು (ಆಪದ್ಧರ್ಮ) ಪಾಲಿಸಲು ತೀರ್ಮಾನಿಸುತ್ತಾನೆ. ಅದರಂತೆ, ಅವನು ತನಗೆ ದೊರಕಲಿದ್ದ ಕೊಡುಗೆಯನ್ನು ಒಂದು ಆಕಳ ಕೋಡಿನಲ್ಲಿ ಸ್ವೀಕರಿಸುತ್ತಾನೆ. ಆದರೂ ಕಪಾಲಪಾತ್ರ ಕಳೆದು ಹೋದ ಕಾರಣ, ತಾನು (ಕಪಾಲಧರ) ಕಪಾಲಿನ್ ಪದವಿಯನ್ನು ಕಳೆದುಕೊಳ್ಳಬಹುದೆಂಬ ಆತಂಕಕ್ಕೆ ಒಳಗಾಗುತ್ತಾನೆ. ಇನ್ನಷ್ಟು ಕೆಡಕನ್ನಿಸಲು ಕಾರಣವೇನೆಂದರೆ ಆ ಕಪಾಲಪಾತ್ರೆಯಲ್ಲಿ ಕೆಲವು ಕರಿದ ಮಾಂಸದ ತುಣುಕುಗಳಿದ್ದವು ಬೇರೆ ! ಹೀಗಾಗಿ ಅವರಿಬ್ಬರೂ ಆ ಕಪಾಲ ಪಾತ್ರೆಯನ್ನು ಹುಡುಕಲು ಹೊರಡುತ್ತಾರೆ. ದಾರಿಯಲ್ಲಿ ಒಬ್ಬ ಬೌದ್ಧ ಭಿಕ್ಷು ಅವರಿಗೆ ಎದುರಾಗುತ್ತಾನೆ. ಅವನು ಅರಮನೆಯ ಮಠದತ್ತ ಹೊರಟಿರುತ್ತಾನೆ. ಅವನು ತನ್ನ ನಿಲುವಂಗಿಯಡಿ ಭಿಕ್ಷೆ ತುಂಬಿದ ಒಂದು ಪಾತ್ರೆಯನ್ನು ಅಡಗಿಸಿ ಹಿಡಿದುಕೊಂಡಿದ್ದಾನೆ. ಈ ಭಿಕ್ಕುವಿನ ವೇಳೆ ಕಳೆಯುವ ಒಂದು ಇಷ್ಟದ ಹವ್ಯಾಸವೆಂದರೆ 'ಹೆಣ್ಣುಗಳ ಸಹವಾಸ ಹಾಗೂ ತೀಕ್ಷ್ಣವಾದ ಮದ್ಯಸೇವನೆ'ಗಳಿಗೆ ಒಪ್ಪಿಗೆಯನ್ನು ನೀಡುವ ಬುದ್ಧನ 'ತಪ್ಪುಗಳಿಲ್ಲದ ಒಂದು ಮೂಲ ಪಠ್ಯ'ವನ್ನು ಶೋಧಿಸುವುದು. ಅಷ್ಟರಲ್ಲಿ ಸತ್ಯಸೋಮ ಹಾಗೂ ದೇವಸೋಮಾ ಇವರಿಗೆ ಭಿಕ್ಕು ಅಡಗಿಸಿಟ್ಟುಕೊಂಡ ಸಂಗತಿ ಗಮನಕ್ಕೆ ಬರುತ್ತದೆ. ತಮ್ಮ ಕಪಾಲ ಪಾತ್ರೆಯನ್ನು ಕದ್ದ ಅಪಾದನೆಯನ್ನು ಅವನ ಮೇಲೆ

170. ಅನು. ಬಾರ್ನೆಟ್ಟ್, BSOS, V, 703, ಸಂ. ಡಿ. ಜಿ. ಶಾಸ್ತ್ರಿ, vs. 7. 'ಧೃರ್ಣ' ಎಂಬುದು ಮಹೇಂದ್ರನಿಂದ ಸಂಶೋಧಿಸಲಾಗಿರಬಹುದಾದ, ಒಂದು ಬಗೆಯ ಧಾರ್ಮಿಕ ಉದ್ಗಾರ ಎನ್ನಿಸಿದೆ. ಮುಂದಿನ ಅನುವಾದವೆಲ್ಲ ಬಾರ್ನೆಟ್ಟರದು.

ಹೊರಿಸುತ್ತಾರೆ. ಬುದ್ಧ ಕಳ್ಳರ-ಕೈಪಿಡಿಯ ಲೇಖಕನಾದ ಖರಪಟನಿಗಿಂತಲೂ ಮೇಲಿನವನೆಂದು ಸತ್ಯಸೋಮನು ಆ ಭಿಕ್ಕುವನ್ನು ಹಂಗಿಸುತ್ತಾನೆ.

> ಬ್ರಾಹ್ಮಣರು ಕಣ್ಣುಮುಚ್ಚಿಕೊಂಡು ಕುಳಿತಾಗ ನಿಮ್ಮ ಬುದ್ಧನು ಮಹಾಭಾರತ ಹಾಗೂ ವೇದಾಂತಗಳಿಂದ ವಿಚಾರಗಳನ್ನು ಕದ್ದೊಯ್ದು ತನ್ನ ಕಣಜವನ್ನು ತುಂಬಿಕೊಂಡಿರುವನು.[171]

ದೇವಸೋಮಾ ತನ್ನ ಒಡೆಯನಿಗೆ ಮದ್ಯವನ್ನು ನೀಡುತ್ತಾಳೆ. ಅವನು ಆಕಳ ಕೋಡನ್ನು ಭಿಕ್ಷುವಿಗೆ ದಾಟಿಸುತ್ತಾನೆ. ಈತ ತಮ್ಮೊಂದಿಗೆ ತಪ್ಪಾಗಿ ನಡೆದುಕೊಂಡಿದ್ದರೂ ಕೂಡ 'ನಮ್ಮಸಿದ್ಧಾಂತವು ನಮ್ಮ ಸರಕನ್ನು ಹಂಚಿಕೊಳ್ಳುವುದಕ್ಕೆ ಹೆಚ್ಚಿನ ಒತ್ತು ಕೊಡುತ್ತದೆ' ಎಂಬುದಾಗಿ ಸತ್ಯಸೋಮ ಉದ್ಘೋಷಿಸುತ್ತಾನೆ. ಭಿಕ್ಕುವು ಮಾಂಸದ ತುಣುಕುಗಳನ್ನು ನೆಕ್ಕುತ್ತಿರುವುದು ಕಂಡುಬರುವಂತಿದ್ದರೂ ಯಾರಾದರೂ ಕಂಡಾರೆಂಬ ಭಯದಿಂದ ಅವನು ಆಕಳ ಕೋಡನ್ನು ನಿರಾಕರಿಸುತ್ತಾನೆ. ಅವರಲ್ಲಿ ವಾದಕ್ಕಿಟ್ಟುಕೊಳ್ಳುತ್ತದೆ. ಜಗಳ ಕಾವೇರುತ್ತದೆ. ಭಿಕ್ಕುವಿನ ತಲೆಯನ್ನೇ ತುಂಡರಿಸಿ ಅದರಿಂದ ಕಪಾಲ ಭಿಕ್ಷಾಪಾತ್ರೆಯನ್ನು ತಯಾರಿಸಿಕೊಳ್ಳುವುದಾಗಿ ಸತ್ಯಸೋಮನು ಅವನಿಗೆ ಬೆದರಿಕೆಯನ್ನು ಒಡ್ಡುತ್ತಾನೆ. ಇಬ್ಬರಲ್ಲೂ ಕೈ ಕೈ ಹತ್ತುತ್ತದೆ. ಅಷ್ಟರಲ್ಲಿ ಬಭ್ರುಕಲ್ಪನೆಂಬ ಒಬ್ಬ ಪಾಶುಪತ ಯತಿ ಅಲ್ಲಿಗೆ ಬರುತ್ತಾನೆ. ಮಧ್ಯಸ್ಥನಾಗಲು ಒಪ್ಪಿಕೊಂಡು ಅವರಿಬ್ಬರನ್ನೂ ತಡೆಯುತ್ತಾನೆ. ನಿಜ ಹೇಳಬೇಕೆಂದರೆ ಅವರ ಜಗಳವನ್ನು ಬಗೆಹರಿಸುವುದರಲ್ಲಿ ಅವನಿಗೆ ಅಂಥ ಆಸ್ಥೆಯೇನೂ ಇಲ್ಲ. ಅವನ ಹೆಚ್ಚಿನ ಆಸ್ಥೆಯೆಲ್ಲ ದೇವಸೋಮಾಳಲ್ಲಿ. ಕೊನೆಗೆ ಭಿಕ್ಕು ಒತ್ತಾಯಕ್ಕೆ ಮಣಿದು ತನ್ನ ನಿಲುವಂಗಿಯಡಿಯ ಪಾತ್ರೆಯನ್ನು ಹೊರ ತೆಗೆದು ತೋರಿಸಬೇಕಾಗುತ್ತದೆ. ಆದರೆ ಸತ್ಯಸೋಮ ಹಾಗೂ ದೇವಸೋಮಾರು ಅದು ತಮ್ಮದಲ್ಲ ಎಂದು ಒಪ್ಪಿಕೊಳ್ಳುವ ಬದಲು ಭಿಕ್ಕು ಅದರ ಆಕಾರ, ಬಣ್ಣಗಳನ್ನೆಲ್ಲ ಬದಲಾಯಿಸಿ ಬಿಟ್ಟಿರುವನೆಂದು ಹಠ ಸಾಧಿಸುತ್ತಾರೆ. ಬಭ್ರುಕಲ್ಪನು ನ್ಯಾಯಾಲಯಕ್ಕೆ ಹೋಗುವಂತೆ ಅವರಿಗೆ ಸಲಹೆ ನೀಡುತ್ತಾನೆ. ಅವರು ಹಾಗೆಯೇ ಮಾಡಬೇಕೆನ್ನುವಷ್ಟರಲ್ಲಿ ಹುಚ್ಚನೊಬ್ಬ ಕಪಾಲ ಪಾತ್ರೆಯೊಂದಿಗೆ ಅಲ್ಲಿಗೆ ಬರುತ್ತಾನೆ. ತಾನು ಆ ಕಪಾಲಪಾತ್ರೆಯನ್ನು 'ಒಬ್ಬ ಚಾಂಡಾಲನ ಗೌರವನ್ವಿತವಾದ ನಾಯಿಯಿಂದ' ಪಡೆದುಕೊಂಡುದಾಗಿ ಹೇಳುತ್ತಾನೆ. ಅವನದನ್ನು ಬಭ್ರುಕಲ್ಪನಿಗೆ ಕೊಡಮಾಡುತ್ತಾನೆ. ಆದರೆ ಬಭ್ರುಕಲ್ಪ ಅದನ್ನು ನಿರಾಕರಿಸುತ್ತಾನೆ. ಆದರೆ ಹುಚ್ಚನು ಅದರ ನಿಜವಾದ ಒಡೆಯನಾದ ಸತ್ಯಸೋಮನಿಗೆ ಮಾತ್ರ ಅದನ್ನು ಕೊಡಲೊಲ್ಲ. ಕೊನೆಗೆ ಭಿಕ್ಕು ಅವನನ್ನು 'ಹುಚ್ಚ'ಎಂದು ಕರೆಯುತ್ತಾನೆ. ಆಗ ಆ ಹುಚ್ಚನು 'ಈ ತಲೆ ಬುರುಡೆ ಪಾತ್ರೆಯನ್ನು ತೆಗೆದುಕೋ; ನನಗೆ ಆ ಹುಚ್ಚನನ್ನು ತೋರಿಸು'ಎಂದು ಸತ್ಯಸೋಮನಿಗೆ ಹೇಳುತ್ತಾನೆ. ತಸ್ಯಸೋಮನು ಕೃಪಾವಂತನಾಗಿ ಅವನಿಗೆ ತಪ್ಪು ದಿಕ್ಕಿನತ್ತ ತೋರಿಸುತ್ತಾನೆ. ಅವರೆಲ್ಲರೂ ಉತ್ತಮ ಸ್ನೇಹಿತರಾಗಿ ಅಲ್ಲಿಂದ

171. ಅನು. ಬಾರ್ನೆಟ್, BSOS, V, 708 (vs.12).

ಚೆದುರುತ್ತಾರೆ.

ಭವಭೂತಿಯ 'ಮಾಲತಿ ಮಾಧವ'ವು ಒಂದು ಪ್ರೇಮ ಕಥೆಯಾಗಿದ್ದುದರ ಫಲವಾಗಿ ಅದರಲ್ಲಿ ಶೃಂಗಾರರಸ ಮೇಲುಗೈ ಹೊಂದಿದೆ. ಈ ಲೇಖಕನು ನಾಟ್ಯಮಯತೆಯ ವೈರುಧ್ಯ ಹಾಗೂ ತನ್ನ ಲಲಿತ ಕಲಾಭಿರುಚಿಯನ್ನು ಮೆರೆಯಲೆಂದು ಹಲವು ಅಂಕಗಳನ್ನು ಬಗೆ ಬಗೆಯ ರಸಗಳಿಂದ ತುಂಬುತ್ತಾನೆ.[172] ಈ ನಾಟಕದ ಬಹುಮಟ್ಟಿಗಿನ ಕಥಾವಸ್ತುವನ್ನು 'ಕಥಾಸರಿತ್ಸಾಗರ'ದ 'ಮದಿರಾವತಿ'ಯ ಕಥೆಯಿಂದ ಎರವಲು ಪಡೆದಂತಿದೆ.[173]

ಈ ನಾಟಕದ ನಾಯಕ, ನಾಯಕಿಯಾದ ಮಾಧವ ಹಾಗೂ ಮಾಲತಿ ಇವರು ಅನುಕ್ರಮವಾಗಿ ವಿದರ್ಭ ಹಾಗೂ ಪದ್ಮಾವತಿನಗರಗಳ ರಾಜ ಹಾಗೂ ಮಂತ್ರಿಯ ಮಕ್ಕಳು. ಪಾಲಕರು ಇವರಿಬ್ಬರ ಮದುವೆ ನಡೆಯುವುದನ್ನು ಕಾಣಲಿಚ್ಛಿಸುತ್ತಾರೆ. ಆದರೆ ಪದ್ಮಾವತಿಯ ರಾಜನ ಹತ್ತಿರದ ಸಂಗಡಿಗನೊಬ್ಬ ಚೆಲುವೆಯಾದ ಈ ನಾಯಕಿಗಾಗಿ ಆಸೆ ಪಡುತ್ತಾನೆ. ಕಾಮಂದಕಿ ಎನ್ನುವ ಬೌದ್ಧ ಭಿಕ್ಷುಣಿಯು ಇಬ್ಬರೂ ಮಂತ್ರಿಗಳ ಹಳೆಗಾಲದ ಗೆಳತಿ. ಅವಳು ಮಾಲತಿ, ಮಾಧವರು ಗುಟ್ಟಾಗಿ ಕಾಣಲು ಪ್ರೇಮಿಸಲು ಹಾಗೂ ಗುಟ್ಟಾಗಿ ಮದುವೆಯಾಗಲು ಅವರಿಗೆ ಅನುವು ಮಾಡಿಕೊಡುತ್ತಾಳೆ. ಅಷ್ಟರಲ್ಲಿ ಅರಸನು ಮಾಲತಿಯನ್ನು ತನ್ನ ಜೊತೆಯವನೊಂದಿಗೆ ಮದುವೆ ಮಾಡಿಕೊಳ್ಳಲೆಂದು ಅರಮನೆಗೆ ಕರೆಯಿಸಿಕೊಳ್ಳುತ್ತಾನೆ. ಮಾಧವ ಹತಾಶನಾಗಿ ಮಸಣದಲ್ಲಿ ಹೆಣಗಳನ್ನು ತಿನ್ನುವ ಪಿಶಾಚಿಗಳಿಂದ ವರಗಳನ್ನು ಪಡೆಯಲೆಂದು ಅವುಗಳಿಗೆ ಮಾನವನ ಮಾಂಸವನ್ನು ತೆರಲು ತೀರ್ಮಾನಿಸುತ್ತಾನೆ. ಐದನೆಯ ಅಂಕ ಶುರುವಾಗುವುದು ಕಾಪಾಲಿಕ ಅಘೋರಘಂಟನ ಶಿಷ್ಯಳಾದ ಕಪಾಲಕುಂಡಲಾಳ ಗಗನಮಾರ್ಗದ ಪ್ರವೇಶದಿಂದ. ಅವಳು ಶಕ್ತಿಯ ದೇವನಾದ ಶಿವನಿಗೆ ಗೌರವವನ್ನು ಅರ್ಪಿಸುತ್ತಾಳೆ. ತನ್ನ ಹಾರಾಟವನ್ನು ಕುರಿತು ಹೀಗೆ ಬಣ್ಣಿಸುತ್ತಾಳೆ :

> ಗಗನದಲ್ಲಿ ಹಾರುವಾಗ ನನ್ನ ವೇಗವು ನನ್ನಲ್ಲಿ ಮಹತ್ತರವಾದ ಹಾಗೂ ಮೋಹಕವಾದ ಕ್ಷೋಭೆಯ ಸಾಮರ್ಥ್ಯವನ್ನು ಉಂಟು ಮಾಡುತ್ತದೆ. ಕೀರಲು ನಾದದ ಕಿರುಗಂಟೆಗಳು ಹಿಂದಕ್ಕೆ, ಮುಂದಕ್ಕೆ ಓಲಾಡುವ ನನ್ನ ಕೊರಳ ಕಪಾಲ ಹಾರದೊಡನೆ ತಾಕಲಾಡುವಾಗಲೆಲ್ಲ ಕರ್ಕಶವಾದ ಸದ್ದು ಹುಟ್ಟಿಕೊಳ್ಳುತ್ತದೆ. ಜಡೆಗಟ್ಟಿದ ನನ್ನ ತಲೆಗೂದಲುಗಳನ್ನು ಬಿಗಿಯಾಗಿ ಕಟ್ಟಿದ್ದರೂ ಕೂಡ ಅವು ಎಲ್ಲ ದಿಕ್ಕುಗಳಲ್ಲೂ ಚೆದರಿ ಹಾರಾಡುತ್ತಿರುತ್ತವೆ. ನನ್ನ ಖಟ್ವಾಂಗದ ದೊಣ್ಣೆಯ ಮೇಲ್ತುದಿಯ ಗಂಟೆ ಒಂದೇ ಸವನೆ

---

172. ದೇವಧರ ಮತ್ತು ಸುರು ಅವರ ಈ ನಾಟಕದ ಆವೃತ್ತಿಯ ಮುನ್ನುಡಿಯನ್ನು ನೋಡಿ. pp. 35-36.

173. ನೋಡಿ ಅದೇ. pp. 14-20.

> ಸುತ್ತಲೂ ಸುತ್ತುತ್ತಲಿರುವ ಕಾರಣ ಅದರ ಸದ್ದು ಕಿವಿಗಳಿಗೆ ಹಿಂಸೆಯನ್ನೀವ ಕೂಗಾಟ-ಅರಚಾಟಗಳಂತೆ ಕೇಳಿಬರುತ್ತಿರುತ್ತದೆ. ಬರಿದಾದ ತಲೆ ಬುರುಡೆಗಳಲ್ಲಿ ಹಾಯ್ದು ಹೊರಬರುವ ಗಾಳಿಯ ಸಿಳ್ಳು ಆ ಕಿರುಗಂಟೆಗಳಲ್ಲಿ ಸುಮ್ಮನೆ ತಡೆಯಿಲ್ಲದ ಝಣತ್ಕಾರವನ್ನು ಉಂಟುಮಾಡುವುದಲ್ಲದೆ ನನ್ನ ಪದಕಗಳೆಲ್ಲ ಮೈಸುತ್ತು ಪಟಪಟನೆ ಬಡಿದುಕೊಳ್ಳುತ್ತವೆ.[174]

ಸುತ್ತಲೆಲ್ಲ ಕಣ್ಣು ಹಾಯಿಸುತ್ತ ಅವಳು ಹೀಗೆನ್ನುತ್ತಾಳೆ:

> ಇದು ಕರಾಲಾನ ದೇವಾಲಯ. ಚಿತಾಗ್ನಿಯಿಂದ ಮೇಲೇರಿ ಬರುವ ಹೊಗೆಯಿಂದ ಹೊರಸೂಸುವ ಬೇವಿನೆಣ್ಣೆ ಬಳಿದು ಕರಿದ ಬೆಳ್ಳುಳ್ಳಿಗಳಂತಹ ವಾಸನೆಯಿಂದಾಗಿ ನನ್ನೆದುರಲ್ಲೇ ಹತ್ತಿರದಲ್ಲಿ ಒಂದು ವಿಶಾಲವಾದ ಸ್ಮಶಾನದ ಆವರಣವಿದೆ ಎಂಬುದನ್ನು ಖಂಡಿತ ಹೇಳಬಲ್ಲೆ. ನನ್ನ ಗುರುಗಳಾದ ಅಘೋರ ಘಂಟರು ತಮ್ಮ ಮಂತ್ರಸಾಧನೆಯನ್ನು ಪೂರೈಸಿದ್ದು, ಎಲ್ಲ ಬಗೆಯ ಪೂಜಾ ಸಾಮಗ್ರಿಗಳೊಂದಿಗೆ ಇಂದು ಇಲ್ಲಿಗೆ ಬರುವಂತೆ ನನಗೆ ಆಜ್ಞಾಪಿಸಿದ್ದಾರೆ.[175]

ಕರಾಲಾನಿಗೆ ಹಿಂದಕ್ಕೆ ಮಾತು ಕೊಟ್ಟಂತೆ ಇಂದು ತಾನು ಇದೇ ನಗರದಲ್ಲಿ ವಾಸಿಸುವ ಒಂದು 'ಸ್ತ್ರೀರತ್ನ'ವನ್ನು ಅವನಿಗೆ ಬಲಿಕೊಡಲೇಬೇಕಾಗಿದೆ ಎಂದು ಅಘೋರಘಂಟನು ಕಪಾಲಕುಂಡಲಾಳಿಗೆ ಹೇಳಿದ್ದನಂತೆ. ಹತಾಶನಾಗಿ ಅಲೆಯುವ ಮಾಧವ ಅವಳಿಗೆ ಅಲ್ಲಿ ಕಾಣುತ್ತಾನೆ. ಅವನು ತನ್ನ ಎಡಗೈಯಲ್ಲಿ 'ಕತ್ತರಿಸಿ ತೆಗೆದ, ಹೆಪ್ಪುಗಟ್ಟಿದ ನೆತ್ತರು ಸುರಿವ, ಮಾನವ ಮಾಂಸದ, ಮಿರುಗುಡುವ ಒಂದು ತುಣುಕನ್ನು ಹಿಡಿದುಕೊಂಡಿದ್ದಾನೆ.' ಕಾಪಾಲಿಕಳು ಅಲ್ಲಿಂದ ನಿಷ್ಕ್ರಮಿಸುತ್ತಲೇ ಮಾಧವ ಪ್ರವೇಶಿಸುತಾನೆ. ಮಾಲತಿಯ ವಿರಹದಿಂದ ತನಗಾದ ದುಃಖವನ್ನು ತೋಡಿಕೊಳ್ಳುತ್ತಾನೆ. ಸ್ಥಾನಿಕರಾದ ಪೈಶಾಚಿಕರಿಗೆ ಆ ಮಾಂಸವನ್ನು ಮಾರಲು ಹವಣಿಸುತ್ತಾನೆ. ಅವನು ಆ ಜನಗಳ ಜಿಗುಪ್ಸೆ ಹುಟ್ಟಿಸುವ ನಡತೆಗಳನ್ನು, ಚಟುವಟಿಕೆಗಳನ್ನು ಬಣ್ಣಿಸುತ್ತಾನೆ. ಇವೆಲ್ಲವು ಭೀಭತ್ಸ ರಸವನ್ನು ಹುಟ್ಟಿಸಲು ಭವಭೂತಿಗೆ ನೆರವಾಗುವ ಸಾಧನಗಳಾಗಿವೆ. ಮಾಧವ ಕರಾಲಾನ ದೇವಾಲಯದ ಬಳಿ ಹಾಯ್ದು ಹೋಗುವಾಗ ಅವನಿಗೆ ಅಳುವಿನ ಧ್ವನಿ ಕೇಳಿಬರುತ್ತದೆ. ಏನೆಂದು ಕಂಡುಕೊಳ್ಳಲು ಹತ್ತಿರಕ್ಕೆ ಹೋಗುತ್ತಾನೆ.

ತರುವಾಯದಲ್ಲಿ ಇತ್ತ, ಅಘೋರಘಂಟ ಹಾಗೂ ಕಪಾಲಕುಂಡಲಾ ಇವರು ಮಾಲತಿಯೊಂದಿಗೆ ಪ್ರವೇಶಿಸುತ್ತಾರೆ. ಅವಳನ್ನು ಬಲಿ ಪಶುವಿನಂತೆ ಸಿಂಗರಿಸಲಾಗಿದೆ.

---

174. ಅಂಕ, V, vss. 3-4 (ನನ್ನ ಅನುವಾದ).

175. ಅಂಕ V. vs. 4 ರ ತರುವಾಯ (ನನ್ನ ಅನುವಾದ).

ಕಾಪಾಲಿಕರೆಲ್ಲ ಚಾಮುಂಡಾದೇವಿಗೆ ಭಕ್ತಿಯಿಂದ ತಲೆಬಾಗಿ ರಂಗದ ಮೇಲೆಲ್ಲ ಕುಣಿಯುತ್ತ ಅವಳ ಭಯಂಕರವಾದ ಕುಣಿತವನ್ನು ಬಣ್ಣಿಸುತ್ತಾರೆ. ಮಾಲತಿಯ ಕೊನೆಯ ಆಸೆಯೆಂದರೆ ಮಾಧವನು ಸಾವಿನಲ್ಲೂ ತನ್ನನ್ನು ನೆನೆಯಬೇಕೆಂಬುದು. ಅವಳೀ ಆಸೆ ಕ್ರೂರಿಯಾದ ಕಪಾಲಕುಂಡಲಾ ಇವಳಲ್ಲಿ ಕೂಡ ಮರುಕವನ್ನು ಹುಟ್ಟಿಸುತ್ತದೆ. ಆದರೆ ಅಘೋರಘಂಟಾ ಮಾತ್ರ ನಿರ್ದಯನಾಗಿಯೇ ನಿಲ್ಲುತ್ತಾನೆ. ಅವನು ಕೈಯಲ್ಲಿ ತನ್ನ ಆಯುಧವನ್ನು ಹಿಡಿದುಕೊಂಡು ತಾನು ಅರ್ಪಿಸಲಿರುವ ಬಲಿಯನ್ನು ಸ್ವೀಕರಿಸುವಂತೆ ಚಾಮುಂಡಾಳಿಗೆ ಆವಾಹನೆಯನ್ನು ಮಾಡುತ್ತಾನೆ. ಕೊನೆಯ ಕ್ಷಣಕ್ಕೆ ಮಾಧವನು ಮಾಲತಿಯನ್ನು ಉಳಿಸಲೆಂದು ಮುನ್ನುಗ್ಗುತ್ತಾನೆ. ಗಂಡಸರಿಬ್ಬರೂ ಕಾಳಗಕ್ಕೆ ಅಣಿಯಾಗುತ್ತಾರೆ. ಅಷ್ಟರಲ್ಲಿ, ಮಾಲತಿಯನ್ನು ಅರಸಲು ಬಂದ ಸೈನಿಕರ ಸದ್ದುಗಳು ಹತ್ತಿರದಿಂದ ಕೇಳಿಬರತೊಡಗುತ್ತವೆ. ಇಲ್ಲಿಗೆ, 'ಸ್ಮಶಾನ ಭೂಮಿಯ ಬಣ್ಣನೆ' ಎಂಬ ಐದನೆಯ ಅಂಕ ಮುಕ್ತಾಯಗೊಳ್ಳುತ್ತದೆ.

ಆರನೆಯ ಅಂಕದಲ್ಲಿ ಕಪಾಲಕಂಡಲಾ ಇವಳು, ಮಾಧವ ತನ್ನ ಗುರುವನ್ನು ಹೇಗೆ ಕೊಂದುಬಿಟ್ಟನು, ಎಂಬುದನ್ನು ಹೇಳಿ ತಾನಿನ್ನು ಅವನ ಸೇಡು ತೀರಿಸಿಕೊಳ್ಳುವುದಾಗಿ ಆಣೆ ಮಾಡುತ್ತಾಳೆ. ಬಲು ಕಾಲದ ತರುವಾಯ ಮಾಲತಿ, ಮಾಧವರು ಇನ್ನೇನು ತಾವಿಬ್ಬರೂ ಗುಟ್ಟಾಗಿ ಮದುವೆಯಾಗಬೇಕು, ಎನ್ನುವಷ್ಟರಲ್ಲಿಯೇ ಕಪಾಲಕುಂಡಲಾ ಈ ಅವಕಾಶವನ್ನು ಪಡೆದುಕೊಳ್ಳುತ್ತಾಳೆ. ಅವಳು ನಾಯಕಿಯನ್ನು ಅಪಹರಿಸಿಕೊಂಡು ಶ್ರೀಪರ್ವತಕ್ಕೆ ಹಾರಿಬಿಡುತ್ತಾಳೆ. ಯೋಗಿನಿಯಾದ ಸೌದಾಮಿನಿಯ ಪ್ರವೇಶದೊಂದಿಗೆ ಒಂಬತ್ತನೆಯ ಅಂಕ ಶುರುವಾಗುತ್ತದೆ. ಇವಳೆಂದರೆ ತಲೆತಿರುಕ ಕಾಮಂಡಕಿಯ ಹಳೆಯ ಶಿಷ್ಯಳು. ಅದೇ ತಾನೆ ಶ್ರೀಪರ್ವತದಿಂದ ಹಾರಿ ಬಂದ ಸೌದಾಮಿನಿ ಹತಾಶನಾದ ಮಾಧವನನ್ನು ಕಾಣುತ್ತಾಳೆ. ಅಲ್ಲದೆ ತಾನು ಗಗನ ಮಾರ್ಗದಲ್ಲಿರುವಾಗಲೆ ಕಪಾಲಕುಂಡಲಾಳನ್ನು ತಡೆಗಟ್ಟಿ ಅವನ ಅಮೌಲ್ಯಳಾದ ಮಾಧವಿಯನ್ನು ತಾನು ಕಾಪಾಡಿರುವುದಾಗಿ ಹೇಳುತ್ತಾಳೆ. ಕೊನೆಯಲ್ಲಿ ಪ್ರೇಮಿಗಳಿಬ್ಬರೂ ಒಂದು ಗೂಡುತ್ತಾರೆ. ಹೀಗೆ ಎಲ್ಲವೂ ಸುಖದಲ್ಲಿ ಕೊನೆಗೊಳ್ಳುತ್ತದೆ.

ಕ್ಷೇಮೀಶ್ವರನ 'ಚಂಡ ಕೌಶಿಕ'ವು (ಕೆರಳಿದ ಕೌಶಿಕ) ಹರಿಶ್ಚಂದ್ರ ರಾಜ ಹಾಗೂ ಸಿಡುಕಿನ ಸ್ವಭಾವದ ಋಷಿ ವಿಶ್ವಾಮಿತ್ರ ಕೌಶಿಕನನ್ನು ಕುರಿತಾದ ಪುರಾಣದ ಆಖ್ಯಾಯಿಕೆಯ ಒಂದು ಅಳವಡಿಕೆ.[176] ಒಂದು ದಿನ ಅರಸನು ಆಕಸ್ಮಾತ್ತಾಗಿ ಆ ಋಷಿಯ ಧ್ಯಾನಾವಸ್ಥೆಗೆ ಭಂಗತರುತ್ತಾನೆ. ಅದಕ್ಕೆ ಪರಿಹಾರವೆಂದು ಅವನು ಋಷಿಗೆ ತನ್ನ ಇಡಿಯ ರಾಜ್ಯವನ್ನು ಕೊಡಮಾಡುತ್ತಾನೆ. ಆದರೆ ಋಷಿಗೆ ತೃಪ್ತಿಯಾಗಲಿಲ್ಲ. ಅವನು ಇನ್ನೊಂದು ದಕ್ಷಿಣೆಗಾಗಿ ಕೇಳುತ್ತಾನೆ. ಅದನ್ನು ಗಳಿಸಲೆಂದು ಅರಸನು ವಾರಣಾಸಿಗೆ ಹೋಗಬೇಕಾಗುತ್ತದೆ. ಅಲ್ಲಿ ಅವನು ತನ್ನನ್ನು ದಸ್ಯುವಾಗಿ ಮಾರಿಕೊಳ್ಳಲು ತೀರ್ಮಾನಿಸುತ್ತಾನೆ. ಅವನ ಸದ್ಗುಣೆಯಾದ

176. ಸಂ. ಮತ್ತು ಅನು. ಎಸ್. ಡಿ. ದಾಸಗುಪ್ತಾ.

ಮಡದಿ ಅಲ್ಲಿಗೂ ಅವನನ್ನು ಹಿಂಬಾಲಿಸಿರುತ್ತಾಳೆ. ಈಗ ಅವಳು ಮುಂದಕ್ಕೆ ಬಂದು ಅವನಿಗಿಂತ ಮೊದಲೇ ತನ್ನನ್ನು ಒಬ್ಬ ಬ್ರಾಹ್ಮಣ ಶಿಕ್ಷಕನಿಗೆ ಅವನ ಮನೆಯ ದಾಸಿಯಾಗಿ ಮಾರಿಕೊಳ್ಳುತ್ತಾಳೆ. ಅವಳ ಈ ತ್ಯಾಗದಿಂದಲೂ ಕೌಶಿಕನಿಗೆ ಸಮಾಧಾನವಾಗಲಿಲ್ಲ. ಹತಾಶನಾದ ರಾಜ ತನ್ನನ್ನು ಒಬ್ಬ ಚಾಂಡಾಲನಿಗೆ ಮಾರಿಕೊಳ್ಳುವೆನೆಂದು ಸಾರಿದನು. ಆಗ ಧರ್ಮದೇವನು ಚಾಂಡಾಲ ರೂಪವನ್ನು ಧರಿಸಿ ಅವತರಿಸಿ ಬಂದು ರಾಜನನ್ನು ಒಬ್ಬ ಕಾವಲುಗಾರನಾಗಿ ಕೊಂಡುಕೊಳ್ಳುತ್ತಾನೆ.

ಈ ನಾಟಕದ ನಾಲ್ಕನೆಯ ಅಂಕವು 'ಮಾಲತಿ ಮಾಧವ' ಐದನೆಯ ಅಂಕದಂತೆ ಸ್ಮಶಾನಭೂಮಿಯ ಮೇಲೆ ಜರುಗುತ್ತದೆ. ಅಲ್ಲಿ ಹರಿಶ್ಚಂದ್ರನ ಕೆಲಸವೆಂದರೆ ಹೆಣಗಳ ಮೇಲಿನ ಹೊದಿಕೆಗಳನ್ನು ತೆಗೆದು ತನ್ನ ಒಡೆಯನಿಗೆ ಒಪ್ಪಿಸುವುದು. ಈ ಸಲ ಧರ್ಮನು ಕಾಪಾಲಿಕನ ಮಾರುವೇಷದಲ್ಲಿ ಬಂದು ಹೀಗೆನ್ನುತ್ತಾನೆ :

> ಮಹನೀಯರೇ, ನಾನಿಲ್ಲಿ -
>
> ಬೇಡಿಕೊಳ್ಳದೆ ದೊರಕುವ ಭಿಕ್ಷೆಯಿಂದ ಬದುಕುವವನು ಹಾಗೂ ಪಂಚೇಂದ್ರಿಯಗಳನ್ನು ಹಿಡಿತದಲ್ಲಿರಿಸಿಕೊಂಡು ಶಾಂತನಾದ ನಾನು ಮರುಜನ್ಮದ ಅಸ್ತಿತ್ವವುಳ್ಳ ಹಿರಿದಾದ ಸ್ಮಶಾನ ಭೂಮಿಯನ್ನು (ಸಂಸಾರ) ದಾಟಿದ್ದು ಈಗ, ಜಿಗುಪ್ಸೆಯನ್ನು ಹುಟ್ಟಿಸುವ ಈ ಸ್ಮಶಾನಭೂಮಿಯ ಮೇಲೆ ಅಲೆಯುತ್ತಿದ್ದೇನೆ.
>
> (ತನ್ನಲ್ಲೇ ಆಲೋಚಿಸಿ) ರುದ್ರನು ಮಹಾವ್ರತವನ್ನು ಆಚರಿಸಿದುದು ಸೂಕ್ತವಾಗಿಯೇ ಇದೆ. ಮನಬಂದಂತೆ ಅಲೆದಾಟದ ಹಿರಿಮೆಯು ಖಂಡಿತ ಎಲ್ಲಕ್ಕೂ ಶ್ರೇಷ್ಠ. ಆದರೆ -
>
> ಕೇವಲ ಭಿಕ್ಷೆ, ತಪಸ್ಸು ಹಾಗೂ ಧರ್ಮಾಚರಣೆಗಳಿಗೆ ತನ್ನನ್ನು ಮೀಸಲಾಗಿರಿಸಿಕೊಂಡ ಕಾರಣ - ಪಡೆಯಲು ಇದೆಲ್ಲ ಬಲು ಹಗುರ. ಆದರೆ ಕೇವಲ ತನ್ನ ಮೇಲೆ (ಕೇಂದ್ರಿತಗೊಳಿಸಲಾದ ಅವಸ್ಥೆಯನ್ನು) ಹೊಂದುವುದು ಬಲು ಕಷ್ಟ.[177]

ರಾಜನು ಆ ಯತಿಯನ್ನು ಹೀಗೆಂದು ಅಭಿವಂದಿಸಿದನು : ' ತನ್ನ ಬಾಳಿಡಿ ಪಾವಿತ್ರ್ಯವನ್ನು ಕಾಪಾಡಿಕೊಳ್ಳುವ (ನೈಷ್ಠಿಕ) ವ್ರತವನ್ನು ಸ್ವೀಕರಿಸಿ ಮಹಾವ್ರತವನ್ನು ಆಚರಿಸುತ್ತಿರುವನಲ್ಲಿಗೆ ಸ್ವಾಗತ. ಈ ಕಾಪಾಲಿಕನ ಬಳಿ ಹಲವಾರು ಮಾಂತ್ರಿಕ

---

177. ಅಂಕ IV, vss. 26-27 (ನನ್ನ ಅನುವಾದ).

ಸಾಮರ್ಥ್ಯಗಳಿದ್ದವು : ವೇತಾಳ ಹಾಗೂ ಸಿಡಿಲಿನ (ವಜ್ರ) ಮೇಲೆ ಹಿಡಿತ ; ಮಾಟದ ಮಾತ್ರೆ, ಲೇಪನ, ಹಾಗೂ ಅಂಜನಗಳನ್ನು ಹೊಂದಿರುವುದು, ದೈತ್ಯ ಹೆಣ್ಣುಗಳ ಮೇಲೆ ಪ್ರಭುತ್ವ, ಹಾಗೂ ಜೀವನವನ್ನು ಚಿರಂಜೀವಿ ಮಾಡುವ ಔಷಧ (ರಸಾಯನ) ಮತ್ತು ಕೀಳು ಲೋಹಗಳನ್ನು ಚಿನ್ನವಾಗಿ ಪರಿವರ್ತಿಸುವ ರಸವಿದ್ಯೆ (ಧಾತುವಿದ್ಯೆ).[178] ಅವನು ಅವುಗಳನ್ನು ವಿಘ್ನಗಳಿಂದ ಕಾಪಾಡುವಂತೆ ರಾಜನನ್ನು ಕೋರಿದನು. ತನ್ನ ಒಡೆಯನಾದ ಚಾಂಡಾಲನ ಉದ್ದೇಶಗಳಿಗೆ ಧಕ್ಕೆ ತಗಲದಿರುವವರೆಗೆ ಮಾತ್ರ ತಾನು ಹಾಗೆ ಮಾಡುವೆನೆಂದು ರಾಜನು ಒಪ್ಪಿಕೊಂಡನು. ರಾಜನು ವಿಘ್ನಗಳನ್ನು ಪರಿಹರಿಸುತ್ತಿರುವಾಗ ಕಾಪಾಲಿಕನು ಹತ್ತಿರದಲ್ಲಿಯೇ ಇದ್ದಿರಬಹುದಾದ ಸಿದ್ಧರಸದ ಮಹಾಸಿದ್ಧಿಯನ್ನು ಶೋಧಿಸಲೆಂದು ಹೊರಟನು. ಮುಂದೆ (ಹೆಣ್ಣು) ವಿದ್ಯೆಗಳು ಪ್ರತ್ಯಕ್ಷಗೊಂಡು ತಮ್ಮ ಸೇವೆಗಳನ್ನು ಸಲ್ಲಿಸುವೆವೆಂದು ರಾಜನಿಗೆ ಹೇಳಿದವು. ಆದರೆ ಅವನು ತನ್ನ ಬದಲು ವಿಶ್ವಾಮಿತ್ರ ಕೌಶಿಕನಿಗೆ ಸೇವೆ ಸಲ್ಲಿಸುವಂತೆ ಆ ಹೆಣ್ಣು ವಿದ್ಯೆಗಳಿಗೆ ಹೇಳಿದನು. ಅಷ್ಟರಲ್ಲಿ, ಕಾಪಾಲಿಕನು ಮಾಂತ್ರಿಕ ಸಂಪತ್ತೆನ್ನಿಸಿದ ಸಿದ್ಧರಸವನ್ನು ಹೆಗಲ ಮೇಲೆ ಹೊತ್ತುಕೊಂಡಿರುವ ವೇತಾಳನೊಂದಿಗೆ ಹಿಂತಿರುಗಿ ಬಂದನು. ಈ ಸಂಪತ್ತು ಅಮರತ್ವವನ್ನು ದಯಪಾಲಿಸಲು ಸಾಧ್ಯವೆಂದು ಕಾಪಾಲಿಕನು ಸಾಧಿಸಿದನು :

> ಇದನ್ನು ಬಳಸಿಕೊಳ್ಳುವ ಮೂಲಕ ಸಿದ್ಧರು ಸಾವನ್ನು ದೂರಕ್ಕೆ ಅಟ್ಟಿ, ತತ್‌ಕ್ಷಣ ಅಮರ ಲೋಕದ ದಾರಿಯನ್ನು ಪಡೆದು, ಕಲ್ಪದ್ರುಮವು ಹೂಗೊಂಚಲುಗಳನ್ನು ಬಿಡುವಂತಹ ಮೇರುಪರ್ವತದ ಶಿಖರಗಳಲ್ಲಿ ತಮ್ಮಿಷ್ಟಕ್ಕೆ ಸಂತಸ ಪಡುತ್ತಾರೆ.[179]

ಅವನು ರಾಜನಿಗೆ ಅದನ್ನು ಕೊಡಮಾಡಿದನು. ಆದರೆ ಅವನು ತನಗಾಗಿ ಅದನ್ನು ಸ್ವೀಕರಿಸಲು ಒಪ್ಪಲಿಲ್ಲ. ಅದು ಅವನ ದಾಸ್ಯದ ಕರಾರುಗಳಿಗೆ ಸರಿಹೊಂದುವಂತಿರಲಿಲ್ಲ. ಅವನು ಆ ಸಂಪತ್ತನ್ನು ಚಾಂಡಾಲನಿಗೆ ಕೊಡುವಂತೆ ಕಾಪಾಲಿಕನನ್ನು ಕೇಳಿಕೊಂಡನು.

ಹರಿಶ್ಚಂದ್ರನ ಶೀಲವನ್ನು ಪರೀಕ್ಷಿಸಲೆಂದು ಅವನನ್ನು ಇನ್ನೊಮ್ಮೆ ಪರೀಕ್ಷೆಗೆ ಒಳಪಡಿಸಲಾಯಿತು. ಮಗನ ಕಳೇವರವನ್ನು ಹಿಡಿದೆತ್ತಿಕೊಂಡು ಅವನ ಮಡದಿ ಸ್ಮಶಾನಕ್ಕೆ ಬರುತ್ತಾಳೆ, ರಾಜನು ಕಳೇವರದ ಹೊದಿಕೆಗಾಗಿ ಅವಳನ್ನು ಕೇಳಲೇ ಬೇಕಾಗುತ್ತದೆ. ಹೀಗೆ, ಅವನು ಎಳೆದುಕೊಳ್ಳುತ್ತಲೆ ಆಕಾಶದಿಂದ ಹೂವುಗಳನ್ನು ಮಳೆಗರೆಯಲಾಗುತ್ತದೆ. ದೇವತೆಗಳು

178. ಅಂಕ IV, vs. 31. ಈ ಅಂಶಗಳ ಗುರಿ ಏನು, ಎಂಬುದು ಒಟ್ಟಿನಲ್ಲಿ ಸ್ಪಷ್ಟವಿಲ್ಲ. ಒಬ್ಬ ಭಾಷ್ಯಕಾರನ ಅಭಿಪ್ರಾಯದಂತೆ, ವೇತಾಳವು (ದೆವ್ವಿನ ಚೈತನ್ಯದಿಂದ ಸ್ಫುರಣಗೊಂಡ ಶವ) ದಸ್ಯುವಿನಂತೆ ಕೆಲಸ ಮಾಡಬಲ್ಲುದು, ಸಿಡಿಲನ್ನು ಮನಬಂದತ್ತ ಎರಗಿಸಬಹುದು. ಅಡಿಯ ಲೇಪನವು ನೀರ ಮೇಲೆ ನಡೆದಾಡಲು ಇಲ್ಲವೆ ಹಾರಲು ಶಕ್ತಿಯನ್ನು ನೀಡುತ್ತದೆ. ಮಾತ್ರೆಗಳು ಹಾಗೂ ಲೇಪನಗಳು (ಗುಟಿಕಾಂಜನ) ಏನನ್ನು ಸಾಧಿಸುವುದಕ್ಕಾಗಿ ಇರುತ್ತವೆಂಬ ಬಗೆಗೆ ನಮಗೆ ಖಾತ್ರಿಯಿಲ್ಲ.

179. ಅಂಕ IV, vs. 34 (ನನ್ನ ಅನುವಾದ).

ಅವನನ್ನು ಹಾಡಿ ಹೊಗಳುತ್ತಾರೆ. ಮಗನು ಮರುಜೀವನ ಪಡೆಯುತ್ತಾನೆ. ಅವನಿಗೆ ತಂದೆಯ ಸಾಮ್ರಾಜ್ಯಕ್ಕೆ ಚಕ್ರವರ್ತಿಯೆಂದು ಪಟ್ಟಾಭಿಷೇಕ ಮಾಡಿಸಲಾಗುತ್ತದೆ. ಹರಿಶ್ಚಂದ್ರ ಹಾಗೂ ಅವನ ಮಡದಿ ಸಂತೋಷೋಲ್ಲಾಸಗಳ ಅಬ್ಬರಗಳ ಮಧ್ಯೆ ಸ್ವರ್ಗವನ್ನೇರುತ್ತಾರೆ.

ಕೃಷ್ಣಮಿಶ್ರನ[180] 'ಪ್ರಬೋಧಚಂದ್ರೋದಯ' ಒಂದು ರೂಪಕ ನಾಟಕವಿದ್ದು ಅದ್ವೈತ ವೈಷ್ಣವವಾದಕ್ಕೆ ಮೀಸಲಾದುದು. ಹೆಚ್ಚಿನ ಪಾತ್ರಗಳು ಅಮೂರ್ತ ಗುಣಗಳಿಗೆ ನೀಡಲಾದ ಮೂರ್ತರೂಪಗಳೆನ್ನಿಸಿವೆ. ಉದಾ : ವಿವೇಕ, ದಂಭ, ಶ್ರದ್ಧಾ ಮುಂ. ಮೂರನೆಯ ಅಂಕವು ನಾಲ್ಕು ಜನ ಪಾಷಂಡಿ ಸಂಪ್ರದಾಯಿಗಳನ್ನು ಪರಿಚಯಿಸುತ್ತದೆ. ಇವರು ಮಹಾಮೋಹದ ಉಪಭಾವನೆಗಳನ್ನು ಪ್ರತಿನಿಧಿಸುವ ನಾಲ್ಕು ಜನ ಸ್ನೇಹಿತರು. ಇವರೆಂದರೆ: ಒಬ್ಬ ಚಾರ್ವಾಕ ಒಬ್ಬ ಜೈನ (ದಿಗಂಬರ ಅಥವಾ ಕ್ಷಪಣಕ) ಒಬ್ಬ (ಬೌದ್ಧ) ಭಿಕ್ಷು, ಒಬ್ಬ ಸೋಮಸಿದ್ಧಾಂತ (ಕಾಪಾಲಿಕ). ಸದ್ಗುಣಗಳಾದ ಇಬ್ಬರು ಕನ್ನೆಯರು -ಶಾಂತಿ ಹಾಗೂ ಕರುಣೆ. ಇವರಿಬ್ಬರೂ ಶಾಂತಿಯ ತಾಯಿಯಾದ ಶ್ರದ್ಧಾಳನ್ನು ಶೋಧಿಸುತ್ತ ಪ್ರವೇಶ ಗೈಯುತ್ತಾರೆ. ಮೊದಲಿಗೆ ಅವರು (ಜೈನ) ಕ್ಷಪಣಕನನ್ನು ಭೇಟಿಯಾಗುತ್ತಾರೆ. ಆ ಕ್ಷಪಣಕನು ಶ್ರದ್ಧಾಳನ್ನು ದಿಗಂಬರ ಹೆಣ್ಣೆಂದು ಕಾಣುವವನು. ಶಾಂತಿಯು ಶ್ರದ್ಧಾಳು ದಿಗಂಬರ ಹೆಣ್ಣೆಂಬ ಕ್ಷಪಣಕನ ಧೋರಣೆಯನ್ನು ಒಪ್ಪಿಕೊಳ್ಳಲು ಸಿದ್ಧಳಿಲ್ಲ. ನಂತರ (ಬೌದ್ಧ) ಭಿಕ್ಷುವು ಶ್ರದ್ಧಾಳಿಗೆ ತನ್ನ ಮತದ ರೂಪ ಕೊಡುತ್ತಾನೆ. ಆದರೆ ಶಾಂತಿಗೆ ಇದೂ ಕೂಡ ಒಪ್ಪಿಗೆಯಿಲ್ಲ. ತರುವಾಯ, ಸೋಮಸಿದ್ಧಾಂತನು ತನ್ನದೇ ಆದ ಸದ್ಗುಣಗಳನ್ನು ಮೆಚ್ಚಿ ಕೊಂಡಾಡುತ್ತ ಪ್ರವೇಶಿಸುತ್ತಾನೆ. (ಅಂಕ III, vs 12) :

> ಮೋಹಕವಾದ ನನ್ನ ಒಡವೆಗಳು ಮಾನವರ ಎಲುವುಗಳಿಂದ ತಯಾರಿಸಲಾದವುಗಳು. ನಾನು ಮಸಣದಲ್ಲಿ ವಾಸಿಸುವವ. ನಾನು ಮಾನವನ ತಲೆಬುರುಡೆಯಲ್ಲೇ ಉಣ್ಣುವವ. ನಾನು, ಯೋಗದ ಲೇಪದಿಂದ ಹಸನುಗೊಳಿಸಲಾದ ನನ್ನ ಕಣ್ಣುಗಳಿಂದ ಈ ವಿಶ್ವವನ್ನು ದೇವರಿಂದ (ಈಶ್ವರ) ಭಿನ್ನ ಹಾಗೂ ಅಭಿನ್ನ ಎಂಬುದಾಗಿ ಸರದಿಯಂತೆ ( ಅಥವಾ ಅನ್ಯೋನ್ಯವಾಗಿ) ವೀಕ್ಷಿಸುತ್ತೇನೆ.

ಕಾಪಾಲಿಕ ವ್ರತವನ್ನು ಕುರಿತು ಆಲಿಸಲು ಕುತೂಹಲ ತಳೆದ ಜೈನ ಕ್ಷಪಣಕನು ಧರ್ಮ ಹಾಗೂ ಮೋಕ್ಷಗಳನ್ನು ಕುರಿತಾದ ಪರಿಕಲ್ಪನೆಗಳನ್ನು ವಿವರಿಸುವಂತೆ ಸೋಮಸಿದ್ಧನನ್ನು ಕೇಳುತ್ತಾನೆ. ಸೋಮಸಿದ್ಧನು ಬಲು ಆತುರದಿಂದ ಅದನ್ನು ಈಡೇರಿಸುತ್ತಾನೆ. (ಅಂಕ III, vs. 13) :

> ಎಲೈ ಕ್ಷಪಣಕನೆ, ಖಂಡಿತ ನೀನು ನಮ್ಮ ಸಂಪ್ರದಾಯಕ್ಕೆ ಬರುವುದನ್ನು

180. ಸಂ. ವಿ. ಎಲ್. ಪಣಶೀಕರ.

ಕುರಿತು ಯೋಚಿಸು. ನಾವು ಮೆದುಳು, ಕರುಳು ಹಾಗೂ ಎಲುವಿನ ಒಳನೆಣವನ್ನು ಬೆರೆಸಿದ ಮಾನವನ ಮಾಂಸವನ್ನು ನೈವೇದ್ಯವೆಂದು ದೇವರಿಗೆ ಅರ್ಪಿಸುತ್ತೇವೆ. ಉಪವಾಸದ ಪಾರಣೆಗಾಗಿ ಬ್ರಾಹ್ಮಣ (ಅಥವಾ ಬ್ರಹ್ಮಾ)ನ ತಲೆಬುರುಡೆಯಿಂದ ಮದ್ಯವನ್ನು (ಸುರಾ) ಸೇವಿಸುತ್ತೇವೆ. ಇಂಥ ಹೊತ್ತಿನಲ್ಲಿ, ಮಾನವರನ್ನು ಬಲಿ ಕೊಟ್ಟು, ಕಡಿದೊಗೆದ ಅವರ ರುಂಡಗಳಿಂದ ಧಾರೆಯಾಗಿ ಸುರಿವ ನೆತ್ತರಿನಿಂದ, ಭಯಭಕ್ತಿಗಳನ್ನು ಹುಟ್ಟಿಸುವಂತಹ ನೈವೇದ್ಯವನ್ನು ನೀಡಿ ಮಹಾಭೈರವನನ್ನು ಪೂಜಿಸಬೇಕು.

ಕ್ಷಪಣಕನು ಈ ಕಠೋರ ಧರ್ಮವನ್ನು ಬಲು ತೀವ್ರತೆಯಿಂದ ನಿರಾಕರಿಸುತ್ತಾನೆ. ಹೀಗಾಗಿ ಸೋಮಸಿದ್ಧಾಂತ ಅವನಿಗೆ ಪ್ರತಿಯಾಗಿ ಹೀಗೆ ಛೀಮಾರಿ ಹಾಕುತ್ತಾನೆ. (ಅಂಕ III. vs 14):

ಎಲವೋ ದುರುಳನೆ, ಪಾಷಂಡಿಗಳ ಜಾತಿಬಾಹಿರನೆ, ಬೋಕ್ಕ ತಲೆಗೆ ಗಂಟು ಹಾಕಿದ ಒಂದೇ ಒಂದು ಚಂಡಿಕೆಯುಳ್ಳವನೆ, ಎಲವೋ, ತಲೆಗೂದಲುಗಳನ್ನು (ಬೇರು ಸಹಿತ) ಕಿತ್ತೆಸೆಯುವವನೆ! ಹೀಗಾಗಿ, ಭವಾನಿಯ ದೇವಪತಿಯಾದವನು, ಈ ಹದಿನಾಲ್ಕು ಲೋಕಗಳನ್ನು ಸೃಷ್ಟಿಸುವವನು, ಕಾಪಾಡುವವನು ಹಾಗೂ ಸಂಹರಿಸುವವನು ಹಾಗೂ ವೇದಾಂತಗಳಲ್ಲಿ (ಅಥವಾ ಉಪನಿಷತ್ತು) ವಿಶ್ಲೇಷಿ ತೋರಿಸಲಾಗಿರುವವನಾದ ಅವನೊಬ್ಬ ಮೋಸಗಾರ ! ನಾನು, ಹರಿ, ಹರ ಹಾಗೂ ಎಲ್ಲರಿಗೆ ಹಿರಿಯ (ಬ್ರಹ್ಮಾ)ನ ಮುಂದಾಳುತನದಲ್ಲಿ ಇರುವ ದೇವತೆಗಳನ್ನೆಲ್ಲ ನಿಯಂತ್ರಿಸುತ್ತೇನೆ. ಆಕಾಶದಲ್ಲಿ ಚಲಿಸುತ್ತಿರುವ ತಾರೆಗಳನ್ನು ಕೂಡ ತಡೆದು ನಿಲ್ಲಿಸಬಲ್ಲೆ. ಪೃಥ್ವಿಯನ್ನು ಅದರ ಮೇಲಿರುವ ಪರ್ವತ ಹಾಗೂ ಪಟ್ಟಣಗಳೊಂದಿಗೆ ನೀರಲ್ಲಿ ಮುಳುಗಿಸಿ, ಒಂದೇ ಕ್ಷಣದಲ್ಲಿ ಆ ನೀರನ್ನು ಕುಡಿದು ಬಿಡಬಲ್ಲೆನೆಂಬುದನ್ನು ತಿಳಿದುಕೊ.

ಕ್ಷಪಣಕ ಮತ್ತೆ ಕಾಪಾಲಿಕ 'ಧರ್ಮ'ವನ್ನು ಮೂದಲಿಸುತ್ತಾನೆ. ಆಗ ಸೋಮಸಿದ್ಧಾಂತನು ತಾನು ತುಂಡರಿಸಿದ ತಲೆಗಳಿಂದ ಸುರಿವ ನೆತ್ತರಿನಿಂದ ಭರ್ಗನ ಮಡದಿ (ದುರ್ಗಾ) ಹಾಗೂ ಅವಳ ಗಣಗಳನ್ನು ಸಂತೋಷಪಡಿಸುವುದಾಗಿ ಅವನಿಗೆ ಬೆದರಿಕೆಯನ್ನು ಹಾಕುತ್ತಾನೆ. ಕ್ಷಪಣಕ ಬೌದ್ಧ ಭಿಕ್ಕುವಿನ ನೆರವಿನಿಂದ ತನ್ನ ಎದುರಾಳಿಯನ್ನು ಶಾಂತಗೊಳಿಸುವಲ್ಲಿ ಯಶವನ್ನು ಹೊಂದುತ್ತಾನೆ. ಆಮೇಲೆ ಕಾಪಾಲಿಕನು ಮೋಕ್ಷದ ಪರಿಕಲ್ಪನೆಯನ್ನು ಕುರಿತು ಅವನನ್ನು ಕೇಳುತ್ತಾನೆ. ಮೋಕ್ಷವು ಇಂದ್ರಿಯ ಸುಖದ ಒಂದು ಅವಸ್ಥೆಯಾಗಿದ್ದು, ಶಿವ ಮತ್ತು ಶಕ್ತಿಯರ ಭೌತಿಕ ಪ್ರತಿರೂಪರೆನ್ನಿಸಿದ ಆರಾಧಕ ಹಾಗೂ ಅವನ ಹೆಂಡತಿಯ ಸಮಾಗಮದ ಮೂಲಕ ಅದನ್ನು ಪಡೆಯಲು ಸಾಧ್ಯ, ಎಂದು ಸೋಮಸಿಧ್ಧಾಂತನು ಉತ್ತರಿಸುತ್ತಾನೆ.[181] ಜೈನ ಹಾಗೂ ಬೌದ್ಧರಿಬ್ಬರೂ ಅವನ ಸಿದ್ಧಾಂತ

181. ಅಂಕ 11, vs. 16. ಅಲ್ಲದೆ ಮುಂದೆ ನೋಡಿ, pp. 90-92.

ತಪ್ಪೆಂದು ಘೋಷಿಸುತ್ತಲೆ ಸೋಮಸಿದ್ಧಾಂತ ತನ್ನ ಶ್ರದ್ಧೆಯನ್ನು ಚೆಲುವೆಯಾದ ಕಾಪಾಲಿನಿಯಾಗಿ ಬರುವಂತೆ ಆವಾಹಿಸುತ್ತಾನೆ. ಅವಳು ಬಂದವಳೆ ತನ್ನೊಡೆಯನ ಅಪ್ಪಣೆಯಂತೆ ಮೊದಲಿಗೆ ಬೌದ್ಧನನ್ನು ಹಾಗೂ ತರುವಾಯದಲ್ಲಿ ಜೈನನನ್ನು ಬಿಗಿದಪ್ಪುತ್ತಾಳೆ. ಅವರೀರ್ವರ ಸಂಯಮದ ಹಡಗುಗಳು ಬಲು ಬೇಗ ಕಾಮನಾಸನೆಯ ದಡಕ್ಕೆ ಅಪ್ಪಳಿಸಿ ಒಡೆದು ಬೀಳುತ್ತವೆ. ತಮಗೆ ಸರ್ವೋತ್ತಮನಾದ ಮಹಾಭೈರವನ ಸಿದ್ಧಾಂತದ ದೀಕ್ಷೆಯನ್ನು ನೀಡುವಂತೆ ಅವರಿಬ್ಬರೂ ಸೋಮಸಿದ್ಧಾಂತನನ್ನು ಕೋರುತ್ತಾರೆ. ಅವನು ಅವರಿಬ್ಬರಿಗೂ ಕುಳಿತುಕೊಳ್ಳುವಂತೆ ಅಪ್ಪಣೆ ಮಾಡಿ ಮದ್ಯದ ಒಂದು ದೊಡ್ಡ ಪಾತ್ರೆಯನ್ನು ಎತ್ತಿಕೊಳ್ಳುತ್ತಾನೆ. ತಾನು ಅದನ್ನು ಸ್ವಲ್ಪ ಸೇವಿಸುತ್ತಾನೆ. ಉಳಿದುದನ್ನೆಲ್ಲ ತನ್ನೀ ಹೊಸ ಶಿಷ್ಯರಿಗೆ ನೀಡುತ್ತಾನೆ. (ಅಂಕ III vs. 20) :

> ಪವಿತ್ರಗೊಳಿಸುವ ಈ ಅಮೃತವನ್ನು ಸೇವಿಸಿ. ಭೈರವನು (ಪುನರ್ಜನ್ಮದ) ಅಸ್ತಿತ್ವದ ವಿರುದ್ಧ ವಿಧಿಸಿದ ಉಪಾಯ ಇದು. ಪಶುತ್ವದ (ಪಶುಪಾಶ) ಬಂಧನಗಳನ್ನು ಕಳಚಿಕೊಳ್ಳಲು ಇದೊಂದು ಸಾಧನವೆನ್ನಿಸಿದೆ.

ಮೊದಲಿಗೆ, ಅವರಿಬ್ಬರೂ ದೂಷಿತವೂ, ಸೂಕ್ತವಲ್ಲದುದೂ ಆದ ಈ ಪಾನೀಯವನ್ನು ನಿರಾಕರಿಸುತ್ತಾರೆ. ಶ್ರದ್ಧಾಳು ಅದನ್ನು ಒಂದು ಗುಟುಕು ಸೇವಿಸುತ್ತಾಳೆ. ಹೀಗಾಗಿ ಅವರು ತಮ್ಮ ಆತುರತೆಯನ್ನು ತಡೆದುಕೊಳ್ಳದವರಾಗುತ್ತಾರೆ. ಅಲ್ಲದೆ 'ಕಾಪಾಲಿನಿಯ ಬಾಯಿಯಿಂದ ಬಂದ ಮದ್ಯದಿಂದ ಸುವಾಸನೆಯನ್ನು ಪಡೆದ'ಆ ಮದ್ಯವನ್ನು ಅವರಿಬ್ಬರೂ ಒಟ್ಟಿಗೇ ಹೀರಿಕೊಳ್ಳುತ್ತಾರೆ. ಶೀಘ್ರವಾಗಿ ಅವರಿಬ್ಬರಿಗೂ ಕುಡಿತದ ಅಮಲು ಏರುತ್ತದೆ. ತನ್ನೀ ಕಾಯಕದಿಂದ ಖುಷಿಪಟ್ಟ ಆ ಕಾಪಾಲಿಕ ತನ್ನವಳಾದ ಆ ಶ್ರದ್ಧಾಳಿಗೆ ಹೀಗೆನ್ನುತ್ತಾನೆ : ' ಪ್ರಿಯಳೆ, ಯಾವುದೇ ಬಂಡವಾಳವನ್ನು ಹೂಡದೆಯೇ ನಾವಿಬ್ಬರೂ ಅವರನ್ನು ನಮ್ಮ ದಸ್ಯುಗಳನ್ನಾಗಿ ಮಾಡಿಕೊಂಡೆವು. ನಾವಿನ್ನು ಕುಣಿಯುವಾ, ಬಾ '. ಅವರಿಬ್ಬರೂ ಕುಣಿಯುತ್ತಿರುವಾಗಲೆ ಅವನು ಇಂದ್ರಿಯಗಳ ಉದ್ವೇಶಗಳನ್ನು ಕೈಬಿಡದೆಯೇ ಎಂಟು ಮಹಾಸಿದ್ಧಿಗಳನ್ನು ಪಡೆದುಕೊಳ್ಳಲು ಸಾಧ್ಯವಾಗುವ ತನ್ನ ಸಿದ್ಧಾಂತವನ್ನು ಮೆಚ್ಚಿ ಕೊಂಡಾಡುತ್ತಾನೆ.[182] ತರುವಾಯದಲ್ಲಿ, ಕ್ಷಪಣಕ ಈ ತನ್ನ ಹೊಸ 'ಗುರುಗಳ ರಾಜ' ಹಾಗೂ ಕುಲಾಚಾರ್ಯನನ್ನು ಬಾಯಿತುಂಬ ಕೊಂಡಾಡುವನು.[183] ಆ ಜೈನ ಈಗಲೂ ಕುಡಿತದ ಅಮಲಿನಲ್ಲಿ ಇರುವುದನ್ನು ಕಂಡು ಅವನನ್ನು ಸಾಮಾನ್ಯ ಸ್ಥಿತಿಗೆ ತರುವಂತೆ ಭಿಕ್ಕುವು ಸೋಮಸಿದ್ಧಾಂತನಿಗೆ ಹೇಳುತ್ತಾನೆ. ಸೋಮಸಿದ್ಧಾಂತನು ಆ ಜೈನನಿಗೆ ಅರೆ ಜಗೆದ ಅಡಿಕೆಯನ್ನು

---

182. ಅಂಕ III. vs. 22.

183. 'ಕುಲಾಚಾರ್ಯ'ನೆಂಬ ಪದವಿಯು ಕೌಲ ಮತ್ತು ಕಾಪಾಲಿಕ ಸಂಪ್ರದಾಯಗಳ ನಡುವಿನ ಹತ್ತಿರದ ನಂಟನ್ನು ಇನ್ನೊಮ್ಮೆ ತೋರಿಸುತ್ತದೆ.

ತಿನ್ನಲು ನೀಡಿ ಅವನನ್ನು ಸಾಮಾನ್ಯ ಸ್ಥಿತಿಗೆ ತರುತ್ತಾನೆ. ತರುವಾಯ. ಆ ಮೂವರೂ ಪಾಷಂಡಿಗಳು ತಮ್ಮ ರಾಜನಾದ ಮಹಾಮೋಹನಿಗಾಗಿ ಈ ಶ್ರದ್ಧಾಳನ್ನು ವಶಪಡಿಸಿಕೊಳ್ಳಲೆಂದು ಒಂದು ಯೋಜನೆಯನ್ನು ಸಿದ್ಧಪಡಿಸುತ್ತಾರೆ. ಆದರೆ ವಿಷ್ಣುಭಕ್ತಿ ಹಾಗೂ ಧರ್ಮ ಇವರು ಅವಳನ್ನು ಜೊತೆಗೂಡಿದುದಲ್ಲದೆ ತಮ್ಮ ವೈರಿಯಾದ ವಿವೇಕ ಅರಸನ ಬದಿಯವರನ್ನು ಸೇರಿಕೊಂಡುದು ಶೀಘ್ರವಾಗಿ ಅವರ ಗಮನಕ್ಕೆ ಬರುತ್ತದೆ. ಈ ವಾರ್ತೆಯಿಂದ ಶಾಂತಿ ಹಾಗೂ ದಯೆ ಇವರಿಗೆ ತುಂಬ ಖುಷಿಯಾಗಿ ಅವರು ಶ್ರದ್ಧಾಳ ಶೋಧನೆಗಾಗಿ ಹೊರಡುತ್ತಾರೆ.

ನಾವು ಆಗಲೇ ಗಮನಿಸಿದ ಬೇರೆ ನಾಟಕಗಳಲ್ಲಿ ಕಾಪಾಲಿಕರಿಗೆ ತುಲನಾತ್ಮಕವಾಗಿ ಚಿಕ್ಕ ಪಾತ್ರಗಳಿವೆ. ಶಂಕಧರನ 'ಲಟಮೇಲಕ'ವು[184] 'ಮತ್ತವಿಲಾಸ'ದಂತೆಯೇ ಇರುವ ಒಂದುಕಿನ ಪ್ರಹಸನ. ಇದರಲ್ಲಿ ಇರುವ ಕಾಪಾಲಿಕನನ್ನು ಅಜ್ಞಾನ ರಾಶಿಯೆಂದು ಕರೆಯಲಾಗಿದ್ದು, ಇದಕ್ಕೆ ಸರಿದೂಗುವ ಬುದ್ಧಿಮತ್ತೆ ಕೂಡ ಅವನಲ್ಲಿದೆ. ಇವನು ಜಟಾಸುರನೆಂಬ ದಿಗಂಬರ ಸಂನ್ಯಾಸಿಯೊಡನೆ ವಾದ ಹಾಕುತ್ತ ತನ್ನ ವೇಳೆಯನ್ನು ಕಳೆಯುತ್ತಾನೆ. ರಾಮಚಂದ್ರನ 'ಕೌಮುದೀ ಮಿತ್ರಾನಂದ'ದಲ್ಲಿ[185] ಒಬ್ಬ ಕಾಪಾಲಿಕನು ಮಾನವನ ಕರುಳಗಳನ್ನು ಆಹುತಿಯಾಗಿ ಅಗ್ನಿಗೆ ಅರ್ಪಿಸಿ ಒಂದು ಹೆಣಕ್ಕೆ ಜೀವ ಬರಿಸುತ್ತಾನೆ. ನಾಟಕದ ಮೂರು ಜನ ನಾಯಕರಲ್ಲಿ ಒಬ್ಬ ನಾಯಕನು ಜೀವತಳೆದು ಬಂದ ವ್ಯಕ್ತಿಯಿಂದ ಈ ಕಾಪಾಲಿಕನನ್ನು ಸದೆಬಡಿಯ ಹಚ್ಚುತ್ತಾನೆ. ಇದೇ ಲೇಖಕನ 'ನಲವಿಲಾಸ'ವು[186] ಲಂಬೋದರ ಉರ್ಫ ಕೋಷ್ಟಕ ಉರ್ಫ ಭಸ್ಮಕ ಹಾಗೂ ಅವನ ಗುರು ಘೋರಘೊಣ (ಭಯಂಕರ ಗೊರಿಕೆಯ) ಉರ್ಫ ಮೇಷಮುಖ (ಕುರಿಯ ಮುಖ)ದ ಪ್ರಧಾನ ಲಕ್ಷಣಗಳುಳ್ಳ ಇಬ್ಬರು ಕಾಪಾಲಿಕರನ್ನು ಒಳಗೊಂಡಿದೆ. ಇವರಿಬ್ಬರೂ ಕಾಪಾಲಿಕರು ಕಳಚೂರಿ-ಚೇದಿಯ ಅರಸು ಚಿತ್ರಸೇನನ ಬೇಹುಗಾರರು. ಈ ಬೇಹುಗಾರರು ಕುಟಿಲರಾಗಿದ್ದರೂ ಬಹಳಷ್ಟು ಮಟ್ಟಿಗೆ ಮನರಂಜನೆಯನ್ನು ಉಂಟುಮಾಡುವವರು. ಯಶಪಾಲನ 'ಮೋಹರಾಜಪರಾಜಯ'[187] ದಲ್ಲಿ ಐದು ಪಾಷಂಡಿಗಳಾದ ಕೌಲ, ರಹಮಾನ (ಮುಸಲ್ಮಾನ), ಘಟಚಟಕ, ನಾಸ್ತಿಕ ಹಾಗೂ ಒಬ್ಬ ಕಾಪಾಲಿಕನಿದ್ದು ಪ್ರತಿಯೊಬ್ಬನೂ ತನ್ನ ಪಂಥವನ್ನು ಕುರಿತು ಸಾರಾಂಶದಲ್ಲಿ ಒಂದೊಂದು ಪದ್ಯವನ್ನು ಹೇಳುತ್ತಾನೆ. ಕಾಪಾಲಿಕ ಹೀಗೆ ಹೇಳುತ್ತಾನೆ : ' ಯಾವಾಗಲೂ ಸರ್ವಶ್ರೇಷ್ಠನಾದ ಮನುಷ್ಯನ ತಲೆಬುರುಡೆಯಿಂದ ಹೊರತೆಗೆದ ಮಾನವ ಮಾಂಸವನ್ನು ಸೇವಿಸುವವನು, ಶಿವನ ಸ್ಥಾನವನ್ನು (ಶಿವಸ್ಥಾನ) ಪಡೆಯುವನೆಂದು ನರಕಾಪಾಲಿನ್‌ನು (ಮಾನವನ ತಲೆ ಬುರುಡೆಯನ್ನು

---

184. ಸಂ. ದುರ್ಗಾಪ್ರಸಾದ.

185. ನಮಗೆ ಈ ಕೃತಿಯ ಪ್ರತಿ ದೊರಕಲಿಲ್ಲ. ಇದನ್ನು ಹಂಡಿಕಿ ಅವರು ಸಾರಾಂಶ ರೂಪಕ್ಕೆ ತಂದಿದ್ದಾರೆ, ಪು. 358 ಮತ್ತು ಕೀಥ್‌ರಿಂದ ಪು. 259.

186. ಸಂ. ಜಿ. ಕೆ. ಶ್ರೀಗೊಂದೇಕರ ಮತ್ತು ಎಲ್. ಬಿ. ಗಾಂಧಿ.

187. ಸಂ. ಚತುರ್ವಿಜಯಜಿ.

ಕೈಯಲ್ಲಿ ಹಿಡಿದುಕೊಂಡವನು = ಶಿವನು) ಘೋಷಿಸಿದ್ದಾನೆ.'[188]

ಈ ಕೆಲವು ಕೃತಿಗಳಲ್ಲಿ ಬರುವ ಬಹಳಷ್ಟು ಮಟ್ಟಿಗೆ ಹೆಣತಿನ್ನುವ ಕಾಪಾಲಿಕರು ಹಾಗೂ 'ಮತ್ತವಿಲಾಸ'ದ ಪಾನಾಸಕ್ತನಾದ ಸತ್ಯಸೋಮನ ನಡುವೆ ಅಗಲವಾದ ಕಂದರ ಇದೆಯೆಂದ ಮಾತ್ರಕ್ಕೆ ಇವೆರಡರಲ್ಲಿ ಪ್ರತಿಯೊಂದು ಬಣ್ಣನೆ ಪೂರ್ತಿ ಸುಳ್ಳು ಎಂದು ಧ್ವನಿತವಾಗದು. ತಾಂತ್ರಿಕ ಸಂಪ್ರದಾಯವು ಸೌಖ್ಯತತ್ವವಿಚಾರ ಹಾಗೂ ಕ್ರೂರ ಕಾಮವಿಕಾರಗಳ ಮೂಲಾಂಶಗಳನ್ನು ಒಳಗೊಂಡ ಇಡಿಯಾದ ಒಂದು ಮಿಶ್ರಣ ಎನ್ನಿಸಿದೆ. ನಾಟಕಕಾರರು ತಮ್ಮ ಕಲೆಯ ಉದ್ದೇಶ ಹಾಗೂ ಧಾರ್ಮಿಕ ಪೂರ್ವಗ್ರಹಗಳಿಗೆ ತಕ್ಕಂತೆ ಇವೆರಡು ಮೂಲಾಂಶಗಳಲ್ಲಿ ಒಂದಕ್ಕೆ ಇಲ್ಲವೆ ಇನ್ನೊಂದಕ್ಕೆ ಒತ್ತು ನೀಡಿರುವರಷ್ಟೇ. ಸೌಖ್ಯತತ್ವವಾದವು ಹಾಸ್ಯ ಬರಹಗಳಿಗೆ ಸಹಜವಾಗಿ ಒಗ್ಗಿಕೊಳ್ಳುವಂಥದಾದ ಕಾರಣ 'ಮತ್ತ ವಿಲಾಸ' ಹಾಗೂ 'ಲಟಮೇಲಕ'ದಂತಹ ಪ್ರಹಸನಗಳು ಕಾಪಾಲಿಕರ ಹೆಣ್ಣಿಗತನಗಳನ್ನು ಮುಖ್ಯ ಲಕ್ಷಣಗಳಾಗಿ ಚಿತ್ರಿಸುತ್ತವೆ. ಭೀಭತ್ಸತೆಯನ್ನು ಹುಟ್ಟಿಸುವುದೇ ಮುಖ್ಯ ಗುರಿಯಾಗಿರುವ ಲೇಖಕರು ಈ ಸಂಪ್ರದಾಯದ ವಾಮಾಚಾರಗಳಿಗೆ ಹೆಚ್ಚಿನ ಒತ್ತುಕೊಡುತ್ತಾರೆ. 'ಪ್ರಬೋಧ ಚಂದ್ರೋದಯ'ಎಂಬ ಕೃತಿಯು ಇವೆರಡೂ ದ್ರವ್ಯಗಳನ್ನು ಹೊಂದಿದೆ. ಈ ನಾಟಕದ ವಿಷಯ ತುಂಬ ಪಕ್ಷಪಾತ ಹಾಗೂ ಅಪಾರ್ಥಗಳಿಂದ ಕೂಡಿದುದಾಗಿದ್ದರೂ ಹಲವು ಸಂದರ್ಭಗಳಲ್ಲಿ ಇದು ಎಲ್ಲಕ್ಕೂ ಹೆಚ್ಚಿನ ಮಾಹಿತಿಯನ್ನು ಒದಗಿಸುವಂಥದೂ ಆಗಿದೆ. ಕಾಪಾಲಿಕ ಯತಿಗಳನ್ನು ಕುರಿತಾದ ಸಾಂಪ್ರದಾಯಿಕ ಹಾಗೂ ನಿರೂಪಣಾ ಸಾಹಿತ್ಯದಲ್ಲಿರುವ ಬಣ್ಣನೆಗಳನ್ನು ಕುರಿತು ನಾವು ಪರಾಮರ್ಶೆಯನ್ನು ಕೈಕೊಳ್ಳುವವರೆಗೆ ಈ ಸಂಪ್ರದಾಯದ ಬಗೆಗಿನ ಹೆಚ್ಚು ಪರಿಪೂರ್ಣವಾದ ಚರ್ಚೆಯನ್ನು ಮುಂದಕ್ಕೆ ತಳ್ಳಬೇಕಾಗಿದೆ.

## ಮುಂದಿನ ಕಾಲದ ನಾನಾ ಬಗೆಯ ಆಕರಗಳು

ಕಾಪಾಲಿಕರನ್ನು ಕುರಿತಾದ ಕಥೆಗಳು ಸೋಮದೇವನ 'ಕಥಾಸರಿತ್ಸಾಗರ'ದಂತಹ (ಇಸವಿ 1063 - 81) ಕಥಾಸಂಕಲನಗಳಲ್ಲಿ ಮೇಲಿಂದ ಮೇಲೆ ಕಂಡುಬರುತ್ತವೆ. ಈ ಕೃತಿಯ ಮದನಮಂಜರಿಯ ಕಥೆಯು ಕೀರ್ತಿವಂತನಾದ ವಿಕ್ರಮಾದಿತ್ಯನೆಂಬ ಅರಸನೊಂದಿಗೆ ಒಬ್ಬ ಕಾಪಾಲಿಕನನ್ನು ಪ್ರತಿಸ್ಪರ್ಧಿಯಾಗಿ ನಿಲ್ಲಿಸುತ್ತದೆ.[189] ಯಕ್ಷರಾಜನ ಮಗಳು ಹಾಗೂ ಕುಬೇರನ ಸೋದರನ ಮಡದಿಯಾದ ಮದನಮಂಜರಿಯು ಒಂದುದಿನ ಉಜ್ಜಯನಿಯ ಹೂದೋಟದಲ್ಲಿ ಒಬ್ಬಳೇ ಸಂತೋಷದಿಂದ ವಿಹರಿಸುತ್ತಿದ್ದಳು. ಒಬ್ಬ 'ಡಾಂಭಿಕ ಕಾಪಾಲಿಕ'ನು ಅವಳನ್ನು

188. ಅಂಕ IV, vs. 23. ಈ ಘಟಚಟಕನನ್ನು ಸರಿಯಾಗಿ ಗುರುತಿಸಲು ಆಗುತ್ತಿಲ್ಲ.

189. ಸಂ. ದುರ್ಗಾಪ್ರಸಾದ ಮತ್ತು ಕೆ. ಪಿ. ಪರಬ, xviii. 2. 1 - 33 ಮತ್ತು 209 - 214.

ಕಂಡನು.[190] ಅವನು ತತ್‌ಕ್ಷಣ ಅವಳ ಪ್ರೇಮದಲ್ಲಿ ಸಿಲುಕಿದನು. ತನ್ನ ಮಂತ್ರಶಕ್ತಿ ಬಳಸಿ ಹಾಗೂ ಅಗ್ನಿಗೆ ಆಹುತಿಯನ್ನು ನೀಡಿ ಅವಳನ್ನು ತನ್ನ ಹೆಂಡತಿಯಾಗಿ ಪಡೆಯಲೆಂದು ಶೀಘ್ರವಾಗಿ ಅವನೊಂದು ಸ್ಮಶಾನ ಭೂಮಿಗೆ ತೆರಳಿದನು. ಮದನಮಂಜರಿ ತನ್ನ ಮಾಂತ್ರಿಕ ಶಕ್ತಿಯಿಂದ ಅವನ ಯೋಜನೆಯನ್ನು ಅರಿತುಕೊಂಡರೂ ಅವನ ಯಕ್ಷವಿದ್ಯೆಯ ವಶೀಕರಣದ ಸಾಮರ್ಥ್ಯದೆದುರು ಅಸಹಾಯಳಾದಳು. ಆ ಸಾಮರ್ಥ್ಯದಿಂದ ಸೆಳೆಯಲ್ಪಟ್ಟು, ಎಲುವು, ತಲೆಬುರುಡೆ ಹಾಗೂ ಮತ್ತೆ ಮತ್ತೆ ಬರುವ ಭೂತ ಪಿಶಾಚಿಗಳಿಂದ ತುಂಬಿದ 'ಆ ಭಯಂಕರ ಸ್ಮಶಾನ ಭೂಮಿಗೆ ಹೋಗಿ ತಲುಪಿದಳು. ಅವಳು ಅಲ್ಲಿ ಆ ದುರುಳ ಕಾಪಾಲಿಕನನ್ನು ಕಂಡಳು. ಅವನು ಆಹುತಿ ನೀಡಲು ಬೆಂಕಿ ಹಾಗೂ ತಂತ್ರಾಚರಣೆಗಳಿಗಾಗಿ ಒಂದು ವೃತ್ತವನ್ನು (ಮಂಡಲ) ತಯಾರಿಸಿ ಆ ವೃತ್ತದ ನಡುವೆ ಅಂಗತ್ತವಾಗಿ ಇರಿಸಲಾದ ಒಂದು ಶವವನ್ನು ಪೂಜಿಸುತ್ತಿದ್ದನು.[191] ಮದನಮಂಜರಿ ತನ್ನ ರಕ್ಷಣೆಗಾಗಿ ವಿಕ್ರಮಾದಿತ್ಯ ರಾಜನನ್ನು ಆವಾಹಿಸಿದಳು. ಅವನು ಅಗ್ನಿಶಿಖನೆಂಬ ಒಬ್ಬ ವೇತಾಳನೊಂದಿಗೆ ಶೀಘ್ರ ಅಲ್ಲಿಗೆ ತಲುಪಿದನು. ಅವನು ಆ ವೇತಾಳನಿಗೆ 'ಇನ್ನೊಬ್ಬರ ಹೆಂಡತಿಯನ್ನು ಅಪಹರಿಸುವ ಈ ಕಾಪಾಲಿಕನನ್ನು ಕೊಂದು ತಿಂದು ಬಿಡು' ಎಂದು ಆಜ್ಞಾಪಿಸಿದನು. ವೇತಾಳವು ಆ ಶವದ ಮೈಯನ್ನು ಹೊಕ್ಕ ಕೂಡಲೆ ಅದು ಎದ್ದು ನಿಂತು, ಕೂಡಲೇ ಕಾಪಾಲಿಕನನ್ನು ಯಮಲೋಕಕ್ಕೆ ಅಟ್ಟಿತು.

ಚಂದ್ರಸ್ವಾಮಿನ್ ಎಂಬ ಬ್ರಾಹ್ಮಣ ಯುವಕನ ಕಥೆಯಲ್ಲಿ ಬೇರೊಬ್ಬ ಕಚ್ಚೆಹರುಕ ಕಾಪಾಲಿಕ ಕಾಣಿಸಿಕೊಳ್ಳುತ್ತಾನೆ.[192] ಒಂದು ದಿನ ಆ ಬ್ರಾಹ್ಮಣ ಒಂದು ವಾರ್ತೆಯನ್ನು ತಲುಪಿಸಲೆಂದು ಪಟ್ಟಣಕ್ಕೆ ಹೋಗಿದ್ದನು. ತುಸು ಹೊತ್ತಿನಲ್ಲಿ ಒಬ್ಬ ಕಾಪಾಲಿಕನು ಚಂದ್ರಸ್ವಾಮಿಯ ಮನೆಗೆ ಬಂದನು. ಈತ ಅವನ ಚೆಲುವೆಯಾದ ಹೆಂಡತಿಯನ್ನು ಅಲ್ಲಿ ಕಂಡನು. ಕೂಡಲೆ ಅವಳ ಮೈಯಲ್ಲಿ ಜ್ವರವೇರಿ ಸಂಜೆಗೆಂದರೆ ಅವಳು ಮಡಿದಳು. ಚಂದ್ರಸ್ವಾಮಿ ಮನೆಗೆ ಹಿಂತಿರುಗುವಷ್ಟರಲ್ಲಿ ಮಡದಿಯ ಬಳಗದವರು ಅವಳ ದೇಹವನ್ನು ಚಿತೆಗೇರಿಸಿದ್ದರು. ಅವನು ಝಗಝಗಿಸುವ ಆ ಬೆಂಕಿಯ ಉರಿನಾಲಿಗೆಗಳ ಹತ್ತಿರಕ್ಕೆ ಹೋದಾಗ ಆ ಕಾಪಾಲಿಕನನ್ನು ಕಂಡನು. ಆ ಯತಿಯು ತನ್ನ ಹೆಗಲ ಮೇಲೆ 'ಕುಣಿದಾಡುವ' ಒಂದು ಖಟ್ವಾಂಗದ ದೊಣ್ಣೆ ಹಾಗೂ ಕೈಯಲ್ಲಿ ಮೋಡಗಳ ಗುಡುಗಿನಂತಹ ಅಬ್ಬರವನ್ನು ಉಂಟು ಮಾಡುವ ಒಂದು ಡಮರುವನ್ನು ಹಿಡಿದುಕೊಂಡಿದ್ದನು. ಅವನು ಬೆಂಕಿಯ ಮೇಲೆ ಬೂದಿಯನ್ನು ಎರಚುತ್ತಲೇ

---

190. 'ಖಂಡ -ಕಾಪಾಲಿಕ'. ಟಾನಿಯವರು ಈ ವಿಚಿತ್ರವಾದ ಪದವನ್ನು ಹೀಗೆ ನೀಡಿದ್ದಾರೆ. Bōhtlinck ಮತ್ತು Roth (ಸಂಸ್ಕೃತದ Wörterbuch) ಇವರು'ein Quasi-Kāpālika' ಎಂಬುದಾಗಿ ಅನುವಾದಿಸುತ್ತಾರೆ.

191. xviii. 2.15 ಈ ಸಮಾರಂಭವು ತುಸುಮಟ್ಟಿಗೆ 'ಹರ್ಷಚರಿತ'ದಲ್ಲಿ ಭೈರವಾಚಾರ್ಯನಿಂದ ಆಚರಿಸಲಾದ 'ಮಹಾಕಾಲ ಹೃದಯ'ವನ್ನು ಹೋಲುತ್ತದೆ.

192. ಅದೇ, xviii. 5. 1-22.

ಆ ಹೆಂಗಸು ಯಾವುದೇ ಗಾಯಗಳಾಗದೆಯೆ ಎದ್ದು ನಿಂತಳು. ಅವನ ಮಾಂತ್ರಿಕ ಶಕ್ತಿಯಿಂದ (ಸಿದ್ಧಿ) ಸೆಳೆಯಲ್ಪಟ್ಟು ಅವಳು ಅವನೊಂದಿಗೆ ಗಂಗಾನದಿಯ ದಡದ ಮೇಲಿನ ಒಂದು ಗುಹೆಗೆ ಓಡುತ್ತ ಹೋದಳು. ಗುಹೆಯಲ್ಲಿ ಇನ್ನಿಬ್ಬರು ಕನ್ನೆಯರು ಸೆರೆಯಲ್ಲಿದ್ದರು. ಕಾಪಾಲಿಕನು ತನ್ನ ಖಟ್ವಾಂಗವನ್ನು ನೆಲಕ್ಕೆ ಇಟ್ಟು ಅವರಿಗೆ ಹೀಗೆಂದನು: 'ನನ್ನ ವ್ರತ ಸಿದ್ಧಿಸಿತು. ಈಗ ಇವಳನ್ನು ಪಡೆದಿದ್ದೇನೆ. ನಾನು ಇವಳಿಲ್ಲದೆ ನಿಮ್ಮಿಬ್ಬರನ್ನು ಭೋಗಿಸುವ ಹಾಗೂ ಇರಲಿಲ್ಲ'. ಹೀಗೆ ನುಡಿಯುವಷ್ಟರಲ್ಲಿ ಗಂಡನಾದ ಚಂದ್ರಸ್ವಾಮಿಯು ಅವರಿಬ್ಬರನ್ನೂ ಹಿಂಬಾಲಿಸುತ್ತ ಅಲ್ಲಿಗೆ ಬಂದು ತಲುಪಿದ್ದನು. ಸರಿಯಾದ ಅವಕಾಶ ಕಂಡು ಅವನು ಖಟ್ವಾಂಗವನ್ನು ಹೊಳೆಗೆ ಎಸೆದುಬಿಟ್ಟನು. ಖಟ್ವಾಂಗದ ಮಂತ್ರ ಶಕ್ತಿಯಿಲ್ಲದಿದ್ದರೆ ಆ ಕಾಪಾಲಿಕ ಸಾಮರ್ಥ್ಯ ಹೀನನಾಗುತ್ತಿದ್ದನು. ಅವನು ಓಡಿ ಹೋಗಲೆಳಸಿದನು. ಆದರೆ ಚಂದ್ರಸ್ವಾಮಿಯ ವಿಷದ ಬಾಣ ತಲುಪಿ ಸತ್ತು ಬಿದ್ದನು. ಸೋಮದೇವ ಎನ್ನುತ್ತಾನೆ (xviii.5. 16) : 'ತಮ್ಮ ದುರುಳ ಸಾಧನೆಗಳ ಭೋಗಗಳಿಗಾಗಿ ಹೀಗೆ 'ಶಿವಾಗಮಗಳನ್ನು' ಕುಚೋದ್ಯಕ್ಕೆ ಈಡುಮಾಡುವ ಪಾಷಂಡಿಗಳು ತಾವು ಪಾಪಗಳಲ್ಲಿ ಸಿಲುಕಿದ ಹಾಗೆಯೇ ಪತನ (ನಾಶ) ಹೊಂದುತ್ತಾರೆ.' ಚಂದ್ರಸ್ವಾಮಿಯು ಮಾಟಕ್ಕೊಳಗಾದ ಆ ಇಬ್ಬರೂ ಕನ್ನೆಯರನ್ನು ಬಿಡುಗಡೆ ಮಾಡಿ, ತನ್ನ ಹೆಂಡತಿಯೊಂದಿಗೆ ಮನೆಗೆ ಹಿಂತಿರುಗಿ ಬಂದನು.

'ಕಥಾ ಸರಿತ್ಸಾಗರ'ದ ದೇವದತ್ತನೆಂಬ ಜೂಜುಕೋರನಾದ (v. 3. 196 ff) ಬ್ರಾಹ್ಮಣನ ಬೇರೊಂದು ಕಥೆಯಲ್ಲಿ ಜಾಲಪಾದನೆಂಬ ಒಂದು ಕೇಂದ್ರ ಪಾತ್ರವಿದೆ. ಒಂದು ದಿನ ದೇವದ್ದತ್ತನು ಜೂಜಿನಲ್ಲಿ ತನ್ನ ಬಟ್ಟೆಬರೆಗಳಿಂದ ಹಿಡಿದು ಎಲ್ಲವನ್ನೂ ಕಳೆದುಕೊಂಡನು. ಹೀಗಾಗಿ ತನ್ನ ಅಪ್ಪನ ಮನೆಗೆ ಹಿಂತಿರುಗಿ ಬರಲು ಅಸಮರ್ಥನಾದನು. ಅವನೊಂದು ದೇವಾಲಯದಲ್ಲಿ ಉಳಿದುಕೊಂಡನು. ಅಲ್ಲಿ ಅವನೊಬ್ಬ ಮಹಾವ್ರತಿಯನ್ನು ಕಂಡನು. ಮಂತ್ರೋಚ್ಚಾರದಿಂದ ಆತನ ಹಲವು ಸಿದ್ಧಿಗಳಿಂದಾಗಿ ಬಗೆ ಬಗೆಯ ಸಂಗತಿಗಳು ಈಡೇರಿದ್ದವು. ದೇವದತ್ತನು ತುಂಬು ಗೌರವದಿಂದ ಅವನನ್ನು ಅಭಿವಂದಿಸಿದನು. ಅವನೆದುರು ತನ್ನ ಮನದಳಲನ್ನು ತೋಡಿಕೊಂಡನು. ಆ ಜೂಜುಕೋರನು ವಿದ್ಯಾಧರನಾಗಲು ತನಗೆ ನೆರವು ನೀಡಿದರೆ ತಾನು ಅವನ ಸಂಪತ್ತನ್ನು ಮರಳಿ ದೊರಕಿಸಿ ಕೊಡುವುದಾಗಿ ಮಹಾವ್ರತಿಯು ಅವನಿಗೆ ಹೇಳಿದನು. ಮಾರನೆಯ ದಿನ ಮಹಾವ್ರತಿಯು ಒಂದು ಸ್ಮಶಾನಭೂಮಿಗೆ ಬಂದು ಮೂಲೆಯ ಒಂದು ಆಲದ ಮರದಡಿ ಕುಳಿತನು. ಇರುಳಲ್ಲಿ ಅವನು ಪೂಜೆಯನ್ನು ಮಾಡಿ, ಹಾಲಿನಲ್ಲಿ ಬೇಯಿಸಿದ ಅನ್ನವನ್ನು ಆಹುತಿಯಾಗಿ ನೀಡಿ, ಆಹಾರ ಪದಾರ್ಥಗಳನ್ನು ನಾಲ್ದೆಸೆಗಳಲ್ಲೂ ಎರಚಿದನು. ದಿನಾಲು ಇದೇ ವಿಧಿ ಸಾಗಿತು. ಆಗ ಅವನು ಆ ಹೊಸ ಸಹಾಯಕನಿಗೆ, 'ಎಲೈ ವಿದ್ಯುತ್ ಪ್ರಭನೇ, ನೀನೀ ಪೂಜೆಯನ್ನು ಸ್ವೀಕರಿಸಬೇಕು, ಎಂದು ಅನ್ನುತ್ತಿರು', ಎಂದು ಹೇಳಿದನು.[193] ಕೊನೆಗೆ ಅವರು ಯಶಪಡೆದರು.

193. v. 3. 207. ವಿದ್ಯುತ್‌ಪ್ರಭಾ ಇವಳು ಒಬ್ಬ ಯಕ್ಷ ರಾಜನ ಮಗಳಾಗಿದ್ದಳು.

'ಕಥಾಸರಿತ್ಸಾಗರ'ದ v. 2. 81 ದಲ್ಲಿ ಸೋಮದೇವನು ಒಬ್ಬ ಜಟಾಧಾರಿ, ಭಸ್ಮವನ್ನು ಬಳಿದುಕೊಳ್ಳುವವ ಹಾಗೂ ಶಿವನ ಹಾಗೆ ತನ್ನ ಹಣೆಯ ಮೇಲೆ ಅರ್ಧಚಂದ್ರನನ್ನು ಬರೆದುಕೊಂಡ 'ಮಹಾವ್ರತಿಯಾದ ಕಾಪಾಲಿಕ'ನನ್ನು ಕುರಿತು ಪ್ರಸ್ತಾಪಿಸುತ್ತಾನೆ. ಇನ್ನೂ ಒಂದು ಕಥೆಯಲ್ಲಿ (iii. 5. 74 - 77) ವಾರಣಾಸಿಯ ಕೆಲವು ಜನ ಬೇಹುಗಾರ ಯತಿಗಳ ಒಂದು ತಂಡವು ಮಾರುವೇಷದಲ್ಲಿ 'ಕಾಪಾಲಿಕ ವ್ರತವನ್ನು ಆಚರಿಸುತ್ತಿತ್ತು : ಅವರಲ್ಲೊಬ್ಬನು ಗುರುವಿನ ಪಾತ್ರ ಧರಿಸಿದರೆ ಉಳಿದವರು ಅವನ ಶಿಷ್ಯನ ಪಾತ್ರಧಾರಿಗಳಾಗಿದ್ದರು. ತರುವಾಯ ಈ ಶಿಷ್ಯಂದಿರು 'ಈ ಗುರುವು ಭೂತ, ವರ್ತಮಾನ, ಭವಿಷ್ಯಗಳನ್ನು ಬಲ್ಲವನು' ಎಂದು ಹೇಳುತ್ತ, ಸುತ್ತಲ ಊರುಗಳಲ್ಲಿ ಅಲೆಯ ತೊಡಗುತ್ತಾರೆ. ಹಾಗೆಯೇ ಗುರು ಹೇಳಿದ ಭವಿಷ್ಯ ನಿಜವಾಗುವಂತೆಯೂ ನೋಡಿಕೊಳ್ಳುತ್ತಾರೆ. ತಪ್ಪು ಎಸಗದ ಈ ವಿಧಾನದಿಂದಾಗಿ ಆ ಬೇಹುಗಾರ ಯತಿ ಶೀಘ್ರದಲ್ಲಿಯೇ ಅರಸನ ಗಮನ ಹಾಗೂ ನಂಬಿಕೆಯನ್ನು ಗಳಿಸುತ್ತಾನೆ.

ಅರಸುಗುವರನಾದ ಬ್ರಹ್ಮದತ್ತನ ಬಗೆಗಿನ ಜೈನ ಆಖ್ಯಾಯಿಕೆಯು ದೇವೇಂದ್ರ ಗಣಿಯ ಹನ್ನೊಂದನೆಯ ಶತಮಾನದ 'ಉತ್ತರಾಧ್ಯಯನ'ದ ಭಾಷ್ಯ[194] ಹಾಗೂ ಹೇಮಚಂದ್ರನ (1088 - 1172) 'ತ್ರಿಷಷ್ಟಿಶಲಾಕಪುರುಷಚರಿತ್ರ'ಗಳಲ್ಲಿ[195] ಕಾಣಸಿಗುತ್ತದೆ. ಈ ಕಥೆಯ ಒಂದು ಹಂತದಲ್ಲಿ ಅರಸುಗುವರನ ಗೆಳೆಯನಾದ ವರಧನುವಿಗೆ ಪಟ್ಟಣದ ಚಾಂಡಾಲರ ತಂಡದಿಂದ ತನ್ನ ತಾಯಿಯನ್ನು ರಕ್ಷಿಸಲೆಂದು ಒಬ್ಬ ಕಾಪಾಲಿಕನ ಮಾರುವೇಷವನ್ನು ಧರಿಸಬೇಕಾಗಿ ಬಂದಿತು.

ಮಧ್ಯಯುಗದ ಇನ್ನೂ ಹಲವಾರು ಜೈನಸಾಹಿತ್ಯಕೃತಿಗಳಲ್ಲಿ ಕಾಪಾಲಿಕಯತಿಗಳನ್ನು ಕುರಿತಾದ ಕಥೆಗಳು ಹಾಗೂ ಅವರನ್ನು ಕುರಿತಾದ ಕಿರು ಉಲ್ಲೇಖಗಳಿವೆ. ಹರಿಭದ್ರನ (ಇಸವಿ 750 - 800) ಪ್ರಾಕೃತಭಾಷೆಯ 'ಸಮರಾಇಚ್ಚಕಹಾ'ದಲ್ಲಿ ಜೂಜುಕೋರನಾದ ಮಹೇಶ್ವರ ದತ್ತನು ಒಬ್ಬ ಕಾಪಾಲಿಕ ಹಾಗೂ ಹಾವಿನ ವಿಷ ಇಳಿಸುವ ಮಂತ್ರಗಾರನಾಗುತ್ತಾನೆ. (ಗಾರುಡ ಮಂತ್ರಗಳು)[196] 'ಪಾರ್ಶ್ವನಾಥ ಚರಿತ್ರೆ'ಯಲ್ಲಿ ಕಾಲಿದೇವತೆಯು ತನಗಾಗಿ ತಲೆಬುರುಡೆಗಳನ್ನು ಕಲೆ ಹಾಕಿ ತರುವ ಒಬ್ಬ ಕಾಪಾಲಿಕನನ್ನು ಮೆಚ್ಚಿ ಕೊಂಡಾಡುತ್ತಾಳೆ. ಅವಳಿಗೆ ಒಂದು ನೂರು ಎಂಟನೆಯ ತಲೆ ಬುರುಡೆ ದೊರಕುತ್ತಲೆ 'ಅವಳ ಉದ್ದೇಶ ಸಫಲ'ಗೊಳ್ಳಲಿದೆ.[197] ವಿನಯ ಚಂದ್ರನ 'ಮಲ್ಲಿನಾಥ ಚರಿತ್ರೆ'ಯು, ಒಬ್ಬ ಕಾಪಾಲಿಕನು ಒಂದು ಕಂಬಕ್ಕೆ ಕಟ್ಟಿ ನಿಲ್ಲಿಸಿದ

194. ಅನು. ಜೆ. ಜೆ. ಮೇಯರ್ (Meyer), 'Hindu Tales', pp. 23 ff.

195. ಅನು. ಎಚ್. ಎಮ್. ಜಾನ್ಸನ್, v. 335 ff.

196. ಹಂಡಿಕಿ ಅವರಿಂದ ಉದ್ಧೃತ p. 358.

197. ii. 288, ಎಮ್. ಬ್ಲೂಮಫೀಲ್ಡ್ ಇವರಿಂದ ಉದ್ಧೃತ, 'On False Asceticsa and Nuns in Hindu Fiction.' JAOS XLIV (1924), 203. ಈ ಹೆಸರಿನಿಂದ ಇನ್ನೂ ಹಲವಾರು ಕೃತಿಗಳಿವೆ. ನಮಗೆ ಬ್ಲೂಮಫೀಲ್ಡರ ಆಕರ ಕೃತಿಯನ್ನು ಪಡೆಯಲಾಗಿಲ್ಲ.

ಒಬ್ಬ ಯುವತಿಯ ಎದುರು 'ಒಂದು ಚೂಪಾದ ಕತ್ತಿಯನ್ನು ಕೈಯಲ್ಲಿ ಹಿಡಿದು ಬಲು ಆತುರತೆಯಿಂದ'ಕುಣಿಯುತ್ತಿರುವುದನ್ನು ರತ್ನಚಂದ್ರನೆಂಬ ಒಬ್ಬ ಅರಸುಗುವರನು ಹೇಗೆ ಕಂಡು ಹಿಡಿದ ಎಂಬುದನ್ನು ಕುರಿತು ಹೇಳುತ್ತದೆ. ಅರಸುಗುವರನು ಅವಳನ್ನು ಉಳಿಸಿ ಆ ಯತಿಯನ್ನು ಕೊಂದುಹಾಕುತ್ತಾನೆ.[198] 'ಕಥಾಕೋಶ'ವೆಂಬ ಕಾಲವನ್ನು ನಮೂದಿಸಿರದ ಒಂದು ಕಥಾಸಂಕಲನದ ದೇವಪಾಲನೆಂಬ ಅರಸನ ಕಥೆಯು ತಲೆಯ ಮೇಲೆ ಕಟ್ಟಿಗೆಯ ಹೊರೆಯನ್ನು ಹೊತ್ತುಕೊಂಡು ಹೊರಟಿದ್ದ ಒಬ್ಬ ಕಾಪಾಲಿಕನನ್ನು ಉಲ್ಲೇಖಿಸುತ್ತದೆ. ರಾಣಿಯು ಅವನನ್ನು ಕಂಡಕೂಡಲೆ ಅವನು ತನ್ನ ಹಿಂದಿನ ಜನ್ಮದ ಗಂಡನಾಗಿದ್ದನೆಂದು ಗುರುತಿಸುತ್ತಾಳೆ. ಅವಳು ಜಿನನನ್ನು ಪೂಜಿಸಿ ತಾನು ರಾಣಿಯಾಗಿದ್ದಳು. ಹಾಗೆ ಮಾಡಲು ನಿರಾಕರಿಸಿದ ಅವನು ಕಾಪಾಲಿಕನ 'ದುರವಸ್ಥೆ'ಯನ್ನು ಪಡೆದಿದ್ದನು.[199] 1500ಕ್ಕೆ ಮೊದಲಿಗೆ ಬರೆಯಲಾದ ಜಂಭಲದತ್ತನ 'ವೇತಾಳ ಪಂಚವಿಂಶತಿ'ಯ[200] ಪಾಠದಲ್ಲಿ ವಿಕ್ರಮಕೇಸರಿ ರಾಜನು ತಾನು ನೆರವು ನೀಡಲು ಒಪ್ಪಿಕೊಂಡ ಯತಿಯು ಕಾಪಾಲಿಕನೆಂದು ಕರೆಯಲ್ಪಟ್ಟಿರುವನು.ಅಂಗವಿಕಲನನ್ನಾಗಿ ಮಾಡಿದ ಒಬ್ಬ ಮನುಷ್ಯನ ಕಳೇವರವನ್ನು ಹೊಳೆಯ ದಡದ ಮೇಲಿನ ಮರಕ್ಕೆ ನೇತು ಹಾಕಲಾಗಿದ್ದಿತು. ಒಬ್ಬ ಕಾಪಾಲಿಕನು ಮಾಂತ್ರಿಕ ವಿಧಿಗಾಗಿ ಅದನ್ನು ಸ್ಮಶಾನಭೂಮಿಗೆ ಎತ್ತಿ ತರುವಂತೆ ರಾಜನನ್ನು ಕೇಳಿಕೊಳ್ಳುತ್ತಾನೆ. ಕಾಪಾಲಿಕ ಹೀಗೆನ್ನುತ್ತಾನೆ: 'ನೀನು ಅಲ್ಲಿಗೆ ಬಂದಾಗ ಪೂಜೆಯ ಹಲವಾರು ಪರಿಕರಗಳಿಂದ ಸಿದ್ಧವಿದ್ದ ಒಂದು ಮಂಡಲವನ್ನು ಕಾಣುವೆ. ನಾನು ಒಂದು ಕಳೇವರವನ್ನು ತೊಳೆದು ಮಹಾಮಂತ್ರದಿಂದ ದೇವತೆಗಳನ್ನು ಪೂಜಿಸುವೆನು. ಅದರಿಂದ ಒಂದು ಸಿದ್ಧಿಯನ್ನು ಪಡೆಯುವೆನು.'[201] ಆ ಯತಿಯ ಮುಖ್ಯ ಗುರಿ ರಾಜನನ್ನೇ ಬಲಿಕೊಡುವುದಾಗಿತ್ತು. ಆದರೆ ಆ ಮೃತ ವ್ಯಕ್ತಿ ಒಬ್ಬ ವೇತಾಳನಾಗಿದ್ದ ಕಾರಣ ಅವನು ರಾಜನನ್ನು ಈ ಬಗೆಗೆ ಎಚ್ಚರಿಸುತ್ತಾನೆ. ಅದರಿಂದಾಗಿ ರಾಜನ ಬದಲು ಕಾಪಾಲಿಕನನ್ನೇ ಕೊಲ್ಲಲಾಗುತ್ತದೆ.

ಈ ಯತಿಗಳನ್ನು ಕುರಿತಾದ ಹಲವಾರು ಸಂದರ್ಭಗಳು ಕಾವ್ಯದ ರೂಪಕ ಅಲಂಕಾರದ ಇಲ್ಲವೆ ಹೋಲಿಕೆಯ ಮಾದರಿಯವಾಗಿವೆ. ತ್ರಿವಿಕ್ರಮ ಭಟ್ಟನ (ಇಸವಿ 915) 'ನಲಚಂಪೂ'ಎಂಬ ಹೆಸರಾದ ದಂತ ಕಥೆಯ ಜೈನ ಮಾದರಿಯು ವಿಂಧ್ಯ ಪರ್ವತದ ಮರಗಳನ್ನು ಕಾಪಾಲಿಕರ ಖಟ್ವಾಂಗಕ್ಕೆ ಹೋಲಿಸುತ್ತದೆ.[202] ಹದಿನಾಲ್ಕನೆಯ ಶತಮಾನದ ಮುಸಲ್ಮಾನ

---

198. ಸಂ. ಹರಗೋವಿಂದದಾಸ ಮತ್ತು ಬಿಚಾರದಾಸ, i. 40-42. ಇದು ಇನ್ನೊಮ್ಮೆ ದಂಡಿಯ 'ದಶಕುಮಾರಚರಿತ' ಹಾಗೂ ಭವಭೂತಿಯ 'ಮಾಲತಿ ಮಾಧವ'ವದ ಅಧ್ಯಾಯಗಳನ್ನು ನೆನಪಿಗೆ ತರುವಂಥದಾಗಿದೆ.

199. ಸಂ. ಜೆ. ಎಲ್. ಶಾಸ್ತ್ರಿ, ಪು. 4.

200. ಸಂ. ಮತ್ತು ಅನು. M. B. Emeneau. ಈ ಆವರ್ತನೆಯ ಈ ಮೊದಲ ಪಾಠವು ಯತಿಯನ್ನು ಒಬ್ಬ ಕಾಪಾಲಿಕ ಎಂದು ವಿಶಿಷ್ಟವಾದ ಉಲ್ಲೇಖವನ್ನು ಮಾಡಿಲ್ಲ.

201. ಅದೇ ಅನು. ಪು. 11.

202. ಸಂ.. ದಾರ್ಗಾಪ್ರಸಾದ ಮತ್ತು ಶಿವದತ್ತ, ಪು. 165.

ಕವಿಯಾದ ಅಬ್ದುಲ ರಹಮಾನನು ತನ್ನ 'ಅಪಭ್ರಂಶ ಸಂದೇಶ ರಾಸಕ'ದಲ್ಲಿ ಮಡದಿಯ ಹತ್ತಿರದಲ್ಲಿಲ್ಲದ ಹಾಗೂ ಅಲೆಮಾರಿಯಾದ ಒಬ್ಬ ಗಂಡನ ಪ್ರತೀಕನೆಂದು ಒಬ್ಬ ಕಾಪಾಲಿಕನ ಬಗೆಗೆ ಉಲ್ಲೇಖಿಸುತ್ತಾನೆ.[203]

1150 ಹಾಗೂ 1160ರ ನಡುವಣ ಕಾಲದಲ್ಲಿ ಬರೆಯಲಾಗಿರುವ ಕಲ್ಹಣನ 'ರಾಜತರಂಗಿಣಿ'ಯಲ್ಲಿ ಈ ಬಗೆಯ ಹಲವಾರು ಕಾವ್ಯಾತ್ಮಕವಾದ ಅಪ್ರತ್ಯಕ್ಷ ಸೂಚನೆಗಳಿವೆ. ಕಾಶ್ಮೀರದಲ್ಲಿ ಬಿದ್ದ ಒಂದು ಬರದ ಕಾಲಕ್ಕೆ, 'ತಲೆ ಬುರುಡೆಯನ್ನು ಹಿಡಿದುಕೊಂಡಿರುವ ಕಾಪಾಲಿಕ ಯತಿಗಳ ಸಂಪ್ರದಾಯವನ್ನು ಪಾಲಿಸಲೆಂಬಂತೆ' ನೆಲವೆಲ್ಲ ತಲೆಬುರುಡೆಗಳ ತುಣುಕುಗಳಿಂದ ಮುಸುಕಿದ್ದುದಾಗಿ ಹೇಳಲಾಗಿದೆ.[204] ಕ್ರಿ.ಶ.1125 ರ ಸುಮಾರಿಗೆ ಚಕ್ರಧರನ (ವಿಷ್ಣು) ದೇವಾಲಯವನ್ನು ಸುಟ್ಟು ಹಾಕಲಾದ ಬಳಿಕ ಕಲ್ಹಣ ಹೀಗೆನ್ನುತ್ತಾನೆ : " ನೌನಗರದ ಡಾಮರನಾದ 'ಮಂಖ'ನು ಒಬ್ಬ ಕಾಪಾಲಿಕನಂತೆ ಶವಗಳಿಗಾಗಿ ಶೋಧಿಸಿದನು. ಅಲ್ಲದೆ ಅವುಗಳ ಮೈಮೇಲಿನ ವಸ್ತುಗಳಿಂದ ಬಹುಮಾನಿತನಾದನು " .[205] ಸಂಗ್ರಾಮರಾಜನ (1003 - 1028) ಸೇವೆಯಲ್ಲಿದ್ದ ಭಂಡಾರೇಶ್ವರನೆಂಬ ಕಂದಾಯವನ್ನು ಸುಲಿದುಕೊಳ್ಳುವ ಅಧಿಕಾರಿಯು 'ಶವಗಳ ಮೇಲೆ ಬದುಕುವವನಾದರೂ ತಮ್ಮ ಜನರಿಗೆಲ್ಲ ಜೀವನಾಂಶವನ್ನು ಒದಗಿಸುವ ಭಯಂಕರನಾದ ಕಾಪಾಲಿಕ'ನೊಂದಿಗೆ ಹೋಲಿಸಲಾಗಿದ್ದಾನೆ.[206]

'ರಾಜತರಂಗಿಣಿ'ಯ ಒಂದು ಅಧ್ಯಾಯವು ಹೆಚ್ಚಿನ ಕುತೂಹಲದಿಂದ ಕೂಡಿದುದಲ್ಲದೆ ಅದು ಪಾಶುಪತರು ಹಾಗೂ ಕಾಪಾಲಿಕರನ್ನು ಗುರುತಿಸುವಂತಿದ್ದು, ಅವರಿಬ್ಬರನ್ನೂ ಶ್ರೀಪರ್ವತದೊಂದಿಗೆ ಜೋಡಿಸುವಂತೆ ಕಾಣುತ್ತದೆ. ಇದು ಅರಸರಾದ ವಿಕ್ರಮಾದಿತ್ಯ, ಹರ್ಷ, ಇಮ್ಮಡಿ ಪ್ರವರಸೇನ ಹಾಗೂ ಮಾತೃಗುಪ್ತರನ್ನು ಕುರಿತ ಆಖ್ಯಾಯಿಕೆಯಾಗಿದೆ.[207] ತೋರಮಣನ ಮಗ ಹಾಗೂ ಕಾಶ್ಮೀರದ ಸಿಂಹಾಸನಕ್ಕೆ ವಾರಸುದಾರನಾದ ಪ್ರವರಸೇನನು ದೀರ್ಘಕಾಲ ಒಂದು ತೀರ್ಥಯಾತ್ರೆಗೆಂದು ತೆರಳಿದಾಗ ಸಿಂಹಾಸನವು ಬರಿದಾಗಿತ್ತು. ಆ ನಾಡಿನ ಸ್ವಾಭಾವಿಕವಾದ ಅಧಿಪತಿಯಾಗಿದ್ದ ವಿಕ್ರಮಾದಿತ್ಯ ಹರ್ಷನು ತನ್ನ ಓಲಗದ ಕವಿಯಾದ ಮಾತೃಗುಪ್ತನನ್ನು ಬರಿದಾದ ಈ ಹುದ್ದೆಯನ್ನು ಭರಿಸಲೆಂದು ಅಲ್ಲಿಗೆ ರವಾನಿಸಿದನು. ತೀರ್ಥಯಾತ್ರೆಯಲ್ಲಿರುವ ಪ್ರವರಸೇನನಿಗೆ ಈ ಅತಿಕ್ರಮಣದ ವಾರ್ತೆ ತಲುಪಿತು. ಹೀಗಾಗಿ ತಾನೇ ಮತ್ತೆ ಅರಸೊತ್ತಿಗೆಯನ್ನು ಪಡೆದುಕೊಳ್ಳಲೆಂದು ಅವನು ಹವಣಿಸಿದನು. ಅವನು

---

203. ಸಂ. ಮತ್ತು ಅನು. ಜೆ. ಪಿ. ಮುನಿ, ii. 86 ಮತ್ತು iii. 185.

204. ಅನು. ಎಮ್. ಎ. ಸ್ಟೀನ್, vol II. viii. 1211. ಸಂ. ಎಮ್. ಎ. ಸ್ಟೀನ್ (ಅದ್ರೇ ಕ್ರಮಾಂಕದ ಪದ್ಯ).

205. ಅನು. ಸ್ಟೀನ್, Vol. II, viii. 995.

206. ಅನು. ಸ್ಟೀನ್, Vol. II, vii. 44.

207. ಅನು. ಸ್ಟೀನ್, Vol. I, iii. 125-378.

ಶ್ರೀಪರ್ವತಕ್ಕೆ ಬಂದು ತಲುಪುತ್ತಲೇ 'ಪಾಶುಪತ ಯತಿಯ ಮಾರುವೇಷದ ಅಶ್ವಪಾದನೆಂಬ ಒಬ್ಬ ಸಿದ್ಧನು ಮೂಲಿಕೆಗಳಿಂದ ತಯಾರಿಸಿದ ಆಹಾರವನ್ನು ಅವನಿಗೆ ಇಕ್ಕಿದನು.' [208] ಈ ಅರಸುಗುವರನು ಕಳೆದ ಜನ್ಮದಲ್ಲಿ ತನ್ನ ಸೇವಕನಾಗಿದ್ದನಲ್ಲದೆ ಯಾವುದೊ ಒಂದು ಸನ್ನಿವೇಶದಲ್ಲಿ ಯತಿಯೊಬ್ಬನು ಈತನಿಗೆ ಒಂದು ವರವನ್ನು ನೀಡಿದ್ದನೆಂದು ಅಶ್ವಪಾದನು ಹೇಳಿದನು. ಪ್ರವರಸೇನನು ಒಂದು ರಾಜ್ಯಕ್ಕಾಗಿ ಕೇಳಿದ್ದನಂತೆ. ಆಗ ಶಿವನು ಪ್ರತ್ಯಕ್ಷನಾಗಿ ಮುಂದಿನ ಜನ್ಮದಲ್ಲಿ ಅವನೀ ಕೋರಿಕೆಯನ್ನು ಈಡೇರಿಸುವುದಾಗಿ ಭರವಸೆಯನ್ನಿತ್ತನಂತೆ. ಅಶ್ವಪಾದನು ಇಷ್ಟು ನುಡಿದು ಅದೃಶ್ಯನಾದನು. ಶಿವನ ಅನುಗ್ರಹವನ್ನು ಪಡೆಯಲೆಂದು ಅರಸುಗುವರನು ಶ್ರೀಪರ್ವತದ ಮೇಲೆ ಉಳಿದುಕೊಂಡು ತಪಸ್ಸನ್ನು ಆಚರಿಸಿದನು. ಕೊನೆಯಲ್ಲಿ, ಶಿವನು ತನ್ನ ಮಾತಿನಂತೆ ಅವನಿಗೆ ವರವಿತ್ತನು. ಮಾತೃಗುಪ್ತನು ಶಾಂತಿಯಿಂದ ಪ್ರವರಸೇನನಿಗೆ ಸಿಂಹಾಸನವನ್ನು ಬಿಟ್ಟುಕೊಟ್ಟನು. ಪ್ರವರಸೇನನ ದೀರ್ಘಕಾಲದ ಆಳ್ವಿಕೆಯ ತರುವಾಯದಲ್ಲಿ ಅಶ್ವಪಾದನು ಅರಸನಿಗಾಗಿ ಒಂದು ಓಲೆಯನ್ನು ಕೊಂಡೊಯ್ಯಲು ತನ್ನ ಹೊಸ ಶಿಷ್ಯ, ಕಾಶ್ಮೀರ ಬ್ರಾಹ್ಮಣನಾದ ಜಯಂತನಿಗೆ ಆಜ್ಞಾಪಿಸಿದನು. ಬಲು ದೂರದ ಪ್ರಯಾಣದಿಂದಾಗಿ ತಾನು ಬಳಲಿರುವುದರಿಂದ ಮತ್ತೆ ಕಾಶ್ಮೀರದ ಮರುಪ್ರಯಾಣ ಕಷ್ಟದ್ದು ಎಂದು ಅವನು ಅನ್ನುತ್ತಲೇ ಅಶ್ವಪಾದನು ಅವನಿಗೆ ಹೀಗೆಂದನು : ' ಹಾಗಿದ್ದರೆ ಇಂದು ಸ್ನಾನ ಮಾಡು. ಏಕೆಂದರೆ ಕಾಪಾಲಿಕ ಸಂಪ್ರದಾಯದ ನಾನು ಬ್ರಾಹ್ಮಣನಾದ ನಿನ್ನನ್ನು ಸ್ಪರ್ಶಿಸಿದ್ದೇನೆ.' [209] ಅಶ್ವಪಾದನು ಆಮೇಲೆ ಒಂದು ಕೆರೆಗೆ ಅವನನ್ನು ಎಸೆದನು. ಜಯಂತನು ಕಣ್ಣು ಬಿಟ್ಟಾಗ ಪ್ರವರಸೇನನ ಅರಮನೆಯ ಬಳಿ ನಿಂತಿದ್ದನು. ಕೂಡಲೆ ಅರಸನಿಗೆ ಓಲೆಯನ್ನು ತಲುಪಿಸಲಾಯಿತು. ಅದರಲ್ಲಿ ಅರಸನಿಗೆ, 'ಹೋಗು. ಶಿವನನ್ನು ತಲುಪು' [210] ಎಂಬ ಸೂಚನೆಯಿತ್ತು. ಒಂದು ಪ್ರಚಂಡವಾದ ಆಸ್ಫೋಟನೆಯಾಗಿ ಅದರ ಉಜ್ವಲವಾದ ಬೆಳಕಿನಲ್ಲಿ ಅರಸನು ಸ್ವರ್ಗಲೋಕವನ್ನು ತಲುಪಿದನು.

ಈ ಮೂರು ಜನ ಅರಸರನ್ನು ಸರಿಯಾಗಿ ಕಂಡು ಹಿಡಿಯಲೆಂದು ಹಲವು ಬಗೆಯ ಊಹೆಗಳನ್ನು ಕಟ್ಟಲಾಗುತ್ತದೆ. ಅವರನ್ನು ಕುರಿತು ಸುರಕ್ಷಿತವಾಗಿ ಹೇಳಬಹುದಾದ ಒಂದು ಸಂಗತಿಯೆಂದರೆ ಅವರು ಐದರಿಂದ ಏಳನೆಯ ಶತಮಾನದ ನಡುವಿನ ಕಾಲದಲ್ಲೆಲ್ಲೋ ಜೀವಿಸಿದ್ದರೆಂಬುದು. ಏನಿದ್ದರೂ ಅವರನ್ನು ಕುರಿತ ಆಖ್ಯಾಯಿಕೆಯು ಸಂದೇಹಾಸ್ಪದವಾದ ಪ್ರಮಾಣವನ್ನು ಆಧರಿಸಿದೆ. ನಮ್ಮ ದೃಷ್ಟಿಯಿಂದ ಮುಖ್ಯವೆನ್ನಿಸಿದ ಸತ್ಯಸಂಗತಿಯೆಂದರೆ ಶ್ರೀಪರ್ವತದ ಮೇಲೆ ನೆಲೆಸಿರುವ ಪಾಶುಪತಯತಿಯು ತನ್ನನ್ನು ಕಪಾಲಿನ್ ಸಂಪ್ರದಾಯದವನು ಎಂದುಕೊಳ್ಳುವುದು. ಕಲ್ಹಣನು ಇವೆರಡೂ ಸಂಪ್ರದಾಯಗಳನ್ನು ಮಾಡಿಕೊಟ್ಟ ಸ್ಪಷ್ಟವಾದ

---

208. ಅನು. ಸ್ಟೀನ್, Vol. I, iii. 267.
209. ಅನು. ಸ್ಟೀನ್, Vol. i, iii. 369.
210. ಅನು. ಸ್ಟೀನ್, Vol. I, iii. 373.

ಪರಿಚಯವು ಸಂದೇಹಾತೀತವಾಗಿ ಒಂದು ತಪ್ಪಾಗಿದ್ದು ಅದನ್ನು ಅರ್ಥಮಾಡಿಕೊಳ್ಳಬಹುದಾಗಿದೆ. ಏಕೆಂದರೆ, ಶ್ರೀಪರ್ವತವು ಪಾಶುಪತರ ಸಂತತಿಯಾದ ಕಾಳಾಮುಖರ ಮೂಲಕ ಅವರಂತೆಯೇ ಕಾಪಾಲಿಕರೊಂದಿಗೂ ಸಂಬಂಧಪಟ್ಟಿದ್ದು. ಈ ಮೂರು ಅರಸರ ಕಾಲದಲ್ಲಿ ಈ ಸ್ಥಾನವು ಬಹುಮಟ್ಟಿಗೆ ಕಾಪಾಲಿಕರ ನಿಯಂತ್ರಣಕ್ಕೆ ಒಳಪಟ್ಟಿರಲು ಸಾಕು. ಕಲ್ಹಣನ ಕಾಲದಲ್ಲಿ ಇದು ಕಾಳಾಮುಖ ಕೇಂದ್ರವಾಗಿತ್ತು. ಈ ಸಂಗತಿ ಅವನ ಗೊಂದಲಕ್ಕೆ ಕಾರಣವಾಗಿರಬೇಕು.

ಕಾಪಾಲಿಕನ ಸ್ಪರ್ಶವು ಮೈಲಿಗೆ ಎಂಬ ವಿಚಾರ ಹಲವು ಆಕರಗಳಲ್ಲಿ ಮತ್ತೆ ಮತ್ತೆ ತಲೆದೋರುತ್ತದೆ. ಅವರ ವಿಚಿತ್ರವಾದ ನಡೆವಳಿಕೆಗಳಿಂದಾಗಿ ಇದೇನು ಅಚ್ಚರಿಯ ಸಂಗತಿಯಲ್ಲ. ಕಾಶ್ಮೀರದ ಬಹುವಿದ್ಯಾ ಪಂಡಿತನಾದ ಕ್ಷೇಮೇಂದ್ರನು (ಇಸವಿ 1050 - 75) ಕಲಿಯುಗದ ಈ ತಾಂತ್ರಿಕ 'ಗುರುಗಳ' ಮೇಲೆ ಆಕ್ರಮಣವನ್ನು ಕೈಕೊಳ್ಳಲೆಂದು ಕಾಪಾಲಿಕರ ಜೊತೆಗೆ ಮದ್ಯಸೇವನೆಯನ್ನು ನಿಷೇಧಿಸಿರುವನು: ' ಮಡಿವಾಳರು, ನೇಕಾರರು, ಮೊದಲಾದ ಕಸಬಿನವರು ಹಾಗೂ ಕಾಪಾಲಿಕರೊಂದಿಗೆ ಜೊತೆಗೂಡಿ 'ಚಕ್ರಪೂಜೆ'ಯ [211] ವೇಳೆಗೆ ಒಂದು ಪಾತ್ರೆಯಲ್ಲಿ (ಮದ್ಯ) ಸೇವನೆ ಮಾಡುವುದು ; ಯಾವುದೇ ಅಳುಕಿಲ್ಲದೆ ಲೈಂಗಿಕ ಸುಖವನ್ನು ಪಡೆಯುವುದು ಹಾಗೂ (ಸಾಮಾನ್ಯವಾಗಿ) ವಿಲಾಸಿ ಜೀವನವನ್ನು ಸಾಗಿಸುವುದರಿಂದ ಮುಕ್ತಿ (ದೊರಕುವುದು) ಎಂದು ಈ 'ಗುರುಗಳು' ಸಾಧಿಸುತ್ತಾರೆ.'[212] ಕಾಪಾಲಿಕರ ಹೆಸರುಗಳನ್ನು ಕಸಬಿನವರ (ಶಿಲ್ಪಿನ್) ಪಟ್ಟಿಯಲ್ಲಿ ಸೇರಿಸಿದ್ದೇಕೆ ಎಂಬುದು ಸ್ಪಷ್ಟವಿಲ್ಲ. ಸೋಮದೇವನ 'ಯಶಸ್ತಿಲಕ'ವು (ಕ್ರಿ.ಶ.959) ಕಾಪಾಲಿಕನ ಸಂಪರ್ಕಕ್ಕೆ ಬಂದ ಜೈನ ಸಂನ್ಯಾಸಿಗೆ ಈ ಮುಂದಿನಂತೆ ಪ್ರಾಯಶ್ಚಿತ್ತವನ್ನು ಸೂಚಿಸಿದೆ : ' ಕಾಪಾಲಿಕ, ಮುಟ್ಟಾದ ಸ್ತ್ರೀ, ಚಾಂಡಾಲ, ಶಬರ ಇಲ್ಲವೆ ಇನ್ನಿತರ (ಇಂಥ ವ್ಯಕ್ತಿಗಳ) ಸಂಪರ್ಕಕ್ಕೆ ಬಂದವನು ಸ್ನಾನ, ಉಪವಾಸಗಳನ್ನು ಕೈಕೊಳ್ಳಬೇಕು ಮತ್ತು ಮಂತ್ರಗಳನ್ನು ಉಚ್ಚರಿಸಬೇಕು.'[213] ದೇವಣ್ಣಭಟ್ಟನು (ಇಸವಿ. 1200)

211. 'ಚಕ್ರ ಪೂಜೆ'ಯ ಕಾಲಕ್ಕೆ ಪರಿಣತರು ಪಂಚ 'ಮ' ಕಾರಗಳಾದ ಮದ್ಯ , ಮಾಂಸ, ಮೀನು, 'ಮುದ್ರಾ' ಹಾಗೂ ಲೈಂಗಿಕ ಸಂಭೋಗಗಳಲ್ಲಿ ಪಾಲ್ಗೊಳ್ಳಬೇಕು.

212. 'ದಶಾವತಾರ ಚರಿತ', ಸಂ. ದುರ್ಗಾಪ್ರಸಾದ ಮತ್ತು ಕೆ. ಪಿ. ಪರಬ, x. 26. ಕ್ಷೇಮೇಂದ್ರನ 'ದರ್ಶೋಪದೇಶ'ದಲ್ಲಿ (ಸಂ. ಎಮ್. ಕೆ. ಶಾಸ್ತ್ರಿ, iv. 3), ಒಬ್ಬಳು ಕುಂಟಣಗಿತ್ತಿಯಲ್ಲಿ 'ಯಮರೂಪಿ ಕಾಪಾಲಿಕನ ಎಲುವಿನ ಹಂದರದ ರೂಪವು' ಇತ್ತೆಂದು ಹೇಳಲಾಗಿದೆ. ಕ್ಷೇಮೇಂದ್ರನ 'ನರ್ಮಮಾಲಾ' (ಸಂ. ಎಮ್. ಕೆ. ಶಾಸ್ತ್ರಿ, iii. 15) ದಲ್ಲಿ ಒಬ್ಬ ಮಹಾವ್ರತಿಯು ಕೆಲವು ಜನ ಪಾಷಂಡಿಗಳು ಹಾಗೂ ಘಟಿಂಗರೊಡನೆ ಕಾಣಿಸಿಕೊಳ್ಳುತ್ತಾನೆ.

213. vi. ಹಂಡಿಕಿ ಅವರಿಂದ ಉದ್ಧೃತ, ಪು. 356 (ನನ್ನ ಅನುವಾದ). ಇದೇ ಕೃತಿಯಲ್ಲಿ ಬೇರೆಡೆ ಸೋಮದೇವನು ತನ್ನ ಒಬ್ಬ ಕೆಟ್ಟಮನುಷ್ಯನಾದ ಮಂತ್ರಿಯೆಂದರೆ 'ಧಾರ್ಮಿಕ ಭಿಕ್ಷುಕರು, ಹಾಪಾಡಿಗರು, ಕಾಪಾಲಿಕರು, ಗಾರುಡಿಗರು ಹಾಗೂ ಪಶ್ಯಾ ಠಕ್ಕರಿಂದ ಈ ಪ್ರಪಂಚದಲ್ಲಿ ಯಾರ ಕೀರ್ತಿಯನ್ನು ಹಬ್ಬಿಸಲಾಗುವುದೋ' ಅಂಥವನೆಂದು ಬಣ್ಣಿಸುತ್ತಾನೆ. (iii, 183, ಅನು. ಹಂಡಿಕಿ, ಪು. 66.)

'ಷಟ್‌ತ್ರಿಂಶನ್ಮತ' ದಿಂದ ಇದೇ ಬಗೆಯ ಪರಿಚ್ಛೇದವನ್ನು ಉದ್ಧರಿಸುತ್ತಾನೆ: 'ನಿಷೇಧಿಸಲಾದ ಕೃತ್ಯಗಳನ್ನು ಎಸಗುವ ಬೌದ್ಧರು, ಪಾಶುಪತರು, ಜೈನರು, ಲೋಕಾಯತಿಕರು, ಕಾಪಿಲರು ಅಥವಾ ಬ್ರಾಹ್ಮಣರನ್ನು ಸ್ಪರ್ಶಿಸುವವನು ತಾನುಟ್ಟ ಬಟ್ಟೆಗಳೊಡನೆ ನೀರಿಗೆ ಇಳಿಯತಕ್ಕದ್ದು. ಕಾಪಾಲಿಕರ ಸಂಪರ್ಕ ಬಂದಾಗ ಪ್ರಾಣಾಯಾಮವನ್ನು ವಿಧಿಸಲಾಗಿದೆ.'[214] 'ಉಶನ ಸಂಹಿತೆ'ಯು ಯಾರ ಜೊತೆಗೆ ಆಹಾರವನ್ನು ಸೇವಿಸಬಾರದೊ ಅಂಥವರ ಪಟ್ಟಿಗೆ ಕಾಪಾಲಿಕರನ್ನು ಸೇರಿಸಿದೆ.[215]

ಸಾಕಷ್ಟು ಮುಂದಿನ ಕಾಲದ ಎರಡು ಕೃತಿಗಳಾದ 'ಬಾರ್ಹಸ್ಪತಿ ಸೂತ್ರ'ಹಾಗೂ ಹದಿನಾಲ್ಕನೆಯ ಶತಮಾನದ ಹರಿಭದ್ರನ 'ಷಡ್ದರ್ಶನ ಸಮುಚ್ಚಯ'ವನ್ನು ಕುರಿತಾದ ಗುಣರತ್ನನ ಭಾಷ್ಯವು ಕಾಪಾಲಿಕ ಸಂಪ್ರದಾಯದ ಸೌಖ್ಯತತ್ವವಾದದ ಬದಿಗೆ ಒತ್ತು ನೀಡುತ್ತದೆ. ಕಾಪಾಲಿಕರು ಮದಿರೆ, ಮಾಂಸ, ಹಾಗೂ ಅಕ್ರಮ ಸಂಭೋಗಗಳನ್ನು[216] ಭೋಗಿಸುವ ನಾಸ್ತಿಕರಂತೆ ಅಥವಾ ಲೋಕಾಯತರಂತೆ ಇರುವರೆಂದು ಅವನು ಸಾಧಿಸುತ್ತಾನೆ. 'ಬಾರ್ಹಸ್ಪತಿ ಸೂತ್ರವು' ಕಾಪಾಲಿಕರನ್ನು ಲೋಕಾಯತರಿಂದ ವಿಂಗಡಿಸುತ್ತದಾದರೂ ಅದು ಗುಣರತ್ನನ ಅಪಾದನೆಯಾದ ವಿಷಯಲಂಪಟತೆಯನ್ನು ಬೆಂಬಲಿಸುತ್ತದೆ.[217]

ಹದಿನಾಲ್ಕನೆಯ ಶತಮಾನದ ಕೃತಿಯಾದ ಉಮಾಪತಿಯ 'ಶಿವ ಪ್ರಕಾಶಮ್'ದಲ್ಲಿ ಏಳು ಸಂಪ್ರದಾಯಗಳನ್ನು ಕುರಿತು ಸಂಕ್ಷಿಪ್ತವಾದ ಒಂದು ವ್ಯಾಖ್ಯಾನವಿದ್ದು, ಮುಕ್ತಿಯೆಂದರೆ ಮಲವನ್ನು ನಿವಾರಿಸಿಕೊಳ್ಳುವುದು, ಎಂದು ಅದು ಅಭಿಪ್ರಾಯಪಡುತ್ತದೆ. ಈ ಸಂಪ್ರದಾಯಗಳಲ್ಲಿ ಪಾಶುಪತ, ಮಹಾವ್ರತಿನ್ ಹಾಗೂ ಕಾಪಾಲಿಕ ಸಂಪ್ರದಾಯಗಳನ್ನು ಒಳಗೊಳ್ಳಲಾಗಿದೆ.[218] ಮಹಾವ್ರತಿನ್ ಎಂಬ ಪದವು ಇಲ್ಲಿ ಬಹುಮಟ್ಟಿಗೆ ಕಾಳಾಮುಖರನ್ನು ನಿರ್ದೇಶಿಸುತ್ತದೆ. ಬೇರೊಂದು ತಮಿಳು ಕೃತಿಯಾದ 'ತಿರುವೊರ್ರಿಯೂರ ಪುರಾಣಮ್'ಎನ್ನುವುದು ಮಹಾವ್ರತಿನ್ನರನ್ನು ಇದೇ ಅರ್ಥದೊಡನೆ ಸೂಚಿಸುವಂತಿದೆ.[219] ಹನ್ನೆರಡನೆಯ ಶತಮಾನದ ಲೇಖಕನಾದ ಶೇಕ್ಕಿಳಾರ್ ಇವನು ಒಬ್ಬ ಮಹಾವ್ರತಿನ್ ಯತಿಯನ್ನು ಕುರಿತು ಬಣ್ಣಿಸುತ್ತಿದ್ದು ಅವನು ಒಬ್ಬ ಕಾಪಾಲಿಕ ಇಲ್ಲವೆ ಕಾಳಾಮುಖನಾಗಿರಲು ಸಾಕು. ಈ ಯತಿಯೆಂದರೆ ಮಾರುವೇಷದಲ್ಲಿರುವ ಶಿವನೇ ಸರಿ. ಅವನ ಹಣೆಯ ಮೇಲೆ ಭಸ್ಮದ ಮೂರು ಸಮಾಂತರವಾದ

214. 'ಸ್ಮೃತಿ ಚಂದ್ರಿಕಾ', ಸಂ. ಎಲ್. ಶ್ರೀನಿವಾಸಾಚಾರ್ಯ, II,310.

215. ಅಧ್ಯಾಯ, iv vss. 23-26, ಡಿ. ವಿ. ಮಹಾಲಿಂಗಮ್‌ರಿಂದ ಉದ್ಧೃತ, 'The Pāśupatas in South India,' JIH XXVII (1949), 46.

216. ಸಂ. L. Sauli, ಪು. 300.

217. ಸಂ. ಮತ್ತು ಅನು. ಎಫ್. ಡಬ್ಲ್ಯು. ಥಾಮಸ್, ii. 6, 9, 13, 18-21.

218. ಅನು V. Hoisington, JASO, IV (1854), 125-244.

219. ನೋಡಿ ವಿ. ರಾಘವನ್, 'Tiruvoṛṛiyur Inscription of Chaturānana Pandita: 20th year of Kṛishṇa III', EI, XXVII, 300.

ಅಡ್ಡ ಪಟ್ಟಿಗಳನ್ನು ಬಳಿಯಲಾಗಿದೆ. ಎಲುವಿನ ಮಣಿಗಳ ಸರದಿಂದ ಕಟ್ಟಲಾದ ಚಂಡಿಕೆಯನ್ನುಳಿದು ಅವನ ತಲೆಯನ್ನೆಲ್ಲ ಬೋಳಿಸಲಾಗಿದೆ; 'ಕುಂಡಲ'ಗಳೆಂಬ ಕಿವಿಯುಂಗುರಗಳನ್ನು ತೊಟ್ಟಿದ್ದಾನೆ; ಕೊರಳಲ್ಲೊಂದು ಹಾರ ಇಲ್ಲವೆ ಹೊಳಪಿನಿಂದ ಕೂಡಿದ ಎಲುವಿನ ಮಣಿಗಳಿಂದ ತಯಾರಿಸಲಾದ ಮಾಲೆ ಹಾಗೂ ಯೋಗಮುದ್ರೆಗಳಿಗೆಂದು ಇರುವ ಒಂದು ಪಟ್ಟಿಯಿದೆ; ಅವನ ಜನಿವಾರ ಎಂದರೆ ಕಪ್ಪು ಕೂದಲುಗಳ ಒಂದು ಹಗ್ಗವಾಗಿದೆ; ಅವನ ಮೈಗೆ ಭಸ್ಮವನ್ನು ಬಳಿಯಲಾಗಿದೆ. ಇವೆಲ್ಲವುಗಳಿಗಾಗಿ ಅವನ ಬಳಿ ಒಂದು ಜೋಳಿಗೆಯಿದೆ. ಅವನ ಒಂದು ಮುಂಗೈಗೆ ದಾರದಿಂದ ಒಂದು ಮಣಿಯನ್ನು ಕಟ್ಟಲಾಗಿದೆ. ಒಂದು ಕೌಪೀನ ಮಾತ್ರದಿಂದ ಅವನ ಜನನೇಂದ್ರಿಯವನ್ನು ಮರೆಮಾಚಲಾಗಿದೆ, ಅಲ್ಲದೆ ಅವನ ಪಾದಗಳ ಮೇಲೆ ಮಹಾನತೆಯನ್ನು ತೋರಿಸುವ ಐದು (ಮುದ್ರೆಗಳು) ಲಕ್ಷಣಗಳು ಹೊಳೆಯುತ್ತಿವೆ.[220]

ಕಾಪಾಲಿಕರನ್ನು ಕುರಿತಾದ ಮಹತ್ವದ ಉಲ್ಲೇಖಗಳು ಮೂರು ಪ್ರಾಚೀನ ಬಂಗಾಲಿ ಗೀತೆಗಳಲ್ಲಿ (ಚರ್ಯಾಪದ) ಇರುವುದು ಕಾಣುತ್ತದೆ. ಇವುಗಳನ್ನು ಬರೆದವನೆಂದರೆ ಸಹಜಿಯಾ ಬೌದ್ಧ ಯತಿಯಾದ ಕಾಣ್ಹಪಾದ (ಸಂಸ್ಕೃತ, ಕೃಷ್ಣಪಾದ) ಎನ್ನುವವನು.[221] ಕಾಣ್ಹನು ವಾಸ್ತವವಾಗಿ ತನ್ನನ್ನೇ ಒಬ್ಬ ಕಾಪಾಲಿಕನೆಂದು ಕರೆದುಕೊಳ್ಳುತ್ತಾನೆ. ಆದರೆ ಅವನು ಆ ಪದವನ್ನು ಒಂದು ಪ್ರತೀಕವಾಗಿ ಬಳಸಿರುವುದರ ಸಾಧ್ಯತೆ ಆ ಸಂದರ್ಭದಿಂದಾಗಿ ಕಂಡು ಬರುತ್ತದೆ. ಎರಡು ಕಾಪಾಲಿನ್ ಹಾಡುಗಳು ಡೊಂಬಿಯನ್ನು (ಅಗಸಗಿತ್ತಿ) ಉದ್ದೇಶಿಸಿ ಬರೆದವುಗಳು. ಪ್ರತೀಕದ ಪದಗಳಲ್ಲಿ ಅವಳು ನೈರಾತ್ಮ್ಯದೇವಿ (ಆತ್ಮದ ಇಲ್ಲದಿರುವಿಕೆ) ಹಾಗೂ ಹಿಂದೂ ಕುಲಕುಂಡಲಿನಿ ಶಕ್ತಿಯ ಬೌದ್ಧ ಪ್ರತಿರೂಪಳು.[222] ಕಾಣ್ಹನು ಕಾಪಾಲಿನ್ ಯೋಗಿಯ ರೂಪದಲ್ಲಿ ಡೊಂಬಿಯ ಇನಿಯ ಇಲ್ಲವೆ ಗಂಡನಾಗುತ್ತಾನೆ :

> ನಗರದ ಹೊರಬದಿಗೆ ಎಲೆ ಡೊಂಬಿ, ನಿನ್ನ ಗುಡಿಸಲು ಇದೆ; ನೀನು ಬರಿ ಬ್ರಾಹ್ಮಣ ಹಾಗೂ ತಲೆಗೆ ಮುಂಡನ ಮಾಡಿಕೊಂಡವರನ್ನಷ್ಟೇ ಸ್ಪರ್ಶಿಸುತ್ತ ಸಾಗುವಿ. (ಆದರೆ ನೀನು ಅವರಿಗಾಗಿ ಎಂದಿಗೂ ತೆರೆದುಕೊಳ್ಳುವುದಿಲ್ಲ). ಎಲೆ ಡೊಂಬಿ, ನಾನು ನಿನಗೆ ಜೊತೆಯಾಗಿ ಇರುವೆ. ಈ ಉದ್ದೇಶದಿಂದಲೇ ಯಾವುದೇ ಬಗೆಯ ಜಿಗುಪ್ಸೆಯಿಲ್ಲದ, ಬೆತ್ತಲೆ ಕಾಪಾಲಿಕ ನಾನಾಗಿರುವೆ - ------ನೀನು ಡೊಂಬಿ, ನಾನೊಬ್ಬ ಕಾಪಾಲಿ, ನಿನಗಾಗಿ ನಾನು ಎಲುವುಗಳ

---

220. ರಂಗಸ್ವಾಮಿಯವರ 'The Religion and Philosophy of Tēvāram', I, 385.

221. ಸಂ. ಮತ್ತು ಅನು. ಎಮ್. ಶಹಿದುಲ್ಲಾಹ್, 'Les chants mystiques, songs no. 10,11 and 18 (ಶಾಸ್ತ್ರೀಯ ಕ್ರಮಾಂಕಗಳು). ಎಸ್. ದಾಸಗುಪ್ತಾ ಅವರು ತಮ್ಮ 'Obscure Religious Cults' ದಲ್ಲಿ ಕಾಣ್ಹನ ಕೆಲವು ಗೀತೆಗಳನ್ನು ಇಂಗ್ಲಿಷ್‌ನಲ್ಲಿ ಅನುವಾದಿಸಿರುವರು.

222. ನೋಡಿ ದಾಸಗುಪ್ತಾ, ಅದೇ pp. 96-106.

> ಈ ಕೊರಳ ಹಾರವನ್ನು ತೊಟ್ಟಿರುವೆ. ಡೊಂಬಿ ಕೆರೆಯನ್ನು ಹಾಳುಗೆಡವುತ್ತಾಳೆ, ಅಲ್ಲದೆ ತಾವರೆಗಳ ದೇಟುಗಳನ್ನು ತಿಂದು ಹಾಕುತ್ತಾಳೆ. ನಿನ್ನನ್ನು ಕೊಲ್ಲುವೆನು, ಎಲೆ ಡೊಂಬಿ, ನಿನ್ನ ಪ್ರಾಣವನ್ನು ಕಿತ್ತುಕೊಳ್ಳುವೆನು.[223]

ಸಾಂಪ್ರದಾಯಿಕರು ಐಹಿಕ ಡೊಂಬಿಯನ್ನು ಸ್ಪರ್ಶಿಸಕೂಡದು. ದೈವಿಕ ಡೊಂಬಿಯಾದರೋ ಅವರ ಎಟುಕಿನವಳಲ್ಲ. ಅವಳು ನಗರದ ಹೊರವಲಯದಲ್ಲಿ (ಇಂದ್ರಿಯಗಳ ವಿಶ್ವ) ವಾಸಿಸುವವಳು. ಅವಳನ್ನು ಕೊಲ್ಲದಿದ್ದರೆ (ಅಂದರೆ, ನಿಯಂತ್ರಿಸದಿದ್ದರೆ) ಅವಳು ಕೆರೆಯನ್ನು (ದೇಹ) ಹಾಳುಮಾಡುತ್ತಾಳೆ. ಅಲ್ಲದೆ ಕಮಲದ ದೇಟುಗಳನ್ನು (ಬೋಧಿಚಿತ್ತ ಅಥವಾ ಜ್ಞಾನೋದಯಗೊಂಡ ಮನಸ್ಸು) ತಿಂದು ಹಾಕುತ್ತಾಳೆ.[224] ಎರಡನೆಯ ಗೀತೆ ಇದೇ ಬಗೆಯ ಭಾವವನ್ನು ವ್ಯಕ್ತಪಡಿಸುತ್ತದೆ. :

> ಎಲೆ ಡೊಂಬಿ, ನಿನ್ನ ಜಾಣ್ಮೆ ಯಾವ ತೆರನದ್ದು? ಶ್ರೀಮಂತ ಪ್ರಭುವರ್ಗದವರು ನಿನ್ನ ಹೊರಗಿದ್ದರೆ ಕಾಪಾಲಿಗಳು ಒಳಗಿರುವರು -----ನೀನು ಕಾಮಚಾಂಡಾಲಿನಿಯಾಗಿರುವಿ -ಡೊಂಬಿಗಿಂತ ದೂರ್ತಳೂ, ನಿಷ್ಠೆಯಿಲ್ಲದವಳೂ ಆದ ಬೇರಾವ ಹೆಣ್ಣು ಕೂಡ ಇರಲಿಕ್ಕಿಲ್ಲ.[225]

'ಶ್ರೀಮಂತ ಪ್ರಭುವರ್ಗದವ'ರೆಂದರೆ (ಕುಲೀನ ಜನ) ಸಾಂಪ್ರದಾಯಿಕರಾದ ಯತಿಗಳು. ಕಾಪಾಲಿನ್ನರು ಮಾತ್ರ ನೈರಾತ್ಮ್ಯವನ್ನು ಸಾಧಿಸಬಲ್ಲರು.[226]

ಮೂರನೆಯ ಗೀತೆಯಲ್ಲಿ ಕಾಣ್ಹನು ನಿಜವಾದ ಕಾಪಾಲಿನ್ನನ ತಿರುಳನ್ನು ಪ್ರತೀಕ ರೂಪದಿಂದ ವಿವರಿಸುತ್ತಾನೆ : 'ಯೋಗಿ ಕಾಣ್ಹನು ಒಬ್ಬ ಕಾಪಾಲಿಕನಾಗಿರುವನು. ಅವನು ಯೋಗ ಸಾಧನೆಗಳನ್ನು ಆರಂಭಿಸಿರುವನು. ಅವನು ತನ್ನ ದೇಹದ ನಗರದಲ್ಲಿ ಅದ್ವೈತರೂಪದಿಂದ ವಿಹರಿಸುತ್ತಿರುವನು.'[227] ಅವನ ಕಾಲ್ಕಡಗ ಹಾಗೂ ಗಂಟೆ (ಘಂಟಾ) ಎಂದರೆ 'ಎಲ್ಲ ಬಗೆಯ ದ್ವೈತ ತತ್ವ ಸಿದ್ಧಾಂತಗಳಾದ 'ಆಲಿ' ಮತ್ತು 'ಕಾಲಿ'ಗಳು.[228] ಅವನ

223. ಗೀತೆ ಸಂ. 10, ಅನು. ಅದೇ pp. 103-104.

224. ಅದನ್ನೇ ನೋಡಿ, ಪು. 104.

225. ಗೀತೆ ಕ್ರ. 18, ಅನು. ಅದೇ, pp. 104-105.

226. ಅದೇ.

227. ಗೀತೆ ಕ್ರ. 11, ಅನು. ಅದೇ. ಪು.90. ಇಲ್ಲಿ ಸಂಸ್ಕೃತ ಭಾಷ್ಯಕಾರನು ಕಾಪಾಲಿಕ ಪದದ ವ್ಯುತ್ಪತ್ತಿಯನ್ನೂ ಹೀಗೆ ಹೇಳಿದುದನ್ನು ದಾಸಗುಪ್ತರು ಗಮನಿಸುತ್ತಾರೆ : 'ಕಂ ಮಹಾಸುಖಂ ಪಾಲಯತೀತಿ ಕಾಪಾಲಿಕ:','ಮಹಾಸುಖ ಎನ್ನಿಸಿದ ಕ (ಅಕ್ಷರವನ್ನು) ಪೋಷಿಸುವವನು ಕಾಪಾಲಿಕನು'.

228. ಅದೇ ಪು. 58. ದಾಸಗುಪ್ತರು ಈ ಗೀತೆಯನ್ನು pp. 57-58 ರ ಮೇಲೆ ಸಾರಾಂಶ ರೂಪದಲ್ಲಿ ನೀಡಿದ್ದಾರೆ.

ಕಿವಿಯುಂಗುರಗಳೆಂದರೆ (ಕುಂಡಲ) ಸೂರ್ಯ ಮತ್ತು ಚಂದ್ರರು (ಉಪಾಯ ಮತ್ತು ಪ್ರಜ್ಞಾ ಇವು ಶಿವ ಮತ್ತು ಶಕ್ತಿಗೆ ಸರಿಸಾಟಿಯಾದವುಗಳು). ಅವನು ತನ್ನ ಮೈಗೆ ಬಳಿದುಕೊಳ್ಳುವ ಭಸ್ಮವೆಂದರೆ ಭಾವೋದ್ರೇಕ (ರಾಗ), ಜಿಗುಪ್ಸೆ ('ದೇಸ', ಸಂಸ್ಕೃತದ ದ್ವೇಷ) ಹಾಗೂ ದೋಷ (ಮೋಹ)ಗಳ ಭಸ್ಮ. ಪರಮ ಮೋಕ್ಷವು ಅವನ ಕೊರಳ ಸರ. ಈ ಗೀತೆಯು ತಾಂತ್ರಿಕರ 'ಉದ್ವೇಶಪೂರಿತವಾದ ನುಡಿಯನ್ನು' ಬಳಸಿಕೊಂಡು (ಸಂಧಾ ಭಾಷಾ) ಸ್ವವೈರುಧ್ಯಗಳಿಂದ ಕೂಡಿದ ಒಂದು ಪದ್ಯದೊಂದಿಗೆ ಹೀಗೆ ಮುಕ್ತಾಯಗೊಳ್ಳುತ್ತದೆ : 'ಅಯಂತ ತುವಿ ಲ ಬೆಲ್ಲೆಮೇರೆ (=/e souffle) ಲೆ ಬೀಯುಫ್ರೆರೆ ಎಟ್ ಲ ಬೆಲ್ಲೆ ಸೊಯೆಯುರ್ [ = the senses, ಇಂದ್ರಿಯಗಳು] ಡಾನ್ಸ ಲ ಮೇಸನ್ ಎಟ್ ಅಯಂತ ತುವಿ ಲ ಮೇರೆ (=illusion ಭ್ರಮೆ) ಕಾಣ್ಹ ಎಸ್ಟ್ ದೆವೆನು ಪೊರ್ಟೆಯುರ ಡೆ ಕ್ರೇನ್ಸ್ [Kabāli, = Kapalin ಕಬಾಲಿ=ಕಪಾಲಿನ್].'[229]

ಈ ಗೀತೆಗಳಲ್ಲಿ ಕಾಪಾಲಿನ್‌ನು ಪರಿಪೂರ್ಣವಾದ ಅವಸ್ಥೆಯನ್ನು ತಲುಪಿದ ಯೋಗಿಯ ಪ್ರತೀಕನಾಗಿದ್ದಾನೆ. ಇದಕ್ಕೆ ಕಾರಣವೆಂದರೆ ಐಹಿಕ ಮಟ್ಟದಲ್ಲಿ ಅವನು ಎಲ್ಲಕ್ಕೂ ಹೆಚ್ಚು ಹೀನಾಯಕ್ಕೆ ಒಳಗಾದ ಯತಿ ಎನ್ನಿಸಿರುವುದು. ಅವನ, ಅವನ ತಾಯಿ ಹಾಗೂ ಬಳಗದ ಹಲವರ ಕೊಲೆ ನಡೆದುದು ಸೂಚಿಸುವ ಸಂಗತಿಯೆಂದರೆ ಕಾಣ್ಹನಿಗೆ ಕೂಡ ಕಪಾಲಿನ್ ಹಾಗೂ ನ್ಯಾಯಗ್ರಂಥಗಳಲ್ಲಿರುವ ಬ್ರಹ್ಮಹತ್ಯಾ ವ್ರತದ ನಡುವಣ ಸಂಬಂಧವು ತಿಳಿದಿತ್ತೆಂಬುದು.[230] ಏನಿದ್ದರೂ, ಯಾರೇ ಆಗಲಿ, ಕಾಣ್ಹನು ಪ್ರತ್ಯಕ್ಷದಲ್ಲಿ ತನ್ನ ತಾಯಿ ಹಾಗೂ ಬಳಗದವರನ್ನು ಕೊಂದನೆಂದು ನಂಬಕೂಡದಲ್ಲದೆ ವಾಸ್ತವದಲ್ಲಿ ಅವನೊಬ್ಬ ಕಾಪಾಲಿಕನಾಗಿರುವ ಸಾಧ್ಯತೆ ಕೂಡ ತೀರ ಕಡಿಮೆ. ಡೊಂಬಿಯಂತೆಯೇ ಕಪಾಲಿನ್ನನೂ ಕೂಡ ಪರಸ್ಪರ ವಿರುದ್ಧ ಸಂಗತಿಗಳ ಅನನ್ಯತೆಯನ್ನು ಗುರುತಿಸುವ ಆಧ್ಯಾತ್ಮಿಕ ಸಿದ್ಧಾಂತದ ಪ್ರತೀಕರೂಪದ ಒಬ್ಬ ಪ್ರತಿನಿಧಿಯಾಗಿದ್ದಾನೆ. ಕಾಣ್ಹನು ಈ ಸಿದ್ಧಾಂತಕ್ಕೆ ಖಚಿತವಾದ ಒಂದು ಮೂರ್ತರೂಪವನ್ನು ನೀಡಿರುವಂತೆಯೇ ಅಕ್ಷರಮಟ್ಟಿಗೆ ತಾನು ಒಬ್ಬ ಕಾಪಾಲಿಕನ ವೇಷ ಹಾಗೂ ಅಭ್ಯಾಸಗಳನ್ನು ಮೈಗೂಡಿಸಿಕೊಂಡಿರುವ ಸಾಧ್ಯತೆಯೂ ಇಲ್ಲದಿಲ್ಲ.[231] ಕಾಪಾಲಿಕ

229. ಅನು ಶಹೀದುಲ್ಲಾಹ್, ಪು. 118.

230. ಕೆಳಕ್ಕೆ ನೋಡಿ, pp. 73-82.

231. ಕಾಣ್ಹಪಾದನನ್ನು ಬಹಳಷ್ಟು ಸಲ ನಾಥಸಿದ್ಧನಾದ ಕಾನುಪಾ ಎಂದು ತಿಳಿಯಲಾಗುತ್ತದೆ. ಇದು ಸರಿಯಾಗಿದ್ದರೆ, ಆ ತಿಳಿವಳಿಕೆಯು ಕಾಣ್ಹನ ತಾಂತ್ರಿಕ ಬೌದ್ಧಮತ ಹಾಗೂ ಕಾಪಾಲಿಕರ ತಾಂತ್ರಿಕ ಶೈವಮತಗಳ ನಡುವಿನ ಅಂತರಕ್ಕೆ ಸೇತುವೆ ಕಟ್ಟುವಲ್ಲಿ ನೆರವು ದೊರೆಯಬಲ್ಲುದು. 'ಕಾಣ್ಹ' ಹಾಗೂ 'ಕಾನು' ಇವೆರಡೂ, ಸಂಸ್ಕೃತದ 'ಕೃಷ್ಣ' ಪದದ ಆಡುನುಡಿಯ ರೂಪಗಳು. 'ಕಾನುಪಾ' ಗುರುವನ್ನು 'ಜಾಲಂಧರಿಪಾ' ಎಂದು ಹೆಸರಿಸಲಾಗಿತ್ತು. ಕ್ರ. 36 ನೇ ಗೀತೆಯಲ್ಲಿ ಕಾಣ್ಹನು 'ಜಾಲಂಧರಿಪಾ'ನನ್ನು ತನ್ನ ಗುರು ಅಥವಾ ಒಬ್ಬ ಹಿಂದಿನ ಗುರು ಎಂದು ನಮೂದಿಸುತ್ತಾನೆ. ಈ ರೀತಿ ಗುರುತಿಸುವುದನ್ನು ಒಪ್ಪಿಕೊಳ್ಳುವತ್ತ ದಾಸಗುಪ್ತರ ಒಲವು ಇಲ್ಲದೆ ಹೋದರೂ ('Obscure ------ pp. 392-94) ನಮಗಂತೂ ಈ ಸಂಗತಿ ಹಟಮಾರಿತನದ್ದಾಗಿ ಕಾಣುತ್ತದೆ.

ವ್ರತ ಹಾಗೂ ಬ್ರಾಹ್ಮಹನ್‌ನ ಪ್ರಾಯಶ್ಚಿತ್ತಗಳ ನಡುವಣ ಸಂಬಂಧವು ಈ ಸಿದ್ಧಾಂತದ ಕಾರ್ಯವಿಧಾನಗಳಿಗೆ ತಾನೇ ಒಂದು ಉದಾಹರಣೆಯೆನ್ನಿಸಿದೆ.[232] ಈ ಬಗೆಯ ಸಂದರ್ಭಗಳಲ್ಲಿ ಹಲವು ಬಾರಿ, ಪ್ರತೀಕ ಹಾಗೂ ವಾಸ್ತವಗಳ ನಡುವಣ ಗಡಿರೇಖೆಯನ್ನು ನಿರ್ಧರಿಸುವುದು ಬಲು ಕಷ್ಟದ್ದೆನ್ನಿಸುತ್ತದೆ.

ಕಾಣ್ಹನು ಕಾಪಾಲಿಕರನ್ನು ಕುರಿತು ಉಲ್ಲೇಖಿಸಿದುದು ಐತಿಹಾಸಿಕ ದೃಷ್ಟಿಯಿಂದ ಮಹತ್ವದ್ದೆನ್ನಿಸಲು ಕಾರಣವೇನೆಂದರೆ ಬಂಗಾಲದಲ್ಲಿ ಜೀವಿಸಿದ ಈ ಯತಿಗಳನ್ನು ಕುರಿತಾದ ಎಲ್ಲಕ್ಕೂ ಹಿಂದಿನ ಕಾಲದ ಉಲ್ಲೇಖ ಇದಾಗಿದೆಯೆಂಬುದು. ಕಾಣ್ಹನ ಕಾಲವು ಅನಿರ್ದಿಷ್ಟವಾಗಿದ್ದರೂ ಅವನು ಹಾಗೂ 'ಸಹಜಿಯಾ ದೋಹಾ' ಮತ್ತು 'ಚರ್ಯಾಪದ'ಗಳ ಇನ್ನಿತರ ಲೇಖಕರು ಎಂಟರಿಂದ ಹನ್ನೆರಡನೆಯ ಶತಮಾನದಲ್ಲಿ ಆಳಿದ ಪಾಲರ ಕಾಲಕ್ಕೆ ಉತ್ಕರ್ಷಕ್ಕೆ ಬಂದಿರುವಂತೆ ಕಾಣುತ್ತದೆ.[233] ಕಾಣ್ಹ ಹಾಗೂ ಸಿದ್ಧಕಾನು ಇವರು ಒಂದೇ ವ್ಯಕ್ತಿಯಾಗಿರುವ ಹೆಚ್ಚಿನ ಸಾಧ್ಯತೆಯಿದೆ. ಹಾಗಿದ್ದರೆ ಹತ್ತನೆಯ ಶತಮಾನದ ಕೆಲಕಾಲದ ತರುವಾಯದಲ್ಲಿ ಅವನು ಬಾಳಿ ಬದುಕಿದಂತೆ ಕಾಣುತ್ತದೆ.[234]

❖ ❖ ❖

232. ಮುಂದೆ ನೋಡಿ, pp. 76-77.

233. ದಾಸಗುಪ್ತಾ, 'Obscure ------ ಪು. 9.

234. ಅದೇ, pp. 386-93.

# ಅಧ್ಯಾಯ - ೩

# ಕಾಪಾಲಿಕ ಸಂಪ್ರದಾಯ ಮತ್ತು ಸಿದ್ಧಾಂತ

## ಮಹಾವ್ರತ

ಕಾಪಾಲಿಕರು ಹಾಗೂ ಕೆಲಮಟ್ಟಿಗೆ ಕಾಳಾಮುಖರನ್ನು ಕುರಿತಾದ ಸಮಸ್ಯೆಗಳಲ್ಲಿ ಎಲ್ಲಕ್ಕೂ ಹೆಚ್ಚಿನ ಗೊಂದಲಕ್ಕೀಡು ಮಾಡುವ ಸಮಸ್ಯೆಯೆಂದರೆ ಪ್ರಾಯಶ್ಚಿತ್ತ ಇಲ್ಲವೆ ಹಿರಿದಾದ ವ್ರತ ('ಮಹಾವ್ರತ')ದೊಡನೆ ಇರುವ ಅವರ ಸಂಬಂಧ. ಕಾಪಾಲಿಕರ ಹಾಗೂ ಕಾಳಾಮುಖರ ಮಹಾವ್ರತಗಳಲ್ಲಿ ವ್ಯತ್ಯಾಸ ಇದೆಯೆಂದು ನಂಬಲು ಕಾರಣಗಳು ಇವೆಯಾದ್ದರಿಂದ ಅವುಗಳನ್ನು ಕುರಿತು ನಾವು ಬೇರೆ ಬೇರೆಯಾಗಿ ಚರ್ಚಿಸಲಿದ್ದೇವೆ. ಇನ್ನು, ಮೊದಲಿನದನ್ನು ಕುರಿತು.

ಹಲವಾರು ಆಕರಗಳೆಲ್ಲ ಕಾಪಾಲಿಕರನ್ನು ಮಹಾವ್ರತರೊಂದಿಗೆ ಗಂಟು ಹಾಕುತ್ತವೆ. 'ಮಾಲತಿ ಮಾಧವ'ದ ಒಬ್ಬ ಭಾಷ್ಯಕಾರನಾದ ಜಗದ್ಧರನು 'ಕಾಪಾಲಿಕ ವ್ರತ' ಇಲ್ಲವೆ 'ಕಪಾಲ ವ್ರತ'ವನ್ನು 'ಮಹಾವ್ರತ' ಎಂದು ವಿವರಿಸುತ್ತಾನೆ.[1] ಇದೇ ಬಗೆಯಾಗಿ ತ್ರಿವಿಕ್ರಮಭಟ್ಟನ 'ನಲಚಂಪೂ' (ಪು. 164)ವಿನ ಭಾಷ್ಯಕಾರನಾದ ಚಂಡಪಾಲನು ಕಾಪಾಲಿಕರನ್ನು ಹಾಗೂ ಮಹಾವ್ರತಿಕರನ್ನು ಸಮೀಕರಿಸುತ್ತಾನೆ. ಸೋಮದೇವನ 'ಕಥಾಸರಿತ್ಸಾಗರ'ದ v. 2. 81 ರಲ್ಲಿ ಒಬ್ಬ ಶೈವಯತಿಯನ್ನು 'ಕಪಾಲಿನ್ ಮಹಾವ್ರತಿನ್' ಎಂದು ಕರೆಯಲಾಗಿದೆ. ಕ್ಷೀರಸ್ವಾಮಿಯು (ಹನ್ನೊಂದನೆಯ ಶತಮಾನ) 'ಅಮರಕೋಶ'ದ ಬಗೆಗಿನ ತನ್ನ ಭಾಷ್ಯದಲ್ಲಿ ಕಾಪಾಲಿನ್, ಮಹಾವ್ರತಿನ್, ಸೋಮಸಿದ್ಧಾಂತಿನ್ ಹಾಗೂ ತಾಂತ್ರಿಕರನ್ನು ಒಟ್ಟಿಗೆ ಪಟ್ಟಿ ಮಾಡಿರುವನು.[2]

1. ಸಂ. ಆರ್. ಜಿ. ಭಾಂಡಾರಕರ, text ಪು. 33.
2. 'ಶ್ರೀ ಹರ್ಷ'ದಲ್ಲಿ ಉದ್ಧೃತ ಪು. 640.

ಗೋಕುಲನಾಥನ 'ಅಮೃತೋದಯ'ದಲ್ಲಿ (ಇಸವಿ 1700) 'ಪಾಷಂಡಿ ಮಹಾವ್ರತ ಸಿದ್ಧಾಂತ'ವನ್ನು ಆಚರಿಸುವ ಮಹಾವ್ರತನೆಂಬ ಒಬ್ಬ ಮಹಾವ್ರತ-ಕಾಪಾಲಿಕನು ಕಾಣಿಸಿಕೊಳ್ಳುತ್ತಾನೆ.[3] ಆಗಲೇ ನಾವು ಕಂಡ ಹಾಗೆ[4] ಕೆಲವು ಪುರಾಣಗಳು ಹಾಗೂ ಇನ್ನು ಕೆಲ ಆಕರಗಳು ಈ ಸಂಪ್ರದಾಯಗಳ ಪಟ್ಟಿಗಳನ್ನು ಒಳಗೊಂಡಿದ್ದು ಅವುಗಳಲ್ಲಿ ಕಾಪಾಲಿಕರನ್ನು (ಅಥವಾ ಕಾಳಾಮುಖರನ್ನು) 'ಮಹಾವ್ರತಧರ' ಇಲ್ಲವೆ 'ಮಹಾವ್ರತಿನ್'ರಿಂದ ಸ್ಥಾನಾಂತರಿಸಲಾಗಿದೆ. ಇವುಗಳ ಪೈಕಿ ಒಂದೆರಡು ಆಕರಗಳಲ್ಲಿ ಮಾತ್ರ ಮಹಾವ್ರತಿನ್‌ರನ್ನು ಕಾಪಾಲಿಕ ಹಾಗೂ ಕಾಳಾಮುಖರಿಂದ ಬೇರೆಯಾಗಿ ಪಟ್ಟಿ ಮಾಡಲಾಗಿದೆ. 'ಮತ್ತವಿಲಾಸ' ಹಾಗೂ 'ಚಂಡಕೌಶಿಕ' ಎಂಬೆರಡು ನಾಟಕಗಳ ಒಂದು ಪಾತ್ರವು, ಶಿವನು ಈ ವ್ರತವನ್ನು ಆಚರಿಸುವುದನ್ನು ಉಲ್ಲೇಖಿಸುತ್ತದೆ.[5] ಮುಂದಿನ ಕಾಲದ ಒಂದು ಕೃತಿಯಲ್ಲಿ ಒಬ್ಬ ಕಾಪಾಲಿಕನನ್ನೇ ಮಹಾವ್ರತಿನ್ ಎಂದು ಕೂಡ ಕರೆಯಲಾಗಿದೆ.[6] ಏಳನೆಯ ಶತಮಾನದಲ್ಲಿ ಚಾಲುಕ್ಯರಿಂದ ನಾಸಿಕ ಜಿಲ್ಲೆಯ ಕಪಾಲೇಶ್ವರ ದೇವಾಲಯದ ಮಹಾವ್ರತಿನ್ ಯತಿಗಳಿಗೆ ನೀಡಲಾದ ದತ್ತಿ ಹಾಗೂ ದಾನವನ್ನು ಸ್ವೀಕರಿಸಿದ ಯತಿಯನ್ನು ಕಪಾಲಿನ್‌ನಾದ ಶಂಕರನ ಜೊತೆಗೆ ಹೋಲಿಸುವ, ಬರೋದಾ ಜಿಲ್ಲೆಯ, ಹನ್ನೊಂದನೆಯ ಶತಮಾನದ ಒಂದು ದತ್ತಿಯನ್ನು ಕುರಿತು ಈಗಾಗಲೆ ಚರ್ಚಿಸಿದ್ದೇವೆ.

ಈ ಮಹಾವ್ರತವು ಏನಿದ್ದಿತು? ಎಲ್ಲರಿಗೂ ಚೆನ್ನಾಗಿ ಗೊತ್ತಿರುವ ಈ ಹೆಸರಿನ ಒಂದು ಸಂಸ್ಕಾರವಿದ್ದು, ಅದು ವ್ರತ ಮುಕ್ತಾಯಕ್ಕೆ ಒಂದು ದಿನ ಮೊದಲು ಒಂದು ಸತ್ರದಲ್ಲಿ ಜರುಗುತ್ತಿತ್ತೆಂದು 'ಜೈಮಿನೀಯ ಬ್ರಾಹ್ಮಣ' ಹಾಗೂ ಹಿಂದಿನ ಕಾಲದ ಇನ್ನೂ ಕೆಲವು ಕೃತಿಗಳಲ್ಲಿ ಬಣ್ಣಿಸಲಾಗಿದೆ. ಇದು ಒಂದು ಗೂಢ ಸಂಘಟನೆಯನ್ನು ಹೊಂದಿದ 'ವ್ರಾತ್ಯ'ರಿಗೆ ಸಂಬಂಧಪಟ್ಟಿದ್ದು 'ಹಾವರ್ ಈತನು ಇವರನ್ನು ಯೋಗಿಗಳಿಗಿಂತ ಮೊದಲಿಗರೆಂದು ಭಾವಿಸುತ್ತಾನೆ.[7] ಇದು ಹಲವು ಬಗೆಯ ಲಕ್ಷಣಗಳನ್ನು ಹೊಂದಿದ್ದು ಅವೆಲ್ಲ, ಕಾಪಾಲಿಕರ

3. ಸಂ. ಶಿವದತ್ತ ಮತ್ತು ಕೆ. ಪಿ. ಪರಬ, pp. 41-42.

4. ಹಿಂದೆ ನೋಡಿ, pp 7-11

5. ಮಹೇಂದ್ರವರ್ಮನ್, 'ಮತ್ತವಿಲಾಸ'. ಸಂ. ಟಿ. ಜಿ. ಶಾಸ್ತ್ರಿ. vs. 17 ಮತ್ತು ಕ್ಷೇಮೇಶ್ವರ, 'ಚಂಡ ಕೌಶಿಕ', ಅಂಕ IV. vss. 26-27.

6. ಅಂಕ IV, vs 19 ರ ತರುವಾಯ.

7. ಜೆ. ಡಬ್ಲ್ಯು. ಹಾವರ್. 'Der Vr ā tya'. ಜೆ. ಸಿ. ಹೀಸ್ಟರಮನ್ ಅವರು ಇತ್ತೀಚೆಗೆ ಹಾವರ್ ಹಾಗೂ ಇತರರ ಅಭಿಪ್ರಾಯಗಳೊಂದಿಗಿರುವ ಸಮಸ್ಯೆಯನ್ನು ಕುರಿತು ತಮ್ಮ ಲೇಖನ 'Vratya and sacrifice' (IIJ, VI [1962-63], 1-37)ದಲ್ಲಿ ಎತ್ತಿಕೊಂಡಿರುವರು. ಹೀಸ್ಟರಮನ್ನರು ಅವರನ್ನು 'ಶ್ರೌತ ಮತಾಚರಣೆಯ ಮೊದಲಿನ ಕಾಡು' ಮತಾಚರಣೆಗಳನ್ನು ಹೊಂದಿದ 'ಸಂಬಲರ್ಹರಾದ ವೇದಗಳ ಆರ್ಯ'ರೆಂದು ಕಾಣುತ್ತಾರೆ. (ಪು. 36).

ಬೈಗುಳಾಚರಣೆ, ಅಶ್ಲೀಲ ಸಂಭಾಷಣೆ ಹಾಗೂ ಲೈಂಗಿಕ ಸಂಭೋಗಳಂತಹ[8] ಉತ್ಸವಗಳಿಗೆ ಸರಿಹೊಂದುವಂತಿವೆ. ಏನಿದ್ದರೂ, ಈ ಮತಾಚರಣೆಯ ಹಿಂದಿರುವ ಉದ್ದೇಶ ಹಾಗೂ ಇದನ್ನು ಕುರಿತಾದ ಆಸಕ್ತಿಗಳು ನಶಿಸಿ ಹೋದ ತರುವಾಯ ಅಲ್ಲದೆ ಇದರ ಧಾರ್ಮಿಕ ಹಾಗೂ ಸಾಮಾಜಿಕ ಸಂದರ್ಭಗಳೇ ಕಣ್ಮರೆಯಾದ ಹಲವು ಶತಮಾನಗಳ ತರುವಾಯದಲ್ಲಿ ಇದೇ ಮತಾಚರಣೆಯನ್ನು ಮತ್ತೆ ಪುನರುಜ್ಜೀವಿತಗೊಳಿಸಿರಬಹುದಾದ ಸಾಧ್ಯತೆ ತೀರ ಕಡಿಮೆ. ಇದು ಅಲ್ಲದೆ ಬೇರೊಂದು 'ಮಹಾವ್ರತ'ಇದೆ. ಅದನ್ನು ತುಸು ಹೆಚ್ಚು ಖಚಿತವಾಗಿ ಕಾಪಾಲಿಕರ ಮಹಾವ್ರತದೊಡನೆ ಹೋಲಿಸುವಂತಿದೆ. (ತಪ್ಪಿ) ಒಬ್ಬ ಬ್ರಾಹ್ಮಣನನ್ನು ಕೊಂದರೆ ಆ ಪಾತಕವನ್ನು ನಿವಾರಿಸಿಕೊಳ್ಳಲೆಂದು ವಿಧಿಸಲಾದ ಒಂದು ಮುಖ್ಯವಾದ ವಿಧಿ ಇದಾಗಿದೆ.

ಪ್ರಾಯಶ್ಚಿತ್ತದ ಈ ವಿಧಿಯಬಗೆಗಿನ ನಿಯಮಗಳು ಕೆಲವಟ್ಟಿಗಿನ ಏರುಪೇರುಗಳೊಡನೆ ಮುಖ್ಯವಾದ ನ್ಯಾಯಗ್ರಂಥಗಳಲ್ಲೆಲ್ಲ ಇವೆಯಾದರೂ ಇದನ್ನು 'ಮಹಾವ್ರತ' ಎಂದು ಕರೆದದ್ದು 'ವಿಷ್ಣುಸ್ಮೃತಿ'ಯಲ್ಲಿ ಮಾತ್ರ. ಅದು ಹೀಗೆನ್ನುತ್ತದೆ:

1. ಅಂಥವನು ಕಾಡಿನಲ್ಲಿ ಎಲೆಗಳಿಂದ ಗುಡಿಸಲನ್ನು ಕಟ್ಟಿಕೊಳ್ಳಲಿ. ಅದರಲ್ಲಿ ವಾಸಿಸಲಿ;

2. ಮತ್ತು ದಿನಾಲು ಮೂರು ಸಲ ಸ್ನಾನ ಮಾಡಲಿ (ಅಲ್ಲದೆ ಪ್ರಾರ್ಥನೆಗಳನ್ನು ಸಲ್ಲಿಸಲಿ);

3. ಮತ್ತು ತನ್ನ ದುಷ್ಕೃತ್ಯಗಳನ್ನು ಸಾರುತ್ತ ಊರಿಂದೂರಿಗೆ ಹೋಗಿ ದಾನಧರ್ಮಗಳನ್ನು ಕಲೆಹಾಕಲಿ;

4. ಮತ್ತು ಅವನು ಹುಲ್ಲಿನ ಮೇಲೆ ಒರಗಲಿ;

5. ಇದಕ್ಕೆ 'ಮಹಾವ್ರತ'(ಹಿರಿಯಾಚರಣೆ) ಎಂದೆನ್ನಲಾಗುತ್ತದೆ.

6. (ನಿರುದ್ದೇಶದಿಂದ) ಒಬ್ಬ ಬ್ರಾಹ್ಮಣನನ್ನು ಕೊಂದವನು ಹನ್ನೆರಡು ವರ್ಷಗಳ ಕಾಲ ಇದನ್ನು ಆಚರಿಸತಕ್ಕದ್ದು.

15. ಈ ಪ್ರಾಯಶ್ಚಿತ್ತಗಳ ಪೈಕಿ ಯಾವುದನ್ನೇ ಆಗಲಿ, ಅದನ್ನಾಚರಿಸುವವನು ತನ್ನೊಂದಿಗೆ (ತನ್ನದೊಂದು ದೊಣ್ಣೆಯನ್ನು) ತಾನು ಕೊಂದವನ ತಲೆಬುರುಡೆಯನ್ನು

---

8. ನೋಡಿ ಹಾವರ್, pp. 24 ff.; Eliade, pp. 103-105, ಮತ್ತು ಕಾಣೆ, HDS. H, 1243-45.

ಪತಾಕೆಯಂತೆ ಎತ್ತಿ ಹಿಡಿದುಕೊಂಡು ಸಾಗಬೇಕು.[9]

ಮೇಲ್ಗಡೆಯಲ್ಲಿ, ನಾವು ಈ ಪ್ರಾಯಶ್ಚಿತ್ತದ ಆಚರಣೆಯನ್ನು ಕುರಿತಾದ 'ಯಾಜ್ಞವಲ್ಕ್ಯ ಸ್ಮೃತಿ'ಯ iii. 243 ಪಾಠವನ್ನು ಉದ್ಧರಿಸಿದ್ದೇವೆ.[10] ಇದರಲ್ಲಿ, ಇದನ್ನು ಆಚರಿಸುವವನನ್ನು 'ಕಾಪಾಲಿಕ'ಎಂದು ಕರೆಯಲಾಗಿದೆಯಾದರೂ ಅದಿರುವುದು 'ತಲೆಬುರುಡೆಯನ್ನು ಕೈಯಲ್ಲಿ ಹಿಡಿದುಕೊಂಡವನು' ಎಂಬ ಅರ್ಥದಲ್ಲಿ ಮಾತ್ರ. ಈ ಪ್ರಾಯಶ್ಚಿತ್ತವನ್ನು ಕೈಕೊಳ್ಳುವುದಲ್ಲದೆ ಒಂದನ್ನು ದೊಣ್ಣೆಯ ಮೇಲೆ ಇರಿಸಿಕೊಳ್ಳಬೇಕೆಂದು ಯಾಜ್ಞವಲ್ಕ್ಯ ಸೂಚಿಸುತ್ತಾನೆ. ಪ್ರಾಯಶ್ಚಿತ್ತವನ್ನು ಕೈಕೊಳ್ಳುವವನು ಕೈಯಲ್ಲಿದ್ದ ತಲೆಬುರುಡೆಯನ್ನು ಭಿಕ್ಷೆ ಬೇಡಲು ಬಳಸಿಕೊಳ್ಳಬಹುದೋ, ಅಲ್ಲವೋ, ಎಂಬ ಬಗೆಗೆ ಮಾತ್ರ ಭಾಷ್ಯಕಾರರಲ್ಲಿ ಭಿನ್ನಾಭಿಪ್ರಾಯಗಳಿವೆ.[11] 'ಆಪಸ್ತಂಭೀಯ ಧರ್ಮಸೂತ್ರ'ದಲ್ಲಾದರೆ ವಿದ್ವಾಂಸನಾದ ಬ್ರಾಹ್ಮಣನನ್ನು ಕೊಂದವನು (ಭ್ರೂಣಹನ್)' ತನ್ನ ನೀರಿಗಾಗಿ ಮಾನವನ ತಲೆ ಬುರುಡೆಯನ್ನು ಇರಿಸಿಕೊಳ್ಳಬೇಕಿದೆ.[12] ಆದರೆ ಒಬ್ಬ ಸಾಮಾನ್ಯ ಬ್ರಾಹ್ಮಣನನ್ನು ಕೊಂದವನು ಧಾತು ಇಲ್ಲವೆ ಮಣ್ಣಿನ ಕಡಿಮೆ ಆಳದ ಒಂದು ಪಾತ್ರೆಯನ್ನು ಜೊತೆಗೆ ಇರಿಸಿಕೊಳ್ಳುವಂತೆ ಸೂಚಿಸಲಾಗಿದೆ.[13] ಇನ್ನು ಹಲವು ಕೃತಿಗಳು ಪ್ರಾಯಶ್ಚಿತವನ್ನು ಕೈಕೊಳ್ಳುವವನು ತನ್ನ ದೊಣ್ಣೆಯ ಮೇಲೆ ಒಂದು ತಲೆಬುರುಡೆಯನ್ನು ಇರಿಸಿಕೊಳ್ಳುವುದು ಅಗತ್ಯದ್ದು, ಎನುತ್ತವೆ. ಅಲ್ಲದೆ ಅದನ್ನು ಕೊಲೆಯಾದವನ ತಲೆಬುರುಡೆಯೆಂದು ಗುರುತಿಸಲಾಗುತ್ತದೆ.[14] ಜೊತೆಗೆ ಖಟ್ವಾಂಗವನ್ನು ಇರಿಸಿಕೊಳ್ಳಬೇಕೆಂದು ಕೆಲವು ಕೃತಿಗಳು

---

9. ಅನು. ಜಿ. ಜಾಲ್ಲಿ. 1. 1-6, 15. ಸಂ. ವಿ. ಕೃಷ್ಣಮಾಚಾರ್ಯ ಹೋಲಿಸುತ್ತಾರೆ 'ಮನು ಸ್ಮೃತಿ', ಅನು. ಜಿ. Bühler, xi. 73, 'ಯಾಜ್ಞವಲ್ಕ್ಯ ಸ್ಮೃತಿ',ಸಂ. ಎನ್. ಆರ್. ಆಚಾರ್ಯ, iii. 243, 'Gautama Dharmashastra', (ಗೌತಮ ಧರ್ಮಶಾಸ್ತ್ರ') ಅನು. ಜಿ. Bühler. xxii. 4-6, 'Baudhāyana Dharmaśāstra' ('ಬೌಧಾಯನ ಧರ್ಮಶಾಸ್ತ್ರ'), ಅನು. ಜಿ. Bühler ii. 1. 2-3. 'Āpstambīya Dharmasūtra' ('ಆಪಸ್ತಂಭೀಯ ಧರ್ಮಸೂತ್ರ') ಅನು. ಜಿ.Bühler, i. 24.11-20; i. 28. 21 ರಿಂದ : 29.1, ಮತ್ತು 'Kūrma Purāna' ('ಕೂರ್ಮ ಪುರಾಣ') ii. 30.

10. ಹಿಂದೆ ನೋಡಿ, ಪು. 13.

11. ನೋಡಿ ಕಾಣೆ, HDS, IV, 89. ಕಾಣೆಯವರು ಇದನ್ನು ಹಾಗೂ ಅಪರಾಧಕ್ಕಾಗಿ ಇರುವ ಇನ್ನಿತರ ಪ್ರಾಯಶ್ಚಿತ್ತಗಳನ್ನು ಕುರಿತು ತುಸು ಮಟ್ಟಿಗೆ ವಿವರವಾಗಿ ಚರ್ಚಿಸುತ್ತಾರೆ (ಅದೆ, pp. 87-96).

12. ಅನು. Bühler, i. 28.21. ಅಲ್ಲದೆ ನೋಡಿ 'ಬೌಧಾಯಣ' ii. 1.3 ಮತ್ತು 'ಗೌತಮ' xxii. 4.

13. 'ಆಪಸ್ತಂಭೀಯ' ii. 24.14.

14. 'ಮನು' xi. 73 ಮತ್ತು 'ಆಪಸ್ತಂಭೀಯ' i. 24.11. 'ವಿಜ್ಞಾನೇಶ್ವರ ಮಿತಾಕ್ಷರ'ನು (ಸಂ. ಎನ್. ಆರ್. ಆಚಾರ್ಯ) 'ಯಾಜ್ಞವಲ್ಕ್ಯ' ಕುರಿತು iii. 243, ಅಪರಾಧಿಯು ತಾನು ಕೊಂದಿರುವ ಬ್ರಾಹ್ಮಣನ ತಲೆಬುರುಡೆಯನ್ನು ಜೊತೆಗೆ ಇರಿಸಿಕೊಂಡು ತೀರ್ಥಯಾತ್ರೆಗಳನ್ನು ಕೈಕೊಳ್ಳಬೇಕೆಂದು ಸಾತಾತಪನು ಹೇಳಿರುವನೆಂದು ಉದ್ಧರಿಸುತ್ತಾನೆ. ಕೊಲೆಗೀಡಾದ ಬ್ರಾಹ್ಮಣನ ತಲೆ ಸಿಕ್ಕದೆ ಇದ್ದಲ್ಲಿ ಬೇರೊಬ್ಬ ಬ್ರಾಹ್ಮಣನ ತಲೆಯನ್ನು ಬಳಸಿಕೊಳ್ಳಬೇಕೆಂದು ವಿಜ್ಞಾನೇಶ್ವರನು ಸೇರಿಸುತ್ತಾನೆ.

ಹೇಳುತ್ತವೆ.[15] ಇದು ಹಲವು ಸಲ ಕಾಪಾಲಿಕರಿಗೆ ಸಂಬಂಧಿಸಿದುದು ಆಗಿರುತ್ತದೆ. 'ಆಪಸ್ತಂಭೀಯ ಧರ್ಮಸೂತ್ರ' i. 29. 1 ನ್ನು ಕುರಿತ ತನ್ನ ಭಾಷ್ಯದಲ್ಲಿ ಹರದತ್ತನು (ಇಸವಿ, ಹನ್ನೆರಡನೆಯ ಶತಮಾನ) ವಾಸ್ತವದಲ್ಲಿ ಹೇಳುವುದೇನೆಂದರೆ: 'ಖಟ್ವಾಂಗ ಎಂಬ ಪದವು 'ಕಾಪಾಲಿಕ ತಂತ್ರ'ದಲ್ಲಿ ಚೆನ್ನಾಗಿ ತಿಳಿದಿರುವುದೇ ಆಗಿದೆ' ಎಂದು[16] 'ಖಟ್ವಾಂಗ' ಪದದ ಅರ್ಥ 'ಮಂಚದ ಕಾಲು' ಎಂದು. ಆಕಾರದಿಂದಾಗಿ ಅದು ಈ ಅರ್ಥವನ್ನು ಪಡೆದಿರಲು ಸಾಕು. ಯಾಜ್ಞವಲ್ಕ್ಯನ iii . 243 ಯನ್ನು ಕುರಿತಾದ ವಿಜ್ಞಾನೇಶ್ವರನ 'ಮಿತಾಕ್ಷರ'ವು ಇದನ್ನು 'ದೊಣ್ಣೆಯ ಮೇಳೆ ತಲೆಬುರುಡೆಯನ್ನು ಕೂರಿಸಿ ತಯಾರಿಸಲಾದ ಒಂದು ಪತಾಕೆ' ಎಂದು ಬಣ್ಣಿಸುತ್ತದೆ.

ಪ್ರಾಯಶ್ಚಿತ್ತವನ್ನು ಕೈಕೊಳ್ಳುವವನು ತೊಡಬೇಕಾದ ಬಟ್ಟೆಗಳನ್ನು ಕುರಿತು ಕೆಲವು ನ್ಯಾಯಗ್ರಂಥಗಳು ನಿರ್ದಿಷ್ಟವಾಗಿ ನಮೂದಿಸುತ್ತವೆ. 'ಆಪಸ್ತಂಭ'ದ ಹೇಳಿಕೆಯಂತೆ ಒಬ್ಬ ಭ್ರೂಣಹನ್‌ನು 'ಒಂದು ನಾಯಿ ಅಥವಾ ಕತ್ತೆಯ ಚರ್ಮವನ್ನು ಕೂದಲುಗಳ ಬದಿ ಹೊರಮೈ ಆಗಿರುವಂತೆ ತೊಡಬೇಕು.'[17] 'ಬೌದ್ಧಾಯನ'ವು (ii. 1. 3) ಹದಮಾಡಿದ ಕತ್ತೆಯ ಚರ್ಮವನ್ನಷ್ಟೇ ವಿಧಿಸುತ್ತದೆ. ಒಬ್ಬ ಸಾಮಾನ್ಯ ಬ್ರಾಹ್ಮಣನ ಕೊಲೆಯ ಸಂದರ್ಭದಲ್ಲಿ 'ಆಪಸ್ತಂಭ'ವು (i . 24. 11) ಹೊಕ್ಕಳಿನಿಂದ ಮೊಣಕಾಲವರೆಗೆ ಸಣಬಿನ ಸಾದಾ ತುಂಡು ದಟ್ಟಿ ಬೇಕೆನ್ನುತ್ತದೆ.

ತನ್ನ ಅಪರಾಧದಿಂದ ಅಶುದ್ಧನಾದ ಪಾಪಿಯು ಕಾಡಿನ ಒಂದು ಗುಡಿಸಲಿನಲ್ಲಿ ವಾಸಿಸಬೇಕಲ್ಲದೆ ಭಿಕ್ಷೆ ಬೇಡುವುದನ್ನು ಬಿಟ್ಟರೆ ಬೇರೆ ಕಾರಣಕ್ಕಾಗಿ ಊರನ್ನು ಪ್ರವೇಶಿಸ ಕೂಡದು. 'ಬೌದ್ಧಾಯನ' (ii. 1. 3) ದ ಹೇಳಿಕೆಯಂತೆ ಒಬ್ಬ ಭ್ರೂಣಹನ್‌ನು ಸ್ಮಶಾನಭೂಮಿಯಲ್ಲೇ ತನ್ನ ಗುಡಿಸಲನ್ನು ಕಟ್ಟಿಕೊಳ್ಳತಕ್ಕದ್ದು. ಅವನು ಒಂದು ಬರಿದಾದ ಮನೆಯಲ್ಲಿ ಇಲ್ಲವೆ ಮರದಡಿಯಲ್ಲಿ ವಾಸಿಸಬೇಕೆಂದು 'ಆಪಸ್ತಂಭ' (i. 29. 1) ವು ಸಲಹೆಯನ್ನು ನೀಡುತ್ತದೆ.

ಭಿಕ್ಷೆ ಬೇಡುವುದನ್ನು ಬಿಟ್ಟರೆ ಬ್ರಹ್ಮಹನ್‌ನ ದಿನಚರಿ, ಕರ್ತವ್ಯಗಳನ್ನು ಕುರಿತು ಹೆಚ್ಚಿಗೆ ಚರ್ಚಿಸಲಾಗಿಲ್ಲ. 'ವಿಷ್ಣುಸ್ಮೃತಿ' 1.2. ನಿತ್ಯದ ತ್ರಿಸಂಧ್ಯಾವಂದನೆಗಳನ್ನು ಎಸಗುವಂತೆ ಸೂಚನೆಯನ್ನಿತ್ತಿದೆ. 'ಆಪಸ್ತಂಭ' ( i. 24. 11 ಹಾಗೂ 18) ವು ಆಕಳುಗಳನ್ನು ಕಾಯಲು

---

15. 'ಆಪಸ್ತಂಭೀಯ' i. 29.1 (ಭ್ರೂಣಹನ್ನನಿಗಾಗಿ ಪ್ರಾಯಶ್ಚಿತ್ತ); ಗೌತಮ xxii. 4; ಮತ್ತು ಬೌಧಾಯನ ii. 1. 3.

16. ಸಂ. ಎಮ್. ಶಾಸ್ತ್ರಿ ಮತ್ತು ಕೆ. ರಂಗಾಚಾರ್ಯ.

17. ಅನು. Buhler, i. 28.21.

ಮತ್ತು ತನ್ನ ಮಾತುಗಳಿಗೆ ಕಡಿವಾಣ ಹಾಕುವಂತೆ ಅವನನ್ನು ಕೇಳುತ್ತದೆ. 'ಗೌತಮ' (xxii. 4)ವು ಶುದ್ಧನಾಗಿರಲು ಅವನಿಗೆ ಹೇಳುತ್ತದೆ.

ಬ್ರಹ್ಮಹನ್‌ನು ಭಿಕ್ಷೆಯಿಂದಲೇ ತನ್ನ ಹೊಟ್ಟೆಯನ್ನು ಹೊರೆದುಕೊಳ್ಳತಕ್ಕದ್ದು. ದಿನಾಲು ಅವನು ಏಳು ಮನೆಗಳಲ್ಲಿ ಮಾತ್ರ ಭಿಕ್ಷೆ ಕೇಳಬಹುದೆಂದು 'ಆಪಸ್ತಂಭ'ವು ನಿರ್ದಿಷ್ಟಪಡಿಸುತ್ತದೆ. ಅವನು ಪ್ರತಿಯೊಂದು ಮನೆಯೆದುರು ನಿಂತು, 'ಒಬ್ಬ ಅಭಿಶಾಪ್ತನಿಗೆ (ಅಪರಾಧಿಗೆ)ಯಾರು ನೀಡಲಿರುವರು?' ಎಂದು ಕೂಗಬೇಕು.[18] ಒಬ್ಬ ಭ್ರೂಣಹನ್‌ನು 'ಯಾರು ಈ ಭ್ರೂಣಹನ್‌ನಿಗೆ ಭಿಕ್ಷೆ (ನಿಡುವರು) ?' ಎಂದು ಕೂಗಬೇಕೆಂದು 'ಆಪಸ್ತಂಭ' ಹೇಳುತ್ತದೆ. 'ಬೌದ್ಧಾಯನ'ದ ಹೇಳಿಕೆಯಂತೆ, ಭ್ರೂಣಹನ್ನನು ಕೂಡ ಏಳು ಮನೆಗಳ ನಿಯಮವನ್ನು ಪಾಲಿಸತಕ್ಕದ್ದು.[19] ಬ್ರಹ್ಮಹನ್ ಹಾಗೂ ಭ್ರೂಣಹನ್ ಇವರಿಬ್ಬರೂ ಹನ್ನೆರಡು ವರ್ಷಗಳ ಕಾಲ ಪ್ರಯಶ್ಚಿತ್ತವನ್ನು ಪಾಲಿಸಬೇಕೆಂದು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿದೆ. ಆದರೆ 'ಆಪಸ್ತಂಭ'ದ (i. 29. 1) ಹೇಳಿಕೆಯ ಪ್ರಕಾರ ಭ್ರೂಣಹನ್‌ನು ಸಾಯುವವರೆಗೂ ಈ ವ್ರತವನ್ನು ಆಚರಿಸಬೇಕಿದೆ.

ಬಹಳಷ್ಟು ನ್ಯಾಯಗ್ರಂಥಗಳು ಬ್ರಾಹ್ಮಣನ ಕೊಲೆಯ ಪಾತಕಕ್ಕಾಗಿ ಹೆಚ್ಚಿನ ಮಟ್ಟದ ಪ್ರಾಯಶ್ಚಿತ್ತವನ್ನು ಪಟ್ಟಿಮಾಡಿವೆ.[20] ಭಾಷ್ಯಕಾರರು ಬಲಿಯಾದವನ ಶಿಕ್ಷಣ ಹಾಗೂ ಜಾಣತನಗಳಂತೆಯೇ ಕೊಲೆಗಡಕನ ಮನದಲ್ಲಿ ಉದ್ದೇಶವಿತ್ತೇ, ಇರಲಿಲ್ಲವೇ ಎಂಬ ಸಂಗತಿಗೆ ತಕ್ಕ ಹಾಗೆ ಬೇರೆ ಬೇರೆ ಬಗೆಯ ಪ್ರಾಯಶ್ಚಿತ್ತಗಳನ್ನು ವಿಧಿಸುತ್ತಾರೆ. ಇವುಗಳಲ್ಲಿ ಕೆಲವು ಪರ್ಯಾಯಿ ಪ್ರಾಯಶ್ಚಿತ್ತಗಳು ಸಾವಿನಲ್ಲಿ ಕೊನೆಗೊಳ್ಳುವವಾದರೆ ಉಳಿದವುಗಳು ವೈದಿಕ ಯಜ್ಞಗಳಿಗಾಗಿ ದೊಡ್ಡ ಮೊತ್ತದ ಹಣವನ್ನು ವ್ಯಯಿಸಬೇಕೆನ್ನುತ್ತವೆ. ಅವುಗಳಲ್ಲಿ ಒಂದಾದ, ಭ್ರೂಣಹನ್‌ನನ್ನು ಕುರಿತು 'ವಾಸಿಷ್ಠ ಧರ್ಮ ಸೂತ್ರ'ದಲ್ಲಿ ವಿಧಿಸಲಾದ ಪ್ರಮುಖ ಪ್ರಾಯಶ್ಚಿತ್ತದಲ್ಲಿ ತಾಂತ್ರಿಕ ಅನುರಣನಗಳಿರುವಂತಿದೆ. ತಪ್ಪು ಮಾಡಿದವನಿಗೆ ಬೆಂಕಿಯನ್ನು ತಯಾರಿಸಲು ಹಾಗೂ ತನ್ನ ದೇಹದಿಂದಲೇ ಕತ್ತರಿಸಿ ತೆಗೆದ ಎಂಟು ಸಂಗತಿಗಳಾದ ಕೂದಲು, ಚರ್ಮ, ನೆತ್ತರ, ಮಾಂಸ, ಸ್ನಾಯು, ನೆಣ, ಎಲುವುಗಳು ಹಾಗೂ ಅವಗಳೊಳಗಿನ ನೆಣವನ್ನು ಆಹುತಿಯಾಗಿ ಅರ್ಪಿಸುವಂತೆ ಸೂಚಿಸಲಾಗಿದೆ. 'ನಾನು ನನ್ನ ಕೂದಲುಗಳನ್ನು ಯಮನಿಗೆ ಅರ್ಪಿಸುತ್ತೇನೆ. ಯಮನನ್ನು ಈ ಕೂದಲುಗಳಿಂದ ಸಂತೋಷಪಡಿಸುತ್ತೇನೆ' ಎಂಬ ಪದಗಳೊಂದಿಗೆ ಮುಂದುವರೆಯುತ್ತ ಯಮನಿಗೆ ಒಂದಾದ ಮೇಲೆ ಒಂದರಂತೆ ಆಹುತಿಗಳನ್ನು ಅರ್ಪಿಸಲಾಗುತ್ತದೆ.[21] ಏನಿಲ್ಲೆಂದರೂ ಈ ಪ್ರಾಯಶ್ಚಿತ್ತವು ತನ್ನನ್ನು ತಾನೂ

18. ಅನು. Bühler, i. 24.15.

19. ಅನು. Bühler, ii. 1.3.

20. ನೋಡಿ ಕಾಣೆ, HDS, IV, 87-96.

21. ಅನು. ಜೆ. ಜಾಲಿ (Jolly), xx. 26.

ಊನಗೊಳಿಸಿಕೊಳ್ಳಬೇಕೆಂದು ನಿರೀಕ್ಷಿಸುತ್ತದೆ. ಗರಿಷ್ಠ ಮಟ್ಟದ ಇಂಥ ಶ್ರದ್ಧೆಯು ತಾನಾಗಿಯೇ ಸಹಜವಾಗಿ ಸಾವಿನಲ್ಲಿ ಪರಿಣಮಿಸುತ್ತದೆ. ಇಂಥ ಮತಾಚರಣೆಯು 'ಪ್ರಬೋಧ ಚಂದ್ರೋದಯ'ದ ಕಾಪಾಲಿಕನು ತಾನು ಭೈರವನಿಗೆ ಅರ್ಪಿಸುವೆನೆಂದು ಹೇಳುವ ಘೋರವಾದ ಆಹುತಿ ಹಾಗೂ ಸೋಮದೇವನ 'ಯಶಸ್ತಿಲಕ'ದ ಚಂಡಮಾರಿ ದೇವಾಲಯದಲ್ಲಿ ಮಹಾವ್ರತಿಕರು ತಮ್ಮ ದೇಹಗಳಿಂದ ಕತ್ತರಿಸಿ ತೆಗೆದ ಮಾಂಸದ ತುಣುಕುಗಳನ್ನು ಮಾರುವುದು, ಎಂಬೆರಡೂ ಸಂಗತಿಗಳನ್ನು ನೆನಪಿಗೆ ತಂದುಕೊಡುತ್ತದೆ.[22]

'ವಿಷ್ಣುಸ್ಮೃತಿ' ಹಾಗೂ ಇತರ ನ್ಯಾಯ ಶಾಸ್ತ್ರಗ್ರಂಥಗಳ ಮಹಾವ್ರತ ಪ್ರಾಯಶ್ಚಿತ್ತವು ಕಾಪಾಲಿಕರ ಆಚರಣೆಯೊಡನೆ ಸಂದೇಹಕ್ಕೆ ಆಸ್ಪದವೇ ಇಲ್ಲದಷ್ಟು ಹೋಲಿಕೆಯನ್ನು ಹೊಂದಿದೆ. ಈ ವೈರಾಗಿಗಳು ಕಾಡಿನಲ್ಲಿ ವಾಸವಾಗಿದ್ದರು, ಖಟ್ವಾಂಗ ಹಾಗೂ ತಲೆಬುರುಡೆಯ ಪಾತ್ರೆಯನ್ನು ಹಿಡಿದುಕೊಂಡು ಭಿಕ್ಷೆ ಬೇಡುತ್ತಿದ್ದರು. ಅನನ್ಯತೆ ಅಥವಾ ವೈರುದ್ಧ್ಯಗಳ ಸಂಯೋಗಗಳನ್ನು ಒಳಗೊಂಡ, ಸರ್ವವ್ಯಾಪಿಯಾದ ತಾಂತ್ರಿಕ ಮುಖ್ಯ ಉದ್ದೇಶಗಳ ಹಿನ್ನೆಲೆಯಲ್ಲಿ, ನ್ಯಾಯಗ್ರಂಥಗಳು ವಿಧಿಸಿದ ಪ್ರಾಯಶ್ಚಿತ್ತ ಹಾಗೂ ಕಾಪಾಲಿಕ ವ್ರತಗಳ ನಡುವಣ ನಂಟನ್ನು ವಿವರಿಸುವುದು ಅಷ್ಟೇನೂ ಕಷ್ಟದ್ದಲ್ಲ.[23] ಒಬ್ಬ ಬ್ರಾಹ್ಮಣನನ್ನು ಕೊಲ್ಲುವಂತಹ ಎಲ್ಲಕ್ಕೂ ಹೆಚ್ಚು ಘೋರವಾದ ಅಪರಾಧಕ್ಕಾಗಿ ಪ್ರಾಯಶ್ಚಿತ್ತವೆಂದು ಈ ವ್ರತವನ್ನು ವಿಧಿಸಲಾದ್ದರಿಂದ ಕಾಪಾಲಿಕರು ಅದನ್ನು ಸ್ವೀಕರಿಸಿದರೆಂದು ನಾವು ಕರಾರುವಾಕ್ಕಾಗಿ ಸೂಚಿಸಬಯಸುತ್ತೇವೆ. ಇದೇ ಬಗೆಯಾಗಿ, ಅವರು ಉಳಿದೆಲ್ಲ ಪವಿತ್ರ ಯತಿಗಳು ಇಲ್ಲವೆ ಅಪರಾಧಿಗಳಲ್ಲಿಯೇ ತೀರ ಕೆಳಗಿನ ಸ್ಥಾನದಲ್ಲಿದ್ದವರಾಗಿದ್ದರು. ಕಾಣ್ಹಪಾದನ ಗೀತೆಗಳಲ್ಲಿ ಬರುವ 'ಡೊಂಬಿ' (ಹಾಗೂ ಕಾಪಾಲಿನ್)ಯ ಸಂದರ್ಭದಲ್ಲಿ ಕಂಡಂತೆ, ಕಣ್ಣಿಗೆ ಕಾಣುವ ತೋರಿಕೆಯ ಸಾಮ್ರಾಜ್ಯದಲ್ಲಿ ಎಲ್ಲಕ್ಕೂ ಕೆಳಮಟ್ಟದಲ್ಲಿರುವ ಸಂಗತಿಯು ಚೈತನ್ಯದ ಸಾಮ್ರಾಜ್ಯದಲ್ಲಿ ಎಲ್ಲಕ್ಕೂ ಹೆಚ್ಚಿನ ಎತ್ತರದ ಮಟ್ಟದಲ್ಲಿ ಇರುತ್ತದೆ. ಇದಕ್ಕೂ ಮುಂದೆ ಎಂದರೆ, ವಾಸ್ತವದಲ್ಲಿ ಕಾಪಾಲಿಕರು ನಿಜವಾಗಿಯೂ ನಿರಪರಾಧಿಗಳಾಗಿದ್ದಾಗಲೂ ಕೂಡ ಈ ಪ್ರಾಯಶ್ಚಿತ್ತವನ್ನು ಕೈಕೊಳ್ಳುವ ಕಾರಣ ಹಿಂದೆಂದಿಗೂ ಕಾಣಸಿಗದಷ್ಟು ಧಾರ್ಮಿಕ ಅರ್ಹತೆಯು ಅವರಲ್ಲಿ ಶೇಖರಗೊಳ್ಳುತ್ತದಲ್ಲದೆ, ಅದು ಅವರ ಸಿದ್ಧಿಯಲ್ಲಿ ಪರ್ಯವಸಾನಗೊಳ್ಳುತ್ತಿತ್ತು.

ಕಾಪಾಲಿಕ ಯತಿ ಹಾಗೂ ಬ್ರಹ್ಮಹನ್‌ನಾದ ಪಾಪಿಯನ್ನು ಕುರಿತಾದ ವಿರೋಧಾಭಾಸದ ಪರಿಚಯವು ಶಿವನಿಂದ ಬ್ರಹ್ಮನ ತಲೆಯನ್ನು ತುಂಡರಿಸಲಾದ ಪುರಾಣದ ಆಖ್ಯಾಯಿಕೆಯಲ್ಲಿ ತನ್ನ ಮೂಲ ಮಾದರಿಯನ್ನು ಪಡೆದುಕೊಳ್ಳುತ್ತದೆ. ಇದು

22. ಹಿಂದೆ ನೋಡಿ, pp. 17 ಮತ್ತು 60.

23. ಹಿಂದೆ ನೋಡಿ, pp. 70-71.

ನ್ಯಾಯಗ್ರಂಥಗಳಲ್ಲಿಲ್ಲದ ಆದರೆ ಶೈವವಾದಕ್ಕೆ ಅತ್ಯಾವಶ್ಯಕವಾದ ಒಂದು ಘಟಕಾಂಶವನ್ನು ಸೇರ್ಪಡಿಸುತ್ತದೆ. ಈ ಆಖ್ಯಾಯಿಕೆಯು ಹಲವು ಪುರಾಣಗಳಲ್ಲಿ ಕಾಣಸಿಕೊಳ್ಳುತ್ತದಾದರೂ ಅದರ ನಿರೂಪಣೆಯಲ್ಲಿ ಗಮನಾರ್ಹವಾದ ಏರುಪೇರುಗಳಿವೆ. ಮತ್ಸ್ಯಪುರಾಣವು ಈ ಕಥೆಯ ಮೂಲದ ಗುಣಲಕ್ಷಣಗಳನ್ನೆಲ್ಲ ಬಹುಮಟ್ಟಿಗೆ ಭದ್ರವಾಗಿ ಕಾಪಾಡಿಕೊಂಡು ಬಂದಂತೆ ಕಾಣುವುದರಿಂದ ನಾವು ಇದೇ ಪುರಾಣವನ್ನು ಸಂಕ್ಷಿಪ್ತಗೊಳಿಸಲಿದ್ದೇವೆ.[24] ಶಿವನು ಕಪಾಲಮೋಚನ ತೀರ್ಥವು (ತಲೆಬುರುಡೆಗಳನ್ನು ಬಿಡುಗಡೆಗೊಳಿಸುವ) ಇರುವಂತಹ ವಾರಣಾಸಿಯ ಈ ಅವಿಮುಕ್ತವೆಂಬ ಕ್ಷೇತ್ರವನ್ನು ಬಿಟ್ಟು ಅದಾವಾಗಲೂ ಕದಲುವುದಿಲ್ಲವೇಕೆಂದು ಒಂದು ದಿನ ಪಾರ್ವತಿಯು ಅವನನ್ನು ಕೇಳುತ್ತಾಳೆ. ಶಿವನು ಹೀಗೆಂದು ಉತ್ತರಿಸುತ್ತಾನೆ. (cl xxx iii. 84 - 87) :

> ಎಲೆ ವರಾರೋಹಳೆ, ಹಿಂದಕ್ಕೆ ಬ್ರಹ್ಮನಿಗೆ ಉತ್ತಮವಾದ ಐದನೆಯ ತಲೆಯೊಂದಿತ್ತು. ಎಲೆ ಶುಶ್ರೋಣಿಯೆ, ಅದು ಒಮ್ಮೆ ಮೇಲಕ್ಕೆ ಎದ್ದಿತು. ಅದರ ಹೊಳಪು ಚಿನ್ನದಂತಿತ್ತು. ಆ ಮಹಾತ್ಮನ ಪ್ರಜ್ವಲಿಸುವ ಈ ಐದನೆಯ ತಲೆಯು ಹೊರಚಾಚಿ ಮೇಲೇಳುತ್ತಲೆ ಅವನು ನನಗೆ ಹೀಗೆಂದನು : 'ನಾನು ನಿನ್ನ ಹುಟ್ಟಿನ (ಸನ್ನಿವೇಶವನ್ನು) ಬಲ್ಲೆ'. ಅದರಿಂದ ನನ್ನಲ್ಲಿ ಕೋಪವು ಭುಗಿಲೆದ್ದು, ನನ್ನ ಕಣ್ಣುಗಳಲ್ಲಿ ಬೆಂಕಿ ಪ್ರಜ್ವಲಿಸಿ ನಾನು ಎಡಗೈ ಹೆಬ್ಬೆರಳಿನ ಉಗುರಿನಿಂದ ಅವನ (ಐದನೆಯ) ತಲೆಯನ್ನು ಚಿವುಟಿ ಕತ್ತರಿಸಿ ಚೆಲ್ಲಿಬಿಟ್ಟೆ. (ಆಗ) ಬ್ರಹ್ಮನು ಹೀಗೆಂದನು: ನೀನು ನಿರಪರಾಧಿಯಾದ ನನ್ನ ತಲೆಯನ್ನು ತುಂಡರಿಸಿ ಚೆಲ್ಲಿದೆ ಎಂದ ಬಳಿಕ ನೀನೊಬ್ಬ ಶಾಪಗ್ರಸ್ತನಾದ ಕಾಪಾಲಿಕನಾಗುವೆ. ಬ್ರಹ್ಮಹತ್ಯೆಯ (ಪಾಪದ) ಹೊರೆಯಿಂದಾಗಿ ನೀನು ಪೃಥ್ವಿಯ ಮೇಲಿನ ತೀರ್ಥಕ್ಷೇತ್ರಗಳನ್ನು ಕಾಣುತ್ತ ಅಲೆಯಬೇಕು.'

ಬ್ರಹ್ಮನ ತಲೆಯನ್ನು ಕಡಿದು ಚೆಲ್ಲಿದ ಕಾರಣ ಶಿವನೇ ಒಬ್ಬ ಬ್ರಾಹ್ಮಣನ ಕೊಲೆಪಾತಕಿಯೆನ್ನಿಸಿದ್ದರಿಂದ ಅವನು ತನಗೆ ವಿಧಿಸಲಾದ ಪ್ರಾಯಶ್ಚಿತ್ತವನ್ನು ಅನುಭವಿಸಲೇಬೇಕಾಯಿತು. ಆ ತಲೆ ತನ್ನ ಮಂತ್ರಶಕ್ತಿಯಿಂದಾಗಿ ಅವನ ದೇಹಕ್ಕೆ ಅಂಟಿಕೊಂಡಿತು. ಹೀಗಾಗಿ ಅವನು ಅದರೊಂದಿಗೆ ಪಯಣಿಸುತ್ತ ನಾರಾಯಣನನ್ನು (ವಿಷ್ಣು) ಕಂಡು ಭಿಕ್ಷೆ ಕೇಳಲೆಂದು ಹಿಮಾಲಯಕ್ಕೆ ಹೋದನು. ನಾರಾಯಣ ತನ್ನುಗುರಿನ ಮೊನೆಯಿಂದ ತನ್ನದೇ ದೇಹದ ಒಂದು ಭಾಗವನ್ನು ಸಿಗಿದು ಹಾಕುತ್ತಾನೆ. ಸುರಿವ ನೆತ್ತರಿನ ನೆರೆಹಾವಳಿ ಐವತ್ತು ಯೋಜನಗಳಷ್ಟು ದೂರಕ್ಕೆ ಚಾಚುತ್ತದೆ. ಅದು ಒಂದು ಸಾವಿರ ದೇವವರ್ಷಗಳಷ್ಟು

24. ಆನಂದಾಶ್ರಮದ ಆವೃತ್ತಿ, clxxxiii. 83-108.

ಕಾಲ ಹರಿಯುತ್ತಲೇ ಇರುತ್ತದೆ. ಇಷ್ಟಾಗಿಯೂ ಈ ನೆತ್ತರು ಆ ತಲೆಬುರುಡೆಯನ್ನು ತುಂಬಿಬಿಡಲು ಸಾಧ್ಯವಾಗಲಿಲ್ಲ. ಆಗ ನಾರಾಯಣ ಶಿವನನ್ನು ಈ ವಿಸ್ಮಯಕಾರಿ ತಲೆಬುರುಡೆಯ ಬಗೆಗೆ ಕೇಳುತ್ತಾನೆ. ಶಿವನು ಅವನಿಗೆ ನಡೆದ ಕಥೆ ಹಾಗೂ ಅದರ ಫಲವನ್ನು ಕುರಿತು ಅರುಹುತ್ತಾನೆ. ಆಗ, ಶಿವನಿಗೆ 'ತನ್ನ ಸ್ಥಾನಕ್ಕೆ ಮರಳಿ ಹೋಗಬೇಕೆಂದೂ' ಅಲ್ಲಿ ಆ ತಲೆಬುರುಡೆಯು 'ತಾನೇ ತನ್ನನ್ನು ಸ್ಥಾಪಿಸಿಕೊಳ್ಳುವುದು'ಎಂದೂ ಸೂಚಿಸಲಾಯಿತು. ಶಿವನು ಹಲವು ಹೆಸರಾದ ತೀರ್ಥಕ್ಷೇತ್ರಗಳಿಗೆ ಯಾತ್ರೆ ಮಾಡುತ್ತಾನೆ. ಆದರೆ ಅವನು 'ಬಲು ದೊಡ್ಡ ವಿಶ್ರಾಮಸ್ಥಾನವಾದ ಅವಿಮುಕ್ತ'ಕ್ಕೆ ಬಂದು ತಲುಪುವವರೆಗೂ ಆ ತಲೆಬುರುಡೆಯು 'ತಾನು ತನ್ನನ್ನು ಸ್ಥಾಪಿಸಿಕೊಳ್ಳಲಿಲ್ಲ.' ಕೊನೆಗೆ, ಇಲ್ಲಿ ಈ ಶಾಪದ ವಿಮೋಚನೆ ನಡೆಯುತ್ತದೆ. ಮುಂದೆ ಶಿವನು ತನ್ನ ಕಥೆಯನ್ನು ಹೀಗೆ ಮುಕ್ತಾಯಗೊಳಿಸುತ್ತಾನೆ :

> ಎಲೆ ಸುಶ್ರೋಣಿಯೇ, ವಿಷ್ಣುವಿನ ಕೃಪೆಯಿಂದಾಗಿ ಇಲ್ಲಿ ಆ ತಲೆಬುರುಡೆ ಒಡೆದು ಸಾವಿರ (ತುಣುಕು)ಗಳಾಗವು. ಆ ತುಣುಕುಗಳೆಂದರೆ ಕನಸಿನಲ್ಲಿ ಕಂಡ ಸಿರಿವಂತಿಕೆಯಂತಾಗಿತ್ತು. ಹೀಗಾಗಿ ಈ ಕ್ಷೇತ್ರವನ್ನು ಒಂದು ತೀರ್ಥಕ್ಷೇತ್ರವನ್ನಾಗಿ ಮಾಡಿದೆ. ಇದು ಬ್ರಹ್ಮಹತ್ಯೆಯ (ಪಾತಕವನ್ನು) ನಿವಾರಿಸುತ್ತದೆ. ಎಲೆ ದೇವಿ, ಈ ಕ್ಷೇತ್ರವು ಭೂಮಿಯ ಮೇಲೆಲ್ಲ ದೇವತೆಗಳ ಕಪಾಲಮೋಚನ ಕ್ಷೇತ್ರವೆಂದು ಹೆಸರಾಗಿದೆ---ಇಲ್ಲಿ ವಾಸಿಸುತ್ತಿರುವಾಗ ತನ್ನ ದೇಹವನ್ನು ತ್ಯಜಿಸುವವನು ನನ್ನಲ್ಲಿ ಐಕ್ಯನಾಗುತ್ತಾನೆ.[25]

ಪ್ರತಿಯೊಂದು ಮತಾಚರಣೆಗೂ ತನ್ನದೇ ಆದ ಒಂದು ದೈವೀ ಮಾದರಿ ಇಲ್ಲವೆ ಮೂಲ ಮಾದರಿ ಇರುತ್ತದೆ. ಅದರಂತೆ ಶಿವನು ಆಚರಿಸಿದ ಈ ಪ್ರಾಯಶ್ಚಿತ್ತವೆಂದರೆ ಬ್ರಾಹ್ಮಣನನ್ನು ಕೊಂದುದಕ್ಕಾಗಿ ಇರುವ ಮಹಾವ್ರತ ಪ್ರಾಯಶ್ಚಿತ್ತದ ಮಾದರಿ ಎನ್ನಿಸಿದೆ. 'ಮತ್ತವಿಲಾಸ'ದ ಕಾಪಾಲಿಕ ಈ ಅನನ್ಯತೆಯನ್ನು ಹೀಗೆ ಸ್ಪಷ್ಟಪಡಿಸುತ್ತಾನೆ:

---

25. ಅದೇ, 100-101, 104. ಈ ಮಿಥ್‌ದ ಬೇರೆ ಪೌರಾಣಿಕ ಕಥನಗಳನ್ನು ಕುರಿತು ನೋಡಿ ಟಿ. ಎ. ಜಿ. ರಾವ್, 'Elements of Hindu Iconography,' II, Part I, 295-300; ಎಮ್. ಎ. ಡಿ. ರಂಗಸ್ವಾಮಿ, 'The Religion and Philosophy of T ē v ā ram, Book I, pp. 372-76; ಮತ್ತು ಎಸ್. ದಾಸಗುಪ್ತಾ ಅವರು ಕ್ಷೇಮೇಶ್ವರನ 'ಚಂಡಕೌಶಿಕ'ಕ್ಕೆ ಬರೆದ ತಮ್ಮ ಆವೃತ್ತಿಯ ಮುನ್ನುಡಿ, p. lxx. ಇದಲ್ಲದೆ ನೋಡಿ 'ವಾಮನ ಪುರಾಣ' ii. 17 ದಿಂದ iv. 1; 'ಕೂರ್ಮ ಪುರಾಣ' ii. 30 ಮತ್ತು 31; ಮತ್ತು 'ಚನ್ನಬಸವ ಪುರಾಣ', ಅನು. G. Wurth, chaps. xvii-xx. ರಾವ ಇವರು ಶಿವನ ಪ್ರಾಯಶ್ಚಿತ್ತವನ್ನು 'ಆಪಸ್ತಂಭೀಯ ಧರ್ಮಸೂತ್ರ'ದ ಭ್ರೂಣಹನ್ ವ್ರತದೊಂದಿಗೆ ಗುರುತಿಸುತ್ತಾರೆ. ಈ ಮಿಥ್‌ದ ಇನ್ನೊಂದು ಪ್ರಕಾರವು 'ಕಥಾಸರಿತ್ಸಾಗರ' ii. 13 ದಲ್ಲಿ ಕಂಡುಬರುತ್ತದೆ.

ಈ ಪವಿತ್ರವಾದ ವಿಧಾನವನ್ನು (ಮಹಾವ್ರತವನ್ನು) ಕರಾರುವಾಕ್ಕಾಗಿ ಪಾಲಿಸುವ ಮೂಲಕ ಬಾಲಚಂದ್ರನೇ ಶಿಖಾಮಣಿಯಾಗಿರುವ ನಮ್ಮ ದೇವನು ಪೂರ್ವಜನ ತಲೆಯನ್ನು ಕಡಿದು ಚೆಲ್ಲಿದುದರಿಂದಾಗಿ ಉಂಟಾದ ಅಪರಾಧದಿಂದ ಬಿಡುಗಡೆ ಹೊಂದಿದನು -------[26]

ಈ ಆಖ್ಯಾಯಿಕೆಯು ನ್ಯಾಯ ಶಾಸ್ತ್ರದ ವಿಧಿಸುವಿಕೆಗಿಂತ 'ಧಾರ್ಮಿಕ'ವಾಗಿ ಹಿಂದಿನ ಕಾಲದ್ದಾವರೂ ಇವುಗಳಲ್ಲಿ ಐತಿಹಾಸಿಕವಾಗಿ ಯಾವುದು ಮೊದಲು, ಎಂಬುದನ್ನು ತೀರ್ಮಾನಿಸುವುದು ಕಷ್ಟದ್ದು. ಹೀಗಾಗಿ ಅನಿಶ್ಚಿತವಾದದ್ದು. ನ್ಯಾಯಶಾಸ್ತ್ರದ ಗ್ರಂಥಗಳು ಸಾಮಾನ್ಯವಾಗಿ ಪುರಾಣಗಳಿಗಿಂತ ಹಿಂದಿನ ಕಾಲದವಾದರೂ ಇವೆರಡೂ ವರ್ಗದ ಕೃತಿಗಳು ಹಳೆಗಾಲದವಾಗಿಯೂ ಇಂದಿಲ್ಲವಾದ ಆಕರಗಳನ್ನು ಆಧರಿಸಿದವುಗಳಾಗಿವೆ. ಒಬ್ಬ ಬ್ರಾಹ್ಮಣನನ್ನು ಕೊಲ್ಲುವುದು (ಬ್ರಹ್ಮಹತ್ಯೆ) ಪಾಪಗಳಲ್ಲೆಲ್ಲ ಬಲು ಘೋರವಾದುದೆಂದು 'ಬ್ರಾಹ್ಮಣ'ಗಳಲ್ಲಿ ಆಗಲೆ ಭಾವಿಸಲಾಗಿದೆ.[27] ಆದರೆ ಈ ಕೃತಿಗಳು ದಂಡವನ್ನು ತೆರಬೇಕಾದ ಬಗೆಯ ಪ್ರಾಯಶ್ಚಿತ್ತಗಳನ್ನು ನಮೂದಿಸುವುದಿಲ್ಲ. ಅಂತೂ ಶಿವ-ಬ್ರಹ್ಮ ಪುರಾಣ ಕಥೆಯ ಸಾರ ಲಕ್ಷಣಗಳು ರಾಮರಾಘವ ಹಾಗೂ ಮಹಾಭಾರತದ ಶಲ್ಯಪರ್ವದ ಮಹೋದರ ಋಷಿಯ ಕಥೆಗಳಲ್ಲಿ ಕಾಣಸಿಗುತ್ತವೆ.[28] ಈ ಕಥೆಯು ಹೇಳುವಂತೆ, ಒಂದು ಸಲ ರಾಮನು ಕಾದಾಡಿ ಒಬ್ಬ ದುರುಳ ರಾಕ್ಷಸನ ತಲೆಯನ್ನು ಕಡಿದು ಚೆಲ್ಲಿದನು. ರಾಕ್ಷಸನ ಆ ರುಂಡವು ಮಹೋದರ ಋಷಿಯ ತೊಡೆಗೆ ಅಂಟಿಕೊಂಡಿತು. ಅದರ ಹೊರೆಯನ್ನು ಇಳಿಸಿಕೊಳ್ಳಲೆಂದು ಆ ಋಷಿ ತೀರ್ಥದಿಂದ ತೀರ್ಥಕ್ಕೆ ಅಲೆದನು. ಕೊನೆಯಲ್ಲಿ ಅವನು ಸರಸ್ವತಿ ನದಿಯ ಔಶನಸ ತೀರ್ಥದಲ್ಲಿ ಸ್ನಾನಮಾಡಿದ್ದ ತರುವಾಯವೇ ಅವನಿಗೆ ಯಶಲಭಿಸಿದುದು. ಉಶನಸ ಋಷಿ ಅಥವಾ ಶುಕ್ರಾಚಾರ್ಯನ ಹೆಸರಿನ ಈ ಸ್ಥಾನವು ತಲೆಬುರುಡೆಯನ್ನು ಕೊಟ್ಟಿಕೊಂಡು ಒಯ್ದ ಕಾರಣ ಅದು ಅಂದಿನಿಂದ ಕಪಾಲಮೋಚನ ಎಂಬ ಹೆಸರನ್ನು ಪಡೆಯಿತು.[29]

---

26. ಅನು. ಬಾರ್ನೆಟ್, Bsos, v. 713, ಸಂ. ಶಾಸ್ತ್ರಿ, vs 'ಕುಮಾರ ಪುರಾಣ' ವು (ii.30-31) ಇನ್ನೂ ಹೇಳುವುದೇನೆಂದರೆ ಶಿವನು ಬ್ರಹ್ಮಹನ್‌ನ ಪ್ರಾಯಶ್ಚಿತ್ತವನ್ನು ಕೈಕೊಳ್ಳಲೇಬೇಕಾಯಿತಾದರೂ ಅವನದನ್ನು 'ಮಹಾವ್ರತ' ಎಂದು ಕರೆಯುವುದಿಲ್ಲ, ಎಂದು.

27. ನೋಡಿ ಕಾಣೆ. HDS, IV, 10-12.

28. ಸಂ. ಆರ್. ಸಿ. ದಾಂಡೇಕರ, xxxviii. 1-20. ಈ ಮಿಥ್‌ದ ಇನ್ನೊಂದು ಕಥನವು 'ವಾಮನ ಪುರಾಣ'ದಲ್ಲಿ xxxix. 1-14 ಇದ್ದು, ಅದರಲ್ಲಿ ಈ ಯತಿಯನ್ನು ರಹೋದರ ಎಂದು ಕರೆಯಲಾಗಿದೆ.

29. ಈ ಕಪಾಲಮೋಚನವು ಸಧೌವುರ (Sadhaura)ದ ಆಗ್ನೇಯಕ್ಕೆ ಹತ್ತು ಮೈಲುಗಳ ಅಂತರದ ಮೇಲಿನ ಸರಸುತಿ ಅಥವಾ ಸರಸ್ವತಿ ನದಿಯ ದಡದಲ್ಲಿರುವ ಇದೇ ಹೆಸರಿನ ಒಂದು ಕೆರೆಯಂತೆಯೇ ಇದೆ. ನೋಡಿ A Cunnigham, ' Report of a Tour in the Punjab in 1878-79,' pp. 75-78.

ಇವೆರಡೂ ಪುರಾಣ ಕಥೆಗಳು ಒಂದಕ್ಕೊಂದು ಸಂಬಂಧಪಟ್ಟವುಗಳೆಂಬ ಸಂಗತಿಯ ಬಗೆಗೆ ಸಂದೇಹವಿಲ್ಲ. ಈ ತೀರ್ಥಕ್ಷೇತ್ರದ ಭೌಗೋಲಿಕ ಸ್ಥಾನವು ಬೇರೆಯದಾಗಿದ್ದರೂ ಅದರ ಹೆಸರು ಒಂದೇ ಆಗಿದೆ. ಆದರೂ ಮಹಾಭಾರತದ ಆಖ್ಯಾಯಿಕೆಯು ಬ್ರಹ್ಮಹತ್ಯೆಯನ್ನು ಕುರಿತು ಅದಾವ ಸೂಚನೆಯನ್ನೂ ಒಳಗೊಂಡಿಲ್ಲ. ರಾಕ್ಷಸನ ರುಂಡ ತಾನಾಗಿಯೇ ಮಹೋದರನಿಗೆ ಅಂಟಿಕೊಳ್ಳಲು ಕಾರಣ ತಲೆಯನ್ನು ಕಡಿದು ಚೆಲ್ಲಿದ ಪುರಾಣಕಥೆಗೆ ಒಂದು ತಳಹದಿಯನ್ನು ಒದಗಿಸಲೆಂದು ರಾಮ ಮಹೋದರನ ಕಥೆ ಇಲ್ಲವೆ ಇನ್ನಾವುದಾದರೂ ಬಗೆಯ ಅದರ ಪ್ರಥಮರೂಪವನ್ನು (ಪ್ರೊಟೋಟೈಪ್) ಎರವಲು ಪಡೆಯಲಾಗಿದೆ.[30] ಮುಂದೆ, ಬ್ರಾಹ್ಮಣನ ಕೊಲೆಯ ವಿರುದ್ಧವಾಗಿ ಆಗಲೆ ಅಸ್ತಿತ್ವದಲ್ಲಿದ್ದ ನ್ಯಾಯಶಾಸ್ತ್ರದ ವಿಧಾನಕ್ಕೆ ದೈವಿಕ ಅನುಮತಿ ಅಥವಾ ಒಂದು ಪೂರ್ವನಿದರ್ಶನವನ್ನು (ಪ್ರಿಸೀಡೆಂಟ್) ಒದಗಿಸಲೆಂದು ಈ ಪುರಾಣ ಕಥೆಯನ್ನು ಬಳಸಿಕೊಳ್ಳಲಾಯಿತು.

ಶೈವ ಪುರಾಣಕಥೆ ಹಾಗೂ ಸ್ವತಃ ಕಾಪಾಲಿಕ ಯತಿಗಳ ನಡುವಿನ ಸಾಪೇಕ್ಷ ಆದ್ಯತೆಯು ಕೂಡ ಖಚಿತವಾದುದಲ್ಲ. ಕಾಪಾಲಿಕರು ಸಂನ್ಯಾಸಾಶ್ರಮದ ಪಾಲನೆಗೆ ಒಂದು ದೈವಿಕ ಮಾದರಿಯನ್ನು ಒದಗಿಸಲೆಂದು ಒಂದು ಮಿಥ್‌ನ್ನು ಕಂಡುಕೊಂಡರೆ ಅಥವಾ ಆ ಮಿಥ್‌ನ್ನು ಆಧರಿಸಿ ತಮ್ಮ ಈ ಆಚರಣೆಯನ್ನು ಇರಿಸಿಕೊಂಡರು? - ಈ ಪುರಾವೆಯು ಯಾವುದೇ ಬಗೆಯ ಇತ್ಯರ್ಥಕ್ಕೆ ಬರುವಂಥದಲ್ಲ. ಈ ಮಿಥ್ ಮೊದಲ ಬಾರಿಗೆ ಕಾಣಸಿಕೊಳ್ಳುವ ಆಕರಗಳಾದ ಪುರಾಣಗಳು ಮಾನವ ಕಾಪಾಲಿಕರನ್ನು ಕುರಿತು ಕೂಡ ಉಲ್ಲೇಖಿಸುತ್ತವೆ ಹಾಗೂ ಈ ಯತಿಗಳನ್ನು ಕುರಿತಾದ ಸಂದರ್ಭಗಳು ಈ ಕೃತಿಗಳಿಗಿಂತ ಮೊದಲು ಗಮನಾರ್ಹವಾಗಿ ಕಂಡುಬಾರವು. ಕೆಲವು ಅಂಶಗಳಲ್ಲಿ ಈ ಪ್ರಶ್ನೆ ಅನವಶ್ಯಕವಾದುದು. ಬ್ರಾಹ್ಮಣನ ಕೊಲೆಯ ಸಂದರ್ಭದ ಪ್ರಾಯಶ್ಚಿತ್ತ ಹಾಗೂ ಸಾವು ಮತ್ತು ವಿನಾಶಗಳ ದೇವನಾದ ಶಿವನ ಸಹವಾಸವು ತಲೆ ಬುರುಡೆಗಳೊಂದಿಗಿರುವ ಸಂಗತಿಯು ನಿಸ್ಸಂಶಯವಾಗಿಯೂ ಶಿವ ಕಪಾಲಿನ್ ಮಿಥ್‌ಗಿಂತಲೂ ಹಿಂದಣ ಕಾಲದ್ದಾಗಿದ್ದು, ಮಹಾವ್ರತವನ್ನು ಆಚರಿಸುವ ಶೈವ ಯತಿಗಳು ಕೂಡ ಈ ಕಾಲವನ್ನು ಇನ್ನಷ್ಟು ಹಿಂದಕ್ಕೆ ನೂಕಿರಬಹುದಷ್ಟೇ. ಈ ಬಗೆಯ ಯತಿಗಳು ಅಸ್ತಿತ್ವದಲ್ಲಿ ಇದ್ದರೋ, ಇಲ್ಲವೋ ಹಾಗೂ ಅವರೇ ಈ ಮಿಥ್‌ನ್ನು ಕಂಡು ಹಿಡಿದರೋ, ಇಲ್ಲವೋ - ಅದೇನಿದ್ದರೂ ಕಾಪಾಲಿಕರು ಅದನ್ನು ತಮ್ಮ ದೈವಿಕ ಮೂಲಮಾದರಿಯಾಗಿ ಸ್ವೀಕರಿಸಿದುದಂತೂ ಖಂಡಿತ.

ಕಾಪಾಲಿಕರ ಮತಾಚರಣೆಯ ಪರಮ ಗುರಿಯೆಂದರೆ ಶಿವನೊಂದಿಗೆ ಆಧ್ಯಾತ್ಮಿಕವಾಗಿ ಅನನ್ಯತೆಯನ್ನು ಅಥವಾ ಐಕ್ಯವನ್ನು ಹೊಂದುವುದಾಗಿತ್ತು. ಶಿವನ ಮಹಾವ್ರತದ ಆಚರಣೆಯನ್ನು

30. ಇಂದ್ರನು ತ್ವಾಷ್ಟ್ರ ಎಂಬ ರಾಕ್ಷಸನ ಮಗನಾದ ವೃತ್ರನನ್ನು ಸಂಹರಿಸಿದ ಬಗೆಗಿನ ವೇದಿಕ ಮಿಥ್ ಬ್ರಾಹ್ಮಣನನ್ನು ಕೊಲ್ಲುವ ಪಾತಕವನ್ನು ಇಂದ್ರನ ಕತೆಯೊಂದಿಗೆ ಜೋಡಿಸುವಮಟ್ಟಿಗೆ ಒಂದೇ ಬಗೆಯಾಗಿದೆ.

ಮತ್ತೆ ಮತ್ತೆ ಅನುಕರಿಸುವ ಮೂಲಕ ಈ ಯತಿಗಳು ಮತಾಚರಣೆಯ ದೃಷ್ಟಿಯಿಂದ ದೇವನೊಂದಿಗೆ 'ಅದೇ ತೆರನಾದವರು' ಆದರಲ್ಲದೆ ಅವನೊಂದಿಗೆ ಕೆಲವು ದೈವಿಕ ಕೊಡುಗೆಗಳ, ಇನ್ನೂ ಹೆಚ್ಚು ವಿಶಿಷ್ಟವಾಗಿ ಎಂಟು ಬಗೆಯ ಮಂತ್ರಶಕ್ತಿಗಳನ್ನು (ಸಿದ್ಧಿ) ಪಾಲ್ಗೊಂಡರು ಇಲ್ಲವೆ ಅವುಗಳನ್ನು ಅವರಿಗೆ ಕೊಡಮಾಡಲಾಯಿತು.[31]

ಶಿವ ಕಪಾಲಿನ್‌ನೊಂದಿಗಿನ ಮಹತ್ವದ ಈ ಧಾರ್ಮಿಕ ಸಂಯೋಗದ ಲಕ್ಷಣವೆಂದರೆ ಭಕ್ತನ ತಲೆಬುರುಡೆಯ ಭಿಕ್ಷಾಪಾತ್ರೆಯನ್ನು ಬ್ರಹ್ಮನ ತಲೆಬುರುಡೆಯೊಂದಿಗೆ ಅನನ್ಯವಾದದ್ದೆಂದು ತಿಳಿಯುವುದು. ಕಾಪಾಲಿಕರ ಹೆಸರುಗಳೇ ಸೂಚಿಸುವಂತೆ ತಲೆಬುರುಡೆಯ ಪಾತ್ರೆಯು ಅವರ ಲಾಂಛನ ಎನ್ನಿಸಿತ್ತು. 'ಪ್ರಬೋಧಚಂದ್ರೋದಯ'ದಲ್ಲಿ (ಅಂಕ III vss. 12 - 13) ಕಾಪಾಲಿಕನು ತನ್ನನ್ನೇ 'ಮನುಷ್ಯನ ತಲೆಬುರುಡೆಯಲ್ಲಿ ಉಣ್ಣುವವನು'ಎಂದು ಬಣ್ಣಿಸಿಕೊಂಡು, ಮುಂದೆ 'ನಮ್ಮ ಉಪವಾಸದ ಪಾರಣೆ ನೆರವೇರುವುದು ಒಬ್ಬ ಬ್ರಾಹ್ಮಣನ ತಲೆಬುರುಡೆಯಲ್ಲಿ (ಬ್ರಹ್ಮ ಕಪಾಲ) ಹಂಚಲಾದ ಮದ್ಯವನ್ನು ಸೇವಿಸುವ ಮೂಲಕ' ಎಂದೆನ್ನುತ್ತಾನೆ. ಯಶಪಾಲನ ' ಮೋಹರಾಜಪರಾಜಯ'ದಲ್ಲಿ (ಅಂಕ iv. vs 23) ಕಾಪಾಲಿಕನು ಹೀಗೆನ್ನುತ್ತಾನೆ : 'ಸಾಮಾನ್ಯವಾಗಿ, ಒಬ್ಬ ಕುಲೀನ ಮನುಷ್ಯನ (ಉತ್ತಮ ಪುರುಷ) ತಲೆ ಬುರುಡೆಯಲ್ಲಿ ಮಾನವನ ಮಾಂಸವನ್ನು ಸೇವಿಸುವವನು ಶಿವನ ಸ್ಥಾನವನ್ನು (ಶಿವಸ್ಥಾನ) ಪಡೆಯುತ್ತಾನೆ, ಎಂದು ನರಕಾಪಾಲಿನ್ ಘೋಷಿಸುತ್ತಾನೆ. 'ಶಂಕರಾಚಾರ್ಯರ ಕಾಪಾಲಿಕ ಎದುರಾಳಿಯಾದ ಉಗ್ರಭೈರವನು ಸಾಧಿಸುವುದೇನೆಂದರೆ 'ಒಬ್ಬ ಸರ್ವಜ್ಞ ಪುರುಷನ ಇಲ್ಲವೆ ಒಬ್ಬ ಅರಸನ ರುಂಡವನ್ನು ಯಜ್ಞಕ್ಕಾಗಿ ಬಲಿಕೊಟ್ಟರೆ' ತಾನು ಮಾನವರ ಪರಮ ಗುರಿಯನ್ನು ತಲುಪಲು ಸಾಧ್ಯವೆಂದು ಗಿರೀಶನು (ಶಿವ) ತನಗೆ ಹೇಳಿದನೆಂದು.[32] 'ಮತ್ತ ವಿಲಾಸ'ದಲ್ಲಿ ಕಾಪಾಲಿಕನ ದಾಸಿಯು ಕಳೆದು ಹೋದ ತಮ್ಮ ತಲೆಬುರುಡೆಯು 'ಕಮಲಸಿಂಹಾಸನದ ದೇವನ ತಲೆಬುರುಡೆಯ ಹಾಗೆ ಅಪ್ರತಿಮವಾಗಿತ್ತು' ಎಂದು ಹಲುಬುತ್ತಾಳೆ. ಇದು ಶಿವ-ಬ್ರಹ್ಮರ ಮಿಥ್‌ದ ಇನ್ನೊಂದು ಪೂರ್ವಕಥೆಯಾಗಿದೆ.[33] ನಾವು ಈಗಾಗಲೇ ಗಮನಿಸಿದಂತೆ ಮಹಾವ್ರತಿನ್‌ನು ತಾನು ಕಡಿದು ತೆಗೆದ ಬ್ರಾಹ್ಮಣನ ತಲೆಬುರುಡೆಯನ್ನು ತನ್ನೊಂದಿಗೆ ಇರಿಸಿಕೊಳ್ಳಬೇಕೆಂದು ನ್ಯಾಯಶಾಸ್ತ್ರದ ಗ್ರಂಥಗಳು ನಿರ್ದಿಷ್ಟವಾಗಿ ನಮೂದಿಸಿವೆ, ಎಂಬುದು.

---

31. ದೇವತೆಗಳು ಹಾಗೂ ನಾಯಕರೊಂದಿಗಿನ ಮತಾಚರಣೆಯ ಅನನ್ಯತೆಯ ಈ ಬಗೆಯ ಮನೋವಿಜ್ಞಾನವನ್ನು m. Eliade ಅವರು ತಮ್ಮ 'Cosmos and History' (Chaps. i and ii) ಯಲ್ಲಿ ಚೆನ್ನಾಗಿ ವಿಶ್ಲೇಷಿಸಿದ್ದಾರೆ.
32. ಮಾಧವಾಚಾರ್ಯ, 'ಶಂಕರ ದಿಗ್ವಿಜಯ' xi.11.
33. ಅನು. ಬಾರ್ನೆಟ್ಟ್. Bsos.v. 712-13. ರಾಜಶೇಖರನ 'ಕರ್ಪೂರ ಮಂಜರಿ'ಯಲ್ಲಿ, ಕಾಪಾಲಿಕನಾಗಿರಬಹುದಾದ (ಹಿಂದೆ ನೋಡಿ, ಪು. 49) ತಾಂತ್ರಿಕ ಯತಿಯು 'ಪರಮೇಷ್ಠಿನ್‌ನ (ಬ್ರಹ್ಮಾ) ತಲೆಬುರುಡೆಯಿಂದ ತಯಾರಿಸಿದ ಪಾತ್ರೆಯಲ್ಲಿ' ರಾಕ್ಷಸನ ನೆತ್ತರವನ್ನು ಸೇವಿಸುವವಳು, ಎಂಬುದಾಗಿ ಕಾಲಿ ದೇವತೆಯನ್ನು ಕೊಂಡಾಡುತ್ತಾನೆ. (ಅನು. Lanman, ಅಂಕ IV, vs. 19).

ಶಿವನು ಕೂಡ ಬ್ರಹ್ಮನ ತಲೆಬುರುಡೆಯನ್ನು ಹಿಡಿದುಕೊಂಡು ಇದನ್ನೇ ಮಾಡುತ್ತಾನೆ. ಕಾಪಾಲಿಕ ಮಹಾವ್ರತನು ಮೊದಲ ಬಾರಿಗೆ ತಲೆಬುರುಡೆಯ ಪಾತ್ರೆಗಾಗಿ ಒಬ್ಬ ಬ್ರಾಹ್ಮಣನನ್ನು ಕೊಂದಿರುವುದು ಅನವಶ್ಯಕವಲ್ಲದೆ ಅಂಥ ಸಾಧ್ಯತೆ ಕಡಿಮೆ ಎಂದರೂ ಯಾವುದಾದರೂ ಒಂದು ಹಳೆಯ ತಲೆಬುರುಡೆ ಸಾಕಿತ್ತು, ಎಂದು ಕಾಣದು. ಅದೊಬ್ಬ ಕುಲೀನನ ತಲೆಬುರುಡೆ (ಉತ್ತಮ ಪುರುಷ ಕಪಾಲ) ಅಥವಾ ಒಬ್ಬ ಬ್ರಾಹ್ಮಣನದಾಗಿಕಬೇಕಿತ್ತು(ಬ್ರಹ್ಮಕಪಾಲ). ಯತಿಯೊಬ್ಬನ, ಶಿವನೊಂದಿಗಿನ ಅನನ್ಯತೆಯನ್ನು ಕುರಿತಾದ ನಮ್ಮ ತರ್ಕಾಧಾರಿತವಾದ ಊಹೆ ಸರಿಯಾಗಿದ್ದರೆ 'ಬ್ರಹ್ಮಕಪಾಲ' ಪದವು ಬ್ರಹ್ಮದೇವನ ತಲೆಬುರುಡೆ ಎಂಬ ಅರ್ಥವನ್ನು ಸೂಚಿಸಲು ಸಾಧ್ಯ.

ನಾವು ಇನ್ನೂ ಚರ್ಚಿಸಬೇಕಿದ್ದ ಮಹಾವ್ರತ ಒಂದಿದೆ. ಪತಂಜಲಿಯ 'ಯೋಗ ಸೂತ್ರ' ii. 30 - 31 ದ ಹೇಳಿಕೆಯಂತೆ, ಐದು ಯಮಗಳಾದ ಅಹಿಂಸಾ, ಸತ್ಯ, ಅಸ್ತೇಯ (ಕಳವು ಮಾಡದಿರುವುದು), ಬ್ರಹ್ಮಚರ್ಯ (ಪರಿಶುದ್ಧತೆ ಹಾಗೂ ಇಂದ್ರಿಯ ನಿಗ್ರಹ), ಹಾಗೂ ಅಪರಿಗ್ರಹ (ದೇಹದ ಅಸ್ತಿತ್ವಕ್ಕಾಗಿ ಅಗತ್ಯವಿದ್ದುದಕ್ಕಿಂತ ಹೆಚ್ಚಿನದನ್ನು ಸ್ವೀಕರಿಸದಿರುವುದು)ಗಳನ್ನು ಗಣ್ಯತೆ, ಸ್ಥಾನ, ವೇಳೆ ಅಥವಾ ಸನ್ನಿವೇಶಗಳ ಯಾವುದೇ ಅಪವಾದವಿಲ್ಲದೆ ಆಚರಿಸಲಾದರೆ ಇಂಥ ಆಚರಣೆಯು 'ಮಹಾವ್ರತ' ಎಂದೆನಿಸುತ್ತದೆ.[34] ಇದನ್ನು ಆಚರಿಸುವ ಹೊರೆ ಎಲ್ಲ ಅವಸ್ಥೆಯ ಯತಿಗಳ ಮೇಲೂ ಇರುತ್ತದೆ.[35] ಈ ಮಹಾವ್ರತವನ್ನು ಕಾಳಾಮುಖರದೆಂದು ನಾವು ನಂಬುತ್ತೇವೆ. ಈ ವಾದಕ್ಕೆ ಸಮರ್ಥನೆ ನೀಡುವ ಪುರಾವೆಯು ಬಲು ತೆಳುವಾಗಿರುವಂತಿದೆಯಾದರೂ ಕಾಳಾಮುಖರನ್ನು 'ಬ್ರಾಹ್ಮಣ'ಗಳ ಮಹಾವ್ರತ ಇಲ್ಲವೆ 'ವಿಷ್ಣು ಸ್ಮೃತಿಯ' ಮಹಾವ್ರತದೊಂದಿಗೆ ನಂಟುಗೂಡಿಸುವಂತಹ ಯಾವುದೇ ವಾಸ್ತವ ಪ್ರಾಯವಾದ ಕಾರಣವಿಲ್ಲ.[36] ಇದಕ್ಕೆದುರಾಗಿ (ಕರ್ನಾಟಕದ ಶಿವಮೊಗ್ಗಾ ಜಿಲ್ಲೆಯ) ಬಳ್ಳಿಗಾವೆಯಲ್ಲಿರುವ ಕೋಡಿಯ ಮಠದ ಕಾಳಾಮುಖರು 'ಪಾತಂಜಲ' ಹಾಗೂ 'ಯೋಗ ಶಾಸ್ತ್ರ'ಗಳನ್ನು[37] ಅಧ್ಯಯನ ಮಾಡುತ್ತಾರೆ, ಎಂದೆನ್ನಲಾಗುತ್ತದಲ್ಲದೆ ಎಲ್ಲಕ್ಕೂ ಹೆಚ್ಚಿನ ಕಾಳಾಮುಖ ಶಾಸನಗಳು ಈ ಯತಿಗಳ ಯೋಗಸಿದ್ಧಿಗಳು ಹಾಗೂ ಸದ್ಗುಣಗಳಿಗೆ ಒತ್ತು ನೀಡುತ್ತವೆ. ಇದೂ ಅಲ್ಲದೆ ಕಾಳಾಮುಖರೊಂದಿಗೆ ತೀರ ಹತ್ತಿರದ ನಂಟನ್ನು ಹೊಂದಿದ

---

34. 'ಅಹಿಂಸಾ ಸತ್ಯಸ್ತೇಯ ಬ್ರಹ್ಮಚಾರ್ಯಾಪರಿಗ್ರಹ ಯಮಃ ।
ಜಾತಿ ದೇಶ ಕಾಲ ಸಮಯಾನವಛಿನ್ನಾಃ ಮಹಾವ್ರತಮ್ ॥'ಸಂ. J. Ballantyne.

35. ನೋಡಿ ಕಾಣೆ, HDS,V,Part II, 1420.

36. ಯಾವೊಬ್ಬನು ಕಾಪಾಲಿಕ ಮಹಾವ್ರತ ಹಾಗೂ ಬ್ರಹ್ಮಹನ್‌ನ ಮಹಾವ್ರತಗಳ ಅನನ್ಯ ಸಂಬಂಧವನ್ನು ಒಪ್ಪದಿದ್ದರೆ ಅವನು ಯೋಗಸೂತ್ರದ ಮಹಾವ್ರತ ಕೂಡ ಕಾಪಾಲಿಕರದೇ ಆಗಿತ್ತೆಂದು ವಾದ ಹೂಡಬಹುದು. ಆದರೆ ಯೋಗಸೂತ್ರವು ಅಹಿಂಸೆ ಹಾಗೂ ಬ್ರಹ್ಮಚರ್ಯೆಗಳಿಗೆ ನೀಡುವ ಒತ್ತಿನಿಂದಾಗಿ ಈ ಸಂಗತಿ ಇನ್ನಷ್ಟು ಅಸಾಧ್ಯವೇ ಸರಿ.

37. ಮುಂದೆ ನೋಡಿ, ಪು. 104.

ಪಾಶುಪತ ಸಂಪ್ರದಾಯವು ಪಂಚ ಯಮಗಳ ಆಚರಣೆಗೆ ವಿಶೇಷವಾದ ಒತ್ತು ನೀಡುತ್ತದೆ. ಪಾಶುಪತ - ಕಾಳಾಮುಖ ಯತಿಯಾದ ಲಕುಲೀಶನದೆಂದು ಹೇಳಲಾಗುವ 'ಪಾಶುಪತ ಸೂತ್ರ'ವನ್ನು ಕುರಿತಾದ ಕೌಂಡಿನ್ಯನ ಭಾಷ್ಯವು ಐದು ಯಮಗಳನ್ನು ಹಾಗೂ ಐದು ನಿಯಮಗಳನ್ನು ಕುರಿತಾದ ಮೆಚ್ಚುಗೆಗಾಗಿ ಹತ್ತೊಂಬತ್ತಕ್ಕಿಂತ ಕಡಿಮೆಯಿಲ್ಲದಷ್ಟು ಪುಟಗಳನ್ನು ಮೀಸಲಾಗಿರಿಸಿದೆ.[38] ಬೇರೆ ಪರ್ಯಾಯಗಳು ದೊರಕದ ಕಾರಣ ಕಾಳಾಮುಖರ ಮಹಾವ್ರತವು ಪತಂಜಲಿಯ 'ಯೋಗಸೂತ್ರ'ವನ್ನು ಅನುಸರಿಸಿದುದಾಗಿತ್ತೆಂದು ನಂಬುವುದು ಎಲ್ಲಕ್ಕೂ ಉತ್ತಮ.

## ಸೋಮ ಸಿದ್ಧಾಂತ

ಹಲವು ಆಕರಗಳಲ್ಲಿ, ಕಾಪಾಲಿಕರ ಸಿದ್ಧಾಂತವನ್ನು 'ಸೋಮಸಿದ್ಧಾಂತ' ಎಂದು ಕರೆಯಲಾಗಿದೆ.[39] ಶ್ರೀಹರ್ಷನ 'ನೈಷಧಚರಿತ'ದಲ್ಲಿ ದೇವಿ ಸರಸ್ವತಿಯ ಬಲು ದೀರ್ಘವಾದ ಬಣ್ಣನೆಯಿದ್ದು ಅವಳ ದೇಹದ ಬೇರೆ ಬೇರೆ ಅವಯವಗಳನ್ನು ಬೇರೆ ಬೇರೆ ಸಿದ್ಧಾಂತಗಳಿಂದ ತಯಾರಿಸಲಾಗಿದೆ, ಎಂದೆನ್ನಲಾಗಿದೆ. ಅವಳ ಮೋರೆ, ಸೋಮಸಿದ್ಧಾಂತ.[40] ಭಾಷ್ಯಕಾರ ಚಾಂಡೂಪಂಡಿತನು ಇದನ್ನು ಕಾಪಾಲಿಕ ದರ್ಶನ ಶಾಸ್ತ್ರವೆಂದು ವಿವರಿಸುತ್ತಾನೆ.[41] ಕೃಷ್ಣಮಿಶ್ರನ 'ಪ್ರಬೋಧ ಚಂದ್ರೋದಯ' ಹಾಗೂ ಆನಂದರಾಯನ 'ವಿದ್ಯಾಪರಿಣಯನ', ಇವೆರಡರಲ್ಲೂ ಕಾಪಾಲಿಕನ ಪಾತ್ರವನ್ನು 'ಸೋಮಸಿದ್ಧಾಂತ' ಎಂದು ಹೆಸರಿಸಲಾಗಿದೆ. ಗೋಕುಲನಾಥನ 'ಅಮೃತೋದಯ' (ಅಂಕ II, vs. 25ರ ತರುವಾಯ) ವು, ಉದಯನನ 'ನ್ಯಾಯ ಕುಸುಮಾಂಜಲಿ'ಯ ಭಾಷ್ಯಕಾರನಾದ ವರ್ಧಮಾನನು 'ಸೋಮತಂತ್ರ'ನೆಂದೂ ಕರೆಯಲಾಗುತ್ತಿದ್ದ ಸೋಮಸಿದ್ಧಾಂತನೊಂದಿಗೆ ಕಾದಾಡಿ ಅವನನ್ನು ಕೊಂದನೆಂದು ಹೇಳುತ್ತದೆ. ಸೋಮಸಿದ್ಧಾಂತನ ಪತನವಾಗುತ್ತಲೆ ಅವನ ಜೊತೆಗೆ ಕಾಪಾಲಿಕರಾದ ನೀಲೋಹಿತ, ಮಹಾಭೈರವ, ಭೂತಧರ್ಮ ಹಾಗೂ ಉಮಾಮಹೇಶ್ವರರೆಲ್ಲರೂ ಕಾಳಗದ ಕಣದಿಂದ ಕಾಲ್ತೆಗೆದರು. ನಾವು ಆಗಲೆ ಗಮನಿಸಿದಂತೆ 'ಅಮರಕೋಶ'ದ ಭಾಷ್ಯಕಾರನಾದ ಕ್ಷೀರಸ್ವಾಮಿನ್‌ನು ಮಹಾವ್ರತಿನ್, ಕಪಾಲಿನ್, ಸೋಮಸಿದ್ಧಾಂತಿನ್ ಹಾಗೂ ತಾಂತ್ರಿಕರನ್ನು ಗುರುತಿಸುತ್ತಾನೆ.[42] 'ಸೋಮ'ರಿಂದ ಇಲ್ಲವೆ 'ಸೌಮ್ಯ'ರಿಂದ ಕಾಪಾಲಿಕರನ್ನು ಸ್ಥಳಾಂತರಿಸುವಂತೆ ಕಾಣುವ ಸಂಪ್ರದಾಯಗಳ

---

38. ಸಂ. ಆರ್. ಎ. ಶಾಸ್ತ್ರಿ, pp. 15-34.
39. ಹಂಡಿಕಿ ಅವರು ಶ್ರೀ ಹರ್ಷನ 'ನೈಷಧಚರಿತ', pp. 640-44 ದ ತಮ್ಮ ಅನುವಾದಕ್ಕಾಗಿ ಬರೆದ ಟಿಪ್ಪಣಿಗಳಲ್ಲಿ ಸೋಮಸಿದ್ಧಾಂತವನ್ನು ಕುರಿತಾದ ಸಂಸ್ಕೃತದ ಬಹಳಷ್ಟು ಸಂದರ್ಭಗಳನ್ನು ಕಲೆಹಾಕಿದ್ದಾರೆ.
40. ಉದ್ಧೃತ, ಅದೇ, x 87 (ಪು. 149).
41. ಉದ್ಧೃತ ಅದೇ, ಪು. 427.
42. ನೋಡಿ, ಅದೇ, ಪು. 640.

ಪಟ್ಟಿಗಳನ್ನು ಒಳಗೊಂಡ ಕೆಲವು ಪುರಾಣಗಳನ್ನು ಹಾಗೂ ಇನ್ನು ಕೆಲವು ಆಕರಗಳನ್ನು ಈಗಾಗಲೇ ಪರಿಶೀಲಿಸಿದ್ದೇವೆ.[43] ವಾತ್ಸ್ಯಾಯನನ 'ನ್ಯಾಯ ಭಾಷ್ಯ' ಕುರಿತಾದ ರಘೂತ್ತಮನ ಭಾಷ್ಯವು ಆರು ಪಾಷಂಡಿ ಸಿದ್ಧಾಂತಗಳ (' ಷಡ್ ಭಯಾ: ಸಿದ್ಧಾಂತಾ : ) ಒಂದು ಪಟ್ಟಿಯಲ್ಲಿ 'ಸೌಮ್ಯ'ವನ್ನು ಸೇರ್ಪಡಿಸಿದೆ. ಈ ಆರಂದರೆ ಚಾರ್ವಾಕ, ಸೌಮ್ಯ, ಸೌಗತ, ಜಿನ, ಆರ್ಹತ ಹಾಗೂ ದಿಗಂಬರ.[44] ಸೋಮಸಿದ್ಧಾಂತವಾದಿನ್‌ರನ್ನು 'ಅಕುಲವೀರ ತಂತ್ರ'ದಲ್ಲಿಯೂ ಉಲ್ಲೇಖಿಸಲಾಗಿದೆ.[45] ಜಿ. ತುಚ್ಚಿ ಎನ್ನುವವರು ಹರಿವರ್ಮನ 'ತತ್ವ ಸಿದ್ಧಿ ಶಾಸ್ತ್ರ' (ಕ್ರಿ. ಶ. ನಾಲ್ಕನೆಯ ಶತಮಾನ) ಹಾಗೂ ಅಸಂಗನ 'ಮಧ್ಯಾಂತಾನುಗಮಶಾಸ್ತ್ರ'ದ ಚೀನಿ ಭಾಷೆಯ ಅನುವಾದದಲ್ಲಿ 'ಸ ಯ ಸಿಯು ವೊ' ಎಂಬ ಆಧ್ಯಾತ್ಮಿಕ ಮಠವನ್ನು ಕುರಿತಾದ ಪೂರ್ವವೃತ್ತಾಂತಗಳನ್ನು ಕಂಡು ಹಿಡಿದಿದ್ದಾರೆ. ತುಚ್ಚಿ ಅವರ ನಂಬಿಕೆಯಂತೆ ಈ ಮಠವನ್ನು ಸಂಸ್ಕೃತದಲ್ಲಿ 'ನ್ಯಾಯ ಸುಮ' ಅಥವಾ 'ನಯಸೌಮ್ಯ'ಎಂಬುದಾಗಿ ಲಿಪ್ಯಂತರಗೊಳಿಸಬೇಕಿದ್ದು ಅದು 'ಸೋಮ ಸಿದ್ಧಾಂತ'ದ ಹಾಗೆಯೇ ಇದೆ.[46]

'ಸೋಮ ಸಿದ್ಧಾಂತ'ದ ಉಲ್ಲೇಖವನ್ನು ಹೊಂದಿದ ಯಾವುದೇ ಆಕರವು ಅದನ್ನು ಕಾಪಾಲಿಕ ಸಿದ್ಧಾಂತದ ಒಂದು ಹೆಸರೆಂದು ಗುರುತಿಸುವುದನ್ನುಳಿದು ಆ ಪದದಾಚೆಗೆ ಇನ್ನೇನೂ ಹೇಳುವುದಿಲ್ಲ. 'ಪ್ರಬೋಧಚಂದ್ರೋದಯ'ವನ್ನು ಕುರಿತಾದ ಹಲವಾರು ಭಾಷ್ಯಗಳು 'ಸೋಮ' ಪದವನ್ನು 'ಸ ಉಮಾ' (ಉಮಾಳೊಂದಿಗೆ ಅಂದರೆ ಪಾರ್ವತಿಯೊಂದಿಗೆ) ಎಂಬ ಸಮಾಸದಿಂದ ವ್ಯುತ್ಪತ್ತಿಯನ್ನು ಎಸಗುತ್ತವೆ.[47] ಈ ವ್ಯುತ್ಪತ್ತಿಯು ಐತಿಹಾಸಿಕವಾಗಿ ಸರಿಯಲ್ಲದಿದ್ದರೂ ಕೃಷ್ಣಮಿಶ್ರನ ಕಾಲದವರೆಗೆ 'ಸೋಮ' ಅಥವಾ 'ಸೋಮೇಶ್ವರ'ವು ಶಿವನ ಸರ್ವನಾಮಪದ ಎನ್ನಿಸಿತ್ತು. 'ಸ ಉಮಾ ' ಎಂಬ ವ್ಯುತ್ಪತ್ತಿಯ ಲೈಂಗಿಕ ಪರಿಣಾಮಗಳು ಕಾಪಾಲಿಕರ ದೇವನಿಗೆ ಹೆಚ್ಚು ಅನುಕೂಲದವಾಗಿವೆ.

ಕೆಲವೇ ಶಾಸನಗಳು 'ಸೋಮಸಿದ್ಧಾಂತ'ದ ತತ್ವಜ್ಞಾನವನ್ನು ಸಂಕ್ಷಿಪ್ತವಾಗಿ ಉಲ್ಲೇಖಿಸುತ್ತವಾದರೂ ಅದನ್ನು ಕುರಿತಾದ ಯಾವುದೇ ಗಮನಾರ್ಹ ಮಾಹಿತಿ ಅವುಗಳಲ್ಲಿರದು. ಕ್ರಿ.ಶ. 1171-72ರಲ್ಲಿ (ಚಿಂಗಲ ಪೇಟೆ ಜಿಲ್ಲೆ, ಮದ್ರಾಸ) ತಿರಿವ್ವೊರ್ರಿಯೂರ ಮಠದ ಮಠಾಧಿಪತಿಯಾಗಿದ್ದ ಚತುರಾನನ ಪಂಡಿತನೆಂದು ಬಿರುದಾಂಕಿತನಾದ ಯತಿಯನ್ನು ವಾಗೀಶಭಟ್ಟನೆಂಬ ಸೋಮಸಿದ್ಧಾಂತಿನ್‌ನ ಸಮಕಾಲೀನನೆಂದು ಬಣ್ಣಿಸಲಾಗಿದೆ.[48]

43. ಮೇಲಕ್ಕೆ ನೋಡಿ, pp. 7-11.

44. ಜಿ. ತುಚ್ಚಿ ಅವರಿಂದ ಉದ್ಧೃತ, JRASB, n.s. xxvi. 130.

45. ಉದ್ಧೃತ, ಅದೇ..

46. ಅದೇ. pp. 129-30.

47. ನೋಡಿ ಅದನ್ನೇ. p. 131. ಅಲ್ಲದೆ ನೋಡಿ ವಿ. ಪಣಶೀಕರರ ಈ ನಾಟಕದ ಆವೃತ್ತಿಯನ್ನು ನೋಡಿ, pp. 111. 113-14.

48. ನೋಡಿ ವಿ. ರಾಘವನ್, EI, XXVII, 297.

ತಿರುವೊರ್ರಿಯೂರ ಮಠದ ಯತಿಗಳು ಮಹಾವ್ರತಿನ್‌ರಾಗಿರುತ್ತಿದ್ದರು.[49] 'ಸೋಮಸಿದ್ಧಾಂತ' ತತ್ವಜ್ಞಾನವನ್ನು ಕುರಿತಾದ ಇನ್ನೊಂದು ಪೂರ್ವವೃತ್ತಾಂತವು ಧಾರವಾಡ ಜಿಲ್ಲೆಯ ಮೇವುಂಡಿಯ ಕ್ರಿ. ಶ 897ರ ಶಾಸನದಲ್ಲಿ ದೊರೆತಿದೆ.[50] ನಾವು ಕಂಡುಕೊಂಡಂತೆ[51] 'ಮುಂಡಶೃಂಖಲಿಕ ಪಾಶುಪತಾಚಾರ್ಯ ಪರಿಷತ್ತಿ'ನ ಸೋಮಖಡ್ಡುಕ ಯತಿಗಳನ್ನು ನೇಪಾಳದ ಹದಿನೇಳನೆಯ ಶತಮಾನದ ಒಂದು ಶಾಸನದಲ್ಲಿ ದಾನವನ್ನು ಸ್ವೀಕರಿಸಿದವರೆಂದು ಉಲ್ಲೇಖಿಸಲಾಗಿದೆ.

## ಕಾಪಾಲಿಕ ಭಕ್ತಿ

ನಮ್ಮ ಬಳಿ ಯಾವುದೇ ಕಾಪಾಲಿಕ ಗ್ರಂಥವಿಲ್ಲದ ಕಾರಣ ನಾವು ಈಗಾಗಲೇ ಉದ್ಧರಿಸಿದ ಹಲವಾರು ಸಂದರ್ಭಗಳನ್ನು ಆಧರಿಸಿ ಈ ಸಂಪ್ರದಾಯದ ಸಿದ್ಧಾಂತಗಳು ಹಾಗೂ ಮನೋಧರ್ಮಗಳನ್ನು ಮರುರಚನೆಗೆ ಒಳಪಡಿಸಲು ಯತ್ನಿಸಬಹುದಾಗಿದೆ. ಕಾಪಾಲಿಕ ಮತದ ಕಮಾನಿನ ನೆತ್ತಿಗಲ್ಲೆಂದರೆ ವ್ಯಕ್ತಿಗತನಾದ ದೇವನಿಗೆ ವ್ಯಕ್ತಿಗತವಾಗಿ ಸಲ್ಲಿಸಲಾಗುವ ಭಕ್ತಿ. ಈ ದೇವನೆಂದರೆ ಶಿವನ ರುದ್ರಸ್ವರೂಪನಾದ ಭೈರವನ ಅವತಾರವೆಂದು ಸಾಮಾನ್ಯವಾಗಿ ತಿಳಿಯಲಾಗುತ್ತದೆ. ಕಾಪಾಲಿಕರ ಭಕ್ತಿಯ ಪ್ರವಾಹಕ್ಕೆ ದಾರಿಯನ್ನು ಮಾಡಿಕೊಟ್ಟ ಆಚರಣೆಗಳೆಂದರೆ ಒಲಿಸಿಕೊಳ್ಳುವುದು, ಅನುಕರಣೆಯದು ಇಲ್ಲವೆ ಇವೆರಡೂ ಬಗೆಯವುಗಳಾಗಿದ್ದವು. ಇಂಥ ಧರ್ಮಾಚರಣೆಗಳ ಮುಖ್ಯ ಗುರಿಯೆಂದರೆ ಉಪಾಸಕ ಹಾಗೂ ಅವನ ದೇವನ ನಡುವೆ ಆಧ್ಯಾತ್ಮಿಕ ಐಕ್ಯವನ್ನು ಸಾಧಿಸುವುದು. ಇಂಥ ಐಕ್ಯದಿಂದ ದೊರಕುವ ಲಾಭಗಳು ಇಬ್ಬಗೆಯವು. ಭಕ್ತನು ಐಹಿಕ ಮಟ್ಟದಲ್ಲಿ ಮಾನವಾತೀತವಾದ ಮಾಂತ್ರಿಕ ಸಾಮರ್ಥ್ಯಗಳನ್ನು (ಸಿದ್ಧಿ) ಪಡೆಯುವುದಲ್ಲದೆ, ಅಂತಿಮ ಗತಿಶಾಸ್ತ್ರದ ಮಟ್ಟದಲ್ಲಿ ಅವನು ಪುನರ್ಜನ್ಮಗಳಿಂದ ಬಿಡುಗಡೆಯಸ್ನು (ಮುಕ್ತಿ) ಪಡೆದು ನಿರಂತರವಾಗಿ ಲೈಂಗಿಕ ಸುಖದ ಸ್ವರ್ಗದಲ್ಲಿ ವಿಹರಿಸುವುದು.

ಆನಂದಗಿರಿಯ 'ಶಂಕರ ವಿಜಯ'ದ ಬೋಧೋಲ್ಬಣ ನಿತ್ಯಾನಂದ ಹಾಗೂ ಅವನ ಕಾಪಾಲಿಕ ಅನುಯಾಯಿಗಳ ಹೇಳಿಕೆಗಳು ಕಾಪಾಲಿಕ ಭಕ್ತಿಯನ್ನು ಕುರಿತು ತುಂಬ ಪ್ರಮಾಣಬದ್ಧವಾದ ಒಂದು ವಾಕ್ಯಪ್ರಕರಣವನ್ನು (ಲೋಕಸ್ ಕ್ಲಾಸಿಕಸ್) ರೂಪಿಸಿದಂತಾಗಿದೆ. ಶಂಕರರು ಆ ಜನರನ್ನು ಅವರ ಕುಲಾಚಾರ ಹಾಗೂ ವಿಧಿಗಳನ್ನು ಕುರಿತು ವಿಚಾರಿಸಿದರು. ಅದಕ್ಕೆ ಅವರು ಹೀಗೆ ಉತ್ತರಿಸುತ್ತಾರೆ:

ಅಯ್ಯಾ ಸ್ವಾಮಿಗಳೆ, ಕರ್ಮದಿಂದ ಮುಕ್ತವಾದ ನಮ್ಮ ಆಚರಣೆಯು

---

49. ನೋಡಿ, ಅದನ್ನೇ, p. 300 ಮತ್ತು text vs. 3.

50. ಸಿ. ಆರ್. ಕೃಷ್ಣಮಾಚಾರ್ಲು (ಸಂ.) SII. XI, Part I, no. 22, ಸಾಲು 48.

51. ಹಿಂದೆ ನೋಡಿ, ಪು. 30.

ಭೂತಮಾತ್ರರಿಗೆಲ್ಲ ನೆಮ್ಮದಿಯನ್ನು ನೀಡುತ್ತದೆ. ಏಕೆಂದರೆ, 'ಕರ್ಮದೊಂದಿಗೆ (ಅಥವಾ ಅದರ ಮೂಲಕ) ಮುಕ್ತಿ ಎಂಬುದಿಲ್ಲ' ಎಂದು ಹೇಳಲಾಗಿದೆ. ನಾನು ವಿಶ್ವದ ನಿರ್ಮಾತೃ ಹಾಗೂ ಕೊನೆಗೆ ಅದರ ಲಯಕ್ಕೆ ಕಾರಣನಾದ ಭೈರವನನ್ನು ಮಾತ್ರ ಆರಾಧಿಸಬೇಕು. ಲಯದ ಕಾರಣನೇ ಸೃಷ್ಟಿ ಹಾಗೂ ಸ್ಥಿತಿಗಳಿಗೂ ಕಾರಣನು ------ವಿಶಿಷ್ಟ ಪ್ರಕಾರದ ಅಧಿಕಾರಗಳನ್ನು ವಹಿಸಿಕೊಡಲಾದ ದೇವತೆಗಳೆಲ್ಲ ಅವನ ಅಂಶ ಮಾತ್ರರು. ಅವರು ಭೈರವನ ಅಪ್ಪಣೆಗಳನ್ನು ತಮ್ಮ ತಲೆಗಳ ಮೇಲೆ ಹೊತ್ತುಕೊಳ್ಳುತ್ತಾರೆ. ಅವನ ಮಾತುಗಳತ್ತ ಗಮನ ನೀಡುವ ಅವರ ಸಾಮರ್ಥ್ಯಗಳು ವಿಶಿಷ್ಟವಾದ ಕರ್ತವ್ಯಗಳ ಪಾಲನೆಗಾಗಿ ನಿರ್ದೇಶಿತವಾದವುಗಳು.[52]

ಈ ಪರಿಚ್ಛೇದದ ಕೆಲ ಭಾಗಗಳು ಅಸ್ಪಷ್ಟವಾಗಿದ್ದರೂ ಸಾಧಾರಣವಾದ ಒಟ್ಟು ತಾತ್ಪರ್ಯವು ಸ್ಪಷ್ಟವಾಗಿದೆ. ಉದಾ: 'ಕರ್ಮ' ಪದವು 'ಧಾರ್ಮಿಕ ಆಚರಣೆ ಹಾಗೂ ಒಳ್ಳೆಯ ಕೆಲಸ' ಇಲ್ಲವೆ 'ಗತಕಾಲದ ಒಳ್ಳೆಯ ಇಲ್ಲವೆ ಕೆಟ್ಟ ಕೃತ್ಯಗಳ ಪರಿಣಾಮ' ಎಂಬ ಅರ್ಥಗಳನ್ನು ಸೂಚಿಸುತ್ತಿದ್ದರೂ, ಎರಡನೆಯ ಅರ್ಥವು ಹೆಚ್ಚು ಸಮಂಜಸವೆನ್ನಿಸುವಂತಿದೆ. ಈ ಪರಿಚ್ಛೇದದ ಮುಖ್ಯ ಗುರಿಯೆಂದರೆ ಭೈರವನನ್ನು ವಿಶ್ವದ ಸೃಷ್ಟಿಕರ್ತ, ಸ್ಥಿತಿಕರ್ತ ಹಾಗೂ ಲಯಕರ್ತನೆಂದೂ ಅಲ್ಲದೆ ದೇವತೆಗಳಿಗೆಲ್ಲ ಒಡೆಯನೆಂದು ಸಾರುವುದು. 'ವಿಶ್ವದ ಸೃಜನ ಕರ್ತ'(ಜಗತ್ಕರ್ತೃ) ಎನ್ನುವ ವಿಶೇಷಣ ಪದವು ವಿಶ್ವದ ಭೌತಿಕವಾದ ಹಾಗೂ ಸಾಧನಭೂತವಾದ ಕಾರಣಗಳ ನಡುವಣ ದ್ವೈತಭಾವವನ್ನು ಸೂಚಿಸುತ್ತದೆ. ರಾಮಾನುಜರು ಹಾಗೂ ಬ್ರಹ್ಮಸೂತ್ರದ ಇತರ ಭಾಷ್ಯಕಾರರು ಈ ಸಂಗತಿಯನ್ನು ಕಾಪಾಲಿಕ ಹಾಗೂ ಪಶುಪತಿಯ ಇತರ ಉಪಾಸಕರ ಮೇಲೆ ಅಧ್ಯಾರೋಪಿಸುತ್ತಾರೆ. ಹಿಂದೂ ದೇವತಾ ಸಮುಚ್ಚಯದ ಹಲವಾರು ದೇವತೆಗಳನ್ನು ಪ್ರಾಥಮಿಕ ದೇವನೊಬ್ಬನ ಭಾಗಗಳ (ಅಂಶಗಳ) ಸ್ಥಾನಕ್ಕೆ ಪದಾವನತಿಗೊಳಿಸುವಂತಹ ಒಂದು ಪರಿಕಲ್ಪನೆ ಭಕ್ತಿ ಸಾಹಿತ್ಯ, ಅದಕ್ಕೂ ಹೆಚ್ಚಿಗೆ ಪುರಾಣಗಳಲ್ಲಿ ಮತ್ತೆ ಮತ್ತೆ ಕಂಡು ಬರುತ್ತಿದ್ದು ಅದು ಏಕೇಶ್ವರವಾದ ಹಾಗೂ ಅನೇಕೇಶ್ವರವಾದಗಳ ನಡುವಣ ಮಧ್ಯಮ ಮಾರ್ಗವೆನ್ನಿಸಿದ ಒಂದು ಬಗೆಯ ಏಕೇಶ್ವರವಾದವಾಗಿದೆ.

---

52. 'ಸ್ವಾಮಿನ್ ಅಸ್ಮದಾಚಾರಾಃ ಸರ್ವಪ್ರಾಣಿಸಂತೋಷಕರಃ ಕರ್ಮಹೀನಾಃ ಕರ್ಮಣಾನಮುಕ್ತಿರ್ ಇತಿ ವಚನಾತ್ । ಮದುಪಾಸ್ಯೋ ಭೈರವ ಏಕ ಏವ ಜಗತ್ಕರ್ತಾ । ತತಃ ಪ್ರಲಯೋ ಭವತೀತಿ ಯೋ ವಾ ಪ್ರಲಯಕರ್ತಾ ಸ ಏವ ಸ್ಥಿತಿಯುತ್ಪತ್ತ್ಯೋರ್ ಅಪೀತಿ ।------ ತದಾಂಶಾ ಏವ ಸರ್ವೇ ದೇವಾಃ ತತ್ತದಧಿಕಾರಸಂಪನ್ನಾಃ ಶ್ರೀಮದ್ ಭೈರವಾಜ್ಞಾನಾಮ್ ಶಿರಸಾ ಧೃತ್ವಾ ತದುಕ್ತಿಪ್ರತ್ಯಾಸನ್ನಶಕ್ತಯಃ ತತ್ತತ್ಕಾರ್ಯಪರಾಃ ಬಭೂವುಃ ।' ಸಂ. ಜೆ. ತರ್ಕಪಂಚಾನನ. chap. xxiii.

ಬೋಧೋಲ್ಬಣ ನಿತ್ಯಾನಂದ ಹಾಗೂ ಅವನ ಅನುಯಾಯಿಗಳು ತಮ್ಮ ಸಿದ್ಧಾಂತದ ವಿಸ್ತರಣೆಯನ್ನು ಮುಂದುವರೆಸುತ್ತಾರೆ. ಅವರೆನ್ನುವಂತೆ ಭೈರವನಿಗೆ ಎಂಟು ಮುಖ್ಯವಾದ ರೂಪಗಳಿವೆ : ಅಸಿತಾಂಗ, ರುರು, ಚಂಡ, ಕ್ರೋಧ, ಉನ್ಮತ್ತ, ಕಾಪಾಲಿನ್, ಭೀಷಣ ಹಾಗೂ ಸಂಹಾರ. ಅವರು ಈ ಮೊದಲ ಏಳು ರೂಪಗಳನ್ನು ಅನುಕ್ರಮವಾಗಿ ವಿಷ್ಣು, ಬ್ರಹ್ಮ, ಸೂರ್ಯ, ರುದ್ರ, ಇಂದ್ರ, ಚಂದ್ರ,[53] ಹಾಗೂ ಯಮನೊಂದಿಗೆ ಸಮೀಕರಿಸುತ್ತಾರೆ. ಎಂಟನೆಯವನಾದ ಸಂಹಾರಭೈರವನೆಂದರೆ ಸ್ವತಃ ಭೈರವನೇ ಸರಿ. ಉಳಿದ ದೇವತೆಗಳು ಅವನ 'ಅಂಶರು' ಮಾತ್ರ. ಮುಂದುವರೆದು ಅವರನ್ನು ಸೃಷ್ಟಿಕರ್ತ. ಸ್ಥಿತಿಕರ್ತ ಹಾಗೂ ಸಂಹಾರಕರ್ತರೆಂದು ವಿಂಗಡಿಸಲಾಗಿದೆ. ಇವರೆಲ್ಲರನ್ನೂ ಒಟ್ಟುಗೂಡಿಸಲಾಗಿ ಸೃಷ್ಟಿಕರ್ತನೆಂದರೆ ಅವನ (ಮೂಲದಲ್ಲಿದ್ದಂತೆ - ರುರುಬ್ರಹ್ಮನಿಗಾಗಿ) ರುದ್ರ ಅಂಶ, ಸ್ಥಿತಿಕರ್ತನೆಂದರೆ ಅವನ ಅಸಿತಾಂಗ (ವಿಷ್ಣು) ಅಂಶ, ಹಾಗೂ ಲಯಕರ್ತನೆಂದರೆ ಅವನ ಕ್ರೋಧದ (ರುದ್ರ) ಅಂಶ. ಆ ಕಾಪಾಲಿಕರು ಹೀಗೆ ಮುಕ್ತಾಯಗೊಳಿಸುತ್ತಾರೆ : 'ವಿಶ್ವದ ಸೃಷ್ಟಿಕ್ರಿಯೆ. ಮುಂ. ಪೂರ್ತಿಗೊಂಡ ತರುವಾಯ ಹಾಗೂ ಲಯದ ಕ್ರಿಯೆಯ ತರುವಾಯ ಅವನು ತನ್ನ ಏಳು ರೂಪಗಳನ್ನು ಹಾಗೂ ಒಂದು ಅಮರವಾದ ಸಂಹಾರಭೈರವ ರೂಪವನ್ನು ಸಂಕುಚಿತಗೊಳಿಸಿದ ತರುವಾಯ ಉಳಿದುಕೊಳ್ಳುವವನೇ ಪರಮಾತ್ಮನು'[54].

ಸರ್ವಜ್ಞತ್ವವನ್ನು ಹೊಂದಿದ ಈ ದೇವನು ತನ್ನ ಭಕ್ತರಿಂದ ಪ್ರಸನ್ನತೆ ಹಾಗೂ ಅನುಕರಣೆಗಳನ್ನು ನಿರೀಕ್ಷಿಸುತ್ತಾನೆ. ಈ ರೀತಿ ಕಾಪಾಲಿಕ ಸಂಪ್ರದಾಯವು ಇತರ ದೈವಿಕ ಧರ್ಮಗಳಿಗಿಂತ ತಾನು ಸ್ವೀಕರಿಸಿದ ಕಾರ್ಯವಿಧಾನದಲ್ಲಿ ಮಾತ್ರ ಭಿನ್ನವಾದುದು. ಪ್ರಾಯಶ್ಚಿತ್ತದ ಆಚರಣೆಯೆಂದರೆ ಬಲಿ ಕೊಡುವುದು. ಇದು ಬಾಹ್ಯತಃ ಮಾನವ ಇಲ್ಲವೆ ಪಶುಬಲಿಯ ಸ್ವರೂಪವನ್ನು ಪಡೆಯುತ್ತದೆ. ದೇವತೆಗೆ ಸ್ವೀಕಾರಾರ್ಹ ಎನ್ನಿಸಬೇಕಿದ್ದರೆ ಇಂಥ ಬಲಿ ಶುದ್ಧ ಬಣ್ಣದ, ಆಕಾರದ, ಕಲುಷಿತಗೊಳ್ಳದ ಹಾಗೂ ಮಾನವನ ಸಂದರ್ಭದಲ್ಲಿ ಶುದ್ಧ ಶೀಲದ್ದಾಗಿರಬೇಕಿದೆ. ಅದೇ ವೇಳೆಗೆ, ಸಾಮಾನ್ಯವಾಗಿ ಅವನನ್ನು ಬಲಿಕೊಡುವವರ ಉಲ್ಲಂಘನೆಯ ಭಂಡಾರದಲ್ಲಿಯ ಒಂದು ಬಲಿಪಶುವೆಂದು ಪರಿಗಣಿಸಲಾಗುತ್ತದೆ. ವಿಮರ್ಶಕರನ್ನು ನಂಬುವುದಾದರೆ, ಕಾಪಾಲಿಕರು ನರಬಲಿಗಳಲ್ಲಿ ಪಳಗಿದವರಾಗಿದ್ದರು.

ನರಬಲಿಗಳನ್ನು ಕೊಡುವ, ಮಾನವ ಮಾಂಸದ ಆಹುತಿಯನ್ನು ಅರ್ಪಿಸುವ ಅಥವಾ ಶವಗಳ ನೆರವಿನಿಂದ ಪೂಜೆಗಳನ್ನು ಸಲ್ಲಿಸುವ ಅಸಂಖ್ಯ ಕಾಪಾಲಿಕರನ್ನು ಈಗಾಗಲೇ ಕಂಡಿದ್ದೇವೆ. 'ಮಾಲತಿ ಮಾಧವ'ದಲ್ಲಿ (ಅಂಕ .V.Vs. 25) ನಿರಪರಾಧಿಯಾದ, ಬಲಿ ಹೋಗುವ

53. 'ಚಂದ್ರ'ನಿಗಾಗಿ ಇರುವ ಇನ್ನೊಂದು ಪದ ಎಂದರೆ 'ಸೋಮ'. ಕಾಪಾಲಿನ್ ಭೈರವ ಹಾಗೂ ಚಂದ್ರನ ಸಮೀಕರಣಕ್ಕೂ, ಸೋಮಸಿದ್ಧಾಂತಕ್ಕೂ ಒಂದು ಬಗೆಯ ನಂಟು ಇರಬಹುದು.

54. ಆನಂದಗಿರಿ. chap. xxiii.

ಅಪರಾಧಿಯ ಚಿಹ್ನೆಗಳನ್ನು ತೊಟ್ಟ ನಾಯಕಿಯನ್ನು ಮುಂದಕ್ಕೆ ಕೊಂಡೊಯ್ಯಲಾಗುತ್ತದೆ. ಹೃದಯಹೀನನಾದ ಕಾಪಾಲಿಕ ಅಘೋರಘಂಟನು ತನ್ನ ಆಯುಧವನ್ನು ಹಿಡಿದೆತ್ತಿ ಚಾಮುಂಡಾಳನ್ನು ಹೀಗೆಂದು ಆವಾಹಿಸುತ್ತಾನೆ : 'ಓ ದೇವಿ, ಚಾಮುಂಡಾ, ಮಂತ್ರಮಾಟವನ್ನು ಆರಂಭಿಸುವ ಮುನ್ನವೇ ಮಾತು ಕೊಟ್ಟಂತೆ ನಿನ್ನೆದುರಿನಲ್ಲಿ ಪೂಜಾ ಸಾಮಗ್ರಿಯನ್ನು ಇರಿಸಲಾಗಿದೆ. (ಇನ್ನು) ನೀನು ಅದನ್ನು ಸ್ವೀಕರಿಸಬೇಕು.' ಕಾಪಾಲಿಕರೂ ಆವಾಹಿಸುವ ದೇವತೆಯೆಂದರೆ ಹಲವು ಸಲ ಭೈರವನೇ ಆಗಿರುತ್ತಾನೆ. 'ಪ್ರಬೋಧಚಂದ್ರೋದಯ'ದ (ಅಂಕ III. vs. 13) ಕಾಪಾಲಿಕನು ತಮ್ಮ ಉಪವಾಸದ ಕೊನೆಯಲ್ಲಿ ಹೀಗೆನ್ನುತ್ತಾನೆ : 'ಭೀಷಣ ನರಬಲಿಯ ಕತ್ತರಿಸಿದ ಕತ್ತಿನಿಂದ ಧಾರಾಕಾರವಾಗಿ ಹರಿವ ನೆತ್ತರಿನಿಂದ ಮಹಾಭೈರವನನ್ನು ಪೂಜಿಸತಕ್ಕದ್ದು'. ತಾವು ಈ ದೇವನಿಗೆ 'ಮೆದುಳು, ಕರುಳು ಹಾಗೂ ಎಲುವಿನೊಳಗಿನ ನೆಣದಿಂದ ಬೆರೆತ ಮಾನವ ಮಾಂಸ'ದ ಆಹುತಿಯನ್ನು ಸಲ್ಲಿಸುವುದಾಗಿಯೂ ಹೇಳುತ್ತಾನೆ. ಶಂಕರಾಚಾರ್ಯರ ಎದುರಾಳಿಯಾದ ಕಾಪಾಲಿಕ, ಕ್ರಕಚನು ಈ ಸಂಗತಿಯನ್ನು ಹೆಚ್ಚು ಸಾಮರ್ಥ್ಯದಿಂದ ಮುಂದಿರಿಸುತ್ತಾನೆ : 'ಅವನು (ಕಪಾಲಿನ್ ಶಿವ) ಮಾನವನ ತಲೆಗಳ ರಕ್ತಸಿಕ್ತವಾದ ಕಮಲಗಳೆ ಹಾಗೂ ಮದ್ಯಗಳ ಭೈರವ ಪೂಜೆಯನ್ನು ಸ್ವೀಕರಿಸದಿದ್ದರೆ ಕಮಲಾಕ್ಷಿಯಾದ ಉಮೆಯೊಂದಿಗಿನ ಬಿಗಿಯಪ್ಪುಗೆಯಲ್ಲಿರುವಾಗ ಅವನಿಗೆ ಸಂತೋಷ ದೊರಕುವುದಾದರೂ ಹೇಗೆ ----?'[55] ಇಲ್ಲಿ, ಭೈರವನು ತಲೆಗಳ ಈ ಆಹುತಿಯಿಂದಾಗಿ ಒಲೆದಿರುವನಷ್ಟೇ ಅಲ್ಲ, ಅವನು ಅವುಗಳ ಮೇಲೆ ಅವಲಂಬಿಸಿದಂತೆ ಕಾಣುತ್ತದೆ.

ಇಂಥ ಹೇಳಿಕೆಗಳ ವಿಶಿಷ್ಟವಾದ ವಿವರಗಳನ್ನು ನಂಬಲಾಗದಿದ್ದರೂ - ಈ ಲೇಖಕರೆಲ್ಲ ಕಾಪಾಲಿಕ ವಿರೋಧಿಗಳಾಗಿದ್ದರು - ಕಾಪಾಲಿಕರು ನರಬಲಿಯ ರೂಢಿಯನ್ನು ಆಚರಿಸುತ್ತಿದ್ದರೆಂಬುದನ್ನು ಕುರಿತು ಸಂದೇಹ ಪಡುವುದು ಕಷ್ಟದ ಸಂಗತಿಯೇ ಸರಿ. ಈ ಮತಾಚರಣೆಯ ಗುರಿಯೆಂದರೆ ಕೋಪಿಷ್ಠನೂ, ರಕ್ತಪಿಪಾಸುವೂ ಆದ ದೇವತೆಯನ್ನು ತಣಿಸುವುದು ಹಾಗೂ ಒಲಿಸಿಕೊಳ್ಳುವುದು ಆಗಿತ್ತು. ಅಪರಾಧಿಯು ಒಂದು ಬಲಿಪಶು ಎಂಬ ವಿಚಾರವು ಕಡಿಮೆ ಸ್ಪಷ್ಟವಾಗಿದ್ದುದಾದರೂ ಬಲಿಯ ಪ್ರಾಯಶ್ಚಿತ್ತದ ಪರಿಕಲ್ಪನೆಯಲ್ಲಿ ಅಂತರ್ಭೂತವಾದುದು.

ಪುರಾತನ ಕಾಲದ ವಿಶ್ವದ ಬಹಳಷ್ಟು ಭಾಗಗಳಲ್ಲಿ ಇರುವಂತೆ ಭಾರತದಲ್ಲಿಯೂ ಬಲು ಹಿಂದಿನಿಂದಲೇ ನರಬಲಿ ಬಳಕೆಯಲ್ಲಿತ್ತು. 'ಐತರೇಯ ಬ್ರಾಹ್ಮಣ'ದಲ್ಲಿ ಎಲ್ಲಕ್ಕೂ ಮೊದಲಿಗೆ ಕಂಡುಬರುವ ಒಂದು ಆಖ್ಯಾಯಿಕೆಯ ಹೇಳಿಕೆಯಂತೆ, ಇಕ್ಷ್ವಾಕು ರಾಜನಾದ ಹರಿಶ್ಚಂದ್ರನು ತನ್ನ ಚೊಚ್ಚಲು ಮಗನನ್ನು ವರುಣ ದೇವನಿಗೆ ಬಲಿ ಕೊಡಲು ತಾನಾಗಿ

55. ಮಾಧವಾಚಾರ್ಯ, xi. 11.

ಮುಂದೆ ಬಂದನು.[56] 'ಪುರುಷಮೇಧ' (ನರಬಲಿ)ಯನ್ನು ಹಲವು 'ಬ್ರಾಹ್ಮಣ'ಗಳಲ್ಲಿ ಬಣ್ಣಿಸಲಾಗಿದ್ದರೂ 'ಶತಪಥ ಬ್ರಾಹ್ಮಣ'ದ ಕಾಲದವರೆಗೆ ಅದು ಕೇವಲ ಒಂದು ಸಂಕೇತ ಮಟ್ಟದಲ್ಲಿ ಉಳಿದುಕೊಂಡಿತ್ತು.[57] ಮಧ್ಯಯುಗದ ಆರಂಭದ ಕಾದಲ್ಲಿ ಹೊಸ ತಾಂತ್ರಿಕ ಸಂಪ್ರದಾಯಗಳು ಹುಟ್ಟಿಕೊಂಡಿದ್ದರಿಂದ ನರಬಲಿ ಪದ್ಧತಿಗೆ ಒಂದು ಬಗೆಯ ಮರುಜೀವ ದೊರೆತಂತಾಯಿತು. ಕೆಲ ಪ್ರದೇಶಗಳಲ್ಲಿ, ಅದರಲ್ಲೂ ಬಂಗಾಲ ಹಾಗೂ ಆಸಾಮಗಳಲ್ಲಿ ಈ ರೂಢಿಯು ಬಹಳಷ್ಟು ಮಟ್ಟಿಗೆ ಬಳಕೆಗೆ ಬಂದಿತು. ಹದಿನಾರನೆಯ ಶತಮಾನದ ಕೊಥ ರಾಜನಾದ ನರನಾರಾಯಣನು ಒಂದು ಸಮಾರಂಭದಲ್ಲಿ ಸುಮಾರು 150 ಜನರನ್ನು ಬಲಿಕೊಟ್ಟನೆಂದು ಹೇಳಲಾಗಿದೆ.[58] ಹತ್ತೊಂಬತ್ತನೆಯ ಶತಮಾನದ ಆರಂಭದ ಸುಮಾರಿಗೆ ಆಂಗ್ಲರ ಹತ್ತಿಕ್ಕುವಿಕೆ ಹಾಗೂ ಹಿಂದೂ ಸುಧಾರಣೆಗಳು ಸೇರಿ ಈ ರೂಢಿಯನ್ನು ಕಿತ್ತೆಸೆದುವಾದರೂ ನರಬಲಿಯನ್ನು ಕೊಡಲಾದ ಅಪಾದನೆಯ ವಿರಳ ಘಟನೆಗಳು ಇಂದಿಗೂ ವರದಿಯಾಗುತ್ತವೆ.[59]

ಮಹತ್ವದ ಶಾಕ್ತ ಕೃತಿಯಾದ 'ಕಾಲಿಕಾ ಪುರಾಣ'ವು ಪಶುಗಳ ಹಾಗೂ ಮಾನವರ ಬಲಿಗಳಿಗಾಗಿ ಇಡಿಯ ಒಂದು ಅಧ್ಯಾಯವನ್ನೇ ಮೀಸಲಾಗಿರಿಸಿದೆ.[60] ಅದು ಕಾಪಾಲಿನ್ನರವು ಎನ್ನಲಾದ ವಾದಗಳಿಂದ ತಮ್ಮ ಈ ಮತಾಚರಣೆಗಳನ್ನು ಸಮರ್ಥಿಸಿಕೊಳ್ಳುತ್ತದೆ :

---

56. vii. 13-18, E.A Gait ರಿಂದ ಉದ್ಧೃತ, ' Human Sacrifice (Indian)' ERE, VI, 849-53. ಅಲ್ಲದೆ ನೋಡಿ, 'On the Rite of Human Sacrifice in Ancient, Mediaveal and Modern India and Other Countries.' JANSB. III (1893), 275-300; ಮತ್ತು ಆರ್. ಮಿತ್ರ, 'On Human Sacrifices in Ancient India,' JRASB. XLV (1876), 76-118.
57. ನೋಡಿ ಜೋಶಿ, JANSB, III, 280.
58. Gait, ERE, VI, 850.
59. 'The Indian Express', Aug. 15, 1966ವು ಆಂಧ್ರ ಪ್ರದೇಶದ ಮೇಡಕ ಜಿಲ್ಲೆಯ ಒಂದು ಘಟನೆಯನ್ನು ವರದಿ ಮಾಡುತ್ತದೆ. 'The milwaukee Journal' ಸೆಪ್ಟೆ. 15, 1968.'ರಾಜಸ್ಥಾನದ' ಒಂದು ನೀರಾವರಿ ಯೋಜನೆಗಾಗಿ ಅಡಿಗಲ್ಲನ್ನಿರಿಸುವ ಸಮಾರಂಭಕ್ಕಾಗಿ ಬಲಿ ನೀಡಲಾದ ಹನ್ನೆರಡು ವರ್ಷದ ಬಾಲಕನ ಕುಟುಂಬದವರಿಗೆ ಪ್ರಧಾನಿ ಇಂದಿರಾ ಗಾಂಧಿ 1,000 ರೂಪಾಯಿಗಳನ್ನು ರವಾನಿಸಿದ್ದನ್ನು ವರದಿ ಮಾಡಿದೆ. ಇದೇ ವೃತ್ತಪತ್ರವು, ಅಕ್ಟೋ. 31, 1968, ಹೊಸ ದೆಹಲಿಯಿಂದ 200 ಮೈಲುಗಳ ದೂರದ ಒಂದು ಪಟ್ಟಣದಲ್ಲಿ ಇನ್ನೊಬ್ಬ ಹನ್ನೆರಡು ವರ್ಷಗಳ ಬಾಲಕನ ರುಂಡವನ್ನು ಕಡಿದು ಚೆಲ್ಲಿದ ವಿವರಗಳನ್ನು ಒಳಗೊಂಡಿದೆ. ಈ ಬಾಲಕನನ್ನು ಶಿವನಿಗೆ ಬಲಿ ನೀಡಲಾಗಿತ್ತು.
60. ಈ ಅಧ್ಯಾಯವನ್ನು ಹದಿನೆಂಟನೆಯ ಶತಮಾನದ ಕೊನೆಯಲ್ಲಿ W. C. Blaquiere ಇವರಿಂದ 'Asiatic Researches', V (1797), 371-391 ದಲ್ಲಿ ಅನುವಾದಿಸಲಾಗಿದೆ. ನಮಗೆ ಈ ಆವೃತ್ತಿಯಾಗಲಿ ಅಥವಾ ಇತ್ತೀಚಿನ ಒಂದು ಅನುವಾದವಾಗಲಿ ಲಭ್ಯವಾಗಿಲ್ಲ. ಆದರೆ H. zimmer ಇವರು ತಮ್ಮ 'The King and the Corpse'ದಲ್ಲಿ ಪುರಾಣಗಳ ಕೆಲ ಭಾಗಗಳನ್ನು ಸಂಕ್ಷಿಪ್ತವಾಗಿ ನೀಡಿದ್ದಾರೆ.

ವಿಧಿಸಲಾದ ಮತಾಚರಣೆಗಳಿಂದ ಕೈಕೊಳ್ಳಲಾದ ನರಬಲಿಯಿಂದ ದೇವಿ - ------ಒಂದು ಸಾವಿರ ವರ್ಷಗಳ ಕಾಲ ಸಂತುಷ್ಟಳಾಗಿ ಉಳಿಯುತ್ತಾಳೆ; ಅದೇ ರೀತಿ ಮೂವರನ್ನು ಬಲಿ ಕೊಡುವುದರಿಂದ ಒಂದು ಲಕ್ಷ ವರ್ಷಗಳ ವರೆಗೆ ಸಂತುಷ್ಟಳಾಗಿರುವಳು. ಮಾನವನ ಮಾಂಸದಿಂದ ಕಾಮಾಖ್ಯ ದೇವತೆಯ ಗಂಡನಾದ ಭೈರವನು -------- ಮೂರು ಸಾವಿರ ವರ್ಷಗಳವರೆಗೆ ಸಮಾಧಾನಿಯಾಗಿರುವನು. ನೈವೇದ್ಯವೆಂದು ಅರ್ಪಿಸಲಾದ ನೆತ್ತರವು ತತ್‌ಕ್ಷಣ ಪಾರಣೆಯಾಗಿ (abrosia) ಬರುತ್ತದಲ್ಲದೆ ರುಂಡ ಮತ್ತು ಮಾಂಸಗಳು ಸಂತೋಷಗೊಳಿಸುವವಾದ್ದರಿಂದ ದೇವಿಯ ಆರಾಧನೆಯ ಕಾಲಕ್ಕೆ ರುಂಡ ಹಾಗೂ ಮಾಂಸಗಳನ್ನು ನೈವೇದ್ಯವಾಗಿ ಸಲ್ಲಿಸತಕ್ಕದ್ದು. ಜಾಣರು ಆಹಾರದ ನೈವೇದ್ಯಗಳಲ್ಲಿ ಕೂದಲುಗಳಿಲ್ಲದ ಹಸನಾದ ಮಾಂಸವನ್ನು ಸೇರ್ಪಡಿಸಬೇಕು.[61].

ಬಲಿ ಹೋಗುವವನನ್ನು ಕೊಲ್ಲುವ ಮುನ್ನ ಬಲಿಕೊಡುವವನು ಅವನಿಗೆ ಹೀಗೆನ್ನುತ್ತಾರೆ : 'ಚಂಡಿಕಾಳನ್ನು ಸಂತೋಷಪಡಿಸುವ ಮೂಲಕ ನೀನು ಆ ಕೊಡುವವನ ಎಲ್ಲ ಬಗೆಯ ದುಷ್ಟ ಘಟನೆಗಳನ್ನು ನಾಶಪಡಿಸಲಿರುವೆ. ವೈಷ್ಣವಿಗೆ ಬಲಿ ಕೂಟದ ಬಲಿಯಾಗಿ ಕಾಣುವ ನಿನಗೆ ನನ್ನ ವಂದನೆಗಳು.'[62] ಭೈರವ ಹಾಗೂ ದುರ್ಗಾ ಇವರ ನರಬಲಿ ಪ್ರಾಯಶ್ಚಿತ್ತದ ಬಲಿಯ ಬದಿಯನ್ನು ಇಲ್ಲಿ ಹೆಚ್ಚು ವಿಶದಪಡಿಸಲಾಗಿದೆ.

ಪಶುಬಲಿ ಹಾಗೂ ನರಬಲಿಗಳ ವ್ಯಕ್ತಿಗತವಾದ ಇನ್ನೊಂದು ಪ್ರಕಾರವೆಂದರೆ ಸ್ವಬಲಿ. ಈ ಪರಿಕಲ್ಪನೆಯು ಸ್ವಬಲಿ ಅಥವಾ ಆತ್ಮಹತ್ಯೆಯಿಂದ ಹಿಡಿದು ಸ್ವ-ಅಂಗಹೀನತೆಯವರೆಗೆ ಹಾಗೂ ದೇಹದಂಡನೆಗಳಿಂದ ಹಿಡಿದು ಮಾನಸಿಕ ಶಿಸ್ತಿನ ಸಾದಾ ಅಭ್ಯಾಸಗಳವರೆಗೆ ವಿಸ್ತೃತವಾದ ಚಟುವಟಿಕೆಗಳನ್ನು ಒಳಗೊಳ್ಳುತ್ತದೆ. ಕಾಪಾಲಿಕನಿಂದ ಆಚರಿಸಲ್ಪಡುವ ನಿಜವಾಗಿಯೂ ಮುಖ್ಯವಾದ ದೇಹದಂಡನೆಯೆಂದರೆ ಮಹಾವ್ರತ. ಅವನು ಆಗೀಗ ಸ್ವಅಂಗಹೀನತೆಯನ್ನು ಕೈಕೊಳ್ಳುತ್ತಿದ್ದನೆನ್ನಲು, ಆಹುತಿ ನೀಡಲು ತನ್ನದೇ ಆದ ದೇಹದಿಂದ ಮಾಂಸವನ್ನು ಕಿತ್ತು ತೆಗೆಯುವಂತಹ ಬಗೆ ಬಗೆಯ ವಿಧಾನಗಳನ್ನು ಬಳಸುತ್ತಿದ್ದನೆನ್ನುವ ಬಗೆಗೆ ಕೆಲವು ಪುರಾವೆಗಳು ಕೂಡ ದೊರಕುತ್ತವೆ.[63] ಕಾಪಾಲಿಕನಾದ ಉಗ್ರಭೈರವನು ತಾನು 'ಪೂರ್ತಿ ಒಂದು ನೂರು ವರ್ಷಗಳ ಕಾಲದ ಉಗ್ರ ಹಾಗೂ ದುಷ್ಕರವಾದ ದೇಹದಂಡನೆಗಳಿಂದ'[64] ಉಗ್ರನನ್ನು (ಶಿವ) ಸಂತುಷ್ಟ ಪಡಿಸಿದುದಾಗಿ ಸಾಧಿಸುತ್ತಾನೆ. 'ಚಂಡ

61. ಪರಿಚ್ಛೇದದ ಅನುವಾದ Gait, ERE, VI, 850, ಇವರಿಂದ.
62. ಅದೇ.
63. ಮೇಲಕ್ಕೆ ನೋಡಿ, pp. 17 ಮತ್ತು 76.
64. ಮಾಧವಾಚಾರ್ಯ, xi. 10.

ಕೌಶಿಕ'ದ (ಅಂಕ iv. vs. 26) ಕಾಪಾಲಿಕನು ತಾನು ಬೇಡದೆಯೇ ಪಡೆದ ಭಿಕ್ಷೆಗಳಿಂದ ಜೀವಿಸುತ್ತಿರುವುದಾಗಿಯೂ ತನ್ನ ಐದೂ ಇಂದ್ರಿಯಗಳ ಮೇಲೆ ನಿಯಂತ್ರಣವನ್ನು ಇರಿಸಿಕೊಂಡಿರುವುದಾಗಿಯೂ ಸಾಧಿಸುತ್ತಾನೆ. ಅರಸನು ಬಾಳಿಡಿ ಪಾವಿತ್ರ್ಯದ ವ್ರತವನ್ನು ಆಚರಿಸುವವನಾದ (ಅಂಕ iv ದ ,vs.29ದ ತರುವಾಯ) ಒಬ್ಬ ಮಹಾವ್ರತಿನ್ ಎಂದು ಅವನನ್ನು ಅಭಿವಂದಿಸುತ್ತಾನೆ. 'ಪ್ರಬೋಧಚಂದ್ರೋದಯ' (ಅಂಕ III. vs. 13) ದಲ್ಲಿ ಸೋಮಸಿದ್ಧಾಂತನು 'ಯೋಗದ ಲೇಪನದಿಂದ ಹಸನುಗೊಳಿಸಲಾದ ಕಣ್ಣುಗಳಿಂದ ನೋಡುವುದು ಹಾಗೂ ಮದ್ಯಸೇವನೆಯಿಂದ ತನ್ನ ಉಪವಾಸದ ಪಾರಣೆಯನ್ನು ಕೈಕೊಳ್ಳುವುದಾಗಿ ಸಾಧಿಸುತ್ತಾನೆ. ಕಪಾಲಿನ್‌ನ ತಪಸ್ಸನ್ನು ಕುರಿತಾದ ಹಲವಾರು ಸಂದರ್ಭಗಳೆಲ್ಲ ಅಣಕು ನುಡಿಗಳಿಂದಲೇ ಕೂಡಿದ್ದರೂ ಅಂಥದೊಂದು ಸಂದರ್ಭವು 'ಮತ್ತ ವಿಲಾಸ'ದಲ್ಲೂ ಇರುವುದು ಕಂಡು ಬರುತ್ತದೆ.[65] ಕಾಪಾಲಿಕ ಸಂನ್ಯಾಸ ಹಾಗೂ ಯೋಗಗಳನ್ನು ಕುರಿತಾದ ಮೇಲಿನ ಪೂರ್ವವೃತ್ತಾಂತಗಳು ಕಡಿಮೆಯವೂ ಅಲ್ಲದೆ ಬಹಳಷ್ಟು ವಿವರವಾಗಿಲ್ಲದ ಕಾರಣದಿಂದಾಗಿಯೂ ಕಾಪಾಲಿಕರು ಸಾದಾ ಪಾಷಂಡಿಗಳಾಗಿರಲಿಲ್ಲವೆಂಬ ಅರಿವು ಲೇಖಕರಲ್ಲೆಲ್ಲ ಇದ್ದಿತೆನ್ನುವುದು ತಾನೇ ಒಂದು ಪುರಾವೆಯಾಗಿದೆ.

ಭೈರವನನ್ನು ಹಲವು ಬಗೆಯ ನರಬಲಿಗಳಿಂದ ಒಲಿಸಿಕೊಳ್ಳುವುದಲ್ಲದೆ ಕಾಪಾಲಿಕರೂ ದೇವನ ಪೌರಾಣಿಕ ಸಾಹಸ ಕೃತ್ಯಗಳ ಮರುಅಭಿನಯದ ಮೂಲಕ ಅವನನ್ನು ಅನುಕರಿಸಿದರು. ಒಲಿಸಿಕೊಳ್ಳುವ ದಾರಿಗಳು ಹಾಗೂ ಅನುಕರಣೆಗಳು ಒಂದನ್ನೊಂದು ವ್ಯಾಪಿಸುತ್ತವೆ. ಉದಾ : ಮಹಾವ್ರತವು ಶಿವನನ್ನು ಒಲಿಸಿಕೊಳ್ಳುವ ಸಂದರ್ಭದಲ್ಲಿ ದೇಹದಂಡನೆ ಹಾಗೂ ದೇಹದಂಡನೆಯ ಮರುಅಭಿನಯ ಎರಡೂ ಆಗಿದೆ. ಹಾಗೆಯೇ ಕೆಲವು ಮತಾಚರಣೆಗಳಲ್ಲಿ ಒಲಿಸಿಕೊಳ್ಳಬೇಕೆಂಬ ಯೋಚನೆಯೇ ಇರದು. ಇದ್ದರೂ ಅದು ಅಷ್ಟಾಗಿ ಗಮನಾರ್ಹವಾಗಿ ಇರದು. ಇವುಗಳ ಬಹಳಷ್ಟು ಆಚರಣೆಗಳು ಸಾಮೂಹಿಕ ಸ್ವರೂಪದವಾಗಿದ್ದು ಆರಾಧಕನು ಆಹಾರ, ಕುಡಿತ, ಸಂಭೋಗ ಇಲ್ಲವೆ ಮಾನಸಿಕ ಭಾವೋದ್ರೇಕಗಳ ಮೂಲಕ ದೈವತ್ವದೊಡನೆ ಐಕ್ಯತೆಯನ್ನು ಅನುಭವಿಸುತ್ತಾನೆ. ಆ ಮತಾಚರಣೆಗಳಿಗೆ ಮೊದಲು ಅವುಗಳ ದೈವತ್ವಗಳಿಗೆ ಪರಿಶುದ್ಧಿಯ ಸಿದ್ಧತೆಯನ್ನು ಒದಗಿಸಲೆಂದು ಅವನನ್ನು ಒಲಿಸಿಕೊಳ್ಳುವ ಕೆಲವು ಮತಾಚರಣೆಗಳು ಇರುತ್ತವೆ. 'ಪ್ರಬೋಧ ಚಂದ್ರೋದಯ'ದ ಕಾಪಾಲಿಕನು ಉಪವಾಸವನ್ನು ಕೈಕೊಳ್ಳದೆ ಕುಡಿತವನ್ನು ಮಾಡಸು. ಉಗ್ರಭೈರವ ಒಂದು ನೂರು ವರ್ಷಗಳ ಕಾಲ ಕೆಲವು ಉಗ್ರವಾದ ದೇಹದಂಡನೆಗಳ ಮೂಲಕ 'ಈಶನೊಡನೆ ಆಟವಾಡಲೆಂದು ತನ್ನ ದೇಹದೊಂದಿಗೆ ಕೈಲಾಸಕ್ಕೆ ಹೋಗಿ' ಉಗ್ರನನ್ನು ಒಲಿಸಿಕೊಳ್ಳುತ್ತಾನೆ.

---

65. ಮಹೇಂದ್ರವರ್ಮನ್, vss 6 ಮತ್ತು 10 ಮತ್ತು vs. 21 ರ ತರುವಾಯ.

ಕಾಪಾಲಿಕನ ಆಹಾರ ಹಾಗೂ ಕುಡಿತಗಳ ಮತಾಚರಣೆಗಳನ್ನು ಕುರಿತು ಹಲವಾರು ಆಕರಗಳಲ್ಲಿ ನಮೂದಿಸಲಾಗಿದೆ.[66] ಯಶಪಾಲನ 'ಮೋಹರಾಜ ಪರಾಜಯ'ದಲ್ಲಿ ಕಾಪಾಲಿಕನು ಕುಲೀನ ಮನುಷ್ಯನ ತಲೆಬುರುಡೆಯಲ್ಲಿ ಮಾನವನ ಮಾಂಸವನ್ನು ತಿನ್ನುವುದರಿಂದ ಶಿವಸ್ಥಾನವು ಲಭಿಸುವುದೆಂದು ಹೇಳುತ್ತಾನೆ. ಮಹೇಂದ್ರವರ್ಮನ ಕಪಾಲಿನ್‌ನ ತಲೆಬುರುಡೆಯ ಪಾತ್ರೆಯು ಹುರಿದ ಮಾಂಸದ ತುಣುಕುಗಳಿಂದ ತುಂಬಿತ್ತು. ಕಾಪಾಲಿಕರು ಭೋಗನಿರತರಾದ ನಾಸ್ತಿಕ, ಇಹವಾದಿ ವ್ಯಕ್ತಿಗಳಾಗಿದ್ದು, ಮದ್ಯ, ಮಾಂಸ ಹಾಗೂ ಅಕ್ರಮ ಸಂಭೋಗಗಳ ಚಟಗಳಿಗೆ ಬಲಿಯಾದವರೆಂದು ಗುಣರತ್ನ ಹಾಗೂ ಬಾರ್ಹಸ್ಪತಿ ಸೂತ್ರಗಳು ಸಾಧಿಸುತ್ತವೆ. ಶಂಕರಾಚಾರ್ಯರ ಎದುರಾಳಿಯಾದ ಕ್ರಕಚನು ತನ್ನ ಧ್ಯಾನ ಸಾಮರ್ಥ್ಯದಿಂದ ತನ್ನ ಕಪಾಲಪಾತ್ರೆಯನ್ನು ಮದ್ಯದಿಂದ (ಸುರಾ) ತುಂಬುತ್ತಾನೆ. ಅದರರ್ಧವನ್ನು ಕುಡಿದಾದ ಬಳಿಕ ಅವನು ಭೈರವನನ್ನು ಆವಾಹಿಸುತ್ತಾನೆ. ಶಂಕರಾಚಾರ್ಯರ ಇನ್ನೊಬ್ಬ ಎದುರಾಳಿ ಕಾಪಾಲಿಕನಾದ ಉನ್ಮತ್ತ ಭೈರವನು ತನ್ನ ಅಪ್ಪ, ಅಜ್ಜರೆಲ್ಲ ಮದ್ಯತಯಾರಕರಾಗಿದ್ದರೆಂದು ಹೆಮ್ಮೆಯನ್ನು ಕೊಚ್ಚಿಕೊಳ್ಳುವುದಲ್ಲದೆ ಪೂರ್ಣಪಾಷಂಡದ ನಡತೆಯನ್ನು ಸಮರ್ಥಿಸಿಕೊಳ್ಳುತ್ತಾನೆ. ಇದೇ ರೀತಿಯಾಗಿ 'ಮತ್ತ ವಿಲಾಸ'ದಲ್ಲಿ ಒಬ್ಬ ಕಾಪಾಲಿಕನು ಮದಿರೆ, ಮದಿರಾಕ್ಷಿಯೆಂದರೆ ಶಿವನೇ ಎತ್ತಿಹಿಡಿದ ಮುಕ್ತಿಮಾರ್ಗ ಎಂದು ವಾದ ಹೂಡುತ್ತಾನೆ. ಇದೇ ರೀತಿ 'ಪ್ರಬೋಧ ಚಂದ್ರೋದಯ'ದ ಕಾಪಾಲಿಕನು ಮದಿರೆಯನ್ನು '(ನಶ್ವರ) ಅಸ್ತಿತ್ವದ ವಿರುದ್ಧ ಭೈರವನು ವಿಧಿಸಿದ ಉಪಾಯ'ಎಂದು ಬಣ್ಣಿಸುತ್ತಾನೆ. ಆನಂದರಾಯಮಖಿನ್ನನ 'ವಿದ್ಯಾಪರಿಣಯನ'ದಲ್ಲಿ (ಅಂಕ iv. vs. 32ದ ತರುವಾಯ) ಕಾಪಾಲಿಕನಾದ ಸೋಮಸಿದ್ಧಾಂತನು ಮದ್ಯ ಹಾಗೂ ಮಾಂಸಗಳನ್ನು ತಾನು ಬಳಸುವುದನ್ನು ತಪ್ಪೊಪ್ಪಿಗೆ ಎನ್ನಬಹುದಾದ ಮಟ್ಟದಲ್ಲಿ, ಆದರೆ ಅವು 'ಭೈರವಾಗಮ'ಗಳಲ್ಲಿ ವಿಧಿಸಲಾಗವುಗಳು ಎಂದಂದು ಸಮರ್ಥಿಸಿಕೊಳ್ಳುತ್ತಾನೆ: 'ವೇದಗಳಿಂವ ನಿಷೇಧಿಸಲಾದ ಮದ್ಯ (ಮಧು), ಮಾಂಸ, ಮುಂ, ಗಳ ಸೇವನೆಯ ಚಟಗಳು ಅಂಟಿಕೊಂಡು ವೇದಚ್ಯುತರಾದ ಯತಿಗಳಲ್ಲಿ ನಮ್ಮನ್ನು ಎಣಿಸಲಾಗುವುದಾದರೂ 'ಭೈರವಾಗಮಗಳ' ಅನುಸರಣೆಯಿಂದಾಗಿ (ನಾವೇ ನಿಜವಾಗಿಯೂ) ವೇದ ಪ್ರಾಮಾಣ್ಯದ ಸಿದ್ಧಾಂತವನ್ನು ಮನ್ನಿಸುವವರಾಗಿದ್ದೇವೆ.'

ಕಾಪಾಲಿಕರು ಶೈವ ತಾಂತ್ರಿಕ ಸಂಪ್ರದಾಯದವರಾದ್ದರಿಂದ ಮದ್ಯ, ಮಾಂಸ ಹಾಗೂ ಸಂಭೋಗಗಳ ಅವರ ಚಟಗಳನ್ನು ತಾಂತ್ರಿಕ ಸಂಪ್ರದಾಯದ ಐದು 'ಮ'ಕಾರಗಳೊಂದಿಗೆ (ಪಂಚ ಮಕಾರ) ಜೋಡಿಸಬೇಕೇ ಹೊರತು ಪಾಷಂಡವಾದದ ಭೌತಿಕತೆಯೊಂದಿಗೆ ಅಲ್ಲ. ಮಧು ಮತ್ತು 'ಮಾಂಸ'ವನ್ನು ಉಲ್ಲೇಖಿಸುವ 'ವಿದ್ಯಾ ಪರಿಣಯ'ದ ಪರಿಚ್ಛೇದವು ಈ ನಂಟನ್ನು ದೃಢಪಡಿಸಲೆಳಸುತ್ತದೆ. ಆನಂದಗಿರಿಯ 'ಶಂಕರ ವಿಜಯ'ದಲ್ಲಿ ಕಾಪಾಲಿಕನಾದ ಬೋಧೋಲ್ಬಣನು (chap. xxiii) ನಿಜವಾದ ಹಾಗೂ ನಿರ್ಭಯರಾದ ಯತಿಗಳು ಯಾವಾಗಲೂ ವಸ್ತುಗಳಿಂದ ಹುಟ್ಟಿಬರುವ ಜ್ಞಾನವನ್ನು (ಬೋಧ)

66. ಮೇಲಕ್ಕೆ ನೋಡಿ. chap. ii.

ಅವಲಂಬಿಸಿರುವವನು'ಎಂದು ಘೋಷಿಸುತ್ತಾನೆ. ಈ 'ವಸ್ತು'ಗಳು ಬಹುಮಟ್ಟಿಗೆ ಪಂಚ 'ಮ' ಕಾರಗಳನ್ನು ಪ್ರತಿನಿಧಿಸುತ್ತಿರಬೇಕೆನ್ನಲು ಕಾರಣವೆಂದರೆ 'ಪಂಚ ದ್ರವ್ಯ' ಹಾಗೂ 'ಪಂಚ ಮಕಾರ'ಗಳು (ಹಾಗೂ ಪಂಚ ತತ್ವ) ತಾಂತ್ರಿಕ ಗ್ರಂಥಗಳಲ್ಲಿ ಸಮಾನಾರ್ಥದ ಪದಗಳೆನ್ನಿಸಿವೆ. ಬೋಧೋಲ್ಲಾಣನ ಹೇಳಿಕೆಯ ಸಂದರ್ಭ ಕೂಡ ಇಂಥ ಅರ್ಥೈಸುವಿಕೆಗೆ ತನ್ನ ಬೆಂಬಲವನ್ನು ನೀಡುವಂತೆ ಕಾಣುತ್ತದೆ.

ತಾಂತ್ರಿಕ ಆಚರಣೆಯಲ್ಲಿ ಮದ್ಯ ಹಾಗೂ ಮಾಂಸಗಳು ಪಾಲ್ಗೊಳ್ಳುವುದರಲ್ಲಿ ಪಾಷಂಡವಾದ ಹಾಗೂ ಪ್ರಭುಭೋಜನ (ಯುಕ್ಯಾರಿಸ್ಟ್) ಇವೆರಡರ ಬದಿಯಿದ್ದು ಕೂಡ ಅದು ಯಾವುದೇ ಬಗೆಯಲ್ಲೂ ಭೌತಿಕವಾದದೊಡನೆ ಸಂಬಂಧಪಟ್ಟುದಲ್ಲ. ಪಾಷಂಡವಾದದ ಐದು ಮಕಾರಗಳ ಮೊದಲ ನಾಲ್ಕಾದ ಮದ್ಯ, ಮಾಂಸ, ಮೀನು ಹಾಗೂ ಮುದ್ರಾಗಳನ್ನು ಏನಿಲ್ಲೆಂದರೂ, ದೀಕ್ಷಿತನಾದ ಪ್ರವೀಣ ವ್ಯಕ್ತಿ ಹಾಗೂ ಅವನ ಜೊತೆಗಾರ್ತಿಯ ನಡುವಿನ ಮೈಥುನ ಅಥವಾ ಸಂಭೋಗಕ್ಕಾಗಿ ಸಿದ್ಧಪಡಿಸುವ ಉತ್ತೇಜಕಗಳೆಂದಾದರೂ ಪರಿಗಣಿಸಲಾಗುತ್ತದೆ. ಹಾಗೆ ನೋಡಿದರೆ ಆ ನಾಲ್ಕೂ ವಸ್ತುಗಳು ಉತ್ತೇಜಕ ಗುಣಧರ್ಮವನ್ನು ಹೊಂದಿದವುಗಳೇನಲ್ಲ. ನಿಷೇಧವೆಂಬ ಹಿಂಜರಿಕೆಯನ್ನು ತೆಗೆದು ಹಾಕುವಲ್ಲಿ ಮದ್ಯದಿಂದ ನೆರವು ದೊರಕಬಹುದಷ್ಟೆ. ಎ. ಭಾರತಿ ಅವರು ನಿರ್ದೇಶಿಸುವಂತೆ ತಾಂತ್ರಿಕ ಸಾಧನೆಗಾಗಿ ಬಳಸಲಾಗುವ ವಸ್ತುಗಳಲ್ಲಿ ಇಂಥ ಗುಣಧರ್ಮ ಒಂದೇ ಒಂದು ವಸ್ತುವಿನಲ್ಲಿದೆ. ಅದೆಂದರೆ, 'ವಿಜಯಾ ಅಥವಾ ಬಾರತೀಯ ಗಾಂಜಾ ( Channabis India).[67] ಐದು 'ಮ' ಕಾರಾಚರಣೆಗಿಂತ ಒಂದು-ಒಂದೂವರೆ ಗಂಟೆ ಮುಂಚಿತವಾಗಿ ಗಾಂಜಾವನ್ನು ಸೇದಲಾಗುತ್ತದೆ.

ಈ ನಾಲ್ಕು ಪ್ರಾಥಮಿಕ ಘಟಕಗಳಿಗೆ ಪ್ರಭುಭೋಜನದಲ್ಲಿ (ಯುಕ್ಯಾರಿಸ್ಟಿಕ್) ಇರುವ ಮಹತ್ವವನ್ನು ತಾಂತ್ರಿಕ ಆಕರಗಳಲ್ಲಿ ಬಗೆಬಗೆಯಾಗಿ ವಿವರಿಸಲಾಗಿದೆ. 'ಕುಲಾರ್ಣವ ತಂತ್ರ'ವು v. 79-80 ಹೀಗೆನ್ನುತ್ತದೆ : 'ಮದ್ಯವೆಂದರೆ (ಸುರಾ) ಶಕ್ತಿ, ಮಾಂಸವೆಂದರೆ ಶಿವ, ಅವುಗಳನ್ನು ಬೋಗಿಸುವವನು ಸ್ವಯಂ ಭೈರವನೇ ಇವರಿಬ್ಬರ (=ಶಿವ ಮತ್ತು ಶಕ್ತಿ) ಸಂಯೋಗದಿಂದ ಪುಟಿದೆದ್ದ ಆನಂದವನ್ನು ಮೋಕ್ಷ ಎಂದು ಕರೆಯಲಾಗುತ್ತದೆ. ಬ್ರಹ್ಮನ್‌ನ ರೂಪವೆನ್ನಿಸಿದ ಈ ಆನಂದವು (ಆರಾಧಕನ) ದೇಹದಲ್ಲಿ ಸ್ಥಾಪಿತಗೊಳ್ಳುತ್ತದೆ. ಮದ್ಯವು ಇದಕ್ಕೆ ವ್ಯಕ್ತರೂಪವನ್ನು ನೀಡುತ್ತದೆ. ಈ ಕಾರಣದಿಂದಾಗಿ ಯೋಗಿಗಳು ಇದನ್ನು ಸೇವಿಸುತ್ತಾರೆ. ' ಸುಧಾರಣಾವಾದಿಯಾದ 'ಮಹಾನಿರ್ವಾಣ ತಂತ್ರ'ವು ಹೀಗೆನ್ನುತ್ತದೆ : 'ಮದ್ಯ (ಸುರಾ) ಎಂದರೆ ಜೀವಿಗಳ ರಕ್ಷಕಳು, ಆನಂದಭೋಗ ಹಾಗೂ ಬಿಡುಗಡೆಗಳ ತಾಯಿ ಎನ್ನಿಸಿದ, ದ್ರವರೂಪದ ಸ್ವಯಂ ತಾರಾ ಇವಳೇ ಸರಿ.' [68] 'ಕೌಲಾವಲಿ ನಿರ್ಣಯ'ದಲ್ಲಿ ಕ್ಷೀರಸಾಗರವನ್ನು

---

67. 'The Tantric Tradition', ಪು. 252.

68. ಅನು. Woodroffe, xi. 105.

ಕಡೆಯಲಾಗಿ ಅಲ್ಲದೆ 'ಕುಲ' ಎಂಬ ಅಮೃತದಿಂದ ಮೇಲೆದ್ದು ಬಂದ ದೇವಿಯನ್ನು 'ಸುರಾ' ಎಂದು ಪೂಜಿಸಲಾಗುತ್ತದೆ : 'ಹದಿನೆಂಟು ಕೈಗಳುಳ್ಳವಳು, ಕಮಲನಯನೆ, ಆನಂದದ ಶಿಖರದ ಮೇಲೆ ಹುಟ್ಟಿದವಳು (ಹಾಗೂ ಅಲ್ಲಿಯೇ ಉದ್ಭವಿಸಿದವಳು), ಮಹೇಶ್ವರನಂತಹ ಆನಂದ ರೂಪಳು. ಅವರಿಬ್ಬರ ಸಂಯೋಗದಿಂದ ಮುಂದೆದ್ದು ಬಂದವರೆಂದರೆ ಬ್ರಹ್ಮ, ವಿಷ್ಣು ಹಾಗೂ ಶಿವ. ಹೀಗಾಗಿ ನಾನು ನನ್ನ ಇಡಿಯ ವ್ಯಕ್ತಿತ್ವದೊಡನೆ ನಿನ್ನನ್ನು ಸೇವಿಸುವೆನು. ಎಲೆ ಸುರಾ ದೇವಿಯೇ.'[69] ಭಾರತಿ ಅವರ ತಾಂತ್ರಿಕ ಮಾಹಿತಿಗಾರರು ಕುಲ-ಅಮೃತ ಪದವನ್ನು, 'ಪಂಚ ಮಕಾರಗಳ ಆಧ್ಯಾತ್ಮಿಕ ತಿರುಳು ------, ಶಿವ ಹಾಗೂ ಶಕ್ತಿಯ ಅಮರ ಮೈಥುನದಿಂದ ಪರಿಣಮಿತಗೊಂಡ ವೈಶಿಷ್ಟಿಕವೆನ್ನಿಸಿದ ಶೇಷ ವಸ್ತು', 'ಶಿವ ಹಾಗೂ ಶಕ್ತಿಯ ಸಂಪರ್ಕದಿಂದ ಉದ್ಭವಿಸಿದ ದ್ರವ' , ಹಾಗೂ ದೇವಿಯ ರಜಸ್ಸು (ಮುಟ್ಟಿನ ನೆತ್ತರ), ಎಂದೆಲ್ಲ ಹಲವು ವಿಧದಿಂದ ಅರ್ಥೈಸುತ್ತಾರೆ.[70] ಮದ್ಯವು 'ಶಕ್ತಿಯ ರಸದಿಂದ ಉತ್ಪನ್ನವಾಗುತ್ತದೆ'ಎಂದು 'ಶಕ್ತಿ ಸಂಗಮ ತಂತ್ರ'ii.32.25 ಹೇಳುತ್ತದೆ. ಈ ಹೇಳಿಕೆಯು 'ದಕ್ಷಿಣಾಚಾರ'ದ ಉಪಾಸನೆಗಾಗಿ ಸೂಕ್ತವೆನ್ನಿಸಿದ ಪರ್ಯಾಯಗಳ (ಪ್ರತಿನಿಧಿ) ಪಟ್ಟಿಯ ಸಂದರ್ಭದಲ್ಲಿ ಬಂದಿದೆಯಾದರೂ ಅದು ಲೈಂಗಿಕತೆಯ ಇದೇ ಬಗೆಯ ಪರಿಣಾಮಗಳನ್ನು ಒಳಗೊಂಡಿರುವಂತಿದೆ.

ಇದೀಗ ಉದ್ಧರಿಸಲಾದ ಪ್ರತೀಕ ರೂಪದ ಸಮೀಕರಣಗಳೆಲ್ಲ ಮೊದಲ ನಾಲ್ಕು 'ಮ' ಕಾರಗಳ ಮತಾಚರಣೆಯ ಉಪಭೋಗತ್ವದಲ್ಲಿ ಕುಲದೇವತೆಯ ಪಾಲ್ಗೊಳ್ಳುವಿಕೆಯ ಮೂಲಾಂಶ ಇರುವುದನ್ನು ನಿರ್ದೇಶಿಸುತ್ತವೆ. ಪುಷ್ಟಿಯನ್ನು ನೀಡುವ ಇಂಥ ಪಾಲ್ಗೊಳ್ಳುವಿಕೆಯು 'ನಾವೇನನ್ನು ಸೇವಿಸುವೆವೋ, ಹಾಗಾಗುವೆವು-'man ist was er isst' ಎಂದೆನ್ನುವ ಪುರಾತನ ನಡವಳಿಕೆಯ ನಿಯಮವನ್ನು ಆಧಾರಿಸಿದೆ. ಮತಾಚರಣೆಯ ಅನ್ನಾಹಾರ ಪದಾರ್ಥಗಳನ್ನು ಶಿವ ಹಾಗೂ ಶಕ್ತಿಯ ದೇಹ ಇಲ್ಲವೆ ದೈಹಿಕ ಉತ್ಪನ್ನಗಳೊಂದಿಗಿನ ಸಮೀಕರಣವು ಪ್ರಭುಭೋಜನದ ಸಂಸ್ಕಾರವನ್ನು ಪಡೆಯುವವನಿಗೆ ಅದರೊಂದಿಗೆ ಏಕದ್ರವ್ಯ ಸಂಬಂಧವನ್ನು ಒದಗಿಸುತ್ತದೆ. ಅವನು ದೇವನಾಗುತ್ತಾನೆ ಹಾಗೂ ಅಮರತ್ವ ಮತ್ತು ಯೋಗಸಿದ್ಧಿಗಳಂತಹ ಬಗೆಬಗೆಯ ದೈವಿಕ ಸಾಮರ್ಥ್ಯಗಳಲ್ಲಿ ಪಾಲ್ಗೊಳ್ಳುತ್ತಾನೆ. ಅಲ್ಲದೆ ಅಲೌಕಿಕವಾದ ಈ ಲಾಭಗಳನ್ನು ಕುರಿತು ಚರ್ಚಿಸುವ ಮುನ್ನ ನಾವು ತಾಂತ್ರಿಕ ಸಂಪ್ರದಾಯದ ಕೇಂದ್ರಬಿಂದುವಿನಲ್ಲಿರುವ ಆಚರಣೆಯಾದ ಲೈಂಗಿಕ ಸಂಭೋಗವನ್ನು ಕುರಿತು ಚರ್ಚಿಸಬೇಕಿದೆ.

ಕಾಪಾಲಿಕರನ್ನು ಕುರಿತಾದ ನಮ್ಮ ಕೆಲ ಆಕರಗಳು ಈ ಮತಾಚರಣೆಯ ಸಂದರ್ಭದಲ್ಲಿ ಬಲು ಸ್ಪಷ್ಟವಾಗಿ ಇರುವುದರಿಂದ ಅವುಗಳನ್ನು ದೃಢಪಡಿಸಿಕೊಳ್ಳುವಷ್ಟರ ಮಟ್ಟಿಗೆ ಮಾತ್ರ ತಾಂತ್ರಿಕ ಸಾಹಿತ್ಯ ಕೃತಿಗಳನ್ನು ಅವಲಂಬಿಸಿದರೆ ಸಾಕು, ಹೆಚ್ಚಿಗೆ ಬೇಕಿಲ್ಲ.

---

69. ಅನು. ಭಾರತಿ ಇವರಿಂದ, 'The Tantric Tradition' ದಲ್ಲಿ ಪು. 259.

70. ಅದೇ pp. 259-60.

ಈ ಮತಾಚರಣೆಯ ಮೂಲ ಮಾದರಿಯ ಅಡಿಪಾಯವನ್ನು ಕುರಿತು ಸೋಮನು (ಶಿವ) ಉಮೆಯೊಂದಿಗೆ ಒಂದಾದವನ ಸಿದ್ಧಾಂತ (ಉಮಾ ಸಹಿತಃ ತಸ್ಯ ಸಿದ್ಧಾಂತಃ)[71], ಎಂಬುದಾಗಿ 'ಸೋಮ ಸಿದ್ಧಾಂತ' ಈ ಪದದ ಪಾರಂಪರಿಕ ವ್ಯುತ್ಪತ್ತಿಯು ಕೆಲವೇ ಮಾತುಗಳಲ್ಲಿ ಹೇಳುತ್ತದೆ. ಈ ಮತಾಚರಣೆಯಲ್ಲಿ ಪಾಲ್ಗೊಳ್ಳುವವರು ತಮ್ಮನ್ನು ಅನುಕ್ರಮವಾಗಿ ಶಿವ ಹಾಗೂ ಶಕ್ತಿಯೊಂದಿಗೆ ಸಮೀಕರಿಸಿಕೊಳ್ಳುತ್ತಾರೆ. ಮಾನವ ಗಂಡು ಹೆಣ್ಣಿನ ಜೋಡಿಗಳು ಲೈಂಗಿಕ ಸಂಭೋಗದ ಆನಂದದಲ್ಲಿ ಶಿವ ಹಾಗೂ ಶಕ್ತಿಯ ಮೈಥುನದ ದೈವಿಕ ಆನಂದವನ್ನು ಸಿದ್ಧಿಸಿಕೊಳ್ಳುತ್ತಾರೆ. ಈ ಅಭಿಪ್ರಾಯದ ಮೇರೆಗೆ ಕೊನೆಯ ಬಿಡುಗಡೆ (ಮುಕ್ತಿ) ಎಂದರೆ ನಿರಂತರವಾದ ಸಂಭೋಗೋದ್ರೇಕ, ಪುನರ್ಜನ್ಮಗಳ ಚಕ್ರದಿಂದ ಬಿಡುಗಡೆ ಹೊಂದುವುದಷ್ಟೇ ಅಲ್ಲ.

'ಮೋಕ್ಷ'ದ ನಿನ್ನ ಪರಿಕಲ್ಪನೆ ಯಾವುದು? ಎಂದು ಕೇಳಿದಾಗ 'ಪ್ರಬೋಧಚಂದ್ರೋದಯ'ದ ಕಾಪಾಲಿಕ (ಅಂಕ III vs.16) ಹೀಗೆನ್ನುತ್ತಾನೆ :

> ಮೃಡಾನಿಯ ಒಡೆಯನು (ಶಿವ) ಹೀಗೆಂದನು : 'ಇಂದ್ರಿಯ ಗೋಚರ ವಸ್ತುಗಳ ಹೊರತು ಇನ್ನೆಲ್ಲೂ ಆನಂದ ದೊರಕದು. ಒಬ್ಬ ವ್ಯಕ್ತಿಯ (ಜೀವ) ಅವಸ್ಥೆಯು, ಆನಂದವು ಜಾಗೃತಿಗೊಳ್ಳದೆ ಶೂನ್ಯವಾದ ಒಂದು ಬಂಡೆಗಲ್ಲಿನಂತಿರುವಾಗ ಮುಕ್ತಿಗಾಗಿ ಆಸೆ ಪಡಲು ಹೇಗೆ ಸಾಧ್ಯ? ಚಂದ್ರಮೌಳಿಯಂತಹ (ಶಿವ) ರೂಪವನ್ನು ಪಡೆದವನು (ವಪುಸ್) ಪಾರ್ವತಿಯ ಪ್ರತಿಮೆಯಾದ ತನ್ನ ಮಡದಿಯ ಅಪ್ಪುಗೆಯಲ್ಲಿ ಸಂತೋಷಪಡುವವನೇ (ನಿಜವಾಗಿಯೂ) ಮುಕ್ತನು.'

ಕಾಪಾಲಿಕನಾದ ಉನ್ಮತ್ತ ಭೈರವನು ಮಾಧವರ 'ಶಂಕರ ದಿಗ್ವಿಜಯ'ದ ಬಾಷ್ಯದಲ್ಲಿ xv.28 ಇದೇ ಬಗೆಯ ಅಭಿಪ್ರಾಯವನ್ನು ಹೀಗೆಂದು ವ್ಯಕ್ತಪಡಿಸುತ್ತಾನೆ : 'ಲೈಂಗಿಕ ಕೂಟದ ಮೂಲಕ ವ್ಯಕ್ತಗೊಳ್ಳುವ ಆನಂದವೇ ಭೈರವನ ನಿಜವಾದ ರೂಪವೆನ್ನಿಸಿದೆ. ಸಾಯುವ ಕಾಲಕ್ಕೆ ಅಂಥದನ್ನು (ಆನಂದವನ್ನು) ಪಡೆಯುವುದೇ ಮೋಕ್ಷ. ಇದೇ ಅಂತಿಮ ಸತ್ಯ.'[72]

ಕಾಪಾಲಿಕನಾದ ಬೋಧೋಲ್ಬಣ ನಿತ್ಯಾನಂದನು, 'ಯಾವಾಗಲೂ, ವಸ್ತುಗಳಿಂದ (ದ್ರವ್ಯ) ಹುಟ್ಟಿದ ಜ್ಞಾನವನ್ನು ಅವಲಂಬಿಸುವವರು, ಕಾಪಾಲಿಕ 'ಶಕ್ತಿ'ಯೊಂದಿಗಿನ

---

71. ಕೃಷ್ಣಮಿಶ್ರರ 'ಪ್ರಬೋಧ ಚಂದ್ರೋದಯ'ದ 'ಪ್ರಕಾಶಟೀಕಾ' ಸಂ. ಪಣಶೀಕರ, ಪು. 114. ಅಲ್ಲದೆ ನೋಡಿ 'ಚಂದ್ರಿಕಾವ್ಯಾಖ್ಯಾ', ಅದೇ, ಪು. 111, ಮತ್ತು ಜಿ. ತುಚ್ಚಿ, JRASB, n.s. XXVI, 131.

72. ಧನಪತಿಸೂರಿ, 'ಡಿಂಡಿಮ' ಭಾಷ್ಯ, vs. 22.

ಅಪ್ಪುಗೆಯಿಂದ ಸಂತೋಷವನ್ನು ಪಡೆದ ಹೃದಯದವರು, ಲೈಂಗಿಕ ಕೂಟದಿಂದ ಹೊರಬರುವ ಸರ್ವೋತ್ತಮವಾದ ಅಮೃತವನ್ನು ಸೇವಿಸುವ ಚಟ ಅಂಟಿಕೊಂಡವರು ---- ಹಾಗೂ ಸಾವಿನಲ್ಲಿ ಭೈರವನೇ ನೆಲೆ (ಪದ) (ಎಂದು ಘೋಷಿಸುವವರು)'[73] ಆದ ನಿರ್ಭಯರಾದ ಯತಿಗಳನ್ನು ಕೊಂಡಾಡುತ್ತಾನೆ. ಲೈಂಗಿಕ ಕೂಟದ ಅಮೃತದ ಸೇವನೆಯು, ಯೋನಿಯಲ್ಲಿ ವಿಸರ್ಜಿಸಲಾದ ವೀರ್ಯ ದ್ರವವನ್ನು ಲಿಂಗದಿಂದ ಮತ್ತೆ ಹೀರಿಕೊಳ್ಳುವ ಯೋಗಕ್ರಿಯೆಗೆ ಬಹುಮಟ್ಟಿಗೆ ಸಂಬಂಧಿಸಿದ್ದಿರಬಹುದು. ಈ ರೂಢಿಗಾಗಿ ತತ್ವಾಧಾರವೆನ್ನಿಸಿದ 'ವಜ್ರೋಲಿಮುದ್ರಾ'ವನ್ನು ಕುರಿತು 'ಹಠಯೋಗ ಪ್ರದೀಪಿಕಾ'ದಲ್ಲಿ ಹೀಗೆ ವಿವರಿಸಲಾಗಿದೆ : 'ವಿಸರ್ಜಿಸಲಾದ ತನ್ನದೇ ಆದ 'ಬಿಂದು'ವನ್ನು ಮೇಲಕ್ಕೆ ಸೆಳೆದುಕೊಂಡ ತರುವಾಯ (ಯೋಗಿಯು) (ಅದನ್ನು) ಸುರಕ್ಷಿತವಾಗಿ ಇಟ್ಟುಕೊಳ್ಳಬಲ್ಲನು ------ 'ಬಿಂದು'ವಿನ ಹಾನಿಯಿಂದ ಸಾವು (ಬರುತ್ತದೆ); ಅದನ್ನು ಉಳಿಸಿಕೊಳ್ಳುವುದರಿಂದ, ಜೀವನ.'[74] ಇದಕ್ಕೆ ಸಂಬಂಧಿಸಿದಂತೆ ಇನ್ನೊಂದು ರೂಢಿಯಾದ 'ಯೋನಿ-ಮೀಸಲಾತಿ' (coitus reservatus)ಯನ್ನು ಬೌದ್ಧರ ವಜ್ರಯಾನ ಗ್ರಂಥಗಳಲ್ಲಿ ವಿಧಿಸಲಾಗಿದೆ. ದ್ವೈತದಲ್ಲಿ[75] ಏಕತೆಯ ಪರಿಪೂರ್ಣ ಅವಸ್ಥೆಯನ್ನು ತಂದು ಕೊಡುವಂತಹ ಒಂದು ಕ್ರಿಯೆಯ ಮೂಲಕ ಶ್ವಾಸ (ಪ್ರಾಣ), ಯೋಚನೆ (ಚಿತ್ತ), ಹಾಗೂ ವೀರ್ಯಗಳೆಂಬ (ಬಿಂದು) ಮೂರು ವಜ್ರಗಳನ್ನು ಏಕಕಾಲಕ್ಕೆ 'ಅಚಲಗೊಳಿಸತಕ್ಕದ್ದು. ವೀರ್ಯನಾಶವು ಮಾನಸಿಕ ಹಾಗೂ ಆಧ್ಯಾತ್ಮಿಕವಲ್ಲದೆ ದೈಹಿಕ ಸಾಮರ್ಥ್ಯವನ್ನು ನಾಶಪಡಿಸುತ್ತದೆಂಬ ನಂಬಿಕೆ ಆಧುನಿಕ ಔದ್ಯಮಿಕ ಸಮಾಜಗಳಲ್ಲೂ ಕೂಡ ತುಂಬ ವಿಸ್ತೃತವಾಗಿರುವುದು ಕಂಡು ಬರುತ್ತದೆ. ಬಾರತದಲ್ಲಿ ಬ್ರಹ್ಮಚರ್ಯೆ ಹಾಗೂ ಧಾರ್ಮಿಕ ಇಲ್ಲವೆ ಯೋಗಸಿದ್ಧಿಗೆ ಬಲು ಹಿಂದಿನ ಕಾಲದಿಂದಲೇ ಒತ್ತು ಕೊಡಲಾಗಿದೆ. ಒಂದು ಉದಾಹರಣೆಯನ್ನು ಹೇಳುವುದಾದರೆ, ಮಹಾ ಭಾರತದ 'ಶಲ್ಯ ಪರ್ವ' (ಅಧ್ಯಾಯ. ೧)ದಲ್ಲಿ ದಧೀಚಋಷಿ ತನ್ನ ಸಂನ್ಯಾಸದ (ತಪಸ್ಸು) ಸಾಮರ್ಥ್ಯ ಹೆಚ್ಚಿದಂತೆಲ್ಲ ದೇವತೆಗಳು ಹೇಗೆ ಅಪಾಯಕ್ಕೊಳಗಾದರಲ್ಲದೆ ತನಗೆ ಆಸೆ ತೋರಿಸಲೆಂದು ಹೇಗೆ ಸೌಂದರ್ಯವತಿಯರಾದ ಅಪ್ಸರೆಯರನ್ನು ಭೂಮಿಗೆ ಕಳಿಸಿದರೆಂದು ಹೇಳುತ್ತಾನೆ. ದಧೀಚನು ಆ ಸ್ವರ್ಗೀಯ ಅಪ್ಸರೆಯನ್ನು ಕಣ್ಣಿಟ್ಟು ಸೂಕ್ಷ್ಮವಾಗಿ ಗಮನಿಸುತ್ತಿರುವಾಗಲೆ ಸರಸ್ವತಿ ನದಿಯಲ್ಲಿ ಅವನ ವೀರ್ಯ ಸ್ಖಲನಗೊಂಡಿತು. ಹೀಗಾಗಿ ಅವನು ತನ್ನ ಪವಿತ್ರವಾದ ಸಾಮರ್ಥ್ಯವನ್ನು ಕಳೆದುಕೊಂಡನು. ಧಾರ್ಮಿಕ ನವ ಶಿಷ್ಯನಿಗೆ ಸಂಸ್ಕೃತದ ಮೂಲ ಶಬ್ದೋತ್ಪತ್ತಿಯಂತೆ ಬ್ರಹ್ಮಚಾರಿನ್ ಅಂದರೆ ಬ್ರಹ್ಮನ ಮೇಲೆ ಮನಸ್ಸನ್ನು ಸ್ಥಿರಪಡಿಸುವವನು, 'ಬ್ರಹ್ಮನಲ್ಲಿಗೆ

---

73. ಆನಂದಗಿರಿ, chap. xxiii.
74. ಅನು. ಬ್ರಿಗ್ಸ್ 'ಗೋರಖನಾಥ ----'ದಲ್ಲಿ , ಪು. 334.
75. ನೋಡಿ Eliade, 'ಯೋಗ -----' pp. 248-49, 253-54 ಮತ್ತು ಬಾರತಿ, ಪು. 265.

ಹೊರಟವನು'[76] ಎಂದಾಗಿದ್ದರೂ, ಬಲು ಬೇಗ ಅದು ಮುಖ್ಯವಾಗಿ ಇಂದ್ರಿಯನಿಗ್ರಹ, ಸಂಯಮ ಎಂಬ ಅರ್ಥದಲ್ಲಿ ಬಳಕೆಗೆ ಬಂದಿತು.

'ಚಂಡಕೌಶಿಕ' (ಅಂಕ iv. vs. 34)ದ ಕಾಪಾಲಿಕನು, ಸಿದ್ಧರು ಮೇರು ಪರ್ವತದ ಶಿಖರಗಳ ಮೇಲೆ ನಲಿದಾಡುವಂತಹ ಅನ್ಯೆತಿಕ ವಿಶ್ವವನ್ನು ಬಣ್ಣಿಸುವಾಗ ಲೈಂಗಿಕ ಇಲ್ಲವೆ ಕನಿಷ್ಠ ಮಟ್ಟಕ್ಕೆ, ಮೋಕ್ಷದ ಇಂದ್ರಿಯಜನ್ಯವಾದ ಪರಿಕಲ್ಪನೆಯನ್ನಾದರೂ ಸೂಚಿಸಬಯಸುತ್ತಾನೆ. ರಾಮಾನುಜರ 'ಶ್ರೀಭಾಷ್ಯ'ದ ii. 2. 35-37ದಲ್ಲಿ ಕಾಪಾಲಿಕರು, 'ಆತ್ಮನು ಹೆಣ್ಣಿನ ಯೋನಿಮುಖದಲ್ಲಿ ಕುಳಿತಂತೆ ಧ್ಯಾನ ಮಾಡುವವನು ನಿರ್ವಾಣವನ್ನು ಹೊಂದುತ್ತಾನೆ' ಎಂದು ಘೋಷಿಸುತ್ತಾರೆ. ಈ ಹೇಳಿಕೆಯು ಆಧ್ಯಾತ್ಮಿಕ ಅಂಶವನ್ನು ಇಲ್ಲವೆ ಮುಚ್ಚುಮರೆಯಿಲ್ಲದೆ ನಡೆಯುವ ಲೈಂಗಿಕ ಮತಾಚರಣೆಯ ಘನಗಂಭೀರತೆಯನ್ನು ಪ್ರತಿಬಿಂಬಿಸುವಂತೆ ಕಾಣುತ್ತದೆ.

ವಿ. ಎಸ್. ವೈದ್ಯರಾಜ ಎಂಬವರ ಹಿಂದಿ ಹಾಗೂ ಇಂಗ್ಲಿಷ್ ಭಾಷೆಯ ಒಂದು ಆಧುನಿಕ ತಾಂತ್ರಿಕ ಕೈಪಿಡಿಯಾದ 'ವಾಮಮಾರ್ಗ'ವು 'ಪಂಚ ಮಕಾರ ಸಾಧನಾ'ದ ಉತ್ತುಂಗಾವಸ್ಥೆಯನ್ನು ಕಾಪಾಲಿಕರವು ಎಂದು ಹೇಳಲಾಗುವ ಮಾತುಗಳಲ್ಲಿ ಹೀಗೆ ಬಣ್ಣಿಸುತ್ತದೆ: 'ಶಕ್ತಿಯನ್ನು ಗೌರಿಯೆಂದು (ಅಂದರೆ ಶಿವನ ಮಡದಿ) ಹಾಗೂ ತನ್ನನ್ನು ಶಿವನೆಂದು ಬಗೆದು ಅವನು (ಸಾಧಕ) ತನ್ನ ಇಷ್ಟದೇವತೆಯ ಮೂಲಮಂತ್ರವನ್ನು ಉಚ್ಚರಿಸಬೇಕು ಹಾಗೂ ಆ ತಂದೆಯ ಮೋರೆಯನ್ನು ಆ ತಾಯಿಯ ಮೋರೆಯಲ್ಲಿ ಅರ್ಪಿಸಬೇಕು'.[77] ಲೈಂಗಿಕ ಕ್ರಿಯೆ ನಡೆದಾಗ ಸಾಧಕನು ತನ್ನ ಮನದಲ್ಲಿಯೇ ದೇವಿಯ ಒಂದು ಮಂತ್ರ ಶ್ಲೋಕವನ್ನು ಪಠಿಸಬೇಕು. ಆ ಬಗೆಯಾಗಿ 'ಅವನು ಶಿವ ಹಾಗೂ ಶಕ್ತಿಯ ಐಕ್ಯಭಾವನೆಯನ್ನು ಸೃಜಿಸುತ್ತಾನೆ.'[78] ಅವನು ತನ್ನ ವೀರ್ಯವನ್ನು ಬಿಟ್ಟುಕೊಡುವಾಗ ಮುಂದಿನ ಮಂತ್ರವನ್ನು ಪಠಿಸಬೇಕು : 'ಓಂ ವಿಜೃಂಭಿಸುವವನಾದ ನಾನು, ಧರ್ಮ ಹಾಗೂ ಅಧರ್ಮಗಳನ್ನು ಆಹುತಿಯ ಘಟಕಾಂಶಗಳೆಂದು ಬಗೆಯುವನಾದ ನಾನು, ಈ ಸೌಟನ್ನು ಬಳಸಿಕೊಂಡು, ಪ್ರಕಾಶ ಹಾಗೂ

---

76. ನೋಡಿ ಎ. ಭಾರತಿ, 'The ochre Robe', ಪು. 99. ಮನೋವಿಜ್ಞಾನಿ ಹಾಗೂ ಮಾನವವಂಶಶಾಸ್ತ್ರಜ್ಞರಾದ ಜಿ. ಎಮ್. ಕಾರ್‌ಸ್ಟೆಯರ್ಸ್ ಅವರು ಒಂದು ಸಂಗತಿಯನ್ನು ಕಂಡು ಹಿಡಿದರು. ಅದೆಂದರೆ, ದೈಹಿಕ ಹಾಗೂ ಆಧ್ಯಾತ್ಮಿಕ ಸಾಮರ್ಥ್ಯಗಳ ಮೂಲಸ್ರೋತವಾಗಿರುವ ವೀರ್ಯಸ್ಖಲನವು ಮೊದಲೇ ಮನಸ್ಸನ್ನು ಆಕ್ರಮಿಸಿಕೊಂಡಿದ್ದರೆ ಅನೈಚ್ಛಿಕ. ಅದು 'ರಾಜಸ್ಥಾನದ ಹಿಂದೂ ಪಂಗಡಗಳಲ್ಲಿ ಹಾಗೂ ಇನ್ನೆಡೆಗಳಲ್ಲಿ ತೀರ ಸಾಮಾನ್ಯವೆನ್ನಿಸಿದ ಚಿಂತಾತುರತೆಯ ನರವ್ಯಾಧಿಯ ಅಭಿವ್ಯಕ್ತಿಯನ್ನು' ಉಂಟು ಮಾಡುವಂತೆ ಕಾಣುತ್ತದೆ. ('The Twice Born', ಪು. 87).

77. ಅನು. ಭಾರತಿ 'The Tantric Tradition' ದಲ್ಲಿ , ಪು. 264.

78. ಅನು. ಅದೇ. ಪು. 265.

ಆಕಾಶ (ಈಥರ್) ಎಂಬೆರಡು ನನ್ನ ಕೈಗಳಿಂದ (ಈ ಆಹುತಿಯನ್ನು) ಪ್ರೀತಿಯಿಂದ ಅಗ್ನಿಗೆ ಅರ್ಪಿಸುತ್ತೇನೆ, ಸ್ವಾಹಾ'.[79] ಇಲ್ಲಿ ಸಂಭೋಗೋದ್ರೇಕವೆಂದರೆ ಸಹಭಾಗಿತ್ವ ಹಾಗೂ ಆಹುತಿ ಇವೆರಡೂ ಆಗಿದೆ!

ಕಾಪಾಲಿಕನ ಧಾರ್ಮಿಕ ಸಾಹಸ ಕೃತ್ಯದ ಗುರಿ ಕೇವಲ ದೈವಿಕ ಆನಂದದ ಸ್ಥಿತಿಯನ್ನು ಪಡೆದುಕೊಳ್ಳುವುದಲ್ಲ. ಅವನು ಹೆಚ್ಚಿನ ಲೌಕಿಕ ಇಲ್ಲವೆ ವ್ಯಾವಹಾರಿಕ ಮಟ್ಟದಲ್ಲಿ ಯೋಗಸಿದ್ಧಿಗಳಿಗಾಗಿ ಅರಸುತ್ತಾನೆ. ಸಹಬಾಗಿತ್ವವನ್ನು ಹೊಂದಿದ ಮತಾಚರಣೆಗಳಲ್ಲಿ ಶಿವನೊಂದಿಗೆ ಏಕದ್ರವ್ಯ ಸಂಬಂಧವನ್ನು ಹೊಂದುವ ಮೂಲಕವಾಗಲಿ ಇಲ್ಲವೆ ಹೆಚ್ಚು ನೇರವಾಗಿ ದೇಹದಂಡನೆ ಇಲ್ಲವೆ ಆಹುತಿಯ ಮೂಲಕ ಒಲಿಸಿಕೊಳ್ಳಲಾದ ದೇವತೆಯಿಂದ ನೀಡಲಾದ ಕಾಣಿಕೆಯಾಗಿ, ಇವೆರಡನ್ನೂ ಗೆದ್ದುಕೊಳ್ಳಲು ಸಾಧ್ಯ.

ಬಲು ಹಿಂದಿನ ಕಾಲದಿಂದಲೂ ಬೇರೆಡೆಗಳಲ್ಲಿದ್ದಂತೆಯೇ ಭಾರತದಲ್ಲೂ ಮಾಂತ್ರಿಕ ಪುರೋಹಿತ ಅಸ್ತಿತ್ವದಲ್ಲಿದ್ದನು. ಅವನ ದೇಹದಂಡನೆ, ಮಂತ್ರಶಕ್ತಿಗಳು ಹಾಗೂ ಮಾಟದ ಮತಾಚರಣೆಗಳು ಅವನಿಗೆ ದೇವತೆಗಳ ನೆರವಿನಿಂದ ಇಲ್ಲವೆ ಅವರ ನೆರವಿಲ್ಲದೆಯೇ ಅಲೌಕಿಕವಾದ ಕಾರ್ಯಗಳನ್ನು ಕೈಕೊಳ್ಳುವ ಸಾಮರ್ಥ್ಯವನ್ನು ದಯಪಾಲಿಸಿದವು. ಯೋಗದ ಸಿದ್ಧಾಂತ ಹಾಗೂ ಆಚರಣೆಗಳ ಅಭಿವೃದ್ಧಿಯು ಮಾಂತ್ರಿಕ ಪುರೋಹಿತನ ಸಿದ್ಧಿಸಾಮರ್ಥ್ಯಗಳ ಒಂದು ಶಿಸ್ತುಬದ್ಧವಾದ ಸಂಸ್ಕಾರ ಹಾಗೂ ಗಣನೆಗೆ ದಾರಿಯನ್ನು ಮಾಡಿಕೊಟ್ಟಿತು.[80] ಸಾಮಾನ್ಯವಾಗಿ 200 ಕ್ರಿ.ಶ.ಪೂ. ಹಾಗೂ ಕ್ರಿ.ಶ. 300 ರ ನಡುವಿನ[81] ಕಾಲದ್ದಾದ ಪತಂಜಲಿಯ 'ಯೋಗ ಸೂತ್ರ'ದಲ್ಲಿ ಸಂಯಮದಿಂದ ಕೂಡಿದ ಆಚರಣೆಗಳಿಂದ ಹಲವಾರು ಯೋಗಸಿದ್ಧಿಗಳು ಮೂಡಿ ಬರುತ್ತವೆಂದು ಹೇಳಲಾಗಿದೆ[82]. ಈ ಸಾಮರ್ಥ್ಯಗಳು ವರ್ತಮಾನ, ಭೂತ ಹಾಗೂ ಭವಿಷ್ಯ ಕಾಲಗಳನ್ನು ಅರಿಯುವುದು, ಇನ್ನೊಬ್ಬನ ದೇಹವನ್ನು ಪ್ರವೇಶಿಸುವುದು (ಪರಕಾಯಾ ಪ್ರವೇಶ), ನೀರು ಇಲ್ಲವೆ ಮುಳ್ಳುಗಳ ಮೇಲೆ ನಡೆಯುವುದು, ಸಾಮಾನ್ಯವಾಗಿ ಕಿವಿಗೆ ಕೇಳಿ ಬರದ ಧ್ವನಿಗಳನ್ನು ಆಲಿಸುವುದು, ಅಲ್ಲದೆ ಹವೆಯಲ್ಲಿ ಹಾರುವಂತಹ ಸಂಗತಿಗಳನ್ನು ಒಳಗೊಳ್ಳುತ್ತವೆ. ಪಾತಂಜಲಿಯ 'ಯೋಗ ಸೂತ್ರ'ದಲ್ಲಿ ಇನ್ನೊಂದೆಡೆ, ಈ ಐದರಲ್ಲಿ ಯಾವುದೇ ಒಂದು ದಾರಿಯಿಂದ ಸಿದ್ಧಿಗಳನ್ನು ಪಡೆಯಲು ಸಾಧ್ಯವೆಂದು ಹೇಳಲಾಗಿದೆ. ಅವು ಹೀಗಿವೆ :

---

79. ಅನು. ಅದೇ.

80. 'ಸಿದ್ಧಿಗಳ'ನ್ನು ಕುರಿತಾದ ತೀರ ಪ್ರಾಚೀನ ಉಲ್ಲೇಖವೆಂದರೆ 'ಆಪಸ್ತಂಭೀಯ ಧರ್ಮಸೂತ್ರ'ದ್ದಾಗಿರಬಹುದು. ii. 9. 23. 6-7.

81. ನೋಡಿ ಕಾಣೆ, HDS, v, Part II, 1359-99 ಮತ್ತು Eliade, 'Yoga -----' pp. 370-72.

82. 'ಯೋಗ ಸೂತ್ರ' iii, 16-50. 'ಸಂಯಮ' ಎಂಬ ಪದವು 'ಯೋಗ ಶಾಖೆಗಳ' ಕೊನೆಯ ಹಾಗೂ ಎಲ್ಲಕ್ಕೂ ಎತ್ತರದ ಶಾಖೆಯನ್ನು ಸೂಚಿಸುತ್ತದೆ : ಏಕಾಗ್ರತೆ (ಧಾರಣಾ), ಧ್ಯಾನ (ಧ್ಯಾಸ) ಮತ್ತು ಸಮಾಧಿ.

ಹುಟ್ಟು, ಔಷಧ, ಮಂತ್ರ, ತಪಸ್ಸು ಹಾಗೂ ಸಮಾಧಿ. 'ಯೋಗ ಸೂತ್ರ'ದ ಸಮಕಾಲೀನ ಇಲ್ಲವೆ ತುಸು ತರುವಾಯದ್ದಾದ 'ಯಾಜ್ಞವಲ್ಕ್ಯ ಸ್ಮೃತಿ' iii. 202-203 ಯು ಆಲಿಸುವ, ನೋಡುವ, ಧ್ಯಾನಿಸುವ ಅದೃಶ್ಯವಾಗುವ-ಇಂಥ ಅಸಾಮಾನ್ಯ ಸಾಮರ್ಥ್ಯಗಳೇ ಯೋಗಸಿದ್ಧಿಯ ಕುರುಹು ಎಂದು ಹೇಳುತ್ತದೆ. ಭೋಜರಾಜನಿಂದ (ಹನ್ನೆರಡನೆಯ ಶತಮಾನದ ಶುರುವಿನಲ್ಲಿ) ಪತಂಜಲಿಯನ್ನು ಕುರಿತು ಬರೆಯಲಾದ 'ರಾಜಮಾರ್ತಂಡ' ಭಾಷ್ಯದಲ್ಲಿ ಎಂಟು ಮಹಾಸಿದ್ಧಿಗಳ ಒಂದು ಪಟ್ಟಿಯಿದ್ದು ಯೋಗದಿಂದ ಅವುಗಳನ್ನು ಗೆದ್ದುಕೊಳ್ಳುವುದು ಸಾಧ್ಯ. ಅವು ಹೀಗಿವೆ : (1) 'ಅಣಿಮಾನ್', ಕಿರಿದಾಗುವ ಸಾಮರ್ಥ್ಯ, (2) 'ಲಘಿಮಾನ್', ಹವೆಯಲ್ಲಿ ತೇಲುವ ಸಾಮರ್ಥ್ಯ, (3) 'ಗರಿಮಾನ್', ಭಾರವಾಗುವ ಸಾಮರ್ಥ್ಯ, (4) 'ಮಹಿಮಾನ್ ಅಳತೆಯಿಲ್ಲದಷ್ಟು ಹಿರಿದಾಗುವ ಸಾಮರ್ಥ್ಯ, (5)'ಈಶಿತ್ವ', ಮೈಮನಗಳ ಮೇಲೆ ಹಿಡಿತ, (6) 'ಪ್ರಾಕಾಮ್ಯ', ತಡೆಯಲಾಗದ ಮನಸ್ಸಾಮರ್ಥ್ಯ (7) 'ವಶಿತ್ವ', ಪಂಚ ಮಹಾಭೂತಗಳ ಮೇಲೆ ನಿಯಂತ್ರಣ, (8) 'ಕಾಮಾವಸಾಯಿತ್ವ', ಮನದಿಚ್ಛೆಯ ಪರಿಪೂರ್ತಿ.[83] ಇದೇ ಬಗೆಯ ಪಟ್ಟಿಗಳು ವ್ಯಾಸನ (ಏಳರಿಂದ ಎಂಟನೆಯ ಶತಮಾನ) 'ಯೋಗಭಾಷ್ಯ'ದಲ್ಲಿ, ತಾಂತ್ರಿಕ 'ಪ್ರಪಂಚ ಸಾರ'ದಲ್ಲಿ ಹಾಗೂ ಇನ್ನಿತರ ಕೃತಿಗಳಲ್ಲಿ ಕಾಣಸಿಗುತ್ತವೆ.[84]

ಪುರಾತನ ಯೋಗಗ್ರಂಥಗಳಲ್ಲಿ ಸಿದ್ಧಿಗಳನ್ನು ಕುರಿತು ವಿಪುಲವಾದ ಗ್ರಾಂಥಿಕ ಸಂದರ್ಭಗಳು ದೊರಕುವಾಗಲೂ ಹಲವು ಜನ ಆಧುನಿಕ ಭಾರತೀಯ ವಿದ್ವಾಂಸರು ಹಾಗೂ ಅದೇ ಬಗೆಯ ಮನೋಧರ್ಮದ ಪಾಶ್ಚಾತ್ಯ ವಿದ್ವಾಂಸರೂ ಕೂಡ ಯೋಗಸಿದ್ಧಿಯ ಸಾಮರ್ಥ್ಯಗಳನ್ನು ಒಂದು ಉಪಾಯವೆಂದು ಅಷ್ಟೇ ಅಲ್ಲದೆ ಅಂತಿಮ ಮೋಕ್ಷಕ್ಕೆ ಒಂದು ತೊಡಕು ಆಗಿರುವುದರಿಂದ ಅದನ್ನೇ ಕೇಂದ್ರಬಿಂದುವಿನಲ್ಲಿಟ್ಟು ಅದನ್ನು ಅನುಸರಿಸತಕ್ಕದ್ದಲ್ಲ ಎಂದು ಬಗೆಯಲಾಗುತ್ತಿತ್ತೆಂಬ ಸಂಗತಿಯನ್ನು ಸ್ಥಾಪಿಸಲು ಪತಂಜಲಿಯ (iii. 37) ಒಂದೇ ಒಂದು ಸೂತ್ರಕ್ಕೆ ಅಂಟಿಕೊಂಡಿರುವರು.[85] ವೇದಾಂತಿನ್ನರು ಹಾಗೂ ಬೌದ್ಧ ವಲಯಗಳಲ್ಲಿ ಈ ಬಗೆಯ ಮನೋಧರ್ಮವು ಕ್ರಿಯಾಶೀಲವಾಗಿರುವಂತಿದೆ. ಇಂದು, ಅದು ಹಿಂದೂ ಪುನರುಜ್ಜೀವನದ ಬಗೆಗೆ ಉತ್ಸಾಹ ತಳೆದವರಲ್ಲಿ, ಹಾಗೆ ಆಚರಿಸುವವರಲ್ಲಿ ಹೆಚ್ಚು ಜನಪ್ರಿಯವೆನ್ನಿಸಿದೆ. ಆದರೆ ಪತಂಜಲಿಯ ಅಭಿಪ್ರಾಯ ಇದಾಗಿರಲಿಲ್ಲ. ಮಧ್ಯಯುಗದ

---

83. 'ಯೋಗ ಸೂತ್ರ'ವನ್ನು ಕುರಿತಾದ ಭಾಷ್ಯ, iii. 44. Eliade ರಿಂದ ಉದ್ಧೃತ, 'Yoga ----' ಪು. 88. ಬಹಳಷ್ಟು ಆಂಗ್ಲ ಸಮಾನ ಪದಗಳೆಲ್ಲ ಎಲಿಯೆಡ್‌ರ ಬರವಣಿಗೆಯನ್ನು ಆಧಾರಿಸಿದವುಗಳು.

84. ನೋಡಿ, ಕಾಣೆ, HDS, V, Part II, 1112-13.

85. ಎಲಿಯೆಡ್‌ನಂತಹ ವಸ್ತುನಿಷ್ಠನಾದ ಬರಹಗಾರ ಕೂಡ ಈ ಅಭಿಪ್ರಾಯಕ್ಕೆ ಅಂಶ ಮಾತ್ರ'ದಲ್ಲಾದರೂ ಬಲಿ ಬೀಳುತ್ತಾನೆ (Yoga ------ pp. 88-90). ಅವರಾಗಲಿ, ಬೇರೆ ವಿದ್ವಾಂಸರಾಗಲಿ 'ಸಿದ್ಧಿಗಳನ್ನು' ಪಡೆಯುವಲ್ಲಿ ಉತ್ತೇಜಕ ದ್ರವ್ಯಗಳನ್ನು ನಮೂದಿಸಿರುವುದನ್ನು ಬಹುಶಃ ಇಂಥವೇ ಆದ ಕಾರಣಗಳಿಂದಾಗಿ ಅಲಕ್ಷ್ಯಕ್ಕೆ ಈಡು ಮಾಡುತ್ತಾರೆ.

ಹಠಯೋಗದ ಪ್ರತಿಪಾದಕರದಂತೂ ಖಂಡಿತ ಅಲ್ಲ. ಆರ್ಥರ್ ಕೋಸ್ಲರ್ ಇವರು, ಸಂಬಂಧಿಸಿದ ಈ 'ಸೂತ್ರ'ವು ತನ್ನ ಮೊದಲಿನ ಒಂದು ಇಲ್ಲವೆ ಎರಡು ಸೂತ್ರಗಳಲ್ಲಿ ನಮೂದಿಸಲಾದ ಸಾಮರ್ಥ್ಯಗಳನ್ನು ನಿರ್ದೇಶಿಸುವುದೇ ಹೊರತು ಮುಂದಿನವುಗಳಲ್ಲಿ ನಮೂದಿಸಲಾದ ಹಲವಾರು ಸಾಮರ್ಥ್ಯಗಳನ್ನಲ್ಲ, ಎಂದು ಅವುಗಳತ್ತ ಗಮನ ಸೆಳೆದಿದ್ದಾರೆ.[86] ಅವರು, 'ಎಷ್ಟೇ ನಿರಾಕರಿಸಿದರೂ 'ಸಿದ್ಧಿಗಳು' ಯೋಗದ ಒಂದು ಅವಿಭಾಜ್ಯವಾದ ಅಂಗವೆನ್ನಿಸಿದೆ' ಎಂಬ ನಿಷ್ಕರ್ಷೆಯನ್ನು ತಲುಪುತ್ತಾರೆ. ಅವರ ಈ ಹೇಳಿಕೆಗೆ ಪಿ. ವಿ. ಕಾಣೆಯವರಂಥ ಶ್ರೇಷ್ಠ ವಿದ್ವಾಂಸರಿಂದಲೂ ಸ್ಪಷ್ಟವಾದ ಬೆಂಬಲವಿದೆ.[87]

ಬಹಳಷ್ಟು ತಾಂತ್ರಿಕ ಸಂಪ್ರದಾಯಗಳು ಹಠಯೋಗದ ಸಿದ್ಧಾಂತ ಹಾಗೂ ಆಚರಣೆಗಳಲ್ಲಿ ಚೆನ್ನಾಗಿ ನೆನೆದುಕೊಂಡಿದ್ದವು. ಹೀಗಾಗಿ ಕಾಪಾಲಿಕರು ಈ ಸಂಗತಿಗೆ ಒಂದು ಅಪವಾದ ಎನ್ನಿಸಿರುವ ಸಾಧ್ಯತೆ ಕಡಿಮೆ. ನಮ್ಮ ಆಕರಗಳು ಸೂಚಿಸುವಂತೆ ಅವರು ವಿಶೇಷವಾಗಿ ಮಾಟ ಹಾಗೂ ಸಿದ್ಧಿಗಳಲ್ಲಿ ಮೊದಲೇ ತೊಡಗಿಸಿಕೊಂಡಿದ್ದರು. ಕಾಪಾಲಿಕನಾದ ಉಗ್ರಭೈರವನು ಶಂಕರರೆದುರು ತನ್ನ ಮನದ ಅಳಲನ್ನು, 'ರಾಜ್ಯಾಭಿಷಿಕ್ತನಾದ ಅರಸನ ಇಲ್ಲವೆ ಮುನಿಗಳ ಒಡೆಯನ ತಲೆಬುರುಡೆಯು ನನ್ನ ಸಿದ್ಧಿಗಾಗಿ ಅತ್ಯಾವಶ್ಯಕ'[88] ಎಂದು ತೋಡಿಕೊಳ್ಳುತ್ತಾನೆ. ಶಂಕರರ ಹಗೆಯಾದ ಕ್ರಕಚನು ತನ್ನ ಧ್ಯಾನಸಾಮರ್ಥ್ಯದಿಂದ ಕಪಾಲಪಾತ್ರೆಯನ್ನು ಮದ್ಯದಿಂದ ತುಂಬುತ್ತಾನೆ.[89] 'ಚಂಡಕೌಶಿಕ'ದಲ್ಲಿ (ಅಂಕ iv. vss. 31-32) ಕಾಪಾಲಿಕನು ಹರಿಶ್ಚಂದ್ರ ರಾಜನಿಗೆ ಮಾಟದ ಸಿದ್ಧಿಗಳ ಬಲು ದೊಡ್ಡ ಸಂಗ್ರಹವನ್ನಲ್ಲದೆ, ಸಲಕರಣೆಗಳು ಹಾಗೂ ಅಮರತ್ವವನ್ನು ದಯಪಾಲಿಸುವ ಸಿದ್ಧರಸ (? = ಪಾದರಸದ ಮದ್ದು) ಬಲು ಶ್ರೇಷ್ಠವಾದ ಸಂಪತ್ತನ್ನು ಕೊಡಮಾಡುತ್ತಾನೆ. ಕಾಪಾಲಿಕ ಯತಿಗಳ ಮಾಂತ್ರಿಕ ಶಕ್ತಿಗಳನ್ನು ಕುರಿತಾದ ಉಲ್ಲೇಖಗಳು ಮದನಮಂಜರಿ, ಚಂದ್ರಸ್ವಾಮಿನ್, ದೇವದತ್ತ ಹಾಗೂ ಕಾಪಾಲಿಕ ಬೇಹುಗಾರರನ್ನು[90] ಕುರಿತಾದ 'ಕಥಾಸರಿತ್ಸಾಗರ'ದ ಕಥೆಗಳಲ್ಲಿ ಬರುತ್ತವೆ. ಜಂಭಲದತ್ತನ 'ವೇತಾಳ ಪಂಚವಿಂಶತಿ'ಯಲ್ಲಿ (pp. 10-11) ಕಾಪಾಲಿಕನು ಸಿದ್ಧಿಯನ್ನು ಸಂಪಾದಿಸಲೆಂದು ಮಹಾಮಂತ್ರವನ್ನು ಬಾಯಿಂದ ಮಣಮಣಗುಟ್ಟುತ್ತಾನೆ. ಕಲ್ಹಣನ 'ರಾಜತರಂಗಿಣಿ'ಯ ಕಾಪಾಲಿನ್ - ಪಾಶುಪತನಾದ ಅಶ್ವಪಾದನು ತನ್ನ ಹಿಂದಿನ ಜನ್ಮಗಳ ಜೀವನಗಳನ್ನು ನೆನಪಿಗೆ ತಂದುಕೊಳ್ಳುವ ಹಾಗೂ ಮಾಟದಿಂದ ತನ್ನ ಶಿಷ್ಯನನ್ನು ಕಾಶ್ಮೀರಕ್ಕೆ ರವಾನಿಸುವ ತನ್ನ ಸಾಮರ್ಥ್ಯವನ್ನು ತೋರ್ಪಡಿಸುತ್ತಾನೆ.[91]

---

86. 'The Lotus and the Robot,' pp. 110-11.
87. HDS. V. Part II. 1451-52.
88. ಮಾಧವಾಚಾರ್ಯ, xi. 14.
89. ಅದೇ, xv. 23-24.
90. ಮೇಲಕ್ಕೆ ನೋಡಿ, pp. 62-64.
91. ಮೇಲಕ್ಕೆ ನೋಡಿ, pp. 66-67.

ಕೃಷ್ಣಮಿಶ್ರನ 'ಪ್ರಬೋಧಚಂದ್ರೋದಯ'ದಲ್ಲಿ (ಅಂಕ III, vs. 22) ಕಾಪಾಲಿಕರ 'ಸಿದ್ಧಿ' ಗಳನ್ನು ಕುರಿತಾದ ಹೆಚ್ಚು ಕುತೂಹಲಕರವಾದ ಪೂರ್ವವೃತ್ತಾಂತ ಇದೆ. ಇಲ್ಲಿ, ಸೋಮಸಿದ್ಧಾಂತನು ತನ್ನ ಸಿದ್ಧಾಂತದಲ್ಲಿ ಭಕ್ತನು ಯಾವುದೇ ಇಂದ್ರಿಯ ಸುಖಗಳನ್ನು ತ್ಯಜಿಸದೆಯೇ ಎಂಟು 'ಮಹಾಸಿದ್ಧಿ'ಗಳನ್ನು ಪಡೆಯಬಲ್ಲನೆಂದು ಸಾಧಿಸುತ್ತಾನೆ. ಬೇರೆ ಸಿದ್ಧಾಂತಗಳಲ್ಲಿ ಸಾಮಾನ್ಯ ಸಿದ್ಧಿಗಳಾದ (ಪ್ರಾಕೃತ ಸಿದ್ಧಿಗಳು) ವಶೀಕರಣ (ವಶ್ಯ), ಆಕರ್ಷ, ಗೊಂದಲ (ವಿಮೋಹ), ಮರುಳು ಮಾಡುವುದು (ಪ್ರಸಾಮನ್), ಕ್ಷೋಭೆಯುಂಟು ಮಾಡುವುದು (ಪ್ರಕ್ಷೋಭನ) ಹಾಗೂ ಕಿತ್ತೆಸೆತ (ಉಚ್ಚಾಟನ)ಗಳು ಜ್ಞಾನಿಗಳಿಗೆ ಅಡೆತಡೆಗಳಿಗಿಂತ ಹೆಚ್ಚೇನೂ ಆಗಿಲ್ಲವೆಂದು ಅವನು ಹೇಳುತ್ತಾನೆ. ಈ ಪಟ್ಟಿಯು ಅಪೂರ್ವದ್ದಾಗಿ ಕಂಡರೂ ಕೆಲವು ಸಿದ್ಧಿಗಳು ತೊಡರುಗಳಾಗಬಹುದೆಂಬ ಯೋಚನೆಯು ಬಹಳಷ್ಟು ಮಟ್ಟಿಗೆ 'ಯೋಗ ಸೂತ್ರ'ವನ್ನು iii. 37 ಅಪ್ರತ್ಯಕ್ಷವಾಗಿ ಸೂಚಿಸುತ್ತದೆ.

ಭವಭೂತಿಯ 'ಮಾಲತಿ ಮಾಧವ'ದ ಐದನೆಯ ಅಂಕವು ಕಾಪಾಲಿಕನಾದ ಅಘೋರಘಂಟನ ಶಿಷ್ಯಳಾದ ಕಪಾಲಕುಂಡಲಾ ಇವಳು ವಾಯುಮಾರ್ಗದಿಂದ ಪ್ರವೇಶಿಸುವುದರಿಂದ ಶುರುವಾಗುತ್ತದೆ. ಶುರುವಿನಲ್ಲಿ, ಶಿವನ ಆವಾಹನೆಯನ್ನು ಮಾಡುವಾಗ ಅವಳು, ಆ ದೇವನ 'ಆತ್ಮ'ವು ಹತ್ತು ನಾಡಿಗಳ ಮಧ್ಯದಲ್ಲಿ ನೆಲೆಸಿದ್ದು ಅವನು (ತನ್ನನ್ನು) ಅರಿತವರಿಗೆ ಸಿದ್ಧಿಗಳನ್ನು ದಯಪಾಲಿಸುತ್ತಾನೆ', ಎಂದು ಒತ್ತಿ ಹೇಳುತ್ತಾಳೆ. ಆರು ಚಕ್ರಗಳ ಹಾಗೂ ಹತ್ತು ನಾಡಿಗಳ ತತ್ವವು ಹಠಯೋಗದ ಆಧ್ಯಾತ್ಮಿಕ ಶರೀರ ವಿಜ್ಞಾನದ ತಿರುಳೆನ್ನಿಸಿದೆ. ಈ ತತ್ವವು ಎಲ್ಲರಿಗೂ ತಿಳಿದಂಥದೇ ಆಗಿದ್ದು[92] ನಾವಿಲ್ಲಿ ಗಮನಿಸಬೇಕಿದ್ದ ಅಂಶವೆಂದರೆ, ಕಾಪಾಲಿಕರೊಂದಿಗಿನ ಅವರ ಸಾಹಚರ್ಯ. ಆಮೇಲೆ ಕಪಾಲಕುಂಡಲಾ ಇವಳು ತಾನು ಆಕಾಶದಲ್ಲಿ ಮುಂದಕ್ಕೆ ಸಾಗುವಾಗ ಮೋಡಗಳನ್ನು ಪಕ್ಕಕ್ಕೆ ತಳ್ಳುತ್ತ ಹಾರುವ ತನ್ನ ಬಗೆಯನ್ನು ಕುರಿತು ಹೇಳುತ್ತಾಳೆ. ತನ್ನ ಯೋಗಮಗ್ನತೆಯ (ಲಯವಶಾತ್) ಸಾಮರ್ಥ್ಯದ ಮೂಲಕ ತನ್ನ ಹೃದಯ ಕಮಲದಲ್ಲಿ ಶಿವನ ವ್ಯಕ್ತರೂಪವನ್ನು ಪಡೆದ ಆತ್ಮನನ್ನು ಗ್ರಹಿಸುವೆನೆಂದು ಹಾಗೂ 'ನ್ಯಾಸ'ದ[93] ತನ್ನ ಅಭ್ಯಾಸದ ಮೂಲಕ ಅವನನ್ನು (ಆತ್ಮ) ಆರು ಚಕ್ರಗಳಲ್ಲಿ ಸ್ಥಾಪಿಸುವೆನೆಂದು ಅವಳು ಸಾಧಿಸುತ್ತಾಳೆ. ತರುವಾಯ ಅವಳು (ಪ್ರಾಣಾಯಾಮದಿಂದ ನಿಯಂತ್ರಿಸಿದ ಉಸಿರಾಟದ ಮೂಲಕ) ನಾಡಿಗಳನ್ನು ಉಬ್ಬಿಸಿ ದೇಹದಿಂದ ಪಂಚಮಹಾಭೂತಗಳನ್ನು ಸೆಳೆದು ಹೊರತೆಗೆದು ತಾನು ಹವೆಯಲ್ಲಿ ಮೇಲಕ್ಕೆ ಏರಿ ಹಾರತೊಡಗುತ್ತಾಳೆ.

❖ ❖ ❖

92. ನೋಡಿ ಎಲಿಯೆಡ್, 'Yoga --- ' pp. 236-45, ಮತ್ತು 'ಸತ್ ಚಕ್ರನಿರೂಪಣ', ಸಂ. ಮತ್ತು ಅನು. J. Woodroffe, 'The Serpent Power'.

93. ಹಠಯೋಗ ಹಾಗೂ 'ನ್ಯಾಸ'ವೆಂಬ ತಾಂತ್ರಿಕ ಧ್ಯಾನದಾರಣೆಯು ಸ್ಪರ್ಶ ಹಾಗೂ ಮಂತ್ರೋಚ್ಚಾರಗಳಿಂದ ದೇಹದ ಬೇರೆ ಬೇರೆ ಭಾಗಗಳಲ್ಲಿ ಬಗೆ ಬಗೆಯ ದೇವತ್ವಗಳನ್ನು 'ಮತಾಚರಣೆಗಳ ಮೂಲಕ ಪ್ರಕ್ಷೇಪಿಸುತ್ತದೆ'.

# ಅಧ್ಯಾಯ - ೪

# ಶಕ್ತಿಪರಿಷತ್ತಿನ ಕಾಳಾಮುಖರು

## ಪೀಠಿಕೆ

ಶೈವಯತಿಗಳ ಕಾಳಾಮುಖಸಂಪ್ರದಾಯವು ಹನ್ನೊಂದು ಹನ್ನೆರಡು ಹಾಗೂ ಹದಿಮೂರನೆಯ ಶತಮಾನದ ಪೂರ್ವಾರ್ಧದವರೆಗೆ ಕನ್ನಡ ನಾಡಿನಲ್ಲಿ ನೆಲೆಸಿದ್ದಿತು. ಕೆಲವು ಸಲ ಕಾಳಮುಖ ಎಂದು ಬರೆಯಲಾಗಿರುವ ಈ ಪದ ಹಣೆಗೆ ಕಪ್ಪುಬಣ್ಣದ ಅಡ್ಡಪಟ್ಟಿಗಳನ್ನು ಬಳಿದುಕೊಳ್ಳುವ ಅವರ ರೂಢಿಯಿಂದ ಬಂದುದಾಗಿದೆ.[1] ಕಾಳಾಮುಖ ದೇವಾಲಯಗಳು ಹಾಗೂ ಮಠಗಳಿಗೆ ನೀಡಲಾದ ದತ್ತಿಗಳನ್ನು ಕುರಿತ ಹಲವಾರು ಶಾಸನಗಳಿಂದ ಕಂಡುಬಂದ ಸಂಗತಿಯೆಂದರೆ, ಈ ಯತಿಗಳು ಈ ನಾಡಿನಲ್ಲಿ ತುಂಬ ಪ್ರಭಾವಶಾಲಿಗಳಾಗಿದ್ದರೆಂಬುದು. ದುರ್ದೈವದ ಸಂಗತಿಯೆಂದರೆ ಅವರ ನಂಬಿಕೆ ಹಾಗೂ ಮತಾಚರಣೆಗಳನ್ನು ಕುರಿತು ಶಾಸನಗಳಿಂದ ಸ್ವಲ್ಪ ಸ್ವಲ್ಪವಾಗಿ ಶೇಖರಿಸಬಹುದಾದ ನಿದರ್ಶನಗಳನ್ನು ಬಿಟ್ಟರೆ ಹೆಚ್ಚಿನದೇನೂ ಉಳಿದು ಬಂದಿಲ್ಲ. ಅವು ಏನಿಲ್ಲೆಂದರೂ ಕಾಳಾಮುಖ ಸಂಪ್ರದಾಯದ ಎರಡು ಮುಖ್ಯ ಶಾಖೆಗಳಾದ ಶಕ್ತಿಪರಿಷತ್ತು ಹಾಗೂ ಸಿಂಹಪರಿಷತ್ತುಗಳನ್ನು ಬಿಡಿಸಿ ತೋರಿಸುತ್ತವೆ. ಎರಡನೆಯ ಶಾಖೆಯು ಆಂಧ್ರಪ್ರದೇಶ ಹಾಗೂ ಕರ್ನಾಟಕ ಪ್ರಾಂತಗಳನ್ನೊಳಗೊಂಡ ವಿಸ್ತೃತ ಭೂಭಾಗದಲ್ಲಿ ಕಂಡು ಬರುತ್ತದೆ. ಮೊದಲ ಶಾಖೆಯು ಹೆಚ್ಚಾಗಿ ಧಾರವಾಡ ಹಾಗೂ ಮೈಸೂರು ಸೀಮೆಯ ಶಿವಮೊಗ್ಗ ಜಿಲ್ಲೆಗೆ ಸೀಮಿತಗೊಂಡಿದೆ. ಹೀಗಿದ್ದೂ ಈವರೆಗೆ ಉಳಿದುಕೊಂಡಿರುವ ಶಕ್ತಿಪರಿಷತ್ತಿನ ಶಾಸನಗಳ ಸಂಖ್ಯೆ ತುಂಬ ದೊಡ್ಡದಿದ್ದು, ಅವುಗಳನ್ನು ಅನೇಕ ಕಡೆಗಳಲ್ಲಿ

1. ಟಿ. ಎ. ಜಿ. ರಾವ, 'Elements of Hindu Iconography', II, Part I, 25.

ಕಂಡುಹಿಡಿಯಲಾಗಿದೆ. ಅಲ್ಲದೆ, ಸಮಾನ್ಯವಾಗಿ ಅವು ಸುಧೀರ್ಘವಾಗಿದ್ದು ತಮ್ಮ ಸಂಪ್ರದಾಯವನ್ನು ಕುರಿತು ಹೆಚ್ಚಿನ ಮಾಹಿತಿಯನ್ನು ಒದಗಿಸುತ್ತವೆ. ಇತಿಹಾಸಕಾಲೀನ ಆಘಾತಗಳನ್ನು ಹೊರತುಪಡಿಸಿದರೆ ಇವೆರಡು ಶಾಖೆಗಳಲ್ಲಿ ಶಕ್ತಿಪರಿಷತ್ತು ಹೆಚ್ಚು ಮಹತ್ವದಾಗಿತ್ತೆಂದು ಭಾವಿಸಬೇಕಾಗುತ್ತದೆ.

ಶಕ್ತಿಪರಿಷತ್ತಿನ ಹದಿನೆಂಟು ದೇವಾಲಯಗಳಿಂದ ಸುಮಾರು ಅರವತ್ತೈದು ಶಾಸನಗಳನ್ನು ಕಂಡುಹಿಡಿದು, ಅವುಗಳನ್ನು ಪ್ರಕಟಿಸಲಾಗಿದೆ. ಎರಡು ದೇವಾಲಯಗಳ ಮೇಲೆ ಶಕ್ತಿಪರಿಷತ್ತಿನ ನಿಯಂತ್ರಣ ಸಂದೇಹಾಸ್ಪದವಾಗಿದೆಯಲ್ಲದೆ, ಮೇಲಿನ ಕೆಲವು ಶಾಸನಗಳು ಕಾಳಾಮುಖರು ಆ ದೇವಾಲಯಗಳನ್ನು ವಶಪಡಿಸಿಕೊಳ್ಳುವ ಮೊದಲಿನ ಅಥವಾ ತರುವಾಯದ ಕಾಲಗಳಿಗೆ ಸಂಬಂಧ ಪಟ್ಟವುಗಳಾಗಿವೆ. ಶಕ್ತಿಪರಿಷತ್ತಿನ ಬೇರೆ ಬೇರೆ ನಾಲ್ಕು ಶಾಖೆಗಳು ಪ್ರಸಿದ್ಧವಾದವುಗಳೇ ಆಗಿದ್ದರೂ ಅಷ್ಟಾಗಿ ಪ್ರಸಿದ್ಧವಲ್ಲದ ಇನ್ನೂ ಕೆಲವು ಉಪಶಾಖೆಗಳಿದ್ದುವೆಂದು ಭಾವಿಸಬಹುದಾಗಿದೆ. ಇವುಗಳಲ್ಲಿ ಎಲ್ಲಕ್ಕೂ ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿದ ಶಾಖೆಯು ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆ ಊರಿನ ಕೇದಾರೇಶ್ವರ ದೇವಾಲಯದಲ್ಲಿ ತನ್ನ ಕೇಂದ್ರವನ್ನು ಹೊಂದಿದ್ದಿತು.[2] ಇಲ್ಲಿಯ ಯತಿಗಳು ತಾವು ' ಶಕ್ತಿಪರ್ಷೆ'ಯ (ಅಥವಾ 'ಶಕ್ತಿ ಪರಿಷತ್ತು') 'ಪರ್ವತಾವಳಿ'ಯ (ಅಥವಾ 'ಪರ್ವತಾಮ್ನಾಯ'), 'ಮೂವರ ಕೋಣೆಯ ಸಂತತಿ'ಯವರೆಂದು (ಅಥವಾ 'ಸಂತಾನ') ಹೇಳಿಕೊಳ್ಳುತ್ತಿದ್ದರು. ಐವತ್ತಕ್ಕೂ ಕಡಿಮೆಯಲ್ಲದ ಶಾಸನಗಳು ಈ ಯತಿಗಳ ಪರಂಪರೆಯನ್ನು ಕುರಿತು ನಿರ್ದೇಶಿಸುತ್ತವೆ. ಇವುಗಳಲ್ಲಿ ಸುಮಾರು ಇಪ್ಪತ್ತೆರಡು ಶಾಸನಗಳು ಕೇದಾರೇಶ್ವರ ದೇವಾಲಯವೊಂದರಲ್ಲಿಯೇ ಇವೆ. ಉಳಿದವು ಈ ನಾಡಿನ ಬೇರೆ ಬೇರೆಡೆಯ ಐದು ದೇವಾಲಯಗಳಲ್ಲಿವೆ. ಆ ಯತಿಗಳೇ ಈ ಆರೂ ದೇವಾಲಯಗಳಿಗೆ ಮುಖ್ಯಸ್ಥರಾಗಿರುವುದು ಕಂಡುಬರುತ್ತದೆ. ಇವರಲ್ಲಿ, ಇಬ್ಬರು ಯತಿಗಳ ವಿಷಯದಲ್ಲಿ ಮಾತ್ರ ಶಕ್ತಿಪರಿಷತ್ತಿನೊಂದಿಗಿನ ಇವರ ನಂಟು ಉಳಿದಿಬ್ಬರು ಯತಿಗಳೊಂದಿಗಿನ ಒಂದೇ ಬಗೆಯ ಹೆಸರು ಹಾಗೂ ಕಾಲಗಳನ್ನು ಆಧರಿಸಿದುದಾಗಿದೆ.

---

2. ಈ ದೇವಾಲಯದಲ್ಲಿ ದೊರೆತ ಬಹುಮಟ್ಟಿಗಿನ ಶಾಸನಗಳು ಬಿ. ಎಲ್. ರೈಸ್ ಅವರಿಂದ EC, Vol. VII.ದಲ್ಲಿ ಸಂಪಾದಿತ ಮತ್ತು ಅನುವಾದಿತ. ಈ ಯತಿಗಳ ಪರಂಪರೆಯು ಜೆ. ಎಫ್. ಫ್ಲೀಟ್ ಅವರಿಂದ ('Incsrptions at Ablur', EI,V [1898-99],213-65) ಮತ್ತು ಎ. ವೆಂಕಟ ಸುಬ್ಬಯ್ಯನವರಿಂದ ('A Twelvth Century University in Mysore' ದ Quarterly Journal of the Mythic Socoety [Bangalore], VII [1917], 157-96) ಗಳಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಈ ಹಾಗೂ ಇನ್ನೂ ಹಲವಾರು ಕಾಳಾಮುಖ ದೇವಾಲಯಗಳ ವಾಸ್ತು ಮತ್ತು ಶಿಲ್ಪಗಳನ್ನು ಕುರಿತು ಎಚ್. ಕಸೆನ್ಸ್ (Cousens) ('The Chalukyan Architecture of the Kanarese Districts') ಮತ್ತು 'Mysore Gazetteer' (ಸಂ. ಹಯವದನ ರಾವ, Vols II and V)ಗಳಲ್ಲಿ ವಿವರಿಸಲಾಗಿದೆ.

ಪರಿಷತ್ತಿನ (ಆವಳಿ, ಆವಳಿಯ ಸಂತತಿ) ಶಾಖೆ ಉಪಶಾಖೆಗಳ ಕ್ರಮಬದ್ಧ ನಿರೂಪಣೆಯ ಬಗ್ಗೆ ಶಾಸನಗಳಲ್ಲಿ ತುಸು ಮಟ್ಟಿಗೆ ಹೊಂದಾಣಿಕೆ ಇಲ್ಲ. ಕೇದಾರೇಶ್ವರದ 1094 ಹಾಗೂ 1103ರ[3] ಶಾಸನಗಳು ಹಾಗೂ ಅಬ್ಬಲೂರಿನ 1101-4ರ[4] ನಕಲು (Duplicate) ಶಾಸನಗಳು ಶಕ್ತಿಪರ್ಷೆಯ ಪರ್ವತಾವಳಿಯ ಮೂವರ ಕೋಣೆಯ ಸಂತತಿಯನ್ನು ನಿರ್ದೇಶಿಸುತ್ತಿದ್ದರೆ, ಕೇದಾರೇಶ್ವರದ 1113ರ[5] ಶಾಸನವು ಪರ್ವತಾಮ್ನಾಯದ ಮೂವರ ಕೋಣೆಯ ಸಂತಾನದ ಶಕ್ತಿಪರ್ಷೆಯನ್ನು ನಿರ್ದೇಶಿಸುವಂತಿದೆ. ಕೇದಾರೇಶ್ವರ 1129 ಮತ್ತು 1156ರ ಶಾಸನಗಳು[6] ಪರ್ವತಾವಳಿಯ ಮೂವರ ಕೋಣೆಯ ಸಂತತಿಯನ್ನು ಉಲ್ಲೇಖಿಸಿದರೆ ಅಬ್ಬಲೂರಿನ 1144ರ ಹಾಗೂ ಕೇದಾರೇಶ್ವರದ 1164ರ[7] ಶಾಸನಗಳು ಮೂವರ ಕೋಣೆಯ ಸಂತತಿಯನ್ನು ಕುರಿತು ಮಾತ್ರ ಉಲ್ಲೇಖಿಸುತ್ತವೆ. ಕೇದಾರೇಶ್ವರದ 1193ರ[8] ಶಾಸನವು ಪರ್ವತಾವಳಿಯನ್ನಷ್ಟೇ ಉಲ್ಲೇಖಿಸುತ್ತದೆ. ಶಕ್ತಿಪರಿಷತ್ತಿನ ಉಳಿದ ಉಪವಿಭಾಗಗಳು ಬಳಸುವ ಹೆಸರುಗಳೊಂದಿಗೆ ಹೋಲಿಸಿ ಈ ಗೊಂದಲವನ್ನು ಸಹಜವಾಗಿ ಪರಿಹರಿಸಲು ಸಾಧ್ಯ. ಧಾರವಾಡ ಜಿಲ್ಲೆಯ ಹೊಂಬಳದ ಒಂದು ಶಾಸನವು ಪರ್ವತಾವಳಿ ಹಾಗೂ 'ಬೆಳ್ಳೆಯ ಸಂತಾನ ' ಗಳಿಗೆ ಸೇರಿದವರಾದ ಕೆಲವು ಜನ ಯತಿಗಳನ್ನು ಕೊಂಡಾಡುತ್ತದೆ.[9] ಶಿವಮೊಗ್ಗ ಜಿಲ್ಲೆಯ ಗೊಗ್ಗ ಎಂಬಲ್ಲಿಯ ಶಾಸನಗಳು ಪರ್ವತಾವಳಿಯ 'ಶಕ್ತಿ ಪರಿಧಿ' ಹಾಗೂ 'ಅ...... ಕ ಸಂತತಿ'ಯ ಯತಿಗಳನ್ನು ಕುರಿತು ನಮೂದಿಸುತ್ತವೆ.[10] ಶಿವಮೊಗ್ಗ ಜಿಲ್ಲೆಯ ಮತ್ತಿಕೋಟೆಯ ಒಂದು ಶಾಸನ 'ಇಟ್ಟಿಗೆ ಸಂತತಿ'ಯ 'ಭುಜಂಗಾವಲಿ'ಯ ಶಕ್ತಿಪರ್ಷೆಯ ಯತಿಗಳನ್ನು ಸ್ತುತಿಸುತ್ತದೆ.[11] ಇವೆಲ್ಲ ಪದಗಳನ್ನು ಕ್ರಮಬದ್ಧವಾಗಿ ಜೋಡಿಸಿದರೆ ನಿರ್ದಿಷ್ಟ ಒಂದು ರೂಢಿಗತ ಕ್ರಮ ಸಾಧ್ಯವಾಗುತ್ತದೆ. ಅದೆಂದರೆ, 'ಪರಿಷತ್ತು' 'ಆವಳಿ' 'ಸಂತತಿ' ಎಂಬುದು.

ಇವೆಲ್ಲ ಬಗೆಬಗೆಯ ಪದಗಳು ಕೆಲವು ಸೈದ್ಧಾಂತಿಕ ವ್ಯತ್ಯಾಸಗಳನ್ನು ಒಳಗೊಂಡಿರಬಹುದಾದರೂ ಅವು ಈ ಸಂಸ್ಥೆಯ ಶಾಖೆಗಳನ್ನು ಸ್ಪಷ್ಟವಾಗಿ ನಿರ್ದೇಶಿಸುತ್ತವೆ. ಇವುಗಳಲ್ಲಿ ಕೆಲವು ಪದಗಳು ಶಾಸನಗಳ ಭಾಷೆಯಾಗಿರುವ ಕನ್ನಡದಿಂದ ಹುಟ್ಟಿಬಂದಿದ್ದು ಉಳಿದವು ಸಂಸ್ಕೃತದಿಂದ ಹುಟ್ಟಿಬಂದವುಗಳಾಗಿವೆ 'ಪರ್ಷೆ' ಎಂಬುದು ಸಂಸ್ಕೃತದ 'ಪರಿಷತ್'

---

3. ಸಂ. ಮತ್ತು ಅನು. ರೈಸ್, Ec, VII, Sk.94 ಮತ್ತು 98.
4. ಸಂ. ಮತ್ತು ಅನು. ಫ್ಲೀಟ್. EI, V. Nos. A and B.
5. ಸಂ. ಮತ್ತು ಅನು. ರೈಸ್, EC. VII, Sk 99.
6. ಅದೇ. Sk. 100 ಮತ್ತು 104.
7. ಸಂ. ಮತ್ತು ಅನು. ಫ್ಲೀಟ್, EI, V. No. C and ರೈಸ್, EC, VII, SK. 108 ಅನುಕ್ರಮವಾಗಿ.
8. ಸಂ. ಮತ್ತು ಅನು. ರೈಸ್, EC, VII, Sk. 105.
9. ಸಂ. ಪಿ. ಬಿ. ದೇಸಾಯಿ SII, XV, no. 73.
10. ಸಂ. ಮತ್ತು ಅನು. ರೈಸ್, EC, VII, Sk, 316.
11. ಸಂ. ಮತ್ತು ಅನು. ರೈಸ್, EC, VII, Sk. 292.

(ಗುಂಪು, ಸಭೆ, ಮಂಡಲಿ) ಪದದ ಕನ್ನಡ ರೂಪ. 'ಆವಳಿ' (ಸಾಲು, ಶ್ರೇಣಿ, ರಾಜವಂಶ), 'ಆಮ್ನಾಯ' (ಪವಿತ್ರವಾದ ಸಂಪ್ರದಾಯ ಅಥವಾ ಗ್ರಂಥ ಪಾಠಗಳು, ಬೋಧನೆ) ಹಾಗೂ ಸಂತತಿ ಅಥವಾ ಸಂತಾನ (ಮುಂದುವರಿಕೆ, ಪೀಳಿಗೆ, ವಂಶಕ್ರಮ) ಇವು ನೇರವಾಗಿ ಸಂಸ್ಕೃತ ಪದಗಳಾಗಿದ್ದರೂ ಅವುಗಳ ಬಳಕೆಯು ತೀರ ಅಪರೂಪದ್ದು. ಶಕ್ತಿಪರಿಷತ್ತನ್ನು ಹೆಣ್ಣು ದೇವತೆಗಳ ಒಂದು ಗುಂಪು ಎಂದೂ ಪರ್ವತಾವಳಿಯನ್ನು ಪರ್ವತಗಳ ಶ್ರೇಣಿ ಎಂದೂ ನಾವು ಅನುವಾದಿಸಬಹುದು. ಈ ಎರಡನೆಯ ಪದವು ಬಹುಮಟ್ಟಿಗೆ ಕರ್ನೂಲ ಜಿಲ್ಲೆಯ ಪವಿತ್ರವಾದ ಸ್ಥಳ ಶ್ರೀಪರ್ವತ ಅಥವಾ ಶ್ರೀಶೈಲವನ್ನು ನಿರ್ದೇಶಿಸುತ್ತದೆ. 1090ರಲ್ಲಿ[12] ಪರ್ವತಾವಳಿಯ ರಾಮೇಶ್ವರ ಎಂಬ ಒಬ್ಬ ಯತಿಯು ಈ ಸ್ಥಳದಲ್ಲಿದ್ದ ಮಲ್ಲಿಕಾರ್ಜುನ ಶಿಲಾಮಠದ ಅಧಿಪತ್ಯವನ್ನು ನೆಡಸುತ್ತಿದ್ದನು. ಶ್ರೀಪರ್ವತವು ಕಾಳಾಮುಖರ ಒಂದು ಮಹತ್ವದ ತೀರ್ಥಕ್ಷೇತ್ರವಾಗಿದ್ದು ಶಾಸನಗಳಲ್ಲಿ ಇದನ್ನು ಕುರಿತು ಮತ್ತೆ ಮತ್ತೆ ಉಲ್ಲೇಖಿಸಿರುವುದು ಕಂಡು ಬರುತ್ತದೆ. 'ಪರ್ವತ' ಪದವು ಹಿಮಾಲಯದ ಪವಿತ್ರ ಕೇದಾರನಾಥ ಪರ್ವತವನ್ನು ಸೂಚಿಸುತ್ತಿದ್ದು, ಅದನ್ನು ಬಳ್ಳಿಗಾವೆಯಲ್ಲಿ ದೇವಾಲಯದ ಹೆಸರಿನಿಂದ ಅಥವಾ ಪರ್ವತದ ಸಂತಾನಳಾದ ಪಾರ್ವತಿಯ ಹೆಸರಿನಿಂದ ನೆನಪಿನಲ್ಲಿ ಉಳಿಯುವಂತೆ ಮಾಡಿರಲು ಸಾಕು. ಭುಜಂಗಾವಳಿ ಅಥವಾ ಸರ್ಪಸಂತತಿಯು ಶಿವ ಹಾಗೂ ನಾಗರ ಹಾವಿನ ಸಂಪರ್ಕವನ್ನು ಕುರಿತಾದ ಅಪ್ರತ್ಯಕ್ಷವಾದ ಸೂಚನೆ ಆಗಿರುವಂತಿದೆ. ಕನ್ನಡದ 'ಮೂವರ ಕೋಣೆಯ ' ಎಂಬುದು ಅರ್ಥವಾಗದ ಪದ ಜೆ. ಎಫ್. ಫ್ಲೀಟ್ ಇವರು (EI. V. 219) ಹೀಗೆ ಟಿಪ್ಪಣಿಸುತ್ತಾರೆ.

> 'ಮೂವರ' ಪದವನ್ನು 'ಮೂ = ಮುದು, 'ಮುಪ್ಪಿನ ವಯಸ್ಸು' ಎಂಬುದಕ್ಕೆ ಜೋಡಿಸಲು ಸಾಧ್ಯವಿಲ್ಲದಿದ್ದರೆ ಅದು 'ಮೂವರು' ಅಂದರೆ 'ಮೂರು ಜನ' ಎಂಬ ಪದದ ಷಷ್ಠೀ ವಿಭಕ್ತಿ ಎನ್ನಿಸುತ್ತದೆ. ' ಕೋಣೆಯ ' ಎಂಬುದು 'ಕೋಣೆ' ಪದದ ಷಷ್ಠೀ ವಿಭಕ್ತಿಯ ಪದವಾಗಿದ್ದು ನಿಘಂಟಿನಲ್ಲಿ ಇದರ ಅರ್ಥ 'ಬಿಂದಿಗೆ' (Pitcher), ಮನೆಯ ಒಳಭಾಗ, ಇಲ್ಲವೆ ಗೂಡು, ಕೊಠಡಿ' ಎಂದಾಗಿದೆ.

'ಬೆಳ್ಳೆಯ' ಎಂಬುದು ಕನ್ನಡದ 'ಬೆಳ್ಳಿ' ಪದದ ಷಷ್ಠೀ ವಿಭಕ್ತಿಯಾಗಿದ್ದು 'ಇಟ್ಟಿಗೆ' ಯು ಕನ್ನಡದಲ್ಲಿ ಈಗಲೂ ಬಳಕೆಯಲ್ಲಿರುವ ಪದ. ಇದು ಸಂಸ್ಕೃತದ 'ಇಷ್ಟಕಾ' ಅಥವಾ 'ಇಷ್ಟಿಕಾ' ದಿಂದ ಹುಟ್ಟಿರುವ ಸಾಧ್ಯತೆಯಿದೆ.

---

12. ನೋಡಿ, ಶಾಸನಗಳನ್ನು, ಸಂ. ಮತ್ತು ಅನು. ಪಿ. ಶ್ರೀನಿವಾಚಾರರಿಂದ, HAS. XIII, Part II, no.7. ಶ್ರೀನಿವಾಸಾಚಾರರು 'ಅಪ್ಪಪರ್ವತಾವಳಿಯ ರಾಮೇಶ್ವರ ಪಂಡಿತರ್ಗೆ' ಎನ್ನುವುದನ್ನು ತಪ್ಪಾಗಿ 'ಅಪ್ಪಪರ್ವತ್ತ=ಅಳಿಯ ರಾಮೇಶ್ವರ ಪಂಡಿತರ್ಗೆ' ಎಂದು ಓದುತ್ತಾರೆ. ಎನ್. ವೆಂಕಟ ರಾಮನಯ್ಯ ಅವರು ಜಿ. ಯಾಝ್ದಾನಿ (ಸಂ.), 'The Early History of the Deccan', II, 705ದಲ್ಲಿ ಈ ತಪ್ಪನ್ನು ತಿದ್ದಿದರು.

## ಪರ್ವತಾವಳಿಯ ಮೂವರ ಕೋಣೆಯ ಸಂತತಿ

ಪರ್ವತಾವಳಿಯ 'ಮೂವರ ಕೋಣೆಯ ಸಂತತಿ'ಯ ಮುಖ್ಯಕೇಂದ್ರ ಬಳ್ಳಿಗಾವೆಯಲ್ಲಿದ್ದರೂ ಅದರ ನಿಯಂತ್ರಣವು ಹೆಚ್ಚಿನದಾಗಿ ಸುತ್ತಲ ಐದು ಸ್ಥಾನಗಳಿಗೂ ವಿಸ್ತರಿಸಿತ್ತು. ಈ ಸ್ಥಾನಗಳೆಂದರೆ ಅಬ್ಬಲೂರಿನ ಬ್ರಹ್ಮೇಶ್ವರ ದೇವಾಲಯ, ಹಳೆನಿಡಸನೇಗಿಲದ ಮಲ್ಲಿಕಾರ್ಜುನ ದೇವಾಲಯ, ಗದುಗಿನ ತ್ರಿಕೂಟೇಶ್ವರ ದೇವಾಲಯ ಹಾಗೂ ಸೂಡಿಯ ನಗರೇಶ್ವರ ದೇವಾಲಯ. ಇವೆಲ್ಲವು ಧಾರವಾಡ ಜಿಲ್ಲೆಯವು. ಇದಲ್ಲದೆ ಶಿವಮೊಗ್ಗ ಜಿಲ್ಲೆಯ ಕುಪ್ಪಟೂರ ಹತ್ತಿರದ ದೇವಸ್ಥಾನ, ಹಕ್ಕಲಿನ ಕೋಟೀಶ್ವರ ದೇವಾಲಯ. ಆದರೆ ಕೊನೆಯವೆರಡು ದೇವಾಲಯಗಳು ಈ ಪರಂಪರೆಗೆ ಸೇರಿದವುಗಳು, ಎಂದು ಖಚಿತವಾಗಿ ಹೇಳುವಂತಿಲ್ಲ. ಬಳ್ಳಿಗಾವೆಯ ಕೇದಾರೇಶ್ವರ ದೇವಾಲಯದ ಎಲ್ಲಕ್ಕೂ ಹಳೆಯ ಶಾಸನವು ಕ್ರಿ.ಶ. 1078ರದ್ದೆಂದು[13] ರೈಸ್ ತೀರ್ಮಾನಿಸಿದ್ದಾರೆ. ಇದು ಕೇದಾರಶಕ್ತಿ ಮುನಿಪತಿಯ ತರುವಾಯ ಎರಡನೆಯವನಾದ ವಾಲ್ಮೀಕಿಮುನಿ ಎಂಬ ಯತಿಗೆ ನೀಡಲಾದ ದತ್ತಿಯಾಗಿದೆ. ಕೇದಾರಶಕ್ತಿಯ ತರುವಾಯ ಎರಡನೆಯವನಾದ ಇನ್ನೊಬ್ಬ ಯತಿಯೆಂದರೆ ಸೋಮೇಶ್ವರ ಪಂಡಿತದೇವ. ಇವನು ನಾಲ್ಕು ದತ್ತಿಗಳನ್ನು ಪಡೆದಿದ್ದನು. ಅವುಗಳಲ್ಲಿ ಮೂರು ಕ್ರಿ.ಶ.1094, 1103 ಮತ್ತು 1113ರಲ್ಲಿ ಕೇದಾರೇಶ್ವರ ದೇವಾಲಯದಿಂದ, ಒಂದು ಅಬ್ಬಲೂರಿನಿಂದ 1101 ರಲ್ಲಿ ಪಡೆದವು.[14] ಒಬ್ಬೊಬ್ಬ ಯತಿಗೆ ತಲಾ ಇಪ್ಪತ್ತೈದು ವರ್ಷಗಳಂತೆ ಕಳೆಯುತ್ತ ಹೋದರೆ ಕೇದಾರಶಕ್ತಿಯು 1025 ರಿಂದ 1050ರ ಕಾಲಾವಧಿಯಲ್ಲಿ ಮಠಾಧಿಪತಿಯಾಗಿದ್ದರಲು ಸಾಕು. ಬಳ್ಳಿಗಾವೆ -ಅಬ್ಬಲೂರಿನ ಸೋಮೇಶ್ವರನು 1060ರಷ್ಟು[15] ಹಿಂದೆಯೇ ಸೂಡಿಯಲ್ಲಿ ಬೋಧಿಸುತ್ತಿದ್ದ ಅದೇ ಹೆಸರಿನ ಯತಿಯೇ ಆಗಿದ್ದರೆ ಕೇದಾರಶಕ್ತಿಯನ್ನು ಒಂದಿಷ್ಟು ಹಿಂದೆ ಸರಿಸಬಹುದು. ಕೇದಾರಶಕ್ತಿ ಎಂಬ ಹೆಸರು ಅವನು ಕೇದಾರೇಶ್ವರನ ದೇವಾಲಯ ಮತ್ತು ಮಠವನ್ನು ಸ್ಥಾಪಿಸಿದವನೆಂಬುದನ್ನು ಸೂಚಿಸುತ್ತದೆ. ಈ ಯತಿ ಪರಂಪರೆಯನ್ನು ಕುರಿತು ಇತ್ತೀಚೆಗೆ ದೇವಾಲಯದಲ್ಲಿ ದೊರೆತ ಎಲ್ಲಕ್ಕೂ ಅರ್ವಾಚೀನ ಶಾಸನ 1215ರದು.[16] ಆದರೆ

---

13. ಸಂ. ಮತ್ತು ಅನುವಾದ EC, VII, Sk. 107.
14. ಅದೇ, Sk. 94, 98,99 ಮತ್ತು ಫ್ಲೀಟ್, EI, V, no. A-B ಅನುಕ್ರಮವಾಗಿ.
15. ನೋಡಿ ಎಲ್. ಡಿ. ಬಾರ್ನೆಟ್ಟ್, 'Inscriptions of Sūdi,' EI, XV (1919-20). 73-112 (No. F). ಎ. ಬಿ. ಸುಬ್ಬಯ್ಯ (QJMS. VII, 184) ಅವರು, ಕ್ರಿ. ಶ. 1054 ರಲ್ಲೂ ಕೂಡ ಕೇದಾರೇಶ್ವರ ದೇವಾಲಯ ಅಸ್ತಿತ್ವದಲ್ಲಿ ಇರಲಿಲ್ಲವೆಂದು ಸಾಧಿಸುತ್ತಾರೆ. ಅವರ ಈ ಹೇಳಿಕೆಯು ಅದೇ ವರ್ಷದ ತೇದಿಯನ್ನು ಹೊಂದಿದ ಶಾಸನದಲ್ಲಿ ಪಟ್ಟಿ ಮಾಡಲಾದ ಬಳ್ಳಿಗಾವೆಯ ಉಳಿದೆಲ್ಲ ದೇವಾಲಯಗಳಲ್ಲಿ ಕೇದಾರೇಶ್ವರ ದೇವಾಲಯ ಇಲ್ಲದಿರುವುದನ್ನು (ಸಂ. ಮತ್ತು ಅನು. ರೈಸ್, EC, VII, Sk. 118) ಆಧಾರಿಸಿದ್ದಾಗಿದೆ. ಈ ಪಟ್ಟಿಯಿರುವ ಶಾಸನದ ಭಾಗವು ಸುಮಾರು ಒಂದು ನೂರು ವರ್ಷದ ತರುವಾಯದಲ್ಲಿ ತಯಾರಿಸಿದುದಾಗಿ ಕಾಣುತ್ತದೆ.
16. ಸಂ. ಅನು. ರೈಸ್. EC VII, Sk. 95.

ಇದಕ್ಕೆ ಭಿನ್ನವಾದ ಗದುಗಿನ ಶಾಖೆಯ ಪರಂಪರೆಯು 1225ರ ಮಿತಿಯನ್ನು ದಾಖಲಿಸುತ್ತದೆ.[17] ನಾವು ದೇವಸ್ಥಾನದ ಹಕ್ಕಲು ಗ್ರಾಮಕ್ಕೆ ಸಂಬಂಧಿಸಿದುದನ್ನು ಬೇರೊಂದು ಶಾಖೆ, ಬೇರೊಂದು ಪರಂಪರೆ ಎಂದು ಗುರುತಿಸಬಹುದಾದರೆ ಈ ಕಾಲಾವಧಿಯನ್ನು ಸೇವುಣರ ರಾಮಚಂದ್ರರಾಯನ ಹನ್ನೆರಡನೆಯ ವರ್ಷದವರೆಗೆ ಅಥವಾ 1280ರವರೆಗೆ[18] ವಿಸ್ತರಿಸಬಹುದಾಗಿದೆ. ಕಾಳಾಮುಖರನ್ನು ಕುರಿತಾದ ಶಾಸನಗಳಲ್ಲೇ ತೀರ ಇತ್ತೀಚಿನದೆನ್ನಬಹುದಾದವುಗಳಲ್ಲಿ ಇದೊಂದು 'ಮೂವರ ಕೋಣೆಯ ಸಂತತಿ'ಯ ಹೆಚ್ಚಿನ ಶಾಸನಗಳೆಲ್ಲ ಹನ್ನೆರಡನೆಯ ಶತಮಾನದ ಉತ್ತರಾರ್ಧದವು. ಈ ಯತಿ ಪರಂಪರೆಯನ್ನು ಹೀಗೆ ನಿರೂಪಿಸಬಹುದು :

ಬಳ್ಳಿಗಾವೆ ದೇವಾಲಯದ ಮುಖ್ಯ ದೇವತೆಯ ಪೂರ್ಣ ಹೆಸರು ದಕ್ಷಿಣ ಕೇದಾರೇಶ್ವರ, ಅಂದರೆ ದಕ್ಷಿಣದ ಕೇದಾರದ ದೇವರು ಎಂದು. ಇದು ಹಿಮಾಲಯದಲ್ಲಿರುವ ಪವಿತ್ರ ಕೇದಾರ ಪರ್ವತದ ದೇವನಾದ ಉತ್ತರ ಕೇದಾರೇಶ್ವರನೊಡನೆಯ ಸಂಬಂಧವನ್ನು ತೋರ್ಪಡಿಸುತ್ತದೆ. ಬಳ್ಳಿಗಾವೆಯ ದೇವಾಲಯವನ್ನು ಈ ಪಟ್ಟಣದ ದಕ್ಷಿಣ ಭಾಗದಲ್ಲಿರುವ 'ತಾವರೆಗೆರೆ' ಅಥವಾ 'ತಾವರೆಯ ಕೆರೆ' ಅಂದರೆ ಕಮಲ ಹೂವುಗಳ ಕೆರೆಯ ದಡದ ಮೇಲೆ ಕಟ್ಟಲಾಗಿತ್ತು.[19] ಈ ದೇವಾಲಯದ ಯತಿಗಳು ಇದೇ ಸ್ಥಳದಲ್ಲಿದ್ದ ನಖರೇಶ್ವರ ಅಥವಾ ನಗರೇಶ್ವರ ದೇವರಿಗಾಗಿ ಮೀಸಲಾದ ಇನ್ನೊಂದು ದೇವಾಲಯ ಅಥವಾ ಮಠವನ್ನು ನಿಯಂತ್ರಿಸುತ್ತಿದ್ದರು.[20] ಕ್ರಿ.ಶ.1139ರಲ್ಲಿ ಶಿಲ್ಪಿಗಳಿಬ್ಬರು ಮೂರನೆಯ ದೇವಾಲಯವನ್ನು ಇದೇ ಸ್ಥಳದಲ್ಲಿ ಕಟ್ಟಿ, ಕುಸುವೇಶ್ವರ ದೇವರನ್ನು ಅದರಲ್ಲಿ ಪ್ರತಿಷ್ಠಾಪಿಸಿ...... ದೇವರ ದೇವಾಲಯವನ್ನು ಕೇದಾರೇಶ್ವರ ದೇವರಿಗೆ ಪ್ರತಿಬದ್ಧಗೊಳಿಸಿದರು.[21]

ಇಸವಿ 1078ರ ಶಾಸನವು ಈ ಕೆಳಕಂಡ ಯತಿ ಪರಂಪರೆಯನ್ನು ಒಳಗೊಂಡಿದೆ :

> ಮೂವರ ಕೋಣೆಯ ಸಂತತಿಯು (ಪರ್ವತಾವಳಿಯದು ?) ವಿಶ್ವವಿಖ್ಯಾತವಾದ ಶಕ್ತಿಪರ್ಷೆಯಲ್ಲಿ ಕೇದಾರಶಕ್ತಿ ಮುನಿಪತಿಯು ಬೆಳಗುತ್ತಿದ್ದನು. ಲಾಕುಳ ಸಮಯಕ್ಕೆ ಆಭರಣವೆನ್ನಿಸಿದ ಅವನ ಶಿಷ್ಯನೆಂದರೆ ರುದ್ರಾಭರಣ. ಅವನ ಶಿಷ್ಯ ವಾಲ್ಮೀಕಿಮುನಿಯು.[22]

---

17. ಸಂ. ದೇಸಾಯಿ. SII, XV no. 609.
18. ಸಂ. ಮತ್ತು ಅನು. ರೈಸ್, EC, VIII, Sb. 275.
19. ಫ್ಲೀಟ್, EI, V. 221.
20. ಅದೇ.
21. ಸಂ. ಮತ್ತು ಅನು. ರೈಸ್, EC, VII, Sk. 112.
22. ಅದೇ., Sk. 107.

# ಶಕ್ತಿಪರಿಷತ್ತಿನ ಕಾಳಾಮುಖರು

- **ಕೇದಾರಶಕ್ತಿ - ಮುನಿಪತಿ**
  - **ರುದ್ರಾಭರಣ**
    - **ವಾಲ್ಮೀಕಿ ಮುನಿ** (ಇಸವಿ 1078)
  - **ಶ್ರೀಕಂಠ-ಪಂಡಿತ I**
    - **ಸೋಮೇಶ್ವರ-ಪಂಡಿತದೇವ** (1094, 1103, 1113) (1101-4 ಅಬ್ಬಲೂರು)
      - **ವಿದ್ಯಾಭರಣ** (1129)
        - **ವಾಮಶಕ್ತಿ ಮುನೀಶ್ವರ I** (ಅದೇ. 1129)
        - **ಗೌತಮ ಮುನಿ** (ಅದೇ. 1129, 1139, 1149)
          - **ವಾಮಶಕ್ತಿ ಪಂಡಿತದೇವ II** (1156, 1159, ಇಸವಿ 1160, 1162 1164, 1168, 1171, ? 1181, 1181, 1193) (1165 ಹಳೆಯ ನಿಡುನೇಗಿಲ)
            - **ಜ್ಞಾನ ಶಕ್ತಿ ದೇವ II** ( ? 1181)
              - **ಶ್ರೀಕಂಠ ದೇವ II**
                - **ವಾಮಶಕ್ತಿ ದೇವ III** (1215)
        - **ಜ್ಞಾನಶಕ್ತಿ I** (1130, 1144, ಅಬ್ಬಲೂರು)
        - **ಚಂದ್ರಭೂಷಣ ಪಂಡಿತ ದೇವ** (1191, 1192, 1199,ಗದಗ)
          - **ಕ್ರಿಯಾಶಕ್ತಿ ಪಂಡಿತ** (1213, 1225, ಗದಗ)

ಈ ಶಾಸನದ ಉಳಿದ ಭಾಗವು ಭಗ್ನಗೊಂಡಿದೆ. ಇದು ಕೇದಾರೇಶ್ವರ ದೇವಾಲಯಕ್ಕೆ ನೀಡಿರಬಹುದಾದ ಕಾಣಿಕೆಯನ್ನು ಕುರಿತು ಉಲ್ಲೇಖಿಸುತ್ತದೆ. ವಾಲ್ಮೀಕಿಮುನಿಯೊಂದಿಗೆ ಈ ಯತಿಪರಂಪರೆ ಮುಕ್ತಾಯಗೊಂಡಂತೆ ಕಾಣುತ್ತದೆ. ಏಕೆಂದರೆ, ಈ ಶಾಸನದಲ್ಲಿ ಅವನನ್ನು ಹಾಗೂ ಅವನ ಮೊದಲಿಗನಾದ ರುದ್ರಾಭರಣನನ್ನು ಮಾತ್ರ ನಮೂದಿಸಲಾಗಿದೆ. ಲಾಕುಲಸಿದ್ಧಾಂತವಾದ 'ಲಾಕುಲ ಸಮಯ' ಎಂಬ ಪದ ಹಾಗೂ ಈ ಶೈವಯತಿಯನ್ನು ಕುರಿತಾದ ಇತರ ಉಲ್ಲೇಖಗಳು ಕಾಳಾಮುಖ ಶಾಸನಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ಹೀಗಾಗಿ ಈ ಮುಂದೆ ಅವುಗಳನ್ನು ಕುರಿತು ಚರ್ಚಿಸಲಾಗುವುದು.

ಕೇದಾರೇಶ್ವರ ದೇವಾಲಯದ ಪ್ರಮುಖ ಯತಿವರ್ಗವು ಕೇದಾರಶಕ್ತಿಯಿಂದ ಆರಂಭವಾಗಿ ಶ್ರೀಕಂಠಪಂಡಿತನ ಮೂಲಕ ಸೋಮೇಶ್ವರ ಪಂಡಿತ ದೇವನ ಕಡೆಗೆ ಮುಂದುವರೆಯಿತು. ಕೆಲವು ಚಿಕ್ಕಪುಟ್ಟ ವ್ಯತ್ಯಾಸಗಳನ್ನು ಕಡೆಗಣಿಸಿದರೆ, (ಚಾಲುಕ್ಯರ) ಸೋಮೇಶ್ವರನ ಆಳ್ವಿಕೆಯ ಕಾಲಕ್ಕೆ ಬರೆಯಲಾದ ನಾಲ್ಕು ದತ್ತಿಗಳು ಕೇದಾರಶಕ್ತಿಯನ್ನು ಹೀಗೆ ಬಣ್ಣಿಸುತ್ತವೆ :

> ಶಕ್ತಿ ಪರ್ಷೆಯೆಂಬ ಲೋಕದಲ್ಲಿ ಅಗ್ರಮಾನ್ಯವೆಂದು (ನಿಸ್ಸಂಶಯವಾಗಿಯೂ) ಗೌರವಿಸಲಾದ ಪರ್ವತಾವಳಿ ಎಂಬ ಪರಂಪರೆಯ ಮೂವರ ಕೋಣೆಯ ಸಂತತಿ ಎಂಬ ಸಂಪ್ರದಾಯಕ್ಕೆ ಆಭರಣನೆನ್ನಿಸಿದ ಕೇದಾರಶಕ್ತಿ ಎಂಬ ಮಹತ್ವದ ಯತಿಯು ಹೆಸರುವಾಸಿಯಾದನು.[23]

ಕ್ರಿ.ಶ. 1113ರ ದತ್ತಿಯು ಮಹತ್ವದ ಒಂದು ಮಾಹಿತಿಯನ್ನು ಹೀಗೆ ನೀಡುತ್ತದೆ: ಈ ಯತಿ ಹಾಗೂ ಅವನ ಶಿಷ್ಯಂದಿರು '........ ಶಿಷ್ಯರೆಂಬ ಚಾತಕಪಕ್ಷಿಗಳಿಗೆ ಮಳೆಗಾಲದಂತಿರುವ ಕಾಳಾಮುಖರಲ್ಲಿ' ಪರಿಗಣಿತವಾಗಿದ್ದರು.[24] ಗದುಗಿನ 1192ರ ಶಾಸನದಲ್ಲಿ ಸೋಮೇಶ್ವರನನ್ನು 'ಕಾಳಾಮುಖಾಚಾರ್ಯ'ನೆಂದು ಕರೆಯಲಾಗಿದ್ದು, ಅವನ ಶಿಷ್ಯನ ಶಿಷ್ಯನಾದ ಚಂದ್ರಭೂಷಣನನ್ನು 'ಕಾಳಾಮುಖ ಆಚಾರ್ಯ ಪರಂಪರೆಯಿಂದ ಪುಟಿದೆದ್ದು ಬಂದವ'ನೆಂದು ಹೇಳಲಾಗಿದೆ.[25] ಇದರ ಹಾಗೂ ಕಾಳಾಮುಖ ಸಂಪ್ರದಾಯಗಳ ನಡುವಿನ ನಂಟುಗಳನ್ನು ಶಕ್ತಿಪರಿಷತ್ತಿನ ಬೇರೆ ಶಾಖೆಯ ಹಲವಾರು ಶಾಸನಗಳು ಯಾವುದೇ ಬಗೆಯ ಸಂದೇಹಕ್ಕೆ ಎಡೆಯಿಲ್ಲದಂತೆ ಸ್ಥಾಪಿಸುತ್ತವೆ.

ಕನ್ನಡದ ಶಾಸನಗಳಲ್ಲಿ ಯತಿಗಳ ಈ ಮಠವನ್ನು (ಸಂನ್ಯಾಸಿ ವಸತಿ ವಿದ್ಯಾಲಯ)

---

23. ಸಂ. ಮತ್ತು ಅನು. ಫ್ಲೀಟ್, EI, V, 219.
24. ಅದೇ, 221.
25. ಸಂ. H. Lüders, 'Gadag Inscription of Vir-Ballala', II, EI, VI (1900), 96-97.

' ಕೋಡಿಯ ಮಠ ' ಎಂದು ಕರೆಯಲಾಗಿದ್ದು, 1215ರ[26] ಒಂದು ಸಂಸ್ಕೃತ ಶಾಸನದಲ್ಲಿ ಇದನ್ನು 'ಕೋಟಿಮಠ'ಎಂದು ಕರೆಯಲಾಗಿದೆ. ಇದನ್ನು 'ಕೇದಾರಮಠ ' ಹಾಗೂ 'ಕೇದಾರಸ್ಥಾನ' ಎಂದೂ ಉಲ್ಲೇಖಿಸಲಾಗಿದೆ. ಹೆರ್ಗಡೆ ವೆಣ್ಣಮರಸನಿಂದ ಈ ಮಠದ ಸ್ಥಾಪನೆಯಾಯಿತೆಂದು ಫ್ಲೀಟ್ ಇವರು 1159ರ ಶಾಸನವನ್ನಾಧಾರಿಸಿ ಸೂಚಿಸಿರುವರು.[27] ಆದರೆ, ಅವರು 'ಹೆರ್ಗಡೆ ವೆಣ್ಣಮರಸನ ಕೋಡಿಯ ಮಠ' ಎಂದು ಅನುವಾದಿಸಿದ ಪಠ್ಯಭಾಗವು ಅಸ್ಪಷ್ಟವಾಗಿದೆ. ವಾಸ್ತವದಲ್ಲಿ ರೈಸ್ ಅವರು ಈ ವೆಣ್ಣಮರಸನನ್ನು ಬಳ್ಳಿಗಾವೆಯ ತ್ರಿಪುರಾಂತಕ ದೇವಾಲಯದೊಂದಿಗೆ ಜೋಡಿಸುವುರೇ ಹೊರತು ಕೋಡಿಯ ಮಠದೊಂದಿಗಲ್ಲ. [28] ಮಠಕ್ಕೆ ಆ ಹೆಸರನ್ನು ಕೊಡಲು ಕಾರಣವೆಂದರೆ, 'ಅದು ತಾವರಗೆರೆಯ ಕೋಡಿಯ, ಅಂದರೆ ಕೆರೆಯ ಹೆಚ್ಚಿನ ನೀರು ಹರಿದು ಹೋಗಲೆಂದು ತಯಾರಿಸಿದ ಜಾಗೆಗೆ ಹತ್ತಿರದಲ್ಲಿ ಇದ್ದ ಕಾರಣ' ಎನ್ನುವ ಫ್ಲೀಟರ ಸಲಹೆ ತೋರಿಕೆಗೆ ಮಾತ್ರ ಸರಿ ಕಾಣುವಂಥದು.[29]

ಕೇದಾರೇಶ್ವರ ದೇವಾಲಯ ಹಾಗೂ ಮಠವನ್ನು ಕುರಿತಾದ ಹಲವು ವಿವರಗಳಲ್ಲಿ ಎಲ್ಲಕ್ಕೂ ಹೆಚ್ಚು ಗಮನಾರ್ಹವಾದುದೆಂದರೆ ಕ್ರಿ.ಶ.1162 ರ ಶಾಸನದಲ್ಲಿರುವಂಥದು. ಅದು ಹೀಗಿದೆ :

> ಕೇದಾರ ದೇವನ ದಕ್ಷಿಣ ಬೀಡಾದ ಕೋಡಿಯ ಮಠವೆಂದರೆ,
>
> - ಶಿವಲಿಂಗ ಪೂಜೆಯಿಂದ ನವಿರೆದ್ದ ಮೈಯಂತೆ, ತಲೆಯೆತ್ತಿ ನಿಂತ ಬೆಳೆಗಳಿಂದ ಕಂಗೊಳಿಸುವ ಹೊಲದಂತಹ ತಾಣ,
>
> - ಆಜೀವ ಬ್ರಹ್ಮಚರ್ಯೆಯಿಂದ ಧಾರ್ಮಿಕ ವಿದ್ಯಾರ್ಥಿಗಳಾಗಿ ಬಾಳುವ ಶೈವಯತಿಗಳ ಮತಾಚರಣೆಗಳಿಗಾಗಿ ಇದ್ದ ತಾಣ,
>
> - ನಾಲ್ಕು ವೇದಗಳಾದ 'ಋಕ್, 'ಯಜುಸ್,' 'ಸಾಮ,' ಹಾಗೂ 'ಅಥರ್ವಣ' ಗಳ ಜೊತೆಗೆ ಅವುಗಳ ಉಪವೇದಗಳ ಶಾಂತಿಯುತವಾದ ಅಧ್ಯಯನದ ತಾಣ,
>
> - 'ಕೌಮಾರ', 'ಪಾಣಿನೀಯ,' 'ಶಾಕಟಾಯನ, ' 'ಶಬ್ದಾನುಶಾಸನ' ಹಾಗೂ

---

26. ಸಂ. ಮತ್ತು ಅನು. ರೈಸ್, EC, VII, Sk. 95. ನೋಡಿ ಫ್ಲೀಟ್, EI. V. 221-22.
27. EI, V. 221-22.
28. ಸಂ. ಮತ್ತು ಅನು. ರೈಸ್, EC, VIII, Sk. 123. ಗ್ರಂಥಪಾಠ ಹೀಗಿದೆ: 'ಶ್ರೀ ತ್ರಿಪುರಾಂತಕದ ಆಚಾರ್ಯ ಜ್ಞಾನಶಕ್ತಿ ಪಂಡಿತದೇವ ಮತ್ತಂ ಅಲ್ಲಿಯ ಹೆರ್ಗಡೆ ವೆಣ್ಣಮರಸ ಶ್ರೀ ಕೋಡಿಯ ಮಠದ ಆಚಾರ್ಯ ವಾಮಶಕ್ತಿ ಪಂಡಿತ ದೇವರ ------ '
29. EI, V, 222.

ಬೇರೆ ವ್ಯಾಕರಣ ಗ್ರಂಥಗಳನ್ನು ಕುರಿತು ಭಾಷ್ಯಗಳನ್ನು ರಚಿಸುವ ತಾಣ,

- 'ನ್ಯಾಯ ' ' ವೈಶೇಷಿಕ,' 'ಮೀಮಾಂಸಾ,' 'ಸಾಂಖ್ಯ,' ' ಭೌದ್ಧ', ಮುಂ, ತತ್ವಶಾಸ್ತ್ರದ ಆರು ಪದ್ಧತಿಗಳನ್ನು ಕುರಿತು ಭಾಷ್ಯಗಳನ್ನು ರಚಿಸುವ ತಾಣ,

- ' ಲಾಕುಳ ಸಿದ್ಧಾಂತ' ಹಾಗೂ 'ಪಾತಂಜಲ', ಅಲ್ಲದೆ ಬೇರೆ ಯೋಗಶಾಸ್ತ್ರಗಳಿಗೆ ಭಾಷ್ಯ ರಚಿಸುವ ತಾಣ,

-ಹದಿನೆಂಟು 'ಪುರಾಣ', ನ್ಯಾಯಶಾಸ್ತ್ರ ಹಾಗೂ ಎಲ್ಲ ಕಾವ್ಯರಚನೆ, ನಾಟಕ, ಲಘು ಪ್ರಹಸನಗಳಲ್ಲದೆ ಬೇರೆ ಹಲವು ಬಗೆಯ ವಿದ್ಯೆಗಳ ಅಧ್ಯಯನಕ್ಕಾಗಿ ಇರುವ ತಾಣ,

-ಬಡವರು, ಅಸಹಾಯರು, ಕುಂಟರು, ಕುರುಡರು, ಕಿವುಡರು ಹಾಗೂ ವೃತ್ತಿಪರ ಕಥಾಕಥನಕಾರರು, ಗಾಯಕರು, ಸಂಗೀತಕಾರರರು, ಹಾಡುವ ಕವಿಗಳು, ಆಟಗಾರರು ಮತ್ತು ನಿದ್ರಿಸುವ ತಮ್ಮ ಒಡೆಯರನ್ನು ಸಂಗೀತ ಮತ್ತು ಹಾಡುಗಳಿಂದ ಎಚ್ಚರಿಸುವ ವಿಕಟ ಕವಿಗಳು, ಅಲ್ಲದೆ 'ನಗ್ನ-ಭಗ್ನರು' ಮತ್ತು (' ಜೈನ ಹಾಗೂ ಬೌದ್ಧ') ಭಿಕ್ಷುಗಳು (' ಕ್ಷಪಣಕರು'), 'ಏಕದಂಡಿ' ಮತ್ತು ' ತ್ರಿದಂಡಿ'ಗಳಾದ 'ಬ್ರಾಹ್ಮಣ' ಭಿಕ್ಷುಕರು, ಅಲ್ಲದೆ 'ಹಂಸ' ಮತ್ತು 'ಪರಮಹಂಸ' ಸಂನ್ಯಾಸಿಗಳು, ಮತ್ತು 'ನಾನಾ ದೇಶ ಭಿಕ್ಷುಕ ಜನ' ಕ್ಕೆಲ್ಲ ಯಾವಾಗಲೂ ಅನ್ನ ನೀಡುವ ತಾಣ,

- ಅಸಹಾಯಕರು ಮತ್ತು ರೋಗಿಗಳಿಗೆ ಆಸರೆ ನೀಡಿ, ಚಿಕಿತ್ಸೆಯನ್ನು ಒದಗಿಸುವ ತಾಣ,

- ಪ್ರಾಣ ಮಾತ್ರರಿಗೆಲ್ಲ ಸುರಕ್ಷಿತತೆಯನ್ನು ಒದಗಿಸುವ ತಾಣ.[30]

ಈ ವರ್ಣನೆಯು ದೇವಾಲಯ ಮತ್ತು ಅದರ ಮಠವನ್ನು ವಿವರವಾದ ಮತ್ತು ಸಹಜವಾದ ರೂಪಕ ಹಾಗೂ ಉಪಮೆಗಳಿಂದ ಬಗೆ ಬಗೆಯ ಪುರಾಣ ಸ್ಥಳ ಹಾಗೂ ಪುರಾಣ ಪುರುಷರೊದಿಗೆ ಹೋಲಿಸುತ್ತ ಮುಂದುವರೆಯುತ್ತದೆ. ಇವೇ ರೂಪಕಗಳು, ಉಪಮೆಗಳು 1129 ಹಾಗೂ 1156ರ ಶಾಸನಗಳಲ್ಲೂ ಕಂಡುಬರುತ್ತವೆ.[31] 1129ರ ಶಾಸನವು ಈ ದೇವಾಲಯ ಹಾಗೂ ಹಿಮಾಲಯ ಪರ್ವತದ ಕೇದಾರಗಳನ್ನು ಕುರಿತು ಆಕರ್ಷಕವಾಗಿ ಹೋಲಿಕೆಯನ್ನು ಒಳಗೊಂಡಿದೆ :

30. ಸಂ. ಮತ್ತು ಅನು. ಫ್ಲೀಟ್, ಅದೇ.

31. ಸಂ. ಮತ್ತು ಅನು. ರೈಸ್, EC, Sk. 100 ಮತ್ತು 104.

ದೇವಾಲಯದ ಬಳಿಯ ಸ್ನಾನದ ಪವಿತ್ರ ತೊರೆಗಳ ಪ್ರವಾಹವು ಕೇದಾರದ ಬಳಿಯಿರುವ ಗಂಗೆಯ ಓಟದಂತಿದೆ; ಮುಗಿಲನ್ನು ಭೇದಿಸುವ ಶಿವನ ದೇವಾಲಯದ ಭವ್ಯವಾದ ಗೋಪುರವು ಹಿಮಾಲಯ ಪರ್ವತದ ಕೇದಾರ ಶಿಖರದಂತೆ ಉನ್ನತವಾಗಿ ಎದ್ದು ನಿಂತಿದೆ; ತಪಸ್ಸನ್ನಾಚರಿಸುವ ಇಲ್ಲಿಯ ಪುನೀತರಾದ ಸಂನ್ಯಾಸಿಗಳು ಕೇದಾರದಲ್ಲಿ ಘೋರತಪಸ್ಸನ್ನಾಚರಿಸುವಲ್ಲಿ ತಮ್ಮ ಮನಸ್ಸನ್ನು ಕೇಂದ್ರಿತಗೊಳಿಸಿರುವ ಪುನೀತರಾದ ಸಂನ್ಯಾಸಿಗಳಂಥವರು-

ಈ ರೀತಿಯಾಗಿ ಇದು ಹೊಸ ಕೇದಾರವಾಗಿದ್ದು, ಇದರ ಫಲವತ್ತಾದ ಹೊಲಗಳಲ್ಲಿ ಬೆಳೆದು ನಿಂತ ಪೈರು ಎಂದರೆ ಶಿವಲಿಂಗ ಪೂಜೆಯಿಂದೆದ್ದ ಮೈನವಿರಿನಂತಿದೆ. ಈ ದೇವಾಲಯವೆಂದರೆ ಪರಮೇಶ್ವರನ ವಾಸಸ್ಥಾನ.

ಚಳಿ ಹಾಗೂ ದೂರ (ಕೇದಾರದ) ಯಾತ್ರೆಗೆ ಹೆದರುವವರನ್ನು ಪಾಪಗಳಿಂದ (ಇಲ್ಲಿಯೇ ) ಬಿಡುಗಡೆ ಮಾಡುವವನೂ... ಎಳೆಯ ಚಂದಿರನನ್ನು ಧರಿಸಿದವನೂ ಆಗಿರುವ ಇಲ್ಲಿಯ ಕೇದಾರದೇವನು ತನ್ನನ್ನು ಪೂಜಿಸುವವರ ಬಗೆಗಿರುವ ತನ್ನ ದಯಾಪರತೆಯಿಂದ ನಿಮ್ಮನ್ನು ಕಾಪಾಡಲಿ.

ಯಾಮುನಾಚಾರ್ಯರು ಹಾಗೂ ರಾಮಾನುಜರ ಹೇಳಿಕೆಗಳಿಗಿಂತ ಈ ವರ್ಣನೆಗಳು ಗಣನೀಯವಾಗಿ ಭಿನ್ನವಾದವುಗಳು. ಈ ಕಾಳಾಮುಖರ ಸಿದ್ಧಾಂತ 'ವೇದವಿರೋಧಿ' ಯಾಗಿರಲಿಲ್ಲವೆನ್ನುವುದಂತೂ ಖಂಡಿತ. ಈ ವಿರೋಧವನ್ನು ರಾಮಾನುಜರು ತಮ್ಮ ವೇದಭಾಷ್ಯದ ವಿರೋಧಿಯೆಂದು ಬಗೆಯುತ್ತಿದ್ದರೆ, ಆ ಮಾತು ಬೇರೆ. ಈ ಮಠದಲ್ಲಿ ನಡೆಯುವ ಅಧ್ಯಯನದ ವಿಷಯಗಳ ಪಟ್ಟಿಯು ಸಂಸ್ಕೃತದ ಸಾಂಪ್ರದಾಯಿಕವಾದ ವಿದ್ಯೆಯ ಜೊತೆಗೆ ತುಸು ಕಡಿಮೆ ಸಾಂಪ್ರದಾಯಿಕ ವಿಷಯಗಳೆನ್ನಿಸಿದ 'ಲಾಕುಲ ಸಿದ್ಧಾಂತ' ಹಾಗೂ 'ಪಾತಂಜಲ ಯೋಗಶಾಸ್ತ್ರ'ಗಳನ್ನು ಒಳಗೊಂಡುದಾಗಿದೆ. ದಾನಧರ್ಮಗಳನ್ನು ಪಡೆಯುವವರ ಬಗೆಗಿನ ಔದಾರ್ಯವು ಬೆರಗುಗೊಳಿಸುವಂತಿದ್ದು, ಅದು ಮಠದ ಅಧಿಕಾರಿಗಳ ಭೂತದಯೆ ಹಾಗೂ ಸಹನೆಗಳಿಗೆ ಸಾಕ್ಷಿಯಾಗಿದೆ. ದಾನ ಧರ್ಮಗಳನ್ನು ಪಡೆಯುವ ಬೇರೆ ಬೇರೆ ವರ್ಗದ ಯತಿಗಳ ಪಂಥ-ಉಪಪಂಥಗಳನ್ನು, ಪಂಗಡಗಳನ್ನು ಕರಾರುವಕ್ಕಾಗಿ ತೀರ್ಮಾನಿಸಲು ಆಗದಾದರೂ ಈ ಪಟ್ಟಿಯಲ್ಲಿ ಜೈನರು, ಬೌದ್ಧರು, ಶೈವರು, ವೈಷ್ಣವರಲ್ಲದೆ ಆಜೀವಿಕರೂ ಸೇರ್ಪಡೆ ಹೊಂದಿರುವರು. ಕ್ಷಪಣಕ ಎಂಬ ಪದವು ಸಾಮಾನ್ಯವಾಗಿ ದಿಗಂಬರ ಜೈನ ಸಂನ್ಯಾಸಿಗಳನ್ನು ನಿರ್ದೇಶಿಸುತ್ತದಾದರೂ ಅದು ಕೆಲವೊಮ್ಮೆ ಬೌದ್ಧರಿಗೂ ಅನ್ವಯಿಸುತ್ತದೆ. ಹಂಸ ಹಾಗೂ ಪರಮಹಂಸ ಸಂನ್ಯಾಸಿಗಳು ವೈಷ್ಣವರು ಇಲ್ಲವೆ ಶೈವರಾಗಿರಬಹುದು. ಏಕೆಂದರೆ ಈ ಪದಗಳು ಪಂಗಡ ಇಲ್ಲವೆ ಉಪಪಂಗಡಗಳಿಗಿಂತ ಹೆಚ್ಚು, ಆಧ್ಯಾತ್ಮಿಕ ಸಾಧನೆಗೆ ಸಂಬಂಧಪಟ್ಟವುಗಳು.[32]

32. ನೋಡಿ ಜಿ. ಎಸ್. ಘುರ್ಯೆ, 'Indian Sadhus', pp. 72-78, ಮತ್ತು ಎ. ಎಲ್. ಬಶಮ್, 'History and Doctrines of the Ajivikas,' p. 114.

ಏಕದಂಡಿನ್ ಹಾಗೂ ತ್ರಿದಂಡಿನ್ ಪದಗಳ ಬಗೆಗೆ ಮಾತ್ರ ತುಸು ಗೊಂದಲವಿದೆ. ಮೊದಲಿನವರು ಶೈವರೆಂದೂ, ಎರಡನೆಯವರು ವೈಷ್ಣವರೆಂದೂ ಜಿ. ಎಸ್. ಘುರ್ಯೆ ಅವರು ಬಗೆದರೆ ಎ. ಎಲ್. ಬಶಮ್ ಅವರು ಅದನ್ನು ತಿರುವು ಮುರುವಾಗಿ ಸೂಚಿಸುವಂತಿದೆ.[33] ಕೆ. ಕೆ. ಹಂಡಿಕಿ ಅವರು, ಮೂಲ ಆಕರಗಳೇ ಅಸ್ಪಷ್ಟ ಇಲ್ಲವೆ ಪರಸ್ಪರ ವಿರೋಧದವು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.[34] ಬಶಮ್ ಇನ್ನಷ್ಟು ಮುಂದುವರೆದು ನಗ್ನಭಗ್ನ ಎಂಬ ಸಂಯುಕ್ತ ಪದವು ಧಾರ್ಮಿಕ ಆಚರಣೆಗಳ ಉಗ್ರತೆ ಹಾಗೂ ದೀಕ್ಷೆಗಳಿಂದ ಉಂಟಾದ ಊನತೆಗಳಿಂದ 'ಹೆಳವ ಹಾಗೂ ದಿಗಂಬರ' ಆಜೀವಿಕ ವರ್ಗದ ಸನ್ಯಾಸಿಗಳನ್ನು ಕುರಿತು ಸೂಚಿಸುತ್ತದೆ, ಎಂದು ನಿರ್ದೇಶಿಸುತ್ತಾರೆ.[35]

ಈ ದಕ್ಷಿಣಕೇದಾರ ಹಾಗೂ ಮೂಲ ಹಿಮಾಲಯಗಳ ನಡುವಿನ ಹೋಲಿಕೆಯು ಈ ಯತಿಗಳ ಹಾಗೂ ವಾಯವ್ಯದ ಯತಿಗಳ ನಡುವಣ ಸಂಬಂಧವನ್ನು ತುಸುಮಟ್ಟಿಗೆ ಸೂಚಿಸುತ್ತದೆ. ಮೈಸೂರಿನ ಹಲವು ಜನ ಕಾಳಾಮುಖ ಯತಿಗಳು ಕಾಶ್ಮೀರ ಪಂಡಿತರೆಂಬ ಹೆಸರನ್ನು ಧರಿಸಿದ್ದರು. ಹೀಗಾಗಿ ಈ ಸಂಗತಿಯು ಕಾಳಾಮುಖ ಸಂಪ್ರದಾಯವು ಕಾಶ್ಮೀರದಲ್ಲಿ ಉಗಮ ಹೊಂದಿದುದೆಂದು ಒತ್ತಿ ಹೇಳುವಂತೆ ಎ. ವಿ. ಸುಬ್ಬಯ್ಯನವರನ್ನು ಪ್ರೇರೇಪಿಸಿತು.[36] ಇದು ಎಲ್ಲವನ್ನೂ ಕೊಚ್ಚಿಕೊಂಡು ಒಯ್ಯಬಹುದಾದ ಸಾಮಾನ್ಯೀಕರಣ ಎನ್ನಿಸಬಹುದಾದರೂ, ಇವರಲ್ಲಿಯ ಕೆಲವು ಯತಿಗಳಾದರೂ ಕಾಶ್ಮೀರದಿಂದ ವಲಸೆ ಬಂದವರೆಂಬುದನ್ನು ಸಂದೇಹಕ್ಕೆ ಎಡೆಯಿಲ್ಲದಂತೆ ಸ್ಥಾಪಿಸಬಹುದಾದ ಪುರಾವೆಗಳು ಇತ್ತೀಚೆ ಕೈಗೆ ಬಂದಿವೆ. ಇದನ್ನು ಕುರಿತು ಈ ಮುಂದೆ ಚರ್ಚಿಸಲಾಗುವುದು.

ಕೇದಾರೇಶ್ವರ ಮುಖ್ಯ ಯತಿಪರಂಪರೆಯ ಕೇದಾರಶಕ್ತಿಯ ತರುವಾಯದ ಮುಖ್ಯ ಯತಿಯೆಂದರೆ ಶ್ರೀಕಂಠ. 1094ರ ದತ್ತಿಯಲ್ಲಿ ಅವನನ್ನು " ಕೇದಾರಶಕ್ತಿಯ ಪ್ರಮುಖ ಶಿಷ್ಯ.... ಇಹಲೋಕದ ಲಾಕುಲೀಶನಾಗಿ ಸರ್ವಜ್ಞನಂತೆ ಹೊಳೆಯುತ್ತಿದ್ದವನು, ಎಂದು ಹೇಳುವುದಕ್ಕಿಂತ ಹೆಚ್ಚಿಗೆ ಇನ್ನೇನು ಹೇಳಲು ಸಾಧ್ಯ?"[37] ಎಂದು ವರ್ಣಿಸಲಾಗಿದೆ. ಕೇದಾರೇಶ್ವರದ 1103ರ ದತ್ತಿ ಶಾಸನ ಮತ್ತು ಅಬ್ಬಲೂರಿನ ಬ್ರಹ್ಮೇಶ್ವರ ದೇವಾಲಯದಲ್ಲಿರುವ ನಕಲು ಪ್ರತಿಗಳಾದ 1101-04ರ ಶಸನಗಳು ಕೆಲವು ಚಿಕ್ಕಪುಟ್ಟ ವ್ಯತ್ಯಾಸಗಳೊಂದಿಗೆ ಶ್ರೀಕಂಠನ ಹೊಗಳಿಕೆಯ ಈ ಕೆಳಗಿನ ಪದ್ಯಗಳನ್ನು ಒಳಗೊಂಡಿವೆ.

ಆ ಮಹಾಯತಿ ಕೇದಾರನ ಲೋಕಸ್ತುತ್ಯ ಶಿಷ್ಯನಾದ ಶ್ರೀಕಂಠನು

33. ಘುರ್ಯೆ, pp. 71-72 ಮತ್ತು ಬಶಮ್, 'History ---- ' p. 105.
34. ನೋಡಿ 'ಶ್ರೀ ಹರ್ಷ, pp. 586-88.
35. 'History ------- ' p. 105.
36. QJMS, VII, 176.
37. ಸಂ. ಮತ್ತು ಅನು. ರೈಸ್, Ec, VII, Sk. 94.

ಸದ್ಗುಣಗಳಿಂದ ಸಮೃದ್ಧನು, ನಿಷ್ಕಲಂಕವಾದ ಶೀಲದವನು, ವಿದ್ವಾಂಸರೆಂಬ ಮಾಮರಗಳ ತೋಪಿನಲ್ಲಿ ಕೋಗಿಲೆಯಾದವನು. ಮಹಾಸದ್ಗುಣಗಳಿಂದ ಸಮೃದ್ಧನು, ಮಹಾಯತಿಗಳ ಆಭೂಷಣನು, ವಿದ್ವಾಂಸರ ಹಣೆಯ ಆಭರಣನು, ತರ್ಕ ವಿದ್ಯೆಯ ಮಹಾಸಾಗರನೆನ್ನಿಸಿದ ಶ್ರೀಕಂಠನು, ಹರನ (ಶಿವನ) ಪಾದಪಂಕಜಗಳ ಮೇಲೆ ತನ್ನ ಆಲೋಚನೆಗಳನ್ನು ಭದ್ರವಾಗಿ ನೆಟ್ಟನಲ್ಲದೆ, ವಾಗ್ದೇವತೆಯ ಸೌಂದರ್ಯವು ಮೋಹಕವಾದ ತನ್ನ ಮುಖಕಮಲದಲ್ಲಿ ನೆಲೆಸುವಂತೆ ಮಾಡಿದನು, ತನ್ನ ನಡತೆಯ ಪಾವಿತ್ರ್ಯವನ್ನು ಉಳಿಸಿಕೊಂಡನು ಮತ್ತು ಇಂದ್ರನ ಅರಮನೆಯ ಐರಾವತದಂತೆ ದಿಗಂತದವರೆಗೂ ತನ್ನ ಉಜ್ವಲವಾದ ಕೀರ್ತಿಯನ್ನು ಸ್ಥಾಪಿಸಿದನು.[38]

ಆಗಲೆ ನಾವು ಗಮನಿಸಿದಂತೆ ಕೇದಾರೇಶ್ವರ ದೇವಾಲಯದ 1113ರ ಶಾಸನದಲ್ಲಿ ಶ್ರೀಕಂಠನನ್ನು 'ಕಾಳಾಮುಖನೆಂದು ಪರಿಗಣಿಸಲಾಗಿದೆ. ಈ ಶಾಸನ ಹೀಗೆ ಮುಂದುವರಿಯುತ್ತದೆ :

ವಿದ್ವಾಂಸರಿಂದ ಕೊಂಡಾಡಲಾದ, ಕೇದಾರಶಕ್ತಿಯ ಮಗನಾದ, ತನ್ನ ಹೃದಯ ಕಮಲದಲ್ಲಿ ಯಾವಾಗಲೂ ಶ್ರೀಕಂಠನನ್ನು (ಶಿವ) ಧ್ಯಾನಿಸುವವನಾದ ಅವನ ಪವಿತ್ರವಾದ ಗಂಟಲು (ಶ್ರೀಕಂಠ), ಮುನಿಪತಿಯಿಂದ ಉಚ್ಚರಿಸಲಾದ ಪವಿತ್ರ ಶಬ್ದಗಳನ್ನು ಉಳಿಸಿಕೊಂಡಿತು. ಶ್ರೀಕಂಠಯೋಗೀಶ್ವರನು ಪರಮಾತ್ಮಾಗಮಗಳನ್ನು ಅರಿತವನು, ಸೊಲ್ಲಡಗಿಸುವ ವಾಗ್ಮಿತೆಯಲ್ಲಿ ಪಳಗಿದವನು, ಪರಿಮಳವನ್ನು ಹೊಂದಿರಬಹುದಾದ ಅಪರಂಜಿಯಂಥವನು, ಈಶ್ವರನ ಪಾದಪಂಕಜಗಳನ್ನು ತನ್ನ ತಲೆಯ ಮೇಲೆ ಇರಿಸಿಕೊಂಡವನು, ಘೋರ ತಪಸ್ಸೆಂಬವಳಿಗೆ ಗಂಡನಾದವನು, ಆಚಾರ್ಯಗುಣಗಳಿಂದ ಹೆಸರುವಾಸಿಯಾಗಿದ್ದವನು.[39]

ಶ್ರೀಕಂಠನು 'ಸರಸ್ವತಿಯ ಕೊರಳ ಮುತ್ತಿನ ಸರ ವಿದ್ವತ್ತೆಯ ಚಿನ್ನವನ್ನು ಪರೀಕ್ಷಿಸುವ ಒರೆಗಲ್ಲು, ವಿಶ್ವವಿಡಿ ಪೂಜ್ಯಭಾವನೆಯನ್ನು ಪಡೆದವನು, ' ಆಗಿದ್ದನೆಂದು ಗೌತಮನಿಗೆ ನೀಡಲಾದ 1129ರ ಕೇದಾರೇಶ್ವರದ ಶಾಸನ ಒತ್ತಿ ಹೇಳುತ್ತದೆ.[40]

ಕೋಡಿಯ ಮಠದ ವರ್ಣನೆಗಳಂತೆಯೇ ಈ ವರ್ಣನೆಗಳೂ ಕಾಳಾಮುಖರ ಮೇಲೆ ರಾಮಾನುಜರಿಂದ ಹೊರಿಸಲಾದ ಆಪಾದನೆಗಳಿಗೆ ಎದುರಾಗಿದ್ದರೂ ರಾಮಾನುಜ ಹಾಗೂ

---

38. ಸಂ. ಮತ್ತು ಅನು. ಫ್ಲೀಟ್, EI, V, 219, ಇದು ಅಬ್ಬಲೂರಿನ ಪಾಠ.
39. ಸಂ. ಮತ್ತು ಅನು. ರೈಸ್, EC, VII, Sk. 99.
40. ಅದೇ, Sk. 100.

ಶಾಸನಗಳಲ್ಲಿ ಹಲವು ಒಮ್ಮತದ ಅಂಶಗಳೂ ಇವೆ. ಮೊದಲನೆಯದಾಗಿ, ರಾಮಾನುಜರ ಕಾಳಾಮುಖರು ಹಾಗೂ ಕೇದಾರೇಶ್ವರ ದೇವಾಲಯದ ಯತಿಗಳು ಶಿವಪೂಜಕರು. ಎರಡನೆಯಾದಾಗಿ, ಕೋಡಿಯ ಮಠದ ಯತಿಗಳ ವಿದ್ವತ್ತು ಅದೆಷ್ಟೇ ಶ್ರೇಷ್ಠ ಎನ್ನಿಸಿದರೂ ಆಧ್ಯಾತ್ಮಿಕ ಚಿಂತನೆ, ಯಜ್ಞಧರ್ಮ, ಹಾಗೂ ಧಾರ್ಮಿಕ ಕರ್ಮನಿಷ್ಠ ಆಚಾರಗಳಿಗಿಂತ ಅವರ ನಂಬಿಕೆಯ ಅಗತ್ಯದ ಲಕ್ಷಣವೆಂದರೆ ವ್ಯಕ್ತಿಗತವಾದ ಶಿವಭಕ್ತಿ. ಈ ಯತಿಗಳು, ಇದೇ ಕಾಲಕ್ಕೆ ನೈಋತ್ಯದಲ್ಲಿ ಸುಮಾರು 250 ಮೈಲುಗಳ ದೂರದಲ್ಲಿರುವ ಶ್ರೀರಂಗಮ್‌ದಲ್ಲಿ ಭಕ್ತಿಯೋಗದ ಧರ್ಮ ಪ್ರಸಾರವನ್ನು ಕೈಕೊಂಡಿದ್ದ ತಮ್ಮ ಎದುರಾಳಿಗಳೊಂದಿಗೆ ಸಾಕಷ್ಟು ಸಾಮ್ಯವನ್ನು ಹೊಂದಿರುವರು.

ಕಾಪಾಲಿಕ, ಕಾಳಾಮುಖ, ಪಾಶುಪತ ಹಾಗೂ ಶೈವ - ಇವು ಪಾಶುಪತ ಸಿದ್ಧಾಂತವನ್ನು ಆಚರಿಸುವ ನಾಲ್ಕು ಶೈವ ಸಂಪ್ರದಾಯಗಳೆಂದು ರಾಮಾನುಜರು ಗುರುತಿಸುತ್ತಾರೆ. ಕಾಳಾಮುಖರಿಗಿರುವ ಪಾಶುಪತರೊಡನೆಯ ಒಡನಾಟವನ್ನು ಚೆನ್ನಾಗಿ ದಾಖಲಿಸಲಾಗಿದೆ. ಶ್ರೀಕಂಠನನ್ನು ಒಳಗೊಂಡಂತೆ ಹಲವು ಜನ ಕಾಳಾಮುಖ ಯತಿಗಳು ಲಕುಲೀಶನೊಂದಿಗೆ ಅನನ್ಯತೆಯನ್ನು ಹೊಂದಿದವರು. ಸಾಂಪ್ರದಾಯಿಕವಾಗಿ ' ಪಾಶುಪತ ಸೂತ್ರ'ವು ಇದೇ ಪಾಶುಪತ ಯತಿ ಲಕುಲೀಶನದೆಂದು ನಂಬಲಾಗುತ್ತದೆ. ಲಕುಲೀಶನ ಸಿದ್ಧಾಂತವಾದ 'ಲಾಕುಲ ಸಿದ್ಧಾಂತ'ವು ಕೋಡಿಯ ಮಠದಲ್ಲಿ ಅಧ್ಯಯನದ ಒಂದು ಮುಖ್ಯ ವಿಷಯವಾಗಿದೆ. ಶ್ರೀಕಂಠನ ತರುವಾಯದವರು `ಲಕುಲೀಶನೊಂದಿಗೆ ಅನನ್ಯತೆಯನ್ನು ಹೊಂದಿದವರು ಇಲ್ಲವೆ 'ಲಾಕುಲಸಿದ್ಧಾಂತ' ಅಥವಾ 'ಲಾಕುಲಾಗಮ'ವನ್ನು ಅನುಸರಿಸುವವರೆಂದು ತಿಳಿಯಲಾಗುತ್ತದೆ. ದಕ್ಷಿಣ ಭಾರತದ ಇತರ ಶಾಸನಗಳು ಕಾಳಾಮುಖರಲ್ಲಿ ಲಕುಲೀಶನಿಗಿರುವ ಮಹತ್ವ ಹಾಗೂ ಅದರಿಂದಾಗಿ ಕಾಳಾಮುಖರು ಹಾಗೂ ಪಾಶುಪತರ ನಿಕಟ ನಂಟುಗಳನ್ನು ಕುರಿತು ವಿಪುಲವಾದ ಸಾಕ್ಷ್ಯಗಳನ್ನು ಒದಗಿಸುತ್ತವೆ. ಬೆಳಗಾವಿ ಜಿಲ್ಲೆಯ ಸಿರಸಂಗಿಯ ಕ್ರಿ.ಶ.1148ರ ಹಾಗೂ ನೇಸರಗಿಯ 1219-20ರ ಶಾಸನ[41] ಗಳಲ್ಲಿರುವ ಸುಮಾರು ಒಂದೇ ಅರ್ಥದ ಪದ್ಯವು ಕಾಳಾಮುಖರನ್ನು ಮಹಾವ್ರತಿನ್ ಹಾಗೂ ಮಹಾಪಾಶುಪತರೆಂದು ಗುರುತಿಸುತ್ತದೆ. ಕಾಳಾಮುಖ ಯತಿಗಳು ಮತ್ತೆ ಮತ್ತೆ ಧರಿಸುವ 'ಜ್ಞಾನಶಕ್ತಿ' ಹಾಗೂ 'ಕ್ರಿಯಾಶಕ್ತಿ' ಎಂಬ ಹೆಸರುಗಳು ಬಗೆ ಬಗೆಯ ತಾಂತ್ರಿಕ ಶಕ್ತಿಗಳನ್ನು ಕುರಿತು ಪಾಶುಪತ ಗ್ರಂಥಗಳಲ್ಲಿ ಬಳಸಲಾಗುವ ಆಧ್ಯಾತ್ಮಿಕ ಪದಗಳೇ ಆಗಿವೆ.[42]

ಉತ್ತರಭಾರತದ ಗುಪ್ತರ ತರುವಾಯದ ಹಲವಾರು ವಿಗ್ರಹಗಳು ಲಕುಲೀಶನನ್ನು

---

41. ಸಂ. ಪಂಚಮುಖಿ, 'Karnatak Inscriptions,' I. no. 24 of 1939-49 ಮತ್ತು ಸಂ. ಮತ್ತು ಅನು. ಜೆ. ಎಫ್. ಫ್ಲೀಟ್, JBBRAS, X, 167-298 (No. VI).
42. ಲಕುಲೀಶನ ಕಾಲ ಹಾಗೂ ಬೋಧನೆಗಳನ್ನು ಮುಂದೆ ವಿವರವಾಗಿ ಚರ್ಚಿಸಲಾಗಿದೆ. (Chap. vi.) ಅಧ್ಯಾಯ-6.

ಪ್ರತಿನಿಧಿಸುವವೆಂದು ಗುರುತಿಸಲಾಗಿದೆ. ಇವು ಸಾಮಾನ್ಯವಾಗಿ, ಎಡಗೈಯಲ್ಲಿ ಒಂದು ದೊಣ್ಣೆ (ಲಕುತ), ಬಲಗೈಯಲ್ಲಿ ಒಂದು ಗಜನಿಂಬೆ, ನಿಗುರಿದ ಲಿಂಗ, ಎದ್ದು ನಿಂತ ಇಲ್ಲವೆ ಪದ್ಮಾಸನದಲ್ಲಿ ಕುಳಿತಿರುವ ಬೆತ್ತಲೆಯೋಗಿಯನ್ನಾಗಿ ಅವನನ್ನು ತೋರಿಸುತ್ತವೆ. ಹನ್ನೊಂದನೆಯ ಶತಮಾನದ ಶುರುವಿನಲ್ಲಿ ಲಕುಲೀಶ ಸಂಪ್ರದಾಯವು ತನ್ನ ಚಟುವಟಿಕೆಗಳನ್ನು ದಕ್ಷಿಣದತ್ತ, ಅದರಲ್ಲೂ ಕರ್ನಾಟಕದತ್ತ ಸ್ಥಲಾಂತರಿಸಿದಂತೆ ಕಾಣುತ್ತದೆ. ಈ ವಿಗ್ರಹಗಳ ಸಂಖ್ಯೆ ಉತ್ತರ ಭಾರತದಲ್ಲಿ ಇಳಿಮುಖವಾಗುತ್ತ ನಡೆದು, ಲಕುಲೀಶನ ಹೆಸರು ಮಾತ್ರ ಒಮ್ಮೆಲೇ ಹಲವಾರು ಕನ್ನಡ ಶಾಸನಗಳಲ್ಲಿ ಕಾಣಿಸಿಕೊಳ್ಳಲು ಶುರುವಾಗುತ್ತದೆ. ಈ ಶಾಸನಗಳಲ್ಲಿ ದಾನಗಳನ್ನು ಸ್ವೀಕರಿಸುವವರು ಕಾಳಾಮುಖರಾಗಿದ್ದರೆಂದು, ಉಳಿದವರನ್ನು ಪಾಶುಪತರೆಂದು ಗುರುತಿಸಲಾಗುತ್ತದೆ. ಭಾರತದ ವಾಯವ್ಯದ ಬದಿಯಿಂದ ಲಕುಲೀಶನ ಅನುಯಾಯಿಗಳು ಕನ್ನಡನಾಡಿಗೆ ನೇರವಾಗಿ ವಲಸೆ ಬಂದಿರುವ ಸಾಧ್ಯತೆಯೂ ಇದೆ.

ವಿ. ಸುಬ್ಬಯ್ಯನವರು ಸೂಚಿಸಿದಂತೆ ಕಾಳಾಮುಖರು ಕಾಶ್ಮೀರ ಮೂಲದವರೆಂಬುದನ್ನು ಈಗಾಗಲೇ ಗಮನಿಸಿದ್ದೇವೆ. ಆದರೆ ಅವರು ತಮ್ಮ ಈ ವಾದಕ್ಕೆ ಆಧಾರವಾಗಿ, ಕಾಳಾಮುಖರೆಂದರೆ ಕಾಶ್ಮೀರದ ಪಂಡಿತರೆಂದು ನಮೂದಿಸುವ ಕೆಲವೇ ಶಾಸನಗಳನ್ನು ಉದಹರಿಸುತ್ತಾರೆ. ಇತ್ತೀಚೆ ಸಂಪಾದಿಸಲಾದ ವಿಜಾಪುರ ಜಿಲೆಯ ಮುತ್ತಗಿ ಕ್ರಿ.ಶ. 1147ರ ಶಾಸನವು ಮೇಲಿನ ವಾದಕ್ಕೆ ಹೆಚ್ಚಿನ ಬೆಂಬಲವನ್ನು ಒದಗಿಸಿದೆ.[43] ಕಾಶ್ಮೀರದಿಂದ ವಿಜಾಪೂರಕ್ಕೆ ವಲಸೆ ಬಂದ ಶೈವಯತಿಗಳ ಒಂದು ಸಂಪ್ರದಾಯವನ್ನು ಕುರಿತು ಈ ಶಾಸನ ಗುಣಗಾನವನ್ನು ಮಾಡುತ್ತದೆ. ವಿಜಾಪುರದ್ದೇ ಆದ ಕ್ರಿ.ಶ. 1074-75ರ ಇನ್ನೊಂದು ಶಾಸನ ಇದನ್ನು ಕಾಳಾಮುಖ ಸಂಪ್ರದಾಯವೆಂದು ಖಚಿತವಾಗಿ ಗುರುತಿಸಿದೆ.[44] ಈ ಸಂಪ್ರದಾಯವು ವಾಸ್ತವದಲ್ಲಿ ಶಕ್ತಿಪರಿಷತ್ತಿನ ಇನ್ನೊಂದು ಶಾಖೆಯಾದ ಭುಜಂಗಾವಳಿಗೆ ಸೇರಿದುದು. ಅದರಲ್ಲಿ ಒಬ್ಬನನ್ನು ಕಾಶ್ಮೀರನೆಂದು ಹಾಗೂ ಇನ್ನೊಬ್ಬನನ್ನು ಲಕುಲೀಶ್ವರನೆಂದು ಹೆಸರಿಸಲಾಗಿದೆ.

ಲಕುಲೀಶನ ಅನುಯಾಯಿಗಳು ಉತ್ತರ ಭಾರತದಿಂದ ವಲಸೆ ಹೊರಡಲು ಕಾರಣಗಳೇನು ? ಎಂಬುದು ತಿಳಿದಿಲ್ಲ. ಇದ್ದಿರಬಹುದಾದ ಕಾರಣಗಳೆಂದರೆ, ಅವರ ಜೀವನದ ಧ್ಯೇಯವನ್ನು ಕುರಿತಾದ ಶ್ರದ್ಧೆ, ಇಲ್ಲವಾದ ರಾಜಾಶ್ರಯ, ರಾಜಕೀಯ ಅಸ್ಥಿರ ವಾತಾವರಣ ಹಾಗೂ ಬರ, ಇತ್ಯಾದಿ. ಹೆಚ್ಚಿನ ಕಾಳಾಮುಖಯತಿಗಳೆಲ್ಲ ಸಂಚಾರಿ ಗುರುಗಳು. ಆದರೆ ತಮ್ಮ ಜೀವನ ಧ್ಯೇಯಕ್ಕಾಗಿ ದಕ್ಷಿಣ ಭಾರತದಲ್ಲಿ ಸಾಗಿದ ಇವರ ಚಟುವಟಿಕೆಗಳು ಈ ಲಕುಲೀಶ ಸಂಪ್ರದಾಯ ಉತ್ತರದಲ್ಲಿ ತನ್ನ ಶಕ್ತಿಸಾಮರ್ಥ್ಯಗಳನ್ನು ಕಳೆದುಕೊಂಡುದೇಕೆ?-

43. ಸಂ. ದೇಸಾಯಿ. SII, XV, no. 32.

44. ಸಂ. ಮತ್ತು ಅನು. ಜೆ. ಎಫ್. ಫ್ಲೀಟ್, 'Sanskrit and old-Canarese Inscriptions,' IA, X (1881), 126-31.

ಎನ್ನುವುದನ್ನು ವಿವರಿಸಲಾರವು. ಬರಗಾಲ ಹಾಗೂ ಕಳೆದು ಹೋದ ರಾಜಾಶ್ರಯಗಳೇ ಇದಕ್ಕೆ ಕಾರಣವೆನ್ನಬಹುದಾದರೂ ಹಾಗೆಂದು ನಿರ್ದಿಷ್ಟವಾಗಿ ಹೇಳುವಂತಿಲ್ಲ. ಇದೇ ಸುಮಾರಿಗೆ ವಾಯವ್ಯ ಭಾರತದ ಕೆಲವು ಭಾಗಗಳಲ್ಲಿ ಜರುಗಿದ ಗಝನಿ ಮಹಮೂದನ ದಾಳಿಗಳೂ ಒಂದು ಮಹತ್ವದ ಅಂಶವಾಗಿರಬಹುದು. ಲಕುಲೀಶನ ಪೂಜೆಗೆ ಸಂಬಂಧಿಸಿದ ಹಾಗೂ ಮಹಮೂದನ ದಾಳಿಗಳಿಗೆ ತುತ್ತಾದ ಉತ್ತರ ಭಾರತದ ಎರಡು ತಾಣಗಳೆಂದರೆ ಮಥುರೆ ಹಾಗೂ ಸೋಮನಾಥಗಳು. ಮೊದಲಿನ ತಾಣವು ಕ್ರಿ.ಶ.380ರ ಲಕುಲೀಶನ ಶಿಷ್ಯನಾದ ಕುಶಿಕನ ಮುಂದಿನ ತಲೆಮಾರಿನ ಯತಿಗಳ ವಾಸಸ್ಥಳವಾಗಿತ್ತು. ಕ್ರಿ.ಶ.1287ರಲ್ಲಿ ಸೋಮನಾಥವು, ಲಕುಲೀಶನ ಇನ್ನೊಬ್ಬ ಅನುಯಾಯಿಯಾದ ಗಾರ್ಗ್ಯ ಅಥವಾ ಗರ್ಗನ ಮುಂದಿನ ತಲೆಮಾರಿನ ಪಾಶುಪತ ಸಂಪ್ರದಾಯದ ವಾಸಸ್ಥಳವಾಗಿತ್ತು. ಮಹಮೂದನು ಕಾಶ್ಮೀರವನ್ನು ಗೆದ್ದುಕೊಳ್ಳದೆ ಹೋದರೂ ಕ್ರಿ.ಶ.1014ರಲ್ಲಿ ಕಾಶ್ಮೀರ ಕಣಿವೆಯನ್ನು ಕೊಳ್ಳೆಹೊಡೆದನಲ್ಲದೆ ಮರುವರ್ಷವೂ ಮತ್ತೆ ದಾಳಿಬಿಟ್ಟನು. ಕ್ರಿ.ಶ.1030ರ ಸುಮಾರಿಗೆ ಮುಸ್ಲಿಮ್ ವಿದ್ವಾಂಸನಾದ ಅಲ್- ಬಿರೂನೀ ಹೀಗೆ ಟಿಪ್ಪಣಿ ಮಾಡಿದ್ದಾನೆ : " ಹಿಂದುಗಳ ಶಾಸ್ತ್ರಗಳು ನಾವು ಗೆದ್ದುಕೊಂಡ ನಾಡಿನಿಂದ ಬಲುದೂರ ಸಾಗಿದ್ದು ಇಂದಿಗೂ ನಮ್ಮ ಕೈಯೆಟುಕದ ಊರುಗಳಾದ ಕಾಶ್ಮೀರ, ವಾರಣಾಸಿ ಹಾಗೂ ಇನ್ನಿತರ ಎಡೆಗಳಿಗೆ ಓಡಿ ಹೋಗಿವೆ."[45] ಬಹಳಷ್ಟು ಹಿಂದೂ ವಿದ್ವಾಂಸರು ಕಾಶ್ಮೀರಕ್ಕೆ ಓಡಿ ಹೋದರೆ, ಅದಕ್ಕೂ ಹೆಚ್ಚು ಚಾಣಾಕ್ಷರಾದ ಕಾಶ್ಮೀರಿ ವಿದ್ವಾಂಸರು ತಾವು ಇನ್ನೆಲ್ಲಿಗಾದರೂ ವಲಸೆ ಹೋಗುವ ತೀರ್ಮಾನಕ್ಕೆ ಬಂದಿರಲು ಸಾಕು. ದಕ್ಷಿಣದತ್ತ ಪಯಣ ಬೆಳೆಸಿದ ಅವರಲ್ಲಿ ಕಾಶ್ಮೀರದ ಕಾಳಾಮುಖರೂ ಇದ್ದು, ಇವರ ಕೆಲವು ಸಹಧರ್ಮೀಯರು ಎಂಟನೆಯ ಶತಮಾನದ ಕೊನೆಯಷ್ಟು ಪೂರ್ವದಲ್ಲಿಯೇ ದಕ್ಷಿಣದಲ್ಲಿ ಸ್ಥಿರವಾಗಿ ನೆಲೆಸಿದ್ದರು.

ಸೋಮನಾಥದ ಪಾಶುಪತರು ಹಾಗೂ ಬಳ್ಳಿಗಾವೆಯ ಕಾಳಾಮುಖರ ನಡುವೆ ಲಕುಲೀಶನ ಸಂಬಂಧವಷ್ಟೇ ಅಲ್ಲದೆ ಇನ್ನೂ ಅದೆಷ್ಟೋ ಕುತೂಹಲಕರವಾದ ಹೋಲಿಕೆಗಳಿವೆ. 1287ರ 'ಸಿಂತ್ರ ಪ್ರಶಸ್ತಿ'ಯು ಸೋಮನಾಥದ ಐದು ದೇವಾಲಯಗಳಲ್ಲಿ ಲಿಂಗ ಪ್ರಾಣಪ್ರತಿಷ್ಠಾಪನೆ ನಡೆದುದನ್ನು ನಮೂದಿಸುತ್ತದೆ.[46] ಬಳ್ಳಿಗಾವೆಯ ಪಂಚಲಿಂಗ ದೇವಾಲಯವು ಕಾಳಾಮುಖರಿಗೆ ಸೇರಿತ್ತು. ತ್ರಿಪುರಾಂತಕನೆಂಬ ಯತಿಯಿಂದ ಸೋಮನಾಥದ ಐದು ಲಿಂಗಗಳ ಪ್ರತಿಷ್ಠಾಪನೆ ನಡೆದಿತ್ತು. ಬಳ್ಳಿಗಾವೆಯ ಕಾಳಾಮುಖ ದೇವಾಲಯಗಳಲ್ಲಿ ಒಂದು ದೇವಾಲಯವನ್ನು ತ್ರಿಪುರಾಂತಕ ದೇವರಿಗೆ ಅರ್ಪಿಸಲಾಗಿತ್ತು.ವಾಲ್ಮೀಕಿ ರಾಶಿಯು ಸೋಮನಾಥದ ತ್ರಿಪುರಾಂತಕದ ಅಧಿಕಾರ ಪತ್ರವನ್ನು ಹೊಂದಿದವನಾಗಿದ್ದು, ಈ ಹೆಸರು ಮೂವರ ಕೋಣೆಯ ಸಂತತಿಯ ಶುರುವಿನ ಕಾಲದ ಯತಿಗಳಲ್ಲೂ ಕಂಡು ಬರುತ್ತದೆ.

---

45. ಅನು. E.C. Sachau, 'Alberuni's India,' I, 22.
46. ಸಂ. ಮತ್ತು ಅನು. G. Bühler, EI, I, 271-87.

ಸೋಮನಾಥದ ಶಾಸನವು ತ್ರಿಪುರಾಂತಕನು ಕೈಕೊಂಡ ತೀರ್ಥಯಾತ್ರೆಯನ್ನು ಕುರಿತು ಬಣ್ಣಿಸುತ್ತಿದ್ದು, ಆ ಯಾತ್ರೆಯ ಕಾಲಕ್ಕೆ ಅವನು ಕಾಳಾಮುಖದೊಂದಿಗೆ ಸಂಬಂಧವುಳ್ಳ ಹಿಮಾಲಯದ ಕೇದಾರ ಹಾಗೂ ಕರ್ನೂಲ ಜಿಲ್ಲೆಯ ಶ್ರೀಪರ್ವತಕ್ಕೆ ಭೇಟಿಯಿತ್ತನು. ಇವೆಲ್ಲ ಹೋಲಿಕೆಗಳು ಪಾಶುಪತರು ಹಾಗೂ ಕಾಳಾಮುಖರು ಲಕುಲೀಶನ ಬೋಧನೆಯ ಸಮಾನವಾದ ತಳಹದಿಯನ್ನಲ್ಲದೆ ತಮಗಿಬ್ಬರಿಗೂ ಸಮಾನವಾದ ಸಂಪ್ರದಾಯಗಳನ್ನು ಪಡೆದಿದ್ದರೆಂದು ತಿಳಿಸುತ್ತವೆ.

ರಾಮಾನುಜರು ಹೇಳುವ ಹಾಗೂ ಕಾಳಾಮುಖರ ಶಾಸನಗಳು ಸೂಚಿಸುವ ಒಮ್ಮತದ ಮೂರನೆಯ ಅಂಶವೆಂದರೆ ಅವು ನೀಡುವ ಆಗಮಗಳ ಶೈವಸಿದ್ಧಾಂತ ಹಾಗೂ ಪಶುಪತಿಯ ಇನ್ನಿತರ ಉಪಾಸನಕರನ್ನು ಕುರಿತು 'ಶೈವಾಗಮಗಳಲ್ಲಿ ಪ್ರಸ್ತಾಪಿಸಲಾಗಿದೆ'ಯೆಂದು ರಾಮಾನುಜರು ಹೇಳುವಂತಿದೆ. ಹೆಚ್ಚಿನ ಸಂಖ್ಯೆಯ ಕಾಳಾಮುಖ ಶಾಸನಗಳು 'ಲಾಕುಲಾಗಮ'ವನ್ನು ಕುರಿತು ಉಲ್ಲೇಖಿಸುತ್ತವೆ. ಉದಾ : ಮೂವರ ಕೋಣೆಯ ಸಂತತಿಯ ಯತಿಯಾದ ಎರಡನೆಯ ವಾಮಶಕ್ತಿಯನ್ನು 'ಲಾಕುಲಾಗಮದ ಆಭೂಷಣ' ಎಂದು, ಇವನಿಗೆ ಮೊದಲಿನ ಶ್ರೀಕಂಠಯತಿಯನ್ನು 'ಪರಮಾತ್ಮಾಗಮ' ವಿದನೆಂದು ಸೂಚಿಸಲಾಗಿದೆ.[47] ಶೈವಾಗಮಗಳು ಮುಖ್ಯವಾಗಿ ದಕ್ಷಿಣ ಭಾರತದಲ್ಲಿಯೇ ಉಗಮ ಹೊಂದಿವೆಯೆಂದು ಕಾಣುತ್ತದೆ. ಸಂಪ್ರದಾಯವು ಇಪ್ಪತ್ತೆಂಟು ಆಗಮ ಗ್ರಂಥಗಳನ್ನು ಎಣಿಸಿದ್ದರೂ ಇವುಗಳ ಸಂಖ್ಯೆ ಇದಕ್ಕೂ ಹೆಚ್ಚಿನದು. ಇವೆಲ್ಲ ಸಾಮಾನ್ಯವಾಗಿ ಮೂಲ ಶೈವಸಂಪ್ರದಾಯಕ್ಕೆ ಸಂಬಂಧಿಸಿದ ಉಳಿದ ಶೈವಸಂಪ್ರದಾಯಗಳು ತಮ್ಮವೇ ಆದ ಆಗಮಗಳನ್ನು ತಯಾರಿಸಿಕೊಂಡವು. ಇವುಗಳಲ್ಲಿ ಹಲವು ಆಗಮಗಳು ಕಳೆದು ಹೋಗಿದ್ದರೂ ವೀರಶೈವ ಇಲ್ಲವೆ ಲಿಂಗಾಯತ ಸಂಪ್ರದಾಯದ ಹಲವಾರು ಆಗಮಗಳು ಇಂದಿಗೂ ಚಾಲ್ತಿಯಲ್ಲಿವೆ. 'ಆಗಮ' ಪದವನ್ನು ಕೆಲವು ಸಲ ಶೈವಸಂಪ್ರದಾಯದ ಅಥವಾ ತಾಂತ್ರಿಕದ ಗ್ರಂಥಗಳಾಗಿ ಒಂದು ಜಾತಿವಾಚಕ ಪದವೆಂದು ಕೂಡ ಬಳಸಲಾಗುತ್ತದೆ.

ರಾಮಾನುಜರು ಹೇಳುವ ಹಾಗೂ ಕಾಳಾಮುಖರ ಶಾಸನಗಳು ಸೂಚಿಸುವ ನಾಲ್ಕನೆಯ ಸಮಾನ ಅಂಶವೆಂದರೆ 'ಯೋಗ' ಶ್ರೀಕಂಠನನ್ನು 'ಯೋಗೀಶ್ವರ'ನೆಂದು ಕರೆಯಲಾದರೆ ರಾಮಾನುಜರ ಪ್ರಕಾರ ಕಾಳಾಮುಖರು ಕೂಡ ಹಲವು ಬಗೆಯ 'ಯೋಗ'ಗಳನ್ನು ಆಚರಿಸುವವರಾಗಿದ್ದಾರೆ. ಆದರೆ ರಾಮಾನುಜರ ಪಟ್ಟಿಯಲ್ಲಿ ಹೇಳಲಾಗಿರುವ ಅಸಾಧಾರಣ ಆಚರಣೆಗಳನ್ನು ಶಾಸನಗಳು ಎಲ್ಲಿಯೂ ನಮೂದಿಸಿಲ್ಲ. ಈಗಾಗಲೆ ನಾವು, ಕಾಳಾಮುಖಯತಿಯನ್ನು ಒಬ್ಬ ಶೈವಯತಿಯ ಮಾದರಿಯಲ್ಲಿ ಬಣ್ಣಿಸಿದುದನ್ನು ಮುನವಳ್ಳಿಯ 1252-53ರ ಶಾಸನದಲ್ಲಿ ಕಂಡಿದ್ದೇವೆ.[48]

---

47. ಸಂ. ಮತ್ತು ಅನು. ರೈಸ್, EC, VII, Sk. 123.

48. ಮೇಲಕ್ಕೆ ನೋಡಿ, ಪು. 6.

ಶ್ರೀಕಂಠನ ವರ್ಣನೆಗಳಿಂದ ತಿಳಿದು ಬರುವ ಒಂದು ಹೆಚ್ಚಿನ ವೈಶಿಷ್ಟ್ಯವೆಂದರೆ ಅವನು ತರ್ಕವಿದ್ಯೆಗೆ ನೀಡುವ ಒತ್ತು. ಅವನ ತರುವಾಯದವರಾದ ಕೆಲವು ನೈಯಾಯಿಕ ಹಾಗೂ ವೈಶೇಷಿಕರಿಗೆ ಬಳಸಲಾದ ವಿಶೇಷಣ ಪದಗಳಿಂದ ಈ ಸಂಗತಿ (ಒತ್ತು) ಇನ್ನಷ್ಟು ವಿಶದಗೊಳ್ಳುತ್ತದೆ. ನೈಯಾಯಿಕ, ವೈಶೇಷಿಕರ ತತ್ತ್ವಪ್ರಣಾಲಿ ಮುಖ್ಯವಾಗಿ ತರ್ಕಶಾಸ್ತ್ರವನ್ನು ಆಧಾರಿಸಿದ್ದು, ಅದು ಪಾಶುಪತರೊಂದಿಗೆ ತೀರ ಹತ್ತಿರದ ನಂಟುಳ್ಳದು.[49] ಮಹೇಂದ್ರವರ್ಮನ 'ಮತ್ತವಿಲಾಸ'ದಲ್ಲಿ ಕಾಪಾಲಿಕನ ತರ್ಕದ, ಅದಕ್ಕಿಂತಲೂ ಕುತರ್ಕದ ಬಗೆಗಿನ ಒಲವನ್ನು ಕೂಡ ಹೋಲಿಸಿ ನೋಡುವಂತಿದೆ.

ಸೋಮೇಶ್ವರ ಪಂಡಿತ ದೇವನು ಕೇದಾರೇಶ್ವರದ ಮುಖ್ಯಯತಿಗಳ ಸಾಲಿನಲ್ಲಿ ಮೂರನೆಯವನಿದ್ದು, ಅವನು ಅಧಿಕಾರದಲ್ಲಿರುವ ಬಗೆಗೆ ಬಳ್ಳಿಗಾವೆಯ ಮೂರು ಶಾಸನ ಹಾಗೂ ಅಬ್ಬಲೂರಿನ ಒಂದೇ ಬಗೆಯ ಎರಡು ಶಾಸನಗಳಿಂದ ಕಂಡುಬರುತ್ತಿದ್ದು ಇವೆಲ್ಲವು 1094ರಿಂದ 1113ರ ನಡುವಿನ ಕಾಲದವು.[50] ಇವನು ಸೂಡಿಯ ನಾಗೇಶ್ವರದೇವಾಲಯಕ್ಕೆ 1060ರಿಂದ 1084ರ ನಡುವಿನ ಕಾಲದಲ್ಲಿ ಪ್ರಮುಖನಾಗಿದ್ದ ಸೋಮೇಶ್ವರನಂತೆಯೇ ಇರುವನು.[51] ಮುಂದಿನ ತಲೆಮಾರಿನವರ ಹಲವು ಶಾಸನಗಳಲ್ಲಿ ಇವನನ್ನು ಕುರಿತ ಪದ್ಯಗಳಿಂದ ಇವನು ಈ ಯತಿಪರಂಪರೆಯಲ್ಲಿ ಮಹತ್ವದವನಾಗಿದ್ದುದು ಕಂಡು ಬರುತ್ತದೆ.

ಕೇದಾರೇಶ್ವರ ದೇವಾಲಯಗ ಎಲ್ಲಕ್ಕೂ ಹಳೆಯ ಶಾಸನವು ಕ್ರಿ. ಶ. 1094 ರದು[52]. ಇದು, ಬಳ್ಳಿಗಾವೆ ಪಟ್ಟಣದವರು, "ಪಟ್ಟಣದ ದಕ್ಷಿಣಭಾಗದಲ್ಲಿರುವ ತಾವರೆಗೆರೆಯ ನಖರೇಶ್ವರದೇವರ ಆಚಾರ್ಯ'ನಾದ ಸೋಮೇಶ್ವರ ಪಂಡಿತದೇವನಿಗೆ, 'ದೇವರ ಸೇವೆ ಹಾಗೂ ಅಲಂಕರಣ, ದೇವಾಲಯದ ಸುಸ್ಥಿತಿ, ಅಲ್ಲಿ ವಾಸಿಸುವ ವಿದ್ಯಾರ್ಥಿ ಹಾಗೂ ಯತಿಗಳ ಆಹಾರಗಳಿಗಾಗಿ " ನೀಡಲಾದ ದತ್ತಿಯಾಗಿದೆ. ಸೋಮೇಶ್ವರನನ್ನು ಶ್ರೀಕಂಠನ ಶಿಷ್ಯನೆಂದು ಕರೆಯಲಾಗಿದ್ದು, ಅವನಲ್ಲಿ ಯಮ, ನಿಯಮ, ಸ್ವಾಧ್ಯಾಯ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣಾ, ಮೌನಾನುಷ್ಠಾನ, ಜಪ ಹಾಗೂ ಸಮಾಧಿಯಂತಹ ಗುಣಗಳಿವೆ.[53] ಇವೆಲ್ಲ ತುಸು ಹೆಚ್ಚು ಕಡಿಮೆ ಪ್ರಮಾಣಭೂತವಾದ ಯೋಗಕ್ರಿಯೆ ಹಾಗೂ ಸಮಾರ್ಥ್ಯಗಳು. ಈ

---

49. ನ್ಯಾಯ-ವೈಶೇಷಿಕ ತತ್ತ್ವಜ್ಞಾನಗಳ ಈ ಸಾಹಚರ್ಯವನ್ನು ಆರ್. ಜಿ. ಭಾಂಡಾರಕರ. ಪು. 117 ಮತ್ತು ಎಸ್. ಎನ್. ದಾಸಗುಪ್ತಾ ಇವರು ತಮ್ಮ 'A History of Indian Philosophy', V, 143-45ವಲ್ಲಿ ಮನಗಾಣುವಂತೆ ದಾಖಲಿಸಿರುವರು.
50. ಸಂ. ಮತ್ತು ಅನು. ರೈಸ್, EC VII, Sk. 94-98 ಮತ್ತು 99; ಸಂ. ಮತ್ತು ಅನು. ಫ್ಲೀಟ್, EI, V, no. A-B.
51. ಸಂ. ಮತ್ತು ಅನು. ಬಾರ್ನೆಟ್, EI, XV, nos. F-I.
52. ಸಂ. ಮತ್ತು ಅನು. ರೈಸ್, EC, VII, Sk, 94.

ಪಟ್ಟಿಯು ಪತಂಜಲಿಯ 'ಯೋಗಸೂತ್ರ' ii. 29 ರಂತೆಯೇ ಇದೆ.[54] ಪತಂಜಲಿಯ 'ಯೋಗಸೂತ್ರ' ಹಾಗೂ ಇತರ ಯೋಗ 'ಶಾಸ್ತ್ರ'ಗಳು ಕೋಡಿಯ ಮಠದ ಪಠ್ಯಕ್ರಮದಲ್ಲಿ ಸೇರ್ಪಡೆಯಾಗಿರುವುದನ್ನು ಆಗಲೆ ಕಂಡಿದ್ದೇವೆ. ಇಲ್ಲಿ ಹೇಳಲಾದ ಶಾಸನವು ಇದಕ್ಕೂ ಮುಂದೆ ಹೋಗಿ, ಸೋಮೇಶ್ವರನು ಸಿದ್ಧಾಂತ, ತರ್ಕ, ವ್ಯಾಕರಣ, ಕಾವ್ಯ, ನಾಟಕ, ಭರತ (? =ಸಂಗೀತ) ಹಾಗೂ 'ವಾಙ್ಮಯ ಮತ್ತು ವಿದ್ಯೆಗಳ ಹಲವು ಶಾಖೆಗಳಲ್ಲಿ ' ಪಾರಂಗತನಾಗಿದ್ದನೆಂದು ಸಾಧಿಸುತ್ತದೆ. ಸಿದ್ಧಾಂತ ಪದವು ಸಾಮಾನ್ಯ ಅರ್ಥದಲ್ಲಿ 'ತತ್ವಜ್ಞಾನಕ್ಕೆ', ಶಿವೋಪಾಸಕ ಸಿದ್ಧಾಂತವಾದ 'ಶೈವಸಿದ್ಧಾಂತ'ಇಲ್ಲವೆ ಕೋಡಿಯ ಮಠದಲ್ಲಿ ಬೋಧಿಸಲಾಗುತ್ತಿದ್ದ 'ಲಾಕುಲ ಸಿದ್ಧಾಂತ'ಕ್ಕೆ ಅನ್ವಯಿಸುತ್ತದೆ.

ಅಬ್ಬಲೂರಿನ ಬಸವೇಶ್ವರನ ದೇವಾಲಯದಲ್ಲಿ ದೊರೆತ ಕ್ರಿ.ಶ.1101-04ರ ನಕಲು (Duplicate) ಪ್ರತಿಯ ಶಾಸನವು ಈ ದೇವಾಲಯವು ಅದನ್ನು ಕಟ್ಟಿಸಿದ ಅಧಿಕಾರಿಯ ಹೆಸರಿನಿಂದಾಗಿ ಬ್ರಹ್ಮೇಶ್ವರದೇವಾಲಯವೆನಿಸಿದುದನ್ನು ತಿಳಿಸುತ್ತದೆ.[55] ಈ ಶಾಸನದಿಂದ ದಂಡನಾಯಕನಾದ ಗೋವಿಂದರಸನು ಮುರಿಗನಹಳ್ಳಿ ಎಂಬ ಗ್ರಾಮವನ್ನು 1101ರಲ್ಲಿ ದೇವಾಲಯಕ್ಕೆಂದು ಕೊಟ್ಟನೆಂದು ತಿಳಿದು ಬರುತ್ತದೆ. ಈಗ ಗೋವಿಂದನಿಂದ ಪಾದತೊಳೆಯಿಸಿಕೊಂಡ ಕೇದಾರಶಕ್ತಿಯ ಶಿಷ್ಯನಾದ ಸೋಮೇಶ್ವರನನ್ನು ಹೀಗೆ ಬಣ್ಣಿಸಲಾಗಿದೆ:

> ಕೆಲವರು ತರ್ಕದಲ್ಲಿ ಬಲ್ಲಿದರು, ಕೆಲವರು ಉತ್ತಮವಾದ ವಾಗ್ಮಿತೆಯಲ್ಲಿ ತರಬೇತಿಯನ್ನು ನೀಡಬಲ್ಲವರು, ಕೆಲವರು ನಾಟಕಗಳಲ್ಲಿ ಬಲ್ಲಿದರು, ಕೆಲವರು ಒಳ್ಳೆಯ ಕಾವ್ಯದಲ್ಲಿ ಬಲ್ಲಿದರು, ಕೆಲವರು ವ್ಯಾಕರಣದಲ್ಲಿ ಬಲ್ಲಿದರು. ಆದರೆ ಇವೆಲ್ಲವುಗಳನ್ನೂ ಬಲ್ಲ ಒಬ್ಬನೇ ವ್ಯಕ್ತಿಯಿಲ್ಲ. ನೈಯಾಯಿಯಿಕರ ನಾಯಕ, ನಿಷ್ಪಾಪಿ ಸೋಮೇಶ್ವರನು ಮಾತ್ರ ನಿಜವಾಗಿಯೂ ಇವೆಲ್ಲ ವಿದ್ಯೆಗಳಲ್ಲಿ ಬಲ್ಲಿದನು.
>
> ಅಕಳಂಕನೆಂಬ ಮಾಮರಕ್ಕೆ ಚೈತ್ರಋತು, ಲೋಕಾಯತರೆಂಬ ಕಡಲಿಗೆ ತಂಗಿರಣಗಳ ಚಂದಿರ, ಸಾಂಖ್ಯಸಿದ್ಧಾಂತವೆಂಬ ಆ ನಾಡಿನ ಕಾಲುಭಾಗಕ್ಕೆ ದಿಗ್ಗಜ, ಮೀಮಾಂಸೆಯೆಂಬ ಹೆಣ್ಣಿನ ಕೊರಳಲ್ಲಿ ಮಿರುಗುಟ್ಟುವ ಬಿಳಿಯ

---

53. ಇವುಗಳಲ್ಲಿಯ ಬಹಳಷ್ಟು ಪಾರಿಭಾಷಿಕ ಪದಗಳನ್ನು M. Eliade ಅವರು ತಮ್ಮ 'Yoga --- ' pp. 47-100 ಗಳಲ್ಲಿ ವಿವರವಾಗಿ ವಿಶ್ಲೇಷಿಸಿರುವರು. ನಾವು ಅವರ ಕೆಲವು ಪದಗಳ ಅನುವಾದಗಳನ್ನು ಬಳಸಿಕೊಂಡಿರುವೆವು.

54. ಅವರು ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ ಮತ್ತು ಸಮಾಧಿಗಳನ್ನು ಪಟ್ಟಿ ಮಾಡಿರುವರು.

55. ಸಂ. ಮತ್ತು ಅನು. ಫ್ಲೀಟ್, EI, V. no. A-B.

ಮುತ್ತಿನ ಸರ, ಬೌದ್ಧರೆಂಬ ಕನ್ನೈದಿಲೆಗಳನ್ನು ಮುಚ್ಚಿಕೊಳ್ಳುವಂತೆ ಮಾಡುವ
ಕಾಯ್ದ ಕಿರಣಗಳ ನೇಸರ ಆಗಿರುವ, ತಾರ್ಕಿಕನೂ, ವಿದ್ವಾಂಸನೂ ಆಗಿರುವ
ಸೋಮೇಶ್ವರನು ನೈಯಾಯಿಕರಿಗೆಲ್ಲ ನೇತಾರನೆನ್ನಿಸಿದ ಮಹತ್ತಮನು.[56]

ಕೇದಾರೇಶ್ವರ ದೇವಾಲಯದ ಕ್ರಿ.ಶ.1103 ರ ಶಾಸನದಲ್ಲಿ ಮೇಲೆ ಹೇಳಿದ ಎರಡೂ ಪದ್ಯಗಳನ್ನು ಕೆಳಗು ಮೇಲಾಗಿ ಬರೆಯಲಾಗಿದೆ.[57] ಫ್ಲೀಟರು ಹೇಳುವಂತೆ ಇಲ್ಲಿಯ ಅಕಳಂಕ (ಹೆಸರಾದ ಜೈನ ತಾರ್ಕಿಕ), ಲೋಕಾಯತ, ಸಾಂಖ್ಯಸಿದ್ಧಾಂತ ಹಾಗೂ ಮೀಮಾಂಸೆಗಳ ಬಗೆಗಿನ ಉಲ್ಲೇಖಗಳು ಗೊಂದಲದಿಂದ ಕೂಡಿವೆ. ಏಕೆಂದರೆ ಸೋಮೇಶ್ವರನು ಅವುಗಳನ್ನು ಬೆಂಬಲಿಸದೆ ವಿರೋಧಿಸಬೇಕಿದೆ. ಫ್ಲೀಟ್‌ರು ಇಲ್ಲಿ ಕೆಲವು ನಿಗೂಢವಾದ ಬೇರೆ ಬಗೆಯ ಅರ್ಥಗಳು' ಇದ್ದಿರಬಹುದೆಂದು ಯೋಚಿಸುತ್ತಾರೆ. ಆದರೆ ಅವೆಲ್ಲ ನೇರವಾಗಿ ಸರಿಯಾಗಿಯೇ ಇವೆಯೆಂಬುದು ನಮ್ಮ ಭಾವನೆ. ಅವು ಸರಿಯಾಗಿದ್ದರೆ ಬೌದ್ಧರನ್ನು ಕುರಿತಾದ ಉಲ್ಲೇಖ ಕೂಡ ಧನಾತ್ಮಕವಾದುದು. ಈ ಪರಿಚ್ಛೇದದ ನೈದಿಲೆಗಳು (ನೀರಜಾತ) ಹಗಲು ಹೊತ್ತಿನಲ್ಲಿ ಅರಳುವಂಥವುಗಳಾಗಿರುವ ಸಾಧ್ಯತೆ ಹೆಚ್ಚು, ಇರುಳಲ್ಲಿ ಅರಳುಂಥವುಗಳಲ್ಲ. ಆದುದರಿಂದ ಸೋಮೇಶ್ವರನು ಬೌದ್ಧರೆಂಬ ನೈದಿಲೆಗಳನ್ನು ಅರಳಿಸುವ ನೇಸರನೆನ್ನಿಸುವನು. ಸೋಮೇಶ್ವರನಿಗೆ ಎಲ್ಲ ಬಗೆಯ ಆಧ್ಯಾತ್ಮಿಕ ಸಿದ್ಧಾಂತಗಳ ಮೇಲಿರುವ ಪ್ರಭುತ್ವವನ್ನು ವ್ಯಕ್ತಪಡಿಸುವುದು ಈ ಪರಿಚ್ಛೇದದ ಮುಖ್ಯ ಗುರಿಯಾಗಿದೆ. ಬೌದ್ಧತತ್ತ್ವಜ್ಞಾನದಿಂದ ಹಿಡಿದು ಅಧ್ಯಾತ್ಮದ ಆರು ಶಾಖೆಗಳಾದ 'ಷಡ್ದರ್ಶನ'ಗಳನ್ನು ಕುರಿತ ಭಾಷ್ಯಗಳನ್ನು ಕೋಡಿಯ ಮಠದಲ್ಲಿಯೇ ರಚಿಸಲಾಯಿತಂತೆ. ವಾಚಸ್ಪತಿಮಿಶ್ರರು ಈ ಸಂಗತಿಗೆ ಒಂದು ಪೂರ್ವದೃಷ್ಟಾಂತವನ್ನು ನೀಡುತ್ತಾರೆ. ಅವರು 'ವೈಶೇಷಿಕ' ಒಂದನ್ನು ಬಿಟ್ಟು ಉಳಿದ ಪ್ರತಿಯೊಂದು ಸಾಂಪ್ರದಾಯಿಕ ತತ್ತ್ವಪದ್ಧತಿಯನ್ನು ಕುರಿತು ಗ್ರಂಥವನ್ನು ಬರೆದಿರುವರು. ಸಾಯಣ-ಮಾಧವರು ತಮ್ಮ 'ಸರ್ವದರ್ಶನ-ಸಂಗ್ರಹ'ದಲ್ಲಿ ತಮ್ಮ ತತ್ತ್ವಗಳನ್ನು ವಿವರಿಸಲೆಂಗು ತಮ್ಮ ಎದುರಾಳಿಗಳ ದೃಷ್ಟಿಕೋನಗಳನ್ನು ತಾತ್ಪೂರ್ತಿಕವಾಗಿ ಸ್ವೀಕರಿಸುತ್ತಾರೆ.

ಸೋಮೇಶ್ವರನ ಈ ಸುದೀರ್ಘ ಪ್ರಶಂಸೆಯು ಬಳ್ಳಿಗಾವೆಯ ಕ್ರಿ.ಶ.1103 ರ ದಾಖಲೆಗಳಲ್ಲೂ ಕಾಣಿಸುವ ಅಂತ್ಯಪ್ರಾಸಯುಕ್ತವಾದ ಸಂಯುಕ್ತ ವಿಶೇಷಣಗಳನ್ನೊಡಗೂಡಿ ಮುಂದುವರಿಯುತ್ತದೆ. ಇವುಗಳ ಮೊದಲ ವಿಶೇಷಣ ಪದವು 'ಪ್ರಾಣಾಯಾಮ' ಮತ್ತು 'ಪ್ರತ್ಯಾಹಾರ' ಇವೆರಡು ಪದಗಳನ್ನು ಬಿಟ್ಟು, 1094ರ ದತ್ತಿಯಲ್ಲಿ ನಮೂದಿಸಲಾದ ಯೋಗ ಸಾಮರ್ಥ್ಯಗಳನ್ನು ಪುನರಾವರ್ತಿಸುತ್ತದೆ. ಅವನ ಪ್ರಶಂಸೆ ಹೀಗೆ ಮುಂದುವರಿಯುತ್ತದೆ :

---

56. ಅದೇ, pp. 219-20.

57. ಅದೇ, ಪು. 219.

ವಿದ್ವಾಂಸರಿಗೆ ದಯಾಳುವು, ನ್ಯಾಯಶಾಸ್ತ್ರವೆಂಬ ನೈದಿಲೆಗಳ (ಹಗಲಿನಲ್ಲಿ ಅರಳುವ) ಗುಂಪಿಗೆ (ಅವನ್ನರಳಿಸುವ) ನೇಸರನು, ವೈಶೇಷಿಕರ ಕಡಲಿಗೆ ಭರತಿಯನ್ನು ತರುವ ಶರದೃತುವಿನ ಚಂದಿರನು, ಸಾಂಖ್ಯ ಆಗಮದಲ್ಲಿ ಪಳಗಿದವರಿಗೆ ಮಾಣಿಕ್ಯದ ಒಡವೆ ಎನ್ನಿಸಿದವನು, ಅವನು ಗುರುಗಳ ಪಾದಪಂಕಜಗಳ ಮೇಲಿರುವ ದುಂಬಿ, ಶಬ್ದಶಾಸ್ತ್ರವೆಂಬ ಮಾಮರಗಳ ತೋಪಿನ ವಸಂತ ಋತು, ತನ್ನ ವಿದ್ವತ್ತಿನ ಅಭಿವೃದ್ಧಿಯಿಂದ ಲಾಕುಲ ಸಿದ್ಧಾಂತಕ್ಕೆ ಹೊಸ ಜೀವನವನ್ನು ಒದಗಿಸಿದವನು, ತರ್ಕದಲ್ಲಿ ಸರಿಗಟ್ಟಲಾಗದಂತಹ ದೇವತೆಗಳ ಹೊಳೆಯ ಹೊನಲಿನಂತೆ ಇರುವವನು, ಆಪ್ತಾಲೋಚನೆಗಳನ್ನು ನೀಡಿ ತನ್ನ ಶಿಷ್ಯಗಣದ ಏಳಿಗೆಯನ್ನು ಸಾಧಿಸಿದವನು, ಸಾಹಿತ್ಯವಿದ್ಯೆಯೆಂಬ ಹಿರಿದಾದ ಹೊಳೆಯ ಹೊನಲನ್ನು ತನ್ನೊಡಲಲ್ಲಿ (ಬರಿದು ಮಾಡಿಕೊಳ್ಳುವ) ಒಂದು ಮಹಾಸಾಗರನು, ತನ್ನ ಅವಿರತ ಭಕ್ತಿಯ ಹೊನಲಿನಿಂದ ಪರಮೇಶ್ವರನನ್ನು (ಶಿವ) ಒಲಿಸಿಕೊಂಡವನು, ನಿರಪವಾದದ ಮತ್ತು ನಿಷ್ಕಲಂಕವಾದ ತಪಸ್ಸಿನಂತಹ ಸದ್ಗುಣಗಳಿಗೆ ಸಂಪೂರ್ಣ ಆಶ್ರಯಸ್ಥಾನನಾದವನು, ತನ್ನ ಕೀರ್ತಿಯ ಬೆಳದಿಂಗಳಿಂದ ಭೂಮಂಡಲವನ್ನೆಲ್ಲ ಸಂತಸಪಡಿಸಿದವನು.[58]

ಬಳ್ಳಿಗಾವೆಯ 1103ರ ಶಾಸನವು ಇದೇ ದಂಡನಾಯಕನಾದ ಗೋವಿಂದರಸನು ಸೋಮೇಶ್ವರನ ಪಾದಗಳನ್ನು ತೊಳೆದು ದಕ್ಷಿಣ ಕೇದಾರೇಶ್ವರ ದೇವಾಲಯಕ್ಕೆ ಧೂಪ, ದೀಪ, ನೈವೇದ್ಯಗಳಿಗಾಗಿ ನೀಡಿದ ಒಂದು ದತ್ತಿಯಾಗಿದೆ.[59] ಈ ಮೇಲಿನ ವಿಶೇಷಣಗಳಲ್ಲದೆ 'ಬಳ್ಳಿಗಾವೆಯ ತಾವರೆಗೆರೆಯ ದಕ್ಷಿಣ ಕೇದಾರೇಶ್ವರ ದೇವಾಲಯದ ಆಚಾರ್ಯ'ನೆಂದೂ ಅವನನ್ನು ಕರೆಯಲಾಗಿದೆ. ಇದರಿಂದ ಕಂಡುಬರುವ ಸಂಗತಿಯೆಂದರೆ ಸೋಮೇಶ್ವರನು ಏಕಕಾಲಕ್ಕೆ ನಗರೇಶ್ವರದೇವಾಲಯ, ಬ್ರಹ್ಮೇಶ್ವರ ದೇವಾಲಯ ಹಾಗೂ ದಕ್ಷಿಣ ಕೇದಾರೇಶ್ವರ ದೇವಾಲಯಗಳಿಗೆ (ಈ ಕಾಲದವರೆಗೆ ಅವನು ತನ್ನ ಮೊದಲಿನ ಹುದ್ದೆಗಳನ್ನು ಬಿಟ್ಟಿರದಿದ್ದರೆ)ಆಚಾರ್ಯನಾಗಿದ್ದನು.

ಈ ಗೋವಿಂದನು 'ಚಂದನ, ಹೂವು, ಧೂಪ, ದೀಪ, ನೈವೇದ್ಯಗಳಲ್ಲದೆ ಎಲ್ಲ ಬಗೆಯ ಸೇವೆಗಾಗಿ ಹಾಗೂ ಯತಿಗಳ ಮತ್ತು ಅಲ್ಲಿರುವ ಇತರರ ಆಹಾರಕ್ಕಾಗಿ ದಕ್ಷಿಣ ಕೇದಾರೇಶ್ವರ ದೇವಾಲಯಕ್ಕೆ ಕ್ರಿ.ಶ.1113ರಲ್ಲಿ ಇನ್ನೊಂದು ದತ್ತಿಯನ್ನು ನೀಡಿದನು.[60] ಈ ಶಾಸನವು 'ವಿಶ್ವನಾಥನ ವಾಸಸ್ಥಾನವನ್ನು ಕೊಂಡಾಡುವ ವೇದಗಳನ್ನು ಬ್ರಹ್ಮನ

58. ಸಂ. ಮತ್ತು ಅನು. ಫ್ಲೀಟ್, EI, V, 220.
59. ಸಂ. ಮತ್ತು ಅನು. ರೈಸ್, EC, VII, Sk. 98.
60. ಅದೇ. Sk. 99.

ಹೃದಯವೆಂಬ ಶಿಲೆಯ ಮೇಲೆ ಕೆತ್ತಲಾದ ಶಾಸನ ' ವೇ ಆದ ಲಕುಲೀಶನೆಂದು ಶಿವನನ್ನು ಸ್ತುತಿಸುತ್ತ ಶುರುವಾಗುತ್ತದೆ. ನಾವು ಈಗಾಗಲೇ ನಮೂದಿಸಿದಂತೆ ಈ ಶಾಸನವು ಯತಿಗಳಾದ ಕೇದಾರಶಕ್ತಿ, ಶ್ರೀಕಂಠ ಹಾಗೂ ಸೋಮೇಶ್ವರರನ್ನು 'ಕಾಳಾಮುಖ' ರೆಂದು ಗುರುತಿಸುತ್ತದೆ. ಸೋಮೇಶ್ವರನನ್ನು ಕೇವಲ ಶ್ರೀಕಂಠನ ಶಿಷ್ಯನೆಂದಷ್ಟೇ ಅಲ್ಲದೆ ಅವನ ಮಗನೆಂದು ಕೂಡ ಕರೆಯಲಾಗಿದ್ದು, ಈ ಮೊದಲಿನ ಶಾಸನಗಳಲ್ಲಿ ಕಂಡುಬಂದ ಒಂದೆರಡು ವಿಶೇಷಣ ಪದಗಳನ್ನೊಳಗೊಂಡ, ಅಂತ್ಯಪ್ರಾಸಗಳಿಂದ ಕೂಡಿದ ಸಂಯುಕ್ತ ಪದಗಳ ಸಾಲಿನಿಂದ ಅತಿಶಯವಾಗಿ ಶ್ಲಾಘಿಸಲಾಗಿದೆ.

ಅವನನ್ನು " ಸಾರಸ್ವತಮಹೋದಯ" ನೆಂದು ಗುರುತಿಸುವ ವಿಷೇಷಣ ಪದವೊಂದನ್ನು ಬಿಟ್ಟರೆ, ಎರಡು ಸಲ ಪಟ್ಟಿ ಮಾಡಲಾದ ವಿಶೇಷಣಗಳಲ್ಲಿ ಅದಾವ ಸ್ವಾರಸ್ಯವೂ ಕಾಣದು. 'ಸಾರಸ್ವತ' ಪದವು ಅವನ ಜಾತಿವಾಚಕ ಪದವಾಗಿರಬಹುದಾದಂತೆಯೇ 'ವಿದ್ವಾಂಸ' ಎಂದು ಕೂಡ ಅಭಿಪ್ರಾಯವನ್ನು ಹೊಂದಿರಬಹುದು. ಸಾರಸ್ವತರು ಬ್ರಾಹ್ಮಣ ಜಾತಿಯವರಾಗಿದ್ದು ಮುಖ್ಯವಾಗಿ ಪಂಜಾಬ ಮತ್ತು ಸಿಂಧಗಳಲ್ಲಿ ನೆಲೆಸಿದವರಾಗಿಯೂ ಕಾಶ್ಮೀರ ಹಾಗೂ ಕರ್ನಾಟಕಗಳಲ್ಲಿಯೂ ಪ್ರಮುಖರಾಗಿದ್ದರು. ಕಾಳಾಮುಖಯತಿಯನ್ನು ಈ ಜಾತಿಯವನೆಂದು ಗುರುತಿಸುವುದರಿಂದ, ಕಾಳಾಮುಖಯತಿಗಳಲ್ಲಿ ಕೆಲವರಾದರೂ ಬ್ರಾಹ್ಮಣರ ಸ್ಥಾನಮಾನಗಳನ್ನು ತಮ್ಮದೆಂದು ಸಾಧಿಸುತ್ತಿದ್ದರು. ಹಾಗೆಯೇ ಅದು ಕಾಳಾಮುಖರಿಗೆ ವಾಯವ್ಯದೊಡನೆ ಹಾಗೂ ಕಾಶ್ಮೀರದೊಡನೆ ಇದ್ದ ನಂಟನ್ನು ಸ್ಥಾಪಿಸುವಂತೆ ಕಾಣುತ್ತದೆ. ಕಾಳಾಮುಖರೂ ಒಳಗೊಂಡಂತೆ ಕರ್ನಾಟಕದ ಇಂದಿನ ಸಾರಸ್ವತರು ಕಾಶ್ಮೀರದಿಂದ ಕೆಳಕ್ಕೆ ಇಳಿದು ಬಂದ ವಲಸೆಗಾರನಾಗಿರುವ ಸಾಧ್ಯತೆಯಿದೆ. ಹನ್ನೊಂದನೆಯ ಶತಮಾನದ ಉತ್ತರಾರ್ಧದಲ್ಲಿ ಕಾಳಾಮುಖರ ಆಶ್ರಯದಾತನಾದ ಆರನೆಯ ವಿಕ್ರಮಾದಿತ್ಯನ ಓಲಗಕ್ಕೆ ಕಾಶ್ಮೀರದಿಂದ ವಲಸೆ ಬಂದ ಕವಿ ಬಿಲ್ಹಣನು ಒಬ್ಬ ಹೆಸರಾದ ವ್ಯಕ್ತಿಯಾಗಿದ್ದನು.[61] ಬಿಲ್ಹಣನೂ ಕೂಡ ಒಂದು ಬಗೆಯಲ್ಲಿ ಕಾಳಾಮುಖರೊಂದಿಗೆ ಜೊತೆಗೂಡಿದವನಾಗಿದ್ದನೆಂಬುದು ಗ್ರಹಿಸಲಾಗದ ಸಂಗತಿಯೇನಲ್ಲ.

ಇದೇ ಸುಮಾರಿಗೆ ಸೋಮೇಶ್ವರನೆಂಬುವವನು ಬಳ್ಳಿಗಾವೆಯಿಂದ ಅಷ್ಟೇನೂ ದೂರದಲ್ಲಿರದ ಧಾರವಾಡ ಜಿಲ್ಲೆಯ ಸೂಡಿ ಗ್ರಾಮದ ನಗರೇಶ್ವರ ಮತ್ತು ಅಚಲೇಶ್ವರ ದೇವರಿಗೆ ಸಂಬಂಧಿಸಿದವನಾಗಿದ್ದನು. ಇವನನ್ನು ಕುರಿತು ಕ್ರಿ.ಶ.1060, 1069-70, 1075 ಹಾಗೂ 1084ಗಳ ಶಾಸನಗಳಲ್ಲಿ ನಮೂದಿಸಲಾಗಿದೆ.[62] ಇವನನ್ನು ಮೂವರ ಕೋಣೆಯ ಸಂತತಿಯ ಯತಿಯೆಂದು ತೋರಿಕೆಗೆ ಮಾತ್ರ ಗುರುತಿಸಬಹುದು. ಆದರೆ ಹಾಗೆಂದು

---

61. ಮೋಡಿ ವಿ. ಎಸ್. ಪಾಠಕ, 'Ancient Historians of India,' pp. 56-57.
62. ಸಂ. ಮತ್ತು ಅನು. ಬಾರ್ನೆಟ್, EI. XV, nos. F-I.

ಸ್ಥಾಪಿಸಲಾಗದು. ಏಕೆಂದರೆ ಸೂಡಿಯ ಯಾವುದೇ ಶಾಸನವೂ ಕೂಡ ಅವನ ಬೋಧಕ ಗುರುಗಳನ್ನು ಇಲ್ಲವೆ ಶಕ್ತಿ ಪರಿಷತ್ತನ್ನು ಉಲ್ಲೇಖಿಸುವುದಿಲ್ಲ. ಏನಿದ್ದರೂ 1060ರ ಶಾಸನದ ಅಸಾಧಾರಣವಾದ ಹೇಳಿಕೆಯಿಂದ ಕಾಳಾಮುಖರು ಈ ದೇವಾಲಯದ ಆಶ್ರಯಕ್ಕೆ ಇದ್ದರೆಂಬ ಸಂಗತಿ ತಿಳಿದುಬರುತ್ತದೆ:

> ಕಾಳಾಮುಖರಾದ ಗೊರವರು (ಶೈವ ಯತಿಗಳ ಮಠದವರು) ಧರ್ಮನಿಷ್ಠರು ಆಗಿರದಿದ್ದರೆ, ಚೆಲುವೆಯರಾದ ವಾರಾಂಗನೆಯರ ಗುಂಪು (ವರಕಾಂತಾಸಂಕುಲವ್ ) ಸಂತೋಷಗೋಷ್ಠಿಗೆ ಬರಲು ಉದಾಸೀನರಾಗಿದ್ದರೆ, ವಿದ್ಯಾರ್ಥಿಗಳು ನಿರಂತರವಾಗಿ ಅಧ್ಯಯನ ಮಾಡದವರಾಗಿದ್ದರೆ, ಪಾರುಪತ್ಯೆಗಾರನು ಅವರಿಗೆ ಅಲ್ಲಿ ಉಳಿದುಕೊಳ್ಳಲು ಅವಕಾಶವನ್ನು ನೀಡಕೂಡದು.[63]

ಇಲ್ಲಿಯ ಕಾಳಾಮುಖರು ಒಂದು ನಿರ್ದೇಶಕ ಮಂಡಲಿಯ ಕೈಕೆಳಗೆ ದೇವಸ್ಥಾನದ ಸುಸ್ಥಿತಿ ಹಾಗೂ ನಿರ್ವಹಣೆಗಳನ್ನು ನೋಡಿಕೊಳ್ಳುತ್ತಿದ್ದರೆಂದು ಕಾಣುತ್ತದೆ. ಬಹುಶಃ ಸರಕಾರಿ ಅಧಿಕಾರಿಗಳು ಈ ಮಂಡಲಿಯ ಸದಸ್ಯರಾಗಿರುವಂತಿದೆ. ಚೆಲುವೆಯರಾದ ಈ ಹೆಣ್ಣುಗಳೆಂದರೆ ಬಹುಮಟ್ಟಿಗೆ 'ಸಾರ್ವಜನಿಕ ಹೆಣ್ಣುಗಳು' ( ಸೂಳೆಯರು, ಅಂದರೆ ದೇವದಾಸಿಯರು) ಎಂದು ಕಾಣುತ್ತದೆ. ಈ ದತ್ತಿಯಲ್ಲಿ ದಾನ ಪಡೆದ ಮತ್ತು ಎದ್ದು ಕಾಣುವ ವ್ಯಕ್ತಿಗಳೆಂದರೆ ಇವರು.

ಸೂಡಿಯ ಶಾಸನಗಳು ಸೋಮೇಶ್ವರನೆಂಬ ಯತಿಯನ್ನು ಹೊಗಳುತ್ತವೆ. ಇವು ಅಬ್ಬಲೂರು ಹಾಗೂ ಬಳ್ಳಿಗಾವೆ ಶಾಸನಗಳಲ್ಲಿಯ ಹೊಗಳಿಕೆಗಳನ್ನು ಹೋಲುತ್ತವೆ. 1060 ಯ ಶಾಸನ ಹೀಗೆನ್ನುತ್ತದೆ :

> ಚಕ್ರವರ್ತಿಗಳ ಕಿರೀಟದ ಚೂಡಾಮಣಿಗಳಿಂದ ಉಜ್ಜಿದ ಗಾಯಗಳಿಂದ ಉಂಟಾದ ಕಲೆಗಳುಳ್ಳ ಪದ್ಮಪಾದನೇ, ವೈಶೇಷಿಕರ ಚೂಡಾರತ್ನನೇ, ನೈಯಾಯಿಕರೆಂಬ ನೈದಿಲೆಗಳಿಗೆ ನೇಸರನೆನ್ನಿಸಿದವನೇ ಸಾಂಖ್ಯದಲ್ಲಿ ಪಾರಂಗತನೇ, ವ್ಯಾಕರಣಶಾಸ್ತ್ರದಲ್ಲಿ ಬ್ರಹ್ಮನಾದವನೆ, ನಿನಗೆ ಯಾರು ಸಮಾನಸ್ಕಂಧರು ?' ಈ ಕಾರಣಕ್ಕಾಗಿ, ಮೀಮಾಂಸಕರಿಗೆ ಸೂಕ್ತನಾದ 'ಗೋತ್ರತ್ರಾಸಿ' (ಕುಟುಂಬ-ಅಥವಾ ಪರ್ವತವನ್ನು ಅಲುಗಾಡಿಸುವವನು = ಇಂದ್ರನು) ಯಾದ ಮಹಾಯತಿ ಸೋಮೇಶ್ವರನು ಭೂಮಂಡಲದಲ್ಲೆಲ್ಲ ಹೆಸರುವಾಸಿಯಾಗಿರುವನು.[64]

---

63. ಅದೇ. ಪು. 93.

64. ಅದೇ. ಪು. 92.

1075 ದ ಶಾಸನವು ಇದಕ್ಕೆ ಇನ್ನಷ್ಟನ್ನು ಸೇರಿಸುತ್ತದೆ :

> ಬೌದ್ಧನಿಗೆ ಆದಿ ಬುದ್ಧನು, ಅಕಳಂಕನಿಗೆ ಮೂಲ ಜಿನ, ತರ್ಕಶಾಸ್ತ್ರದ (ಪ್ರಮಾಣ ಮಾರ್ಗದ) ವಿದ್ಯಾರ್ಥಿಗೆ ಅಕ್ಷಪಾದ (ಗೋತಮ) ಆಧ್ಯಾತ್ಮಶಾಸ್ತ್ರದ ವಿದ್ಯಾರ್ಥಿಗೆ ಎಲ್ಲ ಬಗೆಯ ಸೂಕ್ಷ್ಮ ಅರ್ಥಗಳ ವಿವೇಚನೆಯಲ್ಲಿ ಪಳಗಿದ ಕಣಾದನು, ಪವಿತ್ರವಾದ ಧರ್ಮಗ್ರಂಥಗಳ ವಿದ್ಯಾರ್ಥಿಗೆ ಜೈಮಿನಿ, ವ್ಯಾಕರಣ ಕ್ಷೇತ್ರದ ವಿದ್ಯಾರ್ಥಿಗೆ ಬೃಹಸ್ಪತಿ, ಎಂಬಂತೆ ನಗರೇಶ್ವರ (ದೇವಾಲಯದ) ಒಡೆಯನು ಹೆಸರಾಗಿದ್ದನು.[65]

ಮುಂದುವರಿಯುತ್ತ, ಅವನು ಯೋಗದ ಲಕ್ಷಣಗಳಾದ ಯಮ, ನಿಯಮ, ಸ್ವಾಧ್ಯಾಯ, ಧ್ಯಾನ, ಧಾರಣಾ, ಮೌನಾನುಷ್ಠಾನ, ಜಪ ಹಾಗೂ ಸಮಾಧಿಗಳನ್ನು ಆಚರಿಸುವನಲ್ಲದೆ, ಲಾಕುಲಾಗಮಕ್ಕೆ ಅನುಕೂಲತೆಯನ್ನು ಉಂಟುಮಾಡುವವನೆಂದು ಹೇಳಲಾಗಿದೆ. ಅವನು 'ಸಾಂಖ್ಯಸಿದ್ಧಾಂತದ ಸರೋವರದಲ್ಲಿ ವಿಹರಿಸುವ ರಾಜಹಂಸನಾಗಿದ್ದನು, ನ್ಯಾಯಸಿದ್ಧಾಂತವೆಂಬ ಸ್ತ್ರೀಯ ಚೂಡಾರತ್ನನಾಗಿದ್ದನು, ವೈಶೇಷಿಕಸಿದ್ಧಾಂತಕ್ಕೆ ಚೂಡಾಮಣಿಯಾಗಿದ್ದನು.' ಈ ಬಣ್ಣನೆ ಹಾಗೂ ಅಬ್ಬಲೂರಿನ 1101-04ರ ದತ್ತಿಯ ಬಣ್ಣನೆಯ ನಡುವಿನ ಸಾಮ್ಯಗಳು ಹೇರಳವಾಗಿದ್ದು, ಇವುಗಳನ್ನು ಅಲಕ್ಷ್ಯಿಸುವಂತಿಲ್ಲ. ಅದರಲ್ಲಿಯೂ ವಿರೋಧಿ ಸಿದ್ಧಾಂತಗಳ ಮೇಲಿನ ಪ್ರಭುತ್ವವನ್ನು ಕುರಿತಾದ ಅವನ ಚಿತ್ರಣವಂತೂ ಅಲಕ್ಷ್ಯಿಸುವ ಹಾಗೆಯೇ ಇಲ್ಲ. ಹೀಗಾಗಿ ಅಬ್ಬಲೂರು ಹಾಗೂ ಬಳ್ಳಿಗಾವೆಯ ಸೋಮೇಶ್ವರ ಒಬ್ಬನೇ ಎನ್ನುವುದನ್ನು ಒಪ್ಪಿಕೊಳ್ಳುವತ್ತ ನಮ್ಮ ಒಲವಿದೆ.

ಮುಂದಿನ ತಲೆಮಾರುಗಳ ಹಲವು ಶಾಸನಗಳಲ್ಲಿಯೂ ಸೋಮೇಶ್ವರನನ್ನು ಕೊಂಡಾಡಲಾಗಿದೆ. ಕ್ರಿ.ಶ.1129ರ ಕೇದಾರೇಶ್ವರ ಶಾಸನವು ಕೇದಾರಶಕ್ತಿಯಿಂದ ಹಿಡಿದು ಗೌತಮನವರೆಗಿನ ಯತಿ ಪರಂಪರೆಯನ್ನು ಪಟ್ಟಿ ಮಾಡುವುದಲ್ಲದೆ, 'ಜಗತ್ತಿಗೆ ಸಮೃದ್ಧಿಯನ್ನೊದಗಿಸುವ ಮಠವೆಂಬಂತಿರುವ ಕೇದಾರದೇವಾಲಯದ ಅದೃಷ್ಟದ ಬೀಜವು ಸೋಮೇಶ್ವರನಿಂದ ಬಿತ್ತಲ್ಪಟ್ಟಿತ್ತು' ಎಂಬುದಾಗಿ ಸಮರ್ಥಿಸಿಕೊಳ್ಳುತ್ತದೆ.[66] ಗೌತಮನ ಶಿಷ್ಯ ಎರಡನೆಯ ವಾಮಶಕ್ತಿಯ ಶಾಸನವು ಕೂಡ ಇದೇ ಬಗೆಯ ಹೇಳಿಕೆಯನ್ನು ಹೊಂದಿದೆ.[67] 1164ರ ತ್ರುಟಿತ ಶಾಸನವೊಂದು ಸೋಮೇಶ್ವರನನ್ನು ಶ್ರೀಕಂಠನ ಶಿಷ್ಯನೆಂದು ನಮೂದಿಸುತ್ತದೆ.[68] ಗದುಗಿನ ತ್ರಿಕೋಟೇಶ್ವರ ದೇವಾಲಯದ 1191 ಹಾಗೂ 1192ರ

---

65. ಅದೇ. ಪು. 99.
66. ಸಂ. ಮತ್ತು ಅನು. ರೈಸ್, EC, VII, Sk. 100.
67. ಅದೇ. Sk. 104.
68. ಅದೇ, Sk. 108.

ಶಾಸನಗಳಲ್ಲಿ ಆಚಾರ್ಯರುಗಳ ಪಟ್ಟಿಯು ಸೋಮೇಶ್ವರದೇವನಿಂದ ಶುರುವಾಗುತ್ತದೆ.[69] ಮೇಲ್ಗಡೆಯಲ್ಲಿ ಈಗಾಗಲೆ ನಮೂದಿಸಿದಂತೆ 1192ರ ಶಾಸನವು ಅವನ ಹೆಸರಿನೊಡನೆ 'ಕಾಳಾಮುಖ ಆಚಾರ್ಯ' ನೆಂಬ ಒಂದು ಗಮನಾರ್ಹವಾದ ಬಿರುದನ್ನು ಸೇರ್ಪಡಿಸುತ್ತದೆ.

ಸೋಮೇಶ್ವರನ ತರುವಾಯದ ಯತಿ ಪರಂಪರೆಯು ವಾದಿವಿದ್ಯಾಭರಣನೆಂದು ಕರೆಯಲಾದ ವಿದ್ಯಾಭರಣನಿಂದ ಹಿಡಿದು ಒಂದನೆಯ ವಾಮಶಕ್ತಿ ಹಾಗೂ ಗೌತಮ ಮುನಿಯವರೆಗೆ ಇರುವಂತೆ ಕಾಣುತ್ತದೆ. 1129ರ ಕೇದಾರೇಶ್ವರ ಶಾಸನದಲ್ಲಿ ಈ ಮೂವರಂತೆಯೇ ಇವರ ಮೊದಲಿನವವರೆಲ್ಲರೂ ಕಾಣಿಸಿಕೊಳ್ಳುತ್ತಾರೆ. ವಿದ್ಯಾಭರಣನ ವರ್ಣನೆಯು ಈ ಯತಿಗಳು ತಮ್ಮ ಎದುರಾಳಿಗಳಾದ ಬೌದ್ಧ, ಮೀಮಾಂಸಾ ಹಾಗೂ ಸ್ಯಾದ್ವಾದ ಇಲ್ಲವೆ ಜೈನರ ಅಜ್ಞೇಯತಾವಾದಗಳ ಬಗೆಗೆ ಅದಾವ ಭಾವನೆಯನ್ನು ತಳೆದಿದ್ದರೆಂಬುದನ್ನು ವಿಶದಪಡಿಸುತ್ತದೆ.:

> ಅದೃಷ್ಟವಂತನಾದ ಆ 'ಮುನಿಪ'ನ (ಸೋಮೇಶ್ವರ) ತಮ್ಮನು ನಿರ್ಮಲವಿದ್ಯಾ ಆಭರಣ, ಕೀರ್ತಿಕಾಂತಾ ಆಭರಣ ಎನಿಸಿದ ವಿದ್ಯಾಭರಣನೆಂಬುವನು ತುಂಬ ಪ್ರಶಂಸೆಗೀಡಾದ ಭಾರಭೂತಿಗೆ (ಗುರುತಿಸಲು ಆಗಿಲ್ಲ) ಸರಿಸಮನಾಗಿದ್ದನು. ಬೌದ್ಧರೆಂಬ ಹೆಬ್ಬಂಡೆಗಳನ್ನು ಒಡೆದುಬಿಡುವ ಸಿಡಿಲು, ಮೀಮಾಂಸಾ ಪಂಥವೆಂಬ ಆನೆಯ ಶಿರವನ್ನು ಹರಿದೊಗೆಯುವ ಸಿಂಹ, ಸ್ಯಾದ್ವಾದ ನೈದಿಲೆಗಳ ಸಮೂಹಕ್ಕೆ ನೇಸರ, ನೈಯಾಯಿಕರ ಮುನಿ ಮತ್ತು ಆಭರಣನೆನಿಸಿದ ವಿದ್ಯಾಭರಣನು ಥಳಥಳನೆ ಹೊಳೆಯುತ್ತಾನೆ.[70]

ವಿದ್ಯೆಯ ಅಭಿವೃದ್ಧಿಗಾಗಿ ತನ್ನೆಲ್ಲ ವೇಳೆಯನ್ನು ವಿನಿಯೋಗಿಸಲೆಂದು ವಿದ್ಯಾಭರಣನು ಮಠದ "ಕಾರ್ಯಕಲಾಪಗಳನ್ನೆಲ್ಲ' ತನ್ನ ಹಿರಿಯ ಶಿಷ್ಯನಾದ ವಾಲ್ಮೀಕಿಮುನೀಶ್ವರನಿಗೆ ವಹಿಸಿಕೊಟ್ಟನು. ಇಷ್ಟಾಗಿ ಚಾಲುಕ್ಯ ಅರಸು ಮುಮ್ಮಡಿ ಸೋಮೇಶ್ವರನು ದೇವಾಲಯಕ್ಕೆ ದತ್ತಿ ನೀಡಲೆಂದು 1129ರಲ್ಲಿ ವಿದ್ಯಾಭರಣನಲ್ಲಿಗೆ ಬಂದಿದ್ದನು. ದತ್ತಿಯ ವಿವರಗಳನ್ನು ಅಂದರೆ ದೇವಾಲಯದ ಸುಸ್ಥಿತಿ ಹಾಗೂ ದೇವರ ಪೂಜೆಗೆಂದು ತದವಣಲೆ ಗ್ರಾಮವನ್ನು ಕಾಣಿಕೆಯಾಗಿ ನೀಡಿದ ಬಳಿಕ ಶಾಸನವು ಒಂದು ಅಸಾಧಾರಣ ವಿವರಣೆಯೊಂದಿಗೆ ಮುಂದುವರಿಯುತ್ತದೆ. "ವಿದ್ಯೆಯ ಸಂತಸಗಳನ್ನು ಹಾಗೂ ಯೋಗದ ಸುಖಾವಸ್ಥೆಯನ್ನು

---

69. ಸಂ. ಎಫ್. Kielhorn, 'Gadag Inscriptions of the Yadava, Bhillama,' EI. III (1894-95), 217-220 ಮತ್ತು ಸಂ. H. Lüders. EI, VI, 89-97. ಎರಡನೆಯ ಆವೃತ್ತಿಯನ್ನು ಜೆ. ಎಫ್. ಫ್ಲೀಟ್‌ರು ಅನುವಾದಿಸಿ ಸಂಪಾದಿಸಿದ್ದರು. 'Notes on Inscriptions at Gaddak in the Dambal Taluka of the Dārwād District,' IA, II (1873), 296-303.
70. ಸಂ. ಮತ್ತು ಅನು. ರೈಸ್, EC, VII, Sk. 100.

ನಾಶಮಾಡಲು ಕಾರಣವಾದುದೆಂದು ತುಚ್ಛತೆಯಿಂದ ಮಠಾಧಿಪತಿಸ್ಥಾನವನ್ನು ವಿಶ್ವವಿಖ್ಯಾತನಾದ ತನ್ನ ಹಿರಿಯ ಶಿಷ್ಯ, ಗೌತಮಮುನಿಗೆ ವಹಿಸಿಕೊಟ್ಟನೆಂಬುದನ್ನು ವಿವರಿಸುತ್ತದೆ. ಸೋಮೇಶ್ವರನಿಂದ ನೆಡಲ್ಪಟ್ಟ ಕೇದಾರೇಶ್ವರನೆಂಬ ಮರವು ಒಂದನೆಯ ವಾಮಶಕ್ತಿಯ ಕೈಯಲ್ಲಿ 'ರೆಂಬೆ ಕೊಂಬೆಗಳನ್ನು ಹೊರಚಾಚುತ್ತ, ಚಿಗುರಿ, ಹೂಬಿಟ್ಟು ವಿಶ್ವದ ತುಂಬೆಲ್ಲ ಹರಡಿಕೊಂಡಿತ'ಲ್ಲದೆ ಮಹಾ ಗೌತಮಾಚಾರ್ಯನಿಂದಾಗಿ ಕಾಯಿಬಿಟ್ಟಿತೆಂಬುದನ್ನು ಹೇಳುತ್ತ, ಈ ಭಾಗವು ಮುಕ್ತಾಯಗೊಳ್ಳುತ್ತದೆ. ಇಲ್ಲಿ ವಿದ್ಯಾಭರಣನ ಹೆಸರನ್ನು ನಮೂದಿಸಲಾಗಿಲ್ಲ. ಆದರೆ 'ಪುರಾತನ ಗೌತಮನೇ ಮೈದಳೆದು ಬಂದವನಾದ ಇಂದಿನ' ಈ ಗೌತಮನನ್ನು ಕಾಪಾಡೆಂದು ವಿದ್ಯಾಭರಣನು ಕೇದಾರೇಶ್ವರನನ್ನು ಆಜ್ಞಾಪಿಸಿದನೆಂದು ಶಾಸನವು ದೇವ ದೇವತೆಗಳನ್ನು ಕುರಿತಾದ ತನ್ನ ಪ್ರಾರ್ಥನೆಯಲ್ಲಿ ಹೇಳುತ್ತದೆ.

ಇದೇ ಸುಮಾರಿಗೆ ಮಠದ ಪರಂಪರೆಯಲ್ಲಿ ಯಾವುದೋ ಒಂದು ಅಸಾಧಾರಣ ಘಟನೆ ನಡೆದುಹೋದಂತೆ ಕಾಣುತ್ತದೆ, ಫ್ಲೀಟ್ ಅವರ ಟಿಪ್ಪಣಿಯಂತೆ (EI, V, 224), 'ವಾಮಶಕ್ತಿ ಹಾಗೂ ಗೌತಮರನ್ನು ವಿದ್ಯಾಭರಣನ ಪ್ರಮುಖ ಶಿಷ್ಯರೆಂದು ಏಕೆ ಕರೆಯಲಾಗಿದೆ? ಎಂಬ ಬಗೆಗೆ, ಈ ಶಾಸನದಲ್ಲಿ ಯಾವ ವಿವರಣೆಯೂ ಇಲ್ಲ. ಇದೇ ರೀತಿ, ವಿದ್ಯಾಭರಣನು ವಿದ್ಯೆಯ ಸಂತೋಷಗಳಿಗೆ ತನ್ನನ್ನು ಮೀಸಲಾಗಿರಿಸಿಕೊಂಡುದಾಗಲಿ ಅಧಿಕಾರವು ಸ್ಥೈರ್ಯಕ್ಕೆ ವಿನಾಶಕಾರಿ " ಯಾಯಿತೆಂದು "ಖಂಡಿಸಿ"ದುದಾಗಲಿ ಇಲ್ಲವೆ ಅದಕ್ಕಾಗಿ ವ್ಯಥೆಪಟ್ಟುದಾಗಲಿ ಏಕೆಂಬುದನ್ನು ಮತ್ತು ಗೌತಮನನ್ನೂ ಮಠಾಧಿಪತಿಯನ್ನಾಗಿ ನೇಮಿಸಬೇಕಾಗಿ ಬಂದುದೇಕೆ?- ಎಂಬುದನ್ನೂ ಈ ಶಾಸನ ವಿವರಿಸುವುದಿಲ್ಲ. ಮೊದಲನೆಯ ಪ್ರಶ್ನೆ ತುಸು ಗೊಂದಲವುಂಟುಮಾಡುವಂತಿದ್ದು, ಎರಡನೆಯದು ಫ್ಲೀಟರು ಮಾಡಿದ ಪದಗಳ ಅಸಮರ್ಪಕವಾದ ಲಿಪ್ಯಂತರವನ್ನು ಆಧರಿಸಿದುದು. ಸುಖವು ಸ್ಥಿರತೆಯ ನಾಶಕ್ಕೆ ಕಾರಣವಾಗಿರದೆ, ವಿದ್ಯಾಭರಣನಿಗೆ ನೀಡಲಾದ ಕಾಣಿಕೆಯೇ ಅವನ ಸುಖದ ವಿನಾಶಕ್ಕೆ ಕಾರಣವಾಗಿದೆ. ಇಲ್ಲಿಯ ಮುಖ್ಯ ಸಮಸ್ಯೆಯೆಂದರೆ, ವಿದ್ಯಾಭರಣನ ಸ್ಥಾನಕ್ಕೆ ಮುಂದಿನವರನ್ನು ಆಯ್ಕೆಮಾಡಿಕೊಳ್ಳುವಾಗ ಗೌತಮನಿಗೆ ಅನುಕೂಲವಾಗಲೆಂದು ವಾಮಶಕ್ತಿಯನ್ನು ಪಕ್ಕಕ್ಕೆ ತಳ್ಳಿದ್ದೇಕೆ ?- ಎಂಬುದು. ವಿದ್ಯಾಭರಣನು ವಾಮಶಕ್ತಿಗೆ 'ಮಠದ ಕಾರ್ಯಕಲಾಪಗಳನ್ನಷ್ಟೇ'ಹಸ್ತಾಂತರಿಸಿದನೆಂಬುದನ್ನು ಇಲ್ಲಿ ಒತ್ತಿ ಹೇಳಬೇಕಿದೆ. ವಾಮಶಕ್ತಿಯು ಮುಂದೆ ಎಂದಾದರೂ ಮಠಾಧಿಪತಿಪದವಿಯನ್ನು ಪಡೆದನೇ ?- ಎಂಬ ಬಗೆಗೆ ಶಾಸನ ಏನನ್ನೂ ಹೇಳುವುದಿಲ್ಲ. ವಿದ್ಯಾಭರಣನು ಈ ಪದವಿಯ ಗೌರವವನ್ನು ತನಗಾಗಿ ಕಾದಿರಿಸಿಕೊಂಡಂತಿದೆ, ಚಾಲುಕ್ಯರ ಮುಮ್ಮಡಿ ಸೋಮೇಶ್ವರನು 1129ರಲ್ಲಿ ದತ್ತಿಯನ್ನು ನೀಡಲೆಂದು ಇವನಲ್ಲಿಗೆ ಬಂದುದು, ಅದನ್ನು ಇವನಿಗೇ ನೀಡಲೆಂದು. ಆಗ ವಾಮಶಕ್ತಿಯನ್ನು ಮಠದ ಕಾರ್ಯನಿರ್ವಾಹಕ ನಿರ್ದೇಶಕನನ್ನಾಗಿ ಮಾತ್ರ ನೇಮಿಸಲಾಗಿದ್ದು, ಗೌತಮನ ನೇಮಕಾತಿಯಾಗುವ ಮೊದಲೇ ವಾಮಶಕ್ತಿಯು ಮರಣ ಹೊಂದಿರುವ ಸಾಧ್ಯತೆಯಿದೆ ಅಥವಾ ಅದಾವುದೋ ಗೊತ್ತಿರದ ಕಾರಣದಿಂದಾಗಿ ಆತನನ್ನು

ಅಲಕ್ಷಿಸಿರುವ ಸಾಧ್ಯತೆಯಿದೆ. ಈ ಶಾಸನವನ್ನು 1129ರ ಮುಂದಿನ ಕಾಲದಲ್ಲಿ ಬರೆದಿರಬಹುದೆಂದು ಫ್ಲೀಟ್ ಇವರು ಯೋಚಿಸುತ್ತಾರೆ. ಆದರೆ ಇದು ಹೀಗೇಕೆ ನಡೆಯಬೇಕೆಂಬ ಬಗೆಗೆ ನಮಗಂತೂ ಗಮನಾರ್ಹ ಕಾರಣವು ಕಾಣುತ್ತಿಲ್ಲ.

1149ರ ಕೇದಾರೇಶ್ವರ ದೇವಾಲಯದ ದತ್ತಿಯಲ್ಲಿ ಗೌತಮುನನ್ನು ವಾದಿವಿದ್ಯಾಭರಣ ಪಂಡಿತದೇವನ ಶಿಷ್ಯನೆಂದು ಕರೆಯಲಾಗಿದೆ.[71] ಅಬ್ಬಲೂರಿನ ಬ್ರಹ್ಮೇಶ್ವರ ದೇವಾಲಯದ ಕ್ರಿ.ಶ.1130 ಹಾಗೂ 1144ರ ದತ್ತಿ ಶಾಸನದಲ್ಲಿ ವಿದ್ಯಾಭರಣನಿಗೆ ಇದೇ ವಿಸ್ತೃತವಾದ ಬಿರುದನ್ನು ನೀಡಲಾಗಿದೆ.[72] ಈ ದತ್ತಿಯು 'ಮೂವರ ಕೋಣೆಯ ಸಂತತಿಯ ವಿದ್ಯಾಭರಣಪಂಡಿತದೇವನ ಶಿಷ್ಯ'ನಾದ ಜ್ಞಾನಶಕ್ತಿಪಂಡಿತದೇವನೆಂಬ ಹೊಸ ಯತಿಯನ್ನು ನಮಗೆ ಪರಿಚಯಿಸುತ್ತದೆ. ಈ ಶಾಸನವು ಅಬ್ಬಲೂರಿನ ಬ್ರಹ್ಮೇಶ್ವರ ದೇವಾಲಯವನ್ನು ಬಮ್ಮಗಾವುಂಡನ ತಂದೆ ಅಜ್ಜಂದಿರಿಂದ ಏಳಿಗೆ ಹೊಂದಿತ್ತೆಂದೂ ಇದೇ ರೀತಿ ಅವನೂ ಈ ದೇವಾಲಯಕ್ಕಾಗಿ ದಾನಧರ್ಮಗಳನ್ನು ನೀಡಬೇಕೆಂದೂ ಅವನಿಗೆ ಜ್ಞಾಪಕ ಮಾಡಿಕೊಡಲಾಯಿತೆಂಬುದನ್ನು ದಾಖಲಿಸುತ್ತದೆ. ಈ ಬಗೆಯಾಗಿ ಬಮ್ಮಗಾವುಂಡನು 'ಶಿವಭಕ್ತಿಯೆಂಬ ಹೆಣ್ಣಿನ ಮಿಲನಕ್ಕೆ ಎಂದಿಗಿಂತಲೂ ಹೆಚ್ಚು ಕೆರಳಿದ್ದನು.' ಆಗ, ಅವನೊಂದು ಕುದುರೆಯನ್ನೇರಿ ವೇಗದಿಂದ ಓಡಿಸಿ ಅದು ಕ್ರಮಿಸಿದಷ್ಟು ನೆಲವನ್ನು ದಾನ ಕೊಡುವುದಾಗಿ ಮಾತುಕೊಟ್ಟನು. ಅಸಾಮಾನ್ಯವಾದ ಈ ಕಿರಿಯ "ಅಶ್ವಮೇಧ"ದ ತರುವಾಯ ಅವನು ಜ್ಞಾನಶಕ್ತಿಗೆ ತನ್ನ ಮಾತಿನಂತೆ ಅಷ್ಟು ನೆಲವನ್ನು ದಾನಮಾಡಿದನು. ಇದು ನಡೆದುದು 1130ರಲ್ಲಿ. ಮಲ್ಲಿಭಾವರಸ ಎಂಬ ದಂಡನಾಯಕನು 1144ರಲ್ಲಿ ಬ್ರಹ್ಮೇಶ್ವರ ದೇವಾಲಯಕ್ಕೆ ಇನ್ನೊಂದು ದತ್ತಿಯನ್ನು ನೀಡಿದನು. ಇವೆರಡೂ ದತ್ತಿಗಳು ಬಮ್ಮಗಾವುಂಡ ಮತ್ತು ಮಹಾಯತಿಯಾದ ಜ್ಞಾನಶಕ್ತಿದೇವನಿಂದ 'ಕಾಪಾಡಲಾದವುಗಳು.' ಬಳ್ಳಿಗಾವೆಯ ತ್ರಿಪುರಾಂತಕ ದೇವಾಲಯದ ಇಸವಿ 1150 ಮತ್ತು 1159ರ ಎರಡು ದತ್ತಿಗಳು ಜ್ಞಾನಶಕ್ತಿಯೆಂಬ ಒಬ್ಬ ಯತಿಯ ಹೆಸರನ್ನು ನಮೂದಿಸುವುವಾದರೂ, ಅವನು ಇದೇ ವ್ಯಕ್ತಿಯಾಗಿರುವ ಸಾಧ್ಯತೆ ಕಡಿಮೆ.[73]

ಗೌತಮುನು ಕೇದಾರೇಶ್ವರ ದೇವಾಲಯದ 1139ರ ಶಾಸನದಲ್ಲಿ ಇನ್ನೊಮ್ಮೆ ಕಾಣಿಸಿಕೊಳ್ಳುತ್ತಾನೆ.[74] ಈ ದತ್ತಿಯು ಕುಸುಮೇಶ್ವರನೆಂಬ ದೇವರ ಸ್ಥಾಪನೆಯನ್ನು, ದೇವಾಲಯವನ್ನು 'ಕೇದಾರೇಶ್ವರ ದೈವತಕೆ ಪ್ರತಿಬದ್ಧಗೊಳಿಸಿದುದನ್ನು ಬಾವಣ ಮತ್ತು

---

71. ಸಂ. ಮತ್ತು ಅನು. ರೈಸ್, EC, VII, Sk. 103.
72. ಸಂ. ಮತ್ತು ಅನು. ಫ್ಲೀಟ್, EI, V, no. C.
73. ಸಂ. ಮತ್ತು ಅನು. ರೈಸ್, EC, VII, Sk. 118 ಮತ್ತು 123.
74. ಅದೇ. Sk. 112.

ರಾವಣರೆಂಬ ಇಬ್ಬರು ಶಿಲ್ಪಿಗಳು 'ತಮ್ಮ ಶಿಲ್ಪಿಗಳ ಕುಲದ ಕಲಂಕವನ್ನು ತೊಡೆದುಹಾಕಲೆಂದು' ಗೌತಮ ದೇವನಿಗೆ ದಾನಮಾಡಿದುದನ್ನು ನಮೂದಿಸುತ್ತದೆ. ಅವರ ವೃತ್ತಿಸಂಘಟನೆಯ ಮೇಲಿನ ಈ ಕಲಂಕ ಎಂಥದು ?- ಎಂಬುದನ್ನು ಕುರಿತು ಈ ಶಾಸನ ಏನನ್ನೂ ಹೇಳುವುದಿಲ್ಲ. ಆ ಶಿಲ್ಪಿಗಳಿಬ್ಬರೂ ' ಅಸಂಖ್ಯರಾದ ಮುನಿಗಳಿಂದ ಗೌರವಿಸಲ್ಪಡುವ ಗೌತಮಾರ್ಯ ಹಾಗೂ ಕೋಡಿಯ ಮಠದ ಉಳಿದ ಆಚಾರ್ಯರು ತಮ್ಮ ಧರ್ಮಗುರುಗಳಾಗಿದ್ದರು' ಎಂದು ಸಾಧಿಸುತ್ತಾರೆ. ಈ ಕಾಣಿಕೆಗೆ ಪೂರಕವೆಂಬಂತೆ ಗೌತಮನು ಕೂಡ ಈ ದೇವಾಲಯಕ್ಕಾಗಿ ಒಂದಿಷ್ಟು ನೆಲವನ್ನು ನೀಡಿದನು.

ಕೇದಾರೇಶ್ವರದ 1149ರ ಶಾಸನವು, ಚಾಲುಕ್ಯ ಜಗದೇಕಮಲ್ಲನ ಮಾಂಡಲಿಕನಾದ ಸಾಂತರ ಎನ್ನುವವನು ಬಳ್ಳಿಗಾವೆ ಆಗಮಿಸಿ ಕೇದಾರೇಶ್ವರ ದೇವಾಲಯಕ್ಕೆ ಶಾಂತಳಿಗೆ ಸಾವಿರದ ಕೊಡನಾಡ ಮೂವತ್ತರದಲ್ಲಿದ್ದ ಕುಡ್ಡೂರ ಗ್ರಾಮವನ್ನು ದತ್ತಿ ನೀಡಿರುವುದನ್ನು ಸಾರುತ್ತದೆ. ಈ ಮಾಂಡಲಿಕನು ಗೌತಮ ಪಂಡಿತದೇವನ ಶಿಷ್ಯನಾದ ವಾದಿವಿದ್ಯಾಭರಣ ಪಂಡಿತದೇವನ ಪಾದಗಳನ್ನು ತೊಳೆದು ಈ ದತ್ತಿಯನ್ನು ನೀಡಿದನು.

> ಇಲ್ಲಿ ಕೇದಾರಸ್ಥಾನದ ಮಹಾ ಆಚಾರ್ಯನಾದ ಆ ಗೌತಮನ ಸದ್ಗುಣಗಳನ್ನು ಹೀಗೆ ವರ್ಣಿಸಲಾಗಿದೆ : ಸರ್ವೋತ್ತಮ ಗುಣಗಳ ವಾಸಸ್ಥಾನರೆನ್ನಿಸಿದ ಹಲವು ಮುನೀಂದ್ರರು ಉಜ್ವಲವಾದ ದೀಪಗಳಂತೆ ಆ.ಮಠವನ್ನು ಬೆಳಗಿದರು ; ಅವರು ತರುವಾಯದಲ್ಲಿ ಮುನಿ ಗೌತಮನು ಶುದ್ಧ ವಜ್ರದೀಪದ ಕುಡಿಯಂತೆ ತನ್ನ ವಿಶ್ವವಿಖ್ಯಾತ ಕೀರ್ತಿಯೊಡನೆ ಬೆಳಗುತ್ತಿರುವಾಗ, ಇಡಿಯ ವಿಶ್ವದ ಜನರೆಲ್ಲ ತಮ್ಮ ಕೈಗಳನ್ನು ಜೋಡಿಸಿ ಅವನನ್ನು ಜೀಯಾ ಎಂದು ಸಂಬೋಧಿಸಿದರು.[75]

ಗೌತಮನನ್ನು ಅವನ ತರುವಾಯದವನಾದ ಎರಡನೆಯ ವಾಮಶಕ್ತಿಯ ಅಸಂಖ್ಯವಾದ ಶಾಸನಗಳಲ್ಲಿ ಕೂಡ ನಮೂದಿಸಲಾದುದನ್ನು ಕೇದಾರೇಶ್ವರದ 1156, 1162, 1168, 1179 ಹಾಗೂ 1193ರ[76] ದತ್ತಿಗಳಲ್ಲಿ ಕಾಣುವೆವಾದರೂ ಅವು ಅಂತಹ ಮುಖ್ಯವಾದ ಸಂಗತಿಗಳನ್ನೇನೂ ಒಳಗೊಂಡಿಲ್ಲ. ಆದರೆ 1179 ಮತ್ತು 1193 ರವು ವಾಮಶಕ್ತಿಯನ್ನು ಗೌತಮನ ಶಿಷ್ಯನೆನ್ನುವುದರ ಬದಲು ಅವನ ಮಗನೆಂದು ಕರೆದಿವೆ. ಅಂದರೆ ಅವನು ಆಧ್ಯಾತ್ಮಿಕ ಮಗನೇ, ಹೊಟ್ಟೆಯ ಮಗನೇ ಎಂಬ ಸಂಗತಿ ಸ್ಪಷ್ಟವಿಲ್ಲ.

ಎರಡನೆಯ ವಾಮಶಕ್ತಿಯನ್ನು ಕುರಿತು ಚರ್ಚಿಸುವ ಮುನ್ನ ನಾವು ವಿದ್ಯಾಭರಣನ

---

75. ಅದೇ. Sk. 103.

76. ಅದೇ. Sk. 104. 102, 92, 123 ಮತ್ತು 105.

ಇನ್ನೊಬ್ಬ ಮುಖ್ಯ ಶಿಷ್ಯನಾದ ಸಿದ್ಧಾಂತಿ ಚಂದ್ರಭೂಷಣ ಪಂಡಿತದೇವ ಉರ್ಫ್ ಸತ್ಯವಾಕ್ಯನನ್ನು ಗಮನಿಸಿಬೇಕಿದೆ. ಈ ಯತಿಯು ಧಾರವಾಡ ಜಿಲ್ಲೆಯ ಗದುಗಿನ ತ್ರಿಕೂಟೇಶ್ವರ ದೇವಾಲಯದಲ್ಲಿರುವ ಹನ್ನೆರಡನೆಯ ಶತಮಾನದ ಕೊನೆಯ ಮೂರು ಶಾಸನಗಳಲ್ಲಿ ದಾನವನ್ನು ಪಡೆದವನಾಗಿರುವನು. ಇವು ಯಾದವ ಅರಸನಾದ ಭಿಲ್ಲಮನಿಂದ ಕ್ರಿ. ಶ. 1191ರಲ್ಲಿ, ಹೊಯ್ಸಳ ಅರಸನಾದ ಇಮ್ಮಡಿ ವೀರಬಲ್ಲಾಳನಿಂದ 1192ರಲ್ಲಿ ಅಲ್ಲದೆ ಮತ್ತೆ ಇದೇ ಅರಸನಿಂದ 1191ರಲ್ಲಿ ದೇವಾಲಯಕ್ಕೆ ನೀಡಲಾದ ದತ್ತಿಗಳನ್ನು ದಾಖಲಿಸುತ್ತವೆ.[77] 1191 ಮತ್ತು 1192 ರ ಶಾಸನಗಳು ಈ ನಾಡಿನ ರಾಜಕೀಯ ಇತಿಹಾಸದ ದೃಷ್ಟಿಯಿಂದ ತುಂಬ ಮಹತ್ವದವು. ಏಕೆಂದರೆ ಅವು ಇಮ್ಮಡಿ ವೀರಬಲ್ಲಾಳನು ಭಿಲ್ಲಮ ಹಾಗೂ ಅವನ ದಂಡನಾಯಕನಾದ ಜೈತ್ರಸಿಂಹನನ್ನು ಇವೆರಡು ತಿಥಿಗಳ ನಡುವಿನ ಕಾಲದಲ್ಲಿ ಸೋಲಿಸಿರುವನೆಂಬುದನ್ನು ಸೂಚಿಸುತ್ತವೆ. ಬಿಲ್ಲಮನ 1191ರ ಭಿಲ್ಲಮನ ಶಾಸನವು ಈ ಯತಿಗಳಿಗೆ ಪೋಷಣೆಯನ್ನು ಒದಗಿಸುವ ಬಗೆಗೆ ಉಪಲಬ್ಧವಿರುವ ಒಂದೇ ಒಂದು ಆಧಾರವಾಗಿದ್ದು, ಅದೇ ರೀತಿ ಬಲ್ಲಾಳನ ಕಾಲದ ಬಳ್ಳಿಗಾವೆಯ ಒಂದು ಶಾಸನವು ಕೇದಾರೇಶ್ವರ ದೇವಾಲಯಕ್ಕೆ ಕಾಣಿಕೆ ಸಲ್ಲಿಸಲಾದುದನ್ನು ದಾಖಲಿಸುತ್ತದೆ. ಗದುಗಿನ ಇವೆರಡು ಹಾಗೂ ಕ್ರಿ. ಶ. 1213 ರ[78] ಇನ್ನೊಂದು, ಸಂಸ್ಕೃತದಲ್ಲಿ ಬರೆಯಲಾದ ಶಕ್ತಿಪರಿಷತ್ತಿನ ಶಾಸನಗಳಾಗಿವೆ.

ಗದುಗಿನ ಈ ದತ್ತಿ ಶಾಸನಗಳ ಒಂದು ವೈಶಿಷ್ಟ್ಯವೆಂದರೆ ಅವು ಬಳ್ಳಿಗಾವೆಯಿಂದ ಬಲು ದೂರದ ಊರಲ್ಲಿ ಸ್ಥಾಪಿತವಾಗಿರುವುದು. ಗದಗ ಊರು ಬಳ್ಳಿಗಾವೆಯ ಈಶಾನ್ಯಕ್ಕೆ ಸುಮಾರು ಎಪ್ಪತ್ತೈದು ಮೈಲುಗಳ ಮೇಲಿದೆ. ಅಬ್ಬಲೂರು ಮತ್ತು ಸೂಡಿಗಳು ಬಳ್ಳಿಗಾವೆಯಿಂದ ಕೇವಲ ಹದಿನೈದು, ಇಪ್ಪತ್ತು ಮೈಲುಗಳ ಅಂತರದಲ್ಲಿವೆ. ಈ ಹೆಚ್ಚು ಅಂತರವು, ಗದುಗಿನ ಚಂದ್ರಭೂಷಣನು ಬಳ್ಳಿಗಾವೆ ಪರಂಪರೆಯ ನೇರ ಸದಸ್ಯನಾಗಿರಲಿಕ್ಕಿಲ್ಲವೆಂಬ ಸಾಧ್ಯತೆಯನ್ನು ಎತ್ತಿ ತೋರಿಸುತ್ತದೆ. ಇತ್ತೀಚಿನವು ಎನ್ನಬಹುದಾದ ಅವನ ತಾರೀಖುಗಳು ಕೂಡ ಇದನ್ನು ಸೂಚಿಸುತ್ತವೆ 1129ರ ಕೇದಾರೇಶ್ವರ ದತ್ತಿಯ ಸುಮಾರಿಗೆ ವಿದ್ಯಾಭರಣ ಸಾಕಷ್ಟು ಮುಪ್ಪಿನವನಾಗಿರಲು ಸಾಕು. ಹೀಗೆನ್ನಲು ಕಾರಣ, ಅವನು ಮಠದ ನಿರ್ವಹಣೆಯನ್ನು ಮೊದಲು ಕಿರಿಯ ಶಿಷ್ಯನಿಗೆ ಹಾಗೂ ತರುವಾಯದಲ್ಲಿ ಹಿರಿಯ ಶಿಷ್ಯನಿಗೆ, ಅಂದರೆ ತಿರುವು ಮುರುವಾಗಿ ಒಪ್ಪಿಸಿದಂತೆ ಕಂಡುಬರುವುದು. ಚಂದ್ರಭೂಷಣನು ಸುಮಾರು 1199ರವರೆಗೂ ಜೀವಿಸಿದ್ದನೆಂದರೆ ಆಗ ಅವನಿಗೆ ಸುಮಾರು ಎಂಬತ್ತು ವರ್ಷಗಳಾಗಿದ್ದವು. ಅಂದರೆ 1129 ರಲ್ಲಿ ಅವನು ಕೇವಲ ಹತ್ತು ವರ್ಷದವನಿರಬಹುದು. ಇದಕ್ಕೂ ಮುಂದಿನ ಕಾಲದ ಗದುಗಿನ ಶಾಸನಗಳು ಶಕ್ತಿ ಪರಿಷತ್ತು, ಮೂವರ ಕೋಣೆಯ ಸಂತತಿ ಇಲ್ಲವೆ ಪರ್ವತಾವಳಿಯನ್ನು

---

77. ಸಂ. Keilhorn, EI. III, 217-220, Lüders, EI, 89-97; ಮತ್ತು ದೇಸಾಯಿ, SII, XV, no. 214.

78. ಸಂ. ದೇಸಾಯಿ, SII, XV, no. 159.

ನಮೂದಿಸುವುದಿಲ್ಲ. ಆದಾಗ್ಯೂ ಚಂದ್ರಭೂಷಣನು ಬಳ್ಳಿಗಾವೆಯ ಪರಂಪರೆಗೆ ಸೇರಿದವನೆಂಬ ಅವನ ಪರವಾದ ಪುರಾವೆ ತಳ್ಳಿಹಾಕಲಾಗದಷ್ಟು ಗಟ್ಟಿಮುಟ್ಟಾಗಿದೆ. ಎಲ್ಲಕ್ಕೂ ಹೆಚ್ಚು ಮಹತ್ವದ ಸಂಗತಿ ಎಂದರೆ, ಅವನ ಗುರು ವಿದ್ಯಾಭರಣದೇವ ಹಾಗೂ ಗುರುವಿನ ಗುರು ಸೋಮೇಶ್ವರದೇವ ಇವರಿಬ್ಬರ ಅಧಿಕಾರ ಪದಗಳನ್ನು (Designation) ನಮೂದಿಸಲಾದುದು. ಇವರ ಒಂದೇ ಹೆಸರುಗಳೇ ಇವರು ಕೇದಾರೇಶ್ವರದ ಯತಿಗಳಿಂದ ಬೇರೆ ವ್ಯಕ್ತಿಗಳೆಂದು ಹೇಳಲು ಹೆಚ್ಚಿನ ಅಡ್ಡಿ ಒದಗಿಸುತ್ತವೆ. ಸಿದ್ಧಾಂತಿ ಚಂದ್ರಭೂಷಣಪಂಡಿತದೇವನ ಹೆಸರಿನ ಕೊನೆಯಲ್ಲಿರುವ 'ಪಂಡಿತದೇವ' ಪದ ಹಾಗೂ ಅವನು ಕಾಳಾಮುಖ ಸಂಪ್ರದಾಯದವನೆಂಬ ಸ್ಪಷ್ಟವಾದ ಉಲ್ಲೇಖವು ಅವನ ಪರಿಚಯವನ್ನು ಸುಮಾರಾಗಿ ಖಚಿತಪಡಿಸುತ್ತದೆ. ಅಬ್ಬಲೂರು ಹಾಗೂ ಸೂಡಿಗಳು ಗದುಗಿಗಿಂತಲೂ ಬಳ್ಳಿಗಾವೆಗೆ ಹತ್ತಿರದವುಗಳಾದ್ದರಿಂದ, ಅವು ಈ ಯತಿ ಪರಂಪರೆಯು ಇನ್ನೂ ಪೂರ್ವದಲ್ಲಿಯೇ ಇನ್ನಿತರ ದೇವಾಲಯಗಳಿಗೂ ಹಬ್ಬಿರುವುದಕ್ಕೆ ನಿದರ್ಶನವನ್ನು ಒದಗಿಸುತ್ತವೆ. ವಿದ್ಯಾಭರಣನ 1129ರ ಶಾಸನ ಹಾಗೂ ಅವನ ಶಿಷ್ಯ ಚಂದ್ರಭೂಷಣನ 1199ರ ಶಾಸನದ ನಡುವಿನ ಕಾಲಾಂತರ ಹೆಚ್ಚೆನಿಸಿದರೂ ವಿದ್ಯಾಭರಣನು 1140 ಇಲ್ಲವೆ 1150ರವರೆಗೆ ಬದುಕಿದ್ದರೆ ಈ ಕಾಲಾವಧಿ ಅಸಾಧ್ಯವೆನ್ನುವಷ್ಟು ಹೆಚ್ಚೇನೂ ಅಲ್ಲ. ಅವನು ಅಬ್ಬಲೂರಿನ ತನ್ನ ಶಿಷ್ಯ ಜ್ಞಾನಶಕ್ತಿಗೆ 1144ರಲ್ಲಿ ವಾದಿವಿದ್ಯಾಭರಣ ಪಂಡಿತದೇವನೆಂಬ ವಿಸ್ತರಿಸಿದ ಪದವಿಯನ್ನು ನೀಡಿದ ನಿಜ ಸಂಗತಿ ಹಾಗೂ ಅದನ್ನೇ 1149ರಲ್ಲಿ ತನ್ನ ಬಳ್ಳಿಗಾವೆಯ ಶಿಷ್ಯ ಗೌತಮನಿಗೆ ನೀಡಿದನೆಂಬ ಸಂಗತಿ ಇವು 1129ರ ತರುವಾಯ ವಿದ್ಯಾಭರಣನು ಈ ಪದವಿಯನ್ನು ಪಡೆದುದನ್ನು ಸೂಚಿಸುತ್ತವೆ. ಈ ಘಟನೆಯು 1144ರವರೆಗಿನ ಕಾಲ್ಯಾವಧಿಯಲ್ಲಿ ನಡೆದಿರಬಹುದಲ್ಲದೆ ಅವನು ಈ ತಾರೀಖಿನ ತರುವಾಯದಲ್ಲೂ ಬದುಕಿರುವ ಸಾಧ್ಯತೆಯಿದೆ.

ವೀರ ಬಲ್ಲಾಳನ ಕ್ರಿ. ಶ. 1192ರ ದತ್ತಿ ಶಾಸನವು ಹಲವಾರು ಸಂಸ್ಕೃತ ಪದ್ಯಗಳಿಂದ ಕೂಡಿದ್ದು, ಚಂದ್ರಭೂಷಣನನ್ನು ಹೊಗಳುತ್ತ ಅವು ಈ ಯತಿಯನ್ನು 'ಜಂಗಮ' ಎಂದು ಕರೆದಿವೆ, ಮುಂದಿನ ಕಾಲದಲ್ಲಿ ಲಿಂಗಾಯತ ಯತಿಗಳು ಇದೇ ಪದವನ್ನು ಬಳಸತೊಡಗಿದರು:

> ಕ್ರತುಕ ([ಗದಗ]ದೇವ) ಎಂಬ ಊರಲ್ಲಿ ಸ್ವಯಂಭೂ ತ್ರಿಕೂಟೇಶ್ವರ ದೇವನಿರುವನು. (ಅವನು) ಶಿವನಾಗಿದ್ದು ಅವನ ಆಸನವು ಅರಸರ ಚೂಡಾರತ್ನಗಳ ಪ್ರಭೆಯಿಂದ ಬೆಳಗುತ್ತಲಿದೆ.
>
> ಆ (ದೇವ) 'ಸ್ಥಾನ'ದ 'ಆಚಾರ್ಯ'ನು ಒಬ್ಬ 'ಮುನಿ'ಯಾಗಿದ್ದು ಅವನ ಹೆಸರು ಸಿದ್ಧಾಂತಿ ಚಂದ್ರಭೂಷಣಪಂಡಿತದೇವ ಎಂದು. ಅವನು ಕಾ· ·ುಖ 'ಆಚಾರ್ಯ' ಪರಂಪರೆಯವನು.

ಮೂರು ಸ್ಥಾವರ 'ಲಿಂಗಗಳಿ'ಂದಾಗಿ (ಅಥವಾ ಪರ್ವತಗಳಿಂದಾಗಿ),(ಅಂದರೆ: ರಾಮೇಶ್ವರ, ಶ್ರೀಶೈಲ ಮತ್ತು ಭೀಮೇಶ್ವರ) ತ್ರಿಕೋಟೇಶ್ವರನೆಂದು ಗುರುತಿಸಲಾಗುವ ಈ ದೇವನನ್ನೇ (ಜನರು) ಆ ಜಂಗಮನಿಂದಾಗಿ (ಯತಿ ಇಲ್ಲವೆ ಸಂಚಾರಿ ಲಿಂಗ) ಚತುಷ್ಕೂಟೇಶ್ವರನೆಂದು ಗೌರವಿಸುತ್ತಾರೆ.

(ಆ ಯತಿಯು) ಇಂದು ಹೆಣ್ಣುಗಳ ಬಗೆಗೆ ಅನಾಸಕ್ತನಾಗಿದ್ದು, ಅನಂತ ಕಾಲ ಗೌರಿಯಿಂದ ಅರ್ಧದೇಹವು ಆವರಿಸಿ ಅವಳೊಂದಿಗೆ ಸಮಾವೇಶಗೊಂಡ ಶಿವನಂತಹ ಬ್ರಹ್ಮಚಾರಿಯೋ ಎಂಬಂತೆ ಕಾಣುತ್ತಾನೆ.

ಕುಲಪರ್ವತಗಳು ನಡುಗಿದರೂ, ನದಿಗಳು ಮಹಾಪೂರದಿಂದ ಸೊಕ್ಕೇರಿ ಹರಿದರೂ ಸತ್ಯವಾಕ್ಯನೆಂಬ ಹೆಸರನ್ನು ಧರಿಸಿದ ಅವನು ಸತ್ಯವನ್ನು ಕೈಬಿಡನು.

ಕಾವ್ಯ, ನಾಟಕ, ವಾತ್ಸ್ಯಾಯನ, ಭರತ, ರಾಜನೀತಿ ಮುಂತಾದವುಗಳಲ್ಲಿ (ಜ್ಞಾನದಲ್ಲಿ), ಅಷ್ಟೇ ಅಲ್ಲದೆ ಕಥಾಸಿದ್ಧಾಂತಗಳಲ್ಲೂ ಕೂಡ ಅವನಿಗೆ ಸರಿಸಾಟಿ ಎನ್ನಿಸಿದವರು ಯಾರೂ ಇಲ್ಲ.

ಒಂದು ವೇಳೆ ಮಹಾಸಾಗರದ ಅಲೆಗಳು ಕೊನೆಗೊಳ್ಳಬಹುದು, ಆದರೆ (ಅವನ)ದಯೆಯ ಭಾಗವಾಗಿರುವ ಪ್ರಸಾದವನ್ನು ಸೇವಿಸುವವರಿಗೆ ಅದನ್ನು ನೀಡುವಲ್ಲಿ ಕೊನೆಯೆಂಬುದಿಲ್ಲ.

ಆಹಾರವನ್ನಷ್ಟೇ ಅಲ್ಲದೆ ಚಿನ್ನ, ಮದ್ದುಗಳು, ನೀರು, ಬಟ್ಟೆ ಮುಂತಾದವು ಗಳನ್ನು ನೀಡಿ ಅವನು ಉಪಕೃತರನ್ನಾಗಿ ಮಾಡಿದ ಮನುಷ್ಯ ಸಂಖ್ಯೆಗೆ ಮಿತಿಯೇ ಇಲ್ಲ.

ಅವನು ಪಾಳುಬಿದ್ದ ಊರನ್ನು ಮತ್ತೆ ಹೊಸದಾದ ಹಾಗೂ ಸಂತಸದಾಯಕವಾದ 'ಪುರ'ವನ್ನಾಗಿ ನವೀಕರಿಸಿದನು. ಅವನು (ಮೊದಲು) ಬೇರೆಲ್ಲೋ ನೆಲೆಸಿದ ರಂಗಭೋಗದ ಹೆಣ್ಣುಗಳ ಬೀದಿಯನ್ನು (ವೇಶ್ಯಾವೀಥಿ) ದೇವಾಲಯದ ಪರಿಸರಕ್ಕೆ ತಂದನು.

(ಆ ಮೇಲೆ ಅವನು) ಒಂದು ತಾವರೆಕೆರೆಯನ್ನು ಕಟ್ಟಿಸಿದನು. ಅದು ಅಮೃತದಂತಹ ನೀರಿನಿಂದ ತುಂಬಿತ್ತು; ಅಲ್ಲದೆ ಅವನು ವಿಧ ವಿಧದ ಹೂ, ಬಳ್ಳಿಗಳಿಂದ ತುಂಬಿದ ನಂದನವನದಂತಹ (ಇಂದ್ರನ ಹೂದೋಟ) ಮರಗಳ ತೋಪನ್ನು ತಯಾರಿಸಿದನು.

> ಹೆಚ್ಚಿಗಿನ್ನೇನು ಹೇಳುವುದು ? ಕಲ್ಲಿನ ಆವರಣ ಗೋಡೆಯ ಒಳ ಬದಿಗೆ ಇದ್ದುದೆಲ್ಲವನ್ನು ಪರಿಪೂರ್ಣಗೊಳಿಸಿದನು. (ಇದೆಲ್ಲ) ಅವನ ಕೆಲಸ.[79]

ಮುಂದುವರಿದು ಈ ದತ್ತಿಯು, ವೀರಬಲ್ಲಾಳನು ಬೆಳ್ಗೊಲ ಮೂರು ನೂರರ ಹೊಂಬೊಳಲು ಗ್ರಾಮವನ್ನು ದೇವಾಲಯಕ್ಕೆ ಕಾಣಿಕೆಯಾಗಿ ನೀಡಿದುದನ್ನು ನಮೂದಿಸುತ್ತದೆ. ಈ ಮೇಲಿನ ವಿವರಣೆಯನ್ನು ಆನಂದಮಯ ಕಾವ್ಯಶೈಲಿಯಲ್ಲಿ ಬರೆಯಲಾಗಿದ್ದು, ಅದರಲ್ಲಿ ಹಲವಾರು ಕುತೂಹಲಕರ ಸಂಗತಿಗಳಿವೆ. ಮೊದಲಿಗೆ, ಯತಿಯು ಅರಸೊತ್ತಿಗೆಯ ಗೌರವ ಮತ್ತು ಬೆಂಬಲವನ್ನೂ ಪಡೆದನೆಂದು ಹೇಳಲಾಗಿದೆ. ಅವನು ಬೇರೆ ಕಾಳಾಮುಖಯತಿಗಳಂತೆ ತನ್ನದು ರಾಜಗುರುಸ್ಥಾನ ಎಂದು ಸಾಧಿಸದೆ ಹೋದರೂ ಅವನ ಬೌದ್ಧಿಕ ಸಾಧನೆಗಳಲ್ಲಿ ರಾಜನೀತಿ ಕುರಿತಾದ ಉಲ್ಲೇಖವು ಅರಸೊತ್ತಿಗೆಯ ಸಲಹೆಗಾರನಿಗೆ ಸರಿಹೊಂದುವಂಥಾಗಿದೆ. ವಾತ್ಸ್ಯಾಯನ ಪದವು ನಾಲ್ಕನೆಯ ಶತಮಾನದ 'ನ್ಯಾಯಸೂತ್ರ'ದ ಹೆಸರಾದ ಭಾಷ್ಯಕಾರನನ್ನು ಸೂಚಿಸುವಂತಿದ್ದರೂ ಸಂದರ್ಭ ಮಾತ್ರ 'ಕಾಮಸೂತ್ರ'ದ ಲೇಖಕನಿಗೆ ಹೆಚ್ಚು ಅನುಕೂಲದ್ದಾಗಿದೆ. ಎರಡನೆಯ ಚಂದ್ರಭೂಷಣನು ಬಳ್ಳಿಗಾವೆಯ ಗುರುಗಳ ದಾನದಕರ್ತ ಹಾಗೂ ಔದಾರ್ಯದ ಸಂಪ್ರದಾಯಗಳನ್ನು ಮುಂದುವರೆಸಿದನು. ಅವನು ದೇವಾಲಯ ಮತ್ತು ಅದರ ಪ್ರಾಕಾರದ ಜಾಗೆಯನ್ನು ವಿಸ್ತರಿಸುವ ಬಹಳಷ್ಟು ಕಾರ್ಯವನ್ನು ಆರಂಭಿಸಿದನು. ಮೂರನೆಯ ಸಂಗತಿ ಎಂದರೆ, ದೇವದಾಸಿ ಪರಂಪರೆಯನ್ನು ಬೆಂಬಲಿಸುವವನೆಂದು ಅವನನ್ನು ಚಿತ್ರಿಸಲಾಗಿದೆ. ದೇವಾಲಯಗಳಲ್ಲಿ ದೇವದಾಸಿಯರು ನೇಮಕಗೊಂಡಿದ್ದರೋ, ಇಲ್ಲವೋ ಎಂಬ ಸಂದೇಹ ಈ ಸಂಗತಿಯಿಂದ ಪರಿಹಾರಗೊಳ್ಳುತ್ತದೆ. ಅವರು ಅಲ್ಲಿರುತ್ತಿದ್ದರೆಂಬುದು ನಿಸ್ಸಂಶಯ. ಹೀಗಾಗಿ, ಈ ಸಂಪ್ರದಾಯವು ಕೆಲಮಟ್ಟಿಗೆ ರಾಮಾನುಜರಲ್ಲಿರುವ ಕಾಳಾಮುಖರ ಬಗೆಗಿನ ಅಪ್ರೀತಿಗೆ ಕಾರಣವಾಗಿರಲು ಸಾಕು.

ಗದುಗಿನ ತ್ರಿಕೂಟೇಶ್ವರ ದೇವಾಲಯದಲ್ಲಿ ಇನ್ನೂ ಹಲವು ಶಾಸನಗಳು ದೊರೆತಿದ್ದು, ಅವುಗಳಲ್ಲಿ ಬಹಳಷ್ಟು ಭಗ್ನಾವಸ್ಥೆಯಲ್ಲಿವೆ. ಅಲ್ಲದೆ ಯತಿ ಪರಂಪರೆಯನ್ನು ಕುರಿತು ಅವುಗಳಲ್ಲಿಯ ಮಾಹಿತಿ ಹೆಚ್ಚೇನೂ ಇಲ್ಲ. ಇವುಗಳಲ್ಲಿ ತೀರ ಹಳೆಯ, ಕ್ರಿ. ಶ. 1002ರ ಶಾಸನವು ಗದುಗಿನ ಸ್ವಯಂಭೂ ದೇವಾಲಯಕ್ಕೆ ಭೂಮಿ ನೀಡಿದುದನ್ನು ನೋಂದಾಯಿಸುತ್ತದೆ.[80] ಈ ಕೊಡುಗೆಯನ್ನು, ಪೂಲಿಯಪಂಡಿತನ ಶಿಷ್ಯನಾದ ಕೊಪ್ಪಿನ ವಖ್ಖಾಣಿದೇವನ ಶಿಷ್ಯನಾದ ಯತಿ, ಕಾಳಜ್ಞಾನಿ ವಖ್ಖಾಣಿಜೀಯನಿಗೆ ವಹಿಸಿಕೊಡಲಾಗಿದೆ. ಬಳ್ಳಿಗಾವೆಯ ಕೇದಾರೇಶ್ವರ ದೇವಾಲಯದ ಯತಿಗಳಾರೂ ಈ ಹೆಸರಿನವರಲ್ಲ. ಈ ಸ್ವಯಂಭೂ ದೇವಾಲಯವೆಂದರೆ ಸ್ವಯಂಭೂ ತ್ರಿಕೂಟೇಶ್ವರನ ದೇವಾಲಯವೇ ಸರಿ.

---

79. ಸಂ. Lüders, EI. VI, 96-97. ನನ್ನ ಅನುವಾದ.

80. ಸಂ. ಎನ್. ಎಲ್. ರಾವ್, SII, XI, Part I, no. 48.

ಮುಂದಿನ ಕಾಲದಲ್ಲಿ ಕೊಪ್ಪಿನ ವಖ್ಯಾಣದೇವನು ಧಾರವಾಡ ಜಿಲ್ಲೆಯ ರೋಣದಲ್ಲಿರುವ ಪರ್ವತಾವಳಿಯ ಯತಿಪರಂಪರೆಯಲ್ಲಿ ಕಾಣಿಸಿಕೊಳ್ಳುತ್ತಾನೆ.[81] ಬಳ್ಳಿಗಾವೆಯ ಶಾಸನಗಳಿಗೆ ಗೊತ್ತಿಲ್ಲದ ಇನ್ನೊಬ್ಬ ಯತಿಯೆಂದರೆ ಕ್ರಿಯಾಶಕ್ತಿಪಂಡಿತ. ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಮಾಂಡಲಿಕನು ಕ್ರಿ.ಶ.1102ರಲ್ಲಿ ಸ್ವಯಂಭೂ ತ್ರಿಕೂಟೇಶ್ವರದೇವಾಲಯಕ್ಕೆ ದತ್ತಿನೀಡಿದ ಕಾಲಕ್ಕೆ ಅವನು ಮಠಾಧಿಪತಿಯಾಗಿದ್ದನು.[82] ಈ ಯತಿಯು ಮೂವರ ಕೋಣೆಯ ಸಂತತಿಗೂ ಸಂಬಂಧಪಟ್ಟವನಾಗಿರಲೇಬೇಕು. ಏನಿದ್ದರೂ ಬಳ್ಳಿಗಾವೆಯ ಯತಿಗಳು ಗದುಗಿನ ದೇವಾಲಯದ ಮೇಲೆ ನೇರವಾದ ನಿಯಂತ್ರಣ ಹೊಂದಿರಲಿಲ್ಲವೆಂಬುದು ಸ್ಪಷ್ಟ. ಇದು ದೂರದ ಊರಿನಲ್ಲಿ ಇದ್ದುದರಿಂದ ಈ ಸಂಗತಿ ವ್ಯವಹಾರ್ಯ ಎನ್ನಿಸಿರಲಿಕ್ಕಿಲ್ಲ. ತ್ರಿಕೂಟೇಶ್ವರ ದೇವಾಲಯಕ್ಕೆ ನೀಡಲಾದ 1184ರ ದತ್ತಿಯ ಒಂದು ಭಗ್ನ ಶಾಸನ ವಿದ್ಯಾಭರಣನ ಹೆಸರನ್ನು ಉಲ್ಲೇಖಿಸುತ್ತಿದ್ದು, ಈ ದತ್ತಿಯನ್ನು ಅವನ ಶಿಷ್ಯನಾದ ಚಂದ್ರಭೂಷಣನಿಗೆ ನೀಡಿರಲು ಸಾಕು.[83] ಚಂದ್ರಭೂಷಣನ ಶಿಷ್ಯನೇ ಆದ ಕ್ರಿಯಾಶಕ್ತಿಪಂಡಿತನು ಕ್ರಿ. ಶ. 1213 ರಲ್ಲಿ ಈ ದೇವಾಲಯಕ್ಕೆ ನೀಡಲಾದ ದತ್ತಿಯನ್ನು ಸ್ವೀಕರಿಸಿದವನಾಗಿದ್ದಾನೆ.[84] ಈ ಶಾಸನ ತುಂಬ ಹಾಳಾಗಿದೆ. 1225ರಲ್ಲಿ ಸಿದ್ಧಾಂತಿ ಕ್ರಿಯಾಶಕ್ತಿಪಂಡಿತನ 'ಮಗಳು'ಅಂದರೆ ಶಿಷ್ಯಳಾದ ಚಂಡಾವ್ವೆಯಿಂದ ಎರಡು ಚಿನ್ನದ ಧ್ವಜಗಳನ್ನು ದೇವಾಲಯಕ್ಕೆ ನೀಡಲಾಯಿತು.[85] ತನ್ನ ಗುರುವಿನಂತೆಯೇ ವಿಸ್ತೃತ ಬಿರುದು ಹೊಂದಿದ ಆ ಯತಿ ಇವನೇ ಆಗಿರಲು ಸಾಧ್ಯ.

1159 ಮತ್ತು 1193ರ[86] ನಡುವಿನ ಕಾಲದ ಕಳಚೂರಿ ಬಿಜ್ಜಳ, ಸೋಮೇಶ್ವರ ಹಾಗೂ ಆಹವಮಲ್ಲದೇವ ಮತ್ತು ಹೊಯ್ಸಳ ಇಮ್ಮಡಿ ವೀರಬಲ್ಲಾಳರ ಆಳ್ವಿಕೆಯ ಕಾಲದ ಏಳು ದತ್ತಿಗಳಲ್ಲಿ ಗೌತಮನ ಮುಂದಿನ ತಲೆಮಾರಿನ ಎರಡನೆಯ ವಾಮಶಕ್ತಿಯು ರಾಜಗುರುವೆನಿಸಿದ್ದನು. ವಾಮಶಕ್ತಿಯು ಇಂಥ ಅಧಿಕಾರಸ್ಥಾನವನ್ನು ಹೊಂದಿರುವುದು ಸಾಧ್ಯ. ಏಕೆಂದರೆ ಇಂಥ ಬಿರುದುಗಳನ್ನು ಹೊತ್ತಿರುವ ಕಾಳಾಮುಖರ ಅನೇಕ ಉದಾಹರಣೆಗಳಿವೆ. ರುದ್ರಶಕ್ತಿದೇವ ಹೇಳಿಕೊಳ್ಳುವಂತೆ ಇದು 1249 ರಲ್ಲಿ ಶಿವಮೊಗ್ಗೆ ಜಿಲ್ಲೆಯ ಕುಪ್ಪಟೂರಿನ ಕೋಟೇಶ್ವರ ದೇವಾಲಯಕ್ಕೆ ನೀಡಲಾದ ದತ್ತಿಯಾಗಿದೆ.[87] ಈ ದೇವಾಲಯದ ಈ ಮೊದಲಿನ

---

81. ಸಂ. ಮತ್ತು ಅನು. ಎಲ್. ಡಿ. ಬಾರ್ನೆಟ್, 'Two Inscriptions from Ron., of Saka 944 and 1102,' EI. XIX, 222-236.
82. ಸಂ. ಎನ್. ಎಲ್. ರಾವ್. SII. XI. Part II, no 15.
83. ಸಂ. ದೇಸಾಯಿ, SII, xv. no. 547.
84. ಅದೇ no. 159.
85. ಅದೇ no. 609.
86. ಸಂ. ಮತ್ತು ಅನುವಾದ, ರೈಸ್, EC, VII,Sk, 123 (ಕ್ರಿ. ಶ. 1159), 92 (1168), 150 (1171). 96(1181), 101(? 1181), 97(1186-87), ಮತ್ತು 105(1193).
87. ಸಂ. ಮತ್ತು ಅನು. ರೈಸ್, EC, VIII, Sb. 270.

ಯತಿಯಾದ ಸರ್ವೇಶ್ವರಶಕ್ತಿದೇವ ಎನ್ನುವವನನ್ನು 1070ರ ದತ್ತಿಯಲ್ಲಿ ರಾಜಗುರು ಎಂದು ಸಂಬೋಧಿಸಲಾಗಿದೆ.[88] ಇನ್ನೊಬ್ಬ ಕಾಳಾಮುಖಯತಿಯಾದ ಸರ್ವೇಶ್ವರದೇವನು 1252ರ ಬೆಳಗಾವಿ ಜಿಲ್ಲೆಯ ಮುನವಳ್ಳಿಯ ದತ್ತಿಯಲ್ಲಿ ಈ ಪದವಿಯನ್ನು ಪಡೆದಿರುವನು.[89] ಈ ಯತಿಗಳು ಸ್ಥಾನಿಕ ಮಾಂಡಲಿಕರು ಇಲ್ಲವೆ ಅಧಿಕಾರಿಗಳಿಗಿಂತ ಹೆಚ್ಚಿನ ಮಟ್ಟದವರಿಗೆ ರಾಜಗುರುಗಳಾಗಿರುವ ಸಾಧ್ಯತೆ ಖಂಡಿತ ಇಲ್ಲ.

ಎರಡನೆಯ ವಾಮಶಕ್ತಿಯು ಮೊದಲಿಗೆ ಕಾಣಸಿಕೊಳ್ಳುವುದು ಕೇದಾರಮಠದ ಕ್ರಿ.ಶ. 1156ರ ದತ್ತಿ ಶಾಸನದಲ್ಲಿ ಅಂದರೆ ಚಾಲುಕ್ಯ ಮುಮ್ಮಡಿ ತೈಲನ ಆಳ್ವಿಕೆಯಲ್ಲಿ.[90] ಮುಮ್ಮಡಿ ತೈಲನ ಮಾಂಡಲಿಕನಾದ ಕಳಚೂರಿ ಬಿಜ್ಜಳದೇವನಿಂದ 'ವಿದ್ವಾಂಸರ ಹಾಗೂ ಸೇವಕರ 'ಕೋರಿಕೆಯ ಮೇರೆಗೆ ದೇವರ ನೈವೇದ್ಯ, ದೇವಾಲಯದ ಯತಿಗಳ ಆಹಾರ ಮತ್ತು ದೇವಾಲಯದ ಕಟ್ಟಡಗಳ ಸುಸ್ಥಿತಿಗಾಗಿ ಈ ದತ್ತಿ ನೀಡಲ್ಪಟ್ಟಿತು. ಮಠವನ್ನು ಕುರಿತು ಈಗಾಗಲೇ ಕಂಡ ಬಣ್ಣನೆಯನ್ನು ಅನುಸರಿಸಲಾಗಿ ಕೇದಾರಸ್ಥಾನವೆಂಬ 'ಕಲ್ಪಲತೆ'ಯನ್ನು ಸೋಮೇಶ್ವರಯ್ಯನ ತಪಸ್ಸೆಂಬ ಮಣ್ಣಿನಲ್ಲಿ ಹೇಗೆ ಬೆಳೆಸಲಾಯಿತೆಂಬುದನ್ನು ಅದು ತೋರಿಸಿಕೊಡುತ್ತದಲ್ಲದೆ, ಆ ಲತೆಯು :

> ಗೌತಮಾರ್ಯನಿಂದ ಚೆನ್ನಾಗಿ ಪೋಷಿಸಲ್ಪಟ್ಟು, ಕೊಂಬೆ ಹಾಗೂ ಹೂವುಗಳಿಂದ ತುಂಬಿ, ವಾಮಶಕ್ತಿ ಮುನೀಂದ್ರನಿಂದ ಅದರ ಕೀರ್ತಿ ವಿಶ್ವದ ತುಂಬೆಲ್ಲ ಹರಡಿತು. ಅವನ ಮುಖವೆಂದರೆ ವಾಣಿಯ (ಸರಸ್ವತಿ) ಸಂತಸದ ನಿವಾಸ, ಅವನ ಹೃದಯವೆಂದರೆ ಮದನ ವೈರಿಗೆ (ಶಿವ) ವಜ್ರಗೃಹವೆನ್ನಿಸಿದ ವಾಮಶಕ್ತಿ ಪಂಡಿತದೇವನು ಜಗದ್ವಿಖ್ಯಾತನಾಗಿದ್ದನು.

ಅವನು ಯಮ, ನಿಯಮ, ಸ್ವಾಧ್ಯಯ, ಧ್ಯಾನ, ಧಾರಣಾ, ಮೌನಾನುಷ್ಠಾನ, ಜಪ ಹಾಗೂ ಸಮಾಧಿಗಳನ್ನು ಪಡೆದವನಾಗಿದ್ದು, " ರಾಜನಗರವಾದ ಬಲಿಪುರದ ದೇವರಾದ ದಕ್ಷಿಣ ಕೇದಾರೇಶ್ವರ ದೇವಾಲಯದ ಯತಿಯಾಗಿದ್ದನು."

ಕ್ರಿ.ಶ.1159ರಲ್ಲಿ ಬಿಜ್ಜಳನ ಅಧಿಕಾರಿಯಾದ ಕೇಶಿರಾಜದಂಡಾಧೀಶ, ಕೇಸಿಮಯ್ಯ ಅಥವಾ ಕೇಶವ ದೇವನು 'ಬಲಿಪುರದ ದಕ್ಷಿಣಭಾಗದಲ್ಲಿ' ಪಂಚಲಿಂಗ ದೇವಾಲಯದ ಯತಿಯಾದ ಸರ್ವೇಶ್ವರನಿಂದ ಪಡೆದ ನೆಲದ ಮೇಲೆ ಕೇಶವ ದೇವಾಲಯವನ್ನು ಕಟ್ಟಿಸಿದನು.[91] ಅವನು ಪಟ್ಟಣದ ಒಂದು 'ವಸಾಹತ'ನ್ನು (ಪುರ ಅಥವಾ ಬ್ರಹ್ಮಪುರ) ವೀರ ಕೇಶವಪುರ

88. ಅದೇ, Sb. 276.
89. ಸಂ. ಪಂಚಮುಖಿ, 1. no. 31 of 1939-40.
90. ಸಂ. ಮತ್ತು ಅನು. ರೈಸ್. EC, VII. Sk. 104.
91. ಅದೇ. Sk. 123.

ಎಂಬ ಹೆಸರಿನಿಂದ ನಿರ್ಮಿಸಿ, ಅದನ್ನು ಬ್ರಾಹ್ಮಣ ಸಮುದಾಯಕ್ಕೆ ದಾನ ಮಾಡಿದನು. ಬ್ರಾಹ್ಮಣರ ಹಾಗೂ ಬಳ್ಳಿಗಾವೆ ಪಟ್ಟಣದ ಇತರರ ಸಮಕ್ಷದಲ್ಲಿ ನೀಡಿದುದು :

> ಬೆಲ್ವಣಿ ಗ್ರಾಮದಲ್ಲಿ ಜಗದೇಕಮಲ್ಲೇಶ್ವರನಿಗೆ ಎರಡು ಪಾಲು, ಪಂಚಲಿಂಗದೇವರಿಗೆ ಎರಡು ಪಾಲು, ಕೇದಾರದೇವರಿಗೆ ಎರಡು ಪಾಲು, ಬ್ರಾಹ್ಮಣರಿಗೆ ಮೂವತ್ತೆಂಟು ಪಾಲು, ಯತಿಗೆ ಒಂದು ಪಾಲು, ಹೂಮಾಲೆ ತಯಾರಕರಿಗೆ ಒಂದು ಪಾಲು; ಒಟ್ಟು ನಲವತ್ತಾರು ಪಾಲುಗಳು.

ವಿಶಾಲ ಹೃದಯದ ಈ ಕೊಡುಗೆಯನ್ನು ಅಧಿಕಾರಿಗಳು ಹಾಗೂ 'ರಾಜನಗರ'ವಾದ ಬಲಿಪುರ ಅಥವಾ ಬಳ್ಳಿಗಾವೆಯ ಗಣ್ಯಮಾನ್ಯ ವ್ಯಕ್ತಿಗಳಲ್ಲದೆ ವಾಮಶಕ್ತಿ ಪಂಡಿತದೇವ ಹಾಗೂ ಪಟ್ಟಣದ ಬೇರೆ ದೇವಾಲಯಗಳ ಅಧಿಪತಿಗಳ ಸಮ್ಮುಖದಲ್ಲಿ ನೀಡಲಾಯಿತು. ಇವರೆಲ್ಲ ಶೈವಯತಿಗಳಾಗಿರುವಂತೆ ಕಾಣುತ್ತದೆ. ಇವರಲ್ಲಿಯ ಧರ್ಮಶಿವದೇವ ಎನ್ನುವವನು ಮಾತ್ರ ಪಂಚಮಠದ ಮುಖ್ಯಸ್ಥನಾಗಿದ್ದನು. ಕ್ರಿ.ಶ.1129ರ ದಾಖಲೆಯಂತೆ ಈ ಮಠವು ಹರಿ, ಹರ, ಕಮಲಾಸನ (ಬ್ರಹ್ಮ), ವೀತರಾಗ (ಜಿನ) ಹಾಗೂ ಬುದ್ಧನ ದೇವಾಲಯಗಳನ್ನು ಒಳಗೊಂಡಿತ್ತು. ಇದರಿಂದಾಗಿ ಕಂಡುಬರುವ ಸಂಗತಿ ಎಂದರೆ ಬಳ್ಳಿಗಾವೆಯ ಈ ಸಂಪ್ರದಾಯಗಳು ಪರಸ್ಪರರ ಬಗೆಗೆ ಸಹಿಷ್ಣುಗಳಾಗಿದ್ದುವಲ್ಲದೆ, ಈ ಮಠಗಳ ಆಡಳಿತೆಯೆಲ್ಲ ಶೈವಯತಿಗಳಿಂದ ನಡೆಸಲಾಗುತ್ತಿತ್ತೆಂಬುದು. ಕೋಡಿಯ ಮಠವು ಈ 'ಐದು ಮಠ'ಗಳಲ್ಲಿ ಒಂದಾಗಿರುವಂತೆ ಕಾಣುವುದಿಲ್ಲವಾದರೂ ಇಂಥ ಸಮನ್ವಯವನ್ನು ಸಾಧಿಸುವ ತಿಳುವಳಿಕೆಯನ್ನು ಕೋಡಿಯ ಮಠದ ಮುಖ್ಯಯತಿಯಾದ ಸೋಮೇಶ್ವರನ ಮೇಲೆ ಆರೋಪಿಸಲಾದುದನ್ನು ಈ ಹಿಂದೆ ಕಂಡಿದ್ದೇವೆ. ಅಂದ ಮಾತ್ರಕ್ಕೆ ಕೇದಾರೇಶ್ವರದ ಶಾಸನಗಳೆಲ್ಲ ಇದೇ ಬಗೆಯ ಸಹಿಷ್ಣುತೆಯನ್ನು ತೋರುತ್ತಿದ್ದುವೆಂದಲ್ಲ. ಹೀಗಾಗಿ ಮೂವರ ಕೋಣೆಯ ಸಂತತಿಯ ಯತಿಗಳ ಹಾಗೂ ಅವರ ಎದುರಾಳಿಗಳ ನಡುವಿನ ನಂಟು ಯಾವ ಬಗೆಯಾಗಿದ್ದಿತೆಂಬುದನ್ನು ತೀರ್ಮಾನಿಸುವುದು ಕಷ್ಟವೇ ಸರಿ. ಬಹಳಷ್ಟು ಮಟ್ಟಿಗೆ ಅವು ಆಳುವ ಯತಿಗಳ ವ್ಯಕ್ತಿತ್ವಗಳನ್ನನುಸರಿಸಿ ಮಾರ್ಪಾಟು ಹೊಂದುತ್ತಲಿದ್ದವೆಂದು ಕಾಣುತ್ತದೆ.

ಬಿಜ್ಜಳನ 'ಮಹಾಮಂತ್ರಿಯಾದ ಕೇಸಿಮಯ್ಯ ದಂಡನಾಯಕ'ನು ಒಂದು ದೇವಾಲಯ ಹಾಗೂ ಒಂದು ಬ್ರಹ್ಮಪುರಿಯನ್ನು ಸ್ಥಾಪಿಸಿ ಅವುಗಳನ್ನು ದತ್ತಿ ನೀಡಿದನು. ಈ ದೇವಾಲಯವು ಕೇಶವನಿಗೆ (ವಿಷ್ಣುವಿಗೆ) ಸಮರ್ಪಿತವಾಗಿತ್ತು. ಹೀಗಾಗಿ ಯಾರೇ ಆದರೂ ಅವನನ್ನು ಒಬ್ಬ ನಿಷ್ಠಾವಂತ ವೈಷ್ಣವನೆಂದು ಭಾವಿಸುವ ಸಾಧ್ಯತೆಯಿದೆ. ಆದರೆ ಇದಕ್ಕೆ ವಿರುದ್ಧವೆಂಬಂತೆ ಕೇದಾರೇಶ್ವರದೇವಾಲಯದ ಯತಿ ವಾಮಶಕ್ತಿಯೇ ಅವನ ಆರಾಧ್ಯ ಅಥವಾ ಕುಟುಂಬದ ಯತಿಯಾಗಿದ್ದನು. ಇದೇ ರೀತಿ ಈ ದೇವಾಲಯ ಹಾಗೂ ಬ್ರಹ್ಮಪುರಿಯ ಪಾರುಪತ್ಯವನ್ನು ಕೂಡ ಆ ಯತಿಗೇ ವಹಿಸಿಕೊಡಲಾಗಿತ್ತು. 1159ರ ಶಾಸನ ಹೀಗೆನ್ನುತ್ತದೆ:

ವಿದ್ವಾಂಸರಿಗೆ ದಯಾಮಯನು, ಕವಿಸಮೂಹಕ್ಕೆ ಆಶ್ರಯದಾತನು, ಅನ್ನದಾನ, ಸುವರ್ಣದಾನ, ಕನ್ಯಾದಾನ, ಗೋದಾನಗಳನ್ನು ನೀಡುವಲ್ಲಿ ಸಂತೋಷಪಡುವವನು, ಲಾಕುಲಾಗಮದ ಆಭರಣನು, ಶಾಸ್ತ್ರ, ಆಗಮಕುಶಲನೂ ಆಗಿದ್ದ ಗೌತಮ ಮುನಿಯ ಮಗನೂ ಬಲಿಪುರದ ದಕ್ಷಿಣಕೇದಾರೇಶ್ವರನ ಪಾದಪಂಕಜಗಳನ್ನು ಪೂಜಿಸುವವನೂ ...... ಸಂನ್ಯಾಸದ ಸದ್ಗುಣಗಳಾದ ಯಮ, ನಿಯಮಾದಿಗಳಿಂದ ಕೂಡಿದವನೂ, ತನ್ನ ಆರಾಧ್ಯನೂ ಆದ ರಾಜಗುರು, ವಾಲ್ಮೀಕಿದೇವನ ಪಾದಗಳನ್ನು ತೊಳೆದು ಆ ಸ್ಥಳದ ಹಾಗೂ ಬ್ರಹ್ಮಪುರಿಯ ಆಡಳಿತವನ್ನು ಅವನಿಗೆ ಒಪ್ಪಿಸಿದನು.[92]

ಕೋಡಿಯ ಮಠದ ಯತಿಗಳು ಧರ್ಮಸಮನ್ವಯವನ್ನು ಯಾವ ಮಟ್ಟಿಗೆ ಸಾಧಿಸಿದ್ದರೆಂಬುದನ್ನು ಇದು ಇನ್ನೊಮ್ಮೆ ನಿದರ್ಶಿಸುತ್ತದೆ. ಇಲ್ಲಿ 'ಆರಾಧ್ಯ' ಪದವಿ ಮಾತ್ರ ಕುತೂಹಲಕರವಾಗಿದೆ. ಹೀಗೆನ್ನಲು ಕಾರಣ, ವೀರಶೈವಸಂಪ್ರದಾಯದ ಐತಿಹ್ಯ ಪರಂಪರೆಯ ಸಂಸ್ಥಾಪಕರಿಗೂ ಅದನ್ನು ಬಳಸಲಾಗುತ್ತದೆ.

ಕೇದಾರೇಶ್ವರದ ಇನ್ನೊಂದು ಶಾಸನದಲ್ಲಿ ನಮೂದಿಸಲಾದಂತೆ 1162 ಕ್ರಿ.ಶ. ದಲ್ಲಿ ಬಿಜ್ಜಳನು ದಕ್ಷಿಣದ ನಾಡನ್ನು ಗೆದ್ದುಕೊಳ್ಳಲೆಂದು 'ಬಳ್ಳಿಗಾವೆ' ಗೆ ಬಂದನು.[93] ಅವನ ಮಾಂಡಲಿಕನಾದ ಕಸಪಯ್ಯನಾಯಕನು ಕೇದಾರೇಶ್ವರದೇವಾಲಯಕ್ಕೆ ಹಾಗೂ 'ಕಲ್ಪವೃಕ್ಷ'ಕ್ಕೆ ಸಮಾನನಾದ ಘೋರ ತಪಸ್ಸಿನ ಮೂಲಕ 'ಕಾಮ'ವನ್ನು ಅಂಕಿತದಲ್ಲಿರಿಸಿಕೊಂಡ ಎರಡನೆಯ ವಾಮಶಕ್ತಿಗೆ ದತ್ತಿಯನ್ನು ನೀಡುವಂತೆ ಬಿಜ್ಜಳನಿಗೆ ಮನವಿ ಸಲ್ಲಿಸಿದನು. ಗೌತಮನನ್ನು ಬಣ್ಣಿಸುವ 1149ರ ಶಾಸನದ ಪದ್ಯದಂಥ ಒಂದು ಪದ್ಯವು ಇಡಿಯ ವಿಶ್ವವು ವಾಮಶಕ್ತಿಯನ್ನು 'ಜೀಯಾ' ಎಂದು ಸಂಬೋಧಿಸುತ್ತದೆಂದು ಸಾರುತ್ತದೆ. ಇದೇ ಶಾಸನದ ಪುರವಣಿ ಶಾಸನವೊಂದು 'ಕೋಡಿಯ ಮಠದ ದಕ್ಷಿಣಕೇದಾರೇಶ್ವರ ಸೋಮನಾಥ ಹಾಗೂ ಅಬ್ಬಲೂರಿನ ಬ್ರಹ್ಮೇಶ್ವರದೇವರ ಅಲಂಕರಣಕ್ಕಾಗಿ.....' ಬಿಜ್ಜಳನು ಹಲವಾರು ಗ್ರಾಮಗಳ ಭೂಕಂದಾಯವನ್ನು ದತ್ತಿ ನೀಡಿದನೆನ್ನುತ್ತದೆ. ಅಬ್ಬಲೂರಿನ ಬ್ರಹ್ಮೇಶ್ವರದೇವಾಲಯವು ಕೋಡಿಯ ಮಠದ ಯತಿಗಳನ್ನು ತನ್ನ ಸದಸ್ಯರನ್ನಾಗಿ ಮಾಡಿಕೊಂಡುದನ್ನು ಆಗಲೇ ಕಂಡುಕೊಂಡಿದ್ದೇವೆ. ಸೋಮನಾಥಮಠ ಕೂಡ ಇದೇ ಮಠಕ್ಕೆ ಸೇರಿದುದಾಗಿರಬಹುದೆನ್ನಿಸಿದರೂ ಹಾಗೆಂದು ಗುರುತಿಸಲು ಬಾರದು.

---

92. ಅದೇ. Sk. 123.
93. ಅದೇ. Sk. 102.
94. ಅದೇ. Sk. 108.

ರೈಸ್ ಅವರು ಕ್ರಿ. ಶ. 1164[94] ಎಂದು ತೀರ್ಮಾನಿಸಿದ ವಾಮಶಕ್ತಿಗೆ ನೀಡಲಾದ ದಾನವನ್ನೊಳಗೊಂಡ ಒಂದು ತೃಟಿತ ಶಾಸನವು, ಮಾಮಶಕ್ತಿ, ಕೇದಾರಶಕ್ತಿ, ಶ್ರೀಕಂಠ ಮತ್ತು ಸೋಮೇಶ್ವರರಲ್ಲದೆ ಯಾರೆಂದು ಗುರುತಿಸಲಾಗದ ಇನ್ನಿಬ್ಬರು ಯತಿಗಳಾದ ಕೇದಾರಶಕ್ತಿವರ ಹಾಗೂ ದೇವವ್ರತ ಎನ್ನುವವರನ್ನು ಸಂಕ್ಷಿಪ್ತವಾಗಿ ನಮೂದಿಸುತ್ತದೆ. ದಾತೃವಾದ ಮಹಾದೇವದಂಡನಾಯಕನು ಬಿಜ್ಜಳನ ಒಬ್ಬ ಮಾಂಡಲಿಕ ಅಥವಾ ಅಧಿಕಾರಿಯಾಗಿದ್ದು ಬನವಾಸಿಯ ಪ್ರದೇಶವನ್ನು ಆಳುತ್ತಿದ್ದನು. ಈ ಶಾಸನ ಹೇಳುವಂತೆ, ಒಂದು ದಿನ, 'ಹೆಸರಾಂತ ಮುನಿ ಕೇದಾರಶಕ್ತಿಯು ಧರ್ಮವನ್ನು ಕುರಿತು ಪ್ರವಚನವನ್ನು ನೀಡಿದನು. ಆ ಪ್ರವಚನದ ವಿಷಯ ಹೀಗಿತ್ತು.' - "ಲಿಂಗವನ್ನು ಸ್ಥಾಪಿಸುವವನು ಆಗಮಗಳಲ್ಲಿ ಹೇಳಲಾದ ಬಗೆ ಬಗೆಯ ಅರ್ಹತೆಗಳನ್ನು ಕೋಟಿಪಟ್ಟು ಪಡೆಯುವನು." ಇದನ್ನು ಕೇಳಿದ ಆ ಮಹಾದೇವದಂಡನಾಯಕನು ಯತಿಯ ಪಾದಗಳನ್ನು ತೊಳೆದು ಲಿಂಗರೂಪದ (ಮ?) ಲಪೇಶ್ವರದೇವ ಹೆಸರಿನ ಲಿಂಗವನ್ನು ಸ್ಥಾಪಿಸಿದನು. ಮೂವರಕೋಣೆಯ ಸಂತತಿಯ ಮೊದಲ ಕೆಲವು ಶಾಸನಗಳಲ್ಲಿ ಆಗಲೇ ಲಿಂಗಪೂಜೆಗೆ ಒತ್ತು ಕೊಡಲಾಗುತ್ತಿದ್ದುದು ಕಂಡುಬರುತ್ತದೆ. ಈ ಸಂಗತಿಯು ಕಾಳಾಮುಖರನ್ನು ಅವರ ಹಿಂದಿನ ತಲೆಮಾರಿನವರಾದ ಲಕುಲೀಶ ಪಾಶುಪತರೊಂದಿಗೆ ಹಾಗೂ ಅವರ ಮುಂದಿನ ತಲೆಮಾರಿನವರಾದ ವೀರಶೈವರೊಂದಿಗೆ ನಂಟು ಜೋಡಿಸುತ್ತದೆ.

ಕಳಚೂರಿ ಅರಸನಾದ ರಾಯಮುರಾರಿ ಸೋವಿದೇವನ ಮಾಂಡಲಿಕನೋ ಅಥವಾ ಒಬ್ಬ ಅಧಿಕಾರಿಯೋ ಆಗಿದ್ದ ಕೇಶವ ದಂಡನಾಯಕನು 'ದಕ್ಷಿಣದ ಎಲ್ಲ ನಾಡುಗಳ' ಆಡಳಿತವನ್ನು 1168ರಲ್ಲಿ ನಿರ್ವಹಿಸುತ್ತಿದ್ದನು. ಕೇದಾರೇಶ್ವರ ದೇವಾಲಯದ ಒಂದು ಶಾಸನವು ಬಳ್ಳಿಗಾವೆಗೆ ಭೇಟಿಯಿತ್ತ ಈ ಕೇಶವನು ಅಲ್ಲಿಯ ದೇವಾಲಯ ಹಾಗೂ ಮುಖ್ಯಯತಿಯಿಂದ ಪ್ರಭಾವಿತನಾದನೆಂದು ಹೇಳುತ್ತದೆ:

> (ಅವನು) ದೇವಾಲಯದ 'ಆಚಾರ್ಯ'ನಾದ 'ರಾಜಗುರುದೇವ'ನ ಬಳಿಸಾರಿದನು. ಎಲ್ಲ ವಿದ್ಯೆಗಳಲ್ಲಿ ಪಾರಂಗತನಾದ ಅವನ ಅರ್ಹತೆಯನ್ನು ತುಂಬ ಹೊತ್ತು ಗಮನಿಸಿದನು. ವ್ಯಾಕರಣದಲ್ಲಿ ಪಾಣಿನಿ ಪಂಡಿತ; ರಾಜಕೀಯ ಹಾಗೂ ವಿವೇಚನೆಗಳಲ್ಲಿ ಶ್ರೀಭೂಷಣಾಚಾರ್ಯ; ನಾಟಕ ಹಾಗೂ ಸಂಗೀತ ಶಾಸ್ತ್ರಗಳಲ್ಲಿ ಭರತಮುನಿ; ಕಾವ್ಯದಲ್ಲಂತೂ ಸುಬಂಧುವೇ; ಸಿದ್ಧಾಂತದಲ್ಲಿ ಲಕುಲೀಶ; ಶಿವೋಪಾಸನೆಯಲ್ಲಿ ಸ್ಕಂದ; - ಎಂದೆಲ್ಲ ವಿಶ್ವದಲ್ಲಿಯೇ ನಿಜವಾದ ರಾಜಗುರುವಿನ ಲಕ್ಷಣಗಳುಳ್ಳವನೆಂದರೆ ಈ ವಾಮಶಕ್ತಿ.[95]

---

95. ಅದೇ. Sk. 92.

ಆಗ ಕೇಶವನು ಅರಸನಿಗೆ ಒಂದು ಮನವಿಯನ್ನು ಸಲ್ಲಿಸಿ, ದೇವಾಲಯಕ್ಕಾಗಿ ಒಂದು ಗ್ರಾಮವನ್ನು ದತ್ತಿನೀಡಲು ಅವನಿಂದ ತಾಮ್ರಪಟದ ಶಾಸನವನ್ನು ಪಡೆದುಕೊಂಡನು. ಇಂಥದೇ ಒಂದು ವಿವರಣೆ ಕಳಚೂರಿ ಅರಸ ಸಂಕಮದೇವನಿಂದ ದೇವಾಲಯಕ್ಕೆ ನೀಡಲಾದ 1181 ಕ್ರಿ.ಶ.ದ ಶಾಸನದಲ್ಲಿದೆ.

ಕ್ರಿ.ಶ.1171ರ ಹೊತ್ತಿಗೆ ವಾಮಶಕ್ತಿ ಸಾಕಷ್ಟು ಮುಪ್ಪಿನವನಾಗಿರಲು ಸಾಕು. ಏಕೆಂದರೆ, ಅದೇ ವರ್ಷದ ಬಳ್ಳಿಗಾವೆಯ ವೀರಗಲ್ಲು 'ರಾಜಗುರು ವಾಲ್ಮೀಕಿದೇವನ' ಮೊಮ್ಮಗನ ಮೇಲೆ ದರೋಡೆಕೋರರಿಂದ ನಡೆದ ದಾಳಿಯನ್ನು ನಮೂದಿಸುತ್ತದೆ.[96] ಆದರೂ ಕೋಡಿಯ ಮಠದ ಪ್ರಮುಖನಾಗಿ ಸುಮಾರು ಐವತ್ತು ವರ್ಷಗಳ ತರುವಾಯದಲ್ಲೂ, ಅಂದರೆ 1193ರಲ್ಲೂ ಅವನು ಜೀವಿಸಿದ್ದನು. ಅವನ ಮೊಮ್ಮಗನ ಉಲ್ಲೇಖವನ್ನು ಗಮನಿಸಿದರೆ ಮಠದ ಯತಿಗಳೆಲ್ಲರೂ ಬ್ರಹ್ಮಚಾರಿಗಳಾಗಿರಲಿಲ್ಲವೆಂದು ತೋರುತ್ತದೆ.

ಕ್ರಿ.ಶ.1181ರ ಸುಮಾರಿಗೆ ವಾಮಶಕ್ತಿಗೆ ವಾಮಶಕ್ತಿದೇವ ಹಾಗೂ ಅವನ ಶಿಷ್ಯನಾದ ಎರಡನೆಯ ಜ್ಞಾನಶಕ್ತಿದೇವನು ಬಳ್ಳಿಗಾವೆಯಲ್ಲಿ ಕೊಂಚ ನೆಲ, ಹಣ ಹಾಗೂ ಮೂರು ಮನೆಗಳನ್ನು ನಿರ್ವಹಿಸುವ ಹೊಣೆಯನ್ನು ವಹಿಸಿಕೊಂಡರು. ಇವೆಲ್ಲ 'ನೃತ್ಯಬಾಲೆ.... ಮಲ್ಲವ್ವೆ, ಮತ್ತು ಮದ್ದಲೆವಾದಕನಾದ ಮಾದಿಗನಿಗೆ ದೇವಾಲಯದ ಆಸ್ತಿಗಳಾಗಿ ' ನೀಡಲಾದವುಗಳು.[97] ಕಾಳಾಮುಖರ ಈ ದೇವಾಲಯದ ಹಾಗೂ ಇನ್ನಿತರ ಶಾಸನಗಳಲ್ಲಿ ದೇವಾಲಯದ ನೃತ್ಯಗಾತಿ ಹಾಗೂ ಸಂಗೀತಗಾರರನ್ನು ಉಲ್ಲೇಖಿಸಲಾಗಿದೆ. ಅವರು ದೇವದಾಸಿಯರನ್ನು ಜತೆಗೂಡಿ ಈ ಸಂಪ್ರದಾಯದ ಸಮರ್ಥಕರಿಗೆ ಮನರಂಜನೆಯನ್ನು ಒದಗಿಸುತ್ತಿದ್ದರೆಂದು ಕಾಣುತ್ತದೆ. ವಾಮಶಕ್ತಿಯ ಶಿಷ್ಯನಾದ ಜ್ಞಾನಶಕ್ತಿ ಕಾಣಿಸಿಕೊಳ್ಳುವುದು ಇದೊಂದೇ ಶಾಸನದಲ್ಲಿ.

ಕ್ರಿ.ಶ.1193ರಲ್ಲಿ ಹೊಯ್ಸಳ ಇಮ್ಮಡಿ ವೀರಬಲ್ಲಾಳನ ಮಾಂಡಲಿಕನು ದಕ್ಷಿಣ ಕೇದಾರೇಶ್ವರ ದೇವಾಲಯಕ್ಕೆ ಒಂದಿಷ್ಟು ನೆಲವನ್ನು ದಾನವಾಗಿ ನೀಡಿದ ಕಾಲಕ್ಕೂ ಕೂಡ ರಾಜಗುರು ವಾಮಶಕ್ತಿಯು ಮಠಾಧೀಶನಾಗಿದ್ದನು.[98] ಈ ಶಾಸನವು ಈ ಯತಿಯನ್ನು ಕುರಿತು ದೀರ್ಘ ಪ್ರಶಂಸೆಯನ್ನು ಹೊಂದಿದ್ದು, ಅದರಿಂದ ಕೆಲವನ್ನು ಇಲ್ಲಿ ಉದ್ಧರಿಸಲಾಗಿದೆ :

> ಈ ದೇವಾಲಯದ ಯತಿ, ರಾಜಗುರು ವಾಮಶಕ್ತಿದೇವನು ಯಮ, ನಿಯಮ, ಇತ್ಯಾದಿ ಸದ್ಗುಣಗಳನ್ನು ಪಡೆದವನು, ಅವನು ಹೇಳಿಕೊಟ್ಟ ಅಷ್ಟಾಂಗಯೋಗಗಳಿಗೆ ಸಮರ್ಪಿತರಾದ ಶಿಷ್ಯರಿಂದ

---

96. ಅದೇ. Sk. 150.
97. ಅದೇ. Sk. 101.
98. ಅದೇ. Sk. 105.

ಸುತ್ತುವರಿಯಲ್ಪಟ್ಟವನು, ಸ್ನೇಹಪರರಾದ ಅರಸರು ತಲೆಬಾಗುವಾಗ ಅವರ ಕಿರೀಟಗಳಿಗೆ ಅಂಟಿಸಲಾದ ಹಿರಿದಾದ ನೀಲಮಣಿಗಳೆಂಬ ಜೇನ್ನೊಣಗಳಿಂದ ಮುತ್ತಿಕೊಂಡ ಪಾದಪಂಕಜನು.....; ಕವಿಗಳಿಗೆ, ಘನಪಾಠಿಗಳಿಗೆ (ಕಂಠಪಾಠ), ವಾಗ್ಮಿಗಳಿಗೆ, ವಾದಿಗಳಿಗೆ, ಮತ್ತು ಬೇರೆ ಬಗೆಯ ವಿದ್ವಾಂಸರಿಗೆ ಸಂತಸವನ್ನು ನೀಡಬಲ್ಲ ಚಲಿಸುವ ಕಲ್ಪವೃಕ್ಷನು, ವೇದಾಂತ, ಸಿದ್ಧಾಂತ, ಆಗಮ, ತರ್ಕಶಾಸ್ತ್ರದ ಆರು ಪದ್ಧತಿಗಳು, ವ್ಯಾಕರಣದ ಎಲ್ಲ ಶಾಖೆಗಳು, ಶುದ್ಧ ಧರ್ಮಶಾಸ್ತ್ರ ಹಾಗೂ ಉಳಿದೆಲ್ಲ ಶಾಸ್ತ್ರಗಳ ಅರ್ಥವಿವರಣೆಗಳನ್ನು ಕುರಿತು ತೀರ್ಮಾನ ಹೇಳುವವನು, ಎದುರಾಳಿ ವಾಗ್ಮಿಗಳೆಂಬ ಪರ್ವತಗಳನ್ನು ಸಿಡಿಲಿನಂತೆ ಸೀಳಿ ಹಾಕುವ ಕೌಶಲವುಳ್ಳವನು;...... ಅನ್ನದಾನ, ಸುವರ್ಣದಾನ, ಕನ್ಯಾದಾನ, ಗೋದಾನ, ಭೂದಾನ, ಅಭಯ-ಭೈಷಜ್ಯದಾನ ಮೊದಲಾದ ದಾನ ಕಾರ್ಯಗಳಿಗಾಗಿ ತನ್ನನ್ನು ಸಮರ್ಪಿಸಿಕೊಂಡವನು,..... ಪ್ರಾಚೀನ ರಾಜಧಾನಿ ನಗರವಾದ ಬಲಿಪುರದ ದೇವನಾದ ದಕ್ಷಿಣಕೇದಾರೇಶ್ವರನ ಪವಿತ್ರವಾದ ಪಾದಸಂಕಜಗಳನ್ನು ಪೂಜಿಸುವವನು; ಎಲ್ಲ ಬಗೆಯ ಮಂತ್ರಶಕ್ತಿಗಳ (ವಿಶಿಷ್ಟ ನಾನಾ ಮಂತ್ರ ಸಾಧಕ) ಸ್ವಾಮಿಯೆನಿಸಿದವನು...... ಅರಸರ ತಲೆಗಳ ಮೇಲೆ ಅವನ ಅಧಿಕಾರ, ವಿದ್ವಾಂಸರ ವಸತಿಗಳಲ್ಲಿ ಅವನ ಕೀರ್ತಿ, ಪಾರ್ವತೀಪತಿಯ ಪಾದಗಳಲ್ಲಿ ತೊಡಗಿದ ಅವನ ಮನಸ್ಸು - ಇವುಗಳಿಂದ ಕೂಡಿದ ವಿಶ್ವವಿಖ್ಯಾತ ಭತೀಂದ್ರನಾದ ವಾಮಶಕ್ತಿಯು ದೀರ್ಘಕಾಲ ಬಾಳಲಿ. ಉದಯಿಸುವ ತರ್ಕಶಾಸ್ತ್ರವೆಂಬ ಸೂರ್ಯನಿಗೆ ಪರ್ವತಪ್ರಾಯ, ಚೆನ್ನಾದ ಕವಿತೆಯ ವಜ್ರಗಳಿಗೆ ಮಹಾಸಾಗರ ಸ್ವರೂಪಿ, ವ್ಯಾಕರಣ ನಿಯಮಗಳನ್ನು ಕಂಡು ಹಿಡಿಯುವ ನಿಸ್ಸೀಮ, ಛಂದಶ್ಶಾಸ್ತ್ರಕ್ಕೆ ಸೂತ್ರರೂಪವನ್ನು ನೀಡುವ ಅಗ್ರಣಿ, ಇವೆಲ್ಲ ವಿದ್ಯೆಗಳನ್ನು ಕಲಿಯುವವರ ಬೊಕ್ಕಸ, ಸಿದ್ಧಾಂತಗಳಿಗೆ ವ್ಯಾಖ್ಯೆ ನೀಡುವ ದಕ್ಷನೆನಿಸಿದ್ದಾನೆ.... ಗಲ್ಲಗಳನ್ನು ಹವೆಯಿಂದ ಊದಿಸಿಕೊಂಡು ಕೊಳಲುಗಳಿಂದ ಬಗೆ ಬಗೆಯ ಸ್ವರಗಳನ್ನು ಹೊರಡಿಸುವವನ ಜೊತೆಗೆ, ಸಪ್ತಸ್ವರಗಳ ಸರಿಯಾದ ಪರಿಲಿತಗಳಿಂದ ಕೂಡಿ ಚೇತೋಹಾರಿ ಗೀತೆಗಳನ್ನು ಹಾಡುವ ಸ್ತ್ರೀಯರ ಜೊತೆಗೆ ಮತ್ತು ತಮ್ಮ ಟೊಂಕಗಳಿಗೆ ಬಿಗಿದುಕೊಂಡ ಮದ್ದಲೆಗಳಿಂದ ಇಂಪಾದ ಧ್ವನಿಗಳನ್ನು ಹೊರಡಿಸುವ ವಾದಕರ ಜೊತೆಗೆ ದಿನನಿತ್ಯದ ನೃತ್ಯಗಳನ್ನು ಮಾಡುವಲ್ಲಿ ವಿಶ್ವದಲ್ಲೇ ಕುಶಲನಾದವನೆಂದರೆ ವಾಮಶಕ್ತಿ ಭತೀಂದ್ರನು. ಒಬ್ಬ ಮನುಷ್ಯ ಒಂದು ಶಾಸ್ತ್ರದ ಸೂತ್ರಗಳನ್ನು ತಯಾರಿಸುತ್ತಾನೆ. ಇನ್ನೊಬ್ಬನು ಪದಗಳನ್ನು ವಿಶ್ಲೇಷಿಸುತ್ತಾನೆ. ಆದರ

ವಿಸ್ಮಯದ ಸಂಗತಿಯೆಂದರೆ ವಾಮಶಕ್ತಿಯೊಬ್ಬನೇ ರಚನೆ, ವಿಶ್ಲೇಷಣೆ, ಭಾಷ್ಯಗಳ ಈ ಮೂರು ಸ್ಥಾನಗಳನ್ನು ವ್ಯಾಪಿಸುವನಲ್ಲದೆ ಅವು ಅರ್ಥವಾಗದವರಿಗೆ ಅವುಗಳನ್ನು ವಿವರಿಸಿಯೂ ಹೇಳುತ್ತಾನೆ.

ಅತಿಶಯೋಕ್ತಿಗಳಿಂದ ಕೂಡಿದ ಈ ನಿರೂಪಣೆಯು ವಾಮಶಕ್ತಿ ಹಾಗೂ ಮೂವರ ಕೋಣೆಯ ಸಂತತಿಯ ಬೇರೆ ಯತಿಗಳನ್ನು ಕುರಿತು ನಮಗೆ ಹೆಚ್ಚೇನನ್ನೂ ನೀಡಲಾರದು. ಆದರೆ ಇದು ಈ ವೊದಲಿನ ಶಾಸನಗಳ ಆಶಯವನ್ನೇ ವ್ಯಕ್ತಪಡಿಸುತ್ತಿದ್ದರೂ ಈ ಯತಿಯ ಯೋಗಸಾಮರ್ಥ್ಯ, ಆತನ ಶಿಕ್ಷಣದ ಪಟ್ಟಿಗೆ ಸೇರ್ಪಡಿಸಲಾದ ಹಲವು ಅಸಾಧ್ಯ ವಿಷಯಗಳು ; ಅದರಲ್ಲೂ ತತ್ವಶಾಸ್ತ್ರ, ತರ್ಕಶಾಸ್ತ್ರ, ಕಾವ್ಯ ಹಾಗೂ ವ್ಯಾಕರಣ ; ಅರಸರ ಮೇಲಿರುವ ಅವನ ಪ್ರಭಾವ ; ವಾದ - ವಿವಾದ ಹಾಗೂ ಶಿಕ್ಷಣ ನೀಡುವಲ್ಲಿ ಅವನ ದಾನಧರ್ಮ ಹಾಗೂ ಶಿವಭಕ್ತಿಗಳಿಗೆ ಒಂದು ಅಡಿಗೆರೆಯನ್ನು ಎಳೆಯುವುದು ಖಂಡಿತ. ಹಲವು ಮಂತ್ರಗಳ ಮೇಲೆ ಅವನಿಗಿರುವ ಹಿಡಿತವು ಅವನ ತಾಂತ್ರಿಕ ಪ್ರಭಾವವನ್ನು ನಿರ್ದೇಶಿಸುತ್ತದೆ. ಅಪರಿಚಿತವಾದ "ಅಷ್ಟಾಂಗಯೋಗ" ಪದವು 'ಯತಿತ್ವದ ಗುಣಗಳನ್ನು ಇಲ್ಲವೆ ದೇಹದ ಎಂಟು ಅವಯವಗಳನ್ನು ಸೂಚಿಸುತ್ತಿರಬಹುದು. ವಾಮಶಕ್ತಿ 'ದಿನಾಲು ಸಂತೋಷಕರವಾದ ನೃತ್ಯಗಳನ್ನು ನೆರವೇರಿಸುವಲ್ಲಿ ವಿಶ್ವದಲ್ಲಿಯೇ ಹೆಚ್ಚು ಪಳಗಿದವನಾಗಿರುವ' ಸಾಧ್ಯತೆ ತೀರ ಕಡಿಮೆ. ಈ ಹೊತ್ತಿಗೆ ಅವನು ತುಂಬ ಮುಪ್ಪಿನವನಾಗಿರಲು ಸಾಕು. ಕೆಲವು ಜನ ಯತಿಗಳು ಧಾರ್ಮಿಕ ನೃತ್ಯಗಳನ್ನು ಮಾಡುತ್ತಿರಬಹುದಾದರೂ ಸಾಯಣ ಮಾಧವರು ನಕುಲೀಶನ ಅನುಯಾಯಿಗಳು[99] ಆಚರಿಸಬೇಕಿದ್ದ 'ಪಡಂಗೋಪಚಾರ'ಗಳಲ್ಲಿ 'ಗೀತ' 'ನೃತ್ಯಗಳನ್ನು ಸೇರ್ಪಡಿಸಿದರೂ ಶಾಸನಗಳಲ್ಲಿ ಮತ್ತೆ ಮತ್ತೆ ಒತ್ತು ನೀಡಲಾಗುವ 'ತಪಸ್ಸು'ಹಾಗೂ 'ಯತಿತ್ವ'ಗಳನ್ನು ಈ ಸಂಗತಿಗಳೊಂದಿಗೆ ಹೊಂದಾಣಿಕೆ ಮಾಡುವುದು ಕಷ್ಟದ್ದಾಗಿ ತೋರುತ್ತದೆ. ಇವುಗಳಾಚೆಗೆ ಹೇಳುವುದಾದರೆ ಈ ಶಾಸನವು ದೇವಾಲಯದ ಗಾಯನ, ನರ್ತನಗಳನ್ನು ಕುರಿತು ಒಂದು ಚಿತ್ತಾಕರ್ಷಕ ಚಿತ್ರವನ್ನೀಯುವುದಂತೂ ನಿಜ.

ವಾಮಶಕ್ತಿಯ ಹೆಸರು ಕಳಚೂರಿ ಅರಸನಾದ ಬಿಜ್ಜಳನ ಆಳ್ವಿಕೆಯ ಕಾಲದ ಧಾರವಾಡ ಜಿಲ್ಲೆಯ ಹಳೆ ನಿಡನೇಗಿಲ ಗ್ರಾಮದ ಕ್ರಿ.ಶ.1165ರ ದತ್ತಿಯನ್ನು ಕುರಿತಾದ ಬೇರೊಂದು ಶಾಸನದಲ್ಲಿಯೂ ಕಾಣಿಸಿಕೊಳ್ಳುತ್ತದೆ.[100] ಈ ದಿನದಂದು ಈ ಅರಸನ ಮಾಂಡಲಿಕನಾದ ಸಿಂದ ಮಹಾಮಂಡಲೇಶ್ವರನು ಈ ಗ್ರಾಮದ ಮಲ್ಲಿಕಾರ್ಜುನ ದೇವಾಲಯಕ್ಕೆ 'ಬಲಿಪುರ' ಪಟ್ಟಣದ ದಕ್ಷಿಣಕೇದಾರೇಶ್ವರ ದೇವಾಲಯದ ಯತಿಯಾದ ವಾಮಶಕ್ತಿಪಂಡಿತದೇವನ ಪಾದಗಳನ್ನು ತೊಳೆದು ಕಾಣಿಕೆಯನ್ನು ಸಲ್ಲಿಸಿದನು. ಮಲ್ಲಿಕಾರ್ಜುನ

---

99. ಸಂ. ಯು. ಎಸ್. ಶರ್ಮ, ಪು. 311.

100. ಸಂ. ಎ. ಎಮ್. ಅಣ್ಣಿಗೇರಿ, 'Karnatak Inscriptions' IV. no. 13.

ದೇವಾಲಯದ ಪ್ರಭಾವಿಯಾದ ಪ್ರಮುಖನ ಹೆಸರನ್ನು ನಮೂದಿಸಿಲ್ಲವಾದರೂ ಅವನು ಮೂವರ ಕೋಣೆಯ ಸಂತತಿಯ ಇನ್ನೊಬ್ಬ ಸದಸ್ಯನಾಗಿರಲು ಸಾಕು. ಈ ಶಾಸನದಲ್ಲಿ ವಾಮಶಕ್ತಿಯನ್ನು 'ರಾಜಗುರು' ಎಂದು ಉಲ್ಲೇಖಿಸಿಲ್ಲ. ಹೀಗಾಗಿ ಅವನು ಬಳ್ಳಿಗಾವೆಯ ಸುತ್ತಲ ಸ್ಥಾನಿಕ ಆಳುವವರು, ಅಧಿಕಾರಿಗಳಿಗಿಂತ ಮೇಲಿನ ಹುದ್ದೆಯವರಿಗೆ ರಾಜ ಸಲಹೆಗಾರನಾಗಿರಲಿಕ್ಕಿಲ್ಲ ಎಂಬುದನ್ನು ಬೆಂಬಲಿಸುತ್ತದೆ.

ಕ್ರಿ.ಶ.1193ರ ತರುವಾಯದಲ್ಲಿ ವಾಮಶಕ್ತಿ ಅಥವಾ ಅವನ ನೆರಳಿನಂತಿದ್ದ ಶಿಷ್ಯ ಮೂರನೆಯ ಜ್ಞಾನಶಕ್ತಿಯ ಬಗೆಗೆ ಹೆಚ್ಚೇನೂ ಕೇಳಿ ಬರುವುದಿಲ್ಲ. ಮೂವರ ಕೋಣೆಯ ಸಂತತಿಯ, ಬಳ್ಳಿಗಾವೆಯ ಕೊನೆಯ ಶಾಸನವು ಕ್ರಿ.ಶ.1215ದ್ದಾಗಿದ್ದು, ಇದು ದೇವಗಿರಿ ಯಾದವರ ಸಿಂಹಣದೇವನ ಆಳ್ವಿಕೆಯ ಕಾಲದ್ದಾಗಿದೆ, ಈ ದಿನ ಹೇಮಯ್ಯ ನಾಯಕನೆಂಬ ಅಧಿಕಾರಿ ಮತ್ತು ಅವನ ಹೆಂಡತಿ ರುಪ್ಪಬಾಯಿ ಇವರು ಕೇದಾರೇಶ್ವರ ದೇವಾಲಯಕ್ಕೆ ಒಂದು ದತ್ತಿಯನ್ನು ನೀಡಿ, ಅದನ್ನು ದೇವಾಲಯದ 'ಆಚಾರ್ಯ', ಹಾಗೂ ಶ್ರೀಕಂಠದೇವನ ಶಿಷ್ಯನಾದ 'ಮಹಾಬ್ರತಿ' ಮೂರನೆಯ ವಾಮಶಕ್ತಿದೇವನಿಗೆ ಒಪ್ಪಿಸಿದರು.[101] ಈ ಮೊದಲೇ 'ಮಹಾವ್ರತಿನ್' ಪದ ಧ್ವನಿಸುವ ಅರ್ಥಗಳನ್ನು ಕುರಿತು ಚರ್ಚಿಸಿದ್ದೇವೆ.[102]

ಮೂವರ ಕೋಣೆಯ ಸಂತತಿಗೆ ಸಂಬಂಧಿಸಿರಬಹುದಾದ ಇನ್ನೊಂದು ಸ್ಥಾನ ಉಳಿದುಕೊಳ್ಳುತ್ತದೆ. ಇದೆಂದರೆ, ಶಿವಮೊಗ್ಗೆ ಜಿಲ್ಲೆಯ ಕುಪ್ಪಟೂರಿನ ಅಥವಾ ಅದರ ಹತ್ತಿರದ ದೇವಸ್ಥಾನ ಹಕ್ಕಲು ಎಂಬಲ್ಲಿಯ ಕೋಟೀಶ್ವರ ದೇವಾಲಯ. ಕಾಳಾಮುಖರು ನೆಲೆಸಿದ ಕಾಲಾವಧಿಯ ಸುಮಾರು ಒಂಬತ್ತು ಶಾಸನಗಳು ಇಲ್ಲಿ ದೊರೆತಿವೆ. ಅವು ಕ್ರಿ.ಶ.1070 ರಿಂದ 1280ರ ಕಾಲಾವಧಿಯಲ್ಲಿ ಹುಟ್ಟಿದವುಗಳು. ಕ್ರಿ.ಶ.1231ರಲ್ಲಿ ಒಬ್ಬ ಅಧಿಕಾರಿ ಹಾಗೂ ಯಾದವ ಸಿಂಘಣದೇವನ ದಂಡನಾಯಕನು ತಮ್ಮ ಅರಸನ ಅಪ್ಪಣೆಯಮೇರೆಗೆ ಕಾಳಾಮುಖಯತಿಯಾದ ರುದ್ರಶಕ್ತಿದೇವ ಮತ್ತು ಅವನ ತಮ್ಮನಾದ ಸರ್ವೇಶ್ವರ ಶಕ್ತಿದೇವನ ಉಸ್ತುವಾರಿಯಲ್ಲಿ ಎರಡು ಗ್ರಾಮಗಳನ್ನು ದತ್ತಿಯಾಗಿ ನೀಡಿದರು.[103] ಈ ಕಾಲದವರೆಗೆ ಇನ್ನೂ ಹಲವಾರು ದೇವಾಲಯಗಳನ್ನು ಕೋಟೀಶ್ವರ ದೇವಾಲಯಕ್ಕೆ ಪ್ರತಿಬದ್ಧ ಗೊಳಿಸಲಾಗಿತ್ತು. ಅವುಗಳಲ್ಲಿ ಕಬ್ಬಿನ ಸಿರಿವೂರಿನ ಸಿದ್ಧನಾಥ ದೇವಾಲಯ, ಮುಳಗುಂದದ ಸ್ವಯಂಭೂದೇವಾಲಯ, ಕಿರುವಡೆಯ ರಾಮನಾಥ ದೇವಾಲಯ, ಅಬ್ಬಲೂರಿನ ಗ್ರಾಮೇಶ್ವರ ದೇವಾಲಯ ತಿಳುವಳ್ಳಿಯ ಮೂಲಸ್ಥಾನ ವೊಸವಂತೇಶ್ವರ, ದೇವನಗಿರಿಯ ಚೈತ್ರಾಪುರ, ಹಾನುಂಗಲದ ಮೂಲಸ್ಥಾನ ಮತ್ತು ಕುಪ್ಪಟೂರಿನ ರಾಮನಾಥ ದೇವಾಲಯಗಳು

---

101. ಸಂ. ಮತ್ತು ಅನು. ರೈಸ್, EC, VII, Sk. 95.
102. ಮೇಲ್ಗಡೆ ನೋಡಿ, pp. 73-82.
103. ಸಂ. ಮತ್ತು ಅನು. ರೈಸ್, EC, VIII, Sb. 275.

ಒಳಗೊಂಡಿದ್ದವು. ಮೂವರ ಕೋಣೆಯ ಸಂತತಿಯ ಅಬ್ಬಲೂರಿನ ದೇವಾಲಯವಾದ ಬ್ರಹ್ಮೇಶ್ವರವು ಲಿಪಿಕಾರನ ತಪ್ಪಿನಿಂದಾಗಿ ಗ್ರಾಮೇಶ್ವರವಾಗಿದ್ದರೆ ಇವೆಲ್ಲ ದೇವಾಲಯಗಳು ಈ ಸಂಘಟನೆಗೆ ಸೇರಿದ್ದವೆಂದು ನಾವು ಭಾವಿಸಬಹುದಾಗಿದೆ. ಅಬ್ಬಲೂರಿನ ಗ್ರಾಮೇಶ್ವರ ದೇವಾಲಯವನ್ನು ಕುರಿತಾದ ಯಾವುದೇ ಶಾಸನವು ಇಲ್ಲವಾಗಿ ಈ ಊಹೆ ನಂಬಲರ್ಹವಲ್ಲ. ಕೋಟೀಶ್ವರದ ಕುಪ್ಪಟೂರ ದೇವಾಲಯ ಹಾಗೂ ಅದರ ಪೂರಕ ದೇವಾಲಯಗಳು ಒಟ್ಟುಗೂಡಿ ಬೇರೊಂದು ಸಂಕೀರ್ಣವನ್ನು ತಯಾರಿಸಿದ್ದವೆಂದು ಭಾವಿಸುವುದು ಹೆಚ್ಚು ಒಳ್ಳೆಯದು. ಕೇಂದ್ರಸ್ಥಾನದಲ್ಲಿರುವ ಆರ್ಚಬಿಶಪ್ಪನ ಅಧಿಕಾರ ಹಾಗೂ ಅದರ ಜೊತೆಗೆ ಸುತ್ತಲ ನಾಡಿನಲ್ಲಿರುವ ಕ್ರೈಸ್ತ ಪಾದ್ರಿಗಳ ಸ್ವರೂಪವೇ ಇದು ಆಗಿರಲು ಸಾಕು. ಇಂಥ ಸಂಘಟನೆಯ ಕಾರ್ಯದಕ್ಷತೆಯು ಈ ನಾಡಿನಲ್ಲಿ ಈ ಸಂಪ್ರದಾಯವು ಶೀಘ್ರವಾಗಿ ಪ್ರಾಮುಖ್ಯತೆಯನ್ನು ಹೊಂದಿರುವುದನ್ನು ವಿವರಿಸಲು ನೆರವಾಗಬಲ್ಲದು. ಇದೇ ಬಗೆಯ ತಂತ್ರವನ್ನು ಬಳಸಿಕೊಂಡವರೆಂದರೆ ಶಂಕರಾಚಾರ್ಯರು ಹಾಗೂ ಕ್ರಿಶ್ಚಿಯನ್ ಚರ್ಚುಗಳು.

## ಪರ್ವತಾವಳಿಯ ಬೇರೆ ಸಂತತಿಗಳು

ಇವುಗಳಲ್ಲಿ ಎಲ್ಲಕ್ಕೂ ಹೆಚ್ಚು ಮುಖ್ಯವಾದುದೆಂದರೆ ಬೆಳ್ಳೆಯ ಸಂತಾನವಾಗಿತ್ತು. ಈ ಗುಂಪಿನ ಶಾಸನಗಳು ಧಾರವಾಡ ಜಿಲ್ಲೆಯ ಹೊಂಬಳ ಹಾಗೂ ಲಕ್ಷ್ಮೇಶ್ವರಗಳಲ್ಲಿ ದೊರೆತಿವೆ. ಎರಡನೆಯ ಪಟ್ಟಣವು ತನ್ನ ಪುರಾತನ ಹೆಸರಾದ ಪುಲಿಗೆರೆ ಅಥವಾ ಹುಲಿಗೆರೆಯೊಂದಿಗೆ ಪುಲಿಗೆರೆ ಮೂರುನೂರು ಎಂಬ ನಾಡಿನ ರಾಜಧಾನಿಯಾಗಿತ್ತು. ಕ್ರಿ.ಶ. 1118ರಲ್ಲಿ ಕಲ್ಯಾಣ ಚಾಲುಕ್ಯರ ಅರಸನಾದ ಆರನೆಯ ವಿಕ್ರಮಾದಿತ್ಯನ ಅಧಿಕಾರಿಯೊಬ್ಬನು ಈ ಊರಿನ ರಾಮೇಶ್ವತದೇವ ದೇವಾಲಯದ ಆಚಾರ್ಯನಾದ ಸಾಮವೇದಿಪಂಡಿತನಿಗೆ ಕೆಲವು ತೆರಿಗೆಗಳ ಮೂಲಕ ಬರುವ ಆದಾಯವನ್ನು ಕಾಣಿಕೆಯಾಗಿ ಕೊಟ್ಟನು. ಸಾಮವೇದಿ ಪಂಡಿತನು ಈ 'ಬೆಳ್ಳೆಯ ದೇವರ ಸಂತಾನ' ಕ್ಕೆ ಸೇರಿದವನಾಗಿದ್ದನೆಂದು ಹೇಳಲಾಗುತ್ತದೆ.[104] 1123 ರಲ್ಲಿ ಇದೇ ಅರಸನ ಇನ್ನೊಬ್ಬ ಅಧಿಕಾರಿ ಇಲ್ಲವೆ ಮಾಂಡಲಿಕನು ಅಗಸ್ತ್ಯಪಂಡಿತದೇವನಿಗೆ ಒಂದಿಷ್ಟು ಭೂಮಿಯನ್ನು ಕೊಟ್ಟನು. ಇವನು ಈ ದೇವಾಲಯಕ್ಕೆ ಹೊಂದಿರುವ ಮಠದ ವಿದ್ಯಾರ್ಥಿಗಳಿಗೆ ಕೌಮಾರ ವ್ಯಾಕರಣವನ್ನು ಕಲಿಸುತ್ತಿದ್ದನು. ಅಗಸ್ತ್ಯಪಂಡಿತದೇವನು ' ಬೆಳ್ಳೆಯ ಸಂತಾನ'ದ ಸಾಮವೇದಿ ಪಂಡಿತದೇವನ ಶಿಷ್ಯನಾಗಿದ್ದನು.[105] ಇಂದು ಈ ದೇವಾಲಯವು ಅಸ್ತಿತ್ವದಲ್ಲಿಲ್ಲ. ಇದೇ ಸ್ಥಳದ ಇನ್ನೊಂದು ಶಾಸನವು 1162 ರಲ್ಲಿ ಕಳಚೂರಿಯ ಬಿಜ್ಜಳನ ಆಳ್ವಿಕೆಯಲ್ಲಿ ಅಮೃತರಾಶಿಪಂಡಿತನ ಶಿಷ್ಯನೂ, ರಾಮ್ಮೆದೇವ ಅಥವಾ ರಾಮಯ್ಯದೇವ'ನ ದೇವಾಲಯದ ಆಚಾರ್ಯನೂ ಆದ ದೇವರಾಶಿ ಪಂಡಿತನು

---

104. ಸಂ. ಜಿ. ಎಸ್. ಗೈ. SII. XX, no. 78.

105. ಅದೇ. no. 83.

ಒಂದಿಷ್ಟು ನೆಲವನ್ನು ಕೊಂಡುಕೊಂಡು ಅದನ್ನು ಮುತ್ತಿನಕೆಯ್ಯ ಇಂದ್ರೇಶ್ವರ ದೇವರ ಪೂಜೆಗೆಂದು ಕೊಟ್ಟನು.[106] ಈ ಯತಿಯು ಕಾಳಾಮುಖ ಸಮಯಕ್ಕೆ ಸೇರಿದವನೆಂದು ಹೇಳಲಾಗುವುದಾದರೂ ಇದು ಅದೇ ದೇವಾಲಯವೇ ಅಥವಾ ಅವನು ಅದೇ ಯತಿಗಳ ಪರಂಪರೆಯವನೇ ಎನ್ನುವುದು ಖಚಿತವಿಲ್ಲ.

ಇಲ್ಲಿ ಅಗಸ್ತ್ಯನಿಂದ ಕಲಿಸಲಾಗುತ್ತಿದ್ದ ಕೌಮಾರ ವ್ಯಾಕರಣವು ಬಳ್ಳಿಗಾವೆ ಕೋಡಿಯ ಮಠದ ಪಠ್ಯಕ್ರಮದಲ್ಲೂ ಇದ್ದಿತು. ಸಾಮವೇದಿ ಪಂಡಿತದೇವನ ಹೆಸರು ನಿಸ್ಸಂಶಯವಾಗಿಯೂ ಈ ಯತಿಯು ವಿಶೇಷವಾಗಿ ವೇದಗಳಿಗೆ ಅರ್ಪಿಸಿಕೊಂಡವನಾಗಿದ್ದನೆಂಬುದನ್ನು ಸೂಚಿಸುತ್ತದಾದರೂ ಈ ಸಂಗತಿ ಅಗತ್ಯಕ್ಕಿಂತ ಹೆಚ್ಚಿನ ಮಹತ್ವದ್ದೇನೂ ಆಗಿರುವಂತೆ ಕಾಣದು.

ಧಾರವಾಡ ಜಿಲ್ಲೆಯ ಗದಗ ತಾಲೂಕಿನ ಹೊಂಬಳದಲ್ಲಿ ದೊರೆತ ಒಂದೇ ಒಂದು ಶಾಸನವು ಲಕ್ಷ್ಮೇಶ್ವರದ ದತ್ತಿಗಳಿಗಿಂತ ಹೆಚ್ಚಿನ ಧಾರ್ಮಿಕ ಮಾಹಿತಿಯನ್ನು ಒದಗಿಸುತ್ತದೆ.[107] ಇದು ಹೆಸರಾಂತ ಗುರು ಬೊಂತೆಯಮುನಿ ಹಾಗೂ ಅವನ ಶಿಷ್ಯಂದಿರ ಎರಡು ತಲೆಮಾರುಗಳನ್ನು ಪರಿಚಯಿಸುತ್ತದೆ. ಬೊಂತೆಯಮುನಿಯನ್ನು 'ಕಾಳಾಮುಖಮುನೀಶ್ವರ'ನೆಂದು ಕರೆಯಲಾಗಿದ್ದು, ಅವನು 'ಬೆಳ್ಳೆಯ ಸಂತಾನ'ಹಾಗೂ 'ಪರ್ವತಾವಳಿ'ಗಳ ಸದಸ್ಯನಾಗಿರುವನು. ಅವನ ತೀರ ಹತ್ತಿರದ ಮುಖ್ಯ ಶಿಷ್ಯನೆಂದರೆ ಅವಧೂತ. ಈತನ ಕಿರಿಯ ಸಹೋದ್ಯೋಗಿಗಳು : ಕೇದಾರಶಕ್ತಿ, ಮಲ್ಲಿಕಾರ್ಜುನ, ಮೂರುಜಾವಿ, ನಿರ್ವಾಣಯೋಗಿ, ವಾಮದೇವ ಅಥವಾ ವಾಮಶಕ್ತಿ, ಸಿದ್ಧೇಶಕ್ತಿ, ರುದ್ರಶಕ್ತಿ ಮತ್ತು ಕ್ರಿಯಾಶಕ್ತಿ. ವಾಮಶಕ್ತಿಗೆ ಮೂವರು ಶಿಷ್ಯಂದಿರು.: ಬೊಂತೆಯ ಗುರು, ಮಲ್ಲಿಕಾರ್ಜುನ ಹಾಗೂ ರುದ್ರಶಕ್ತಿ. ಕ್ರಿ.ಶ.1189ರಲ್ಲಿ ಈ ಕೊನೆಯ ಯತಿಯು ಕುಮಾರಬೊಂತೇಶ್ವರ ದೇವಾಲಯಕ್ಕಾಗಿ ಹೊಂಬಳದ ಸ್ಥಾನಿಕ ಅಧಿಕಾರಿಯಿಂದ ಭೂಮಿಯನ್ನು ಖರೀದಿಸಿದನು. ಅವನು ಈ ದೇವಾಲಯವನ್ನು ತನ್ನ ಗುರು ವಾಮಶಕ್ತಿಯ ಸ್ಮರಣೆಗೆಂದು ಕಟ್ಟಿಸಿದ್ದನು. ಸ್ಥಳೀಯ ಕಲಾವಿದರು ಹಾಗೂ ವ್ಯಾಪಾರಿಗಳು ಈ ಕಟ್ಟಡ ಉತ್ಸವದ ಕಾಲಕ್ಕೆ ದೇವರಿಗೆ ಬಗೆ ಬಗೆಯ ಕಾಣಿಕೆಗಳನ್ನು ಸಲ್ಲಿಸಿದರು. ಬಲು ದೀರ್ಘವಾಗಿರುವ ಈ ಶಾಸನದ ಮುಖ್ಯ ವೈಶಿಷ್ಟ್ಯವೆಂದರೆ ಬೊಂತೆಯ ಮುನಿಯಿಂದ ನಡೆದ ಪವಾಡಗಳು ಹಾಗೂ ಅವುಗಳ ಅಪೂರ್ವದ, ವಿವರವಾದ, ನಿರೂಪಣೆ.

ಈ ಬೊಂತೆಯ ಮುನಿಯ ಎದ್ದು ಕಾಣುವ ಸಾಮರ್ಥ್ಯಗಳು ಹೀಗಿದ್ದವು :

> ಬೇಸಿಗೆಯ ಬಿಸಿಲು ನಾಲ್ದೆಸೆಗಳಿಂದ ಮುತ್ತಿದಾಗಲೂ ಅವನು ತನ್ನ ಪ್ರಸನ್ನವಾದ ಮುಖ ಹಾಗೂ ಕೈಗಳನ್ನು ಎತ್ತಿ, ಮನದ ಕ್ಷೋಭೆಯಿಲ್ಲದೆ,

106. ಅದೇ. no. 137.

107. ಸಂ. ದೇಸಾಯಿ. SII, XV, no. 73.

ಶಾಂತಚಿತ್ತನಾಗಿ ಶ್ರೀಗಿರಿಯ ಸೂರ್ಯಶಿಲೆಯ ಮೇಲೆ ಎದ್ದು ನಿಂತಿದ್ದನು. ಈ ಸೂರ್ಯದರ್ಶನವು ಅವನಿಗೆ ಸರ್ವಜ್ಞತೆಯನ್ನು ದಯಪಾಲಿಸಿತಲ್ಲದೆ " ನೀನು ಕಾಣುವ ದೇವತೆ, ಮನುಷ್ಯ, ಯಕ್ಷ, ಇಲ್ಲವೆ ರಾಕ್ಷಸ ಇವರಲ್ಲಿ ಯಾರೇ ಇರಲಿ, ಅವರಿಗೆ 'ಕರ್ತೃವಾದ'ವನ್ನು ಬೋಧಿಸು" ಎಂದು ಸೂರ್ಯನು ಹೇಳಿದನು. ಅವನಿಂದ ಇಂಥ ಕೃಪೆಯನ್ನು ಪಡೆದು, ಶಕ್ತಿಸಾಮರ್ಥ್ಯಗಳಿಂದ ಕೂಡಿದ ಹಾಗೂ ಶಿವಧರ್ಮಕ್ಕೆ ತನ್ನನ್ನು ಮುಡಿಪಾಗಿರಿಸಿದ ಬೊಂತೆಯನು ಪರ್ವತದಿಂದ ಇಳಿದು ಬಂದ ತರುವಾಯ, ' ಲಿಂಗಪ್ರತಿಷ್ಠಾಪನೆ'ಯನ್ನು ಕೈಕೊಂಡನು. ಆ ಸಂದರ್ಭದಲ್ಲಿ 'ಹೋಮ'ವನ್ನು ಮಾಡಲಾಗಿ ಅದರ ಉರಿನಾಲಗೆಗಳು ಆಕಾಶದಲ್ಲಿ ಎತ್ತರಕ್ಕೆ ಏಳುತ್ತಿದ್ದವಲ್ಲದೆ ಹಲವು ಬ್ರಾಹ್ಮಣ ವಿದ್ವಾಂಸರು ಅದಕ್ಕೆ ಕೈಮುಗಿಯುವಂತೆ ಮಾಡಿದನು.

ಇದಲ್ಲದೆ (ಒಂದು ಸಲ) ಅವನು ಭಿಕ್ಷೆ ಕೇಳಲೆಂದು ಕರಹಡಕ್ಕೆ ಬರುತ್ತಿರುವಾಗ ದಾರಿಯಲ್ಲಿ ಒಬ್ಬ ಸೊಕ್ಕಿನ ಮನುಷ್ಯನು ಎದುರಾಗಿ, ತನ್ನ ಕಠಾರಿಯನ್ನು ಹೊರಸೆಳೆದು ಅವನೆದುರು ಝಳಪಿಸುತ್ತ 'ತೆಗೆದುಕೋ ಭಿಕ್ಷೆ!' ಎಂದೆನ್ನುತ್ತ ಅವನನ್ನು ಇರಿವವನಂತೆ ನಟಿಸಿದನು. ಆಗ ಆ ಕಠಾರಿ ಕರಗಿ ನೀರಾಗಿ ಬೊಂತೆಯ ಮುನಿಯ ಭಿಕ್ಷಾಪಾತ್ರೆಗೆ ಬಿದ್ದಿತು. ಇದನ್ನು ಕಂಡ ಆ ಮನುಷ್ಯ ಬೆಕ್ಕಸ ಬೆರಗಾಗಿ ನಿಂತು ನೋಡುತ್ತಿರುವಾಗಲೇ ಅವನು ಆ ನೀರನ್ನು ಸೇವಿಸಿ ತನ್ನ ಮುಂದಿನ ದಾರಿಯನ್ನು ಹಿಡಿದನು.

ಮುಂದೊಂದು ಸಲ ಕಟಕ ಎಂಬಲ್ಲಿ ಸಂಚರಿಸುತ್ತ ಬೊಂತೆಯ ಮುನಿಯು ಅಲ್ಲಿಯ ಚಕ್ರವರ್ತಿಯಾದ ಜಯಸಿಂಹನ ಅರಮನೆಗೆ ಬಂದು, ಅವನೆದುರು ನಿಂತುಕೊಂಡನು. ಆಗ, ತತ್ವಶಾಸ್ತ್ರದ ಹಲವು ಶಾಖೆಗಳಲ್ಲಿ ಪರಿಣತರಾದ ತಾರ್ಕಿಕ ವಿದ್ವಾಂಸರು ಅಲ್ಲಿ ನೆರೆದಿದ್ದರು. ಅವರು, 'ನೀನು ಸಮರ್ಥಿಸುವ ಕರ್ತೃವು ನಿರಾಕಾರನಾಗಿರಲು ಹೇಗೆ ಸಾಧ್ಯ ? ' ಎಂದು ಅವನನ್ನು ಕೇಳಿದರು. ಆಗ ಅವನು ಆ ನೂರಾರು ತಾರ್ಕಿಕ ಜನರೆದುರಿನಲ್ಲಿಯೇ ತಾನು ಅದೃಶ್ಯನಾಗಿ (ಆಕಾರಹೀನನಾಗಿ) ಅವರನ್ನು ಮೂಕವಿಸ್ಮಿತರನ್ನಾಗಿ ಮಾಡಿದನು. ಆಮೇಲೆ ಪ್ರಕಟನಾಗಿ ಅವರೆಲ್ಲರಿಗೆ 'ಈಶ್ವರ ಕರ್ತೃವಾದ'ದ ತತ್ವಶಾಸ್ತ್ರವನ್ನು ಹೇಳಿಕೊಟ್ಟನು. ಹೀಗೆ ತತ್ವಶಾಸ್ತ್ರದ ಬೇರೆಲ್ಲ ಶಾಖೆಗಳನ್ನು ತಳ್ಳಿ ಹಾಕಿದ್ದರಿಂದ ಅವನಿಗೆ 'ಕರ್ತೃವಾದ ಚಕ್ರವರ್ತಿ' ಎಂಬ ಬಿರುದನ್ನು ನೀಡಲಾಯಿತು.

ಮುಂದೊಂದು ಸಲ ಬೊಂತೆಯನು ರಾಜಧಾನಿಯಲ್ಲಿ ಸಂಚರಿಸುತ್ತಿದ್ದನು. ಮದ್ದಾನೆಯೊಂದನ್ನು ಸವಾರಿ ಮಾಡಿದ್ದ ಮಾವುತನು ಇವನಿಗೆ,' ಎಲವೊ! ನೀನೊಂದು ಬೊಂತೆಯನ್ನು (ಬೊಂತೆ ಎಂದರೆ ಅಸ್ತವ್ಯಸ್ತ ಸೂಡು ಎಂದು ಅರ್ಥ. ಇಲ್ಲಿ ಅವನ ಹೆಸರಿನ ಶ್ಲೇಷೆಯಿದೆ) ಕಂಡೆಯಾ ?' ಎಂದು ಕೇಳಿದನು. ಅದನ್ನಾಲಿಸಿ ಆ ಮುನಿಯು ಬೊಂತೆಯೊಂದನ್ನು ನೆಲಕ್ಕೆ ಎಸೆದನು. ಆನೆ ಬಂದು ಅದನ್ನು ಎತ್ತಿಕೊಳ್ಳುತ್ತಲೇ ಅದು ನೆಲಕ್ಕೆ ಕುಸಿದು ಬಿದ್ದಿತು. ( ಈ ಭಾಗ ಅಸ್ಪಷ್ಟವಾಗಿದೆ).

ಮುಂದೆ ಬೊಂತೆಯ ಮುನಿಯು ತೀರ್ಥಯಾತ್ರೆಗೆಂದು ಬೇರೆ ಬೇರೆ ನಾಡುಗಳಿಗೆ ಹೋಗುತ್ತಿದ್ದನು. "ಒಂದು ದಿನ ಕೊಲ್ಲಾಪೂರದಲ್ಲಿ ಭಿಕ್ಷೆ ಬೇಡುತ್ತಿದ್ದನು. ಒಬ್ಬ ಜೋಗಿಣಿ ಅವನೆದುರಿಗೆ ಬಂದು ಕಾಯ್ದು ಕರಗಿದ ಲೋಹದ ಭಿಕ್ಷೆಯನ್ನು ಅವನಿಗಿತ್ತಳು. ಅವನು ಅದನ್ನು ತಪ್ಪಿಸಲು ಯತ್ನಿಸದೆ ಎತ್ತಿ ಕುಡಿದುಬಿಟ್ಟನು. ತಕ್ಷಣ ಆ ಜೋಗಿಣಿ ಬೆಂಕಿಹತ್ತಿ ಭುಗಿಲ್ಲೆಂದು ಉರಿಯತೊಡಗಿದಳು.

ಒಂದು ಸಲ ಅವನ ಮೈಯಲ್ಲಿ ಜ್ವರವೇರಿತ್ತು. ಮಹಾತ್ಮರು ತಮ್ಮ ಗತಕರ್ಮಗಳನ್ನು ಹೇಗೆ ತೊಲಗಿಸುತ್ತಾರೆಂಬ ನೀತಿ ಪಾಠವನ್ನು ಹೇಳಲೆಂಬಂತೆ ಅವನು ತನ್ನ ಜ್ವರವನ್ನು ಒಂದು ಚೀಲದಲ್ಲಿರಿಸಿ ದೇವರ ಧ್ಯಾನದಲ್ಲಿ ಮೈಮರೆತನು.[108]

ಸಂಚಾರಿಯಾದ ಈ ಗುರು ಸಂದರ್ಶಿಸಿದ ಊರುಗಳನ್ನೆಲ್ಲ ಕಂಡು ಹಿಡಿಯಲು ಸಾಧ್ಯ. ಶ್ರೀಗಿರಿಯೆಂದರೆ ಬಹುಶಃ ಶ್ರೀಶೈಲ ಅಥವಾ ಶ್ರೀಪರ್ವತ. ಇದು ಕರ್ನೂಲ ಜಿಲ್ಲೆಯ ಹೆಸರಾದ ತೀರ್ಥಕ್ಷೇತ್ರವೆನ್ನಿಸಿದೆ. ಇದೇ ಸುಮಾರಿಗೆ ಪರ್ವತಾವಳಿಯ ಕಾಳಾಮುಖಯತಿ ರಾಮೇಶ್ವಪಂಡಿತ ಎನ್ನುವವನು ಶ್ರೀಪರ್ವತದ ಮಲ್ಲಿಕಾರ್ಜುನ ಶಿಲಾಮಠದ ಮಠಾಧಿಪತಿಯಾಗಿದ್ದನು.[109] ಕರಹಡ, ಕರಹಾಟ, ಇಂದಿನ ಕರಾಡ' ಅಥವಾ ಕರ್ಹಾಡಗಳೆಲ್ಲ ಒಂದೇ ಆಗಿದ್ದು, ಈ ನಗರವು ದಕ್ಷಿಣ ಮಹಾರಾಷ್ಟ್ರದ ಸಾತಾರಾ ಜಿಲ್ಲೆಯ ದಕ್ಷಿಣಕ್ಕಿರುವ ಕೃಷ್ಣಾ ಹೊಳೆಯ ದಡದಲ್ಲಿದೆ. ಆ ಕಾಲಕ್ಕೆ ಕರಹಾಟವು ಕರಹಾಟ ನಾಲ್ಕು (ಅಥವಾ ಹತ್ತು) ಸಾವಿರ ಎಂಬ ಪ್ರಾಂತದ ರಾಜಧಾನಿಯಾಗಿತ್ತು. 'ಕಟಕ' ಎಂಬುದು ಅಂಕಿತ ನಾಮವೇ?ಸ್ಪಷ್ಟವಿಲ್ಲ. ಈ ಪದದ ಸಮಾನ್ಯ ಅರ್ಥ 'ಅರಸು ಪಾಳೆಯ' (Royal Corp)

---

108. ಅದೇ. 11. 16-26. ನಾವು ಪುಣೆಯ ಡೆಕ್ಕನ್ ಕಾಲೇಜಿನ ಪ್ರಾ. ಎಚ್. ಎಸ್. ಬಿಳಿಗಿರಿಯವರಿಗೆ ಅನುವಾದ ನೆರವಿಗಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

109. ಸಂ. ಮತ್ತು ಅನು. ಶ್ರೀನಿವಾಸಾಚಾರ, HAS, XIII, Part II, no. 7.

ಎಂದಿದ್ದು, ಇದು ಬೀಡುಬಿಟ್ಟ ಹಲವು ಸ್ಥಳಗಳನ್ನು ಸೂಚಿಸಲು ಸಾಧ್ಯ. ಇದನ್ನು ಒಂದು ಅಂಕಿತನಾಮವೆಂದು ಬಗೆದರೆ ಓಡಿಸಾದ 'ಕಟ್ಟಕ' (ಕಟಕ) ಹಾಗೂ ಆಂಧ್ರಪ್ರದೇಶದ ಅಮರಾವತಿ ಪರ್ಯಾಯನಾಮದ, ಕೆಲವೊಮ್ಮೆ ಕೇವಲ 'ಕಡಕ'ವೆಂದು ಕರೆಯಲ್ಪಡುತ್ತಿದ್ದ ಧಾನ್ಯಕಟಕವನ್ನು ಸೂಚಿಸಬಹುದಾಗಿದೆ. ಇವುಗಳಲ್ಲಿ ಎರಡನೆಯದೇ ಹೆಚ್ಚು ಸೂಕ್ತ. ಏಕೆಂದರೆ ಈ ಊರಿನಲ್ಲಿ ಹತ್ತನೆಯ ಶತಮಾನದಲ್ಲಿ ಒಂದು ಕಾಳಾಮುಖದೇವಾಲಯ ಇತ್ತಲ್ಲದೆ ಇದು ಶ್ರೀಪರ್ವತದಿಂದ ಅಂತಹ ದೂರದಲ್ಲೇನೂ ಇಲ್ಲ.[110] ಅಲ್ಲದೆ, ಇದೇ ಸುಮಾರಿಗೆ ಇವೆರಡು ಪಟ್ಟಣಗಳನ್ನು ಆಳುವವನು ಜಯಸಿಂಹನೆಂಬ ಅರಸನಿದ್ದನು. ಈ ಜಯಸಿಂಹನು ಖಂಡಿತ ಕಲ್ಯಾಣ ಚಾಲುಕ್ಯರ ಆರನೆಯ ವಿಕ್ರಮಾದಿತ್ಯನ ತಮ್ಮನಾಗಿದ್ದನು. 25 ಜೂನ 1077ರಷ್ಟು ಹಿಂದೆಯೇ ಈತನು ತನ್ನ ಅಣ್ಣನ ಆಧಿಪತ್ಯದಲ್ಲಿ ಬೆಳ್ವೊಲ ಮೂರು ನೂರು ಮತ್ತು ಪುಲಿಗೆರೆ ಮೂರು ನೂರರ ಪ್ರದೇಶಗಳ ಅರಸನಾಗಿದ್ದನು. ಶೀಘ್ರದಲ್ಲಿಯೇ ಅವನು ಕಂದೂರ ಒಂದು ಸಾವಿರ, ಬನವಾಸಿ ಹನ್ನೆರಡು ಸಾವಿರ ಹಾಗೂ ಸಾಂತಳಿಗೆ ಒಂದು ಸಾವಿರಗಳವರೆಗೆ ತನ್ನ ನಿಯಂತ್ರಣವನ್ನು ವಿಸ್ತರಿಸಿದನು. ಅವನ ಹೆಸರು ಕ್ರಿ.ಶ.1083ರ ತರುವಾದ ಶಾಸನಗಳಲ್ಲಿ ಕಂಡುಬಾರದು, ಬಿಲ್ಹಣನ 'ವಿಕ್ರಮಾಂಕದೇವ ಚರಿತ'ವು ಈ ಸೋದರರ ಕಲಹವನ್ನು ಕುರಿತು ಹೇಳುತ್ತದೆ. ಇದರ ಪರಿಣಾಮವೆಂದರೆ ಜಯಸಿಂಹನ ಸೋಲು. ಇದೆಲ್ಲ ನಡೆದುದು 1083 ಯ ಸುಮಾರಿಗೆ.[111] ಜಯಸಿಂಹನ ಕಟಕ ಅಥವಾ ಅರಸು ಪಾಳೆಯವು ಬಹುಮಟ್ಟಿಗೆ ಈ ನಾಡಿನಲ್ಲಿ ಸ್ಥಾಪಿತಗೊಂಡಿರಬಹುದು. ಈ ಪ್ರದೇಶವು ಇಂದಿನ ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳಿಗೆ ಸರಿಹೊಂದುತ್ತದೆ, ಶಾಸನದ ಮುಂದಿನ ಭಾಗದಲ್ಲಿ ನಮೂದಿಸಲಾದ ಚಾಲುಕ್ಯರ ಮುಖ್ಯ ರಾಜಧಾನಿಯಾದ ಕಲ್ಯಾಣವನ್ನು ಅದೇರೀತಿ ಬನವಾಸಿ ಹನ್ನೆರಡು ಸಾವಿರ ಹಾಗೂ ಸತ್ತಳಿಗೆ ಒಂದು ಸಾವಿರ ರಾಜಧಾನಿಯಾದ ಬಳ್ಳಿಗಾವೆಯನ್ನು ಇಲ್ಲವೆ ಚಾಲುಕ್ಯ ಸಾಮ್ರಾಜ್ಯದ ಯಾವುದೇ ಒಂದು ಪ್ರಾದೇಶಿಕ ರಾಜಧಾನಿಯನ್ನು ಸೂಚಿಸುತ್ತಿರುವಂತಿದೆ. ಕೊಲ್ಲಾಪುರ ಮಾತ್ರ ದಕ್ಷಿಣ ಮಹಾರಾಷ್ಟ್ರದ ಇಂದಿನ ಆಧುನಿಕ ನಗರವಾದ ಕೋಲ್ಹಾಪೂರವೇ ಸರಿ. ಕೊಲ್ಲಾಪುರವು ಪಾಶುಪತ ಆಚಾರ್ಯರ ಶಾಕ್ತಸಂಪ್ರದಾಯದ ಒಂದು ಕೇಂದ್ರವಿದ್ದು, ಅದು ಕೊಲ್ಲಾಪುರ ಮಹಾಲಕ್ಷ್ಮೀ ದೇವಿಗೆ ಸಮರ್ಪಿತವಾಗಿದ್ದಿತ್ತು.[112] ಈ ಸಂಗತಿಯು ಅಲ್ಲಿ ಜೋಗಿನಿಯರಿರುವುದಕ್ಕೆ ಬಲವಾದ ಕಾರಣವಾಗಿದೆ.

ಜಯಸಿಂಹನ ರಾಜಪ್ರತಿನಿಧಿತ್ವದ 1077-1083ನೆಯ ಇಸ್ವಿಯು, ಬೊಂತೆಯ ಮುನಿಯು ದೇವಾಲಯದ ಯತಿಯಾಗಿದ್ದ ಕಾಲವನ್ನು ಕುರಿತು ಬಲವಾದ ಸುಳಿವನ್ನು

---

110. ನೋಡಿ ಬಿ. ವಿ. ಕೃಷ್ಣರಾವ (ಸಂ.), 'Tandikonda Grant of Ammaraja II,' EI, XXIII (1935-36), 161-70.

111. ನೋಡಿ ಜಿ. ಯಝ್ದಾನಿ (ಸಂ. ) 'The Early History of the Deccan, I, 356-59.

112. ಅದೇ, pp. 441-42.

ನೀಡುತ್ತದೆ. ಅವನ ಮರಿಶಿಷ್ಯನ ಶಿಷ್ಯ (ನಾಲ್ಕನೆಯ ತಲೆಮಾರಿನವ)ನಾದ ರುದ್ರಶಕ್ತಿಯ ಕಾಲದಿಂದ ಹಿಂದಕ್ಕೆ ಲೆಕ್ಕ ಮಾಡುತ್ತ ಹೋದರೆ ದೊರಕುವ ಕಾಲಾವಧಿಗಿಂತ ಇದು ತುಸು ಹಿಂದಿನ ಕಾಲದ್ದಾಗುತ್ತದೆ. ಹೀಗಾಗಿ ಆ ಮಹಾವಾದವು ಬೊಂತೆಯ ಮುನಿಯ ಆರಂಭಕಾಲದಲ್ಲಿ ನಡೆದುದೆಂದು ನಾವು ಬಾವಿಸಬಹುದಾಗಿದೆ.

ಈಶ್ವರನು ಒಬ್ಬ ಸೃಷ್ಟಿಕರ್ತನೆನ್ನುವ 'ಕರ್ತೃವಾದ' ಅಥವಾ 'ಈಶ್ವರ ಕರ್ತೃವಾದ'ವನ್ನು ಬೋಧಿಸುವಂತೆ ಸೂರ್ಯನು ಬೊಂತೆಯಮುನಿಗೆ ಸೂಚಿಸಿದನು. ಈ ಸಿದ್ಧಾಂತವು, ರಾಮಾನುಜರು ಕಾಳಾಮುಖ ಹಾಗೂ ಪಶುಪತಿಯ ಉಪಾಸಕರಿಗೆ ಸೇರಿದುದೆಂದು ಹೇಳಿದ ಸಿದ್ಧಾಂತದ ತಿರುಳೆನ್ನಿಸಿದೆ. ಶಿವನು ಈ ಬ್ರಹ್ಮಾಂಡಕ್ಕೆ ಕಾರಣ ಮಾತ್ರನು, ಆದರೆ ಭೌತಿಕ ಕಾರಣನಲ್ಲ ಎಂದೆನ್ನುವ ಅವರ ದ್ವೈತವಾದಿ ದೃಷ್ಟಿಕೋನವನ್ನು ಈ ಸಿದ್ಧಾಂತ ಒಳಗೊಂಡಿದೆ. 'ಈಶ್ವರ ಕರ್ತೃವಾದ' ಎಂಬ ಪದ ಮೊದಲಿಗೆ 'ಇಸ್ಸರಕಾರನವಾದಿ' ಎಂಬ ರೂಪದಲ್ಲಿ 'ಮಹಾಬೋಧಿ ಜಾತಕ'ದಲ್ಲಿ ಕಾಣಸಿಕೊಳ್ಳುತ್ತದೆ. ವಾರಣಾಸಿಯ ಅರಸನಾದ ಬ್ರಹ್ಮದತ್ತನ ಐವರು ಪಾಷಂಡಿಗಳಾದ ಆಪ್ತಸಲಹೆಗಾರರಲ್ಲಿ ಒಬ್ಬನು ಈ ಸಿದ್ಧಾಂತಕ್ಕೆ ಬಲವಾಗಿ ಅಂಟಿಕೊಂಡವನು.[113] ಶಂಕರಾಚಾರ್ಯರು ತಮ್ಮ 'ಬ್ರಹ್ಮಸೂತ್ರ ಭಾಷ್ಯ' iii, 2, 37ರಲ್ಲಿ 'ಈಶ್ವರ ಕಾರಣಿನ್'ರ ದೃಷ್ಟಿಕೋನಗಳನ್ನು ಕುರಿತು ಚರ್ಚಿಸುತ್ತಾರೆ. ಈ ಜನರು ಮಾಹೇಶ್ವರರಂತಿರುವವರು ಇಲ್ಲವೆ ಅವರೊಡನೆ ಮೈತ್ರಿಕೂಟವನ್ನು ಹೊಂದಿದವರಾಗಿದ್ದವರು. ಈ ಮಾಹೇಶ್ವರರು 'ಐದು ಪ್ರಕಾರಗಳಾದ 'ಕಾರ್ಯ', 'ಕಾರಣ', 'ಯೋಗ', 'ವಿಧಿ,' ಹಾಗೂ 'ದುಃಖಾಂತ'ಗಳನ್ನು ಕುರಿತು, ಭಗವಂತನಾದ ಪಶುಪತಿಯು (ಶಿವನು) ಪ್ರಾಣಿಗಳ (ಅಂದರೆ ಆತ್ಮದ) ಬಂಧನಗಳು ಕಳಚಿ ಬೀಳುವ ವಿದ್ಯೆಯನ್ನು ಹೇಳಿಕೊಟ್ಟಿರುವನೆಂದು, ಪಾಶುಪತಿಯು ಭಗವಂತನಿದ್ದು ಅವನ ಕ್ರಿಯೆಗಳಿಗೆ (ಸಾಧನ) ಕಾರಣಮಾತ್ರನೆಂದು, ಭಾವಿಸುತ್ತಾರೆ.[114] ಈ ಮಾಹೇಶ್ವರರೆಂದರೆ ಪಾಶುಪತರೇ ಆಗಿರಬೇಕು. ಏಕೆಂದರೆ, ಇವೇ ಐದು ಪ್ರಕಾರಗಳು ಕೌಂಡಿಣ್ಯನ 'ಪಾಶುಪತ ಸೂತ್ರ'ದ ಭಾಷ್ಯದಲ್ಲಿ ಹಾಗೂ ನಕುಲೀಶ-ಪಾಶುಪತ ಪದ್ಧತಿಯನ್ನು ಕುರಿತಾದ ಸಾಯಣ ಮಾಧವರ ಭಾಷ್ಯದಲ್ಲಿ ತಮ್ಮ ಸಂಬಂಧಗಳನ್ನು ಕಡಿದುಕೊಂಡವುಗಳಾಗಿ ಕಾಣಸಿಕೊಳ್ಳುತ್ತದೆ. ಪಾಶುಪತರ, ಚಾಲ್ತಿಯಲ್ಲಿರುವ ಗ್ರಂಥಗಳು ತತ್ವಶಾಸ್ತ್ರದಲ್ಲಿರುವ ಭೌತಿಕ ವಿಶ್ವದ ವಸ್ತುಗಳ ಮೂಲತತ್ವಗಳನ್ನು ಕುರಿತಾದ 'ಅಂಟಾಲಾಜಿ' ಶಾಖೆಯ ಯಾವುದೇ ಬಗೆಯ ವಿಶ್ಲೇಷಣೆಯನ್ನು ಒದಗಿಸುವುದಿಲ್ಲ; ಆದರೆ ಅವು ವಿಶ್ವದ ಬಗೆಗೆ ದ್ವೈತವಾದಿ ದೃಷ್ಟಿಕೋನವನ್ನು ಮಾತ್ರ ಖಂಡಿತ ಉಳಿಸಿಕೊಂಡಿವೆ. ಹೀಗಾಗಿ, ಇದೊಂದು ಸಂದರ್ಭದಲ್ಲಾದರೂ ಏಕಾಗಲೊಲ್ಲದು, ಕಾಳಾಮುಖರು ತಮ್ಮ ತೀರ ನಿಕಟವರ್ತಿಗಳಾದ, ಆಧ್ಯಾತ್ಮಿಕ ನಂಟಸ್ತರಾದ ಪಾಶುಪತರ ಆಧ್ಯಾತ್ಮಿಕ ಸಿದ್ಧಾಂತಗಳನ್ನು ಅನುಸರಿಸುತ್ತಿದ್ದರು.

---

113. 'ಜಾತಕ', ಸಂ. V. Fausboll, V. 228, 238 and 241.

114. ಅನು. G. Thibaut.

ಶಂಕರಾಚಾರ್ಯರು ಇನ್ನಷ್ಟು ಮುಂದುವರಿದು, ತಮ್ಮ ಈ ಮಾಹೇಶ್ವರರನ್ನು 'ಭಗವಂತನು ಅದಾವುದೋ ಬಗೆಯಲ್ಲಿ ವಿಶ್ವಕ್ಕೆ ಕ್ರಿಯಾತ್ಮಕ ಕಾರಣನೆನ್ನಿಸಿದ್ದಾನೆ' ಎಂದು ಬೋಧಿಸುವ ವೈಶೇಷಿಕರು ಹಾಗೂ ನೈಯಾಯಿಕರೊಂದಿಗೆ ನಂಟುಗೂಡಿಸುತ್ತಾರೆ.[115] ಮೇಲ್ಗಡೆಯಲ್ಲಿ, ನಾವು ಕಾಳಾಮುಖರನ್ನು ನೈಯಾಯಿಕ ಹಾಗೂ ವೈಶೇಷಿಕರೆಂದು ಹೇಳುವ ಶಾಸನಗಳ ಸಂದರ್ಭಗಳನ್ನು ಮತ್ತೆ ಮತ್ತೆ ಕಂಡಿದ್ದೇವೆ. ಪಾಶುಪತರನ್ನು ಇವೆರಡೂ ತತ್ವಶಾಸ್ತ್ರದ ಪದ್ಧತಿಗಳೊಂದಿಗೆ ಜೋಡಿಸುವ ಇನ್ನೊಂದು ಪುರಾವೆ ಕೆಳಗಿನಂತಿದೆ. ಹೆಸರಾದ 'ನ್ಯಾಯಸಾರ'ದ ಲೇಖಕನಾದ ಭಾಸರ್ವಜ್ಞನೂ ಕೂಡ ಪಾಶುಪತ ಕೃತಿಯಾದ 'ಗಣಕಾರಿಕಾ'ವನ್ನು ಕುರಿತು ಭಾಷ್ಯವನ್ನು ಬರೆದಿದ್ದಾನೆ. ಹರಿಭದ್ರನ 'ಷಡ್ದರ್ಶನ ಸಮುಚ್ಚಯ'ವನ್ನು ಕುರಿತ ಭಾಷ್ಯದ ಲೇಖಕನಾದ ಗುಣರತ್ನನು ನ್ಯಾಯ ಮತ್ತು ವೈಶೇಷಿಕ ಪದ್ಧತಿಗಳಿಗೆ ಅಂಟಿಕೊಂಡಿರುವವರನ್ನು ಶೈವ ಮಾದರಿಯ ಯೋಗಿಗಳೆಂದು ಬಣ್ಣಿಸುವನಲ್ಲದೆ ನೈಯಾಯಿಕರು, ನಕುಲೀಶನಿಂದ ಹಿಡಿದು, ಹೆಚ್ಚಾಗಿ ಶಿವನ ಹದಿನೆಂಟು ಅವತಾರಗಳನ್ನು ಭಕ್ತಿ, ವಿಶ್ವಾಸಗಳಿಂದ ಆರಾಧಿಸುತ್ತಾರೆ, ಎಂದು ಸಾಧಿಸುತ್ತಾನೆ. ನೈಯಾಯಿಕರು ತಮ್ಮನ್ನು ಶೈವರೆಂದೂ, ವೈಶೇಷಿಕರು ತಮ್ಮನ್ನು ಪಾಶುಪತರೆಂದೂ ಕರೆದುಕೊಳ್ಳುತ್ತಾರೆಂದು ಅವನು ಹೇಳುತ್ತಾನೆ. ರಾಜಶೇಖರನು ತನ್ನ 'ಷಡ್ದರ್ಶನ ಸಮುಚ್ಚಯ'ದಲ್ಲಿ ಪಾಶುಪತರ 'ನ್ಯಾಯ' ಸಂಪ್ರದಾಯವನ್ನು ಕುರಿತು ಹೇಳುತ್ತಾನೆ.[116] ಕಾಳಾಮುಖರ ಆಧ್ಯಾತ್ಮಿಕ ನೆಲೆಯು ಈ ನ್ಯಾಯ ವೈಶೇಷಿಕರಾದ ಪಾಶುಪತರ ನೆಲೆಗಿಂತ ಹೆಚ್ಚಿನ ವ್ಯತ್ಯಾಸವನ್ನೇನೂ ಹೊಂದಿದ್ದಂತೆ ಕಾಣದು.

ಸೂರ್ಯನಿಂದ ಆದೇಶವನ್ನು ಪಡೆದಾದ ಬಳಿಕ ಬೊಂತೆಯ ಮುನಿಯ ಮೊದಲ ಕಾರ್ಯವೆಂದರೆ ಒಂದು ಲಿಂಗವನ್ನು ಸ್ಥಾಪಿಸಿದುದು. ಲಿಂಗಸ್ಥಾಪನೆ ಕಾಳಾಮುಖರ ಕುರುಹಾದರೂ ಸೂರ್ಯಾರಾಧನೆ ಹಾಗಲ್ಲ. ದೇವ ದೇವತೆಗಳು, ಮನುಷ್ಯರು ಹಾಗೂ ದೈತ್ಯರಿಗೆಲ್ಲ 'ಕರ್ತೃವಾದ'ವನ್ನು ಹೇಳಿಕೊಡಬೇಕೆಂದೆನ್ನುವ ಸೂರ್ಯನ ಆಜ್ಞೆಯ ಉತ್ತಮವಾದ ವ್ಯಾಖ್ಯಾನವೆಂದರೆ ಯಾವುದೇ ಜಾತಿಯ ಮನುಷ್ಯರಿಗೂ ಕೂಡ ಈ ಸಿದ್ಧಾಂತವನ್ನು ಭೋಧಿಸಬೇಕು, ಎನ್ನುವುದು. ಈ ಹೇಳಿಕೆಯೂ ಕೂಡ ರಾಮಾನುಜರ ಹೇಳಿಕೆಗೆ ಸರಿಹೊಂದುವುದಲ್ಲದೆ ಕಾಳಾಮುಖರು ಹಾಗೂ ವೀರಶೈವರ ನಡುವಿನ ಐತಿಹಾಸಿಕ ಕೊಂಡಿಯನ್ನು ಖಚಿತಪಡಿಸುತ್ತದೆ.

ಬೊಂತೆಯ ಮುನಿಯ ಪವಾಡಗಳನ್ನು ಕುರಿತು ಯಾವುದೇ ಭಾಷ್ಯ ಬೇಕಿಲ್ಲ. ಅವನು ಒಂದು ಮಹಾತಪಸ್ಸನ್ನು ಆಚರಿಸಿದನು; ಆಮೇಲೆ ದೇವನು ಅವನಿಗೆ ದೈವೀಜ್ಞಾನವನ್ನು ದಯಪಾಲಿಸಿದನಲ್ಲದೆ ಈ ವಿಶ್ವಕ್ಕೆ ಅದನ್ನು ಬೋಧಿಸುವಂತೆ ಆಜ್ಞಾಪಿಸಿದನು. ಅವನು ತನ್ನ ಮಂತ್ರಸಾಮರ್ಥ್ಯದಿಂದ ಮಾನವರು, ಪ್ರಾಣಿಗಳು, ಮಾಟಗಾತಿಯರು ಹಾಗೂ ಬೇನೆಗಳ

115. ಅದೇ.

116. ಎಸ್. ಎಸ್. ದಾಸಗುಪ್ತಾ, 'History of Indian Philosophy.' V. 143-45.

ದಾಳಿಗಳನ್ನು ಹಿಮ್ಮೆಟ್ಟಿದನು. ಒಂದು ವಾದಮಹಾಸಭೆಯಲ್ಲಿ ಅವನು ತನ್ನ ಪವಾಡದಿಂದ ಎದುರಾಳಿಗಳನ್ನು ಮತಾಂತಗೊಳಿಸಿದನು. ಇವೆಲ್ಲವು ಧಾರ್ಮಿಕ ಜಾನಪದ ಕಲೆಗಳ ವಿಶಿಷ್ಟ ಮಾದರಿಯ ಮೂಲೋದ್ದೇಶಗಳಾಗಿದ್ದು, ಇವು ಪೌರ್ವಾತ್ಯ ಸಂಪ್ರದಾಯಗಳಂತೆಯೇ ಪಾಶ್ಚಾತ್ಯ ಸಂಪ್ರದಾಯಗಳಲ್ಲೂ ಮೇಲಿಂದ ಮೇಲೆ ಕಂಡು ಬಂದರೂ ಅವುಗಳ ಸಂದರ್ಭಗಳು ಬೇರೆ ಬೇರೆಯಾಗಿರುವಂತಿದೆ. ಈ ಸಾಹಸ ಕೃತ್ಯಗಳು ಕಾಳಾಮುಖಶ್ರದ್ಧೆಯ ಗಮನಾರ್ಹವಾದ 'ಮಂತ್ರ'ಸಮಾರ್ಥ್ಯದತ್ತ ಬೆರಳು ಮಾಡಿ ತೋರುತ್ತಿದ್ದರೂ ಮಧ್ಯಯುಗದಲ್ಲಿ ಸಹಜವಾಗಿ ಕಂಡುಬರುತ್ತಿದ್ದ ಹೆಚ್ಚಿನ ಮಟ್ಟದ ಆಧ್ಯಾತ್ಮಿಕ ಸತ್ಯಾಭಾಸವನ್ನು ಕೈಬಿಡಲಾಗಿತ್ತು; ಎಂದೇನೂ ಅಲ್ಲ. ಕೋಡಿಯ ಮಠದ ಸುಶಿಕ್ಷಿತ ಮಾಂತ್ರಿಕರ ಗುಂಪು ಅಲ್ಲಿಯ ಪಠ್ಯಕ್ರಮದ ಮೇಲೆ ಪ್ರಭುತ್ವವನ್ನು ಹೊಂದಿರುವ ಸಾಧ್ಯತೆಯಿಲ್ಲ.

ಬೆಳ್ಳಿಯ ಸಂತಾನಕ್ಕೆ ಸೇರಿರಬಹುದಾದ ಇನ್ನೊಂದು ಕಾಳಾಮುಖ ಶಾಸನವಿದೆ. ಇದು ಧಾರವಾಡ ಜಿಲ್ಲೆಯ ಸಾತೇನಹಳ್ಳಿ ಊರಿನ ಹರಿಹರೇಶ್ವರ ದೇವಾಲಯದಲ್ಲಿ ದೊರೆತ ದತ್ತಿ ಶಾಸನವಾಗಿದೆ.[117] ಇದು ಹೊಯ್ಸಳ ಅರಸನಾದ ಇಮ್ಮಡಿ ವೀರಬಲ್ಲಾಳನ ಆಳ್ವಿಕೆಯ ಕ್ರಿ.ಶ.1204ರಲ್ಲಿ ನೀಡಲಾದುದು. ಕೋಣವತ್ತಿಯ ಪ್ರಮುಖ ಮಹಿಳೆ ಸೆತ್ತಿಕವ್ವೆ ಹಾಗೂ ಅವಳ ಆಧ್ಯಾತ್ಮಿಕ ಗುರು ಹರಶಕ್ತಿ ಎನ್ನುವವನನ್ನು ಪರಿಚಯಿಸಲಾಗಿದೆ. ಅವನ ಗುರುಪರಂಪರೆ ಹೀಗಿದೆ : ಬಿಲ್ಲಮಠದ ಕಾಳಾಮುಖನಾದ ಪಿನಾಕಪಾಣಿ, ಅವನ ಶಿಷ್ಯ ಹಾಗೂ ಹರನ ಭಕ್ತನಾದ ಶಿವರಾಶಿ, ಅವನ ಶಿಷ್ಯ ಅಮೃತರಾಸಿ, ಹಾಗೂ ಅವನ ಮಗ ಇಲ್ಲವೆ ಶಿಷ್ಯ, ಶಿವಭಕ್ತ ಹಾಗೂ ಲಕುಲನ ಸಿದ್ಧಾಂತವನ್ನು ಅನುಸರಿಸುವವನಾದ ಹರಶಕ್ತಿದೇವ. ಹರಶಕ್ತಿಯು ಸೂರಿಲಿ ಗ್ರಾಮದ ಅಗ್ರಹಾರದಲ್ಲಿ ಭಾಯಿಲೇಶ್ವರನನ್ನು ಪೂಜಿಸುತ್ತಿದ್ದನಲ್ಲದೆ ಸಾತೇನಹಳ್ಳಿಯ ಹರಿಹರೇಶ್ವರನ ದೇವಾಲಯಕ್ಕಾಗಿ ಭೂದತ್ತಿಯನ್ನೂ ಸ್ವೀಕರಿಸಿದನು. ಬಿಲ್ಲಮಠವನ್ನು ಬೆಳ್ಳಿಯ ಸಂತಾನಕ್ಕೆ ಜೋಡಿಸಬಹುದಾದರೆ ಈ ಯತಿಗಳೂ ಕೂಡ ಇದೇ ಸಂಘಟನೆಗೆ ಸಂಬಂಧಿಸಿದವರಾಗಿರಲು ಸಾಕು.

ಶಿವಮೊಗ್ಗ ಜಿಲ್ಲೆಯ ಗೊಗ್ಗ ಎಂಬ ಊರಿನ ಕ್ರಿ.ಶ.1117ರ ಒಂದು ತ್ರುಟಿತ ಶಾಸನದಲ್ಲಿ ಪರ್ವತಾವಳಿಯ ಇನ್ನೊಂದು ಸಂತತಿಯನ್ನು ಕುರಿತು ನಮೂದಿಸಲಾಗಿದೆ. 'ಸ್ಥಾನಿಕ ಅಧಿಕಾರಿಯೊಬ್ಬನು ಅ.... ಕ ಸಂತತಿ ಹಾಗೂ ಪರ್ವತಾವಳಿಯ ಶಕ್ತಿ ಪರಿಧಿಯ ಕಾಳಾಮುಖ ಸಮಯದ ಪ್ರವರ್ತಕನಾದ ಕ್ರಿವಣಶಕ್ತಿ ಪಂಡಿತನ ಶಿಷ್ಯನಾದ ರುದ್ರಶಕ್ತಿಪಂಡಿತನ ಪಾದಗಳನ್ನು ತೊಳೆದು ಹೆಸರನ್ನು ನಮೂದಿಸದ ಒಂದು ದೇವಾಲಯಕ್ಕೆ ಭೂಮಿಯನ್ನು ದತ್ತಿ ನೀಡಿದನು'.[118] ದುರದೃಷ್ಟವೆಂದರೆ ಪೂರ್ತಿ ಹೆಸರು ಇಲ್ಲವಾಗಿದ್ದು ರುದ್ರಶಕ್ತಿಗೆ ಎಂದಿನ ಯತಿಗುಣಗಳ ಪಟ್ಟಿಯನ್ನು ವಹಿಸಲಾದರೂ, ಅದರಲ್ಲಿ ಹೇಳಿಕೊಳ್ಳುವ ವಿಶೇಷಣ ಪದಗಳೇನಿಲ್ಲ.

117. ಸಂ. ಅಣ್ಣಿಗೇರಿ, VI, no. 1.

118. ಸಂ. ಮತ್ತು ಅನು. ರೈಸ್, EC. VII, Sk. 316.

ಬೇರೆ ಹಲವಾರು ಶಾಸನಗಳು ಪರ್ವತಾವಳಿಯ ಯತಿಗಳನ್ನು ಉಲ್ಲೇಖಿಸುತ್ತಲಿದ್ದರೂ ಅವು 'ಸಂತತಿ' ಅಥವಾ 'ಸಂತಾನ'ದ ಹೆಸರನ್ನು ಬಿಟ್ಟು ಬಿಟ್ಟಿವೆ. ಇವೆಲ್ಲವುಗಳಲ್ಲಿ ಎಲ್ಲಕ್ಕೂ ಹೆಚ್ಚು ಮಹತ್ವದ ಶಾಸನವು ಕಾಕತೀಯ ಬೆಟ್ಟರಸನ ಮಗನೂ, ಅರಸನೂ ಆದ ದುಗ್ಗ ತ್ರಿಭುವನಮಲ್ಲನು ಕ್ರಿ.ಶ.1090ರಲ್ಲಿ 'ಕಾಳಾಮುಖ ಸಂಪ್ರದಾಯದ ಯತಿಯಾದ, ಶ್ರಿಪರ್ವತದ ಹೆಸರಾದ ಮಲ್ಲಿಕಾರ್ಜುನ ಶಿಲಾಮಠದ ಮಠಾಧಿಪತಿಯಾದ, ಅಪ್ಪ-ಪರ್ವತಾವಳಿಯ ರಾಮೇಶ್ವರಪಂಡಿತನಿಗೆ'ಒಂದು ಗ್ರಾಮವನ್ನು ಕಾಣಿಕೆ ನೀಡಿದುದನ್ನು ತಿಳಿಸುತ್ತದೆ.[119] ಬೆಟ್ಟರಸನು ಚಾಲುಕ್ಯ ಅರಸನಾದ ಆರನೆಯ ವಿಕ್ರಮಾದಿತ್ಯನ ಮಾಂಡಲಿಕನಾಗಿದ್ದನು. ಆಗಲೆ ಮೇಲ್ಗಡೆಯಲ್ಲಿ ಉಲ್ಲೇಖಿಸಿದಂತೆ ಈ ದತ್ತಿಯು ಪರ್ವತಾವಳಿ ಎಂಬ ಪದದ ಅರ್ಥಕ್ಕಾಗಿ ಒಂದು ಉತ್ತಮವಾದ ಸುಳಿವನ್ನು ಒದಗಿಸುತ್ತದಲ್ಲದೆ ಶ್ರೀಪರ್ವತವು ಬಲು ಮುಖ್ಯವಾದ ಒಂದು ಕಾಳಾಮುಖ ಕೇಂದ್ರವಾಗಿತ್ತೆಂದು ಖಚಿತಪಡಿಸುತ್ತದೆ. ಈ ಶಾಸನವು ಆಂಧ್ರಪ್ರದೇಶದ ವಾರಂಗಲ್ ಜಿಲ್ಲೆಯ ಕಾಝಿಪೇಟೆಯಲ್ಲಿ ಒಂದು ಕಂಬಂದ ಮೇಲೆ ದೊರೆತಿದೆ. ಇದೇ ಜಿಲ್ಲೆಯ ಹನುಮಕೊಂಡ ಅಥವಾ ಅನಮಕೊಂಡದಲ್ಲಿ ದೊರೆತ ಇನ್ನೊಂದು ದತ್ತಿ ಶಾಸನವು ಇದೇ ಗುರುವನ್ನು ಕುರಿತು ಉಲ್ಲೇಖಿಸುತ್ತದೆಂದು ಕಾಣುತ್ತದೆ.[120] ಅರಸನಾದ ತ್ರಿಭುವನಮಲ್ಲನ (ಇಮ್ಮಡಿ ಬೆಟ್ಟರಸ) ತಂದೆಯು (?) ವೈಜನಪಲಿ ಉರ್ಫ ಶಿವಪುರವನ್ನು ರಾಮೇಶ್ವರಪಂಡಿತನಿಗೆ ದತ್ತಿನೀಡಿದುದನ್ನು ಹೇಳುತ್ತದೆ. ತ್ರಿಭುವನಮಲ್ಲನ ತಂದೆ, ಒಂದನೆ ಪ್ರೋಲ ಈ ಅರಸನನ್ನು 'ರಾಮೇಶ್ವರಪಂಡಿತನ ಉತ್ತಮ ಶಿಷ್ಯ'ನೆಂದು ಕರೆಯಲಾಗಿದೆ ಆ ಗುರುವನ್ನು ಈ ರೀತಿ ಬಣ್ಣಿಸಲಾಗಿದೆ :

> ಕೀರ್ತಿಯೆಂಬ ಬೆಳದಿಂಗಳಿಂದ ವಸತಿಗಳಲ್ಲೆಲ್ಲ ವ್ಯಾಪಿಸಿಕೊಂಡವನು (ಅಂದರೆ ಎಲ್ಲರಿಗೂ ಗೊತ್ತಿರುವವನು), ಶ್ರೇಷ್ಠವಾದ ರತ್ನಗಳಿಗಾಗಿ ಸುಪ್ರಸಿದ್ಧ ಮೇರುಪರ್ವತದಂಥವನು, ಶಿವನ ಉಪಾಸಕರಲ್ಲೆಲ್ಲ ಶ್ರೇಷ್ಠನು, ದಯಾಪರ, ಬಡಬಗ್ಗರಿಗೆ ಅನ್ನದಾನ ಮಾಡುವವನಲ್ಲದೆ ತನ್ನ ತಪಸ್ಸಿನಿಂದಾಗಿ ಎಲ್ಲರಿಗೂ ಗೊತ್ತಿರುವವನಾದ ಈ ರಾಮೇಶ್ವರ ಪಂಡಿತನು ಈ ದೇವಾಲಯಗಳನ್ನು ಬಲು ಆಸಕ್ತಿಯಿಂದ ನಿರ್ವಹಿಸುತ್ತಿದ್ದನು........
>
> [ಈ ಯತಿಯು] 'ಲಕುಲೇಶ್ವರ ಆಗಮ'ದ ಶ್ರೇಷ್ಠ ಸಂಪ್ರದಾಯದ ತಿರುಳಿನ ಅಮೃತವನ್ನು ಅರಿತವನಾಗಿದ್ದು...... ವಿಶ್ವದ ತುಂಬೆಲ್ಲ ಅದರ ಆಚರಣೆಯನ್ನು ಹಬ್ಬಿಸಿದನು.[121]

---

119. ಸಂ. ಮತ್ತು ಅನು. ಶ್ರೀನಿವಾಸಾಚಾರ, HAS. XIII, Part II, no. 7.

120. ಅದೇ. no. 12.

121. ಅದೇ. pp. 55-56.

ಈ ಶಾಸನಕ್ಕೆ ಇ.1050 ಎಂಬ ತಾತ್ಕಾಲಿಕ ತಾರೀಖನ್ನು ನೀಡಲಾಗಿದೆ.

ಈ ಕೊನೆಯ ಶಾಸನದಲ್ಲಿ ಕಾಣುವ ಶಿವಪುರವು ಶ್ರೀಪರ್ವತದ ಮೇಲಿರುವ ಒಂದು ವಸತಿಯ (Setlement) ಹೆಸರೆಂದು ತೋರುತ್ತದೆ. ಶಿವಪುರದ ಕ್ರಿ.ಶ.1069ರ ಒಂದು ದತ್ತಿಯಂತೆ ಕಲ್ಯಾಣ ಚಾಲುಕ್ಯ ಅರಸನಾದ ಇಮ್ಮಡಿ ಸೋಮೇಶ್ವರನು ತನ್ನ ಪಟ್ಟದರಸಿ ಕಂಚಲದೇವಿಯ ಕೋರಿಕೆಯಂತೆ ಶಿವಪುರದ ದೇವರಾದ ಮಲ್ಲಿಕಾರ್ಜುನನ ದೇವಾಲಯದ ಸತ್ರಕ್ಕಾಗಿ ಒಂದು ಗ್ರಾಮವನ್ನು ಗಂಗರಾಸಿಭಟ್ಟಾರಕನ ಶಿಷ್ಯನಾದ ಸುರೇಶ್ವರಪಂಡಿತನಿಗೆ ದತ್ತಿ ನೀಡಿದನು.[122] ಈ ಯತಿಗಳು ಶ್ರೀಪರ್ವತ ಇಲ್ಲವೆ ಶ್ರೀಶೈಲವಾಸಿಗಳಾಗಿದ್ದು ಎಂದಿನ ಯತಿಗುಣಗಳನ್ನು ಹೊಂದಿದವರು, 'ಕಾಳಾಮುಖ ಸಮಯ' ಮತ್ತು 'ಲಾಕುಲಸಿದ್ಧಾಂತ' ಹಾಗೂ ನೈಯಾಯಿಕರ ಅನುಯಾಯಿಗಳಾಗಿದ್ದರೆಂದು ಬಣ್ಣಿಸಲಾಗಿದೆ. ಅರಸಿ ಮೈಳಲದೇವಿಯ ಕೋರಿಕೆಯಂತೆ ಅರಸನು ಇನ್ನೊಂದು ಗ್ರಾಮವನ್ನು ಇದೇ ಯತಿಗೆ ಹಾಗೂ ದೇವಶಕ್ತಿಪಂಡಿತನೆಂಬ ಇನ್ನೊಬ್ಬ ಯತಿಗೆ ದತ್ತಿಕೊಟ್ಟನು.

ಶಿವಪುರದಿಂದ ಅನತಿದೂರದ ಕೊತ್ತಪಲ್ಲಿ ಹತ್ತಿರದಲ್ಲಿರುವ ದೇವಾಲಯ ಒಂದರಲ್ಲಿ ದೊರೆತ ಈ ಮೊದಲಿನ 1057ರ ದತ್ತಿಯ ಪ್ರಕಾರ, ಈ ಮೊದಲ ಅರಸನ ತಂದೆಯಾದ ಒಂದನೆಯ ಸೋಮೇಶ್ವರನು ತನ್ನ ಅರಸಿ ಮೈಳಲದೇವಿ ಹಾಗೂ ಬಲ್ಲವರಸ ಎಂಬ ಅಧಿಕಾರಿಯೊಡನೆ ಶ್ರೀಶೈಲಕ್ಕೆ ಆಗಮಿಸಿ ಮಲ್ಲಿಕಾರ್ಜುನ ದೇವರ ಸಮ್ಮುಖದಲ್ಲಿ ಇದೇ ಸುರೇಶ್ವರಪಂಡಿತನ ಪಾದಗಳನ್ನು ತೊಳೆದು ಶ್ರೀಶೈಲದ ಪಶ್ಚಿಮದ ಅಗಸೆ ಬಾಗಿಲ ಬಳಿಯ ಕೊಲ್ಲ ಎಂಬಲ್ಲಿಯ ಸ್ವಯಂಭೂ ಭೈರವನಿಗೆಂದು ಒಂದು ಗ್ರಾಮವನ್ನು ದತ್ತಿ ನೀಡಿದನು.[123] ಸುರೇಶ್ವರ ಹಾಗೂ ಅವನ ಗುರುವಿನ ಬಣ್ಣನೆಗಾಗಿ ಬಳಸಲಾದ ಪದಗಳು ಸುಮಾರಾಗಿ ಶಿವಪುರದ ದತ್ತಿಯಲ್ಲಿ ಬಳಸಲಾದವುಗಳಂತೆಯೇ ಇವೆ. ಈ ಯತಿಗಳ ಹಾಗೂ 'ಶ್ರೀಪರ್ವತದ ಹೆಸರಾದ ಮಲ್ಲಿಕಾರ್ಜುನ ಶಿಲಾಮಠದ ಮಠಾಧಿಪನಾದ' ರಾಮೇಶ್ವರನ ನಡುವಿರುವ ನಂಟು ತಿಳಿದಿಲ್ಲ. ರಾಮೇಶ್ವರನ ಸಂದೇಹಾಸ್ಪದವಾದ ಇಸವಿ 1050 ಎಂಬುದು ಸರಿಯಾಗಿದ್ದರೆ ಸುರೇಶ್ವರನು ಈತನ ಗುರು ಆಗಿರುವುದು ಸಾಧ್ಯವಿಲ್ಲ, ಅಷ್ಟೇ ಅಲ್ಲದೆ ಅವನು ಎದುರಾಳಿ ಇಲ್ಲವೆ ಉಪಮಠಕ್ಕೆ ಸೇರಿದವನಾಗಿರಬೇಕು.

ವಿಜಾಪುರ ಜಿಲ್ಲೆಯ ಕೊಪ್ಪದಲ್ಲಿ ದೊರೆತ 1075ದ ಶಾಸನವು ವಿಕ್ರಮಪುರದ ಸ್ವಯಂಭೂ ನಗರೇಶ್ವರ ಮಠದ ನಿರ್ವಹಣೆಗೆಂದು ಕಾಳಾಮುಖ ಪರ್ವತಾವಳಿಯ ತ್ರಿಭುವನಶಕ್ತಿ ಪಂಡಿತದೇವನ ಶಿಷ್ಯನಾದ ತತ್ಪುರುಷ ಪಂಡಿತದೇವನಿಗೆ ಒಂದು ಗ್ರಾಮವನ್ನು

122. ಸಂ. ಆರ್. ಎಸ್. ಸಾಸ್ತ್ರಿ ಮತ್ತು ಎನ್. ಎಲ್. ರಾವ, SII. XI, Part I, no. 134.
123. ಅದೇ. no. 119.

ಕಾಣಿಕೆ ನೀಡಿದುದನ್ನು ಉಲ್ಲೇಖಿಸುತ್ತದೆ.[124] ಇದು, ಆರನೆಯ ವಿಕ್ರಮಾದಿತ್ಯನು ವಿಶೇಷ ಸಂದರ್ಭಗಳಲ್ಲಿ ವಾಸಮಾಡುತ್ತಲಿದ್ದ ಅದೇ ಹೆಸರಿನ ಪಟ್ಟಣವಾಗಿರಬೇಕು. ಅದೆಂದರೆ, ಇದೇ ಜಿಲ್ಲೆಯ ಆಧುನಿಕ ಅರಸಿಬೀದಿ. ದಾತೃವು ಚಾಲುಕ್ಯ ಇಮ್ಮಡಿ ಸೋಮೇಶ್ವರನ ಮಾಂಡಲಿಕ ಇಲ್ಲವೆ ಅಧಿಕಾರಿಯಾದ ಬಲ್ಲವರಸನು. ಇವನು ಒಂದನೆಯ ಸೋಮೇಶ್ವರನೊಡನೆ ಶ್ರೀಪರ್ವತಕ್ಕೆ ಹೋದವನಾಗಿರುವಂತಿದೆ. ಶಿವಪುರದ ಗೋವರ್ಧನೇಶ್ವರದೇವರಿಗೆ ನೀಡಲಾದ ಪೂರಕ (Suplementary) ದತ್ತಿ ಶಾಸನದಲ್ಲಿ ನಮೂದಿಸಲಾದ ಊರು ಶ್ರೀಪರ್ವತದ ಮೇಲಿನ ಪಟ್ಟಣವಾಗಿರಲಿಕ್ಕಿಲ್ಲ.

1136ರಲ್ಲಿ ಹೊಯ್ಸಳ ಅರಸನಾದ ವಿಷ್ಣುವರ್ಧನನ ಆಳ್ವಿಕೆಯಲ್ಲಿ ಕಾಳಾಮುಖ ಪರ್ವತಾವಳಿಯ ಈಶಾನಶಕ್ತಿ ಪಂಡಿತದೇವನ ಮುಂದಿನ ತಲೆಮಾರಿನ ಕಲ್ಯಾಣಶಕ್ತಿ ಪಂಡಿತ ಎಂಬ ಯತಿಯೂ ಹೊಯ್ಸಳರ ರಾಜಧಾನಿಯಾದ ದೊರಸಮುದ್ರ ಅಂದರೆ ಹಾಸನ ಜಿಲ್ಲೆಯ ಆಧುನಿಕ ಹಳೆಬೀಡಿನಲ್ಲಿ ನೆಲೆಸಿದ್ದನು.[125] ಇದೇ ಪರಂಪರೆಯ ಇನ್ನೊಬ್ಬ ಈಶಾನ ಶಕ್ತಿಯನ್ನು 1185ರ (ಇಸ್ವಿಯ) ದತ್ತಿಯಲ್ಲಿ ಉಲ್ಲೇಖಿಸಲಾಗಿದೆ.[126] ಇವರಿಬ್ಬರು ಗುರುಗಳ ವಂಶಾವಳಿಗಳು ಗೊಂದಲಕ್ಕೆ ಎಡೆಮಾಡುವಂತಿವೆ.

1179ರಲ್ಲಿ ಕಳಚೂರಿ ಇಮ್ಮಡಿ ಸಂಕಮನ ಸಿಂದ ಮಾಂಡಲಿಕನಾದ ವಿಕ್ರಮಾದಿತ್ಯನು ಧಾರವಾಡ ಜಿಲ್ಲೆಯ ರೋಣದಲ್ಲಿ ಇರುವ ರಾಮೇಶ್ವರ ಹಾಗೂ ಮಾಲೇಶ್ವರ ದೇವಾಲಯಗಳ ಗರ್ಭಗುಡಿಗಳಿಗೆಂದು ಕಾಣಿಕೆಗಳನ್ನು ನೀಡಿದನು.[127] ದಾನವನ್ನು ಪಡೆದವನೆಂದರೆ ಕಾಳಾಮುಖರ ಪರ್ವತಾವಳಿಯ ಯತಿಯಾದ ಗುರುಭಕ್ತದೇವನು. ಅವನು ಕೊಪ್ಪಿನ ವಖ್ಖಣದೇವನ ಶಿಷ್ಯನಾದ ರುದ್ರಶಕ್ತಿದೇವನ ಶಿಷ್ಯನಾದ ಜ್ಞಾನಶಕ್ತಿದೇವನ ಶಿಷ್ಯನಾಗಿದ್ದನು. ಇದು ಪರ್ವತಾವಳಿಯನ್ನು ಕುರಿತು ಗೊತ್ತಿದ್ದ ಕೊನೆಯ ತಾಣವಾಗಿದೆ.

## ಭುಜಂಗಾವಳಿ

ಶಿವಮೊಗ್ಗ ಜಿಲ್ಲೆಯ ಮತ್ತಿಕೋಟೆಯ ಕ್ರಿ.ಶ.1077ದ ಶಾಸನವು ಶಕ್ತಿಪರ್ಷೆಯ ಭುಜಂಗಾವಳಿಯ ಇಟ್ಟಿಗೆ ಸಂತತಿಯ ತ್ರಿಲೋಚನಪಂಡಿತದೇವನ ಶಿಷ್ಯನೂ ಕಾಳಾಮುಖರ ಮುಖ್ಯಸ್ಥನೂ ಆದ ವರೇಶ್ವರ ಪಂಡಿತದೇವನಿಗೆ ನೀಡಲಾದ ಒಂದು ಕಾಣಿಕೆಯನ್ನು ನಮೂದಿಸುತ್ತದೆ.[128] ಕೆಲವು ಕೆಳಗಿನ ಅಧಿಕಾರಿಗಳು ಬಳ್ಳಿಗಾವೆಗೆ ಭೇಟಿಯಿತ್ತಾಗ ಅವರು

124. ಸಂ. ಎಸ್. ಎಲ್. ರಾವ. SII, XI, Part I, no. 116.

125. ಸಂ. ಮತ್ತು ಅನು. ರೈಸ್. EC. V. B1. 117.

126. ಅದೇ, B1. 119.

127. ಸಂ. ಮತ್ತು ಅನು. ಎಲ್. ಡಿ. ಬಾರ್ನೆಟ್ಟ್, EC, XIX, 222-36 (no. B).

128. ಸಂ. ಮತ್ತು ಅನು. ರೈಸ್. EC, VII, Sk. 292.

ಮರಿಯಸೆಯಲ್ಲಿ (ಮತ್ತಿಕೋಟೆ?) ಸ್ಥಾಪಿಸಿದ ಮಲ್ಲಿಕಾರ್ಜುನ ದೇವರ ನೈವೇದ್ಯದ ಏರ್ಪಾಡಿಗೆಂದು ಈ ದತ್ತಿಯನ್ನು ನೀಡಿದ್ದರು.

ಈ ದತ್ತಿಯನ್ನು ನೀಡುವ ಕಾಲಕ್ಕೆ ಈ ಅಧಿಕಾರಿಗಳು ಬಳ್ಳಿಗಾವೆಗೆ ಭೇಟಿ ನೀಡುತ್ತಿದ್ದುದೇನೂ ಅನುಚಿತವಾದ ಸಂಗತಿಯಲ್ಲ. ಕಾಳಾಮುಖರಾದ ತ್ರಿಲೋಚನರು ವರೇಶ್ವರ ಮತ್ತು ಆ ಪಟ್ಟಣದಲ್ಲಿರುವ ತ್ರಿಪುರಾಂತಕ ದೇವಾಲಯದ ಪ್ರಮುಖರಾಗಿದ್ದರು. 1096ರಲ್ಲಿ ಆರನೆಯ ವಿಕ್ರಮಾದಿತ್ಯನ ಸರ್ವದೇವನೆಂಬ ದಂಡಾಧಿಪನು 'ಹೆಸರಾಂತ ತ್ರಿಪುರಾಂತಕಕ್ಕೆ ತಿಲಕ"ವೆಂಬಂತೆ ಬಳ್ಳಿಗಾವೆಯಲ್ಲಿ ತಾನು ಕಟ್ಟಿಸಿದ ಸರ್ವೇಶ್ವರ ದೇವಾಲಯಕ್ಕೆ ಒಂದಿಷ್ಟು ನೆಲವನ್ನು ದತ್ತಿ ನೀಡಿದನು.[129] ಅವನು ತ್ರಿಲೋಚನಮುನೀಂದ್ರನ ಶಿಷ್ಯನಾದ ವರೇಶ್ವರಮುನೀಂದ್ರ ಅಥವಾ ವರೇಶ್ವರದೇವನ ಬೋಧನೆಯಮೇರೆಗೆ ಒಂದು ದೇವಾಲಯವನ್ನು ಕಟ್ಟಿಸಿದ್ದನು. ತ್ರಿಲೋಚನನು 'ಸ್ವರ್ಗೀಯ ಯತಿಯಾದ ಕಾಶ್ಮೀರದೇವನು ಕಾಳಾಮುಖ ಚಕ್ರವರ್ತಿಯೆನ್ನಿಸಿದ (ಮೂಲದಲ್ಲಿದ್ದಂತೆ) ಮುನಿಗಳ ಪರಂಪರೆಯಲ್ಲಿ' ಸಾಗಿ ಬಂದವನು. ಇದಕ್ಕೂ ಮೊದಲಿನ, ತಾರೀಖು ನೋಂದಾಯಿಸದ ಒಂದು ಶಾಸನವು ವರೇಶ್ವರನ ಶಿಷ್ಯನಾದ ತ್ರಿಲೋಚನಪಂಡಿತನಿಂದ ತ್ರಿಪುರಾಂತಕದೇವಾಲಯದ ನೃತ್ಯಗಾತಿಗೆ (ಸೂಳೆಗೆ) ಒಂದಿಷ್ಟು ಭೂಮಿಯನ್ನು ಕಾಣಿಕೆ ಕೊಟ್ಟುದನ್ನು ಉಲ್ಲೇಖಿಸುತ್ತದೆ.[130]

ಬಳ್ಳಿಗಾವೆಯ ಹಲವಾರು ದೇವಾಲಯಗಳಲ್ಲಿ ತ್ರಿಪುರಾಂತಕ ದೇವಾಲಯವು ಕೇದಾರೇಶ್ವರ ದೇವಾಲಯಕ್ಕಿಂತ ಕಲಾತ್ಮಕವಾಗಿ ಕೆಳಮಟ್ಟದ್ದು. ಇಂದು ಇವೆರಡೂ ಸುರಕ್ಷಿತವಾದ ಸ್ಮಾರಕಗಳಾಗಿವೆ. ತ್ರಿಪುರಾಂತಕದ ತಳದ ಬದಿಗೆ 'ಪಂಚತಂತ್ರ'ದಿಂದ ಆಯ್ದ ದೃಶ್ಯಗಳನ್ನು ಬಿಡಿಸಿದ ಶಿಲ್ಪ ಅಲಂಕರಣದ ಪಟ್ಟಿಕೆಗಳಿವೆ.[131] ಖಜರಾಹೋದ ಲಕ್ಷ್ಮಣದೇವಾಲಯದ ಮೇಲು ಬುನಾದಿಯ ಸುತ್ತಲಿನ ಶಿಲ್ಪ ಅಲಂಕರಣ ಪಟ್ಟಿಕೆಗಳಲ್ಲಿರುವ ಮಿಥುನ ಶಿಲ್ಪಗಳು ಈ ದೃಶ್ಯಾವಳಿಯ ನಡು ನಡುವೆ ಕಂಡುಬರುತ್ತವೆ. ಭಾರತೀಯ ದೇವಾಲಯಗಳ ಈ ಮಿಥುನ ಶಿಲ್ಪಗಳನ್ನು ಕುರಿತು ಹಲವಾರು ವಾದಗಳಿವೆ. ಎಲ್ಲಕ್ಕೂ ಹೆಚ್ಚು ಬಳಕೆಯಲ್ಲಿರುವುದೆಂದರೆ ಅದು ತಾಂತ್ರಿಕ ವಿಚಾರಗಳ ಪ್ರಭಾವವನ್ನು ವ್ಯಕ್ತಪಡಿಸುತ್ತದೆಂಬುದು. ರಾಮಾನುಜರ ಹೇಳಿಕೆಗೆ ಹೊರತಾಗಿಯೂ ಕಾಳಾಮುಖ ಉಪಾಸನಾಪದ್ಧತಿಯು ಯಾವುದೇ ಅರ್ಥದಲ್ಲೂ ತಾಂತ್ರಿಕವಾದುದೆನ್ನಲು ಯಾವುದೇ ಪುರಾವೆಯಿಲ್ಲ. ಪಾಶುಪತರ ವಿಚಿತ್ರ ಹಾಗೂ ಜಿಗುಪ್ಸೆಯನ್ನು ಹುಟ್ಟಿಸುವ ಯತಿ ಆಚರಣೆಗಳು (ದ್ವಾರಗಳು) ' ಶೃಂಗಾರಣ' ಎಂಬ ಸೌಮ್ಯ ಲೈಂಗಿಕ ಅಶ್ಲೀಲ ಪ್ರದರ್ಶನವನ್ನು

---

129. ಅದೇ. Sk. 114.

130. ಸಂ. ARMAD 1929, ಪು. 130.

131. ನೋಡಿ 'Mysore Gazetteer,' V, 1282. ನಾವು ಮಾರ್ಚ್ 1966ರಲ್ಲಿ ಈ ದೇವಾಲಯಕ್ಕೆ ಭೇಟಿಯಿತ್ತೆವು.

ಒಳಗೊಂಡಿರುತ್ತವೆ.[132] ಆ ಶಿಲ್ಪಗಳನ್ನು ಸಮರ್ಥಿಸಲು ಇಷ್ಟು ಸಾಲದು. ಏಕೆಂದರೆ 'ಪಾಶುಪತ ಸೂತ್ರ'ದ ಭಾಷ್ಯಕಾರನು ಬ್ರಹ್ಮಚರ್ಯವನ್ನು ನಿರ್ದಿಷ್ಟ ಪದಗಳಿಂದ ಸೂಚಿಸಿದ್ದಾನೆ.[133] ನಮಗೆ ಇದಕ್ಕೂ ಹೆಚ್ಚು ಗಮನಾರ್ಹವಾಗಿ ಅನ್ನಿಸುವುದೇನೆಂದರೆ ತ್ರಿಲೋಚನನ ದತ್ತಿಯಲ್ಲಿ ಉಲ್ಲೆಖಿಸಲಾದಂತೆ, ಬಳ್ಳಿಗಾವೆಯ ತ್ರಿಪುರಾಂತಕರಿಂದ ಹಿಡಿದು ಹಲವಾರು ಕಾಳಾಮುಖ ದೇವಾಲಯಗಳಲ್ಲಿರುವ ದೇವಾಲಯದ ದೇವದಾಸಿ ವೃತ್ತಿಯು ಇದಕ್ಕೆ ಮುಖ್ಯವಾದ ಪುರಾವೆಯೆಂದು. ನಮ್ಮ ಅಭಿಪ್ರಾಯದಂತೆ ಈ ದೇವಾಲಯದ ಮಿಥುನ ಶಿಲ್ಪ ಹಾಗೂ ಖಜರಾಹೋದ ದೇವಾಲಯಗಳವು ಕೂಡ ಅಲಕ್ಷ್ಯಸಬೇಕಿದ್ದ ಸಂಗತಿಗಳು. ಇವು ದೇವದಾಸಿಯರಿಗಾಗಿ ಒಂದು ಬಗೆಯ ಜಾಹಿರಾತು ಆಗಿರಬಹುದಾದಂತೆಯೇ ಹಿಂದಕ್ಕೆ ದೇವಾಲಯಗಳು ಒದಗಿಸುತ್ತಿದ್ದ ಹಲವು ಅರೆಲೌಕಿಕ ಮನರಂಜನೆಗಳಲ್ಲಿ ಇದೂ ಒಂದು. ಈ ದೃಷ್ಟಿಕೋನವು ಶಿಲ್ಪಿಯ ಕಲಾ ಸೌಂದರ್ಯಯನ್ನು ಖಂಡಿತ ಕೀಳಾಗಿಸದು. ಬದಲು ಅದನ್ನು ಬೇರೊಂದು ಬೆಳಕಿನಡಿ ಇರಿಸುತ್ತದೆ.[134] ಇನ್ನಿತರ ಕಾಳಾಮುಖ ದೇವಾಲಯಗಳಲ್ಲಿ ಕೂಡ ಮಿಥುನ ಶಿಲ್ಪವಿದೆಯೆ ? ಅದರಲ್ಲೂ ದೇವದಾಸಿಯರಿರುವ ದೇವಾಲಯಗಳಲ್ಲಿ ಅದು ಇದೆಯೆ ? ಎಂಬ ಸಂಗತಿಗಳನ್ನು ಅರಿತುಕೊಳ್ಳುವುದು ಉಪಯುಕ್ತವೆನ್ನಿಸೀತು. ಇದೇ ಜಿಲ್ಲೆಯ ಕಲ್ಸಿ ಊರಿನ ಹೊಯ್ಸಳ ಶೈಲಿಯ ಮಲ್ಲಿಕಾರ್ಜುನ ದೇವಾಲಯದಲ್ಲಿ ಇಂಥದೊಂದು ಶಿಲ್ಪವಿದ್ದು ಈ ದೇವಾಲಯದ ಮೊದಲ ಸದಸ್ಯನು ಕಾಳಾಮುಖ ಯತಿಯಾಗಿರುವ ಸಾಧ್ಯತೆ ಹೆಚ್ಚು.[135]

ಬಳ್ಳಿಗಾವೆಯ ಇತರ ದೇವಾಲಯಗಳಿಗೆ ನೀಡಲಾದ ದತ್ತಿಗಳಲ್ಲಿ ವರೇಶ್ವರನ ತರುವಾಯದ ಕೆಲವರನ್ನು ನಮೂದಿಸಲಾಗಿದೆ. ಕ್ರಿ.ಶ.1098ರಲ್ಲಿ ಚತುರಾನನಪಂಡಿತನು ತ್ರಿಪುರಾಂತಕ ದೇವಾಲಯದ ಪ್ರಮುಖನಾಗಿದ್ದನು.[136] 1113ರಲ್ಲಿ ಕ್ರಿಯಾಶಕ್ತಿಪಂಡಿತ[137] ಹಾಗೂ 1150ರಿಂದ1180ರ ನಡುವಿನ ಕಾಲದಲ್ಲಿ ಜ್ಞಾನಶಕ್ತಿಪಂಡಿತದೇವರು ಇದೇ ದೇವಾಲಯಕ್ಕೆ ಪ್ರಮುಖರಾಗಿದ್ದರು.[138]

---

132. ಮುಂದೆ ನೋಡಿ, ಪು. 185.
133. ಸಂ. ಆರ್. ವಿ. ಶಾಸ್ತ್ರಿ. PP. 19-21.
134. ಬಹಳಷ್ಟು ಮಟ್ಟಿಗೆ ಇದೇ ಬಗೆಯ ಮೌಲ್ಯಮಾಪನವನ್ನು ಮನವೊಲಿಸುವ ಬಗೆಯಲ್ಲಿ ಎಸ್. ಸಿ. ಚೌಧುರಿ ಅವರು 'The Continent of Circe, pp. 217-20 ಗಳಲ್ಲಿ ಮಾಡಿದ್ದಾರೆ. ಬೇರೊಂದು ಬಗೆಯ ದೃಷ್ಟಿ ಕೋನಕ್ಕಾಗಿ ನೋಡಿ, ಪಿ. ಚಂದ್ರ, 'The Kaula Kāpālika Cults at Khajuraho,' Lalit KAla. Nos. 1-2 (1955-56). pp. 98-107.
135. ನಾವು ಭೇಟಿಯಿತ್ತುದು ಮಾರ್ಚ್. 1966ದಲ್ಲಿ.
136. ಸಂ. ಮತ್ತು ಅನು. ರೈಸ್, EC, VII, Sk. 106.
137. ಅದೇ. Sk. 99
138. ಅದೇ. Sk. 118, 123 ಮತ್ತು 119.

ಇದೇ ಜಿಲ್ಲೆಯ ಬೇಗೂರು ಅಗ್ರಹಾರದಲ್ಲಿರುವ ಮಲ್ಲಿಕಾರ್ಜುನ ದೇವಾಲಯಕ್ಕಾಗಿ ಸ್ಥಾನಿಕ ಅಧಿಕಾರಿಯಿಂದ ನೀಡಲಾದ ದತ್ತಿಯಲ್ಲಿ ಈ ಯತಿ ಪರಂಪರೆಯ ಸಂಸ್ಥಾಪಕನಾದ ಕಾಶ್ಮೀರದೇವನು ದಾನವನ್ನು ಪಡೆದಿರುವ ಸಾಧ್ಯತೆಯಿದೆ.[139] ಈ ಪ್ರಮುಖನು ಶಕ್ತಿ ಪರಿಕ್ಷೆ, ಭುಜಂಗ.... ಸದಸ್ಯ ಹಾಗೂ 'ಕಾಳಾಮುಖ ಸಮಯ'ದ ಕಾಶ್ಮೀರಪಂಡಿತನ ಪಾದಗಳನ್ನು ತೊಳೆದು ಈ ದತ್ತಿಯನ್ನು ನೀಡಿದನು. ಶಾಸನದ ಉಳಿದ ಭಾಗ ವಿದ್ರೂಪಗೊಂಡಿದೆ.

ವಿಜಾಪುರ ನಗರದ 1074-75ರ ಒಂದು ಶಾಸನವು ಭುಜಂಗದೇವಾಚಾರ್ಯನಿಂದ ಸ್ಥಾಪಿಸಲಾದ ಕಾಳಾಮುಖ ಯತಿಗಳ ಒಂದು ಪರಂಪರೆಯನ್ನು ನಮೂದಿಸುತ್ತದೆ.[140] ಅವನ ತರುವಾಯದ ಶಿಷ್ಯನೆಂದರೆ ತ್ರಿಲೋಚನ. ಈ ಪರಂಪರೆಯ ಮುಂದಿನ ಸದಸ್ಯರು ಕಾಶ್ಮೀರ ಎನಿಸಿದ್ದಾರೆ. ಈ ಹೆಸರುಗಳು ಮತ್ತಿಕೋಟೆ, ಬಳ್ಳಿಗಾವೆ ಹಾಗೂ ಬೇಗೂರು ಅಗ್ರಹಾರಗಳ ಯತಿಗಳೊಂದಿಗೆ ಇರುವ ತುಸುಮಟ್ಟಿಗಿನ ನಂಟನ್ನು ಸೂಚಿಸುವುವಾದರೂ ಈ ಸಂಗತಿಯನ್ನು ಖಚಿತ ಪಡಿಸಲು ಯಾವುದೇ ಸಾಧನಗಳಿಲ್ಲ. ವಿಜಾಪುರದ ಯತಿ ಪರಂಪರೆ ಕೂಡ ವಿಜಾಪುರ ಜಿಲ್ಲೆಯ ಮುತ್ತಗಿ ಗ್ರಾಮದ ಎರಡು ದತ್ತಿ ಶಾಸನಗಳಲ್ಲಿ ಕಂಡುಬರುತ್ತದೆ.[141]

ಧಾರವಾಡ ಜಿಲ್ಲೆಯ ಹನ್ನೊಂದನೆಯ ಶತಮಾನದ ಎರಡು ಶಾಸನಗಳೂ ಕೂಡ ಶಕ್ತಿಪರ್ಷೆಯನ್ನು ನಮೂದಿಸುತ್ತವೆ, ಎಂಬುದನ್ನು ಇಲ್ಲಿ ಗಮನಿಸಬೇಕು. 1067ರಲ್ಲಿ ಆಡೂರಿನ ಒಬ್ಬ ಸ್ಥಾನಿಕ ಅಧಿಕಾರಿಯು ಕಾಳೇಶ್ವರ ದೇವಾಲಯಕ್ಕೆ ಹಾಗೂ ಇದರ ಆಚಾರ್ಯನೂ ಶಕ್ತಿಪರ್ಷೆಯವನೂ ಆದ ಬಾಲಚಂದ್ರಪಂಡಿತನಿಗೆ ಮೂರು ನೂರು ತೆಂಗಿನ ಮರಗಳನ್ನು ದತ್ತಿ ನೀಡಿದನು.[142] 1058ರಲ್ಲಿ ಒಂದನೆಯ ಸೋಮೇಶ್ವರನ ಮಾಂಡಲಿಕನಾದ ಇಂದ್ರಕೇಸಿಯರಸನು ಶಕ್ತಿಪರ್ಷೆಯ ಲೋಕಾಭರಣಪಂಡಿತನ ಪ್ರಮುಖತ್ವದಲ್ಲಿರುವ ಕುಯಿಬಾಳದ ಜೋಗೇಶ್ವರ ದೇವಾಲಯಕ್ಕೆ ಒಂದು ಕಾಣಿಕೆಯನ್ನು ನೀಡಿದನು.[143] ಇವರಿಬ್ಬರಿಗೂ ಎಂದಿನ ಯತಿ ಲಕ್ಷಣಗಳನ್ನು ಸಲ್ಲಿಸಲಾಗಿದ್ದರೂ ಇನ್ನಾವ ಮಾಹಿತಿಯನ್ನೂ ನೀಡಲಾಗಿಲ್ಲ.

❖ ❖ ❖

139. ಅದೇ. Sk. 206.

140. ಸಂ. ಮತ್ತು ಅನು. ಜೆ. ಎಫ್. ಫ್ಲೀಟ್, 'Sanskrit and Old Canarese Inscriptions,' I A, X (1881), 216-32.

141. ಸಂ. ದೇಸಾಯಿ, SII. XV, nos. 32 and 97.

142. ಸಂ. ಗಾಯಿ, SII, XX, no. 285.

143. ಅದೇ. no. 38.

# ಅಧ್ಯಾಯ - ೫

# ಕಾಳಾಮುಖರ ಇತರ ಪರಂಪರೆಗಳು


## ಸಿಂಹಪರಿಷತ್ತು

ಈವರೆಗೆ ತಿಳಿದಿರುವ ಕಾಳಾಮುಖರ ಎರಡು ಪರಿಷತ್ತುಗಳಲ್ಲಿ ಎರಡನೆಯದೆಂದರೆ ಸಿಂಹ ಪರಿಷತ್ತು. ಈ ಪರಿಷತ್ತಿನ ದೇವಾಲಯಗಳಿಗೆ ನೀಡಲಾದ ದತ್ತಿಶಾಸನಗಳು ಆಂಧ್ರಪ್ರದೇಶದ ಗುಂಟೂರ ಜಿಲ್ಲೆ ಹಾಗೂ ಕರ್ನಾಟಕದ ಬಳ್ಳಾರಿ, ವಿಜಾಪೂರ ಜಿಲ್ಲೆಗಳಲ್ಲದೆ ಗುಲಬರ್ಗಾ ಜಿಲ್ಲೆಯಲ್ಲೂ ದೊರಕುತ್ತವೆ. ಈ ದೇವಾಲಯಗಳು ಬಲು ವಿಸ್ತೀರ್ಣ ಪ್ರದೇಶವನ್ನು ವ್ಯಾಪಿಸಿದ್ದವು. ಆದರೂ ಅವುಗಳ ಸಂಖ್ಯೆ ಕೇವಲ ಐದು ಮಾತ್ರವಿದ್ದು, ಪ್ರಸ್ತುತವೆನ್ನಿಸಬಹುದಾದ ಅವುಗಳ ಶಾಸನಗಳು ಎಂಟು ಮಾತ್ರ. ಹೀಗಾಗಿ ಈ ಸಂಪ್ರದಾಯದ ಬಣವು ಶಕ್ತಿ ಪರಿಷತ್ತಿಗಿಂತ ಕಡಿಮೆ ಪ್ರಭಾವವುಳ್ಳದ್ದು, ಇಲ್ಲವಾದರೆ ಅರಸನ ಅಥವಾ ಆಡಳಿತೆಯ ಕಡಿಮೆ ಆಶ್ರಯವನ್ನು ಹೊಂದಿದುದು ಎಂದಾದರೂ ಅನ್ನಬೇಕು.

ಕ್ರಿ.ಶ.946 ಹಾಗೂ 970ಯ ನಡುವಿನ ಕಾಲದಲ್ಲಿ ವೆಂಗಿ ಮತ್ತು ಕಲಿಂಗದ ಕೆಲ ಭಾಗಗಳಲ್ಲಿ ಆಳುತ್ತಿದ್ದ ಪೂರ್ವ ಚಾಲುಕ್ಯ ಅರಸನಾದ ಇಮ್ಮಡಿ ಅಮ್ಮರಾಜನು ನೀಡಿದ ತಾಂಡಿಕೊಂಡದ ತಾರೀಖನ್ನು ನಮೂದಿಸದ ಒಂದು ದತ್ತಿ ಶಾಸನದಲ್ಲಿ ಸಿಂಹಪರಿಷತ್ತನ್ನು ಕುರಿತು ಮೊದಲ ಬಾರಿಗೆ ಉಲ್ಲೇಖಿಸಲಾಗಿದೆ.[1] ಈ ಶಾಸನ ಸಂಸ್ಕೃತದಲ್ಲಿದ್ದು ಅರಸನು ಸಮಸ್ತಭುವನಾಶ್ರಯ ಹೆಸರಿನ ದೇವಾಲಯದ ಉಮಾಮಹೇಶ್ವರ ದೇವರಿಗೆ ತಾಂಡಿಕೊಂಡ

1. ಸಂ. ಬಿ. ವಿ. ಕೃಷ್ಣರಾವ, EI, XXIII, 161-170.

ಹಾಗೂ ಇನ್ನಿತರ ಮೂರು ಗ್ರಾಮಗಳನ್ನು ದತ್ತಿನೀಡಿದುದನ್ನು ನಮೂದಿಸುತ್ತದೆ. ಈ ದೇವಾಲಯವು ಕೃಷ್ಣಾನದಿಯ ಮುಖದಿಂದ ಸುಮಾರು ಅರವತ್ತು ಮೈಲುಗಳ ಮೇಲಿರುವ ಅಂದಿನ ವಿಜಯವಾಟಿ, ಅಂದರೆ ಇಂದಿನ ವಿಜಯವಾಡಾ ಅಥವಾ ಬೆಜವಾಡಾದಲ್ಲಿತ್ತು. ದೇವಾಲಯವನ್ನು ಸ್ಥಾಪಿಸಿದವನು ವಿಜಯಾದಿತ್ಯ ನರೇಂದ್ರಮೃಗರಾಜನು, ಎಂದು ಶಾಸನ ಹೇಳುತ್ತದೆ. ಈತನೆಂದರೆ ಇದೇ ಅರಸು ಮನೆತನದ ಇಮ್ಮಡಿ ವಿಜಯಾದಿತ್ಯನೇ (ಇಸವಿ, ಕ್ರಿ.ಶ.799-847) ಆಗಿರುವಂತಿದೆ. ಇಮ್ಮಡಿ ಅಮ್ಮರಾಜನು ತನ್ನ ವಂಶ, ಆಯುಸ್ಸು, ಆರೋಗ್ಯ ಹಾಗೂ ಸರ್ವಶ್ರೇಷ್ಠತೆಗಳು ಹೆಚ್ಚಲೆಂದು ದೇವಾಲಯದ ಸುಸ್ಥಿತಿ, ಬಲಿ, ನೈವೇದ್ಯ, ಸಂಗೀತ (ಆತೋದ್ಯ) ಹಾಗೂ ಧರ್ಮಛತ್ರ (ಸತ್ರ) ಗಳಿಗಾಗಿ ಉತ್ತರಾಯಣದ ಸಂಕ್ರಾಂತಿಯಂದು ದತ್ತಿ ನೀಡಿದನು. ಈ ನಾಲ್ಕು ಗ್ರಾಮಗಳ ಗಡಿಗಳನ್ನು ವಿವರಿಸಿದ ತರುವಾಯ ಈ ಶಾಸನವು ಸಿಂಹಪರಿಷತ್ತಿನ 'ಕಾಳಾಮುಖ' ಯತಿಗಳ ಒಂದು ಪರಂಪರೆಯನ್ನು ಕುರಿತು ಬಣ್ಣಿಸುತ್ತದೆ. ಅವರ ಪರಂಪರೆಯ ವಂಶಾವಳಿಯನ್ನು ಈ ಕೆಳಗೆ ಕೊಡಲಾಗಿದೆ.[2]




2. ಸಂಪಾದಕರಾದ ಬಿ. ವಿ. ಕೃಷ್ಣರಾವ ಈ ವಂಶಾವಳಿಯನ್ನು ತುಸು ಬೇರೆಯಾಗಿ ವಿಶ್ಲೇಷಿಸುತ್ತಾರೆ. ಅವರು ಕಾಲಮುಖೇಂದ್ರನನ್ನು ಪಶುಪತಿ II ನೆಂದು ಭಾವಿಸುವರಲ್ಲದೆ, ಪಶುಪತಿ II ಹಾಗೂ IIIರ ಅನನ್ಯತೆಯನ್ನು ಒಪ್ಪುತ್ತಾರೆ. ಈ ಅರ್ಥವಿವರಣೆಯು 'ಕಾಲಮುಖೇಂದ್ರಾದ್ಯ ರೂಪರನಾಮಾ'ಎಂಬ ಅಭಿವ್ಯಕ್ತಿಯಲ್ಲಿ ಬರುವ 'ಆದಿ'ಯ ಅರ್ಥವನ್ನು ಆಧರಿಸಿದುದಾಗಿದೆ.

ಪ್ರತಿ ತಲೆಮಾರಿಗೆ ಇಪ್ಪತ್ತು ವರ್ಷಗಳಂತೆ ಲೆಕ್ಕ ಮಾಡಿದರೆ, ಲಕಶಿಪು ಪಶುಪತಿಯು ಇಮ್ಮಡಿ ಅಮ್ಮರಾಜನ ಸಮಕಾಲೀನನಾದ ಮುಮ್ಮಡಿ ಪ್ರಭೂತರಾಶಿಗಿಂತ 100 ವರ್ಷಗಳಿಗಿಂತ ಹೆಚ್ಚು ಹಿಂದೆಯೇ ಬೋಧಕನಾಗಿರಲು ಸಾಕು. ಇದೆಂದರೆ ಸಮಸ್ತಭುವನಾಶ್ರಯ ದೇವಾಲಯದ ಸಂಸ್ಥಾಪಕನಾದ ಇಮ್ಮಡಿ ವಿಜಾಯದಿತ್ಯನಿಗೆ ಹತ್ತಿರದ ಕಾಲ ಎನ್ನಬಹುದು. ಹೀಗಾಗಿ ೧ನೇ ಪಶುಪತಿಯು ಈ ದೇವಾಲಯದ ಮೊದಲನೆಯ ಪ್ರಮುಖ ಯತಿಯಾಗಿರುವ ಸಾಧ್ಯತೆಯಿದೆ. ಈ ಸಂಗತಿಯು ಈವರೆಗೆ ತಿಳಿದುಬಂದ ತೀರ ಪುರಾತನರಾದ ಕಾಳಾಮುಖರಲ್ಲಿ ಈತನನ್ನು ಒಬ್ಬನನ್ನಾಗಿ ಮಾಡುವುದಷ್ಟೇ ಅಲ್ಲದೆ, ಮೈಸೂರಿನ ಕೋಲಾರ ಜಿಲ್ಲೆಯ ನಂದಿ ಬೆಟ್ಟದ ಕ್ರಿ.ಶ.810ರ ದತ್ತಿ ಶಾಸನದಲ್ಲಿ ನಮೂದಿಸಲಾದ ಕಾಳಾಮುಖಯತಿ ಈಶ್ವರದಾಸನೊಡನೆ ಈತನನ್ನು ಸಮಕಾಲೀನನ್ನಾಗಿಸುತ್ತದೆ.[3]

ಈ ಶಾಸನದ ಲಿಖಿತ ಪಾಠದಮೇರೆಗೆ ಈ ವಿಶ್ವದ ಬೇರೆ ಬೇರೆ ಯುಗಗಳ ಕಾಲಕ್ಕೆ ಶ್ರೀ ಲಕುಲೀಶ್ವರನಿಂದ ಹಿಡಿದು ಅಸಂಖ್ಯರಾದ ಮುನೀಶ್ವರರು ಅವತರಿಸಿದರು. ಇವರೆಲ್ಲ ರುದ್ರನ ಸ್ವಯಂ ನಿರ್ಮಿತ ರೂಪಗಳಾಗಿದ್ದರು (ಸ್ವೀಕೃತ ರುದ್ರ ಮೂರ್ತಯಃ). ಅವರೆಲ್ಲ ಭೂಮಿಯ ಮೇಲೆ ಧರ್ಮಪಥದ ಸ್ವಯಂಭೂತರಾದ ಯತಿ ಗುರುಗಳಾಗಿ ಅವತರಿಸಿದರು. ವೇದಗಳಲ್ಲಿ (ಶ್ರುತಿ ಮುಖ್ಯಃ) ಪಾರಂಗತರು ಭೂಮಿಯ ಮೇಲೆ ಸ್ವಯಂಭುಗಳು ಹಾಗೂ ಅರಸರಿಂದ ಗೌರವವನ್ನು ಪಡೆಯುವ ಅರ್ಹತೆಯವರಾದ 'ಕಾಳಾಮುಖರು' ಇದೇ ಪರಂಪರೆಯಲ್ಲಿ ಬಂದರು. ಇಲ್ಲಿ (ಇಹ) ಮುನೀಶ್ವರರು ಈ ಸಿಂಹಪರಿಷತ್ತಿನ ಸ್ಥಾನಕ್ಕೆ ಉಪಕಾರಕರ್ತರಾದ ಪ್ರಭುಗಳೆನ್ನಸಿರುವರೆಂದು ಈ ಶಾಸನ ನಮೂದಿಸುತ್ತದೆ. ಆಗಮಗಳನ್ನು ಪೂರ್ತಿಯಾಗಿ ಅರಿತವನು, ಶ್ರೀಗೆ ಪತಿಯಾದವನು ಎನ್ನಿಸಿದ ಮುನಿಪ ಲಕುಲೀಶ ಅಥವಾ (೧ನೆಯ) ಪಶುಪತಿಯು ಅಮರವಟೇಶ್ವರದಂತಹ ಹಲವಾರು ಪುರಾತನ ದೇವಾಲಯಗಳಲ್ಲಿ ನೆಲೆಸಿದ್ದ ಆ 'ಕಾಳಾಮುಖ'ರ ಪರಂಪರೆಯಲ್ಲಿ (ಸಂತತಿ) ಮೇಲೇರಿ ಬಂದವನು.[4] ಅವನು ತನ್ನ ಪವಿತ್ರವಾದ ದೇಹವನ್ನು (ಧರ್ಮಶರೀರ) ಬರಿ ನೀರು, ಕಾಯಿಪಲ್ಲೆ, ಹಾಲು, ಹಣ್ಣು ಹಾಗೂ ಗೆಡ್ಡೆಗೆಣಸುಗಳಿಂದ ಪೋಷಿಸುತ್ತಿದ್ದನು. (ಪದ್ಯ 11.51-57).

ಈ ವಿವರವು ಶಕ್ತಿಪರಿಷತ್ತಿನ ಧರ್ಮದ ಬಗೆಗೆ ತಿಳಿದಿರುವ ಅದೆಷ್ಟೋ ನಿಜ ಸಂಗತಿಗಳನ್ನು ಇನ್ನೊಮ್ಮೆ ಹೇಳಿ ಅವುಗಳನ್ನು ದೃಢಪಡಿಸುತ್ತದೆ. ' ಕಾಳಾಮುಖ'ರು ಸಿಂಹಪರಿಷತ್ತಿನ ಸದಸ್ಯರು, ಅವರು ತಮ್ಮ ಮೂಲವನ್ನು ಲಕುಲೀಶನಿಗೆ ಒಯ್ದು ತಲುಪಿಸುತ್ತಾರೆ; ಅವರು ಶಿವನನ್ನು ಆರಾಧಿಸುತ್ತಾರೆ; ಅವರು ವೇದ ಹಾಗೂ

---

3. ಮುಂದೆ ನೋಡಿ, pp. 160-61.
4. ಈ ಪದವನ್ನು ಮೂವರ ಕೋಣೆಯ ಸಂತತಿಯಂತೆ ಒಂದು ಪಾರಿಭಾಷಿಕ ಅರ್ಥದಲ್ಲಿ ಮಾತ್ರ ಬಳಸಲಾಗಿರಬಹುದು.

ಆಗಮುಗಳೆರಡರಲ್ಲೂ ಪಾರಂಗತರು ; ಅವರು ವಿಶ್ವವಿಖ್ಯಾತ ಗುರುಗಳಿಗೆ ಸಲ್ಲಬೇಕಿದ್ದ ರಾಜಮರ್ಯಾದೆಗಳನ್ನು ಪಡೆಯುನವರು, ಆಗಿರುತ್ತಾರೆ. ವಾನಪ್ರಸ್ಥದ ಯತಿಯ ಆಹಾರದಂತಿರುವ ಕಾಳುಗಳಿಲ್ಲದ ಸಸ್ಯಾಹಾರದ ಲಕುಲಿಪುವಿನ ಸಂದರ್ಭವನ್ನು ನೀಡಿ ಅವರ ಘೋರ ಸಂನ್ಯಾಸವ್ರತಕ್ಕೆ ಒತ್ತು ನೀಡಲಾಗಿದೆ.

ಅಮರವಟೇಶ್ವರನ ದೇವಾಲ ಎಂದರೆ, ವಿಜಯವಾಟಿ (ಬೆಜವಾಡಾ)ದಿಂದ ಸುಮಾರು ಇಪ್ಪತ್ತೈದು ಮೈಲುಗಳ ಅಂತರದಲ್ಲಿ ಕೃಷ್ಣಾನದಿಯ ಪ್ರವಾಹದ ವಿರುದ್ಧ ದಿಕ್ಕಿನಲ್ಲಿರುವ ಅಮರಾವತಿ ಎಂಬ ನಗರದಲ್ಲಿ ಇರುವ ದೇವಾಲಯವೇ ಆಗಿರಬಹುದು. ಪರಿವ್ರಾಜಕನಾದ ಕಾಳಾಮುಖ ಗುರು ಬೊಂತೆಯ ಮುನಿಯು ಕಟಕ ಎಂಬ ಊರಿಗೆ ಭೇಟಿಯಿತ್ತನೆಂಬ ಸಂಗತಿಯನ್ನು ಈ ಮೊದಲು ಗಮನಿಸಿದ್ದೇವೆ. ಈ ಕಟಕ ಹಾಗೂ ಧಾನ್ಯಕಟಕ ಒಂದೇ ಆಗಿದ್ದು, ಅದು ಅಮರಾವತಿಯ ಇನ್ನೊಂದು ಹೆಸರಾಗಿರುವ ಸಾಧ್ಯತೆಯಿದೆ. ಅಮರಾವತಿ, ಬೆಜವಾಡ ಹಾಗೂ ಶ್ರೀಪರ್ವತಗಳೆಲ್ಲ ಕೃಷ್ಣಾ ನದಿಯ ದಡದಲ್ಲಿ ಇಲ್ಲವೆ ಅದಕ್ಕೆ ಹತ್ತಿರದಲ್ಲಿರುವ ಊರುಗಳಾಗಿದ್ದು, ಇವೆಲ್ಲ ತೀರ್ಥಯಾತ್ರಿಕರು, ವ್ಯಾಪಾರಿಗಳು ಹಾಗೂ ಪ್ರಯಾಣಿಕರಿಗೆ ಸ್ವಾಭಾವಿಕವಾದ ತಂಗುದಾಣಗಳೆನ್ನಿಸಿವೆ.

ಲಕುಲಿಪು ಪಶುಪತಿಯ ಮುಂದಿನವರಲ್ಲಿ ಕೊನೆಯವನೆಂದರೆ ಮೂರನೆಯ ಪ್ರಭೂತರಾಶಿಯು ತನ್ನ ಗುರು ಎರಡನೆಯ ವಿದ್ಯೇಶ್ವರನ ಕೀರ್ತಿ ಹಾಗೂ ಏಳಿಗೆಗಳಿಗೆ ವಾರಸುದಾರನೂ (ಯುವರಾಜ), ಆಶ್ರಯಬೇಕೆಂದು ಮೊರೆ ಹೊಕ್ಕವರಿಗೆ ('ಪ್ರಭುರಾಶ್ರಿತಾನಾಮ್'-ಎಂಬ ಕವಿಕಲ್ಪನೆಯ ಒಂದು ಮಾದರಿ) ಆಶ್ರಯದಾತನಾದ ಪ್ರಭೂವೂ ಆಗಿದ್ದನು. ಅವನು ತನ್ನ ಗುರುವಿನ ಎದುರಿನಲ್ಲೇ ಸುಂದರವಾದ ಕಲ್ಲಿನ ದೇಗುಲ ಹಾಗೂ ಮೂರಂತಸ್ತಿನ ಒಂದು ಮಠವನ್ನು ಕಟ್ಟಿದನೆಂದು ಹೇಳಲಾಗುತ್ತದೆ. ಇದಕ್ಕಾಗಿ ಅವನು ಅರಸನಿಂದ ಮೂರು ಗ್ರಾಮಗಳು ಹಾಗೂ ಒಂದು ಸಾವಿರ ಕುರಿಗಳನ್ನು ಪಡೆದನು. ಈ ಶಾಸನವು ಕೊನೆಯಲ್ಲಿ, ಅರಸನು ದಾನಿಯಾಗಿದ್ದನು, ಗುರು (ಎರಡನೆಯ) ವಿದ್ಯೇಶ್ವರನು ರಚನಾಕಾರನಾಗಿದ್ದನು ಹಾಗೂ ಕಟಕನಾಯಕನು ದತ್ತಿಯ ಕಾರ್ಯನಿರ್ವಾಹಕನಾಗಿದ್ದನು (ಪಠ್ಯ 11.61-68), ಎಂದು ಹೇಳುತ್ತ ಮುಕ್ತಾಯಗೊಳ್ಳುತ್ತದೆ. ಇದರಿಂದಾಗಿ ವಿದ್ಯೇಶ್ವರನು ಇಮ್ಮಡಿ ಅಮ್ಮರಾಜನ ರಾಜಗುರುವಾಗಿದ್ದನೆಂದು ಧ್ವನಿತವಾದರೂ ಇನ್ನಿತರ ದಾಖಲೆಗಳಿಂದ ನಾವು ಕಂಡುಕೊಂಡ ಸಂಗತಿಯೆಂದರೆ ಈ ಅರಸನು ಶೈವರಿಗೆ ಮಾತ್ರ ಆಶ್ರಯದಾತನಾಗಿರಲಿಲ್ಲ ಎಂಬುದು. ಹೀಗೆನ್ನಲು ಕಾರಣವೆಂದರೆ ಅವನು ಬೆಜವಾಡಾದ ಕೆಲವು ಜೈನ ದೇವಾಲಯಗಳಿಗೂ ದತ್ತಿ ನೀಡಿದ್ದನು.[5]

---

5. ಆರ್. ಸಿ. ಮಜುಮದಾರ (ಸಂ.). 'The Struggle for Empire'. ಪು. 139.

ಹತ್ತನೆಯ ಶತಮಾನದ ಕೊನೆಗೆ ಅಥವಾ ಅದಕ್ಕೂ ತುಸು ಮೊದಲು ಸಿಂಹಪರಿಷತ್ತಿನ ಸದಸ್ಯರು ಕರ್ನಾಟಕದ ಬಳ್ಳಾರಿ ಜಿಲ್ಲೆಯಲ್ಲಿ ಸ್ಥಿರವಾಗಿ ನೆಲೆಸಿದರು. ಕ್ರಿ.ಶ.1045ರಲ್ಲಿ ತೀಕಣ್ಣ ದಂಡನಾಯಕನ ಮುಂದಾಳತ್ವದ 'ಲೆಂಕ ಸಾವಿರ'ವೆಂಬ ಯೋಧರ ಬಣವು ನೊಳಂಬೇಶ್ವರ ಹಾಗೂ ಲೆಂಕೇಶ್ವರ ದೇವರ ಲಿಂಗಗಳನ್ನು ಸ್ಥಾಪಿಸಿತಲ್ಲದೆ, ಕಲ್ಯಾಣ ಚಾಲುಕ್ಯ ಅರಸನಾದ ಒಂದನೇ ಸೋಮೇಶ್ವರನಿಂದ ಇವರಿಬ್ಬರು ದೇವತೆಗಳ ಅರ್ಚನೆಗೆಂದು ಒಂದಿಷ್ಟು ನೆಲವನ್ನು ದತ್ತಿಯಾಗಿ ನೀಡಲು ಅಪ್ಪಣೆಯನ್ನು ಪಡೆಯಿತು.[6] ಕೋಗಳಿ ಐದು ನೂರರ ರಾಜಧಾನಿಯಾದ ಕೋಗಳಿಯಲ್ಲಿಯ ಮಠದ ಪ್ರಮುಖನಾದ, ಸಿಂಹಪರಿಷತ್ತಿನ ಸೋಮೇಶ್ವರಪಂಡಿತನ ಪಾದಗಳನ್ನು ತೊಳೆದು ಈ ಕಾಣಿಕೆಯನ್ನು ನೀಡಲಾಯಿತು. ಈ ದತ್ತಿಯನ್ನು ನಮೂದಿಸುವ ಶಾಸನವು ಕೋಗಳಿ ಗ್ರಾಮದ ಬಳಿಯ ಮೋರಿಗೇರಿಯ ಉದ್ದಿಬಸವಣ್ಣನ ದೇವಾಯದಲ್ಲಿ ಸಿಕ್ಕಿದೆ. ಇದೇ ದೇವಾಲಯದ ಇದೇ ವರ್ಷದ ಇನ್ನೊಂದು ದತ್ತಿ ಶಾಸನದಲ್ಲಿ ಈ ಬಣದವರು ವಿರೂಪಾಕ್ಷ ದೇವರ (ಶಿವ) ಎದುರಿನಲ್ಲಿ ಇದೇ ಗುರುವಿನ ಪಾದಗಳನ್ನು ತೊಳೆದು ನೊಳಂಬೇಶ್ವರ ದೇವರಿಗೆ ಇನ್ನಷ್ಟು ನೆಲವನ್ನು ದತ್ತಿ ನೀಡಿದರು.[7] ಇವೆರಡೂ ದತ್ತಿಗಳು ಸೋಮೇಶ್ವರನನ್ನು ಜ್ಞಾನೇಶ್ವರಪಂಡಿತನ ಶಿಷ್ಯನೆಂದೂ ಮಲೆಯಾಳಪಂಡಿತದೇವನ ಶಿಷ್ಯನ ಶಿಷ್ಯನೆಂದೂ ಗುರುತಿಸುತ್ತವೆ. ಈ ಯತಿಗಳಿಗೆ ಎಂದಿನ ಯೋಗಸಾಮರ್ಥಗಳ ಪಟ್ಟಿಯನ್ನು ನೀಡಲಾಗಿದ್ದು, ಮೊದಲ ಶಾಸನದಲ್ಲಿ ಮಲೆಯಾಳನು ಶ್ರೀ ಲಕುಲೀಶನ ಮುಖಕಮಲದಿಂದ ಹೊರಬಂದ ಶಾಸ್ತ್ರಗಳೆಲ್ಲವುಗಳ ನಿಜವಾದ ಅರ್ಥವನ್ನು ಬಲ್ಲವನೆಂದು ಹೇಳಲಾಗಿದೆ.[8]

ಈ ಮಲೆಯಾಳನು ಸಿಂಹ ಪರಿಷತ್ತಿನ ತುಂಬ ಮಹತ್ವದ ಹಾಗೂ ಹೆಸರಾದ ಧಾರ್ಮಿಕ ಧುರೀಣನಾಗಿದ್ದನೆಂದು ಕಾಣುತ್ತದೆ, ಏಕೆಂದರೆ ಈ ನಾಡಿನ ಹಲವೆಡೆಗಳಲ್ಲಿ ಕಂಡುಬರುವ ಹಲವಾರು ಶಾಸನಗಳಲ್ಲಿ ಯತಿ ಪರಂಪರೆ ಇವನ ಹೆಸರಿನಿಂದಲೇ ಆರಂಭವಾಗುತ್ತದೆ. ಕ್ರಿ.ಶ.1093ರಲ್ಲಿ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಮಹಾಮಂಡಲೇಶ್ವರನಾದ ಗಂಗರಸನು ಹತ್ತಿರದ ಗ್ರಾಮವಾದ ಹಲಗೊಂದಿಯಲ್ಲಿ ತನ್ನ ತಂದೆ ಕಟ್ಟಿಸಿದ ಬಲೇಶ್ವರ ದೇವಾಲಯಕ್ಕೆ ಒಂದಿಷ್ಟು ನೆಲವನ್ನು ದತ್ತಿ ಕೊಟ್ಟನು.[9] ಗುರು ಕಳೇಶ್ವರನ ಪಾದಗಳನ್ನು ತೊಳೆದು ಈ ದತ್ತಿಯನ್ನು ನೀಡಲಾಯಿತು. ಕಳೇಶ್ವರನ ಗುರು

6. ಸಂ. ಶಾಸ್ತ್ರಿ ಮತ್ತು ರಾವ, SII, IX, Part I, no. 101.

7. ಅದೇ. ನಂ. 104.

8. ಇದೇ ದೇವಾಲಯದ ಇನ್ನೊಂದು ಶಾಸನ, ಕ್ರಿ. ಶ. 1064 (ಅದೇ. no. 127) ' ಮೋರಿಂಗೆರೆಯ ------ಶ್ವರ ಪಂಡಿತ ದೇವನ' ಪಾದಗಳನ್ನು ತೊಳೆದು ಶಿವ ದೇವಾಲಯಕ್ಕೆ ಅರ್ಪಿಸಲಾದ ಕಾಣಿಕೆಯನ್ನು ನೋಂದಾಯಿಸುತ್ತದೆ.

9. ಅದೇ. no. 163.

ಶಾಂತರಾಶಿಪಂಡಿತ. ಅವನ ಗುರು ಸೋಮೇಶ್ವರ ಪಂಡಿತ. ಅವನ ಗುರು ಜ್ಞಾನೇಶ್ವರ ಪಂಡಿತ. ಅವನ ಗುರು ಮಲೆಯಾಳ ಪಂಡಿತ. ಮಲೆಯಾಳ, ಜ್ಞಾನೇಶ್ವರ ಮತ್ತು ಸೋಮೇಶ್ವರರು ಮೋರಿಗೇರಿಯ ಎರಡು ಶಾಸನಗಳಲ್ಲಿರುವ ಅದೇ ಗುರುಗಳೆಂದು ಕಾಣುತ್ತದೆ.ಮಲೆಯಾಳನ ಬಣ್ಣನೆಯಂತೂ ಮೋರಿಗೇರಿಯ ಶಾಸನದಿಂದ ಶಬ್ದಶಃ ನಕಲು ಮಾಡಿದ ಹಾಗಿದೆ. ಹಲಗೊಂದಿಯ ಶಾಸನವು ಈ ಮಾಹಿತಿಗೆ ಇನ್ನಷ್ಟನ್ನು ಸೇರ್ಪಡಿಸುತ್ತ ಮಲೆಯಾಳನು ಕೋಗಳಿಯ ರಾಮೇಶ್ವರ ದೇವಾಲಯಕ್ಕೆ ಸಂಬಂಧಿಸಿದವನೆಂದು ಹೇಳುತ್ತದೆ. ಕಳೇಶ್ವರ ಪಂಡಿತನಿಗೆ ಎಂದಿನ ಯೋಗ ಸಾಮರ್ಥ್ಯಗಳನ್ನು ಆರೋಪಿಸಲಾಗಿದೆ.

ಇಪ್ಪತ್ತೆರಡು ವರ್ಷಗಳ ಕೆಳಗೆ, ಕ್ರಿ.ಶ.1071ರಲ್ಲಿ ಆರನೆಯ ವಿಕ್ರಮಾದಿತ್ಯನು ಮಹಾಜನರ ಕೋರಿಕೆಯಮೇರೆಗೆ ಬಳ್ಳಾರಿ ಜಿಲ್ಲೆಯ ಇನ್ನೊಂದು ಗ್ರಾಮವಾದ ಹೂವಿನ ಹಡಗಲಿಯ ಕಲಿದೇವರಿಗೆ ಒಂದು ಗ್ರಾಮವನ್ನು ದತ್ತಿ ನೀಡಿದ್ದನು.[10] ಈ ದತ್ತಿಯನ್ನು ದೇವರ ಸೇವೆ, ವಿದ್ಯಾರ್ಥಿಗಳ, ಸೇವಕರ, ಗಾಯಕರ ಹಾಗೂ ರಾಮೇಶ್ವರದ ಮಲೆಯಾಳ ಪಂಡಿತದೇವನ ಪರಂಪರೆಗೆ (ಸಂತತಿ) ಸೇರಿದ ಲಕುಲೇಶ್ವರ ಪಂಡಿತನು ಮಠಾಧಿಪನಾಗಿದ್ದ ಮಠದ ಯತಿಗಳ ಪೋಷಣೆಗೆಂದು ನೀಡಲಾಯಿತು.

ಇದೇ ಮಲೆಯಾಳ ಪಂಡಿತನು ಗುಲ್ಬರ್ಗಾ ಜಿಲ್ಲೆಯ ಏವೂರ ಗ್ರಾಮದಲ್ಲಿ ದೊರೆತ ಎರಡು ದತ್ತಿ ಶಾಸನಗಳಲ್ಲಿ ದಾನವನ್ನು ಪಡೆದ ಯತಿಪರಂಪರೆಯ ಮೂಲಪುರಷನಾಗಿ ಕಾಣುತ್ತಾನೆ. ಕ್ರಿ.ಶ.1077ರಲ್ಲಿ ಜರುಗಿದ ಚಂದ್ರಗ್ರಹಣದಂದು ಆರನೆಯ ವಿಕ್ರಮಾದಿತ್ಯನ ರವಿದೇವನೆಂಬ ಬ್ರಾಹ್ಮಣಮಂತ್ರಿಯು ತಾನು ಏವೂರಿನಲ್ಲಿ ಕಟ್ಟಿಸಿದ ಸ್ವಯಂಭೂದೇವಾಲಯಕ್ಕೆ ಒಂದಿಷ್ಟು ಭೂಮಿಯನ್ನು ದತ್ತಿ ನೀಡುವಂತೆ ಅರಸನಿಗೆ ಮನವಿ ಸಲ್ಲಿಸಿದನು.[11] ಕೆಲವು ಹೊಲಗಳನ್ನು ನ್ಯಾಸದಿಂದ ಎಳಮೇಲ ಸಿಂಹಪರ್ಷೆ ಶಾಖೆಯ ಮಲೆಯಾಳಪಂಡಿತದೇವನ ಶಿಷ್ಯನಾದ ಮಿರಿಂಜೆಯ ಚಿಕ್ಕದೇವನ ಶಿಷ್ಯನ ಶಿಷ್ಯನಾದ ಸ್ಥಳೀಯ ಆಚಾರ್ಯರ ಈಶಾನರಾಸಿಪಂಡಿತನಿಗೆ' ನೀಡಲಾಯಿತು.[12] ಈ ಭೂಮಿಯಿಂದ ಬರುವ ಆದಾಯವನ್ನು ಹೇಗೆ ಬಳಸಿಕೊಳ್ಳಬೇಕೆಂಬ ಸಂಗತಿಗಳ ಪಟ್ಟಿಯು ದೇವಾಲಯದ ದೈನಂದಿನ ಚಟುವಟಿಕೆಗಳ ಒಂದು ಸೊಗಸಾದ ಚಿತ್ರವನ್ನು ಮುಂದಿಡುತ್ತದೆ :

> " ಏಹೂರ ಶ್ರಿ ಸ್ವಯಂಭೂದೇವರ್ಗ್ಗೆ ಗನ್ಧಧೂಪದೀಪ ನೈವೇದ್ಯಾದ್ಯರ್ಚನಕ್ಕಂ
> ಖಣ್ಡಸ್ಫುಟಿತ ಜೀರ್ಣ್ನೋದ್ಧಾರ ನಮಸಧಾಕಮ್ಮ್ರಕ್ಕಂ ಪಾವುಳವರ್ಗ್ಗಕ್ಕಂ

10. ಅದೇ. no. 135.
11. ಸಂ. ಮತ್ತು ಅನು. ಎಲ್. ಡಿ. ಬಾರ್ನೆಟ್ಟ್, 'Inscriptions at Yewur', EI, XII, 268-98 ಮತ್ತು 329-40 (no. B).
12. ಅನು. ಅದೇ. ಪು. 290 'ಈಶಾನರಾಶಿ ಗುರು'ವಿನ ಹೆಸರನ್ನು ನೀಡಲಾಗಿಲ್ಲ.

ಓದುವ ಕೇಶ್ವ ವಿದ್ಯಾರ್ತ್ಥಿ ತಪೋಧನರ ಛಾತ್ರದಶನಾಚ್ಛಾದನಕ್ಕಂ ಅವರ್ಗ್ಗೆ ವಕ್ಖಾಣಿಸುವ ಭಟ್ಟರ್ಗ್ಗಂ ಚೈತ್ರ ಪವಿತ್ರಾಭ್ಯಾಗತಾದಿ ಪೂಜೆಗಳ್ಗಂ ಸಂಕ್ರಾಸ್ತಿ ಗ್ರಹಣಾದಿ ಪರ್ವ್ವ ಹೋಮ ಬಲಿಕ್ರಿಯಾದಿಗಳ್ಗಂ ಬ್ರಾಹ್ಮಣಾದಿ ದೀನಾನಾಥ ಸಂತರ್ಪ್ಪಣಕ್ಕಂ" [13] ದಾನ ನೀಡಿದ ವಿಷಯವಿಲ್ಲಿದೆ.

ಈ ಶಾಸನವು ಮಠದಲ್ಲಿ ವಾಸಿಸುವವರಿಗಾಗಿ ಬ್ರಹ್ಮಚರ್ಯೆಯ ಕೆಲವು ನಿಯಮಗಳನ್ನು ಹೇಳುತ್ತ ಹೀಗೆ ಮುಕ್ತಾಯಗೊಳ್ಳುತ್ತದೆ : ' ಈ ಮಠದ ಆಚಾರ್ಯರು ಇಲ್ಲವೆ ಯತಿಗಳು ಈ ಮಠದ ಕಟ್ಟುನಿಟ್ಟಾದ ಬ್ರಹ್ಮಚರ್ಯೆಯನ್ನು ಪಾಲಿಸಬೇಕು. ಪಾಲಿಸದಿದ್ದರೆ ಅಂಥವರನ್ನು ಹಳ್ಳಿಗರು, ಪಟ್ಟಣಿಗರು ಹಾಗೂ ಅರಸನು ಹೊರಕ್ಕೆ ಅಟ್ಟತಕ್ಕದ್ದು.'[14]

ಏವೂರಿನ ಎರಡನೆಯ ಶಾಸನವನ್ನು ಕ್ರಿ.ಶ.1179ರಲ್ಲಿ ಕಳಚೂರಿ ಅರಸನಾದ ಇಮ್ಮಡಿ ಸಂಕಮದೇವನ ಆಳ್ವಿಕೆಯ ಕಾಲಕ್ಕೆ ಪ್ರಚುರಪಡಿಸಲಾಗಿದ್ದು, ಅದು ಆ ಪಟ್ಟಣದ ಸ್ವಯಂಭೂ ಸೋಮನಾಥ ದೇವರ ಮಠದ ಆಚಾರ್ಯನಾದ ಜ್ಞಾನರಾಸಿಗೆ ತನ್ನ ಸಂಸ್ಥೆಯ ಚಟುವಟಿಕೆಗಳನ್ನು ಸಾಗಿಸಿಕೊಡು ಹೋಗಲೆಂದು ಒಂದಿಷ್ಟು ನೆಲವನ್ನು ಕಾಣಿಕೆಯಾಗಿ ಇತ್ತುದನ್ನು ನಮೂದಿಸುತ್ತದೆ. ಜ್ಞಾನರಾಸಿಯು 'ಶ್ರೀಮದ್ ಎಳೆಮೆಲ ಶ್ರೀ ಸಿಂಹಪರ್ಷ ಮಂಡಲ'ದವನಾದ ಮಲೆಯಾಳದೇವನ ಶಿಷ್ಯನಾದ ಮಿರಿಂಜೆಯ ಚಿಕ್ಕದೇವನ ಆಧ್ಯಾತ್ಮಿಕ ಪರಂಪರೆಗೆ (ಸಂತತಿ) ಸೇರಿದವನಾಗಿದ್ದನೆಂದು ಹೇಳಲಾಗಿದೆ. ಇವರಿಬ್ಬರು ಕ್ರಿ.ಶ.1077ರ ದತ್ತಿ ಶಾಸನದಲ್ಲಿ ನಮೂದಿಸಲಾದ ಗುರುಗಳೇ ಆಗಿರಲು ಸಾಕು.

ಈ ಜ್ಞಾನರಾಶಿಯು ವಿಜಾಪೂರ ಜಿಲ್ಲೆಯ ಮನಗೋಳಿಯಲ್ಲಿ ದೊರೆತ ಒಂದು ಶಾಸನದಲ್ಲಿ ಇನ್ನೊಮ್ಮೆ ನಮೂದಿತನಾಗಿರುವಂತಿದೆ.[16] ವಿವರಗಳು ನಾಶವಾಗಿರುವ ಈ ದತ್ತಿ ದೇವಗಿರಿ ಯಾದವರ ಅರಸನಾದ ೧ನೆಯ ಜೈತುಗಿಯ (ಇಸವಿ, ಕ್ರಿ.ಶ.1191-1200) ಆಳ್ವಿಕೆಯಲ್ಲಿ ನೀಡಲಾದುದು. ಆಚಾರ್ಯ ಪರಂಪರೆಯ ಗೌಳದೇವನೆಂಬ ಒಬ್ಬ ಮುನಿಪನ ಉಲ್ಲೇಖ ಅಲ್ಲಿದೆ. ಅವನ ಉತ್ತಮ ಶಿಷ್ಯನೆಂದರೆ ವ್ರತೀಶ್ವರನೆನಿಸಿದ ಮಲೆಯಾಳ ಜ್ಞಾನರಾಸಿ. ಇವನು ಧರ್ಮರಾಸಿ ಮುನಿಪನ ಮಗನು. ಮಲೆಯಾಳ ಜ್ಞಾನರಾಸಿ ಪದವನ್ನು ಮಲೆಯಾಳ ಪರಂಪರೆಯ ಜ್ಞಾನರಾಸಿ ಎಂದು ಅರ್ಥೈಸಬೇಕೆಂದು ಕಾಣುತ್ತದೆ.

13. ಅನು. ಅದೇ. pp. 289-90.


14. ಅನು. ಅದೇ. ಪು. 290. ಮೇಲೆ ಉದ್ಧರಿಸಲಾದ, ಸೂಡಿಯ ಕ್ರಿ.ಶ.1060ರ ಶಾಸನದಲ್ಲಿ 'ಕಾಳಾಮುಖರಾದ ಗೊರವ'ರಿಗೆ ವಿಧಿಸಲಾದ ನಿಯಮಗಳೊಡನೆ ಇದನ್ನು ಹೋಲಿಸಬಹುದಾಗಿದೆ.

15. ಸಂ. ಮತ್ತು ಅನು. ಅದೇ. no. G.

16. ಸಂ. ಜೆ. ಎಫ್. ಫ್ಲೀಟ್. 'Inscriptions at Managoli', V. 9-31 (no. D).

ಇದೇ ಜಿಲ್ಲೆಯ ಇಂಗಳೇಶ್ವರ ಊರಿನ ಸೋಮನಾಥ ದೇವಾಲಯದ ಕ್ರಿ.ಶ. 1176ರ ದತ್ತಿ ಶಾಸನದಲ್ಲಿ ಹೆಸರಿಸಲಾದ ಯತಿಯು ಇದೇ ಜ್ಞಾನರಾಶಿ ಎನ್ನಿಸುತ್ತದೆ.[17] ಶಾಸನದಲ್ಲಿ ಹೇಳಿದಂತೆ ಕಳಚೂರಿ ಅರಸನಾದ ಸೋಮೇಶ್ವರನು ಈ ದೇವಾಲಯಕ್ಕೆ ಒಂದು ಗ್ರಾಮವನ್ನು ದತ್ತಿಕೊಟ್ಟು, ಅದನ್ನು ವಿಜಯಪುರದ (ವಿಜಾಪೂರ) ಸ್ವಯಂಭೂ ಕೇದಾರೇಶ್ವರದೇವಾಲಯದ ಆಚಾರ್ಯ, ಹಾಗೂ ಸಿಂಹ ಪರಿಷತ್ತಿನ ಸದಸ್ಯನಾದ ಜ್ಞಾನರಾಶಿ ಪಂಡಿತದೇವನಿಗೆ ಒಪ್ಪಿಸಿದನು. ಇಲ್ಲಿ, ಮತ್ತೆ ಈ ಜ್ಞಾನರಾಶಿಯು ಎಳೆಮೇಲದ ಮಲೆಯಾಳನ ಪರಂಪರೆ ಹಾಗೂ ಸಿಂಹಪರಿಷತ್ತಿನ ಮಂಡಲಕ್ಕೆ ಸೇರಿದವನಾಗಿರುವನು. ಹೀಗಾಗಿ ಜ್ಞಾನರಾಶಿಯು ಏವೂರು ಮತ್ತು ವಿಜಾಪುರಗಳ ಸ್ವಯಂಭೂ ದೇವಾಲಯಗಳ ಮೇಲೆ ನಿಯಂತ್ರಣವನ್ನು ಹೊಂದಿದ್ದನೆಂಬುದು ಸ್ಪಷ್ಟ.

ಸಿಂಹಪರಿಷತ್ತಿನ ಕರ್ನಾಟಕ ಶಾಖೆಯ ಶಾಸನಗಳು ತಮ್ಮ ಯತಿ ಪರಂಪರೆಯನ್ನು ಹೀಗೆ ಒದಗಿಸುತ್ತವೆ.




17. ಸಂ. ದೇಸಾಯಿ, SII, XV, No. 129.

## ಇತರ ಕಾಳಾಮುಖ ಶಾಸನಗಳು

ಶಕ್ತಿ ಹಾಗೂ ಸಿಂಹಪರಿಷತ್ತುಗಳ ಈ ಶಾಸನಗಳ ಹೊರತಾಗಿ ಇದಕ್ಕೂ ದೊಡ್ಡ ಸಂಖ್ಯೆಯಲ್ಲಿ ಕಾಳಾಮುಖರ ಶಾಸನಗಳಿದ್ದು ಅವು ಇವೆರಡರಲ್ಲಿ ಯಾವ ಪರಿಷತ್ತಿಗೆ ಸೇರಿದವು, ಎಂಬುದನ್ನು ಖಚಿತವಾಗಿ ಹೇಳಲಾಗದು. ಇವೆಲ್ಲ ಶಾಸನಗಳು ಸುಮಾರು ಒಂದೇ ಕಾಲದವಾಗಿದ್ದು, ಇವು ಗೊತ್ತಿರುವ ಇವೆರಡು ಪರಿಷತ್ತುಗಳಿರುವ ಒಂದೇ ಪ್ರದೇಶದಲ್ಲಿ ಹರಡಿಕೊಂಡವುಗಳು. ಈ ಶಾಸನಗಳು ನಮೂದಿಸುವ ದೇವಾಲಯ ಇಲ್ಲವೆ ಮಠದ ಯತಿಗಳ ಹೆಸರುಗಳು ಇಲ್ಲವೆ ಅವರು ಬೋಧಿಸುವ ಸಿದ್ಧಾಂತಗಳಿಂದಾಗಿ ಅವರು ಕಾಳಾಮುಖರಾಗಲಿ, ಕನಿಷ್ಠ ಪಕ್ಷಕ್ಕೆ ಲಕುಲೀಶ-ಪಾಶುಪತರಾಗಲಿ ಆಗಿರುವ ಸಾಧ್ಯತೆ ಕಂಡುಬರುತ್ತದೆ. ಇವೆಲ್ಲ ಶಾಸನಗಳನ್ನು ಇಷ್ಟೊಂದು ಕೂಲಂಕಷವಾಗಿ ಪರಿಶೀಲಿಸುವುದು ವ್ಯವಹಾರ್ಯ ಎನ್ನಿಸದೆ ಹೋದರೂ ದಾನಗಳನ್ನು ಪಡೆದ ಕಾಳಾಮುಖರ ಶಾಸನಗಳನ್ನು ಜಿಲ್ಲಾವಾರು ಪರಿಶೀಲಿಸಬಹುದು.

## ಶಿವಮೊಗ್ಗ ಜಿಲ್ಲೆ

ಶಕ್ತಿಪರಿಷತ್ತಿನ ಪ್ರಮುಖ ಕೇಂದ್ರಸ್ಥಾನವೆನ್ನಿಸಿದ, ಬಳ್ಳಿಗಾವೆಯ ತ್ರಿಪುರಾಂತಕ ಹಾಗೂ ದಕ್ಷಿಣ ಕೇದಾರೇಶ್ವರ ದೇವಾಲಯಗಲ್ಲದೆ ಇನ್ನೆರಡು ದೇವಾಲಯಗಳು ಅಲ್ಲಿದ್ದವು. ಅವುಗಳಲ್ಲಿ ಒಂದಾದ ಕಲ್ಲೇಶ್ವರ ದೇವಾಲಯದಲ್ಲಿ ದೊರೆತ ಒಂದು ಶಾಸನವು ಕಲ್ಯಾಣ ಚಾಲುಕ್ಯ ಅರಸರಾದ, ಅನುಕ್ರಮವಾಗಿ, ಇಮ್ಮಡಿ ಜಯಸಿಂಹ ಹಾಗೂ ಆರನೆಯ ವಿಕ್ರಮಾದಿತ್ಯರ ಆಳ್ವಿಕೆಯ ಕಾಲಗಳಲ್ಲಿ ಕಲಿದೇಶ್ವರ ಸ್ವಯಂಭೂದೇವಾಲಯಕ್ಕೆ ನೀಡಲಾದ ಎರಡು ದತ್ತಿಗಳನ್ನು ನಮೂದಿಸುತ್ತದೆ.[18] ಮೊದಲ ಅರಸನು ಕ್ರಿ.ಶ.1024ರಲ್ಲಿ ವ (ಬ) ನವಾಸದ ದೇಶಾಧಿಪನಾದ ಕುಂದರಾಜನ ಕೋರಿಕೆಯ ಮೇರೆಗೆ ಒಂದಿಷ್ಟು ಭೂಮಿ, ಎರಡು ಅಂಗಡಿ ಹಾಗೂ ಒಂದು ಹೂದೋಟವನ್ನು ಈ ದೇವರ ಸ್ಥಾನಾಚಾರ್ಯನಾದ ಶಿವಶಕ್ತಿ ಪಂಡಿತನಿಗೆ ನೀಡಿದನು. ಶಿವಶಕ್ತಿಯು ಕಾಳಾಮುಖರಲ್ಲೆಲ್ಲ ಅಗ್ರಮಾನ್ಯನೆಂದು ಕರೆಲಯ್ಪಡುತ್ತಾನಲ್ಲದೆ ಎಂದಿನ ಯೋಗಸಾಮರ್ಥ್ಯಗಳನ್ನು ಅವನಿಗೆ ನೀಡಲಾಗಿದೆ. ಎರಡನೆಯ ದತ್ತಿಯು ಆರನೆಯ ವಿಕ್ರಮಾದಿತ್ಯನ ಪ್ರಾಂತಾಧಿಪತಿಯಾದ ತಂಬರಸನಿಂದ ನೀಡಲಾದುದು. ತಂಬರಸನು ಕ್ರಿ.ಶ.1081ರಲ್ಲಿ ಶಿವಶಕ್ತಿ ಪಂಡಿತನ ಶಿಷ್ಯ ರುದ್ರಶಕ್ತಿ ಪಂಡಿತನ ವಶಕ್ಕೆ ಒಂದಿಷ್ಟು ನೆಲವನ್ನು ದೇವಾಲಯಕ್ಕಾಗಿ ನೀಡಿದನು. ಈ ಪಟ್ಟಣದಲ್ಲಿ ದೊರೆತ ಕ್ರಿ.ಶ.1019ರ ದತ್ತಿಯಲ್ಲಿ ಮೂಲಸ್ಥಾನ ನಂದಿಕೇಶ್ವರದೇವಾಲಯದ ಮೂಲಿಗ ಶಿವಶಕ್ತಿಪಂಡಿತನು ದಾನವನ್ನು ಪಡೆದವನಾಗಿದ್ದು ಈ ಯತಿ ಪರಂಪರೆಗೆ ಸಂಬಂಧಿಸಿದುದು

---

18. ಸಂ. ಮತ್ತು ಅನು. ARMAD 1929. pp. 131-140 (no. 65).

ಇವಿಷ್ಟೇ ಶಾಸನಗಳೆಂದು ತೋರುತ್ತದೆ.[19] ಎಂದಿನ ಯೋಗಸಾಮರ್ಥ್ಯದ ಬಿರುದಗಳನ್ನು ಆರೋಪಿಸಲಾದ ಈ ಯತಿಯೆಂದರೆ ಕಲ್ಲೇಶ್ವರ ದತ್ತಿಯಲ್ಲಿ ನಮೂದಿತನೇ ಆಗಿರಲು ಸಾಧ್ಯ.

ಬಳ್ಳಿಗಾವೆಯ ಪಂಚಲಿಂಗ ದೇವಾಲಯವೂ ಕಾಳಾಮುಖರ ನಿಯಂತ್ರಣಕ್ಕೆ ಕ್ರಿ.ಶ. 1036ರಲ್ಲಿ ಕಲ್ಯಾಣ ಚಾಲುಕ್ಯರ ಅರಸನಾದ ಇಮ್ಮಡಿ ಜಯಸಿಂಹನು ವಾದಿರುದ್ರಗಣ ಎಂದು ಕೂಡ ಕರೆಯಲಾಗುತ್ತಿದ್ದ ಲಕುಲೀಶ್ವರ ಪಂಡಿತನಿಗೆ ಒಂದಿಷ್ಟು ನೆಲವನ್ನು 'ಬಳ್ಳಿಗಾವೆಯ ಕಾಳಾಮುಖ (ಮೂಲದಲ್ಲಿದ್ದಂತೆ) ಬ್ರಹ್ಮಚಾರಿ ಸ್ಥಾನದಲ್ಲಿ ಪಾಂಡವರಿಂದ ಸ್ಥಾಪಿಸಲಾದ ಪಂಚಲಿಂಗ ದೇವಾಲಯದ ದುರಸ್ತಿಗಳಿಗಾಗಿ.... ದೇವರಿಗೆ ಚಂದನ, ಊದುಬತ್ತಿ ಹಾಗೂ ನೈವೇದ್ಯಗಳಿಗಾಗಿ, ವಿದ್ಯಾರ್ಥಿಗಳು ಹಾಗೂ ಯತಿಗಳ ಊಟುಡುಗೆಗಳಿಗಾಗಿ' ಯೆಂದು ನೀಡಿದ್ದನು.[20] ಈ ಯತಿಯು ತರ್ಕ ಹಾಗೂ ಇತರ ಶಾಸ್ತ್ರಗಳಲ್ಲಿ ಪಾರಂಗತನು, ನೈಯಾಯಿಕರ ಸಮರ್ಥ ಬೆಂಗಲಿಗನು, ಹಾಗೂ ' ಭೌದ್ಧರೆಂಬ ಸಾಗರದಡಿಯ ಬಡಬಾಗ್ನಿ, ಮೀಮಾಂಸಕರೆಂಬ ಪರ್ವತಕ್ಕೆ ಬರಸಿಡಿಲು, ಲೋಕಾಯತ ಮಹಾವೃಕ್ಷವನ್ನು ಕತ್ತರಿಸಿ ಉರುಳಿಸುವ ಗರಗಸ, ಸಾಂಖ್ಯರೆಂಬ ಹಾವಿಗೆ ಗರುಡ, ಅದ್ವೈತ ಉಪನ್ಯಾಸಕರ ಮರಕ್ಕೆ ಕೊಡಲಿ .... ಜಂಬದ ಪಂಡಿತರಿಗೆ ಯಮಪಾಶ, ದಿಗಂಬರ ವಾದಿಗಳಿಗೆ ಧೂಮಕೇತು", ಎಂದು ಅವನನ್ನು ಬಣ್ಣಿಸಲಾಗಿದೆ. ಅವನು ಸೋಲಿಸಿದ ಕೆಲವು ಎದುರಾಳಿಗಳೆಂದರೆ ತ್ರಿಪುರ ಅಕಳಂಕ, ವಾದಿಘರಟ್ಟ, ಮಾಧವಭಟ್ಟ, ಜ್ಞಾನಾನಂದ, ವಿಶ್ವಾನಲ, ಅಭಯಚಂದ್ರ ವಾದೀಭಸಿಂಹ, ವಾದಿರಾಜ, ಹಾಗೂ ಅಯವಾದಿ. ಇವರಲ್ಲಿ ಹಲವರನ್ನು ಗುರುತಿಸಬಹುದು. ವಾದೀಭಸಿಂಹನೆಂದರೆ ಜೈನನಾದ ಒಡೆಯದೇವ ವಾದೀಭಸಿಂಹನಾಗಿದ್ದು ಅವನು ಪುಷ್ಪಸೇನನ ಶಿಷ್ಯನೂ, 'ಕ್ಷತ್ರಚೂಡಾಮಣಿ' ಹಾಗೂ 'ಗದ್ಯ ಚಿಂತಾಮಣಿ'ಗಳ ಲೇಖಕನೂ ಅಹುದು.[21] ವಾದಿರಾಜನೆಂದರೆ ಇಮ್ಮಡಿ ಜಯಸಿಂಹನ ಆಳ್ವಿಕೆಯಲ್ಲಿ ಕ್ರಿ.ಶ. 1025ರಲ್ಲಿ 'ಪಾರ್ಶ್ವನಾಥ ಚರಿತ'ವನ್ನು ಬರೆದ ದಿಗಂಬರ ಜೈನನಾಗಿದ್ದನು.[22] ಅಭಯಚಂದ್ರನು 'ಪದ್ಮನಂದ ಮಹಾಕಾವ್ಯ'ದ ಜೈನ ಲೇಖಕನಾಗಿರುವ ಸಾಧ್ಯತೆಯಿದೆ.[23] ಮಾಧವಭಟ್ಟನೆಂದರೆ ಕಾಮದೇವನ ಆಶ್ರಯದಲ್ಲಿ 'ರಾಘವ ಪಾಂಡವೀಯ' ಎಂಬ ಶ್ಲೇಷ ಕಾವ್ಯವನ್ನು ರಚಿಸಿದ ಕವಿರಾಜನೆಂದು

19. ಸಂ. ಮತ್ತು ಅನು. ರೈಸ್. EC,VII, Sk. 125.

20. ಅದೇ. Sk. 126.

21. ನೋಡಿ ಹಂಡಿಕಿ, ಪು. 9. ಮತ್ತು B. A. Saletore, 'Mediaeval jainism' pp. 49-54. ಈ ಗುರುವು 'ವಾದಿಘರಟ್ಟ' ಮತ್ತು 'ಅಜಿತಸೇನ'ನೆಂಬ ಹೆಸರುಗಳನ್ನು ಹೊಂದಿದ್ದನೆಂದು ಸಾಲೆತೊರೆ ಅವರು ಸ್ಥಾಪಿಸಲು ಯತ್ನಿಸುತ್ತಾರೆ.

22. ನೋಡಿ ಹಂಡಿಕಿ, ಪು. 9 ಮತ್ತು ಸಾಲೆತೊರೆ . pp. 43-50.

23. ನೋಡಿ ಆರ್. ಸಿ. ಮಜುಮದಾರ (ಸಂ.) 'The Struggle for Empire,' pp. 301-302.

ಕಾಣುತ್ತದೆ. ಎ. ಬಿ. ಕೈಥ್‌ರು ಈ ಕಾಮದೇವನನ್ನು ಇಸವಿ ಕ್ರಿ.ಶ.1182-97ರ ನಡುವೆ ಆಳಿದ ಕದಂಬ ರಾಜನ ಜೊತೆಗೆ ಜೋಡಿಸುವಾಗಲೇ ಆರ್. ಜಿ. ಭಾಂಡಾರಕರರು ಈತನನ್ನು ಹನ್ನೊಂದನೆಯ ಶತಮಾನದ ಆರಂಭದಲ್ಲಿ ಇರಿಸುತ್ತಾರೆಂದೂ ಟಿಪ್ಪಣಿ ಮಾಡುತ್ತಾರೆ.[24] ವಾದೀಭಸಿಂಹ, ವಾದಿರಾಜ, ಅಭಯಚಂದ್ರ ಹಾಗೂ ಮಾಧವಭಟ್ಟರು ಬಹುಮಟ್ಟಿಗೆ ಲಕುಲೀಶ್ವರ ಪಂಡಿತನ ಸಮಕಾಲೀನರಾಗಿರುವ ಸಾಧ್ಯತೆಯಿದೆ. ತ್ರಿಪುರ ಅಕಳಂಕನು ಎಂಟನೆಯ ಶತಮಾನದ ಹೆಸರಾದ ಜೈನ ತಾರ್ಕಿಕ ಇಲ್ಲವೆ ಮುಂದಿನ ಕಾಲದ ಇನ್ನಾರಾದರೂ ಇದೇ ಹೆಸರಿನ ವ್ಯಕ್ತಿಯಾಗಿರಬಹುದು. ಹಂಡಿಕಿ ಅವರು ನಿರ್ದೇಶಿಸುವಂತೆ (pp. 10-11) ಈ ಹಲವು ಜನ ದೇವತಾಶಾಸ್ತ್ರಿಗಳ (ಥಿಯೋಲಾಜಿಸ್ಟ್) ಹೆಸರುಗಳು ಆ ಕಾಲಕ್ಕೆ ತತ್ವಶಾಸ್ತ್ರಕ್ಕೆ ಒದಗಿಸಿದ ವಿಶಿಷ್ಟ ರೂಪವನ್ನು ಹಾಗೂ ವಾದವಿವಾದಗಳ ಬಗೆಗಿನ ಮಮತೆಯನ್ನು ಪ್ರತಿಬಿಂಬಿಸುತ್ತವೆ.

ಲಕುಲೀಶ್ವರನ ಪಂಚಲಿಂಗೇಶ್ವರದ ಮುಂದಿನ ಕೆಲವು ತಲೆಮಾರಿನವರ ಹೆಸರುಗಳನ್ನು ಬಳ್ಳಿಗಾವೆಯ ಇತರ ದೇವಾಲಯಗಳಿಗೆ ನೀಡಲಾದ ದತ್ತಿ ಶಾಸನಗಳಲ್ಲಿ ನಮೂದಿಸಲಾಗಿದೆ. ಶ್ರೀಕಂಠ ಪಂಡಿತದೇವನು[25] ಕ್ರಿ.ಶ.1098ರಲ್ಲಿ ಕ್ರಿಯಾಶಕ್ತಿ ಪಂಡಿತನು 1113ರಲ್ಲಿ,[26] ಸರ್ವೇಶ್ವರ ಪಂಡಿತದೇವನು ಸುಮಾರು 1150ರಿಂದ1159ರ ನಡುವಿನ ಕಾಲದಲ್ಲಿ [27] ಹಾಗೂ ರುದ್ರಶಕ್ತಿದೇವನು 1181ರಲ್ಲಿ[28] ಪಂಚಲಿಂಗದೇವಾಲಯದ ಪ್ರಮುಖರೆನ್ನಿಸಿದ್ದರು.

ಲಕುಲೀಶ್ವರ ಶಾಸನದ ತುಂಬ ಗಮನಾರ್ಹ ವೈಶಿಷ್ಟ್ಯವೆಂದರೆ ಮಹಾದೇವ (ಶಿವ) ಹಾಗೂ ವರ್ಣಾಶ್ರಮಧರ್ಮವನ್ನು ಸಮರ್ಥಿಸುವ ಅದರ ಉಪಸಂಹಾರದ ಪದ್ಯ. ರೈಸ್ ಅದನ್ನು ಹೀಗೆ ಅನುವಾದಿಸುತ್ತಾರೆ.:

> ಮಹಾದೇವನು ದೇವರಾಗಿದ್ದು ಅವನ ಪಾದಗಳು ಇಡಿಯ ವಿಶ್ವದಿಂದಲೇ ಪೂಜಿಸಲ್ಪಡುವ ಯೋಗ್ಯತೆಯವು. ಜಾತಿ ಹಾಗೂ ಆಶ್ರಮಗಳ ಕ್ರಮಗಳನ್ನು ಕುರಿತು ಮೂರು ವೇದಗಳಲ್ಲಿ ವಿಧಿಸಲಾದ ನಿಯಮಗಳೆಂದರೇನೇ ಧರ್ಮ.

---

24. 'A History of Sanskrit Literature', ಪು. 137.
25. ಸಂ. ಮತ್ತು ಅನು. ರೈಸ್, EC. VII, Sk. 106.
26. ಅದೇ. Sk, 99. ಇವನು ತ್ರಿಪುರಾಂತಕ ಎಂಬ ಇದೇ ಹೆಸರಿನ ಯತಿಗಿಂತ ಬೇರೆಯವನಾಗಿ ಕಾಣುತ್ತಾನೆ.
27. ಅದೇ. Sk, 118 ಮತ್ತು123.
28. ಅದೇ. Sk, 119.

ಇವೆರಡರ (ಹೇಳಿಕೆಗಳ) ಮೇಲೆ ಕಲಂಕವನ್ನು ಹೊರಿಸುವವನ ತಲೆಯ ಮೇಲೆ ರಾಜನ ಆಸ್ಥಾನದಲ್ಲಿ ನನ್ನ ಕಾಲನ್ನಿರಿಸುವೆ.[29]

ಈ ಸಾಮಾಜಿಕ ಸಾಂಪ್ರದಾಯಿಕತೆಯ ರಕ್ಷಣೆಗೆ ಅದೆಷ್ಟು ತೂಕವನ್ನು ನೀಡಬಹುದೆಂಬ ಅಂದಾಜನ್ನು ಕಟ್ಟುವುದು ಕಷ್ಟದ ಕೆಲಸ. ಸುಮಾರಾಗಿ ಖಚಿತ ಎನ್ನಿಸುವ ಒಂದು ಸಂಗತಿ ಎಂದರೆ ಎಲ್ಲರಲ್ಲದಿದ್ದರೂ ಕೆಲವರಾದರೂ ಕಾಳಾಮುಖ ಯತಿಗಳು ಬ್ರಾಹ್ಮಣರ ಸ್ಥಾನದ ಮೇಲೆ ತಮ್ಮ ಹಕ್ಕು ಹೇಳುತ್ತಿದ್ದುದು. ಬಳ್ಳಿಗಾವೆಯ ಸೋಮೇಶ್ವರನನ್ನು ಒಬ್ಬ ಸಾರಸ್ವತನೆಂದುಕರೆಯುವ 1113ರ ಶಾಸನ,[30] ಕಾಳಾಮುಖ ಯತಿಗಳ ಗೋತ್ರಗಳನ್ನು ಕುರಿತು ಅಲ್ಲಲ್ಲಿ ಹರಡಿದ ಸಂದರ್ಭಗಳು, ಹಾಗೂ ಅವರ ಹೆಸರುಗಳ ಕೊನೆಯಲ್ಲಿ ಸಮಾನವಾಗಿ ಬರುವ 'ಪಂಡಿತದೇವ', ಎನ್ನುವ ಸಂಗತಿಗಳಿಂದ ನಾವು ಇದನ್ನು ಕಲೆಹಾಕಿದ್ದೇವೆ. ಒಟ್ಟಿನಲ್ಲಿ, ಕಾಳಾಮುಖ ಶಾಸನಗಳು ಜಾತಿ ಹಾಗೂ ವರ್ಗಗಳನ್ನು ಕುರಿತು ಮೌನವನ್ನು ಪಾಲಿಸುವುದು ತುಂಬ ಗಮನಾರ್ಹವಾಗಿದೆಯಲ್ಲದೆ ಹೊಂಬಳದ ಬೊಂತೆಯಮುನಿಯ ಬಗೆಗಂತೂ , ಆಲಿಸುವವನು ಯಾವನಿದ್ದರೂ ಅವನಿಗೆ ಬೋಧಿಸಬೇಕು ಎಂಬ ಸೂಚನೆಯನ್ನು ನೀಡಲಾಗಿದೆ.[31] ಕಾಳಾಮುಖರೊಂದಿಗೆ ತೀರ ಹತ್ತಿರದ ನಂಟುಳ್ಳ, ಇಂದು ಚಾಲ್ತಿಯಲ್ಲಿರುವ ಪಾಶುಪತ ಸಂಪ್ರದಾಯದ ಗ್ರಂಥಗಳು ಈ ವಿಷಯವನ್ನು ಕುರಿತು ಇದಕ್ಕೂ ಮುಂದೆ ಹೆಚ್ಚಿಗೇನನ್ನೂ ಹೇಳುತ್ತಿಲ್ಲವಲ್ಲದೆ ಕಾಳಾಮುಖರ ತರುವಾಯದಲ್ಲಿ ಬಂದ ವೀರಶೈವ ಸಂಪ್ರದಾಯದವರು ಕೂಡ ಜಾತಿಯ ಮನೋಭಾವನೆಗೆ ನೇರ ವಿರೋಧಿಗಳಾಗಿದ್ದರು. ಹೆಚ್ಚು ವಿಶಿಷ್ಟವಾದ ಮಾಹಿತಿ ಇಲ್ಲದಿರುವಾಗ ವರ್ಣಾಶ್ರಮ ಧರ್ಮವನ್ನು ಕುರಿತು ಕಾಳಾಮುಖರಲ್ಲಿ ಇದ್ದಿರಬಹುದಾದ ಪ್ರಬಲವಾದ ಒಲವನ್ನು ಕುರಿತು ನಿರ್ಧರಿಸುವುದು ಅಸಾಧ್ಯವೇ ಸರಿ. ಈ ಬಗೆಯ ಸನ್ನಿವೇಶಗಳಿಂದಾಗಿ ಮೇಲಿನ ಪದ್ಯವನ್ನು ಶಾಪಾಶಯ ಪದ್ಯಗಳಿಗಿಂತ ತುಸು ಹೆಚ್ಚಿನದೆಂದು ಮನ್ನಿಸಬಹುದಾಗಿದೆ.

ಏನಿಲ್ಲೆಂದರೂ, ಬಳ್ಳಿಗಾವೆಯಲ್ಲಿದ್ದ ಇನ್ನೆರಡು ಸಂಸ್ಥಾನಗಳಾದ ಪಂಚಮಠ ಮತ್ತು ಹಿರಿಯ ಮಠಗಳು ಕಾಳಾಮುಖ ಸಂಪ್ರದಾಯದವುಗಳಾಗಿರುವ ಸಾಧ್ಯತೆಯಿದೆ. ಏಕೆಂದರೆ ಅವುಗಳ ಯತಿಗಳ ಹೆಸರುಗಳು ಮುಕ್ತಾಯಗೊಳ್ಳುವುದು, ಕಾಳಾಮುಖ ಶೈಲಿಗೆ ವಿಶಿಷ್ಟವಾದ 'ದೇವ' ಹಾಗೂ 'ಪಂಡಿತದೇವ' ಎಂಬ ಪದಗಳಿಂದ.[32]

ಶಿವಮೊಗ್ಗ ಜಿಲ್ಲೆಯ ಇನ್ನೂ ಒಂದು ಅಥವಾ ಎರಡು ಗ್ರಾಮಗಳಲ್ಲಾದರೂ

29. ಅದೇ. Sk. 126. ಈ ಪದ್ಯವು ಕುಮಾರಿಲ ಭಟ್ಟನದೆಂದು ರೈಸ್ ಹೇಳುತ್ತಾರೆ.
30. ಹಿಂದೆ ನೋಡಿ, ಪು. 114.
31. ಹಿಂದೆ ನೋಡಿ, ಪು. 131.
32. ನೋಡಿ ಅದೇ. Sk. 125, 151, 106, 99, 118, 123, 119 ಮತ್ತು 168.

ಶಕ್ತಿಪರಿಷತ್ತಿನೊಂದಿಗೆ ಖಂಡಿತವಾಗಿಯೂ ನಂಟು ಹೊಂದಿದ ದೇವಾಲಯಗಳು ಇದ್ದವು. ಬಳ್ಳಿಗಾವೆಯಲ್ಲಿಯೇ ದೊರೆತ ಒಂದು ಶಾಸನವು ಬೆನಕನ ಕೊಳದ ಸಿದ್ಧೇಶ್ವರ ದೇವರಿಗೆ ನೀಡಲಾದ ದತ್ತಿಯನ್ನು ನಮೂದಿಸುತ್ತದೆ.[33] ದಾನಿಯು ಕಾಳಾಮುಖ ಯತಿಯಾದ ಕ್ರಿಯಾಶಕ್ತಿಪಂಡಿತದೇವನ ಪಾದಗಳನ್ನು ತೊಳೆದು ಕ್ರಿ.ಶ.1039ರಲ್ಲಿ ಒಂದು ದತ್ತಿಯನ್ನು ನೀಡಿದನು. ಬಂದಳಿಕೆಯ ಕ್ರಿ.ಶ.1163ರ ಒಂದು ದತ್ತಿ ಶಾಸನವು ನಗರದ ಅಧಿಕಾರಿಯಾದ ಮಾಚೆಯ ನಾಯಕನು ಅಲ್ಲಿಯ ಶಿವಾಲಯಕ್ಕಾಗಿ ಕಲ್ಲಿನಿಂದ ಕಟ್ಟಿಸಿದ ಒಂದು ಗೋಪುರ (ಪ್ರಾಸಾದ ) ಹಾಗೂ 'ಹೊನ್ನಕಳಸ'ಗಳ ಒಂದು ಸ್ಮೃತಿಚಿಹ್ನೆಯಾಗಿದೆ.[34] ಈ ಅಧಿಕಾರಿಯು ತನ್ನ ಊಳಿಗಮಾನ್ಯ ಅಧಿಪತಿಯಾದ ಕದಂಬ ಸೋಮನ ಹೆಸರಿನಿಂದ ಒಂದು ಲಿಂಗವನ್ನು ಕೂಡ ಪ್ರತಿಷ್ಠಾಪಿಸಿ ಆ ದೇವಾಲಯಕ್ಕೆ ಒಂದಿಷ್ಟು ನೆಲವನ್ನು ದತ್ತಿ ನೀಡಿದನು. ಮಾಚೆಯನ ಗುರು, ದೇವಶಕ್ತಿಬ್ರತೀಂದ್ರನು 'ಪ್ರಖ್ಯಾತರಾದ ಕಾಳಾಮುಖರ ಮೋರೆಯ (ಮುಖ) ಮೇಲಿನ ಒಂದು ಒಡವೆಯೆನ್ನಿಸಿದ್ದನು.' ಈ ಯತಿಯು ವೇದಾಂತ, ಅಷ್ಟಾಂಗ ಯೋಗಗಳು, ಸಿದ್ಧಾಂತಗಳು ಹಾಗೂ ಶೈವಾಗಮಗಳಲ್ಲಿ ಪಾರಂಗತನಾಗಿದ್ದನಲ್ಲದೆ ಎಂದಿನ ಯೋಗ ಸಾಮರ್ಥ್ಯಗಳುಳ್ಳವನಾಗಿದ್ದನು. ಅವನು 'ಬಮ್ಮಕೂರು ಎಂಬಲ್ಲಿಯ ಹಿರಿಯ ಮಠದ ಪ್ರಖ್ಯಾತನಾದ ಆಚಾರ್ಯ'ನಾದ ಅಘೋರನಿಂದ ಅನುಗ್ರಹವನ್ನು ಪಡೆದಿದ್ದನೆಂದು ಸಾಧಿಸಲಾಗುತ್ತದೆ. ಸೋಮೇಶ್ವರ ದೇವಾಲಯದ ಬ್ರಹ್ಮಚಾರಿ ಮಠದ ಮಠಾಧೀಶರಿಗೆ ಸೋಮೇಶ್ವರಪಂಡಿತ ಹಾಗೂ ಬೀರೆಯಜೀಯ ಎಂದು ಹೆಸರುಗಳನ್ನು ಇಡಲಾಗಿತ್ತು. ಹನ್ನೊಂದು ವರ್ಷಗಳ ತರುವಾಯ ಅಂದರೆ ಕ್ರಿ.ಶ.1174ರಲ್ಲಿ ಮಾಚೆಯನು ಈ ಪಟ್ಟಣದಲ್ಲಿ ಕದಂಬ ಸೋಮನ ತಂದೆಯಾದ ಬೊಪ್ಪರಸನ ಹೆಸರಿಗೆ ಬೊಪ್ಪೇಶ್ವರ ದೇವಾಲಯವನ್ನು ಕಟ್ಟಿಸಿ ಮೂಲಸ್ಥಾನದ ಆಚಾರ್ಯನಾದ ಕಾಳಾಮುಖ ಕಲ್ಯಾಣಶಕ್ತಿ ಪಂಡಿತನಿಗೆ ಒಂದಿಷ್ಟು ನೆಲವನ್ನು ದತ್ತಿ ನೀಡಿದನು.[35]

## ಬೆಳಗಾವಿ ಜಿಲ್ಲೆ

ಕರ್ನಾಟಕದ ಉತ್ತರದ ಈ ಜಿಲ್ಲೆಯ ಪೂಲಿ ಅಥವಾ ಆಧುನಿಕ ಹೂಲಿಯು ಒಂದು ಮುಖ್ಯವಾದ ಕಾಳಾಮುಖ ಕೇಂದ್ರವಾಗಿತ್ತೆಂದು ಕಾಣುತ್ತದೆ. ಅಲ್ಲಿ ದೊರೆತ ಒಂದು ಶಾಸನವು ಕಾಳಾಮುಖ ಸಂಪ್ರದಾಯದ ಯತಿಗಳ ನಿಯಂತ್ರಣದಲ್ಲಿದ್ದ ಅಂಧಾಸುರ (ಶಿವ) ದೇವಾಲಯಕ್ಕೆ ನೀಡಲಾದ ಹಲವಾರು ದತ್ತಿಗಳನ್ನು ನಮೂದಿಸುತ್ತದೆ.[36] ಕ್ರಿ.ಶ.1104ರ

---

33. ಅದೆ. Sk. 153.
34. ಅದೇ. Sk 242.
35. ಅದೇ. Sk 236.
36. ಸಂ. ಮತ್ತು ಅನು. ಎಲ್. ಡಿ. ಬಾರ್ನೆಟ್, 'Inscriptions of Huli,' EI, XVIII (1925-26), 170-218 (no. E).

ಮೊದಲನೆಯ ದತ್ತಿಯು ಜ್ಞಾನಶಕ್ತಿಪಂಡಿತದೇವನ ಶಿಷ್ಯನಾದ ಆಚಾರ್ಯ ತತ್ಪುರುಷನಿಗೆ ನೀಡಲಾಗಿದೆ. ಜ್ಞಾನಶಕ್ತಿಯನ್ನು ತರ್ಕಶಾಸ್ತ್ರ ಹಾಗೂ ವ್ಯಾಕರಣಗಳ ಅವನ ಜ್ಞಾನಕ್ಕಾಗಿ ಕೊಂಡಾಡಲಾಗಿದ್ದು, ಅವನಿಗೆ ಏಕಾಕ್ಷರನೆಂಬ ಇನ್ನೊಂದು ಹೆಸರನ್ನು ಇಡಲಾಗಿದೆ. ಹಲವು ಚಕ್ರವರ್ತಿಗಳು ಅವನಿಗೆ ಗೌರವವನ್ನು ಸಲ್ಲಿಸುವರೆಂದು ಹೇಳಲಾಗಿದೆ. ಅವನ ಆಧ್ಯಾತ್ಮಿಕ ಪೂರ್ವಿಕರು 'ಉನ್ನತ ಮಟ್ಟದ ವಿದ್ಯೆ (ಮತ್ತು) ಘೋರತಪಸ್ಸುಗಳಿಗೆ' ಹೆಸರಾದ 'ಕಾಳಾಮುಖ ಸಂಪ್ರದಾಯದ ಪ್ರಮುಖ ಯತಿಗಳಾ'ಗಿದ್ದರು. ಅವರ ಹೆಸರುಗಳು ಹೀಗಿವೆ : 'ಪೂಲಿಯದೇವ....., ಅವನ ತರುವಾಯ ಲಕುಲೀಶದೇವ; ಅವನ ತರುವಾಯ ಸದ್ಗುಣಗಳಲ್ಲಿ ಮಿಗಿಲಾದ ವಖ್ಖಾಣದೇವ ಹಾಗೂ ಕಲೆ, ಪವಿತ್ರ ಪರಂಪರೆಗಳಲೆಲ್ಲ (ಸರ್ವಕಲಾಗಮ) ಚೆನ್ನಾಗಿ ಪಳಗಿದ ಮಹಾಯೋಗಿ ವಿದ್ಯೇಶಾನ, ಇದೇ ರೀತಿ ಅವನ ತರುವಾಯ, ಹೆಸರಾದ ಯತಿ ಸೋಮದೇವ.' ಈ ಸೋಮದೇವನು ಜ್ಞಾನಶಕ್ತಿಯ ಗುರುವಾಗಿದ್ದನೆಂಬುದು ಸ್ಪಷ್ಟವಾಗಿದೆ. ಕ್ರಿ.ಶ.1162ರ ಇನ್ನೊಂದು ದತ್ತಿಯು ಅಂಧಾಸುರ ದೇವರ ಸ್ಥಾನಾಚಾರ್ಯನಾದ ಜ್ಞಾನಶಕ್ತಿದೇವನಿಂದ ದೇವರ ಸ್ನಾನ ಹಾಗೂ ನೈವೇದ್ಯಗಳಿಗಾಗಿ ನೀಡಲಾದ ದತ್ತಿಯನ್ನು ನಮೂದಿಸುತ್ತದೆ. ಇವನು ಅದೇ ಯತಿಯಾಗಿರಲಿ ಇಲ್ಲವೆ ಅವನ ತರುವಾಯದವನಾಗಲಿ ಆಗಿರಬಹುದು. ಪೂಲಿಯ ಕೆಲವು ಅಗ್ರಗಣ್ಯ ನಾಗರಿಕರಿಂದ 1184ರಲ್ಲಿ ದೇವರಿಗೆ ನೀಡಲಾದ ಮೂರನೆಯ ದತ್ತಿಯು ಯಾವ ಯತಿಯ ಹೆಸರನ್ನೂ ನಮೂದಿಸಿಲ್ಲ. ತ್ರಿಕೂಟೇಶ್ವರ ದೇವರ ಉಪಾಸಕರಾದ ಪೂಲಿಯ ನೇಕಾರ ಸಂಘಗಳವರು 1224ರಲ್ಲಿ ಅಂಧಾಸುರ ದೇವಾಲಯದ ಸ್ಥಾನಾಚಾರ್ಯನಾದ ವಾಮಶಕ್ತಿದೇವನಿಗೆ ಅಂತಿಮವಾಗಿ ಕಾಣಿಕೆಯನ್ನು ಸಲ್ಲಿಸಿದರು.

ಹೂಲಿಯ ತಾರೀಖಿಲ್ಲದ ಒಂದು ಶಾಸನವು ಈ ಮೊದಲಿನ ಶಾಸನಗಳಲ್ಲಿ ನಮೂದಿಸಲಾದ ಜ್ಞಾನಶಕ್ತಿಗಳಲ್ಲಿ ಒಬ್ಬನಾಗಿರಬೇಕು.[37] ಅವನನ್ನು 'ತಲೆಬಾಗಿದ ದೈತ್ಯರ ಚಕ್ರವರ್ತಿಗಳು ಹಾಗೂ ಮಾನವರಿಂದ ಆರಾಧಿಸಲ್ಪಡುವ ಆರಾಧ್ಯನು' ಹಾಗೂ ' ಕಾಳಾಮುಖ (ಸಿದ್ಧಾಂತ) ದರ್ಪಣ"ವೆನ್ನಲಾಗಿದೆ. ಅವನ ಶಿಷ್ಯನು ನಾಗರಾಸಿ. ಇವನ ಸಾಮಾನ್ಯ ಶಿಷ್ಯನಾದ ನಾದಿಗೌಡನನ್ನು ಬೇರೊಂದು ಶಾಸನದಲ್ಲಿ ನಮೂದಿಸಲಾಗಿದೆ.[38]

ಈ ಜ್ಞಾನಶಕ್ತಿ ಮತ್ತು ಅವನ ಶಿಷ್ಯನಾದ ನಾಗರಾಶಿ ಇವರೂ, ಇದೇ ಜಿಲ್ಲೆಯ ನೇಸರಗಿಯ ಕಾಳಾಮುಖ ಹೊನ್ನಯ್ಯನ ಪರಂಪರೆಯ ಯತಿಯಾದ ರಿರಪೂಲಿ-ಜ್ಞಾನಶಕ್ತಿ ಮತ್ತು ನಟ ನಾಗರಾಸಿ ಇವರೂ, ಒಂದೇ ಆಗಿರುವ ಸಾಧ್ಯತೆಯಿದೆ.[39] ಸವದತ್ತಿ ಹಾಗೂ

---

37. ಅದೇ. ಸಂ. I. ತಾರೀಖು ಇಲ್ಲದ ಒಂದು ಶಾಸನದಲ್ಲಿ ಒಬ್ಬ ಜ್ಞಾನಶಕ್ತಿಯನ್ನು ಕೂಡ ನಮೂದಿಸಲಾಗಿದೆ.

38. ಅದೇ. ಸಂ. J.

39. ಸಂ. ಮತ್ತು ಅನು. ಫ್ಲೀಟ್, JBBRAS, X. 167-298 (no. VI).

ಬೆಳಗಾವಿಗಳ ರಟ್ಟ ನಾಲ್ಕನೆಯ ಕಾರ್ತವೀರ್ಯನ ಅಧಿಕಾರಿಯೊಬ್ಬನು ಕ್ರಿ.ಶ.1219-20 ರಲ್ಲಿ ನೇಸರಗಿಯಲ್ಲಿ ಹಬ್ಬೇಶ್ವರ, ಮಾಣಿಕೇಶ್ವರ ಹಾಗೂ ಸಿದ್ದೇಶ್ವರ ದೇವಾಲಯಗಳನ್ನು ಕಟ್ಟಿಸಿದನು. ಹೊನ್ನಯ್ಯನು ಈ ದೇವಾಲಯಗಳ ಯತಿಯಾಗಿದ್ದನು. ರಿರಪೂಲಿ - ಜ್ಞಾನಶಕ್ತಿಯ ಶಿಷ್ಯನಾದ ಹಾಗೂ ನಟ ನಾಗರಾಶಿಯ ಅಣ್ಣನಾದ ವಾಮಶಕ್ತಿಯು ಅವನ ಗುರುವಾಗಿದ್ದನು. ಋಶಿಸೆಂಗನ ಶಿಷ್ಯನಾದ ರುದ್ರಶಕ್ತಿಯು ವಾಮಶಕ್ತಿಯ ಗುರುವಾಗಿದ್ದನು. ಹೊನ್ನಯ್ಯನನ್ನು ಹೊಗಳುವ ಒಂದು ಪದ್ಯವು ಕಾಳಾಮುಖರನ್ನು ಮಹಾವ್ರತಿನ್, ಮಹಾಪಾಶುಪತ ಹಾಗೂ ಶ್ರೋತ್ರಿಯರೊಂದಿಗೆ ಗುರುತಿಸುವಂತೆ ತೋರುತ್ತದೆ ಇಲ್ಲವೆ ಅವರೊಂದಿಗೆ ಸಂಬಂಧವನ್ನು ಕಲ್ಪಿಸುವಂತೆ ಕಾಣುತ್ತದೆ. ಅದನ್ನು ಹೀಗೆ ಅನುವಾದಿಸಬಹುದು : ಪ್ರಸಿದ್ಧ ಮಹಾವ್ರತಿಗಳಲ್ಲಿ, ಪಾಶುಪತರಲ್ಲಿ, ಶ್ರೋತ್ರಿಯರಲ್ಲಿ ಕಾಳಾಮುಖ (ಪಂಥ)ವು ಸುಪ್ರಸಿದ್ಧವೆನ್ನುತ್ತೇನೆ.[40] ಇದೇ ಪದ್ಯವು ಹತ್ತಿರದ ಸಿರಸಂಗಿ, ಪುರಾತನ ಋಷ್ಯಶೃಂಗಪುರ ಅಥವಾ ಪಿರಿಸಿಂಗಿಯ ಕ್ರಿ.ಶ.1148 ರ ದತ್ತಿಯಲ್ಲಿ ದೊರೆತಿದೆ.[41] ಈ ಪಟ್ಟಣದ ಗ್ರಾಮೇಶ್ವರ ದೇವಾಲಯದ ಆಚಾರ್ಯನಾದ ರುದ್ರಶಕ್ತಿದೇವನು ಈ ದತ್ತಿಯನ್ನು ಸ್ವೀಕರಿಸುವ ಕಾಳಾಮುಖನಾಗಿದ್ದನು. ಈ ಯತಿ ಹಾಗೂ ನೇಸರಗಿಯ ದತ್ತಿ ಶಾಸನದಲ್ಲಿ ನಮೂದಿಸಲಾದ ಹೊನ್ನಯ್ಯನ ಗುರು ಒಬ್ಬನೇ ಆಗಿರುವ ಸಾಧ್ಯತೆಯಿದೆ. ಸಿರಸಂಗಿಯ ಪುರಾತನ ಹೆಸರಾದ ಋಷ್ಯಶೃಂಗಪುರವು ನೇಸರಗಿಯ ಮೊಟ್ಟ ಮೊದಲಿನ ಯತಿಯಾದ ರಿಶಿಸೆಂಗನನ್ನು ಜ್ಞಾಪಕಕ್ಕೆ ತರುವಂತಿದೆ.

ಮುನವಳ್ಳಿಯ ಒಂದು ಶಾಸನವು ಇಲ್ಲಿಯ ಕಾಳಾಮುಖ ಪರಂಪರೆಯವರು ಈ ಸುತ್ತಲ ನಾಡಿನ ಹಲವಾರು ದೇವಾಲಯಗಳ ಅಧಿಕಾರ ಹೊದಿದ್ದರೆಂಬುದನ್ನು ತಿಳಿಸುತ್ತದೆ.[42] ಅವು ಮುನೀಂದ್ರವಳ್ಳಿ (ಮುನವಳ್ಳಿ) ಯ ಜಗದೀಶ್ವರದೇವಾಲಯ, ವೇಳುಗ್ರಾಮ (ಬೆಳಗಾವಿ) ಮಲ್ಲೇಶ್ವರ, ಹಿರಿದಾದ ಅಗ್ರಹಾರವಾದ ನೇಸರಗಿಯ ಕಲಿದೇವ, ಗೋಕಾಗೆಯ ಬಲ್ಲೇಶ್ವರ, ಹಲಸಿಗೆ ಹನ್ನೆರಡು ಸಾವಿರದಲ್ಲಿರುವ ಕೊಟ್ಟಂಬಾಗಿಯ ವಿಜಯಮೇಶ್ವರ ಮತ್ತು ಗೋಳಿಯಹಳ್ಳಿಯ ಕಲಿದೇವ ದೇವಾಲಯಗಳು. ಕ್ರಿ.ಶ.1252ರಲ್ಲಿ ಮುನೀಂದ್ರವಳ್ಳಿಯ ಹಲವು ಜನ ಪ್ರತಿಷ್ಠಿತ ನಾಗರಿಕರಿಂದ ಜಗದೀಶ್ವರ ದೇವಾಲಯದ ಯತಿಗೆ ಹಲವಾರು ನಿವೇಶನಗಳನ್ನು ನೀಡಲಾಯಿತು. ಯತಿಯಾದ ಈ ಸರ್ವೇಶ್ವರ, ಅವನ ಮಗ ಕ್ರಿಯಾಶಕ್ತಿ ಹಾಗೂ ಮೊಮ್ಮಗ ಸೋಮೇಶ್ವರರನ್ನೆಲ್ಲ ಸವಿಸ್ತರವಾಗಿ ಕೊಂಡಾಡಲಾಗಿದೆ. ಸರ್ವೇಶ್ವರನು ದೇವನಾದ ಶಂಕರನಂತಹ ರೂಪವನ್ನು (ಸಾಮ್ಯರೂಪ) ಹೊಂದಿದ್ದನಲ್ಲದೆ 'ಭಾವೋದ್ರೇಕ, ಕೋಪ, ಹೆಮ್ಮೆ ಸಂಪತ್ತು, ತಪ್ಪು, ಹೆದರಿಕೆ ಹಾಗೂ ದುರಾಶೆಗಳಿಂದ ತನ್ನನ್ನೇ

40. ಅನು. ಎಲ್. ಉಲ್ರಿಚ್ ಅವರು ಈ ಲೇಖಕನಿಗೆ ಬರೆದ 10ನೇ ಜನೆವರಿ 1967ದ ಓಲೆಯಲ್ಲಿ. ಪು. 19 ರಲ್ಲಿ ಈ ಪದ್ಯದ ಕೆಲವು ಮತಿತಾರ್ಥಗಳನ್ನು ಚರ್ಚಿಸಿದ್ದೇವೆ.

41. ಸಂ. ಪಂಚಮುಖಿ. I, 33-38.

42. ಸಂ. ಮತ್ತು ಅನು. ಫ್ಲೀಟ್, JBBRAS, XII, 1-50 (no. IV).

ದೂರವಿರಿಸಿಕೊಂಡವನಾ'ಗಿದ್ದನೆಂದು ಹೇಳಲಾಗಿದೆ. ಅವನು 'ರಾಯರಾಜಗುರು'ಎಂಬ ಪ್ರತಿಷ್ಠೆಯ ಬಿರುದಲ್ಲದೆ ಎಲ್ಲರಂತೆ ಯೋಗ ಸಾಮರ್ಥ್ಯಬಿರುದುಗಳನ್ನು ಕೂಡ ಹೊಂದಿದ್ದನು.[43] ಇದೂ ಅಲ್ಲದೆ ಅವನೊಬ್ಬ ಯತಿಯಾಗಿದ್ದನು. :

> ಅವನು ಆರು ಬಗೆಯ ಕರ್ಮ(ಷಟ್ಕರ್ಮ)ಗಳಾದ ಯಜ್ಞ ಮಾಡುವ - ಮಾಡಿಸುವ ಅಧ್ಯಯನ ಮಾಡುವ -ಮಾಡಿಸುವ ದಾನ ನೀಡುವ -ಪಡೆಯುವ ಕ್ರಿಯೆಗಳಲ್ಲಿ ತೊಡಗಿರುವವನು, ಋಗ್ವೇದ, ಸಾಮವೇದ, ಅಥರ್ವವೇದ, ಯಜುರ್ವೇದ, ವೇದಾಂತ, ತತ್ವಶಾಸ್ತ್ರದ ಆರು ಪದ್ಧತಿ (ಷಟ್‌ತರ್ಕ), ವ್ಯಾಕರಣ, ಛಂದಶಾಸ್ತ್ರ, ಕಾವ್ಯ ಹಾಗೂ ನಾಟಕ ಇತ್ಯಾದಿ ವಿದ್ಯಾವಿನೋದನು; ವ್ಯಾಸ, ಅಗಸ್ತ್ಯ, ದುರ್ವಾಸ, ವಿಶ್ವಾಮಿತ್ರ, ನಾರದ ಹಾಗೂ ಇನ್ನಿತರ ಋಷಿಮುನಿಗಳ ಸಂಪ್ರದಾಯಗಳನ್ನು ಪಾಲಿಸುವವನು; ತನ್ನ ದೇಹಕ್ಕೆ ಭಸ್ಮವನ್ನು ಬಳಿದುಕೊಳ್ಳುವವನು; ತನ್ನ ಟೊಂಕಕ್ಕೆ ತುಂಡು ಬಟ್ಟೆಯನ್ನು (ಕೌಪೀನ) ಹಾಗೂ ಕೃಷ್ಣಾಜಿನವನ್ನು ಸುತ್ತಿಕೊಳ್ಳುವವನು; ತನ್ನ ಹತ್ತಿರ ರುದ್ರಾಕ್ಷದ ಜಪಮಾಲೆಯನ್ನು ಇರಿಸಿಕೊಳ್ಳುವವನು; [ 'ಲಾಕುಲಾಗಮ' ಸಂಪ್ರದಾಯದ[44] ಆಚರಣೆಯನ್ನು; ಕಾಪಾಡಿಕೊಂಡವನು, ಮತ್ತು ಜಂಗಮಲಿಂಗದ ಅವತಾರನೇ ಆದವನು..... [45]

ಸರ್ವೇಶ್ವರನು ಅಧ್ಯಯನ ಮಾಡಿದ ವಿಷಯಗಳು ಸುಮಾರಾಗಿ ಬಳ್ಳಿಗಾವೆಯ ಕೋಡಿಯ ಮಠದಲ್ಲಿ ಕಲಿಸಲಾದವುಗಳೇ ಆಗಿವೆ. ಮೇಲೆ[46] ನಾವು ಕಂಡುಕೊಂಡಂತೆ ಆ ವಿವರಣೆಯು ಕಾಳಾಮುಖ ಯತಿಯೊಬ್ಬನ ದೈಹಿಕ ಬಣ್ಣನೆಯನ್ನು ಗಮನಾರ್ಹವಾಗಿ ಒಳಗೊಂಡಿದೆ. ಅವನ ವೇಷ ಶೈವ ಮಾದರಿಯ ಯತಿಯದಾಗಿದೆ.

ಬೆಳಗಾವಿ ಜಿಲ್ಲೆಯ ಕಾಳಾಮುಖ ಯತಿಗಳು ಇನ್ನೊಂದು ಪರಂಪರೆಯ ಇದೇ ಜಿಲ್ಲೆಯ ಪ್ರಾಚೀನ ಪಳ್ಳಲ ಎನ್ನಿಸಿದ ಹದ್ಲಿ ಎಂಬ ಗ್ರಾಮದಲ್ಲಿ ಅಸ್ತಿತ್ವದಲ್ಲಿತ್ತು. ದೇವಶಕ್ತಿಪಂಡಿತನ ಶಿಷ್ಯ ಜ್ಞಾನಶಕ್ತಿಯೆಂಬ (ಜ್ಞಾನಶಕ್ತಿ) ಒಬ್ಬ ಕಾಳಾಮುಖ ಯತಿಯು

---

43. ಅವುಗಳನ್ನು 'ಯಮ', 'ನಿಯಮ', 'ಸ್ವಾಧ್ಯಾಯ', 'ಧ್ಯಾನ', 'ಧಾರಣಾ', ಮೌನಾನುಸಂಧಾನ', 'ತಪಸ್', ಮತ್ತು 'ಸಮಾಧಿ' ಎಂದು ಪಟ್ಟಿ ಮಾಡಲಾಗಿದೆ.

44. 'ಲಾಕುಲಾಗಮ ಸಮೆ(ಮ)ಯ ಸಮುದ್ಧ(ದ್ಧಾ)ರರುಂ' 'ಲಾಕುಲಾಗಮ'ವನ್ನು 'ಲಕುಲಾಗಮ'ಎಂದು ಓದುವ ಫ್ಲೀಟ್‌ರ ಅನುವಾದ ಅಷ್ಟೇನೂ ಸಮಾಧಾನಕರವಲ್ಲ.

45. ಅನು. ಫ್ಲೀಟ್, JBBRAS, XII, 40. ಮುಖ್ಯ ಪಾರಿಭಾಷಿಕ ಪದವಾದ 'ಜಂಗಮ ಲಿಂಗ'ವನ್ನು ಮುಂದೆ ಚರ್ಚಿಸಲಾಗುವುದು. pp. 171-72.

46. ಹಿಂದೆ ನೋಡಿ. ಪು. 6.

ಅಲ್ಲಿದ್ದ ಗವರೇಶ್ವರ ದೇವರಿಗೆ ಕ್ರಿ.ಶ.1084ರಲ್ಲಿ ಒಂದಿಷ್ಟು ನೆಲವನ್ನು ದತ್ತಿಕೊಟ್ಟನು.[47] ಸವದತ್ತಿಯ ಮಲಿಕಾರ್ಜುನ ದೇವಾಲಯದ ಯತಿಗಳು ಕೂಡ ಇದೇ ಸಂಪ್ರದಾಯದವರಾಗಿರಬೇಕು; ಏಕೆಂದರೆ ಅದು ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯ ಸಂಬಂಧಪಟ್ಟುದಾಗಿದೆ. ಕ್ರಿ.ಶ.1230ರ ಸುಮಾರಿಗೆ ಕೇಸಿರಾಜನೆಂಬ ಒಬ್ಬ ಸ್ಥಾನಿಕ ಮಾಂಡಲಿಕನು ಮೂರು ಸಲ ಶ್ರೀಶೈಲದ ತೀರ್ಥಯಾತ್ರೆಯನ್ನು ಕೈಕೊಂಡು, ಆ ಸುಪ್ರಸಿದ್ಧ ಕ್ಷೇತ್ರದಿಂದ ತಾನು ತಂದ ಲಿಂಗಕ್ಕಾಗಿ ಸವದತ್ತಿಯಲ್ಲಿ ಒಂದು ದೇವಾಲಯವನ್ನು ಕಟ್ಟಿಸಿದನು.[48] ಈ ದೇವಾಲಯದ ಅರ್ಚಕನಾದ ವಾಮಶಕ್ತಿಯ ಶಿಷ್ಯ ದೇವಶಿವ ಇವನ ಶಿಷ್ಯನಾದ ವಾಮಶಕ್ತಿಯು ಲಿಂಗಯ್ಯ ಮತ್ತು ಲಿಂಗಶಿವನೆಂದೂ ಕರೆಯಲ್ಪಡುತ್ತಿದ್ದನು.

## ಬಳ್ಳಾರಿ ಜಿಲ್ಲೆ

ಈ ಜಿಲ್ಲೆಯಲ್ಲಿ ದೊರೆತ ಹಲವಾರು ಶಾಸನಗಳು ಸಿಂಹಪರಿಷತ್ತಿನ ಯತಿಗಳ ದೇವಾಲಯಗಳಿಗೆ ನೀಡಲಾದ ದತ್ತಿಗಳನ್ನು ದಾಖಲಿಸುತ್ತವೆ.[49] ಈ ಕಾಳಾಮುಖ ದೇವಾಲಯಗಳು ಚಿನ್ನತುಂಬಳಮ್, ಕುರುಗೋಡ ಮತ್ತು ಸಿಂದಿಗೇರಿಗಳಲ್ಲಿ ಇವೆ. ಇವಲ್ಲದೆ ಗುಡಿಹಳ್ಳಿ, ಕುರುವತ್ತಿ ಹಾಗೂ ಇನ್ನೂ ಕೆಲವು ಊರುಗಳಲ್ಲಿಯೂ ಕಾಳಾಮುಖ ದೇವಾಲಯಗಳು ಇರುವಂತಿದೆ.

ಚಿನ್ನತುಂಬಳಮ್‌ದ ಒಂದು ದತ್ತಿಯು ಕ್ರಿ.ಶ.1068ರಲ್ಲಿ ಕಾಳಾಮುಖ ಆಚಾರ್ಯನಾದ ನಿರಂಜನಪಂಡಿತನ ಶಿಷ್ಯನಾದ ಅನಂತಶಕ್ತಿಪಂಡಿತನ ಶಿಷ್ಯನಾದ ಚಂದ್ರಭೂಷಣಪಂಡಿತನಿಗೆ ನೀಡಲಾಗಿದೆ.[50] ಇದನ್ನು ತುಂಬಳದ (ಚಿನ್ನ ತುಂಬಲಮ್)ದಕ್ಷಿಣ ಸೋಮೇಶ್ವರದೇವರ ಸೇವೆಗಳಿಗೆಂದು ನೀಡಲಾಗಿತ್ತು.

ಕುರಗೋಡಿನಲ್ಲಿ ದೊರೆತ ಒಂದು ಶಾಸನವು ಕಲ್ಯಾಣ ಚಾಲುಕ್ಯರ ಸಿಂದ ಮಾಂಡಲಿಕನಾದ ಒಂದನೇ ರಾಚಮಲ್ಲನ ಮಂತ್ರಿಯೊಬ್ಬನಿಂದ ಅಲ್ಲಿಯ ಸ್ವಯಂಭೂದೇವರಿಗೆ ಕಟ್ಟಿಸಿದ ದೇವಾಲಯಕ್ಕೆ ನೀಡಲಾದ ಹಲವಾರು ದತ್ತಿಗಳನ್ನು ನಮೂದಿಸುತ್ತದೆ.[51] ಕ್ರಿ.ಶ. 1173ರಲ್ಲಿ ಒಂದನೆಯ ರಾಚಮಲ್ಲನು, 'ಲಾಕುಲೀಶ್ವರಾಗಮ' ಹಾಗೂ 'ಕಾಳಾಮುಖ ಸಿದ್ಧಾಂತ'ಗಳನ್ನು ಅರಿತ ಹಾಗೂ ಯೋಗಸಾಮರ್ಥ್ಯಗಳನ್ನು ಆಚರಿಸುವ 'ಸ್ಥಾನಾಚಾರ್ಯ'ನಾದ

---

47. ಸಂ. ಜಿ. ಎಸ್. ಗಾಯಿ, SII, XX, no. 57.
48. ಸಂ. ಜೆ. ಎಫ್. ಫ್ಲೀಟ್, JBBRAS, X, 167-298 (no. VII).
49. ಹಿಂದೆ ನೋಡಿ, pp. 143-44.
50. ಸಂ. ಶಾಸ್ತ್ರಿ ಮತ್ತು ರಾವ, SII. IX. Part I no. 133. ಇದಲ್ಲದೆ ನೋಡಿ, ಅದೇ, no. 218.
51. ಸಂ. ಮತ್ತು ಅನು. ಎಲ್. ಡಿ. ಬಾರ್ನೆಟ್, 'Two Inscriptions from Kurgod,' EI, XIV: 265-84 (no. A).

ಬಾಲಶಿವಾಚಾರ್ಯನಿಗೆ ದೇವರ ಸೇವೆಗೆಂದು ಒಂದು ದತ್ತಿಯನ್ನು ನೀಡಿದನು. ಹಲವಾರು ವರ್ಷಗಳ ತರುವಾಯ 1181ರಲ್ಲಿ ರಾಚಮಲ್ಲನು ಇದೇ ದೇವಾಲಯಕ್ಕೆ ಮತ್ತು ಧರ್ಮದರ್ಶಿಗೆ (ಇಲ್ಲಿ ಬಾಲಶಿವದೇವನೆಂದು ಕರೆಯಲಾಗಿದೆ) ಒಂದು ಗ್ರಾಮವನ್ನು ನೀಡಿದನು.'ಸ್ವಯಂಭೂದೇವರ ಭೋಗ ರಂಗಭೋಗ, ನೈವೇದ್ಯ, ಜೀರ್ಣ (ಕಟ್ಟಡಗಳ) ದುರಸ್ತಿ, ಚೈತ್ರ ಮತ್ತು ಪವಿತ್ರ ಸಮಾರಂಭ, ಧರ್ಮ ಗ್ರಂಥಗಳ ಅಧ್ಯಯನ, ವೈಶೇಷಿಕದ ವ್ಯಾಖ್ಯಾನ ಶಿವಧರ್ಮಪುರಾಣಗಳ ಪಠಣ ಹಾಗೂ ಅನ್ನದಾನಕ್ಕಾಗಿ ಈ ಕಾಣಿಕೆ ನೀಡಲ್ಪಟ್ಟಿತು.[52] ಸ್ವಯಂಭೂದೇವಾಲಯವನ್ನು ಕಟ್ಟಿಸಿದ ಮಂತ್ರಿಯ ಇಬ್ಬರು ಮಡದಿಯರಿಂದ ನೀಡಲಾದ ಒಂದು ದತ್ತಿಯೊಂದಿಗೆ ಈ ಶಾಸನ ಮುಕ್ತಾಯಗೊಳ್ಳುತ್ತದೆ. ಅವರು ತಮ್ಮ ಮರಣ ಹೊಂದಿದ ಪತಿಯ ಚಿತೆಯನ್ನೇರುವ ಕಾಲಕ್ಕೆ ದೇವಾಲಯಕ್ಕೆ ಒಂದಿಷ್ಟು ನೆಲವನ್ನು ದತ್ತಿ ನೀಡಿದರು.[53] ಕುರಗೋಡಿನ ಇನ್ನೊಂದು ಶಾಸನವು ಅಮೃತಾಸಿದೇವನೆಂಬ (ಅಮೃತರಾಸಿದೇವ ?) ಒಬ್ಬ ಕಾಳಾಮುಖಯತಿಯನ್ನು ಉಲ್ಲೇಖಿಸಿಸುತ್ತದೆ.[54]

ಸಿಂದಿಗೇರಿಯ ಬಳಿ ದೊರೆತ ಮಲ್ಲೇಶ್ವರ ದೇವಾಲಯದ ಕ್ರಿ.ಶ.1144ರ ಎರಡು ಶಾಸನಗಳು ಯಾತ್ರಿಗಳ ಅನ್ನಛತ್ರಗಳಿಗೆ ನೀಡಿದ ಕಾಣಿಕೆಗಳನ್ನು ನಮೂದಿಸುತ್ತವೆ.[55] ಇವೆರಡೂ ಕಾಣಿಕೆಗಳನ್ನು ವಾಮದೇವನ ತರುವಾಯದ ತಲೆಮಾರಿನವ, ಏಕ್ಕೋಟಿ ಚಕ್ರವರ್ತಿ ಹಾಗೂ ಮುಳಗುಂದದ ಸ್ವಯಂಭೂ ದೇವಾಲಯದ ಆಚಾರ್ಯನಾಗಿದ್ದ ನಿರ್ವಾಣದೇವಯತಿಗೆ ಒಪ್ಪಿಸಲಾಗಿತ್ತು. ವಾಮದೇವನನ್ನು ಕಾಳಾಮುಖಸಿದ್ಧಾಂತದ (ಸಮಯ) ಸಮರ್ಥಕನೆಂದು, ಯೋಗಸಾಮರ್ಥ್ಯಗಳನ್ನು ಹೊಂದಿದವನೆಂದು ಹಾಗೂ ವ್ಯಾಕರಣ, ತರ್ಕ, ಸಿದ್ಧಾಂತ (ಲಾಕುಲ ಸಿದ್ಧಾಂತ') ಕಾವ್ಯ, ನಾಟಕ, ನಾಟಿಕಾ, ವೇದ, ವಾಗ್ಮಿತೆ, ಶ್ರುತಿ (?), ಸ್ಮೃತಿ (?), ಪುರಾಣ, ಇತಿಹಾಸ, ಮೀಮಾಂಸಾ, ಹಾಗೂ ನೀತಿಶಾಸ್ತ್ರಗಳಂತಹ ಅಸಂಖ್ಯ ಶಾಸ್ತ್ರಗಳಲ್ಲಿ ಪಾರಂಗತನೆಂದು ಬಣ್ಣಿಸಲಾಗಿದೆ.[56] ವಾಮದೇವನ ಶಿಷ್ಯ ತ್ರಿಲೋಚನ ದೇವನು, ಅವನ ಶಿಷ್ಯ ಕುಮಾರದೇವ, ಅವನ ಶಿಷ್ಯ ನಿರ್ವಾಣದೇವ.

ಕ್ರಿ.ಶ.1065ರಲ್ಲಿ ಬಿಜ್ಜಳದೇವನೆಂಬ ಒಬ್ಬ ರಾಜ್ಯಾಧಿಕಾರಿ ಶ್ರೀಪರ್ವತದ

---

52. ಅನು. ಅದೇ. ಪು. 277. ಈ ಪಾಠ ಹೀಗಿದೆ : 'ಶ್ರೀ ಸ್ವಯಂಭೂ ದೇವರಂಗಭೋಗ ರಂಗಭೋಗ ನೈವೇದ್ಯ ಜೀರ್ಣೋದ್ಧಾರ ಚೈತ್ರ ಸ್ವಾಧ್ಯಾಯವೈಶೇಷಿಕ ಬ್ಯಾಖ್ಯಾನ ಖಂಡಿಕ ಶಿವಧರ್ಮ್ಮಪುರಾಣ ಪವಿತ್ರ ಪಠನವನ್ನದಾನ -------- ' 'ಶಿವಧರ್ಮಪುರಾಣ'ವನ್ನು ಗುರುತಿಸುವುದು ಕಷ್ಟದ್ದು.
53. ಅದೇ. pp. 273, 277-78.
54. ನೋಡಿ ವಿ. ರಂಗಾಚಾರ್ಯ, 'Inscriptions of the Madras Presidency,' no. 108.
55. ಸಂ. ಶಾಸ್ತ್ರಿ ಮತ್ತು ರಾವ, SII, IX, Part I, nos. 235 and 237.
56. ಅದೇ. no. 235.

ಅಗಸ್ತ್ಯೇಶ್ವರನ (ಅಗಸ್ತ್ಯೇಶ್ವರ?) ಪರಂಪರೆಯ (ಸಂತತಿ) ಮಠಕ್ಕೆ ಸೇರಿದವನಾದ ದಿವ್ಯಶಕ್ತಿಪಂಡಿತದೇವನ ಪಾದಗಳನ್ನು ತೊಳೆದು, ಗುಂಡಹಳ್ಳಿಯ ನೊಳಂಬೇಶ್ವರ ದೇವರ ದೇವಾಲಯಕ್ಕೆ ಒಂದು ಗ್ರಾಮವನ್ನು ದತ್ತಿನೀಡಿದನು.[57] 1111ರಲ್ಲಿ ದಾನಿಯು ಅದೇ ದಿವ್ಯಶಕ್ತಿಪಂಡಿತನ ಶಿಷ್ಯನಾದ ವಾಮಶಕ್ತಿ ಪಂಡಿತನ ಶಿಷ್ಯನಾದ ಮಲ್ಲೇಶ್ವರಪಂಡಿತನ ಪಾದಗಳನ್ನು ತೊಳೆದು ನೊಳಂಬೇಶ್ವರದೇವಾಲಯಕ್ಕೆ ಇನ್ನೊಂದು ದತ್ತಿಯನ್ನು ನೀಡಿದನು.[58] ಈ ಯತಿಗಳೆಲ್ಲ ಸಾಮಾನ್ಯವಾಗಿ ಕಾಳಾಮುಖರಾಗಿದ್ದರೆಂಬುದು ಖಂಡಿತ.

ಕಾಳಾಮುಖರಾಗಿದ್ದ ಯತಿಗಳ ಇನ್ನೊಂದು ಪರಂಪರೆಯು ಕುರುವತ್ತಿ ಗ್ರಾಮದ ಅಭಿನವ ಸೋಮೇಶ್ವರ ದೇವಾಲಯವನ್ನು ನಿಯಂತ್ರಿಸುತ್ತಿತ್ತು.[59] ಕಾಶ್ಮೀರದೇವನು ಈ ಪರಂಪರೆಯ ಸಂಸ್ಥಾಪಕನಾಗಿದ್ದು, ಸೋಮೇಶ್ವರಪಂಡಿತನು ಈತನ ಶಿಷ್ಯ, ಇವನ ಶಿಷ್ಯ ಜ್ಞಾನಶಕ್ತಿ ಪಂಡಿತದೇವನು, ಅವನ ಶಿಷ್ಯನೆಂದರೆ ಲಕುಲೀಶ್ವರ ಪಂಡಿತನು. ಕ್ರಿ.ಶ.1099 ರಲ್ಲಿ ಕುರುವತ್ತಿಯ ಇನ್ನೂರು ಮಹಾಜನರು ಹಾಗೂ ಅವರ ಮುಖಂಡನಾದ ಬ್ರಾಹ್ಮಣ ಕಾಲಿದಾಸನು ದೇವರಸೇವೆಗೆಂದು ದತ್ತಿಯನ್ನು ನೀಡಿದ ಕಾಲಕ್ಕೆ ಮೇಲಿನ ಕೊನೆಯ ಯತಿಯು ಮುಖ್ಯಸ್ಥ ಪದದ ಮೇಲಿದ್ದನು. ಈ ವಿಭಾಗದ ಅಧಿಕಾರಿ ಹಾಗೂ ವಾದಿದೇವ ಪಂಡಿತದೇವನ ಶಿಷ್ಯ ಸುರೇಶ್ವರ ಪಂಡಿತದೇವನು ಅರ್ಚಕನಾಗಿದ್ದನು.

## ವಿಜಾಪುರ ಜಿಲ್ಲೆ

ಈ ಜಿಲ್ಲೆಯು ಕಾಳಾಮುಖರ ಸಿಂಹಪರಿಷತ್ತು ಹಾಗೂ ಶಕ್ತಿಪರಿಷತ್ತುಗಳೆರಡರ ಶಾಸನಗಳನ್ನು ನೀಡಿದೆ. ಸಂಸ್ಕೃತ ಹಾಗೂ ಕನ್ನಡದಲ್ಲಿರುವ ವಿಜಾಪುರದ ಒಂದು ಶಾಸನದಲ್ಲಿ ಕಾಳಾಮುಖ ಆಚಾರ್ಯನಾದ ಯೋಗೇಶ್ವರಪಂಡಿತದೇವನ ಆಧ್ಯಾತ್ಮಿಕ ಪರಂಪರೆಯ ಒಂದು ದೀರ್ಘ ಗುಣಗಾನವಿದೆ.[60] ಕ್ರಿ.ಶ.1074-75ದಲ್ಲಿ, ಕಲ್ಯಾಣಚಾಲುಕ್ಯರ ದಂಡನಾಯಕನಾದ ಇಮ್ಮಡಿ ಸೋಮೇಶ್ವರನು ಯೋಗೇಶ್ವರನು ಯೋಗೇಶ್ವರ ಹಾಗೂ ಅವನ ಶಿಷ್ಯರಿಗಾಗಿ ಶ್ರೀಸ್ವಯಂಭೂ ಸಿದ್ಧೇಶ್ವರದೇವಾಲಯವನ್ನು ಕಟ್ಟಿಸಿ ಅದರ ನಿರ್ವಹಣೆಗಾಗಿ ಒಂದಿಷ್ಟು ನೆಲವನ್ನು ದತ್ತಿ ಕೊಟ್ಟನು. ಈ ಕೆಳಗಿನ ಯತಿಪರಂಪರೆಯಲ್ಲಿ ಯೋಗೇಶ್ವರನ ಹೆಸರನ್ನು ನಮೂದಿಸಲಾಗಿದೆ :

---

57. ಅದೇ. no. 128.
58. ಅದೇ. no. 186.
59. ನೋಡಿ ಅದೇ. 165.
60. ಸಂ. ಮತ್ತು ಅನು. ಫ್ಲೀಟ್, IA, X, 126-32.

ಭುಜಂಗದೇವಾಚಾರ್ಯ ಅಥವಾ ಮುನಿಪ
|
ಭೌಜಂಗ, ಭುವನ ಹಾಗೂ ತ್ರಿಲೋಚನ ಎಂದೂ ಹೆಸರು.
|
ಬಾಲಸೂರ್ಯಮುನಿಪ ತ್ರೈಲೋಚನ, ಎಂದೂ ಹೆಸರು
|
ಕಾಶ್ಮೀರ ಸೂರೀಶ್ವರ
|
ಶ್ರೀವಾದಿಮಹಾಪ್ರಲಯ ಕಾಲಭೈರವಪಂಡಿತದೇವ
ಇವನಿಗೆ ತತ್ಪುರುಷಮುನಿಪತಿ ಹಾಗೂ ಭೈರವಮುನಿ ಎಂದೂ ಹೆಸರು
|
ಯೋಗೇಶ್ವರ ಅಥವಾ ಯೋಗೀಶ್ವವರಪಂಡಿತದೇವ

ಭುಜಂಗನು ಶಕ್ತಿಪರಿಷತ್ತಿನ ಭುಜಂಗಾವಳಿಯ ಸಂಸ್ಥಾಪಕನಾಗಲಿ ಇಲ್ಲವೆ ಸದಸ್ಯನಾಗಲಿ ಆಗಿರುವ ಸಾಧ್ಯತೆಯನ್ನು ಕುರಿತು ನಾವು ಈಗಾಗಲೇ ನಮೂದಿಸಿದ್ದೇವೆ.[61] ಅವನನ್ನು 'ಕಾಳಾಮುಖ ಸಂಪ್ರದಾಯದ ತಿಲಕ'ನೆಂದು 'ಕಾಳಾಮುಖರ ಮುಖಂಡ'ನೆಂದು, 'ಯೋಗಿಗಳ ಮುಕುಟಮಣಿ'ಯೆಂದು ಹಾಗೂ ಮುಕ್ತಿವನಿತೆಯನ್ನು ಒಲಿಸಿಕೊಳ್ಳುವ ಮಂತ್ರಶಕ್ತಿಯುಳ್ಳವ'ನೆಂದು ಬಣ್ಣಿಸಲಾಗಿದೆ.[62] ತನ್ನ ಯೋಗಬಲದಿಂದ ನೂರು ಬಗೆಯ ರೂಪಗಳನ್ನು ಧರಿಸಿ, ವಿಜಾಪುರದಲ್ಲಿರುವ ಒಂದು ಲಿಂಗವನ್ನು ಒಳಗೊಂಡು ಝುಂಝೇಶ್ವರನ ಒಟ್ಟು ಹನ್ನೆರಡು ಲಿಂಗಗಳನ್ನು ಸ್ಥಾಪಿಸಿದನು. ಅವನ ಪರಂಪರೆಯಲ್ಲಿ (ಸಂತಾನ ) ಹಲವು ಜನ ಶ್ರೇಷ್ಠರಾದ ಮುನಿಗಳಾಗಿ ಹೋದರಲ್ಲದೆ ಅವರೆಲ್ಲ ಅಣುವಿನಂತೆ ತೀರ ಕಿರಿದಾಗುವ (ಅಣುಮಾನ್) ಮೊದಲಾದ ಯೋಗ ಸಾಮರ್ಥ್ಯಗಳನ್ನು (ಗುಣಗಳು=ಸಿದ್ಧಿಗಳು) ಹೊಂದಿದ್ದರು. ಅವನ ಶಿಷ್ಯನಾದ ತ್ರಿಲೋಚನನು ವೇದ ಮತ್ತು ವೇದಾಂಗಗಳಲ್ಲಿ, ಶ್ರೀ ಲಾಕುಲನಿಂದ ಸೃಷ್ಟಿಯಾದ ಆಗಮಗಳಲ್ಲಿ ಪಾರಂಗತನಾಗಿದ್ದನೆಂದು ಹೇಳಲಾಗುತ್ತದೆ. ಯೋಗೇಶ್ವರನ ಗುರು ಕಾಲಭೈರವನನ್ನು ಒಬ್ಬ ಉದಾರ ಹೃದಯದ ಋಷಿಯೆಂದೂ ಬಳ್ಳಿಗಾವೆಯ ಕೇದಾರೇಶ್ವರ ದೇವಾಲಯದ ಸೋಮೇಶ್ವರ ಪಂಡಿತನಂಥವನೇ ಆಗಿದ್ದನೆಂದೂ ಅವನನ್ನು ಚಿತ್ರಿಸಲಾಗಿದೆ :

> ತನ್ನ ಬುದ್ಧಿಮತ್ತೆಯಿಂದಾಗಿ ತತ್ಪುರುಷಮುನಿಪನು ತನ್ನ ಎದುರಾಳಿಗಳಿಗೆ ಭೈರವನೆನಿಸಿದ್ದನು. ಮೀಮಾಂಸೆ ಅವನ ಭಯಂಕರ ತ್ರಿಶೂಲ, ಸುಗತವೆಂಬ (ಬೌದ್ಧ ಸಿದ್ಧಾಂತ) ತನ್ನ ನಗಾರಿಯ ಅಬ್ಬರದಿಂದ ಅವನು ತನ್ನ ಎದುರಾಳಿಗಳ ಎದೆ ಗುಂಡಿಗೆಗಳನ್ನು ನಡುಗಿಸಿ ಬಿಡುತ್ತಾನೆ. ಅವನ ಬಳಿ ವೈಶೇಷವೆಂಬ (ವೈಶೇಷಿಕ ಸಿದ್ಧಾಂತವೆಂಬ) ತ್ರಿಣಯನನ (ಭಯಕೃತ)

61. ಹಿಂದೆ ನೋಡಿ, ಪು. 140.

62. ಫ್ಲೀಟ್, IA. X. 127-28 (ನನ್ನ ಅನುವಾದ).

ರಣಹಲಿಗೆ ಹಾಗೂ ಕಾಪಿಲನ (ಕಪಿಲನ ಸಾಂಖ್ಯಸಿದ್ಧಾಂತ) ಎತ್ತಿ ಹಿಡಿದ ತಲೆಬುರುಡೆಯಿದೆ. ಅವನು ನ್ಯಾಯವೆಂಬ ತನ್ನ ದೊಡ್ಡದಾದ ಗಂಟೆಯ ಧ್ವನಿಯಿಂದ, ಆಕಾಶ ಹಾಗೂ ಭೂಮಿಯನ್ನೆಲ್ಲ ಕಿವಿಗಡಚಿಕ್ಕುವಂತೆ ಮಾಡುತ್ತಾನೆ.[63]

ದಾನವನ್ನು ಪಡೆದ ಯೋಗೀಶ್ವರನು ಅವನ ಶಿಷ್ಯನಾಗಿದ್ದನು. ಕಲಿಯುಗದ ಕೊಳೆಯನ್ನೆಲ್ಲ ತೊಳೆದುಬಿಡಬಲ್ಲ ಸಾಮರ್ಥ್ಯದ ತನ್ನ ಕೃತಿಗಳಿಂದ ಅವನು ಪುನೀತಗೊಂಡವನಾಗಿದ್ದನು,[64] ತನ್ನ ಕೃತಿಗಳಿಂದ ಬಲಾಢ್ಯನಾದ ಈ ಯತಿಯು ಸಂಸಾರ ಜಾಲದ ಭೀಭತ್ಸ ಸ್ವರೂಪವನ್ನು ಕುರಿತು ಚಿಂತಿಸಿದ ಬಳಿಕ, ಮೋಹವೆಂಬ ಮರವನ್ನೇ ಬೇರುಸಹಿತ ಬುಡಮೇಲುಮಾಡಿ ಎಸೆದು ಬಿಟ್ಟನು. ಮುಂದಕ್ಕೆ ಯೋಗಸಾಮರ್ಥ್ಯಗಳಾದ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣಾ ಮತ್ತು ಸಮಾಧಿಗಳನ್ನು ಹೊಂದಿದವನೆಂದು ಬಣ್ಣಿಸಲಾಗಿದೆ.[65] ನಿಜವಾಗಿಯೂ ಅವನು ಕಾಳಾಮುಖ ಕುಲದ ನೈದಿಲೆಗಳ ಸಮೂಹದಲ್ಲಿ ವಿಹರಿಸುವ ರಾಜಹಂಸನೂ, ಸರಸ್ವತಿಯ ಕಿವಿಯೋಲೆಯೂ ಆಗಿದ್ದನು. ಅವನು ತ್ರಿಲೋಚನದೇವರ ವರಪ್ರಸಾದವನ್ನು ಪಡೆದಿದ್ದನು, ಹಾಗೂ ಮುಕ್ತಿಯೆಂಬ ಹೆಣ್ಣಿನ ಚಿತ್ತವನ್ನು ಗೆದ್ದುಕೊಂಡಿದ್ದನು.

ಇದೇ ಜಿಲ್ಲೆಯ ಮುತ್ತಗಿಯ ಕ್ರಿ.ಶ.1147 ಹಾಗೂ 1158ರ[66] ಎರಡು ಶಾಸನಗಳಲ್ಲಿ ಕಾಶ್ಮೀರದಿಂದ ಆರಂಭಿಸಿ ಇದೇ ಪರಂಪರೆಯ ಯತಿಗಳನ್ನೆಲ್ಲ ಕೊಂಡಾಡಲಾಗಿದೆ. ಇವೆರಡೂ ಶಾಸನಗಳು ಇದೇ ಊರಿನ ಶಿವಲಿಂಗದೇವನ ದೇವಾಲಯಕ್ಕೆ ಮೊದಲಿಗೆ ಕಲ್ಯಾಣಚಾಲುಕ್ಯ ಇಮ್ಮಡಿ ಜಗದೇವಮಲ್ಲನ ಮಾಂಡಲಿಕನಾಗಿದ್ದ, ಆಮೇಲೆ ಚಕ್ರವರ್ತಿಯಾದ ಕಳಚೂರಿಯ ಬಿಜ್ಜಳನ ಒಪ್ಪಿಗೆ ಪಡೆದು ನೀಡಿದ ಕಾಣಿಕೆಗಳನ್ನು ನಮೂದಿಸುತ್ತವೆ. ಈ ಕಾಣಿಕೆಗಳನ್ನು ಪಡೆದವನೆಂದರೆ ಯತಿ ಲಕುಲೀಶ್ವರವ್ರತೀಶ್ವರ ಅಥವಾ ಲಕುಲೀಶವ್ರತಿಯು. ಅವನು ಲಾಕುಲಾಗಮಗಳಲ್ಲಿ ಪಾರಂಗತನೂ, ನಿರಂತರವಾಗಿ ಪಾವಿತ್ರ್ಯವನ್ನು ಕಾಪಾಡಿಕೊಳ್ಳುವ ನೈಷ್ಠಿಕರ ನಿಜವಾದ ಮುಕುಟವಜ್ರನು. ಅವನ ಗುರು ಎರಡನೆ ಯೋಗೀಶ್ವರ ದೇವನು. ಈತನ ಗುರು ವರೇಶ್ವರದೇವನು. ಈತನ ಗುರು ವಿಜಾಪುರ ದತ್ತಿ ಶಾಸನದಲ್ಲಿ ನಮೂದಿಸಲಾದ ಯೋಗೇಶ್ವರದೇವನು. ಕ್ರಿ.ಶ.1147 ಈ ಶಾಸನವು ಒಂದು ಮಹತ್ವದ ಮಾಹಿತಿಯನ್ನು

---

63. ಅದೇ. ಪು. 128 (ನನ್ನ ಅನುವಾದ). ಫ್ಲೀಟ್‌ರು ಮಾಡಿದ ಈ ಪರಿಚ್ಛೇದದ ಅನುವಾದ ಬಹುಮಟ್ಟಿಗೆ ತಪ್ಪಾಗಿದೆ.
64. ಅದೇ, (ಫ್ಲೀಟ್‌ರ ಅನುವಾದ).
65. ಇದು 'ಯೋಗ ಸೂತ್ರ'ದ ii. 29 ರಲ್ಲಿ ನೀಡಲಾದ ಪಟ್ಟಿ. ಶಾಸನಗಳಲ್ಲಿ ಹೆಚ್ಚಾಗಿ ನೀಡಲಾಗಿರುವ ಪಟ್ಟಿಗಳಿಗಿಂತಲೂ ಇದು ತುಸು ಬೇರೆಯದು.
66. ಸಂ. ದೇಸಾಯಿ, SII, XV, nox. 32 ಮತ್ತು 97 ಅನುಕ್ರಮವಾಗಿ.

ನೀಡುತ್ತದೆ. ಅದೆಂದರೆ ಯತಿಗಳ ಈ ಪರಂಪರೆಯು ಕಾಶ್ಮೀರದಿಂದ ವಿಜಾಪುರಕ್ಕೆ ಬಂದಿತೆಂಬುದು[67]. ವಲಸೆ ಬಂದ ಯತಿಪರಂಪರೆಯಲ್ಲಿ ಭುಜಂಗನು ಮೊದಲಿಗನಾಗಿದ್ದನು. ಅವನು ಹತ್ತನೆಯ ಶತಮಾನದ ಮಧ್ಯದಲ್ಲಿ ಉತ್ತರ ಭಾರತವನ್ನು ತ್ಯಜಿಸಿ ದಕ್ಷಿಣದತ್ತ ಹೊರಟಿರಲು ಸಾಕು.

## ಧಾರವಾಡ ಜಿಲ್ಲೆ

ಈ ಜಿಲ್ಲೆಯು ವಿಜಪುರ ಹಾಗೂ ಬೆಳಗಾವಿ ಜಿಲ್ಲೆಗಳ ನೇರ ದಕ್ಷಿಣಕ್ಕೂ, ಶಿವಮೊಗ್ಗ ಜಿಲ್ಲೆಯ ಉತ್ತರಕ್ಕೂ ಇದೆ. ಇದು ಕಾಳಾಮುಖರ ಚಟುವಟಿಕೆಗಳ ಮುಖ್ಯಕೇಂದ್ರವಾಗಿದ್ದಿತು. ಶಕ್ತಿಪರಿಷತ್ತು ಅಬ್ಬಲೂರು, ಆಡೂರು, ಗದಗ, ಹಳೆನಿಡನೇಗಿಲ, ಹೊಂಬಳ, ಕುಯಿಬಾಳ, ಲಕ್ಷ್ಮೇಶ್ವರ, ರೋಣ ಹಾಗೂ ಬಹುಮಟ್ಟಿಗೆ ಸೂಡಿ ಮತ್ತು ಸಾತೇನಹಳ್ಳಿಯ ದೇವಾಲಯಗಳನ್ನು ಕೂಡ ನಿಯಂತ್ರಿಸುತ್ತಿತ್ತು. ಕಲಕೇರಿ ಹಾಗೂ ಸುಂಸಿಯಲ್ಲಿ ಇನ್ನಿತರ ಕಾಳಾಮುಖ ದೇವಾಲಯಗಳಿದ್ದವು.

ಕ್ರಿ.ಶ.1076ರಲ್ಲಿ ಚಾಲುಕ್ಯ ಅರಸನಾದ ಇಮ್ಮಡಿ ಸೋಮೇಶ್ವರನ ದಂಡಾಧಿಪನೊಬ್ಬನು ಕಲಕೇರಿಯ ಸ್ವಯಂಭೂ ಸೋಮೇಶ್ವರದೇವರ ಕಾಳಾಮುಖದೇವಾಲಯಕ್ಕೆ ಒಂದು ಗ್ರಾಮವನ್ನು ದತ್ತಿಕೊಟ್ಟನು.[68] ಈ ದೇವಾಲಯದ ಮುಖ್ಯಸ್ಥನು ದೇವಸಿಂಗಜೀಯ ಎನ್ನುವವನಿದ್ದನು. 1144ರಲ್ಲಿ ಸಾವಸಿ (ಸಂಸಿ) ಅಗ್ರಹಾರದ ಕೆಲವು ಜನ ಪ್ರಮುಖನಾಗರಿಕರು ಸ್ಥಾನಿಕ ದೇವರಾದ ಗವರೇಶ್ವರ ದೇವಾಲಯದ ಯತಿಯಾದ ಈಶಾನಶಕ್ತಿಪಂಡಿತದೇವನೆಂಬ ಕಾಳಾಮುಖನಿಗೆ ಕೆಲವು ಕಾಣಿಕೆಗಳನ್ನು ನೀಡಿದರು.[69]

## ಚಿಕ್ಕಮಗಳೂರು (ಕಡೂರ) ಜಿಲ್ಲೆ

ಈ ಜಿಲ್ಲೆ ಶಿವಮೊಗ್ಗ ಜಿಲ್ಲೆಯ ಕೆಳಬದಿಗೆ ಅಂಟಿಕೊಂಡು ಇದೆ. ಇಲ್ಲಿ ಕೇವಲ ಎರಡು ಕಾಳಾಮುಖ ಸ್ಥಾನಗಳನ್ನು ಗುರುತಿಸಲಾಗಿದೆ. ಕ್ರಿ.ಶ.1108ರ ಸುಮಾರಿಗೆ ಹೊಯ್ಸಳ ಮಹಾಮಂಡಲೇಶ್ವರ, ಒಂದನೆಯ ಬಲ್ಲಾಳನು ಬಾಣೂರು ಗ್ರಾಮದ ಶಿವದೇವಾಲಯಕ್ಕೆ ಒಂದಿಷ್ಟು ನೆಲವನ್ನು ದತ್ತಿ ನೀಡಿದನು. ದಾನವನ್ನು ಪಡೆದವನು ಗೀರ್ವಾಣ ಶಕ್ತಿಪಂಡಿತದೇವನು.[70] 1139ರಲ್ಲಿ ಬೆರತಿಯ ಕೆರೆ, ಇಂದಿನ ಬೆಳ್ತಿಕೆರೆಯ ಕೆಲವು ಜನ ಸ್ಥಾನಿಕ

---

67. ಓಂದೆ ನೋಡಿ. pp. 108-109.
68. ಸಂ. ಗಾಯಿ, SII, XX, no. 49.
69. ಅದೇ. ನಂ. 112.
70. ಸಂ. ARMAD 1925, pp. 56-57.

ಅಧಿಕಾರಿಗಳು ಒಂದಿಷ್ಟು ನೆಲವನ್ನು ಸ್ಥಾನಿಕ ಕಾಳಾಮುಖ ಯತಿಯಾದ ಧರ್ಮರಾಶಿಪಂಡಿತನಿಗೆ ದತ್ತಿ ಕೊಟ್ಟರು.[71] ಹನ್ನೆರಡನೆಯ ಶತಮಾನದ ಇನ್ನೊಂದು ಕಾಳಾಮುಖ ಪರಂಪರೆಯು ಜಮ್ಮಾಪುರದಲ್ಲಿ ನೆಲೆಸಿರುವ ಸಾಧ್ಯತೆಯಿದೆ.[72]

## ಚಿತ್ರದುರ್ಗ ಜಿಲ್ಲೆ

ಈ ಜಿಲ್ಲೆಯು ಶಿವಮೊಗ್ಗ ಜಿಲ್ಲೆಗೆ ಅಂಟಿಕೊಂಡು ಪೂರ್ವದಿಕ್ಕಿಗೆ ಇದೆ. ಕಾಳಾಮುಖರ ಶಾಸನಗಳು ಅಸಗೋಡ ಮತ್ತು ಚದುರುಗೊಳದಲ್ಲಿ ದೊರೆತಿವೆ. ಕ್ರಿ.ಶ. 1054ರಲ್ಲಿ ಚಾಲುಕ್ಯ ಒಂದನೇ ಸೋಮೇಶ್ವರನ ಮಾಂಡಲಿಕರಾದ ಪಲ್ಲವರ ಅಧಿಕಾರಿಯೊಬ್ಬನು ಅಸಗೋಡದ ಸ್ವಯಂಭೂದೇವರ ದೇವಾಲಯಕ್ಕೆ ಒಂದು ಗ್ರಾಮವನ್ನು ದತ್ತಿಕೊಟ್ಟನು.[73] ದೇವಾಲಯಸಂಸ್ಥೆಯನ್ನು "ಕಾಳಾಮುಖ ಸ್ಥಾನ, ನೈಷ್ಠಿಕ ವೇದಿಕರ್ತ್ತರ ಮಠ' ಎಂದು ಬಣ್ಣಿಸಲಾಗಿದೆ. ನೈಷ್ಠಿಕ ಪದವು ಮಠದ ಯತಿಗಳ ಕಾಮಸಂಯಮದ ನಡತೆಗೆ ಸಂಬಂಧಿಸಿದುದಾದರೂ ಎರಡನೆಯ ಪದದ ಅರ್ಥ ಸ್ಪಷ್ಟವಾಗುವಂತಿಲ್ಲ. ಕರ್ತಾರನು ಈ ದೇವಾಲಯವನ್ನು ಕಟ್ಟಿಸಿದನೆಂದು ಹೇಳಲಾಗಿದೆ. ಇವನು ದಾನವನ್ನು ಪಡೆದ ತ್ರೈಲೋಕ್ಯ ಕರ್ತಾರಭಟ್ಟಾರಕನ ಹಿರಿಯ ತಲೆಮಾರಿನವನಾಗಿರಬೇಕು. ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಮಾಂಡಲಿಕನ ಅಧಿಕಾರಿಯೊಬ್ಬನು ಕ್ರಿ.ಶ.1108ರಲ್ಲಿ ಭುವನ ಕರ್ತಾರ ಪಂಡಿತದೇವನ ಶಿಷ್ಯನಾದ ತ್ರೈಲೋಕ್ಯನ ಪಾದಗಳನ್ನು ತೊಳೆದು ದೇವಾಲಯಕ್ಕಾಗಿ ಇನ್ನೊಂದು ದತ್ತಿಯನ್ನು ನೀಡಿದನು.[74] ಮೂರು ವರ್ಷಗಳ ತರುವಾಯ ದೇವಾಲಯಕ್ಕಾಗಿ ಇನ್ನೊಂದು ದತ್ತಿಯನ್ನು ನೀಡಿ ಅದನ್ನು ಧರ್ಮಕರ್ತಾರಪಂಡಿತದೇವನ ಶಿಷ್ಯನಾದ ಕಾಲಭೈರವದೇವನಿಗೆ ಒಪ್ಪಿಸಲಾಯಿತು.[75]

ಚದುರುಗೊಳದಲ್ಲಿ ದೊರೆತ, ಭಗ್ನಗೊಂಡ ಶಾಸನವೊಂದು ಕ್ರಿ. ಶ. 1166 ರಲ್ಲಿ 'ದೇವರಾದ ..... ದೇಶ್ವರ'ನಿಗೆಂದು ನೀಡಲಾದ ದತ್ತಿಯನ್ನು ಉಲ್ಲೇಖಿಸುತ್ತದೆ. ದಾನ ಪಡೆದವನು 'ಕಾಳಾಮುಖಿಪ್ರತಿಸ್ನನಾದ ತೇಜೋನಿಧಿಪಂಡಿತದೇವನ ಮಗ ಸರ್ವೇಶ್ವರ ಪಂಡಿತದೇವನು.'[76]

---

71. ಸಂ. ಮತ್ತು ಅನು. ರೈಸ್, EC, VI, Kd. 80.
72. ನೋಡಿ ARMAD 1943. pp. 91-99.
73. ಸಂ. ಮತ್ತು ಅನು. ರೈಸ್, EC, XI, Jl. 10.
74. ಅದೇ. Jl. 12.
75. ಅದೇ. Jl. 9.
76. ಅದೇ. Jl. 8.

# ಹಾಸನ ಜಿಲ್ಲೆ

ಹಳೆಬೀಡಿನ ಶಕ್ತಿಪರಿಷತ್ತಿನ ಯತಿಪರಂಪರೆಯ ಹೊರತಾಗಿ[77] ಅರಸೀಕೆರೆ, ಜಾಜೂರು, ಹಲಕೂರು, ಕಣಕಟ್ಟೆ ಹಾಗೂ ರಾಜನ ಸಿರಿವೂರುಗಳಲ್ಲಿ ಕೂಡ ಕಾಳಾಮುಖ ದೇವಾಲಯಗಳಿದ್ದವು. ಅರಸೀಕೆರೆಯ ಕೆಲವು ಸ್ಥಾನಿಕ ಅಧಿಕಾರಿಗಳು ಕ್ರಿ.ಶ. 1183ರಲ್ಲಿ ಗೋಜೇಶ್ವರನ ದೇವಾಲಯಕ್ಕೆ ಹಲವು ನಿವೇಶನಗಳನ್ನು ದತ್ತಿನೀಡಿದರು.[78] ದತ್ತಿಯನ್ನು ಪಡೆದವನು ಅಮೃತರಾಸಿ ಪಂಡಿತ ಎನ್ನುವವನು. ಇವನು ಅಘೋರಶಕ್ತಿ ಪಂಡಿತನ ಶಿಷ್ಯ ಧರ್ಮರಾಸಿ ಪಂಡಿತನ ಮಗನು. ಅಘೋರಶಕ್ತಿಯನ್ನು 'ಲಾಕುಲಾಗಮ' ಸಿದ್ಧಾಂತದ ('ಸಮಯ') ಬೆಂಬಲಿಗನೆಂದೂ ಕಾಳಾಮುಖ ಸಂಪ್ರದಾಯದವನೆಂದೂ ಬಣ್ಣಿಸಲಾಗಿದೆ.

ಕ್ರಿ.ಶ. 1195ರ ಸುಮಾರಿಗೆ ಜಾಜೂರಿನ ಕಲ್ಲೇದೇವರ ದೇವಾಲಯದಲ್ಲಿ ದೊರೆತ ಒಂದು ಶಾಸನವು ಚಂದ್ರಭೂಷಣ ಹಾಗೂ ಶಿವಶಕ್ತಿ ಎಂಬಿಬ್ಬರು ಕಾಳಾಮುಖಯತಿಗಳನ್ನು ಬಣ್ಣಿಸುತ್ತದೆ. ಇವರು ಅರಸೀಕೆರೆಯ ಶೈವಸ್ಥಾನದ ಸಂದರ್ಭದಲ್ಲಿ ರಾಜಾವೂರು ಎಂಬ ಗ್ರಾಮವನ್ನು ಆಳುತ್ತಿದ್ದರು.[79] ಅವರ ವಂಶಾವಳಿ ಹೀಗಿದೆ :

ಗಂಗರಾಸಿ ಪಂಡಿತ

- ತ್ರಿಭುವನ ಶಕ್ತಿ
  - ತ್ರೈಲೋಕ್ಯಶಕ್ತಿ
    - ಚಂದ್ರಭೂಷಣ
- ಅಮೃತರಾಸಿ
  - ಶಿವಶಕ್ತಿ
    - ಕಲ್ಯಾಣಶಕ್ತಿ

ಚಂದ್ರಭೂಷಣನು ವಿಗ್ರಹ ಹಾಗೂ ದೇವಾಲಯಗಳಲ್ಲದೆ, ಈಶ (ಶಿವ)ನ ಉಪಾಸನೆಯ ನಿಯಮಗಳ ಆಚರಣೆಯ ಲಕ್ಷಣಗಳ ಬಗೆಗೆ ತಿಳಿದವನಾಗಿದ್ದನು. ಅವನು ಎದುರಾಳಿಗಳ ಸಿದ್ಧಾಂತಗಳನ್ನು ಬೇರು ಸಹಿತ ಕಿತ್ತೆಸೆದು ಕಾಳಾಮುಖಸಿದ್ಧಾಂತವನ್ನು ಪ್ರಚುರ ಪಡಿಸಿದನು.

ಹಲ್ಲೂರಿನಲ್ಲಿದ್ದ ಕಾಳಾಮುಖಯತಿಗಳ ಒಂದು ಪರಂಪರೆಯು ಸುಮಾರು ಏಳು

---

77. ನೋಡಿ ಮೇಲಕ್ಕೆ, ಪು. 138.
78. ಸಂ. ARMAD 1928, pp. 26-8.
79. ಸಂ. ಮತ್ತು ಅನು. ರೈಸ್, EC, XIV, Ak. 216. ಅಲ್ಲದೆ ನೋಡಿ ARMAD 1911. ಪು. 45.

ತಲೆಮಾರುಗಳಿಗೆ ಚಾಚಿಕೊಂಡಿತ್ತು.[80] ಕೇತಜೀಯನು ಮೊದಲ ಯತಿಯಾಗಿದ್ದನು. ದೇವೇಂದ್ರಶಕ್ತಿಪಂಡಿತನು ಈತನ ಶಿಷ್ಯನಾಗಿದ್ದನು. ದೇವೇಂದ್ರಶಕ್ತಿಗೆ ದೇಕವ್ವೆಯೆಂಬ ಒಬ್ಬ ಸಾಮಾನ್ಯ ಶಿಷ್ಯಳು ಹಾಗೂ ರಾಮಶಕ್ತಿ ಎಂಬ ಅಧಿಕೃತ ಶಿಷ್ಯನಿದ್ದನು. ಕಲ್ಯಾಣಶಕ್ತಿಯು ರಾಮಶಕ್ತಿಯ ಶಿಷ್ಯನು. ವಾಮಶಕ್ತಿಯು ಇವನ ಶಿಷ್ಯನು. ಮಹಾದೇವ ಜೀಯನು ಇವನ ಶಿಷ್ಯನು. ಕ್ರಿ.ಶ.1177ರಲ್ಲಿ ಬದುಕಿದ್ದ ಚಿಕ್ಕ ಕವಿಜೀಯನು ಇವನ ಶಿಷ್ಯನು. ಈ ಯತಿಗಳನ್ನು ಕವಿ ಕಾಳಾಮುಖರೆಂದು ಬಣ್ಣಿಸಲಾಗಿದ್ದು ಅವರು 'ಲಾಕುಲಾಗಮ' ಸಿದ್ಧಾಂತವನ್ನು ಎತ್ತಿ ಹಿಡಿಯುವವರೂ, ರಾಮನಾಥದೇವರ ಪಾದಗಳನ್ನು ಪೂಜಿಸುವವರೂ ಆಗಿದ್ದರೆನ್ನಲಾಗಿದೆ.

ಕಣೆಕಟ್ಟೆ ಗ್ರಾಮದಲ್ಲಿ ದೊರೆತ ಹಲವಾರು ದತ್ತಿ ಶಾಸನಗಳು ಕಾಳಾಮುಖ ಯತಿಗಳಿಗೆ ನೆಲ ಹಾಗೂ ಹಣದ ಕಾಣಿಕೆಗಳನ್ನು ಅರ್ಪಿಸುತ್ತವೆ. ಕ್ರಿ.ಶ.1158ರ ಸುಮಾರಿಗೆ ಕಾಳಾಮುಖ ದೀಕ್ಷಿತ ಹಾಗೂ ಜಗತೇಶ್ವರರೆಂಬ ಇಬ್ಬರು ಕಾಳಾಮುಖ ಯತಿಗಳಿಗೆ ದತ್ತಿಯನ್ನು ನೀಡಲಾದಂತಿದ್ದು. ಅದು ಕಮ್ಮಟೇಶ್ವರ ದೇವರ ಸೇವೆಗಳಿಗಾಗಿ ಇದೆ.[81] 1189ರ ಸುಮಾರಿಗೆ ಗಣ್ಯವ್ಯಕ್ತಿಗಳು ಹಾಗೂ ಅಧಿಕಾರಿಗಳು ತಾವು ಮೊದಲು ಕಣೆಕಟ್ಟೆಯಲ್ಲಿ ಕಟ್ಟಿಸಿದ ಜಗತೇಶ್ವರ ದೇವಾಲಯಕ್ಕೆ ಭೂಮಿಗಳನ್ನು ಹಾಗೂ ಕರಗಳನ್ನು ನೀಡಿದರು.[82] ದಾನವನ್ನು ಪಡೆದವನು ಕಾಳಾಮುಖಯತಿ ನಾಗರಾಶಿಪಂಡಿತನ ಶಿಷ್ಯನಾದ ಶಿವಶಕ್ತಿದೇವನ ಶಿಷ್ಯನಾದ ಕಲ್ಯಾಣಶಕ್ತಿಪಂಡಿತನು. ಶಿವಶಕ್ತಿಯು ಕ್ರಿ.ಶ.1152ರಲ್ಲಿ ನೀಡಲಾದ ಒಂದು ದತ್ತಿಯನ್ನು ಪಡೆದವನಾಗಿದ್ದನು.[83]

ರಾಜನ 'ಸಿರುವೂರ ಗ್ರಾಮದ ಒಂದು ಭಗ್ನ ಹೊಯ್ಸಳ ಶಾಸನವು ಅಲ್ಲಿಯ ಧರ್ಮೇಶ್ವರದೇವಾಲಯಕ್ಕೆ ನೀಡಲಾದ ದತ್ತಿಯನ್ನು ದಾಖಲಿಸುತ್ತದೆ.[84] ಅತ್ರಿಗೋತ್ರದ ರುದ್ರಶಕ್ತಿಯೆಂಬ ಒಬ್ಬ ಕಾಳಾಮುಖಯತಿಯು ಒಂದಿಷ್ಟು ಹಣ ನೀಡಿದನು. ಕಾಳಾಮುಖರ ಗೋತ್ರಗಳ ಉಲ್ಲೇಖಗಳು ತೀರ ವಿರಳ. ರಾಮಪುರದಲ್ಲಿ ದೊರೆತ ಇಮ್ಮಡಿ ವೀರಬಲ್ಲಾಳ ಹೊಯ್ಸಳನ ಒಂದು ಶಾಸನವು ಬಹುಮಟ್ಟಿಗೆ ಕಾಳಾಮುಖರ ಇನ್ನೊಂದು ದೇವಾಲಯಕ್ಕೆ ನೀಡಲಾದ ದತ್ತಿಯನ್ನು ನಮೂದಿಸುತ್ತದೆ.[85] ಈ ದಾನವನ್ನು ಪಡೆದವನು ಲಾಕುಲಾಗಮದ ಅನುಯಾಯಿಯೂ, ಪಟ್ಟಣದ ಮೂಲಸ್ಥಾನ ಶಿವ ದೇವಾಲಯದ ಮುಖ್ಯಸ್ಥನೂ, ಸೋಮರಾಸಿಯ ಮಗನೂ ಆದ ಬಮ್ಮರಾಸಿ.

---

80. ಸಂ. ಮತ್ತು ಅನು. ರೈಸ್, EC, V, Ak. 62.
81. ಅದೇ. Ak. 42.
82. ಅದೇ. Ak. 48.
83. ಅದೇ. Ak. 52.
84. ಸಂ. ARMAD 1940, pp. 143-44.
85. ಸಂ. ARMAD 1937, pp. 135-42.

# ಕೋಲಾರ ಹಾಗೂ ತುಮಕೂರ ಜಿಲ್ಲೆಗಳು

ಮೈಸೂರಿನ ಆಗ್ನೇಯದ ಇವೆರಡು ಜಿಲ್ಲೆಗಳಲ್ಲಿ ದೊರೆತ ಕಾಳಾಮುಖ ಶಾಸನಗಳು ತೀರ ಕಡಿಮೆ. ಆದರೂ ಕೋಲಾರ ಜಿಲ್ಲೆಯ ನಂದಿಬೆಟ್ಟದ ಮೇಲೆ ದೊರೆತ ಎರಡು ದತ್ತಿ ಶಾಸನಗಳು ತುಂಬ ಮಹತ್ವದವು. ಏಕೆಂದರೆ ಈವರೆಗೆ ಕಂಡುಹಿಡಿಯಲಾದ ಕಾಳಾಮುಖ ಶಾಸನಗಳಲ್ಲೆಲ್ಲ ಇವು ತುಂಬ ಪ್ರಾಚೀನವಾದವುಗಳು. ಕ್ರಿ.ಶ.810ರಲ್ಲಿ ಬಾಣ ದಳವಾಯಿ ವಿದ್ಯಾಧರರಾಜನ ರಾಣಿಯಾದ ರತ್ನಾವಲಿಯು ತಾನು ನಂದಿ ಬೆಟ್ಟದ ಮೇಲೆ ಕಟ್ಟಿಸಿದ ಶಿವನ ದೇವಾಲಯಕ್ಕೆಂದು ಒಂದಿಷ್ಟು ನೆಲವನ್ನು ಕೊಟ್ಟಳು. ಈ ನಂದಿಬೆಟ್ಟ ಇಂದಿನ ಹೆಸರಾದ ತಂಪುಸ್ಥಳ.[86] ಈ ಬೆಟ್ಟದ ಮೇಲಿನ ಮಠಾಧೀಶನಾದ ಕಾಳಾಮುಖ್ಯ (ಇದ್ದಂಗೆ) ಗುರು ಕಾಳಶಕ್ತಿಯ ಶಿಷ್ಯನಾದ ಈಶ್ವರದಾಸನು ಪ್ರಾಣಿಮಾತ್ರರಿಗೆಲ್ಲ ದಯಾಪರನು, ಸತ್ಕರ್ಮಗಳಿಗಾಗಿ ತನ್ನನ್ನೇ ಮೀಸಲಾಗಿರಿಸಿದವನು, ವ್ರತ, ಉಪವಾಸ ಹಾಗೂ ನಿಯಮಗಳನ್ನು ಪಾಲಿಸುವವನಾಗಿದ್ದನೆಂದು ಬಣ್ಣಿಸಲಾಗಿದೆ. ಇದಕ್ಕೂ ನಾಲ್ಕು ವರ್ಷಗಳ ಕೆಳಗೆ, ಅಂದರೆ 806ರಲ್ಲಿ ರಾಷ್ಟ್ರಕೂಟ ಅರಸನಾದ ಮುಮ್ಮಡಿ ಗೋವಿಂದನು ಈ ನಂದಿಬೆಟ್ಟದ ಸ್ಥಾನಾಧಿಪತಿಯಾದ ಈ ಈಶ್ವರದಾಸನಿಗೆ ಶಿವದೇವಾಲಯದ ದೀಪ, ಧೂಪಗಳು, ಸುಗಂಧ ದ್ರವ್ಯಗಳು, ಬಲಿ ಹಾಗೂ ಚರುವಿಗಾಗಿ (ಹವಿಸ್ಸು) ಒಂದು ಗ್ರಾಮವನ್ನು ದತ್ತಿ ಕೊಟ್ಟನು.[87]

ಈ ಶಾಸನಗಳು, ಎಂಟನೆಯ ಶತಮಾನದ ಕೊನೆಗೆ ಕೆಲವು ಜನ ಕಾಳಾಮುಖ ಯತಿಗಳಾದರೂ ಕರ್ನಾಟಕದಲ್ಲಿ ನೆಲೆಸಿದ್ದರೆಂಬುದನ್ನು ಸೂಚಿಸುತ್ತದೆ. ಈ ಯತಿಗಳು ಲಕುಲೀಶ ಮತ್ತು ಅವನ ಅನುಯಾಯಿಗಳ ಬೀಡಾದ ಉತ್ತರ ಭಾರತದ ಅದಾವುದೋ ಎಡೆಯಿಂದ ಮೊದಲಿಗೆ ವಲಸೆ ಬಂದಿರಬಹುದು. ಅವರು ಬಂದ ಕಾಲ ನಮಗೆ ಖಚಿತವಾಗಿ ತಿಳಿದಿಲ್ಲ. ಇದಕ್ಕೂ ಮೊದಲು ಕನ್ನಡ ನಾಡಿನಲ್ಲಿ ಕಾಳಾಮುಖಯತಿಗಳ ಮಠಗಳು ಅಸ್ತಿತ್ವದಲ್ಲಿದ್ದುದು, ಮುಂದೆ ಹತ್ತನೆಯ ಹಾಗೂ ಹನ್ನೆರಡನೆಯ ಶತಮಾನಗಳಲ್ಲಿ ಕಾಳಾಮುಖಯತಿಗಳು ಕಾಶ್ಮೀರದಿಂದ ವಲಸೆ ಕೈಕೊಳ್ಳಲು ಒಂದು ಮುಖ್ಯ ಕಾರಣವೆನ್ನಿಸಿರಲು ಸಾಕು.[88]

ಕ್ರಿ.ಶ.810ರ ರತ್ನಾವಲಿಯ ದತ್ತಿಶಾಶನವು ಈ ಕೆಳಗಿನ ಒಂದು ಅಸಾಧಾರಣ ಶಾಪವಾಣಿಯೊಂದಿಗೆ ಮುಕ್ತಾಯ ಹೊಂದುತ್ತದೆ : ' ಇದನ್ನು ನಾಶಪಡಿಸುವವನಿಗೆ ಶ್ರೀಪರ್ವತವನ್ನು ತಲೆ ಕೆಳಕಾಗುವಂತೆ ಉರುಳಿಸಿದ, ಅಲ್ಲಿಯ ಯತಿಗಳ ರುಂಡಗಳನ್ನು ಕಡಿದು ಚೆಲ್ಲಿದ, ಕಂದು ಹಳದಿ ಬಣ್ಣದ ಸಾವಿರಾರು ಆಕಳುಗಳ ಹಾಗೂ ಸಾವಿರಾರು ಜನ

86. ಸಂ. ARMAD 1914, pp. 29-30, 35-37.
87. ಸಂ. ಅದೇ. pp. 30-32, 39-41.
88. ಹಿಂದೆ ನೋಡಿ, pp. 108-109.

ವಾರಣಾಸಿಯ ಬ್ರಾಹ್ಮಣರ ರುಂಡಗಳನ್ನು ಕಡಿದು ಚೆಲ್ಲಿದ ಹಾಗೂ ಜಂಬೂದ್ವೀಪದಲ್ಲಿರುವ ಹಾಗೂ ನಾಲ್ಕು ವೇದಗಳು, ಹದಿನೆಂಟು 'ಪ್ರಮಾಣ ಹಾಗೂ ಸಿದ್ಧಾಂತ'ಗಳಲ್ಲಿ ಪಳಗಿದ ಯತಿಗಳನ್ನು ಹಾಗೂ ಬ್ರಾಹ್ಮಣರನ್ನು ಕೊಲೆಗೈದ ಪಾಪ ತಟ್ಟಲಿ.'[89] ಶ್ರೀಪರ್ವತದ ಬಗೆಗಿನ ಎದ್ದು ಕಾಣುವ ಉಲ್ಲೇಖವು ಕಾಳಾಮುಖರಿಗೆ ಆಗಲೆ ಈ ಸ್ಥಾನವು ಒಂದು ಮಹತ್ವದ ಪವಿತ್ರ ಕೇಂದ್ರವಾಗಿತ್ತೆಂಬುದನ್ನು ನಿದರ್ಶಿಸುತ್ತದೆ. ವೇದಪಾರಂಗತರಾದ ಬ್ರಾಹ್ಮಣರ, ಆಕಳುಗಳ ಹಾಗೂ ವಾರಣಾಸಿ ನಗರದ ಉಲ್ಲೇಖಗಳು ಈ ಯತಿಗಳ ಸಾಂಪ್ರದಾಯಿಕತೆಯನ್ನು ಕೆಲಮಟ್ಟಿಗೆ ತೋರಿಸುತ್ತದೆ.

ತುಮಕೂರು ಜಿಲ್ಲೆಯ ಕರದಾಳು ಎಂಬಲ್ಲಿ ದೊರೆತ ಕ್ರಿ.ಶ.1169ರ ದತ್ತಿಶಾಸನವು ಸೊಬ್ಬೇಶ್ವರ, ಮಾಚೇಶ್ವರ, ಬಮ್ಮೇಶ್ವರ ಹಾಗೂ '..........ಶ್ವರ' ದೇವಾಲಯಗಳಿಗೆ ನೀಡಲಾದ ಕಾಣಿಕೆಗಳನ್ನು ನಮೂದಿಸುತ್ತದೆ.[90] 'ಕಾಳಾಮುಖರಿಗೆ ಚಂದ್ರನಂಥವನು' ಮತ್ತು 'ಶಾರದಾ ದೇವಿಯಿಂದ ವರ ಪಡೆದವ'ನಾದ ಗಂಗರಾಸಿಜೀಯನ ಮಗ ಬಮ್ಮಜೀಯನು ಈ ದಾನವನ್ನು ಸ್ವೀಕರಿಸಿದವನಾಗಿದ್ದಾನೆ.

## ವಿಜಯನಗರದ ಕ್ರಿಯಾಶಕ್ತಿಗಳು

ಒಂದೊಂದು ಯತಿಪರಂಪರೆಯಲ್ಲಿ ಕ್ರಿಯಾಶಕ್ತಿ ಎಂಬ ಬಿರುದು ಇಲ್ಲವೆ ಹೆಸರು ಪಡೆದ ಒಬ್ಬೊಬ್ಬ ಮುಖ್ಯಸ್ಥನು ವಿಜಯನಗರ ಸಾಮ್ರಾಜ್ಯದ ಆರಂಭ ಕಾಲದ ಧಾರ್ಮಿಕಜೀವನದಲ್ಲಿ ತುಂಬ ಮುಖ್ಯಪಾತ್ರವನ್ನು ವಹಿಸಿರುವನು.[91] ಬಹಳಷ್ಟು ಜನ ಕಾಳಾಮುಖ ಹಾಗೂ ಪಾಶುಪತ ಯತಿಗಳು ತಮ್ಮನ್ನು ಈ ಹೆಸರಿನಿಂದ ಕರೆದುಕೊಳ್ಳುತ್ತಿದ್ದರು. ವಿಜಯನಗರದ ಕ್ರಿಯಾಶಕ್ತಿಗಳು ಒಂದಕ್ಕೊಂದು ಸಂಬಂಧಿಸಿದ ಇವೆರಡು ಸಂಪ್ರದಾಯಗಳಲ್ಲಿ ಒಂದಕ್ಕೆ ಸೇರಿದವರಾಗಿದ್ದರೆಂಬಲ್ಲಿ ಯಾವುದೇ ಸಂದೇಹವಿಲ್ಲ. ಪಾಶುಪತ ಕಾಳಾಮುಖರಲ್ಲಿ ಸಾಮಾನ್ಯವಾಗಿ ಕಂಡುಬರುವ 'ಜ್ಞಾನಶಕ್ತಿ' ಹೆಸರಿನಂತೆ 'ಕ್ರಿಯಾಶಕ್ತಿ' ಪದವು ಪಾಶುಪತ ದೇವತಾಶಾಸ್ತ್ರದ ಒಂದು ಮಹತ್ವದ ಪರಿಕಲ್ಪನೆಯನ್ನು ವ್ಯಕ್ತಪಡಿಸುತ್ತದೆ.[92] ಈ ಕ್ರಿಯಾಶಕ್ತಿಗಳಲ್ಲಿ ಒಬ್ಬನು ತನ್ನ ಶಿಷ್ಯನಾದ ಮಾಧವ ಮಂತ್ರಿಯನ್ನು, ಕಾಶ್ಮೀರದಿಂದ

89. ಅನು. ARMAD 1914, ಪು. 36.

90. ಸಂ. ಮತ್ತು ಅನು. ರೈಸ್, EC, XII, Tp[. 91.

91. ಇದರ ವಿವರವಾದ ನಿರೂಪಣೆಯು ARMAD 1941, pp. 168-70 ಮತ್ತು 'Mysore Gazetteer', ಸಂ. ಸಿ. ಎಚ್. ರಾವ, II, Part III, 1442-44, 1474-78, 1650-54 ಗಳಲ್ಲಿ ಕಾಣುತ್ತದೆ.

92. ಇವೆರಡು 'ಶಕ್ತಿ'ಗಳು ಕಾಶ್ಮೀರ ಶೈವ (ತ್ರಿಕ) ಹಾಗೂ ವೀರಶೈವ ಮತಗಳ ದೇವತಾಶಾಸ್ತ್ರಗಳಲ್ಲಿ ಕಂಡು ಬರುವವಾದರೂ ಇವೆರಡರ ಅನುಯಾಯಿಗಳಾರಲ್ಲೂ ಈ ಹೆಸರುಗಳು ಸಾಮಾನ್ಯವಾಗಿರುವಂತೆ ಕಾಣದು.

ಬಂದ ಎಂಟು ಜನ ಬ್ರಾಹ್ಮಣರಿಗೆ ಒಂದು ಗ್ರಾಮವನ್ನು ಕೊಡಲು ಉದ್ಯುಕ್ತನನ್ನಾಗಿ ಮಾಡಿದನೆಂದು ಹೇಳಲಾಗುವ ಸಂಗತಿಯು ಅವನು ಕಾಳಾಮುಖರೊಂದಿಗೆ ಹೊಂದಿದ ಸಂಪರ್ಕವನ್ನು ತೋರಿಸುತ್ತದೆ.[93]

ಏನಿದ್ದರೂ ಇಲ್ಲಿ ಒಂದು ಸಂಗತಿಯನ್ನು ಒಪ್ಪಿಕೊಳ್ಳಬೇಕಿದೆ. ಅದೆಂದರೆ, ಕೆಲವು ಆಕರಗಳು, ಈ ಕ್ರಿಯಾಶಕ್ತಿಗಳ ಹಾಗೂ ಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಶೃಂಗೇರಿಯ ಮಠದ ಅದ್ವೈತ ಗುರುಗಳ ನಡುವಿನ ತೀರ ಹತ್ತಿರದ ನಂಟುಗಳನ್ನು ಧ್ವನಿಸುತ್ತವೆಂಬುದು. ಹೆಸರಾಂತ ವಿದ್ವಾಂಸ ಹಾಗೂ ವಿಜಯನಗರದ ಗುರುವಾಗಿದ್ದ ವಿದ್ಯಾರಣ್ಯನು ಈ ಮಠದ ಒಡೆಯರಲ್ಲಿ ಒಬ್ಬನಾಗಿದ್ದನು. ಸಂಸ್ಕೃತದ ಒಂದು ಕೃತಿ 'ವಿದ್ಯಾರಣ್ಯ ಕಾಲಜ್ಞಾನ'ವು, ಕ್ರಿಯಾಶಕ್ತಿಯು ವಿದ್ಯಾರಣ್ಯರ ಶಿಷ್ಯನಾಗಿದ್ದನೆಂದು ಪ್ರತ್ಯಕ್ಷವಾಗಿ ಸಾರುತ್ತದಲ್ಲದೆ, ಇವರಿಬ್ಬರೂ ವಿಜಯನಗರದ ಮೊದಲ ಹದಿಮೂರು ಜನ ಅರಸರಿಂದ ಗೌರವಿಸಲ್ಪಡುತ್ತಿದ್ದರೆಂದೂ, ಆ ಅರಸರೆಲ್ಲ ವಿರೂಪಾಕ್ಷ ದೇವರ ಆರಾಧಕರಾಗಿದ್ದರೆಂದೂ ಹೇಳುತ್ತದೆ.[94] ಕ್ರಿ.ಶ.1390ರ ಒಂದು ಶಾಸನವು ಇಮ್ಮಡಿ ಹರಿಹರನ ಮಗನಾದ ಇಮ್ಮಡಿ ಬುಕ್ಕನು ಒಂದು ವರ್ಷ ಹಿಂದೆ ತೀರಿಕೊಂಡ ತನ್ನ ಗುರು ಕ್ರಿಯಾಶಕ್ತಿಯ ನೆನಪಿಗಾಗಿ ಕಟ್ಟಿಸಲಾದ ವಿದ್ಯಾಶಂಕರ ದೇವಾಲಯಕ್ಕೆ ನೀಡಿದ ದತ್ತಿಯನ್ನು ದಾಖಲಿಸುವಂತಿದೆ..[95] ವಿದ್ಯಾಶಂಕರಾಚಾರ್ಯ ಎಂಬುದು ಶೃಂಗೇರಿಯಲ್ಲಿ ವಿದ್ಯಾರಣ್ಯರ ಹಿಂದಿನ ತಲೆಮಾರಿನವರಾದ ಭಾರತಿಕೃಷ್ಣತೀರ್ಥರ ಬಿರುದಾಗಿತ್ತು. ಈ ಶಾಸನದ ಇನ್ನೊಂದು ಪಾಠವು ಬಲು ಕೆಟ್ಟ ರೀತಿಯಲ್ಲಿ ಸಂಪಾದಿತವಾಗಿದ್ದು ಅದು, ಇಮ್ಮಡಿ ಬುಕ್ಕನು ಕ್ರಿಯಾಶಕ್ತಿಯ ನೆನಪಿಗಾಗಿ ನೀಡಿದನು ಎನ್ನುವ ಬದಲು ಅವನ ಅಪ್ಪಣೆ ಪಡೆದು ನೀಡಿದನೆಂದು ನಮೂದಿಸಿ ಮುಕ್ತಾಯಗೊಳ್ಳುತ್ತದೆ.[96] ಇಮ್ಮಡಿ ಹರಿಹರನ ಕ್ರಿ.ಶ.1384ರ ದತ್ತಿ ಶಾಸನವು, ಅರಸನು, ವಿದ್ಯಾರಣ್ಯ ಹಾಗೂ ಕ್ರಿಯಾಶಕ್ತಿ ಇವರಿಬ್ಬರ ಬೋಧನೆಗಳನ್ನೂ ಕಿವಿಗೊಟ್ಟು ಆಲಿಸುತ್ತಿದ್ದನೆಂದು ಹೇಳುತ್ತದೆ.[97] 1403ರ ದತ್ತಿಯು ಕ್ರಿಯಾಶಕ್ತಿದೇವರಾಯವೊಡೆಯ ಹಾಗೂ ಶೃಂಗೇರಿ ಮಠದ ಗುರು-ಇವರಿಬ್ಬರಿಗೂ ಭೂ ಕಾಣಿಕೆ ನೀಡಿದುದನ್ನು ದಾಖಲಿಸುತ್ತದೆ.[98]

ಪಾಶುಪತರು ಹಾಗೂ ಕಾಳಾಮುಖರು ಆಧ್ಯಾತ್ಮಿಕವಾಗಿ ದ್ವೈತವಾದಿಗಳಾಗಿದ್ದರು, ಎಂಬ ಕಾರಣದಿಂದಾಗಿ ಅವರು ಅದ್ವೈತ ತತ್ತ್ವಜ್ಞಾನಿಗಳಾದ ಶಂಕರಾಚಾರ್ಯರ ಹಾಗೂ 'ಸರ್ವದರ್ಶನ ಸಂಗ್ರಹ'ದ ಲೇಖಕರಾದ ಸಾಯಣ-ಮಾಧವ ಮೊದಲಾದವರ ಅಪ್ರೀತಿಗೆ

---

93. ಸಂ. ಮತ್ತು ಅನು. ರೈಸ್, EC, VII, Sk. 281.
94. ನೋಡಿ ARMAD 1932, ಪು. 105.
95. ನೋಡಿ ARMAD 1941, ಪು. 169.
96. ನೋಡಿ 'Mysore Gazetteer, II, Part III, 1652.
97. ನೋಡಿ ARMAD 1941, ಪು. 169.
98. ಅದೇ ನೋಡಿ, ಪು. 170.

ಈಡಾಗಿದ್ದರು. ಈ ಎರಡನೆಯ ಯತಿ ಇಲ್ಲವೆ ಅವನ ಸೋದರನ ಮಗನು ವಿದ್ಯಾರಣ್ಯನೆಂದು ಗುರುತಿಸಲ್ಪಡುತ್ತಿದ್ದನು.[99] ಕ್ರಿಯಾಶಕ್ತಿಯು ಒಬ್ಬ ಪಾಶುಪತನಾಗಿದ್ದರೆ ಅವನು ವಿದ್ಯಾರಣ್ಯರ ಶಿಷ್ಯನಾಗಿರಲು ಇಲ್ಲವೆ ಕ್ರಿಯಾಶಕ್ತಿಯ ನೆನಪಿಗಾಗಿ ವಿದ್ಯಾಶಂಕರನ ಒಂದು ದೇವಾಲಯವನ್ನು ಸ್ಥಾಪಿಸಿರಲು ಸಾಧ್ಯವೇ ಇಲ್ಲ. ಅಂದಮಾತ್ರಕ್ಕೆ ಇವೆರಡೂ ಬಣಗಳು ಪರಸ್ಪರರ ಕಡು ವೈರಿಗಳಾಗಿದ್ದರೆಂದು ಭಾವಿಸುವ ಕಾರಣವಿಲ್ಲ. ವಿಜಯನಗರದ ಆರಂಭದ ಕಾಲದಲ್ಲಿ ಹಿಂದೂ ಧರ್ಮದ ಬೇರೆ ಬೇರೆ ಪಂಥಗಳ ನಡುವೆ ಸಾಮಾನ್ಯವಾಗಿ ಸೌಹಾರ್ದದ ನಂಟುಗಳಿದ್ದವು. ಕ್ರಿಯಾಶಕ್ತಿಯೊಬ್ಬನು ಕ್ರಿ.ಶ.1377ರಲ್ಲಿ ವರದರಾಜ (ವಿಷ್ಣು) ದೇವಾಲಯಕ್ಕೆ ನೆಲವನ್ನು ದತ್ತಿ ನೀಡುವ ಮಟ್ಟಿಗೆ ಸಹಿಷ್ಣುವಾಗಿದ್ದನು.[100] ಇಂಥ ಸೌಹಾರ್ದತೆಯು ಕಾಳಾಮುಖ ಹಾಗೂ ವೀರಶೈವ ಸಂಪ್ರದಾಯಗಳ ನಡುವೆ ಎಲ್ಲಕ್ಕೂ ಹೆಚ್ಚಿನ ಮಟ್ಟದಲ್ಲಿದ್ದು, ಎರಡನೆಯದು ನಿಧಾನವಾಗಿ ಮೊದಲಿನದನ್ನು ತನ್ನಲ್ಲಿ ವಿಲೀನಗೊಳಿಸಿಕೊಂಡಿತೆಂದು ಕಾಣುತ್ತದೆ.[101] ಕ್ರಿಯಾಶಕ್ತಿಯತಿಗಳ ಅನುಯಾಯಿಗಳಾದ ಅರಸರನ್ನು ವೀರಶೈವರು ತಮ್ಮವರೆಂದು ಸಾಧಿಸುತ್ತಾರೆ.[102] ಕ್ರಿಯಾಶಕ್ತರು ವೀರಶೈವರಾಗಿರುವ ಸಾಧ್ಯತೆ ಇದೆಯಾದರೂ ನಮಗನ್ನಿಸುವ ಮಟ್ಟಿಗೆ ಅವರನ್ನು ಪಾಶುಪತರು ಇಲ್ಲವೆ ಕಾಳಾಮುಖರೆಂದು ಗುರುತಿಸಲು ಪುರಾವೆಗಳು ಹೆಚ್ಚು ಅನುಕೂಲದ್ದಾಗಿವೆ.

ಕ್ರಿಯಾಶಕ್ತಿ ಶಾಸನಗಳ ಕಾಲವು ಕ್ರಿ.ಶ.1347ರಿಂದ 1431ರವರೆಗೆ ಚಾಚಿದೆ. ಮೂವರು, ಕಡಿಮೆಯೆಂದರೆ ಇಬ್ಬರು, ಆದರೆ ಹೆಚ್ಚೆಂದರೆ ಮೂವರು ಅಥವಾ ನಾಲ್ಕು ಜನ ಒಂದೇ ಹೆಸರಿನ ಯತಿಗಳಿದ್ದುದನ್ನು ಶಾಸನಗಳು ಸೂಚಿಸುತ್ತವೆ. ನಾವು ಆಗಲೆ ಗಮನಿಸಿದಂತೆ ಒಬ್ಬನು 1389ನೆ ಇಸವಿಯಲ್ಲಿ ಮಡಿದಿರಲು ಸಾಕು. ಕಾಶೀವಿಲಾಸ-ಕ್ರಿಯಾಶಕ್ತಿ (1368), ಕ್ರಿಯಾಶಕ್ತ್ಯಾಚಾರ್ಯ(1378), ವಾಣೀವಿಲಾಸ ಕ್ರಿಯಾಶಕ್ತಿ(1379), ಕ್ರಿಯಾಶಕ್ತಿದೇವ (1398, 1399, 1431), ಕ್ರಿಯಾಶಕ್ತಿಗುರು ಮುನೀಶ್ವರ ಮತ್ತು ಕ್ರಿಯಾಶಕ್ತಿದೇವರಾಯ ವೊಡೆಯರ (1403), ಕ್ರಿಯಾಶಕ್ತಿಗುರು (1410), ಮತ್ತು ಕ್ರಿಯಾಶಕ್ತಿ ದೇಶಿಕ (1410) ನನ್ನು ಒಳಗೊಂಡಂತೆ ಹೆಸರಿನಲ್ಲಿ ಹಲವು ಬಗೆಯ ವ್ಯತ್ಯಾಗಳು ಉಂಟಾಗಿವೆ. ಮಾಧವ ಮಂತ್ರಿಯ 'ತಾತ್ಪರ್ಯದೀಪೀಕಾ'ದಲ್ಲಿ ಲೇಖಕನು ಕಾಶಿವಿಲಾಸ ಕ್ರಿಯಾಶಕ್ತಿಯನ್ನು ತನ್ನ ಗುರುವೆಂದು ಮನ್ನಿಸುತ್ತಾನೆ. ಗಂಗಾದೇವಿಯು ಇದೇ ರೀತಿಯಾಗಿ ತನ್ನ 'ಕಂಪರಾಯ ಚರಿತ' ದಲ್ಲೂ ಹೀಗೆಯೇ ಮಾಡಿದ್ದಾಳೆ.

---

99. 'Mysore Gazetteer, II, Part III, 1433-42.
100. ನೋಡಿ ಅದೇ. pp. 1651-53.
101. ನೋಡಿ ಅದೆ. p. 1654., ಮತ್ತು pp. 167-72.
102. ಅದೇ ಪು. 1654.

ಕಾಳಾಮುಖರ ಹಲವು ಯತಿಗಳ ಹಾಗೆಯೇ ಕ್ರಿಯಾಶಕ್ತಿಗೂ ಹಲವಾರು ಶಾಸನಗಳಲ್ಲಿ 'ರಾಜಗುರು' ಬಿರುದನ್ನು ನೀಡಲಾಗಿದೆ.[103] ಕೆಲವುಗಳಲ್ಲಿ ಆತ ಅರಸುಗುವರನಾದ ಮಾರಪ್ಪನ ಮಂತ್ರಿಯಾದ ಮಾಧವನ ಗುರುವಾಗಿ ಕಾಣಿಸಿಕೊಳ್ಳುತ್ತಾನೆ.[104] ಬೇರೆ ಶಾಸನಗಳು ಕ್ರಿಯಾಶಕ್ತಿಯನ್ನು ಇಮ್ಮಡಿ ಹರಿಹರನ, ವಿಠ್ಠಣ್ಣ ಒಡೆಯನ (1403), ಒಂದನೇ ದೇವರಾಯ ಮತ್ತು ಅವನ ಮಗನಾದ ವಿಜಯ ಭೂಪತಿಯ (1410), ಹಾಗೂ ಬಹುಮಟ್ಟಿಗೆ ಇಮ್ಮಡಿ ದೇವರಾಯನ (1429) ಕುಲಗುರು ಇಲ್ಲವೆ ರಾಜಗುರುವೆಂದು ಕೊಂಡಾಡುತ್ತವೆ. ' ವೀರ ಕಂಪರಾಯ ಚರಿತ'ದಲ್ಲಿ ಅವನನ್ನು ಇಮ್ಮಡಿ ಕಂಪನ ಕುಲಗುರು ಎಂದೂ ಕರೆಯಲಾಗಿದೆ.[105] ಕುಲಗುರುವಿನ ಅರ್ಥ ಕುಟುಂಬದ ಬೋಧಕನೆಂದಾದ್ದರಿಂದ ವಿಜಯನಗರದ ಆರಂಭಕಾಲದ ಅರಸರು ಈ ಯತಿಗಳನ್ನು ತುಂಬ ಗೌರವದಿಂದ ಕಾಣುತ್ತಿದ್ದರೆಂದು ಕಾಣುತ್ತದೆ.

ಬಹಳಷ್ಟು ಶಾಸನಗಳು ಕ್ರಿಯಾಶಕ್ತಿಯನ್ನು ಸ್ವಯಂಭೂ ತ್ರ್ಯಂಬಕದೇವ ಸ್ವರೂಪದ ಶಿವನ ಉಪಾಸಕನೆಂದು ಬಣ್ಣಿಸುತ್ತವೆ. ಹೀಗಾಗಿ ಇದು ಈ ಯತಿ ಪರಂಪರೆಯ ಕುಲದೇವತೆಯೆಂದು ತೋರುತ್ತದೆ. 1429ರಲ್ಲಿ ಇಮ್ಮಡಿ ದೇವರಾಯನಿಂದ ಕ್ರಿಯಾಶಕ್ತಿ ಗುರುವಿನ ನಾಯಕತ್ವದಲ್ಲಿ ಕೆಲವು ಜನ ಬ್ರಾಹ್ಮಣರಿಗೆ ಕೋಲಾರ ಜಿಲ್ಲೆಯ ಚೋಳಿಶಟ್ಟಿಪಲ್ಲಿ ಎಂಬಲ್ಲಿ ನೀಡಲಾದ ದತ್ತಿ ಶಾಸನವು ಹೇಳುವಂತೆ ಈ ಯತಿಯು ಕಶ್ಯಪ ಗೋತ್ರದವನಾಗಿದ್ದು ಅವನು ಯಜುರ್ವೇದವನ್ನು ಅನುಸರಿಸುತ್ತಿದ್ದನು.[106] ದತ್ತಿಯನ್ನು ನೀಡಲಾದ ಈ ಗ್ರಾಮಕ್ಕೆ ತ್ರ್ಯಂಬಕಪುರವೆಂದು ಹೆಸರನ್ನು ನೀಡಲಾದ ಕಾರಣ ಈ ಕ್ರಿಯಾಶಕ್ತಿಯು ಇದೇ ಯತಿ ಪರಂಪರೆಯ ಸದಸ್ಯನಾಗಿದ್ದನೆಂಬಲ್ಲಿ ಯಾವ ಸಂದೇಹವೂ ಇಲ್ಲ.

ಈ ಯತಿಗಳ ತ್ರ್ಯಂಬಕ ಭಕ್ತಿಯನ್ನುಳಿದು ಅವರ ಧಾರ್ಮಿಕ ನಂಬಿಕೆಗಳನ್ನು ಕುರಿತು ಹೆಚ್ಚೇನೂ ತಿಳಿದಿಲ್ಲ. ಕ್ರಿ.ಶ.1368ರ ಮಾಧವ ಮಂತ್ರಿಯ ಒಂದು ಶಾಸನವು ಒಂದು ಉತ್ತಮವಾದ ಆಕರವೆನ್ನಿಸಿದೆ. ಇದು ಶಿವಮೊಗ್ಗ ಜಿಲ್ಲೆಯ ಮುಚ್ಚಂಡಿ ಗ್ರಾಮವನ್ನು ಎಂಬತ್ತು ಜನ ಕಾಶ್ಮೀರ ಬ್ರಾಹ್ಮಣರಿಗೆ ಕಾಣಿಕೆ ಕೊಟ್ಟುದನ್ನು ನಮೂದಿಸುತ್ತದೆ.[107] ಈ ಮಂತ್ರಿಯನ್ನು ಕುರಿತ ಸುದೀರ್ಘ ಹೊಗಳಿಕೆಯು ಒತ್ತಿ ಹೇಳುವಂತೆ 'ಗಿರೀಶನ ಅವತಾರವೇ ಮೈದಳೆದುಬಂದಂಥ ಅವನ ಒಡೆಯ ಕಾಶಿವಿಲಾಸ ಕ್ರಿಯಾಶಕ್ತಿಯ ಅಚ್ಚರಿಗೊಳಿಸುವ ಕೃಪೆಯಿಂದಾಗಿ ಅವನು

---

103. ಹಿಂದೆ ನೋಡಿ, ಪು. 123
104. ಮಾದಪನು ಒಂದನೇ ಹರಿಹರ ಹಾಗೂ ಒಂದನೇ ಬುಕ್ಕನ ಸೋದರನಾಗಿದ್ದನು. ಅವನು ವಿಜಯನಗರ ಸಾಮ್ರಾಜ್ಯದ ಪಶ್ಚಿಮ ಭಾಗದಲ್ಲಿದ್ದ ಆರಗ ಎಂಬ ಪ್ರಾಂತವನ್ನು ಆಳುತ್ತಿದ್ದನು.
105. ನೋಡಿ 'Mysore Gazetteer,' II, Part III, 1651-52 ಮತ್ತು ARMAD 1941, pp. 169-70.
106. ಸಂ. ಮತ್ತು ಅನು. ARMAD 1941. pp. 157-70.
107. ಸಂ. ಮತ್ತು ಅನು. ರೈಸ್, EC. VII, Sk. 281.

ಪ್ರಸಿದ್ಧ ಶೈವ (ಶಾಂಭವ) ನೆನಿಸಿದನು. ಇದಲ್ಲದೆ ಅವನು, ' ಪಾಳು ಬಿದ್ದ ಉಪನಿಷತ್ತುಗಳ ದಾರಿಯನ್ನು ಹಸನುಗೊಳಿಸಿ ಸಮತಟ್ಟಾಗಿ ಮಾಡಿದನು.' ಮತ್ತು 'ಶಿವಗುರು ಕಾಶೀವಿಲಾಸ ಕ್ರಿಯಾಶಕ್ತಿಯ ಸಲಹೆಯ ಮೇರೆಗೆ ಅವನು ಶೈವಾಮ್ನಾಯ ವಿಧಾನದಿಂದ ತನ್ನ ಇಷ್ಟಲಿಂಗವಾಗಿ ಮೈದಳೆದು ಬಂದ ದೇವನ ದೇವನಾದ ತ್ರ್ಯಂಬಕನಾಥನನ್ನು ದೈನಂದಿನ ವಿಶೇಷ ಉತ್ಸವಗಳ ಮೂಲಕ ಹಾಗೂ ಹಲವು ವಿಧದ ಧರ್ಮಾಚರಣೆ ಹಾಗೂ ಸೇವೆಗಳ ಮೂಲಕ ಪೂಜಿಸುತ್ತಿದ್ದನು.' ಎಂಬತ್ತು ಜನ ಬ್ರಾಹ್ಮಣರಿಗೆ ನೀಡಲಾದ ದತ್ತಿಯು ಒಂದು ವರ್ಷವಿಡಿ ಸಾಗಿದ 'ಮಹಚ್ಛೈವ' ವ್ರತವನ್ನು ಪೂರ್ತಿಗೊಳಿಸಿದ ನಿಮಿತ್ತವಾಗಿ ಇದ್ದಿತು. ಅವನು 'ಶಿವ ಸಂಧ್ಯಾ'ದ ಸೂಚನೆಗಳನ್ನು ಅನುಸರಿಸಿ ಈ ವ್ರತವನ್ನು ಆರಂಭಿಸಿದ್ದನು. ದುರದೃಷ್ಟದ ಸಂಗತಿಯೆಂದರೆ ಈ ಮಹಾವ್ರತದ ವಿಶಿಷ್ಟ ವಿವರಗಳನ್ನು ಹಾಗೂ ಇತರ ಧಾರ್ಮಿಕ ಆಚರಣೆಗಳನ್ನು ಹಾಗೂ ರೂಢಿಗಳನ್ನು ಎಲ್ಲಿಯೂ ವ್ಯಕ್ತಪಡಿಸಲಾಗಿಲ್ಲ. ಆ 'ಮಹಾಶೈವ ವ್ರತ' ಎಂದರೆ ಕಾಪಾಲಿಕರ 'ಮಹಾವ್ರತ' ಎಂಬುದಾಗಿ ಅರ್ಥಮಾಡಿಕೊಳ್ಳುವಂತಿದ್ದರೂ ಈಗಾಗಲೇ ಹೇಳಲಾದ ಕಾರಣಗಳಿಂದಾಗಿ ನಾವು ಅದನ್ನು ಈ ಬಗೆಯಲ್ಲಿ ಗುರುತಿಸಲು ಅಷ್ಟಾಗಿ ಇಷ್ಟಪಡುತ್ತಿಲ್ಲ.[108] ಈ ಶಾಸನದಲ್ಲಿ ನಮೂದಿತವಾದ ದತ್ತಿಯನ್ನು ಪಡೆದವರು ಕ್ರಿಯಾಶಕ್ತಿಯೊಡನೆ ತುಸುಮಟ್ಟಿಗೆ ಸಂಬಂಧಿಸಿದವರಾಗಿ ಕಾಣುತ್ತಾರೆ. ಏಕೆಂದರೆ,"ತಮ್ಮ ಸದ್ಗುಣ ಹಾಗೂ ತಮ್ಮ ಹುಟ್ಟಿನ ನಾಡಿನಿಂದಾಗಿ (ಕಾಶ್ಮೀರ) ಮೊದಲಿನಿಂದಲೇ ಮಹನೀಯರೆನ್ನಿಸಿದವರು, ' ಚಾರಾಯಣೀಯ ಅತಿಚಾರಣಾಮ್ನಾಯ'ದ ತುತ್ತತುದಿಯ ಬಿಂದುವಿನವರೆಗಿನ ಪ್ರಯಾಣಿಕರು, ಶುದ್ಧ 'ಶಿವಾಮ್ನಾಯ'ದಲ್ಲಿ ನಿಯಮಿಸಿಕೊಡಲಾದ ಧರ್ಮಾಚರಣೆಗಳನ್ನೆಲ್ಲ ದಿನಾಲು ಆಚರಿಸುವವರು ಹಾಗೂ ನಿರ್ದಿಷ್ಟವಾಗಿ ಅಷ್ಟಮೂರ್ತಿಯ ಪೂಜೆಗಾಗಿ ತಮ್ಮನ್ನೇ ಮೀಸಲಾಗಿರಿಸಿದವರು" ಎಂದು ಅವರನ್ನು ಬಣ್ಣಿಸಲಾಗಿದೆ.[109] ಕ್ರಿ.ಶ.1347ರ ಒಂದು ಶಾಸನದಿಂದ ನಾವು ಅರಿತುಕೊಳ್ಳುವುದೇನೆಂದರೆ ಕ್ರಿಯಾಶಕ್ತಿಯ ಶಿಷ್ಯನಾದ ಮಾಧವ ಮಂತ್ರಿಯು ಅರಸುಕುಮಾರನಾದ ಮಾರಪನಿಗೆ 'ಶೈವಾಗಮಸಾರಸಂಗ್ರಹ' ಎಂಬ ಕೃತಿಯ ಸಂಕಲನೆಗೆ ನೆರವಾದನೆಂದು.[110] ಈ ಮಂತ್ರಿಯು ಸ್ಕಂದ ಪುರಾಣದ 'ಸೂತ ಸಂಹಿತಾ' ವನ್ನು ಕುರಿತಾದ 'ಸೂತ ಸಂಹಿತಾ ತಾತ್ಪರ್ಯದೀಪಿಕಾ'ದ ಲೇಖನೂ ಆಗಿದ್ದನು.[111]

## ಆಂಧ್ರಪ್ರದೇಶ ಮತ್ತು ಮದ್ರಾಸ

ಕಾಳಾಮುಖರ ಚಟುವಟಿಕೆಗಳ ಎರಡು ಪ್ರಮುಖ ಕೇಂದ್ರಗಳೆಂದರೆ ಇಂದಿನ ಆಂಧ್ರ

---

108. ಹಿಂದೆ ನೋಡಿ, pp. 81-82.
109. ಅದೇ. 'ಚಾರಾಣೀಯ'ವು 'ಕೃಷ್ಣ ಯಜುರ್ವೇದದ' ಒಂದು ಸಂಪ್ರದಾಯವಾಗಿದ್ದು, ಕ್ರಿಯಾಶಕ್ತಿಯು 1429ರಲ್ಲಿ ಈ ವೇದವನ್ನು ಅನುಸರಿಸುತ್ತಿದ್ದನು.
110. ಸಂ. ಮತ್ತು ಅನು. ರೈಸ್, EC, VIII, Sb. 375.
111. 'Mysore Gazetteer,' II, PArt III, p. 1444.

ಪ್ರದೇಶದ ವಿಜಯವಾಡಾ-ಅಮರಾವತಿ ಹಾಗೂ ಶ್ರೀಪರ್ವತ. ನಾವು ಇವುಗಳನ್ನು ಕುರಿತು ಈಗಾಗಲೇ ಚರ್ಚಿಸಿದ್ದೇವೆ.[112] ಈ ನಾಡಿನಲ್ಲಿ ಇನ್ನೂ ಕೆಲವಾದರೂ ಕಾಳಾಮುಖ ಸ್ಥಾನಗಳು ಇದ್ದಿರಲೇಬೇಕು. ಕ್ರಿ.ಶ.1021ರ ಒಂದು ಶಾಸನವು ಚಿತ್ತೂರ ಜಿಲ್ಲೆಯ ಮೇಲ್ಪಾಡಿಯಲ್ಲಿ ದೊರೆತಿದ್ದು, ಅದು ಆ ಪಟ್ಟಣದ ಕೆಲವು ಕುರುಬರಿಂದ 'ಅರಿಂಜೀಶ್ವರ' ದೇವಾಲಯದ ದೀಪಗಳ ತುಪ್ಪಕ್ಕಾಗಿ ನೀಡಲಾದ ದತ್ತಿಯನ್ನು ನಮೂದಿಸುತ್ತದೆ.[113] ಈ ಮಠದ ದೇವಾಲಯದ ಲಕುಲೀಶ್ವರ ಪಂಡಿತನೆಂಬವನು ಯತಿಯಾಗಿದ್ದನು. ಇವನು ಬಹುಶಃ ಒಬ್ಬ ಕಾಳಾಮುಖನಾಗಿದ್ದನು. ಬಹಳಷ್ಟು ಮಟ್ಟಿಗೆ ಇದೇ ಗುರುವಾಗಿರಬಹುದಾದ ಒಬ್ಬ ಮಹಾವ್ರತಿನ್ ಲಕುಲೀಶ್ವವರ ಪಂಡಿತನನ್ನು ಕುರಿತು ಕ್ರಿ.ಶ.1068-69ರ ಮದ್ರಾಸದ ದಕ್ಷಿಣ ಅರ್ಕಾಟ ಜಿಲ್ಲೆಯ ಜಂಬಾಯಿ ಎಂಬಲ್ಲಿ ದೊರೆತ ಒಂದು ಶಾಸನದಲ್ಲಿ ನಮೂದಿಸಲಾಗಿದೆ.[114]

ಕಾಳಾಮುಖರು ಮದ್ರಾಸ ಪ್ರಾಂತದಲ್ಲಿ ಕರ್ನಾಟಕಕ್ಕಿಂತ ತೀರ ಕಡಿಮೆ ಪ್ರಭಾವಿಗಳಾಗಿದ್ದರೂ ಕಾಳಾಮುಖ ದೇವಾಲಯಗಳು ಚಿಂಗಲ್‌ಪುಟ್, ಉತ್ತರ ಅರ್ಕಾಟ್, ತಂಜಾವೂರು ಹಾಗೂ ತಿರುಚಿರಪಲ್ಲಿ ಜಿಲ್ಲೆಗಳಲ್ಲಿ ಇದ್ದವು. ಕ್ರಿ.ಶ.1127, 1205 ಮತ್ತು 1231ರ ತಮಿಳು ಶಾಸನಗಳು ಚಿಂಗಲ್‌ಪುಟ್ ಜಿಲ್ಲೆಯ ತಿರುವಾನ್ಯಕ್ಕೋಯಿಲ್ ಎಂಬಲ್ಲಿ ಇದ್ದ ತಿರುವಾಲೀಶ್ವರ ದೇವಾಲಯದಲ್ಲಿ ದೊರೆತವುಗಳಾಗಿದ್ದು, ಅವು ಕಾಳಾಮುಖ ಯತಿಗಳಾದ ಶೈಲರಾಸಿ ಪಂಡಿತ ಹಾಗೂ ನಾನರಾಸಿ ಪಂಡಿತರನ್ನು ನಮೂದಿಸುತ್ತವೆ. ಅವರು ದೇವಾಲಯದ ಕಾಣಿಕೆಯನ್ನು (ಭೂಕಂದಾಯ) ನಿಯಂತ್ರಿಸುತ್ತಿದ್ದರು.[115] ಕ್ರಿ.ಶ.926ದ ಒಂದು ತಮಿಳು ಶಾಸನವು ಉತ್ತರ ಆರ್ಕಾಟ್ ಜಿಲ್ಲೆಯ ವೇಡಲ್ ಎಂಬಲ್ಲಿ ದೊರೆತಿದ್ದು, ಅದು ಹಾರೀತ ಗೋತ್ರದ ದಶಪುರಿಯನ್ ಹಾಗೂ 'ಆಪಸ್ತಂಬ ಸೂತ್ರ'ವನ್ನು ಕುರಿತು ನಮೂದಿಸುತ್ತದೆ.[116] ಕ್ರಿ.ಶ.1123ರಲ್ಲಿ ಗೋಮದತ್ತು ಅರುಳಾಳ ಭಟ್ಟನ್ ಎಂಬ ಒಬ್ಬ ಕಾಳಾಮುಖನು ಒಂದಿಷ್ಟು ನೆಲವನ್ನು ತಂಜಾವೂರ ಜಿಲ್ಲೆಯ ಕೋಯಿಲ್ ತೇವರಾಯನ್‌ಪೇಟ್ಟೈ ದೇವಾಲಯಕ್ಕೆ ಮಾರಿದನು.[117]

ತಿರುಚಿರಪಲ್ಲಿ ಜಿಲ್ಲೆಯ ದಕ್ಷಿಣಕ್ಕಿರುವ ಕೊಡುಂಬಾಳೂರದ ಮಹತ್ವದ್ದಾದ ಒಂದು

112. ಹಿಂದೆ ನೋಡಿ, pp. 136-37 ಮತ್ತು 141-43.

113. ಸಂ. ಮತ್ತು ಅನು. E. Hultzsch ಮತ್ತು ಎಚ್. ಕೆ. ಶಾಸ್ತ್ರಿ,. SII, III, no. 18.

114. ನೋಡಿ ಕೆ. ಎ. ಎನ್. ಶಾಸ್ತ್ರಿ, 'The C ō l ā s (1st Edition)', I, 603. ಶಾಸ್ತ್ರಿಗಳು ಅದೇ. II, 493-94ರಲ್ಲಿ ಮದ್ರಾಸಿನ ಕಾಳಾಮುಖರ ಪುರಾವೆಗಳನ್ನು ಸಾರಾಂಶರೂಪಕ್ಕೆ ತಂದಿದ್ದಾರೆ.

115. ನೋಡಿ ಅದನ್ನೇ, II, 623, 702 ಮತ್ತು 739.

116. ನೋಡಿ ಅದನ್ನೇ, I, 420 ಮತ್ತು ರಂಗಾಚಾರ್ಯ, 'Inscriptions -----' II, 1162.

117. ನೋಡಿ, ಕೆ. ಎ. ಎನ್. ಶಾಸ್ತ್ರಿ, 'The C ō l ā s (1st Edition)', II, 61?

ಸಂಸ್ಕೃತ ಶಾಸನವು, ಹತ್ತನೆಯ ಶತಮಾನದ ಮಧ್ಯದ ಸುಮಾರಿಗೆ ಕಾಳಾಮುಖರು ಮದ್ರಾಸಪ್ರಾಂತದ ಹೃದಯವನ್ನೇ ಒಳಹೊಕ್ಕಿದ್ದರೆಂಬುದನ್ನು ತೋರಿಸುತ್ತದೆ.[118] ಕೊಡುಂಬಾಳೂರಿನ ಪ್ರಮುಖನೂ, ಇಮ್ಮಡಿ ಸುಂದರ ಚೋಳ ಪರಾಂತಕನ ಸಮಕಾಲೀನನೂ (957-73) ಆದ ವಿಕ್ರಮಕೇಸರಿ ತನ್ನ ಹಾಗೂ ತನ್ನಿಬ್ಬರು ಅರಸಿಯರ ಹೆಸರುಗಳಿಂದ ಮೂರು ದೇವಾಲಯಗಳನ್ನು (ವಿಮಾನ ತ್ರಯ) ಅಲ್ಲಿ ಕಟ್ಟಿಸಿದನು. ದೇವಾಲಯವನ್ನು ಕಟ್ಟಿಸಿದ ಬಳಿಕ ಅವನು ಮಹೇಶ್ವರದೇವರನ್ನು ಪ್ರತಿಷ್ಠಾಪಿಸಿದನಲ್ಲದೆ ಒಂದು ದೊಡ್ಡ ಮಠವನ್ನು(ಬೃಹನ್‌ಮಠ) ಹಾಗೂ ಅದಕ್ಕಂಟಿಕೊಂಡ ಹನ್ನೊಂದು ಗ್ರಾಮಗಳನ್ನು 'ಕಾಳಾಮುಖಾದಾನ'ದ ಮುಖ್ಯ ಯತಿಯಾದ ಮಲ್ಲಿಕಾರ್ಜುನನಿಗೆ ದತ್ತಿ ನೀಡಿದನು. ವಿಕ್ರಮ ಕೇಸರಿಯು ಅಲ್ಲಿಯ ನಿವಾಸಿಗಳಾದ 50 ಜನ ಅಸಿತವಕ್ತ್ರ ಯತಿಗಳ ಪೋಷಣೆ ಹಾಗೂ ಮೂರು ದೇವಾಲಯಗಳ ದೇವತೆಗಳ ಸೇವೆಗಾಗಿ ನೈವೇದ್ಯ, ಸುಗಂಧ ದ್ರವ್ಯ, ಧೂಪ, ಹೂವು, ದೀಪ ಹಾಗೂ ವೀಳ್ಯದೆಲೆಗಳ ಏರ್ಪಾಡನ್ನು ಕೂಡ ಮಾಡಿದಂತಿದೆ. ಅಸಿತವಕ್ತ್ರ, ಕಪ್ಪು ಮುಖ ಪದ 'ಕಾಳಾಮುಖ'ಕ್ಕೆ ಸಮಾನಾರ್ಥಿಯಾಗಿದೆ. ಇದರಿಂದಾಗಿ 'ಕಾಳಾಮುಖ' ಎನ್ನುವುದಕ್ಕಿಂತ 'ಕಾಳಮುಖ' ಎನ್ನುವುದೇ ಈ ಹೆಸರಿನ ಸಂಸ್ಕೃತದ ಹೆಚ್ಚು ಸೂಕ್ತರೂಪ ಎನ್ನಿಸೀತು. ಈ ಯತಿ ಮಲ್ಲಿಕಾರ್ಜುನನ ಹೆಸರೇ ಶ್ರೀಪರ್ವತದ ದೇವರ ಬಗೆಗಿನ ಇವನ ಭಕ್ತಿಯನ್ನು ಪ್ರತಿಬಿಂಬಿಸುವಂತೆ ಕಾಣುತ್ತದೆ. ಶಾಸನದ ಹೇಳಿಕೆಯಂತೆ ಮಲ್ಲಿಕಾರ್ಜುನನು ಆತ್ರೇಯ ಗೋತ್ರದವನು, ಮಥುರಾ ನಿವಾಸಿ, ವೇದಗಳಲ್ಲಿ ಪಾರಂಗತ್ ಹಾಗೂ ವಿದ್ಯಾರಾಶಿ ಮತ್ತು ತಪೋರಾಸಿಗಳ ಶಿಷ್ಯನಾಗಿದ್ದನು. ಮಥುರಾ ಎಂಬುದು ಉತ್ತರ ಮಥುರಾ ( ಉ.ಪ್ರ. ದಲ್ಲಿರುವ ಆಧುನಿಕ ಮಥುರಾ) ಅಥವಾ ದಕ್ಷಿಣದ ಮಥುರಾ (ಮದ್ರಾಸಿನ ಆಧುನಿಕ ಮದುರಾಯಿ) ಇವೆರಡರಲ್ಲಿ ಒಂದು ಆಗಿರುವ ಸಾಧ್ಯತೆಯಿದೆ. ಎರಡನೆಯದಾಗಿರುವ ಸಾಧ್ಯತೆ ಹೆಚ್ಚು. ಏಕೆಂದರೆ ಇದು ಕೊಡುಂಬಾಲೂರಿನಿಂದ 100 ಮೈಲುಗಳಿಗಿಂತಲೂ ಕಡಿಮೆ ಅಂತರದ ಮೇಲಿದೆ. ಹಾಗೆಯೇ ಮೊದಲನೆಯದೂ ಸಾಧ್ಯ. ಏಕೆಂದರೆ ಬಹಳಷ್ಟು ಜನ ಕಾಳಾಮುಖರು ಇದೇ ಸುಮಾರಿಗೆ ಉತ್ತರದಿಂದ ವಲಸೆ ಬಂದರು.

ರಾಮನಾಥಪುರಮ್ (ರಾಮನಾಡ) ಜಿಲ್ಲೆಯ ಪಳ್ಳಿಮಡಮ್ ಎಂಬಲ್ಲಿ ಹಾಗೂ ಚಿಂಗಲ್‌ಪುಟ್ ಜಿಲ್ಲೆಯ ತಿರುವೊರ್ರಿಯೂರ ಎಂಬಲ್ಲಿ ದೊರೆತ ಶಾಸನಗಳು ಮಹಾವ್ರತಿನ್ ಯತಿಗಳನ್ನು ಕುರಿತು ಹೇಳುತ್ತವೆ. ಇವರು ಕಾಳಾಮುಖರೇ ಆಗಿರುವ ಸಾಧ್ಯತೆ ಇದೆ. ಪಳ್ಳಿಮಡಮ್‌ದಲ್ಲಿ ಸುಂದರಪಾಂಡ್ಯ ಈಶ್ವರ ದೇವಾಲಯದೊಡನೆ ಸಂಬಂಧಿಸಿದ ಮಹಾವ್ರತಿಗಳ ಮಠಕ್ಕೆ ದೀಪಗಳಿಗಾಗಿ ಕೆಲವು ಕುರಿಗಳನ್ನು ಕೊಡಲಾಗಿತ್ತು.[119] ವೀರಪಾಂಡ್ಯನ

118. ಸಂ. ಮತ್ತು ಅನು. ಕೆ. ಎ. ಎಸ್. ಶಾಸ್ತ್ರಿ, 'The Koḍumbālūr Inscriptions of Vikrama Kēsarī' JORM, VII, 1-10.

119. ಸಂ. SII, XIV, no. 88.

ಕಾಲದ ಸುಮಾರಿಗೆ ಈ ದತ್ತಿಯನ್ನು ನೀಡಲಾಗಿದೆ. ಹೀಗಾಗಿ ಇದು ಕೂಡ ಹನ್ನೆರಡನೆಯ ಶತಮಾನದ ಮಧ್ಯದ್ದೆನ್ನಬಹುದು.

ಚೋಳ ರಾಜಾದಿತ್ಯನ ದಂಡನಾಯಕನಾದ ವಳಭನು ಹತ್ತನೆಯ ಶತಮಾನದ ಮಧ್ಯಕ್ಕೆ ತಿರುವೊರ್ರಿಯೂರಿನಲ್ಲಿ ಮಹಾವ್ರತಿನ್ ಮಠವನ್ನು ಸ್ಥಾಪಿಸಿದನು ಇಲ್ಲವೆ ಇದ್ದುದನ್ನು ಅಭಿವೃದ್ಧಿ ಪಡಿಸಿದನು.[120] ಕ್ರಿ.ಶ. 948ದಲ್ಲಿ ರಾಜಾದಿತ್ಯನು ತಕ್ಕೋಲಮ್‌ದ ಕಾಳಗದಲ್ಲಿ ಮಡಿದಾಗ ವಲ್ಲಭನು ಅವನ ಪಕ್ಕದಲ್ಲಿ ಇರಲಿಲ್ಲ; ನಾಚಿಕೆ ಹಾಗೂ ದುಃಖದಿಂದಾಗಿ ಗಂಗಾ ನದಿಗೆ ಸ್ನಾನಕ್ಕೆಂದು ಹೊರಟುಹೋಗಿ ತಾನು ಯತಿಯಾಗಲು ತೀರ್ಮಾನಿಸಿದನು. ಅವನು ದಕ್ಷಿಣಕ್ಕೆ ಹಿಂತಿರುಗಿ ಬಂದು ತಿರುವೊರ್ರಿಯೂರಿನ ಗುರು ನಿರಂಜನರ ಹೆಸರಿನ ಗಡಿಯನ್ನು ಹೊಕ್ಕನು. ಅಲ್ಲಿ ಅವನಿಗೆ ಜ್ಞಾನೋದಯವಾಯಿತು. ಅಲ್ಲದೆ ಅವನು ಮಠದ ರಕ್ಷಣೆಗಾಗಿ ಮಹಾವ್ರತವನ್ನು ಕೈಕೊಳ್ಳಬೇಕೆಂದು ತನ್ನನ್ನೇ ಮುಡಿಪಾಗಿಟ್ಟನು. ಅವನು ಚತುರಾನನಪಂಡಿತನೆಂಬ ಆಧ್ಯಾತ್ಮಿಕ ಹೆಸರು ಇಲ್ಲವೆ ಬಿರುದನ್ನು ಹೊಂದಿದನಲ್ಲದೆ ಕ್ರಿ.ಶ. 959ರಲ್ಲಿ ನರಸಿಂಹಮಂಗಲದ 'ಸಭೆ'ಗೆ ತನ್ನ ಹುಟ್ಟಿನ ನಕ್ಷತ್ರವಾದ ಧನಿಷ್ಠಾದಂದು ಶಿವನ ವಿಶೇಷ ಸೇವೆಗೆಂದು ಒಂದಿಷ್ಟು ಹೊನ್ನವನ್ನು ಕಾಣಿಕೆಯಾಗಿ ನೀಡಿದನು.

ಮಹಾವ್ರತಿನ್‌ರ ಹೆಸರುಗಳನ್ನು ತಿರುವೊರ್ರಿಯೂರಿನ ಶಾಸನಗಳಲ್ಲಿ ಕ್ರಿ.ಶ. 942 ದಷ್ಟು ಹಿಂದೆಯೇ ನಮೂದಿಸಲಾಗಿದೆ.[121] ಯತಿ ಚತುರಾನನನ ಹೆಸರು ಮೊದಲ ಬಾರಿಗೆ 957 ದತ್ತಿ ಶಾಸನದಲ್ಲಿ ನಮೂದಿತವಾಗಿದೆ.[122] ಈ ಮಠ ಇದೇ ಗುರುವಿನ ಇದೇ ಹೆಸರಿನಿಂದ 1172ರ ವರೆಗಾದರೂ ನಡೆಯಿತು.[123] ವಿ. ರಾಘವನ್ನರು ಟಿಪ್ಪಣಿ ಮಾಡುವಂತೆ (EI, XXVII, 300) 'ತಿರುವೊರ್ರಿಯೂರ್ಪುರಾಣ'ವು ಕಾಂಚಿಯ ತೊಂಡೈಮಾಣ್ ಎಂಬುವವನನ್ನು ಕುರಿತು ಹೇಳುತ್ತದೆ. ಈತನು ತಿರುವೊರ್ರಿಯೂರಿನಲ್ಲಿ ಶಿವನ ಒಂದು ದೇವಾಲಯವನ್ನು ಕಟ್ಟಿಸಿ 500 ಶಿವಲಿಂಗಗಳನ್ನು ಸ್ಥಾಪಿಸಿದನಂತೆ. ಇದಲ್ಲದೆ ಇವನು ಗಂಗಾ ತೀರದಿಂದ 500 ಜನ ಬ್ರಾಹ್ಮಣ ಮಹಾವ್ರತರನ್ನು ತನ್ನ ಜೊತೆಗೆ ಕರೆತಂದನು; ಕಾಲಿ ಮತ್ತು ಭೈರವರ ಹಲವಾರು ವಿಗ್ರಹಗಳನ್ನು ಅರ್ಪಿಸಿದನು; ಹಾಗೂ ಮಹಾವ್ರತಿಗಳ ಗುರು ರೂಪದ ಶಿವನ ಒಂದು

---

120. ಮಠದ ಸ್ಥಾಪನೆಯ ಕಥೆಯು ಪಿ. ರಾಘವನ್‌ರಿಂದ (EI, XXVII, 292, 303) ಸಂಪಾದಿತ ಹಾಗೂ ಅನುವಾದಿತವಾದ ಕ್ರಿ. ಶ. 959 ರ ಸಂಸ್ಕೃತ ಹಾಗೂ ತಮಿಳು ಶಾಸನಗಳಲ್ಲಿದೆ. ರಾಘವನ್‌ರ ಮುನ್ನುಡಿಯು ಮಠದ ಪೂರ್ತಿ ಇತಿಹಾಸವನ್ನೇ ಒದಗಿಸುತ್ತದೆ.

121. ನೋಡಿ ಕೆ. ಎ. ಎನ್. ಶಾಸ್ತ್ರಿ, 'The C ō las (1st Edition),' I, 433 ಮತ್ತು ರಂಗಾಚಾರ್ಯ, Inscriptions ----' I, 445.

122. ನೋಡಿ ಕೆ. ಎ. ಎನ್. ಶಾಸ್ತ್ರಿ, 'The C ō las (1st Edition),' I, 433-444.

123. ನೋಡಿ ಸಂ. ಎಚ್. ಕೆ. ಶಾಸ್ತ್ರಿ, SII, V, no. 1358.

ವಿಗ್ರಹವನ್ನು ಅರ್ಪಿಸಿದನು. ಇವುಗಳಲ್ಲಿ ಕೆಲವು ವಿಗ್ರಹಗಳನ್ನು ಇಂದಿಗೂ ಗುರುತಿಸಬಹುದಾಗಿದೆ. ಆದರೆ ಇವುಗಳ ಕಾಲ ಮಾತ್ರ ಉತ್ತರ ಪಲ್ಲವರದು.

## ಕಾಳಾಮುಖರು ಮತ್ತು ವೀರಶೈವರು

ಸಾಕಷ್ಟು ಪ್ರಮಾಣದಲ್ಲಿರುವ ಪರಿಸ್ಥಿತಿಜನ್ಯ ಪುರಾವೆಗಳು ಕಾಳಾಮುಖರು ಹಾಗೂ ವೀರಶೈವರ ನಡುವಣ ಐತಿಹಾಸಿಕ ನಂಟನ್ನು ತೋರಿಸುತ್ತವೆ. ಈ ಸಮಸ್ಯೆಯ ಖಚಿತವಾದ ವಿಶ್ಲೇಷಣೆಗಾಗಿ ಹೊರಗಿನ ಕ್ಷೇತ್ರ ಹಾಗೂ ಗ್ರಂಥಾಲಯಗಳಲ್ಲಿ ವ್ಯಾಪಕ ಸಂಶೋಧನೆ ನಡೆಯಬೇಕಿದೆ. ವಿಶೇಷವಾಗಿ ಹೇಳುವುದಾದರೆ ಕನ್ನಡ ಹಾಗೂ ತೆಲಗಿನಲ್ಲಿ ಬರೆಯಲಾದ ವೀರಶೈವರ ಬೃಹದಾಕಾರದ ಯತಿಗಳ ವಿಪುಲ ಸಾಹಿತ್ಯವನ್ನು ಅರಗಿಸಿಕೊಳ್ಳಬೇಕು. ಇದಲ್ಲದೆ ತುಂಬ ಪರಿಶ್ರಮವಹಿಸಿ ಅದನ್ನು ಈಗಾಗಲೇ ಕೈಲಿದ್ದ ಶಾಸನದ ವಿವರಗಳೊಂದಿಗೆ ತಾಳೆ ನೋಡಬೇಕಾದೀತು. ನಾವು ಮಾತ್ರ ಕಾಳಾಮುಖರನ್ನು ಕುರಿತಾದ ನಮ್ಮ ವಿಚಾರಣೆಯ ಸಂದರ್ಭದಲ್ಲಿ ನಮ್ಮೆದುರು ಬಂದಿರುವ ಇನ್ನೂ ಕೆಲವು ಮಹತ್ವದ ಸುಳಿವುಗಳತ್ತ ಗಮನ ಸೆಳೆಯುವ ಮಟ್ಟಿಗೆ ತೃಪ್ತಿಹೊಂದಲಿರುವೆವು.

ವೀರಶೈವ ಆರಂಭ ಕಾಲದ ಇತಿಹಾಸವು ಆಖ್ಯಾಯಿಕೆಗಳ ಗೊಂದಲದಲ್ಲಿ ಸಿಕ್ಕು ಬಿದ್ದಿದೆ.[124] ಈ ಸಂಪ್ರದ್ಾಯದ ಮೊದಲನೆಯ ಮುಖ್ಯ ನಾಯಕನೆಂದರೆ ಕಳಚೂರಿ ಅರಸನಾದ ಬಿಜ್ಜಳನ (ಇಸವಿ 1145 - 67) ಮಂತ್ರಿಯಾದ ಬಸವನು (ಸಂಸ್ಕೃತದ ವೃಷಭ = ಎತ್ತು / ಹೋರಿ). ವೀರಶೈವ ಪರಂಪರೆಯು ಹೇಳುವುದೇನೆಂದರೆ ಈ ಸಂಪ್ರದಾಯವು ಬಸವ ಪೂರ್ವದಲ್ಲಿದ್ದಿತೆಂದೂ ಅವನೊಬ್ಬ ಸುಧಾರಕನು ಮಾತ್ರವಾಗಿದ್ದನೆಂದೂ ಹೇಳುತ್ತದೆ. ಆಧುನಿಕ ವಿದ್ವಾಂಸರು ಈ ಸಂಗತಿಯನ್ನು ಒಪ್ಪಿಕೊಳ್ಳುವುದಿಲ್ಲ. ಇವರ ಉದ್ದೇಶ ಹಾಗೂ ಇಚ್ಛೆಗಳ ಪ್ರಕಾರ ಬಸವನೇ ಸಂಸ್ಥಾಪಕನೆಂಬಂತೆ ತೋರುತ್ತದೆ. ವೀರಶೈವರ ಅಸ್ತಿತ್ವವನ್ನು ಕುರಿತು ಬಸವನಿಗಿಂತ ಮೊದಲಿನ ಯಾವುದೇ ಶಾಸನಾಧಾರಗಳಿಲ್ಲ. ಇಷ್ಟೇ ಅಲ್ಲದೆ ಬಿಜ್ಜಳನ ತರುವಾಯದ ಎರಡು - ಮೂರು ಶತಮಾನಗಳ ತರುವಾಯದ ವೀರಶೈವ ಚಟುವಟಿಕೆಗಳಿಗೆ ಸಂಬಂಧಿಸಿದ ಶಾಸನಾಧಾರಿತ ಪೂರ್ವವೃತ್ತಾಂತಗಳು ತೀರ ಕಡಿಮೆಯಲ್ಲದೆ, ಅವುಗಳ ನಡುವಿನ ಕಾಲಾಂತರಗಳೂ ಹೆಚ್ಚು. ಅಂದ ಮಾತ್ರಕ್ಕೆ ಈ ಸಂಪ್ರದಾಯಕ್ಕೆ ಪೂರ್ವಚರಿತ್ರೆ ಇಲ್ಲವೆಂದು ಹೇಳಲು ನಿಜವಾಗಿಯೂ ಈ ಮಾತನ್ನು ಆಡುತ್ತಿಲ್ಲ. ಪುರಾವೆಯು ಸೂಚಿಸುವಂತೆ ಇದು

124. ಇಂದಿಗೂ ಬಸವನ ಜೀವನವನ್ನು ಕುರಿತು ಇಂಗ್ಲಿಷ್ ಬಾಷೆಯಲ್ಲಿ ಓದಬಹುದಾದ ಎಲ್ಲಕ್ಕೂ ಚೆನ್ನಾಗಿರುವ ಕಥನವು ಆರ್. ಜಿ. ಭಾಂಡಾರಕರರ 'Early History of the Dekkan' (pp. 101-104) ಆಗಿದೆ. ಅಲ್ಲದೆ ನೋಡಿ ಯಾಝ್ದಾನಿ ಅವರ (ಸಂ.) 'The early History of the Deccan, I, 461-65, ಮತ್ತು 'Mysore Gazetteer,' II, Part II. 873-93.

ಬಸವನನ್ನು ಲ್ಯೂಥರ್‌ನ ಪಾತ್ರದಲ್ಲಿ ಸರಿಹೊಂದಿಸುವ ಕಾಳಾಮುಖ ಚರ್ಚಿನ ಒಂದು ಸುಧಾರಣಾವಾದಿ ಪಂಗಡವೆನ್ನಿಸಿತ್ತು.[125]

ವೀರಶೈವರಿಗೆ ತಮ್ಮ ಆರಂಭದ ಇತಿಹಾಸಕ್ಕಾಗಿ ಇರುವ ಮುಖ್ಯವಾದ ಆಕರಗಳೆಂದರೆ ಕನ್ನಡದ ಎರಡು ಕೃತಿಗಳಾದ ಕ್ರಿ.ಶ.1370ರಲ್ಲಿ ಬರೆಯಲಾದ 'ಬಸವ ಪುರಾಣ'[126] ಹಾಗೂ 1585ರ ಸುಮಾರಿಗೆ ಬರೆಯಲಾದ 'ಚನ್ನ ಬಸವ ಪುರಾಣ'.[127] ಜೈನಕೃತಿಯಾದ ' ಬಿಜ್ಜಳರಾಯ ಚರಿತ'ದಲ್ಲಿ ಬಸವನ ಬಾಳಿನ ತೀರ ಬೇರೆಯದೇ ಆದ ವಿಷಯ ಕಂಡುಬರುತ್ತದೆ. ಬಸವನು ಬಾಗೇವಾಡಿಯ (ವಿಜಾಪೂರ ಜಿಲ್ಲೆ) ಬ್ರಾಹ್ಮಣನಾದ ಮಾದಿರಾಜ ಹಾಗೂ ಅವನ ಮಡದಿ ಮಾದಲಾಂಬಿಕೆಯರ ಮಗ ಎಂಬುದನ್ನು 'ಬಸವ ಪುರಾಣ'ವು ದೃಢವಾಗಿ ಹೇಳುತ್ತದೆ. ಬಸವನು ಬಿಜ್ಜಳನ ಮುಖ್ಯಮಂತ್ರಿಯಾದ ಬಲದೇವನ ಮಗಳನ್ನು ಮದುವೆಯಾಗಿದ್ದನು. ಬಲದೇವನ ಮರಣಾನಂತರ ಇವನನ್ನು ಅವನ ಸ್ಥಾನಕ್ಕೆ ನೇಮಿಸಲಾಯಿತು. ಬಸವನ ಸೋದರಿ ನಾಗಲಾಂಬಿಕೆಗೆ ಚನ್ನಬಸವನೆಂಬ ಒಬ್ಬ ಮಗನಿದ್ದನು. ಬಸವನು ಅಧಿಕಾರಕ್ಕೆ ಬಂದ ಬಳಿಕ ಅವನೂ ಅವನ ಸೋದರಳಿಯನೂ ಹೊಸ ವೀರಶೈವಸಿದ್ಧಾಂತವನ್ನು ಪ್ರಚುರಪಡಿಸಲು ಆರಂಭಿಸಿದರು. ಈ ರೀತಿ ಅವನು ದೊಡ್ಡ ಸಂಖ್ಯೆಯಲ್ಲಿ ಮತಾಂತರ ಹೊಂದಿದವರನ್ನು ಪಡೆದುಕೊಳ್ಳಹತ್ತಿದನು. ಈ ಪ್ರಕ್ರಿಯೆಯಲ್ಲಿ ಅವರು ಜಂಗಮರು ಹಾಗೂ ವೀರಶೈವ ಯತಿಗಳಿಗೆ ಧಾರಾಳವಾಗಿ ಕಾಣಿಕೆಗಳನ್ನು ಕೊಡುತ್ತ ಬಲು ಶೀಘ್ರ ಬಿಜ್ಜಳನ ಬೊಕ್ಕಸವನ್ನು ಬರಿದುಮಾಡಿದರು. ಹೀಗಾಗಿ ಅರಸನ ವಿಶ್ವಾಸವನ್ನು ಕಳೆದುಕೊಂಡರು. ಅವನು ಬಸವನನ್ನು ಶಿಕ್ಷಿಸಲು ತೀರ್ಮಾನಿಸಿದನು. ಆದರೆ ಅದಕ್ಕೆ ಮುನ್ನವೇ ಬಸವನು ಪಲಾಯನ ಗೈದನು. ಅರಸನು ಅವನನ್ನು ಸೆರೆ ಹಿಡಿಯಲು ಹೊರಟನು. ಆದರೆ ಬಸವನು ತನ್ನ ಅಸಂಖ್ಯರಾದ ಅನುಯಾಯಿಗಳನ್ನು ಒಂದುಗೂಡಿಸಿ ಅರಸನನ್ನು ಕಾಳಗದಲ್ಲಿ ಸೋಲಿಸಿದನು. ಆ ಮೇಲೆ ಅರಸನು ಬಸವನನ್ನು ಅವನ ಮೂಲ ಅಧಿಕಾರ ಸ್ಥಾನಕ್ಕೆ ತಂದನು. ಆದರೆ ಅವರೀರ್ವರ ನಂಟು ಅದೆಂದಿಗೂ ಮೊದಲಿನಂತಾಗಲೇಯಿಲ್ಲ. ಮುಂದೆ ಬಸವನು

125. ಎಸ್. ಸಿ. ನಂದಿಮಠರು ತಮ್ಮ 'A Handbook of Virasaivism' (ಪು. 9)ರಲ್ಲಿ, ಹೊಲಿಯ ವೀರಶೈವ ಮಠವು ಒಂದು ಮಹತ್ವದ ಮಠವೆಂದು, ಕಾಳಾಮುಖರ ಮಠಗಳು ವೀರಶೈವ ಮಠಗಳಾಗಿ ಪರಿವರ್ತನೆ ಹೊಂದುವ ಇಂಥ ಪ್ರಕ್ರಿಯೆಯು ಬೇರೆಡೆಗಳಲ್ಲಿ ನಡೆದಿರಬಹುದೆಂದು ಹೀಗೆ ನಿರ್ಣಯಿಸುತ್ತಾರೆ : 'ನಿಧಾನವಾಗಿ ಹಾಗೂ ತಮಗರಿವಿಲ್ಲದೆಯೇ ಅವು ವೀರಶೈವ ಮತದಲ್ಲಿ ಸೇರಿಹೋದವು ಎಂಬುದಾಗಿ ತತ್ಕಾಲಿಕ ತೀರ್ಮಾನಕ್ಕೆ ಬರುತ್ತಾರೆ. ಬಸವನ ಮತ್ತು ಪ್ರಾಚೀನ ವೀರಶೈವರ ಮುಂದಾಳತ್ವದಲ್ಲಿ ಶೈವ ಪುನರುತ್ಥಾನವು 'ಈ ಬಲಗಮಿ [ಬಳ್ಳಿಗಾವೆ]ಯ ಪಾಶುಪತ (ಕಾಳಾಮುಖರಿಗಾಗಿ, ಮೂಲದಲ್ಲಿದ್ದಂತೆ) ಶೈವಗುರುಗಳ ಕಾರ್ಯದ ಪರಿಣಾಮವಾಗಿ ಜರುಗಿದಂತೆ ಕಾಣುತ್ತದೆ' ಎಂದು 'The Mysore Gazetteer' (II, Part II, 885) ಅಭಿಪ್ರಾಯ ಪಡುತ್ತದೆ.

126. ಅನು. G. Würth, JBBRAS, VIII (1865-66), 65-97.

127. ಅನು. G. Würth, JBBRAS, VIII, 98-221.

ತನ್ನ ಅನುಯಾಯಿಯೊಬ್ಬನನ್ನು ಅರಸನ ಕೊಲೆಗಾಗಿ ಗೊತ್ತುಪಡಿಸಿದನು. ಅರಸನ ಕೊಲೆಯಾದ ಕೂಡಲೇ ಬಸವನು ಮಲಪ್ರಭಾ ಹಾಗೂ ಕೃಷ್ಣಾ ಹೊಳೆಗಳ ಸಂಗಮದ ಮೇಲಿದ್ದ ಸಂಗಮೇಶ್ವರನ ದೇವಾಲಯಕ್ಕೆ ತೆರಳಿ ದೇವತ್ವದಲ್ಲಿ ಐಕ್ಯನಾದನು.

ಜೈನ ಕೃತಿಯ ಹೆಚ್ಚಿನ ಭಾಗವೆಲ್ಲ ಹೀಗೆಯೇ ಇದೆ. ಆದರೆ ಅದರಲ್ಲಿ ಹಲವಾರು ಮಹತ್ವದ ವ್ಯತ್ಯಾಸಗಳಿವೆ. ಉದಾ : ರಾಜಹತ್ಯೆಯ ತರುವಾಯ ಕೊಲೆಗೀಡಾದ ಅರಸನ ಮಗನು ಬಸವನನ್ನು ಮಲಬಾರ ತೀರದ ಉಳವಿಯವರೆಗೆ ಬೆನ್ನಟ್ಟಲಾಗಿ ಆ ಮಾಜಿ ಮಂತ್ರಿಯು (ಬಸವಣ್ಣ) ಒಂದು ಬಾವಿಗೆ ಹಾರಿಕೊಂಡು ತಲೆತಗ್ಗಿಸುವಂತಹ ಕೃತಿಯಾದ ಆತ್ಮಹತ್ಯೆ ಮಾಡಿಕೊಂಡನು. ತರುವಾಯದಲ್ಲಿ ಬಸವನ ಸೋದರಳಿಯ ಚೆನ್ನಬಸವನು ಹೊಸ ಅರಸನೊಂದಿಗೆ ಹೊಂದಿಕೊಂಡನು, ಮತ್ತು ವೀರಶೈವರಿಗೆ ನಾಯಕನಾದನು.

ಇವೆರಡೂ ಆಕರಗಳು ಸಾಕಷ್ಟು ಮುಂದಿನ ಕಾಲದವಾಗಿದ್ದು, ಈ ಕಥೆಯನ್ನು ಸಮರ್ಥಿಸಲು ಶಾಸನಗಳ ಬೆಂಬಲವಿಲ್ಲ. ಈ ಕಾರಣದಿಂದಾಗಿ ಜೆ. ಎಫ್. ಫ್ಲೀಟ್ ಅವರು ಇದನ್ನು ನಿರ್ಲಕ್ಷ್ಯಿಸುವುದೇ ಸರಿ, ಎಂದುಕೊಂಡರು (EI, V, 242-45). ಅದನ್ನು ತಳ್ಳಿ ಹಾಕುವಲ್ಲಿ ಫ್ಲೀಟರು ಬಲು ದೂರ ಸರಿದಿದ್ದಾರೆ, ಎಂದು ಕೆ. ಎ. ಎನ್. ಶಾಸ್ತ್ರಿಯವರು ಅಭಿಪ್ರಾಯಪಡುತ್ತಾರೆ. ಇದಕ್ಕಾಗಿ ಅವರು ಮುಂದಿನ ಕಾಲದಲ್ಲಿ ಹುಟ್ಟಿದ ಯಾದವ ಕನ್ನರನ ಕಾಲದ (ಕ್ರಿ.ಶ.1260) ಅರ್ಜುನವಾಡ ಶಾಸನದ ವಂಶಪರಂಪರೆಯನ್ನು ಉದ್ಧರಿಸಿತ್ತಾರೆ. ಈ ಶಾಸನವು " ಬಸವ ಇಲ್ಲವೆ ಸಂಗನಬಸವನನ್ನು' ತರ್ದವಾಡಿ ಮಧ್ಯಗ್ರಾಮ ಬಾಗವಾಡಿ ಪುರವರಾಧೀಶ್ವರ'ನಾದ ಮಾದಿರಾಜನ ಕಿರಿಯ ಮಗನೆಂದು " ನಮೂದಿಸುತ್ತದೆ.[128] ಇವರಿಬ್ಬರಲ್ಲಿ ಒಬ್ಬನು ವೀರಶೈವನಾಗಿದ್ದು, ಇನ್ನೊಬ್ಬನು ಅವನ ತಂದೆಯಾಗಿರಬೇಕೆಂದು ಶಾಸ್ತ್ರಿಗಳು ನಂಬುತ್ತಾರೆ. ಹೀಗೆ ಗುರುತಿಸುವುದು ಮೇಲು ತೋರಿಕೆಗೆ ಪೂರ್ತಿ ನಿಜವೆಂದು ಕಂಡರೂ ಆಖ್ಯಾಯಿಕೆಗಳಿಂದ ಕೂಡಿದ ಈ ಚರಿತ್ರೆಯಾಗಲಿ ಅಥವಾ ಬಸವನು ಬಿಜ್ಜಳನ ಮಂತ್ರಿಯಾಗಿದ್ದ ಬಗೆಗಾಗಲಿ ಶಾಸನದ ಯಾವುದೇ ರುಜುವಾತು ಇಂದಿಗೂ ದೊರೆತಿಲ್ಲ.

ಧಾರವಾಡ ಜಿಲ್ಲೆಯ ಅಬ್ಬಲೂರಿನ ಸೋಮನಾಥ ದೇವಾಲಯದಲ್ಲಿ ದೊರೆತ ಕ್ರಿ.ಶ.1200ರ ಸುಮಾರಿನ ಒಂದು ಶಾಸನವು 'ಚನ್ನ ಬಸವ ಪುರಾಣ'ದಲ್ಲಿ[130] ವೀರಶೈವ

128. ಯಾಝ್ದಾನಿಯವರ (ಸಂ.), 'The Early History---- ' I, 463.

129. ಫ್ಲೀಟ್, EI, V, no. E.

130. ಅನು. G. Wü rth, JBBRAS, VIII, 198. ಈ ಕೃತಿಯಲ್ಲಿ ಬರುವ 'ಏಕಾಂತ ರಾಮಯ್ಯನ ಕಥೆಯು ಶಾಸನಗಳ ಕಥನಕ್ಕಿಂತ ತುಂಬ ಭಿನ್ನವಾಗಿದ್ದರೂ ಅವನು ಒಬ್ಬನೇ ಯತಿಯೆಂಬುವಂತೆ ಅಲ್ಲಿಯ ಮುಖ್ಯ ಸಂಗತಿಗಳೆಲ್ಲವೂ ಒಂದನ್ನೊಂದು ಹೋಲುತ್ತವೆ. 'ಪುರಾಣ'ದ ಹೇಳಿಕೆಯಂತೆ, 'ಏಕಾಂತ ರಾಮಯ್ಯ'ನು ಬಸವನ ಕೀರ್ತಿಯನ್ನು ಆಲಿಸಿ ಅವನನ್ನು ಕಾಣಲೆಂದು ಕಲ್ಯಾಣಕ್ಕೆ ಹೋದನು. ಅಂದರೆ ಏಕಾಂತದ ರಾಮಯ್ಯನು ತುಂಬ ಸುವಿಖ್ಯಾತನಾದ ತರುವಾಯ ವೀರಶೈವನಾದನೆಂದು ಸೂಚಿತವಾಗುತ್ತದೆ. ಅಬ್ಬಲೂರಿನ ಈ ಶಾಸನವು, ಅವನು ಈ ಸಂಪ್ರದಾಯಕ್ಕೆ ಸೇರಿದವನಾಗಿದ್ದನೆಂಬ ಯಾವುದೇ ವಿಶಿಷ್ಟವಾದ ಸೂಚನೆಯನ್ನು ನೀಡುತ್ತಿಲ್ಲ.

ಯತಿಯೆಂದು ಬಣ್ಣಿಸಲಾದ ಏಕಾಂತದ ರಾಮಯ್ಯನೆಂಬ[129] ಒಬ್ಬ ಶೈವಯತಿಯನ್ನು ಕುರಿತು ಒಳ್ಳೆಯ ಪುರಾವೆಯನ್ನು ಒದಗಿಸುತ್ತದೆ. ಆ ಪಟ್ಟಣದಲ್ಲಿ ಅವನ ಹಾಗೂ ಜೈನರ ನಡುವೆ ಒಂದು ದೊಡ್ಡ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಅವನು ಶಿವನಿಗೆ ತನ್ನ ತಲೆಯನ್ನು ಅರ್ಪಿಸುವ ಮೂಲಕ ಅವರನ್ನು ಸೋಲಿಸಿದನು. ಏಳು ದಿನಗಳ ತರುವಾಯ ಅದನ್ನು ಮರಳಿ ಪಡೆದನು. ಇಷ್ಟಾಗಿಯೂ ಸೋತವರು ತಮ್ಮ ಜಿನನ ಪ್ರತಿಮೆಯನ್ನು ಅಲ್ಲಿಂದ ಕಿತ್ತು ಅದರ ಸ್ಥಾನದಲ್ಲಿ ಶಿವನ ಪ್ರತಿಮೆಯನ್ನು ಸ್ಥಾಪಿಸಲು ಒಪ್ಪಲಿಲ್ಲ. ಆಗ ಏಕಾಂತದ ರಾಮಯ್ಯನು ಅವರ ಜಿನಮಂದಿರವನ್ನು ಕೆಡವಿ ಅದರ ಸ್ಥಾನದಲ್ಲಿ ವೀರ ಸೋಮನಾಥನ ದೊಡ್ಡದಾದ ದೇವಾಲಯವನ್ನು ಕಟ್ಟಿಸಿದನು. ಸೇಡು ತೀರಿಸಿಕೊಳ್ಳಲೆಂದು ಜೈನರು ಬಿಜ್ಜಳನನ್ನು ಮೊರೆಹೊಕ್ಕರು. ಹೆಚ್ಚಿನ ಪಣವೊಡ್ಡಿ ಇನ್ನೊಮ್ಮೆ ಸ್ಪರ್ಧೆಗೆ ಇಳಿಯಬೇಕೆಂಬ ಅವನ ಸಲಹೆಯನ್ನು ಅವರು ತಳ್ಳಿ ಹಾಕಿದರು. ಹೀಗಾಗಿ ಬಿಜ್ಜಳನು ಅವರ ಮನವಿಯನ್ನು ತಳ್ಳಿ ಹಾಕಿ 'ಸಾರ್ವಜನಿಕ ಸಭೆಯೊಂದರಲ್ಲಿ ಏಕಾಂತದ ರಾಮಯ್ಯನಿಗೆ ಒಂದು ಜಯಪತ್ರವನ್ನು ದಯಪಾಲಿಸಿದನು'.

ಈ ಶಾಸನ, ವೀರಶೈವರು ಹಾಗೂ ಕಾಳಾಮುಖರ ನಡುವೆ ಇದ್ದಿರಬಹುದಾದ ನಂಟುಗಳನ್ನು ಕುರಿತು ತುಂಬ ಮುಖ್ಯವಾದ ಸುಳಿವನ್ನು ಒದಗಿಸುತ್ತದೆ. ಇದರಲ್ಲಿ, ಏಕಾಂತದ ರಾಮಯ್ಯನು ಅಬ್ಬಲೂರಿನ ಬ್ರಹ್ಮೇಶ್ವರ ದೇವಾಲಯದಲ್ಲಿ ದೇವರ ಸ್ತುತಿಮಾಡಿದುದನ್ನು ಹೇಳಲಾಗಿದೆ. ನಾವು ಈಗಾಗಲೇ ಕಂಡಂತೆ[131] ಈ ದೇವಾಲಯವು ಮೂವರ ಕೋಣೆಯ ಸಂತತಿಯವರಾದ ಕಾಳಾಮುಖ ಯತಿಗಳ ನೇತೃತ್ವದಲ್ಲಿ ಕ್ರಿ.ಶ. 1144ರ ವರೆಗಾದರೂ ಇತ್ತು. ಕೆಲವು ವರ್ಷಗಳ ತರುವಾಯ ಏಕಾಂತದ ರಾಮಯ್ಯನು ಈ ದೇವಾಲಯಕ್ಕೆ ಭೇಟಿಯಿತ್ತಾಗ ಅದು ಕಾಳಾಮುಖರ ಹಿಡಿತದಲ್ಲಿರಲಿಲ್ಲ ಎಂದು ಭಾವಿಸಲು ಯಾವುದೇ ಕಾರಣವಿಲ್ಲ. ಈ ಪುರಾವೆಯಿಂದಾಗಿ ಏಕಾಂತದ ರಾಮಯ್ಯ ಹಾಗೂ ಈ ಕಾಳಾಮುಖ ಯತಿಗಳು ಒಳ್ಳೆಯ ಸೌಹಾರ್ದಪೂರ್ಣವಾದ ನಂಟುಗಳನ್ನು ಹೊಂದಿದ್ದರು, ಎನ್ನಬಹುದಾಗಿದೆ. ಹೀಗೆ ಸ್ತುತಿ ಮಾಡುವ ಕಾಲಕ್ಕೆ ಏಕಾಂತದ ರಾಮಯ್ಯನೂ ಕೂಡ ಕಾಳಾಮುಖ ಸಂಪ್ರದಾಯದವನೇ ಆಗಿರುವ ಸಾಧ್ಯತೆಯೂ ಇದೆ.[132] ಇಂದು, 'ಬ್ರಹ್ಮೇಶ್ವರನ' ದೇವಾಲಯವನ್ನು 'ಬಸವೇಶ್ವರ' ದೇವಾಲಯವೆಂದು ಗುರುತಿಸಲಾಗುತ್ತಿದ್ದು ಅದೊಂದು ವೀರಶೈವ ದೇವಾಲಯವಾಗಿದೆ.[133]

ಹಿಂದಿನ ಕಾಲದ ಹಲವಾರು ದೇವಾಲಯಗಳು ಇಂದು ವೀರಶೈವರಿಂದ ನಿಯಂತ್ರಿಸಲ್ಪಟ್ಟಿವೆ. ಖಚಿತವಾಗಿ ಈ ಸಂಖ್ಯೆ ಹಾಗೂ ಶೇಕಡಾವಾರುಗಳು ತಿಳಿದಿಲ್ಲ.[134]

131. ಮೇಲಕ್ಕೆ ನೋಡಿ, ಪು. 118.

132. ಮೇಲಕ್ಕೆ ನೋಡಿ, ಟಿಪ್ಪಣಿ 130.

133. ನೋಡಿ, ಫ್ಲೀಟ್, EI, V. 213.

134. ಈ ಮಾಹಿತಿಯನ್ನು ಶಿಸ್ತುಬದ್ಧವಾಗಿ ಕಲೆಹಾಕುವುದು ಒಂದು ಕುತೂಹಲಕರ ಸಂಗತಿ ಎನ್ನಿಸೀತು.

ಆದರೆ ಅವುಗಳಲ್ಲಿ ಬಳ್ಳಿಗಾವೆಯ ಕೇದಾರೇಶ್ವರ ದೇವಾಲಯ ಗದಗಿನ (ಧಾರವಾಡ ಜಿಲ್ಲೆ) ತ್ರಿಕೂಟೇಶ್ವರ ದೇವಾಲಯ ಹಾಗೂ (ಬೆಳಗಾವಿ ಜಿಲ್ಲೆಯ) ಹೂಲಿಯಲ್ಲಿರುವ ಕಾಳಾಮುಖರ ದೇವಾಲಯಗಳು ಸೇರಿಕೊಂಡಿವೆ. ಮೊದಲು ಶಕ್ತಿ ಪರಿಷತ್ತಿನ ಪೀಠವಾಗಿದ್ದ ಬಳ್ಳಿಗಾವೆಯು ಇಂದು ವೀರಶೈವ ಚಟುವಟಿಕೆಗಳ ಕೇಂದ್ರವೆನ್ನಿಸಿದೆ. ಸುತ್ತಲ ನಾಡಿನ ವೀರಶೈವ ಯಾತ್ರಿಕರು ಇಲ್ಲಿಗೆ ಬರುತ್ತಾರೆ.[135] ವೀರಶೈವರ ಎಲ್ಲಕ್ಕೂ ಹೆಚ್ಚು ಪವಿತ್ರವಾದ ಐದು ಮಠಗಳಲ್ಲಿ ಒಂದು ಕರ್ನೂಲ ಜಿಲ್ಲೆಯ ಶ್ರೀಪರ್ವತದ ಮೇಲಿದೆ, ಇನ್ನೊಂದು ಹಿಮಾಲಯದ ಕೇದಾರನಾಥದಲ್ಲಿದೆ. ಇವೆರಡೂ ಕ್ಷೇತ್ರಗಳು ಕಾಳಾಮುಖ ಸಂಘಟನೆ ಹಾಗೂ ಸಂಪರ್ಕಗಳ ಮುಖ್ಯ ತಾಣಗಳು. ಇದಕ್ಕೂ ಹೆಚ್ಚು ಗಮನಾರ್ಹವಾದ ಸಂಗತಿಯೆಂದರೆ, ಹಿಂದಕ್ಕೆ ಕಾಳಾಮುಖರ ವರ್ಚಸ್ಸು ಇಲ್ಲದೆಡೆಗಳಲ್ಲಿಯೂ ವೀರಶೈವರು ವಿರಳ ಸಂಖ್ಯೆಯಲ್ಲಿರುವುದು ಒಂದು ವಾಸ್ತವತೆ ಎನ್ನಿಸಿದೆ.

ಕಾಳಾಮುಖ ಹಾಗೂ ವೀರಶೈವಗಳ ಸಂಪ್ರದಾಯ ಹಾಗೂ ತತ್ವವಿಚಾರಗಳಲ್ಲಿ ನಾವು ಕಾಣಬಹುದಾದ ಸಾಮ್ಯಗಳು ತೀರ ಕಡಿಮೆ. ಇದರಲ್ಲಿ ಅಚ್ಚರಿಯೇನೂ ಇಲ್ಲ. ಏಕೆಂದರೆ ವೀರಶೈವರ ಮೊದಲಿಗರ ಒಂದು ಸ್ಥೂಲ ಇತಿಹಾಸದ ರೂಪುರೇಖೆಗಳನ್ನುಳಿದು ಅವರ ಬಗೆಗೆ ಹೆಚ್ಚೇನೂ ತಿಳಿದಿಲ್ಲ. ಕಾಳಾಮುಖರು ಪಾಶುಪತರ ಸಿದ್ಧಾಂತ ಹಾಗೂ ಮತಾಚರಣೆಗಳನ್ನು ಅನುಸರಿಸುತ್ತಿದ್ದರೆಂಬ ಮಾಹಿತಿಯನ್ನುಳಿದು ನಮಗೆ ಹೆಚ್ಚೇನೂ ತಿಳಿದಿಲ್ಲ.

ಮುಂದಿನ ಕಾಲದ ವೀರಶೈವ ತತ್ವವಿಚಾರಗಳ ಗುಣಲಕ್ಷಣವೆನಿಸಿದ 'ಷಟ್‌ಸ್ಥಲ ಸಿದ್ಧಾಂತ'ವು ಆರಂಭದ ವಚನಗಳಲ್ಲಿ ಉಲ್ಲಿಖಿತವಾಗಿಲ್ಲ. ಎಸ್.ಎನ್.ದಾಸಗುಪ್ತರ ಹೇಳಿಕೆಯಂತೆ ಬಸವನ ವಚನಗಳಲ್ಲಿ ತತ್ವ ವಿಚಾರಗಳ ಅಸ್ತಿತ್ವವು ಅಲಕ್ಷ್ಯಿಸಬಹುದಾದಷ್ಟು ತೀರ ಕಡಿಮೆ.[136] ವೀರಶೈವ ತತ್ವ ವಿಚಾರಗಳನ್ನು ಕುರಿತು ಹದಿಮೂರನೆಯ ಶತಮಾನದಲ್ಲಿ ಬರೆಯಲಾದ ರೇವಣಾರ್ಯನ 'ಸಿದ್ಧಾಂತ ಶಿಖಾಮಣಿ'ಯು ಕಾಳಾಮುಖ ಇಲ್ಲವೆ ಪಾಶುಪತರೊಂದಿಗೆ ಕೆಲವು ಹೋಲಿಕೆಗಳನ್ನು ಹೊಂದಿದೆ. ಶಿವಬ್ರಹ್ಮನು ಯಾವುದೇ ಬಗೆಯ ಆಕಾರ ಇಲ್ಲವೆ ವಿಶೇಷ ಲಕ್ಷಣಗಳಿಂದ ಕೂಡಿದವನಲ್ಲ, ಎಂದು ಈ ಕೃತಿಯು ಹೇಳುತ್ತದೆ. ಆದರೂ ಅವನಿಗೆ ಒಂದು ಕೊಡುಗೆಯಾಗಿ ಬಂದ ಅವನ ಇಚ್ಛಾಶಕ್ತಿಯು ಈ ವಿಶ್ವವನ್ನು ನಿರ್ಮಿಸುತ್ತದೆ, ನಾಶಪಡಿಸುತ್ತದೆ.[137] ಹೊಂಬಳದ ಕಾಳಾಮುಖ ಯತಿಯಾದ ಬೊಂತೆಯ ಮುನಿಯ ದೃಷ್ಟಿಕೋನವಾದ 'ಕರ್ತೃ'ವು ಆಕಾರ ಹೀನನೆಂಬುದಕ್ಕೆ ಇದು ಹೋಲುವಂತಿದೆ.[138] ಕರ್ಮಫಲವನ್ನು ಹಂಚುವ ಕೆಲಸವು ಸ್ವಯಂ ಅಧಿಕಾರದಿಂದ ತನ್ನಷ್ಟಕ್ಕೆ ತಾನೇ ಸಾಗದೆ, ಅದು ದೇವನಿಂದ ನಿಯಂತ್ರಿತವಾದುದೆಂಬ ವಿಚಾರವನ್ನು ರೇವಣಾರ್ಯನು ಪಾಶುಪತರಿಂದ

135. ಮಾರ್ಚ್ 1966ರಲ್ಲಿ ಬಳ್ಳಿಗಾವೆಯಲ್ಲಿ ಸ್ಥಾನಿಕವಾಗಿ ಕಲೆ ಹಾಕಿದ ಮಾಹಿತಿ.

136. 'History of Indian Philosophy,' V. 44.

137. ಅದೇ. pp. 48-49.

138. ಮೇಲಕ್ಕೆ ನೋಡಿ, pp. 132 ಮತ್ತು 134.

ಕೈಗಡವಾಗಿ ಎತ್ತಿಕೊಂಡ ಸಿದ್ಧಾಂತ, ಎಂದು ದಾಸಗುಪ್ತರು ಹೇಳುತ್ತಾರೆ.[139] ನಾವಿಲ್ಲಿ ಗಮನಿಸಬೇಕಾದ ಒಂದು ಸಂಗತಿಯೆಂದರೆ, 'ಬ್ರಹ್ಮಸೂತ್ರ'ದ ಹದಿನಾಲ್ಕನೆಯ ಶತಮಾನದ ವೀರಶೈವ ಭಾಷ್ಯಕಾರನಾದ ಶ್ರೀಪತಿಪಂಡಿತನು 'ಪಾಶುಪತಗಣಕಾರಿಕಾ'ದ ಲೇಖಕನಾದ ಹರದತ್ತನನ್ನು ಮೆಚ್ಚುಗೆಯಿಂದ ಉದ್ಧರಿಸುತ್ತಾನೆಂಬುದು.[140]

ಆರಂಭ ಕಾಲದ ವೀರಶೈವರು ಉಪದೇಶಿಸಿದ ಸಾಮಾಜಿಕ ಸಿದ್ಧಾಂತಗಳಲ್ಲಿ ಜಾತಿಪದ್ಧತಿ ವಿರೋಧ ಹಾಗೂ ಚಿಕ್ಕಂದಿನ ಮದುವೆಗಳ ವಿರೋಧ ಅಲ್ಲದೆ ವಿಧವಾ ವಿವಾಹಗಳಿಗೆ ಮನ್ನಣೆಯಿತ್ತು. ಕಾಳಾಮುಖರ ಸಾಮಾಜಿಕ ನಿಲುವಿನ ಬಗೆಗೆ ನಮಗಂತೂ ಅಕ್ಷರಶಃ ಏನೇನೂ ತಿಳಿದಿಲ್ಲ. ಆದರೂ ಕೂಡ ಅವರು ಹೆಚ್ಚಾಗಿ ಸಂಪ್ರದಾಯವಾದಿಗಳಾಗದ್ದಂತೆ ಕಾಣುತ್ತದೆ.[141]

ಕಾಳಾಮುಖ ಹಾಗೂ ವೀರಶೈವ ಸಂಪ್ರದಾಯಗಳ ನಡುವಣ ಮಹತ್ವದ ಎರಡು ಹೋಲಿಕೆಗಳೆಂದರೆ ದೊಡ್ಡ ಮಠಗಳಾದ ಸಂಸ್ಥೆಗಳನ್ನು ಕಟ್ಟುವುದು ಹಾಗೂ ಲಿಂಗಪೂಜೆಗೆ ಒತ್ತು ನೀಡುವುದು. ಮೊದಲಿನದನ್ನು ಕುರಿತು ಅದಾವುದೇ ಟಿಪ್ಪಣಿ ಬೇಕಿಲ್ಲ. ಅನುಯಾಯಿಯು ಒಂದು ಚಿಕ್ಕ ಲಿಂಗವನ್ನು ಧರಿಸಬೇಕೆನ್ನುವ ವೀರಶೈವರ ಆಚರಣೆಯನ್ನು ಕಾಳಾಮುಖರು ಅನುಸರಿಸುತ್ತಿದ್ದರೆನ್ನಲು ಶಾಸನದಲ್ಲಿ ಒಂದೂ ಪುರಾವೆಯಿಲ್ಲ. ಆದರೆ ಬಸವನಿಗಿಂತಲೂ ಮೊದಲಿನಿಂದಲೇ ಈ ರೂಢಿ ನಡೆದು ಬಂದಿತ್ತೆಂದು 'ಬಸವ ಪುರಾಣ'ವೇ ಒಪ್ಪಿಕೊಳ್ಳುತ್ತದೆ. ಏನಿದ್ದರೂ, ಕಾಳಾಮುಖರು ಲಿಂಗಪೂಜೆಯನ್ನು ಬಲು ಗೌರವದಿಂದ ಕಾಣುತ್ತಿದ್ದರು. ಉದಾ: ಕ್ರಿ.ಶ.1164ರ ಕೇದಾರೇಶ್ವರ ಶಾಸನದಲ್ಲಿ ಬಳ್ಳಿಗಾವೆಯ ಯತಿ ಕೇದಾರ ಶಕ್ತಿಯು 'ಯಾವನೇ ಆಗಲಿ, ಒಂದಾದರೂ ಲಿಂಗವನ್ನು ಸ್ಥಾಪಿಸಿದರೆ ಆಗಮಗಳಲ್ಲಿ ಬಣ್ಣಿಸಲಾದ ಎಲ್ಲ ಬಗೆಯ ಶ್ರೇಯಸ್ಸುಗಳನ್ನು ಕೋಟಿ ಕೋಟಿ ಪಟ್ಟು ಪಡೆಯುವನು' ಎಂದು ಒತ್ತಿ ಹೇಳುತ್ತಾನೆ.[142]

ವೀರಶೈವ ಯತಿಗಳನ್ನು ಜಂಗಮರೆಂದು ಕರೆಯಲಾಗುತ್ತದೆ. ಅವರ ಅರ್ಥವಿವರಣೆಯೆಂದರೆ 'ಚಲನೆಯಲ್ಲಿರುವ ಲಿಂಗ' ಎಂದು.[143] ಈ ಪದವನ್ನು ಇದೇ ಅರ್ಥದಲ್ಲಿ ಹಲವು ಶಾಸನಗಳಲ್ಲಿ ಕಾಳಾಮುಖ ಯತಿಗಳಿಗಾಗಿಯೂ ಬಳಸಲಾಗಿದೆ. ಕ್ರಿ.ಶ.1192ರ ಗದುಗಿನ ಶಾಸನವು ಕಾಳಾಮುಖನಾದ ಚಂದ್ರಭೂಷಣ ಪಂಡಿತದೇವನನ್ನು ತ್ರಿಕೂಟೇಶ್ವರನ

---

139. 'History -----, V, 49-50.

140. ಅದೇ, pp. 9-10.

141. ಮೇಲ್ಜಾತಿಯವರನ್ನು ಕುರಿತಾದ ಕಾಳಾಮುಖರ ಮನೋಧರ್ಮದ ಬಗೆಗೆ ನಾವು ಅಪ್ರತ್ಯಕ್ಷವಾಗಿ ಪ್ರಸ್ತಾಪಿಸಿದ್ದೇವೆ, ಪು. 149.

142. ಸಂ. ಮತ್ತು ಅನು. ರೈಸ್, EC, VII, Sk. 108.

143. L. Renou and J. Filliozat, L'Inde classique, I, 638.

ನಾಲ್ಕನೆಯ ಹಾಗೂ ಚಲಿಸುವ (ಜಂಗಮ) ಲಿಂಗವೆಂದು ಬಣ್ಣಿಸುತ್ತದೆ.[144] ಹೊಂಬಳದ ಕ್ರಿ.ಶ.1189ರ ಶಾಸನದಲ್ಲಿ ಕಾಳಾಮುಖಯತಿ, ರುದ್ರ ಶಕ್ತಿಯನ್ನು ಒಬ್ಬ ಜಂಗಮನೆಂದು ಕರೆಯಲಾಗಿದೆ.[145] ಅಲ್ಲದೆ, ಕ್ರಿ.ಶ.1252ರ ಮುನವಳ್ಳಿಯ ಜಗದೀಶ್ವರ ದೇವಾಲಯದ ಸರ್ವೇಶ್ವರದೇವನೆಂಬ ಕಾಳಾಮುಖಯತಿಯನ್ನು ಚಲಿಸುವ ಲಿಂಗದ ಅವತಾರ ಅಂದರೆ ' ಜಂಗಮ ಲಿಂಗಾವತಾರ'ನೆಂದು ಕರೆಯಲಾಗಿದೆ.[146] ವೀರಶೈವಪುರಾಣಗಳಲ್ಲಿ ಬಸವ ಹಾಗೂ ಜಂಗಮರ, ಅದರಲ್ಲೂ ಹನ್ನೆರಡು ಸಾವಿರ (ಸ್ವೇಚ್ಛಾ) ದವರ ನಡುವಣ ನಂಟು ಎಳ್ಳಷ್ಟೂ ಸ್ಪಷ್ಟವಿಲ್ಲ.[147] ಏನಿದ್ದರೂ, ಸಾಧು ಸಂತರ ಉದಯದ ಮುನ್ನವೇ ಜಂಗಮರು ಸುಸಂಘಟಿತರಾಗಿದ್ದರೆಂದು ಕಾಣುತ್ತದೆ. ಆರಂಭದ ಜಂಗಮರು ಬೇರಿನ್ನಾರೂ ಆಗಿರದೆ ಕಾಳಾಮುಖರೇ ಆಗಿದ್ದರೆಂಬುದು ತಿಳಿಯದಂತಹ ಸಂಗತಿಯೇನಲ್ಲ, ಎಂಬುದು ನಮ್ಮ ಭಾವನೆ.

❖ ❖ ❖

---

144. ಹಿಂದೆ ನೋಡಿ, pp. 120-21.

145. ಸಂ. ದೇಸಾಯಿ, SII, XV, no. 73 (l. 50).

146. ಹಿಂದೆ ನೋಡಿ, pp. 152-53.

147. ನೋಡಿ 'ಬಸವ ಪುರಾಣ', ಅನು. G. Wü rth, JBBRAS, pp. 68 ಮತ್ತು 71.

# ಅಧ್ಯಾಯ - ೬

# ಲಕುಲೀಶ ಮತ್ತು ಪಾಶುಪತರು

ಪಾಶುಪತ ಸಿದ್ಧಾಂತವನ್ನು ಅನುಸರಿಸುವ ನಾಲ್ಕು ಸಂಪ್ರದಾಯಗಳನ್ನು ಕುರಿತು ರಾಮಾನುಜರು ಬಣ್ಣಿಸಿದುದನ್ನು ನಾವು ಈಗಾಗಲೇ ಹೆಚ್ಚು ಸಲ ಗಮನಿಸಿದ್ದೇವೆ. ಇವೆಂದರೆ ಕಾಪಾಲ, ಕಾಳಾಮುಖ, ಪಾಶುಪತ ಹಾಗೂ ಶೈವ ಸಂಪ್ರದಾಯಗಳು. ಈ ನಾಲ್ಕರಲ್ಲಿ ಪಾಶುಪತವು ಎಲ್ಲಕ್ಕೂ ಹಳೆಯದು. ಇದು ಉಳಿದವುಗಳಿಗೆ ಅಲ್ಲದೆ ಹೋದರೂ ಕಾಳಾಮುಖ ಸಂಪ್ರದಾಯಕ್ಕೆ ಮಾತ್ರ ಅದರ ಆಧ್ಯಾತ್ಮಿಕ ತಾಯಿ - ತಂದೆ ಆಗಿತ್ತು. ಕರ್ನಾಟಕದಲ್ಲಿ ಕಾಳಾಮುಖರ ಪ್ರಭಾವವಿರುವ ಕಾಲ ಹಾಗೂ ರಾಮಾನುಜರು ಧರ್ಮೋಪದೇಶವನ್ನು ನೀಡುವ ಕಾಲ, ಒಂದೇ ಆಗಿತ್ತು. ಪಾಶುಪತ ಹಾಗೂ ಕಾಳಾಮುಖರ ಶಾಸನಗಳು ಅವುಗಳಲ್ಲಿ ಹಲವು ಬಗೆಯ ಸಮಾನತೆಗಳನ್ನು ತೋರಿಸುತ್ತವೆ. ಇವೆರಡೂ ಸಂಪ್ರದಾಯಗಳು ಪವಾಡ ಪುರುಷನೆನ್ನಿಸಿದ ಲಕುಲೀಶನನ್ನು ಪೂಜ್ಯ ಭಾವನೆಯಿಂದ ಕಾಣುತ್ತವೆ. ಎರಡೂ ಸಂಪ್ರದಾಯಗಳ ಯತಿಗಳು ಒಂದೇ ಬಗೆಯ ಹೆಸರುಗಳನ್ನು ಹೊಂದಿರುತ್ತಾರೆ. ಅವರಿಬ್ಬರೂ ಕೇದಾರನಾಥ ಹಾಗೂ ಶ್ರೀಪರ್ವತದ ತೀರ್ಥಯಾತ್ರೆಗಳನ್ನು ಕೈಕೊಳ್ಳುತ್ತಾರೆ.[1] ಹೊಂಬಳದ ಕಾಳಾಮುಖ ಯತಿಯಾದ ಬೊಂತೆಯ ಮುನಿಯು [2] ಸಾರಿದ 'ಈಶ್ವರ ಕರ್ತೃವಾದ'ದ ತತ್ವ ವಿಚಾರಗಳ ಆಶಯವು, ಪಾಶುಪತ ಸಿದ್ಧಾಂತವಾದ 'ಈಶ್ವರನು ಭೌತಿಕ ಬ್ರಹ್ಮಾಂಡಕ್ಕೆ (ಕಾರ್ಯ) ಕಾರಣನು' ಎಂಬುದಕ್ಕಿಂತ ಎಳ್ಳಷ್ಟೂ ಬೇರೆಯಾಗಿಲ್ಲ. ಮೇಲ್ಗಡೆಯಲ್ಲಿ ನಾವು ನೇಸರಗಿ ಹಾಗೂ ಸಿರ

1. ಓಂದೆ ನೋಡಿ, pp. 107-109.
2. ಓಂದೆ ನೋಡಿ, ಪು. 134.

ಸಂಗಿಯ ಶಾಸನಗಳ ಒಂದು ಪದ್ಯವನ್ನು ಉದ್ಧರಿಸಿದ್ದೇವೆ. ಇದು, ಕಾಳಾಮುಖ, ಮಹಾವ್ರತಿನ್ ಮತ್ತು ಮಹಾಪಾಶುಪತರನ್ನು ಸಮಾನರೆಂದು ತೋರಿಸುವಂತಿದೆ.[3] ಆದರೆ ಬಹಳಷ್ಟು ಆಕರಗಳು ಕಾಳಾಮುಖ ಹಾಗೂ ಪಾಶುಪತ ಸಂಪ್ರದಾಯಗಳು ತೀರ ನಿಕಟ ಸ್ನೇಹಕೂಟಗಳ ಶೈವ ಸಂಪ್ರದಾಯಗಳಾಗಿದ್ದರೂ ಅವುಗಳನ್ನು ಬೇರೆ ಬೇರೆಯೆಂದು ಬಣ್ಣಿಸುತ್ತವೆ.[4]

ಹಲವು ಜನ ಆಧುನಿಕ ವಿದ್ವಾಂಸರು ಪಾಶುಪತರ ಇತಿಹಾಸ, ಮತಾಚರಣೆ ಹಾಗೂ ತತ್ವವಿಚಾರಗಳನ್ನು ಕುರಿತು ಬರೆದಿರುವರು. ಇವೆಲ್ಲ ವಿಷಯಗಳು ಬಹಳಷ್ಟುಮಟ್ಟಿಗೆ ನಮ್ಮ ಅಧ್ಯಯನದ ಪರಿಘದಾಚೆಗೆ ಹೊರ ಮೈಮೇಲೆಯೇ ಉಳಿದುಕೊಳ್ಳುವುವಾದ್ದರಿಂದ, ನಾವು ಈ ವಿದ್ವಾಂಸರ ವಾದ ಹಾಗೂ ಭಾಷ್ಯಗಳನ್ನು ಸಾರಾಂಶವಾಗಿ ಹಾಗೂ ಪರಿಶೀಲನೆಯ ಮಟ್ಟಿಗೆ ತೃಪ್ತಿ ಪಡಬಹುದಾಗಿದೆ. ಹಾಗೆಯೇ ಕಾಳಾಮುಖ ಶಾಸನಗಳಲ್ಲಿ ಹೇಳಲಾಗಿರುವ ಪಾಶುಪತರ ನಂಬಿಕೆ ಹಾಗೂ ಆಚರಣೆಗಳನ್ನು ಕುರಿತ ಚಿಂತನೆಗಳನ್ನು ಕುರಿತು ಅಭಿಪ್ರಾಯ ವ್ಯಕ್ತಪಡಿಸುವ ಮಟ್ಟಿಗೆ ತೃಪ್ತಿಯನ್ನು ತಳೆಯಬಹುದಾಗಿದೆ.

ಪಾಶುಪತರ ಆರಂಭದ ಇತಿಹಾಸದ ಬಗೆಗಿನ ಎಲ್ಲಕ್ಕೂ ಉತ್ತಮ ಚರ್ಚೆಗಳು ಜೆ. ಎನ್. ಬ್ಯಾನರ್ಜಿಯವರಿಂದ ನಡೆದಿವೆ.[5] ಡಿ. ಆರ್. ಭಾಂಡಾರಕರರು ಇವೇ ವಿಷಯದ ಬಗೆಗೆ ಗಮನಾರ್ಹವಾದ ಕೊಡುಗೆಗಳನ್ನು ನೀಡಿರುವರು. ಮೊದಲಿಗೆ ಇವರು ಲಕುಲೀಶನನ್ನು ಕುರಿತ ಪೌರಾಣಿಕ ಮಾಹಿತಿಯನ್ನು ಗಮನಿಸಿ ಅವನ ಕಾಲವನ್ನು [6] ಅಂದಾಜು ಮಾಡಲು ಜೆ. ಎಫ್. ಫ್ಲೀಟ್, ಆರ್. ಜಿ. ಭಾಂಡಾರಕರ, ಎಮ್. ಹರ ಹಾಗೂ ಇತರ ವಿದ್ವಾಂಸರಿಗೆ

---

3. ಹಿಂದೆ ನೋಡಿ, pp. 151-52.

4. ಹಿಂದೆ ನೋಡಿ, pp. 7-12.

5. ಕೆ. ಎ. ಎಸ್. ಶಾಸ್ತ್ರಿ ಅವರ ಸಂಪಾದನೆಯಲ್ಲಿ, 'The Mauryas and Satavahanas', pp. 393-403, ತಮ್ಮದೇ ಆದ 'Development of Hindu Iconolography', ಹಾಗೂ ಅವರ ಲೇಖನ 'Lakulīsa- The Founder or the Systematiser of the Pāsupata Order'ವನ್ನು Indian History Congress ದ 'Proceedings of the Fourtheenth Session, Jaipur', pp.32-36.

6. 'An Eklingjī Stone Inscription and the Origin and History of theLakulīsa Sect', JBBRAS, XXII (1904-07), 151-65i 'Lakulīsa' in Archaeological Survey of India, Annual Report: 1906-7, pp. 179-92, 'Some Published Inscriptions Reconsidered,' IA, XXXII (1913), 57-64, and 'Mathura Pillar Inscriptions of Chandragupta II : G. E. 61', EI, XXI (1931-32), 1-9.

ನೆರವಾದರು.[7] ಮುಂದಿನ ಪ್ರಗತಿಗಳನ್ನು ಕುರಿತಾದ ಅಧ್ಯಯನಗಳನ್ನು ಜಿ. ಬೂಹ್ಲರ್, ಕೆ. ಕೆ. ಹಂಡಿಕಿ, ಎಚ್. ಡಿ. ಸಂಕಲಿಯಾ ಹಾಗೂ ಇತರರಿಂದ ನೆರವೇರಿಸಲಾಯಿತು.[8]

ಪಾಶುಪತರನ್ನು ಕುರಿತಾದ ತೀರ ಪ್ರಾಚೀನ ಉಲ್ಲೇಖವು ಮಹಾಭಾರತದ್ದೇ ಆಗಿರಬಹುದು. ತುಂಬ ಮಹತ್ವದ್ದಾದ ಈ ಉಲ್ಲೇಖವು ಐದು ಧಾರ್ಮಿಕ ಸಿದ್ಧಾಂತಗಳನ್ನು ಕುರಿತು ಹೇಳುತ್ತದೆ. ಇವೆಂದರೆ : ಸಾಂಖ್ಯ, ಯೋಗ, ಪಾಂಚರಾತ್ರ, ವೇದ ಹಾಗೂ ಪಾಶುಪತ. ಈ ಕೊನೆಯದನ್ನು ಆರಂಭಿಸಿದವನು ಶಿವನು. ಉಮಾಪತಿ ಎಂದೂ ಈತನನ್ನು ಕರೆಯಲಾಗುತ್ತದೆ. ಅಲ್ಲದೆ ಜೀವಿಗಳ ಒಡೆಯ, ಪತಿ, ಶ್ರೀಕಂಠ ಹಾಗೂ ಬ್ರಹ್ಮನ ಮಗನೆಂದೂ ಇವನನ್ನು ಕರೆಯಲಾಗುತ್ತದೆ.[9] ಈ ವಿವರಣೆಯನ್ನು ಎಲ್ಲರಿಗಿಂತ ಮೊದಲು ಗಮನಿಸಿದವರು

---

7. ಜೆ. ಎಫ್. ಫ್ಲೀಟ್, 'Śiva as Lakulīsda', JRAS for 1907. PP. 419-26, ಆರ್. ಜಿ. ಭಾಂಡಾರಕರ, 'Vaisnavism.......', ಎಮ್. ಹರ, 'Pāśupata Kenkyū II - 'Pañcārthabhāṣya and Pāśupatasūtra' I, i, 'Hikata Hakushi Koki Kinen ronbunshū', pp. (65)-(80); ಆರ್. ಎನ್. ಮೆಹತಾ, 'Karavan-The Seat of the Lakulīsa Sect' in Indian History Congress, Proceedings of the Fourteenth Session, Jaipur, pp. 71-76 and his 'Avākhal : The Traditional Ulkāgrāma of Kārvaṇa Māhātmya,' JOIB, VII (1957), 169 ff; ಪಿ. ಸಿ. ದಿವಾಣಜಿ, 'Lakulīsa of Kārvān and his Pāṣupata Culture', JGRB, XVII (1955), 267-74, ಎ. ಪಿ. ಕರಮರಕರ, 'The Vrātya or Dravidian Systems', ಮತ್ತು ವಿ. ಎಸ್. ಪಾಠಕ, 'History of Śaiva Cults in Northern India'.

8. ಜಿ. ಬೂಹ್ಲರ್, 'Cintra Praśasti of the Reign of Sārangadeva', EI, I (1888). 271-87, ಕೆ. ಕೆ. ಹಂಡಿಕಿ, pp. 337-54, 467-510, ಎಚ್. ಡಿ. ಸಂಕಲಿಯಾ, The Archaeology of Gujarat, ಟಿ. ವಿ. ಮಹಾಲಿಂಗಮ್, 'The Pāśupatas in South India,' JIH. XXVII (1949), 43-53, ಮತ್ತು ಅವರ 'A Family of Pāśupata Gṛhasthas at Jambukeśvaram,' JORM, XXV (1957), 79-85, ಬಿ. ಪಿ. ಮಜುಮದಾರ, 'Lakulīsa Pāśupatas and thie Temples in Medieval India', JBRS, XXXIX (1953), ಎಚ್. ಕೆ. ನರಸಿಂಹಸ್ವಾಮಿ, 'Dommara-Nadyala Plates of Punyakurara, 10th Year,' EI, XXVII, 268-76, ಮತ್ತು ಅವರ ' Bhairavakonda Inscription of Vikramaditya', EI, XXXVIII, 78-81; ಎನ್. ವೆಂಕಟರಮಣಯ್ಯ ಅವರು ಜಿ. ಯಾಝ್ದಾನಿ (ಸಂ.), ' The Early History of the Deccan. II, 704-13ದಲ್ಲಿ ; ಮತ್ತು ಎ. ಕೆ. ವ್ಯಾಸ, 'Paldi Inscription of Guhila Arisimha,. V. S. 1173,' XXX, 8-12. ಸಂಬಂಧಪಟ್ಟ ಮಾಹಿತಿಯು ಈ ಹಿಂದಿನ ಟಿಪ್ಪಣಿಯಲ್ಲಿ ನಮೂದಿಸಲಾದ ಸಾಹಿತ್ಯ ಕೃತಿಗಳಲ್ಲೂ ದೊರಕುತ್ತದೆ.

9. 'Śantiparavan, Part III, ಸಂ. ವಿ. ಎಸ್. ಸುಖಿತನಕರ ಮತ್ತು ಎಸ್. ಕೆ. ಬೆಲ್ವಲಕರ, xii. 337. 59 ಮತ್ತು 62 : 'ಸಾಂಖ್ಯಂ ಯೋಗಂ ಪಾಂಚರಾತ್ರಂ ವೈ II----ಉಮಾಪತಿರ್ ಭೂತಪತಿ: ಶ್ರೀಕಂಠೋ ಬ್ರಾಹ್ಮಣಾ ಸುತಾ: I ಉಕ್ತವಾನ್ ಇದಂ ಅವ್ಯಾಗ್ರೋ ಜ್ಞಾನಂ ಪಾಶುಪತಂ ಶಿವ:II'.

ಆರ್. ಜಿ. ಭಾಂಡಾರಕರರು.[10] ಅವರು ಇದನ್ನಾಧರಿಸಿ ಪಾಶುಪತರ ಉಗಮದ ಬಗೆಗೆ ತಮ್ಮದೊಂದು ಅಂದಾಜನ್ನು ಮಂಡಿಸಿದರು. ವಿ. ಎಸ್. ಪಾಠಕರು ಈ ಸಂಗತಿಯನ್ನಾಧರಿಸಿ ತಮ್ಮದೊಂದು ಊಹೆಯನ್ನು (ಎಕ್ಸಟ್ರಾ ಪೊಲೇಟ್) ಮುಂದಿರಿಸಿದ್ದಾರೆ. ಅದರಂತೆ ಅವರು, ಶ್ರೀಕಂಠನೆಂಬ ಒಬ್ಬ ಐತಿಹಾಸಿಕ ವ್ಯಕ್ತಿಯ ಪಾಶುಪತ ಪರಂಪರೆಯ ಸಂಸ್ಥಾಪಕನಾಗಿದ್ದನೆಂದು ಸ್ಥಾಪಿಸಲು ಯತ್ನಿಸಿರುವರು.[11] ಆದರೆ ಇವರ ಉಲ್ಲೇಖವು ತುಂಬ ಸ್ಪಷ್ಟವಾಗಿ ಶಿವನಿಗೆ ಸಂಬಂಧಿಸಿದೆಯೇ ಹೊರತು ದೇವತ್ವವನ್ನು ಹೊಂದಿದ ಯಾವುದೇ ಮಾನವ ಜೀವಿಗಲ್ಲ. ತಮ್ಮ ವಾದದ ಸಮರ್ಥನೆಗಾಗಿ ಪಾಠಕರು ಮುಂದೆ ಮಾಡುತ್ತಿರುವ ಶ್ರೀಕಂಠನ ಪೂರ್ವವೃತ್ತಾಂತಗಳಲ್ಲಿ ಬಹಳಷ್ಟು ವೃತ್ತಾಂತಗಳು ಶಿವನಾದ ಶ್ರೀಕಂಠನನ್ನೇ ಕುರಿತಾದವುಗಳಾಗಿದ್ದು, ಅವುಗಳ ಒಂದು ವೃತ್ತಾಂತ ಮಾತ್ರ ಶ್ರೀಕಂಠ ಮತ್ತು ಪಾಶುಪತ ಸಿದ್ಧಾಂತಗಳ ನಡುವಿರುವ ಒಂದು ಬಗೆಯ ನಂಟನ್ನು ಕುರಿತು ಪ್ರಸ್ತಾಪಿಸುತ್ತದೆ. ಅಭಿನವ ಗುಪ್ತನ (ಕ್ರಿ.ಶ. 1000) 'ತಂತ್ರಾಲೋಕ'ದಿಂದ ಎತ್ತಿಕೊಂಡ ಈ ಉಲ್ಲೇಖವು ಶ್ರೀಕಂಠ ಹಾಗೂ ಲಕುಲೀಶ್ವರ ಇವರಿಬ್ಬರೇ 'ಶಿವನ ಶಾಸನ'ವನ್ನು ಕುರಿತಾದ ಅಧಿಕಾರಿಗಳು, ಎಂದಷ್ಟೇ ಹೇಳುತ್ತದೆ. ಇದೊಂದು ಪರಿಹಾರ ಇಲ್ಲವೆ ಬಲು ಉಪಯುಕ್ತವಾದ ಪುರಾವೆ, ಎನ್ನಬಹುದು.

ಇದಲ್ಲದೆ ಆರ್. ಜಿ. ಭಾಂಡಾರಕರನನ್ನು ಅನುಸರಿಸಿ, ಜೆ. ಎನ್. ಬ್ಯಾನರ್ಜಿಯವರು ಇದಕ್ಕೂ ಹೆಚ್ಚಿನ ತೋರಿಕೆಗೆ ಮಾತ್ರ ಸರಿ ಕಾಣುವಂತೆ, ಪಾತಂಜಲಿಯು (ಇಸವಿ. 150 ಕ್ರಿ. ಪೂ.) ತನ್ನ ಪಾಣಿನೀಯ ಭಾಷ್ಯಗಳಲ್ಲಿ ಉಲ್ಲೇಖಿಸಿದ ಶಿವಭಾಗವತರೆಂದರೆ ಲಕುಲೀಶನಿಗಿಂತ ಹಿಂದಿನ ಪಾಶುಪತರೇ ಆಗಿದ್ದಾರೆಂದು ನಮೂದಿಸಿರುವರು.[12] ಬ್ಯಾನರ್ಜಿಯವರು ಲಕುಲೀಶನನ್ನು ಮೊದಲಿನ ಪಾಶುಪತ ಸಂಪ್ರದಾಯದ ಪದ್ಧತಿಯನ್ನು ವ್ಯವಸ್ಥೆಗೊಳಿಸಿದವನೆಂದು ಬಗೆಯುತ್ತಾರೆ. ದುರ್ದೈವದ ಸಂಗತಿಯೆಂದರೆ ಚಾಲ್ತಿಯಲ್ಲಿರುವ ಎರಡು ಪಾಶುಪತ ಪಠ್ಯಗಳಾದ ಕೌಂಡಿಣ್ಯನ 'ಪಂಚಾರ್ಥ ಭಾಷ್ಯ' [13] ದೊಂದಿಗಿನ 'ಪಾಶುಪತ ಸೂತ್ರ' ಹಾಗೂ ಭಾಸರ್ವಜ್ಞನದೆಂದು[14] ಹೇಳಲಾಗುವ 'ರತ್ನಟೀಕಾ'ದೊಂದಿಗಿನ

10. Vaisnavism -----, ಪು. 116.
11. History of ----- , pp. 4-8.
12. Indian History Congress, Proceedings of the Fourteenth ------ pp. 32-36. ಅಲ್ಲದೆ ನೋಡಿ, ಅವರ 'The Development ...', pp. 448-52 ಮತ್ತು ಕೆ.ಎ.ಎನ್. ಶಾಸ್ತ್ರಿಯವರ 'The Mauryas...' pp. 396-400 ಗಳಲ್ಲಿ ಇವರ ಚರ್ಚೆಯನ್ನು ನೋಡಿ.
13. ಸಂ. ಆರ್. ಎ. ಶಾಸ್ತ್ರಿ.
14. ಸಂ. ಸಿ. ಡಿ. ದಲಾಲ. ಯಾರು ಲೇಖಕರೆಂಬ ಬಗೆಗೆ ವಾದವಿದೆ. ಗ್ರಂಥ ಸಮಾಪ್ತಿಯಲ್ಲಿರುವ ಮುದ್ರಾಂಕಿತವು 'ಗಣಕಾರಿಕಾ'ವು ಭಾಸರ್ವಜ್ಞನಿಗೆ ಸೇರಿದುದೇ ಹೊರತು 'ರತ್ನಟೀಕಾ' ಅಲ್ಲವೆನ್ನುತ್ತದೆ. ನಾವು ಅಧಿಕೃತ ವಿದ್ವಾಂಸರ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಹತ್ತನೆಯ ಶತಮಾನದ ಹೆಸರಾಂತ ಈ ನ್ಯಾಯಾಯಿಕ ತಾರ್ಕಿಕನು ಭಾಷ್ಯವನ್ನು ಬರೆದನೇ ಹೊರತು ಪಠ್ಯಗ್ರಂಥವನ್ನಲ್ಲ. ಬಹುಮಟ್ಟಿಗೆ ಹರದತ್ತಾಚಾರ್ಯನು 'ಗಣಕಾರಿಕಾ'ದ ಲೇಖಕನು, ನೋಡಿ ಆರ್. ಎ. ಶಾಸ್ತ್ರಿಯವರ 'ಪಾಶುಪತ ಸೂತ್ರ'ದ p. 4 ಮುನ್ನುಡಿಯನ್ನು.

'ಗಣಕಾರಿಕಾ'ಗಳಲ್ಲಿ ಕೂಡ ಈ ಸಿದ್ಧಾಂತಕ್ಕೆ ಯಾವುದೇ ಬೆಂಬಲ ದೊರಕುತ್ತಿಲ್ಲ. 'ಪಾಶುಪತ ಸೂತ್ರ' ir ಅರ್ಥ ವಿವರಣೆಗಳಲ್ಲಿ ಕೌಂಡಿಣ್ಯನು (pp. 3-4), ದೇವನು ಒಬ್ಬ ಬ್ರಾಹ್ಮಣನ ದೇಹವನ್ನು ಧಾರಣೆ ಮಾಡಿ ಭೂಲೋಕದ ಕಾಯಾವತರಣ ಎಂಬಲ್ಲಿಗೆ ಬಂದನೆಂದು ಹೇಳುತ್ತಾನೆ. ತರುವಾಯ ಅವನು ಉಜ್ಜಯನಿಗೆ ಹೋಗಿ ಕುಶಿಕನೆಂಬ ಶಿಷ್ಯನಿಗೆ ಈ 'ಸೂತ್ರ'ಗಳನ್ನು ನೀಡಿದನು. ನಾವು ಇದನ್ನು ಲಕುಲೀಶನ ಆಖ್ಯಾಯಿಕೆಯ ಪೂರ್ವವೃತ್ತಾಂತವೆಂದು ಸ್ಪಷ್ಟವಾಗಿ ಕಾಣಬಹುದಾಗಿದೆ. 'ರತ್ನ ಟೀಕಾ' ಗ್ರಂಥವು ಭಗವಂತನಾದ ಲಕುಲೀಶನಿಂದ ಆರಂಭಿಸಿ ರಾಶೀಕರನೊಂದಿಗೆ ಮುಕ್ತಾಯಗೊಳ್ಳುವ ತೀರ್ಥಕರರನ್ನು ಗೌರವಿಸುವಂತೆ ಭಕ್ತರಿಗೆ ಆಜ್ಞಾಪಿಸುತ್ತದೆ. ಹೀಗೆ, ಗುಪ್ತರ ಕಾಲದಷ್ಟು ಹಿಂದೆ ಇದ್ದನೆಂದು ಸಾಮಾನ್ಯವಾಗಿ ಹೇಳಲಾಗುವ ಕೌಂಡಿಣ್ಯನ ಕಾಲದಿಂದಲೇ ಲಕುಲೀಶನು ಆ ಪರಂಪರೆಯ ಸಂಸ್ಥಾಪಕನೆಂದು ಪಾಶುಪತರು ಮನ್ನಿಸುತ್ತಿದ್ದರು. (ಬ್ಯಾನರ್ಜಿಯವರ ಸಿದ್ಧಾಂತವನ್ನು ಕೇವಲ ಒಂದು ಊಹೆ, ಅಂದಾಜು ಎಂದು ಪರಿಗಣಿಸತಕ್ಕದ್ದು. ಲಕುಲೀಶನಿಗಿಂತಲೂ ಮೊದಲಿನಿಂದಲೂ ಶೈವ ಯತಿಗಳು ಅಸ್ತಿತ್ವದಲ್ಲಿದ್ದರು. ಅವರಲ್ಲಿ ಕೆಲವರಾದರೂ ಶೈವ ಯತಿಗಳು ಅಸ್ತಿತ್ವದಲ್ಲಿದ್ದರು. ಅವರಲ್ಲಿ ಕೆಲವರಾದರೂ ನಿಸ್ಸಂದೇಹವಾಗಿ ಇದೇ ಬಗೆಯ ನಂಬಿಕೆ ಹಾಗೂ ಆಚರಣೆಗಳನ್ನು ಬೋಧಿಸುತ್ತಿದ್ದರು). ಧಾರ್ಮಿಕ ಪಂಗಡಗಳು ಯಾವಾಗಲೂ ಒಂದು ನಿರ್ವಾತದಲ್ಲಿ ಸ್ಥಾಪನೆಗೊಳ್ಳಲಾರವು. ಮದ್ಯ ಹಾಗೂ ಮದ್ಯದ ಪಾತ್ರೆಗಳು ಎಂದಿಗೂ ಪೂರ್ತಿಯಾಗಿ ಹೊಸವಾಗಿರುವುದಿಲ್ಲ. ಆದರೂ ಹಿಂದಿನ ಕಾಲದ ಈ ಶೈವ ಯತಿಗಳನ್ನು ಪಾಶುಪತರೆಂದು ಕರೆಯುವುದು ಸಮರ್ಥನೀಯವಲ್ಲ.

ಲಕುಲೀಶನು ಪಾಶುಪತ ಸಂಪ್ರದಾಯದ ಸಂಸ್ಥಾಪಕನಾಗಿರುವ ಸಾಧ್ಯತೆ ಎಲ್ಲಕ್ಕೂ ಹೆಚ್ಚು. ಅವನ ವ್ಯಕ್ತಿಗತವಾದ ಐತಿಹಾಸಿಕ ಆಕರಗಳು ಸಮಾಧಾನಕರವಾಗಿ ಹೆಚ್ಚು ಸಂಖ್ಯೆಯವು ಹಾಗೂ ಹಲವು ವಿಧವಾಗಿವೆ. ಆದರೆ ಅವು ಪರಿಪೂರ್ಣ ಹಾಗೂ ಸುಸಂಗತವಾಗಿಲ್ಲ. 'ಕೌಂಡಿಣ್ಯ ಬಾಷ್ಯ'ದಲ್ಲಿರುವ ಅವನ ಹುಟ್ಟು ಹಾಗೂ ಯತಿತ್ವಗಳನ್ನು ಕುರಿತಾದ ಪೂರ್ವವೃತ್ತಾಂತಗಳು 'ವಾಯು'[15] ಮತ್ತು 'ಲಿಂಗ ಪುರಾಣ'[16], 'ಕಾರವಣ ಮಾಹಾತ್ಮ್ಯ'[17] ಗಳಲ್ಲದೆ ಮಧ್ಯಯುಗದ ಇನ್ನೂ ಮೂರು ಶಾಸನಗಳಲ್ಲಿ ಕಾಣಸಿಕೊಳ್ಳುತ್ತವೆ.[18] ತೌಲನಿಕವಾಗಿ ತರುವಾಯದ ಕೃತಿಯಾದ 'ಕಾರವಣ ಮಾಹಾತ್ಮ್ಯ' ವು ಎಲ್ಲಕ್ಕೂ ಹೆಚ್ಚು ಪರಿಪೂರ್ಣವಾಗಿದೆ. ಇದೆನ್ನುವಂತೆ ಶಿವನು

---

15. ಆನಂದಾಶ್ರಮ ಆವೃತ್ತಿ, xxiii 219-224.
16. ಸಂ. ಜೆ. ವಿದ್ಯಾಸಾಗರ, i. 24. 124-34.
17. ಸಂ. ಸಿ. ಡಿ. ದಲಾಲ, 'ಗಣಕಾರಿಕಾ', pp. 37-57. ಡಿ. ಆರ್. ಭಾಂಡಾರಕರರು ಇದನ್ನು Archaeological Survey of India, Annual Report : 1906-7, pp. 180-83 ಯಲ್ಲಿ ಚೆನ್ನಾಗಿ ಸಂಕ್ಷಿಪ್ತಗೊಳಿಸಿದ್ದಾರೆ.
18. ಡಿ. ಆರ್. ಭಾಂಡಾರಕರ, JBBRAS, XXII, 151-65, EI, XXX. 8-12, ಮತ್ತು Bühler, EI, I, 271-87.

ಬ್ರಾಹ್ಮಣ ದಂಪತಿಗಳಾದ ವಿಶ್ವರಾಜ ಹಾಗೂ ಸುದರ್ಶನಾರ ಮಗನಾಗಿ ಉಲ್ಕಾಪುರಿ ಎಂಬ ಊರಲ್ಲಿ ಜನಿಸಿದನು. ಈ ದೈವೀ ಶಿಶು ಹಲವು ಅತಿಮಾನವೀಯ ಕೃತ್ಯಗಳನ್ನು ಎಸಗಿತು. ಆದರೆ ಏಳು ತಿಂಗಳಲ್ಲಿಯೇ ಅಸುನೀಗಿತು. ತಾಯಿಯು ಈ ಮಗುವಿನ ಕಳೇವರವನ್ನು ಹತ್ತಿರದ ಒಂದು ತೀರ್ಥದಲ್ಲಿ ನೀರಿಗೆ ಬಿಟ್ಟಳು. ಆಮೆಗಳು ಅದನ್ನು ಜಾಲೇಶ್ವರ ಲಿಂಗನ ಬಳಿಗೆ ಸಾಗಿಸಿದವು. ಪಾತಾಳ ಲೋಕದಲ್ಲಿ ಮಗುವನ್ನು ಜೀವಂತಗೊಳಿಸಲಾಯಿತು. ತರುವಾಯದಲ್ಲಿ ಆ ಮಗು ಬೆಳೆದು 'ಕಾಯಾವರೋಹಣ'ಕ್ಕೆ ಹೋಯಿತು. ಅಲ್ಲಿ ಅವನು ತನ್ನ ಯತಿತ್ವದ ಕಾರ್ಯವನ್ನು ಆರಂಭಿಸಿದನು. 'ವಾಯು' ಮತ್ತು 'ಲಿಂಗ ಪುರಾಣ'ಗಳಲ್ಲಿ ಶಿವನು ಪೌರಾಣಿಕ ಪದ್ಧತಿಯಂತೆ ತಾನು, 'ಕಾಯಾರೋಹಣ('ವಾಯು') ಅಥವಾ 'ಕಾಯಾವತಾರ'('ಲಿಂಗ') ರುದ್ರಭೂಮಿಯಲ್ಲಿ ದೊರೆತ ಒಂದು ಕಳೇವರವನ್ನು ಪ್ರವೇಶಿಸಿ, ಬ್ರಹ್ಮಚಾರಿ ಲಕುಲಿನ್‌ನಾಗಿ ಅವತರಿಸುವೆನೆಂದು ಭವಿಷ್ಯ ಹೇಳುತ್ತಾನೆ. ಕೃಷ್ಣನು ವಾಸುದೇವನಾಗಿ ಅವತರಿಸಿದ ಇಪ್ಪತ್ತೆಂಟನೆಯ ಯುಗದಲ್ಲಿ ಈ ಸಂಗತಿ ನಡೆಯಲಿತ್ತು. ಉದಯಪುರದ ಬಳಿಯ ಏಕಲಿಂಗಜೀ ದೇವಾಲಯದ, ಕ್ರಿ.ಶ.971ರ ಒಂದು ಶಾಸನವು, ಆಧುನಿಕ ಭಡೋಚ ಎಂಬ ಊರಿನ ಸುತ್ತಲಿನ ಭೃಗುಕಚ್ಛವೆಂಬ ನಾಡಿನಲ್ಲಿ ಒಂದು ಸಲ ಭೃಗುವು ವಿಷ್ಣುವಿನಿಂದ ಶಾಪಿತನಾದುದನ್ನು ಕುರಿತು ಹೇಳುತ್ತದೆ. ಆಗ ಆ ಋಷಿಯು ತನಗೆ ನೆರವಾಗಲೆಂದು ಶಿವನನ್ನು ಒಲಿಸಿಕೊಂಡನು. ಹೀಗಾಗಿ ಆ ದೇವನು ದಂಡಧಾರಿಯಾದ (ಲಕುಲ) ಯತಿಯ ರೂಪದಲ್ಲಿ ಅವತರಿಸಿದನು. ಇದು ನಡೆದುದು ಕಾಯಾವರೋಹಣದಲ್ಲಿ.[19] ಇದಲ್ಲದೆ ಉದಯಪುರದ ಬಳಿ ದೊರೆತ ಪಳದಿಯ ಕ್ರಿ.ಶ.1116ರ ಒಂದು ಶಾಸನವು ಹೇಳುವಂತೆ, ಧರ್ಮದ ಮಹಾಮರವನ್ನು ಕಲಿಯುಗದ ಕೊಡಲಿಗಳಿಂದ ಕಡಿದು ಹಾಕಲಾಗುವುದನ್ನು ಕಂಡ ಶಿವನು ಭೃಗುಕಚ್ಛದಲ್ಲಿರುವ ಕಾಯ್ವಾವರೋಹಣದಲ್ಲಿ ಧರಣಿಗೆ ಇಳಿದು ಬಂದನು.[20] ಗುಜರಾತದಲ್ಲಿರುವ ಸೋಮನಾಥದ ಹದಿಮೂರನೆಯ ಶತಮಾನದ ಕೊನೆಯ, ಸಾರಂಗದೇವನ ಚಿಂತ್ರ 'ಪ್ರಶಸ್ತಿ' ಶಾಸನವು, ಶಿವನು ಹೇಗೆ ಲಾಟ ಎಂಬಲ್ಲಿಗೆ ಬಂದು ಕಾರೋಹಣ ಎಂಬಲ್ಲಿ 'ಬ್ರಾಹ್ಮಾಂಡದ ಮೇಲೆ ತನ್ನ ಕೃಪೆಯನ್ನು ಬೀರಲೆಂದು, ಹಾಗೂ ತನ್ನ ತಂದೆಯ ಶಾಪದಿಂದ ದೀರ್ಘಕಾಲದಿಂದ ಮಕ್ಕಳಿಗೆ ವಂಚಿತನಾದ ಉಲೂಕನ ಸಂತತಿಯ ಮೇಲೆ ಕೃಪೆಯನ್ನು ತೋರಲೆಂದು -------'[21] ಲಕುಲೀಶನಾಗಿ ನೆಲೆಸಿದನೆಂದು

---

19. ಡಿ. ಆರ್. ಭಾಂಡಾರಕರ, JBBRAS, XXII, 166. ಈ ಸಂಘಟನೆಯನ್ನು ವಿಷ್ಣುವಿನ ವಿರುದ್ಧದ ಕಾಳಗಕ್ಕಾಗಿ ಬಳಸಿಕೊಳ್ಳಲಾಗಿತ್ತೆ? ಭೃಗುವನ್ನು ಸಾಮಾನ್ಯವಾಗಿ ಒಬ್ಬ ವೈಷ್ಣವನೆಂದು ಚಿತ್ರಿಸಲಾಗುತ್ತದೆ.

20. ವ್ಯಾಸ, EI, XXX, 11.

21. ಅನು. Bühler, EI, I, 274. ಫ್ಲೀಟ್ (JRAS for 1907, ಪು. 419) ಬೇರೊಂದು ಅರ್ಥವನ್ನು ನೀಡುತ್ತಾರೆ. ಅದರಂತೆ ಶಿವಲಕುಲೀಶನು '(ತನ್ನ) ತಂದೆಯ ಮೇಲಿನ ಶಾಪದಿಂದಾಗಿ ದೀರ್ಘಕಾಲ ಗಂಡು ಮಕ್ಕಳಿಲ್ಲದ ಉಲೂಕನ ಗಂಡುಮಕ್ಕಳನ್ನು ಅನುಗ್ರಹಿಸಲೆಂದು ---- ಕಾರೋಹಣದಲ್ಲಿ ನೆಲೆಸಿದನು.'

ವಿವರಿಸುತ್ತದೆ.

ಈ ಬಗೆಯ ಕಥನಗಳಿಂದ ಗಟ್ಟಿಯಾದ ಒಂದು ಐತಿಹಾಸಿಕ ಮಾಹಿತಿಯನ್ನೇನೂ ಪಡೆಯಲು ಸಾಧ್ಯವಿಲ್ಲೆಂಬುದು ಸ್ವಯಂಸಿದ್ಧ. ಆದರೂ ಎರಡು ಅಂಶಗಳನ್ನು ಕುರಿತು ಮಾತ್ರ ಅವು ಒಮ್ಮತ ಹೊಂದಿರುತ್ತವೆ. ಇವೆಂದರೆ ಲಕುಲೀಶನು ಶಿವನ ಅವತಾರನಾಗಿದ್ದನು. ಅಲ್ಲದೆ ಅವನು ವಾತ ಅಥವಾ ಭೃಗುಕಚ್ಛ ಪ್ರದೇಶದಲ್ಲಿ ಕಾಯಾವರೋಹಣ, ಕಾಯಾವತಾರ, ಕಾರೋಹಣ ಅಥವಾ ಕಾಯಾರೋಹಣ ಎಂಬಲ್ಲಿ ನೆಲೆಸಿದ್ದನೆಂಬುದು. ಲಕುಲೀಶನು ಬ್ರಾಹ್ಮಣ ಕುಟುಂಬದವನಾಗಿದ್ದು ತನ್ನ ಸಿದ್ಧಾಂತಗಳನ್ನು ಬೋಧಿಸಲೆಂದು ಉಜ್ಜಯನಿಯಂತಹ ದೂರದ ನಗರದವರೆಗೆ ಪ್ರಯಾಣ ಮಾಡಿದನೆಂದು ಕಾಣುತ್ತದೆ.

ಕಾಯಾವರೋಹಣ ಎಂದರೆ ಬಡೋದೆಯ ಉತ್ತರಕ್ಕೆ ಸುಮಾರು 19 ಮೈಲುಗಳ ಮೇಲಿರುವ ಈ ಕಾಲದ ಕಾರವಾಣ ಎಂಬ ಗ್ರಾಮವೆಂದು ಒಮ್ಮತದಿಂದ ಗುರುತಿಸಲಾಗಿದೆ.[22] 'ಕಾರವಾಣ ಮಾಹಾತ್ಮ್ಯ'ದ ಪ್ರತಿಯಲ್ಲಿ ಹೇಳಲಾದ ಲಕುಲೀಶನ ಹುಟ್ಟು ಊರಾದ ಉಲ್ಕಾಪುರಿ ಎಂದರೆ ಇದೇ ನಾಡಿನ ಇಂದಿನ ಅವಾಖಲ. ಚಿಂತ್ರ ಪ್ರಶಸ್ತಿಯಲ್ಲಿ ಪೂರ್ವವೃತ್ತಾಂತವಾಗಿ ಬಂದ ಉಲೂಕನ ಸಂತಾನ ಅಥವಾ ಗಂಡುಮಕ್ಕಳ ಪವಾಡವನ್ನು ಬೇರೆ ಆಕರಗಳಲ್ಲಿ ನಮೂದಿಸಲಾಗಿಲ್ಲ. ಉಲೂಕ ಅದು ಹೆಗೋ ಉಲ್ಕಾಪುರಿಯೊಂದಿಗೆ ಜೋಡಿಸಲ್ಪಟ್ಟಿರಲು ಸಾಕು.[23] ಉಲೂಕ ಹೆಸರು ಶಿವನ ಅವತಾರಗಳನ್ನು ಕುರಿತಾದ ಪೌರಾಣಿಕ ಹೆಸರುಗಳ ಪಟ್ಟಿಯಲ್ಲಿ ಕೂಡ ಕಾಣಿಸಿಕೊಳ್ಳುತ್ತದೆ. ಈತನು ಲಕುಲೀಶನ ಹಿಂದಿನ ತಲೆಮಾರಿನವನು, ಅಲ್ಲದೆ ವೈಶೇಷಿಕ ತತ್ವವಿಚಾರ ಪದ್ಧತಿಯ ಸಂಸ್ಥಾಪಕನಾದ ಕಾಣಾದನ ಸಂಪರ್ಕದಲ್ಲಿ ಇದ್ದವನು. ಫ್ಲೀಟ್ ಇವರು (JRAS for 1907, pp. 425-26) ಶಾಸನದಲ್ಲಿ ಕಂಡ ಉಲೂಕನನ್ನು ಮಹಾಭಾರತದ ಗಾಂಧಾರ ದೇಶದ ಸುಬಲನೆಂಬ ಅರಸನ ಮಗನಾದ ಶಕುನಿ ಹಾಗೂ ಶಕುನಿಯ ಮಗ ಉಲೂಕನೊಂದಿಗೆ ಹೊಂದಿಸಲು ಯತ್ನಿಸಿದ್ದು, ಅದು ಎಳ್ಳಷ್ಟೂ ಮನಗಾಣುವಂತಿಲ್ಲ.

ಲಕುಲೀಶನ ಹೆಸರಿನ ಕೆಲವು ಏರುಪೇರುಗಳಾದ ನಕುಲೀಶ, ಲಕುಲೇಶ, ಲಕುಲಿನ್ ಹಾಗೂ ಲಕುಲೀಶ್ವರಗಳೆಲ್ಲ ಲಕುಲ ಎಂಬ ಪದದಿಂದಾಗಿ ಬಂದವುಗಳು. ಲಗುಡ ಅಥವಾ ಲಕುಟ ಅಂದರೆ 'ದೊಣ್ಣೆ'. ಏಕಲಿಂಗಜಿಯ ಶಾಸನದ,[24] 'ಯಾವನ ಕೈ, ಒಂದು ದೊಣ್ಣೆಯಿಂದಾಗಿ

22. ನೋಡಿ. Bühler, EI, I, 274. 'ಕಾಯಾವರೋಹಣ' (ದೇಹವು ಕೆಳಕ್ಕೆ ಇಳಿಯುವುದು) ಹಾಗೂ 'ಕಾಯಾರೋಹಣ' (ದೇಹವು ಮೇಲಕ್ಕೆ ಏರುವುದು) ಪದಗಳ ಅರ್ಥವು ಒಂದಕ್ಕೊಂದು ವಿರುದ್ಧವಾದುದು. ಆದರೂ ಇವೆರಡೂ ಒಂದೇ ಊರನ್ನು ನಿರ್ದೇಶಿಸುತ್ತಿರುವುದು ಮಾತ್ರ ಸ್ಪಷ್ಟ. ನೋಡಿ ಹರ, 'Pāśupata Kenkyū II ----'

23. ನೋಡಿ Buhler, EI, I. 274.

24. ಡಿ. ಆರ್. ಭಾಂಡಾರಕರ, JBBRAS, XXII, 166.

ವಿಶೇಷ ಲಕ್ಷಣವನ್ನು ಪಡೆದಿದ್ದಿತೋ (ಲಕುಲೋಪ ಲಕ್ಷಿತಕರ)' ಹಾಗೂ 'ಕಾರವಣ ಮಾಹಾತ್ಮ್ಯ'ದ[25] ವಿಶೇಷಣ ಪದವಾದ 'ಲಕುಟಪಾಣಿ' ಎಂಬ ಅಭಿವ್ಯಕ್ತಿಗಳಿಂದ ಇದು ಸ್ಪಷ್ಟ. ಹೀಗಾಗಿ ಲಕುಲೀಶನೆಂದರೆ (ಲಕುಲಿನ್) ಕೈಯಲ್ಲಿ ಒಂದು ದೊಣ್ಣೆಯನ್ನು ಹಿಡಿದುಕೊಂಡಿರುವ ಒಬ್ಬ ಈಶನಾಗಿದ್ದಾನೆ (ಒಡೆಯ). ಬೂಹ್ಲರ್ ಅವರು (E I. J, 274) ಸೂಚಿಸುವಂತೆ ಒಂದು ಸಾದಾ ದೊಣ್ಣೆಯು ಖಟ್ವಾಂಗವಲ್ಲ-ಲಕುಲೀಶನನ್ನು ಗುರುತಿಸುವ ನಿಜವಾದ ಒಂದು ಲಾಂಛನ ಎನ್ನಿಸಿದೆ. ಡಿ.ಆರ್.ಭಾಂಡಾರಕರರು 'ವಿಶ್ವಕರ್ಮಾವತಾರ ವಾಸ್ತು ಶಾಸ್ತ್ರ'ವೆಂಬ ಕೃತಿಯಿಂದ ಒಂದು ಪದ್ಯವನ್ನು ಉದ್ಧರಿಸುತ್ತಾರೆ. ಅದೆನ್ನುವಂತೆ, ಲಕುಲೀಶನ ಶಿಲ್ಪವು ಅವನನ್ನು ಪದ್ಮಾಸನದಲ್ಲಿರುವವ, ನಿಗುರಿ ನಿಂತ ಅವನ ಶಿಶ್ನ, ಬಲಗೈಯಲ್ಲೊಂದು ಗಜನಿಂಬೆ (ಮಾತುಲಿಂಗ) ಹಾಗೂ ಎಡಗೈಯಲ್ಲಿ ಒಂದು ದೊಣ್ಣೆಯನ್ನು ಹಿಡಿದಂತೆ ತೋರಿಸಬೇಕೆಂದು ಸ್ಪಷ್ಟವಾಗಿ ನಿರ್ದೇಶಿಸಲಾಗಿದೆ.[26] ಬಹಳಷ್ಟು ಶಿಲ್ಪಗಳು ಅವನನ್ನು ಇದೇ ಭಂಗಿಯಲ್ಲಿ ತೋರಿಸುತ್ತವೆ.[27]

ಇತ್ತೀಚೆಗೆ ಡ್ಯಾನಿಯೆಲ್ ಎಚ್. ಎಚ್. ಇಂಗಲ್ಸ್ ಅವರು ಪಾಶುಪತರ ಧಾರ್ಮಿಕ ಆಚರಣೆ ಹಾಗೂ ಸಿನಿಕ್ಕರ (Cynics) ಧರ್ಮಾಚರಣೆಗಳ ನಡುವೆ ಎದ್ದು ಕಾಣುವಂತಹ ಸಾಧರ್ಮ್ಯಗಳನ್ನು ತೋರಿಸಿಕೊಟ್ಟಿರುವರು [28]. ಅವರ ವೀಕ್ಷಣೆ ಹೀಗಿದೆ: ' ಲಕುಲೀಶನೆಂಬ ಹೆಸರು ಸಿನಿಕ್ ಪಂಥದ ಪೋಷಕನು, ಇಂಥದೊಂದು ಹೆಸರಾದ ಸಂಘವನ್ನು ನಿಯಂತ್ರಿಸುತ್ತಿದ್ದ ಇನ್ನೊಬ್ಬ ದೇವ ಮಾನವನಾದ ಹರ್ಕ್ಯುಲಿಸ್ ಹೆಸರಿನ ಅರ್ಥ ಹಾಗೂ ಧ್ವನಿ ಸಾಮ್ಯಗಳ ಹೋಲಿಕೆಯ ಮೂಲಕ ಹುಟ್ಟಿದುದೆಂಬ ಸಂದೇಹದಿಂದ ಯಾವನೂ ತನ್ನನ್ನು ತಪ್ಪಿಸಿಕೊಳ್ಳಲಾರ'. [29] ಫ್ಲೀಟ್ ಅವರು (JRAS for 1907, p. 424) ಬಲು ಹಿಂದೆಯೇ, ಧ್ವನಿ ಸಾಮ್ಯವನ್ನು ಅಲ್ಲದಿದ್ದರೂ, ಲಕುಲೀಶ ಹಾಗೂ ಹರ್ಕ್ಯುಲಿಸ್ ಇವರ ನಡುವಣ ದೈಹಿಕ ಸಾಮ್ಯವನ್ನು ಗುರುತಿಸಿದ್ದರು. ಪುರಾತನ ಗ್ರೀಕ್ ಬರಹಗಾರರು ಹರ್ಕ್ಯುಲಿಸ್ ಎಂದು ಕರೆಯುತ್ತಿದ್ದ ಭಾರತೀಯ ದೇವನೆಂದರೆ, ಬಹಳಷ್ಟು ಜನ ವಿದ್ವಾಂಸರು ಸಾಮಾನ್ಯವಾಗಿ ನಂಬುವಂತೆ ಕೃಷ್ಣನಾಗಿರದೆ ಶಿವನಾಗಿರಬಹುದೆಂದು ಅವರು ಸೂಚಿಸಿದ್ದರು. ಪ್ರತಿಯೊಂದು ಸಂದರ್ಭದಲ್ಲೂ ಈ ಮಾತು ನಿಜ ಅಹುದೋ, ಅಲ್ಲವೋ, ಏನೇ ಇರಲಿ, ಆದರೆ ಅವರು

---

25. 'ಗಣಕಾರಿಕಾ', ಪು. 37.
26. Archaeological Survey of India, Annual Report: 1906-7 ಪು. 186.
27. ನೋಡಿ ಅದೇ. pp. 184-89. ಈ ಶಿಲ್ಪದ ಭಂಗಿಗಳ ವ್ಯತ್ಯಾಸಗಳನ್ನು ಕುರಿತಾದ ಇತ್ತೀಚಿನ ಚರ್ಚೆಗಾಗಿ ನೋಡಿ ಆರ್. ಸಿ. ಅಗ್ರವಾಲ, 'Two Standing Lakulīśa Sculptures from Rajasthan', JOIB, XIV, (1965), 388-91.
28. 'Cynics and Pāśupatas: The Seeking of Dishonor', Harvard Theological Review, LV (1962), 281-98.
29. ಅದೇ. ಪು. 296. ಅಲ್ಲದೆ ನೋಡಿ pp. 292-93.

'ಲಕುಲೀಶನಾದ ಶಿವನ ಸಂಘಟನೆಯೇ ಹರ್ಕ್ಯುಲಿಸ್‌ನ ಸಂಘಟನೆಯಾಗಿದೆ, ಎಂಬ ಬಗೆಗೆ ನಾವು ಸಂದೇಹ ಪಡುವಂತಿಲ್ಲ' ಎಂಬ ಮಾತನ್ನೂ ಸೇರಿಸುತ್ತಾರೆ. ಇದಲ್ಲದೆ ಅವರು, ಒಂದನೆಯ ಕ್ರಿ.ಶ.ಶತಮಾನದ ಕುಷಾಣರ ನಾಣ್ಯಗಳ ಮೇಲಿರುವ ಹರ್ಕ್ಯುಲಿಸ್‌ನಿಂದ ಶಿವನಿಗೆ ಬಲದಾವಣೆ ನಡೆಯಿತೆಂದು ಸೂಚಿಸುತ್ತಾರೆ. ಹುವಿಷ್ಕರ ಎಂಬ ಒಂದು ನಾಣ್ಯದ ಮೇಲೆ ದೊಣ್ಣೆಯನ್ನು ಹಿಡಿದು ನಿಂತಿರುವ ಶಿವನಿರುವನು.

ಪಾಶುಪತ ಹಾಗೂ ಸಿನಿಕ್ ಇವರೀರ್ವರ ಮತಾಚರಣೆಗಳಲ್ಲಿ ಹೋಲಿಕೆಗಳಿದ್ದರೂ, ಲಕುಲೀಶ ಹಾಗೂ ಹರ್ಕ್ಯುಲಿಸ್‌ರಲ್ಲಿ ಹೋಲಿಕೆ ಗಳಿದ್ದರೂ 'ಈ ಪುರಾವೆಯು ಆನುವಂಶಿಕತೆಯ ಸಂಬಂಧವನ್ನು ತೋರಿಸುತ್ತದೆಂಬ ಬಗೆಗೆ ಸಂದೇಹವನ್ನು ತಳೆಯಲು' ಇಂಗಾಲ್ಸರನ್ನು (HTR, LV, 296) ಒತ್ತಾಯಿಸಿತ್ತದೆ. ಹೀಗಾಗಿ ಅವರು ಸೇಯರ್ ಅವರ ತೀರ್ಮಾನವನ್ನು ತಳ್ಳಿ ಹಾಕುತ್ತಾರೆ. ಪಾಶುಪತರ ಸಮಾಂತರ ಸಂಪ್ರದಾಯಗಳನ್ನು ಅರಿತುಕೊಳ್ಳದೆಯೆ ಸೇಯರ್‌ರು ಸಿನಿಕ್ ಪಂಥದ ಮೂಲವನ್ನು ಭಾರತದಲ್ಲಿ ಕಂಡು ಹಿಡಿಯ ಬಯಸಿದರು.[30] ಒಟ್ಟಿನಲ್ಲಿ ನಾವು ಇಂಗಾಲ್ಸರೊಂದಿಗೆ ಒಮ್ಮತ ಹೊಂದುವತ್ತ ವಾಲಿದ್ದೇವೆ. ಏಕೆಂದರೆ ಅವರು (HTR, LV, 296) ಇವೆರಡೂ ಪಂಥಗಳಲ್ಲಿ ವಾಸ್ತವಪ್ರಾಯವಾದ ನೇರ ವಿದೇಶೀಯ ಹಿನ್ನೆಲೆಯಿರುವಂತಹ ಅದಾವುದೇ ಪುರಾವೆಯಿಲ್ಲವೆಂದು ಸೂಚಿಸುತ್ತಾರೆ. ಇಷ್ಟಾಗಿಯೂ, ಈ ವಿದ್ವಾಂಸರಲ್ಲಿ ಒಬ್ಬನೂ ಗಮನಿಸದಿದ್ದ ಒಂದೆರಡು ಪರಿಸ್ಥಿತಿ ಜನ್ಯವಾದ ಪುರಾವೆಗಳಿದ್ದು, ಅವು ಒಂದು ಬಗೆಯ ನಂಟನ್ನು ನಿರ್ದೇಶಿಸುತ್ತವೆ.

ಸೇಯರ್ ಅವರು ಭಾರತೀಯ ಧರ್ಮ ಹಾಗೂ ತತ್ವವಿಚಾರಗಳು ಗ್ರೀಸಿನತ್ತ ವಲಸೆ ಹೋದುದನ್ನು ಚೆನ್ನಾಗಿಯೇ ನಮೂದಿಸಿದ್ದಾರೆ. ಆದರೆ ಅವರು ಮರುದಿಕ್ಕಿನ ವಲಸೆಯತ್ತ ತಮ್ಮ ಗಮನವನ್ನು ಹಸಿರಿಲ್ಲ. ಅವರ 'ಗ್ರೀಕರು ಬೇರೆ ದೇಶಗಳ ವಿಚಾರಗಳಿಗೆ ತಮ್ಮನ್ನು ಹೆಚ್ಚು ತೆರೆದುಕೊಂಡವರಾಗಿದ್ದರು. ಆದರೆ ಭಾರತೀಯರು ಮಾತ್ರ ಹಾಗಿರಲಿಲ್ಲ' ಎಂಬ (ಪು. 45) ಹೇಳಿಕೆಯನ್ನು ಆರ್. ವಿ. ಜೈರಝಭಾಯಿ ಅವರು ತಳ್ಳಿ ಹಾಕುತ್ತಾರೆ.[31] ಹೀಗಾಗಿ, ಯಾರೇ ಆದರೂ ಇಂಗಾಲ್ಸರೆನ್ನುವಂತೆ (HTR, LV, 296) ಕೈಗಡ ಪಡೆಯುವಿಕೆಯೆಂಬುದು ಏನಾದರೂ ನಡೆದ್ದದ್ದೇ ಆದರೆ, ಪಾಶುಪತರು ಸಿನಿಕ್‌ರಿಂದ ತುಂಬ ಪ್ರಭಾವಿತರಾಗಿರುವ ಹೆಚ್ಚಿನ ಸಾಧ್ಯತೆ'ಯನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಸಿನಿಕ್ ಪಂಥದ ಸಮರ್ಥ ಸಂಸ್ಥಾಪಕನಾದ ಡಯೋಜೆನೆಸ್ ಇವನ ಊರಾದ ಸಿನೋಪ್ ಭಾರತ ಹಾಗೂ ಗ್ರೀಸಗಳ ಪುರಾತನ ವಾಣಿಜ್ಯ ಮಾರ್ಗದ ಮೇಲಿರುವ ಒಂದು ಪ್ರವೇಶದ್ವಾರ ಎನ್ನಿಸಿತ್ತು,

---

30. 'Diogenes of Sinope : A study of Greek Cynicism, pp. 38-47.
31. 'Foreign Influence in Ancient India'. ವಿಶೇಷವಾಗಿ ಭಾರತದ ಮೇಲಿನ ಗ್ರೀಕ ಸಂಸ್ಕೃತಿಯ ಪ್ರಭಾವಕ್ಕಾಗಿ ಐದನೆಯ ಅಧ್ಯಾಯವನ್ನು ನೋಡಿ.

ಎಂದು ಸೇಯರ್ (pp. 39-40) ಅವರು ಒತ್ತಿ ಹೇಳುತ್ತಾರೆ. ನಾವಿಲ್ಲಿ ಒಂದು ಸಂಗತಿಯನ್ನು ಸೇರಿಸಬಹುದಾಗಿದೆ. ಇದೆಂದರೆ ಲಕುಲೀಶನು ಬೋಧಿಸುತ್ತಿದ್ದ ಭಡೋಚ ಅಥವಾ ಭೃಗುಕಚ್ಛದ ಬಗೆಗೂ ಈ ಮಾತು ನಿಜವೆಂಬುದು. 'ಪೆರಿಪ್ಲಸ್'ದ ಲೇಖಕನ ಕಾಲಕ್ಕೆ (ಕ್ರಿ.ಶ.ಒಂದನೆ ಶತಮಾನ) 'ಬರಿಗಝ' (Barygaza) (ಭಡೋಚ)ವು ಪಶ್ಚಿಮಭಾರತದ ಪ್ರಮುಖ ವಾಣಿಜ್ಯ ಬಂದರವಾಗಿತ್ತು. ಮೌರ್ಯರ ಕಾಲದಷ್ಟು ಹಿಂದಿನಿಂದಲೇ ಅದು ಈ ಸ್ಥಾನವನ್ನು ಪಡೆದಿತ್ತು.[32] 'ನ್ಯಾಯ ಸೂತ್ರ'ದ ಸಾಂಪ್ರದಾಯಿಕ ಲೇಖಕನಾದ ಗೌತಮ ಅಥವಾ ಅಕ್ಷಪಾದ ಕೂಡ ಇದೇ ನಾಡಿನಲ್ಲಿ ನೆಲೆಸಿದ್ದನೆಂದು ನಂಬಲಾಗಿದೆಯಲ್ಲದೆ ಒಬ್ಬ ಆದುನಿಕ ಅಧಿಕಾರಿ ವ್ಯಕ್ತಿ ಕೂಡ ಗೌತಮನು ಬಹಳಷ್ಟು ತರ್ಕಗಳನ್ನು ಎರಿಸ್ಟಾಟಲ್‌ನಿಂದ ಎರವಲು ಪಡೆದಿರುವನೆಂದು ಸಾಧಿಸುತ್ತಾನೆ.[33] ನಾವು ಆಗಲೆ ಗಮನಿಸಿದಂತೆ ಪಾಶುಪತ ಹಾಗೂ ಕಾಳಾಮುಖರೆಲ್ಲ ತತ್ವಶಾಸ್ತ್ರದ ಶಾಖೆಗಳಾದ ನ್ಯಾಯ ಹಾಗೂ ವೈಶೇಷಿಕ ಸಂಪ್ರದಾಯಗಳೊಂದಿಗೆ ಹತ್ತಿರದ ನಂಟನ್ನು ಹೊಂದಿದ್ದರು. ಇಲ್ಲಿ ಇನ್ನೊಂದು ಗಮನಿಸತಕ್ಕ ಸಂಗತಿಯಿದೆ. ಇದೆಂದರೆ, ಕಾಳಾಮುಖರು ಯಾವ ನಾಡಿನಿಂದ ದಕ್ಷಿಣದತ್ತ ವಲಸೆ ಹೋದರೋ ಆ ಕಾಶ್ಮೀರ ನಾಡು ಪಡುವಣ ದೇಶಗಳಿಗೆ ಹೋಗುವ ಮುಖ್ಯವಾದ ಒಂದು ವಾಣಿಜ್ಯ ಮಾರ್ಗದ ಮೇಲಿತ್ತಲ್ಲದೆ, ಅದು ಇಂಡೋಗ್ರೀಕರಡಿಯ ಗ್ರೀಕ್ ಸಂಸ್ಕೃತಿಗೆ ತನ್ನನ್ನು ಒಡ್ಡಿಕೊಂಡಿತ್ತು.

ಲಕುಲೀಶನ ಕಾಲವನ್ನು ಕುರಿತು ಬಹಳಷ್ಟು ವಾದಕ್ಕೆಟ್ಟುಕೊಂಡಿದೆ. ಫ್ಲೀಟರು (EI, VI, 228) ಮೊದಲಿಗೆ ಅವನನ್ನು ಬಳ್ಳಿಗಾವೆಯಲ್ಲಿ ಕ್ರಿ.ಶ.1035ರಲ್ಲಿ ಪಂಚಲಿಂಗ ದೇವಾಲಯದ ಅಧ್ಯಕ್ಷ, ಕಾಳಾಮುಖ ಯತಿ, ಲಕುಲೀಶ್ವರ ಪಂಡಿತನೊಂದಿಗೆ ಹೊಂದಿಸಿದರು. ತರುವಾಯ ಅವರು ಡಿ. ಆರ್. ಭಾಂಡಾರಕರರ ಸಂಶೋಧನೆಗಳ ಬೆಳಕಿನಲ್ಲಿ ತಮ್ಮ ಈ ಅಭಿಪ್ರಾಯವನ್ನು (JRAS for 1907, ಪು. 420) ತ್ಯಜಿಸಿದರು. ಸಾಮಾನ್ಯವಾಗಿ ಗುಪ್ತಕಾಲದ್ದೆನ್ನಲಾದ 'ವಾಯು ಪುರಾಣ'ದಲ್ಲಿ ಬರುವ ಲಕುಲೀಶನ ಉಲ್ಲೇಖಗಳನ್ನು ಗಮನದಲ್ಲಿರಿಸಿಕೊಂಡು ಭಾಂಡಾರಕರರು (JBBRAS, XXII, 157) ಅವನನ್ನು 'ತೀರ ಇತ್ತೀಚೆಗೆ, ಎಂದರೆ ಕ್ರಿ. ಶ. ಒಂದನೆಯ ಶತಮಾನಕ್ಕೆ' ಸೇರಿಸಿದರು. ಆರ್. ಜಿ. ಭಾಂಡಾರಕರರು ಮಹಾಭಾರತದಲ್ಲಿ ನಮೂದಿಸಲಾದ ಪಾಶುಪತ ಪದ್ಧತಿಯ ಹುಟ್ಟು ಹಾಗೂ ಅದನ್ನು ನಂಬಿ ಲಕುಲೀಶನ ಬಗೆಗಿನ ಕಾಲವನ್ನು ಕೂಡ 'ಪಂಚರಾತ್ರ ಪದ್ಧತಿಯು ಶುರುವಾದ ಸುಮಾರು ಒಂದು ಶತಮಾನದ ತರುವಾಯ, ಅಂದರೆ ಕ್ರಿ. ಶ. ಪೂರ್ವ ಎರಡನೆಯ ಶತಮಾನ' ಎಂದು

32. ನೋಡಿ ಆರ್. ಥಾಪರ, 'Asoka and the Decline of the mayryas,' pp. 80-83, 229 ಮತ್ತು ಇದಲ್ಲದೆ ಕೆ. ಎ. ಎನ್.ಶಾಸ್ತ್ರಿ (ಸಂ.), 'The Mauryas ---,' pp. 307-308, 437-46.

33. ನೋಡಿ ಎಸ್. ಸಿ. ವಿದ್ಯಾಭೂಷಣ, 'Influence of Aristotle on the Development of the Syllogism in Indian Logic,' JRAS for 1918, pp. 471, 486-88.

ತೀರ್ಮಾನಿಸಿದರು.[34] ಡಿ. ಆರ್. ಭಾಂಡಾರಕರರು 1931ರಲ್ಲಿ ಮಥುರೆಯಲ್ಲಿ ಇಮ್ಮಡಿ ಚಂದ್ರಗುಪ್ತನ ಕಂಬದ ಮೇಲಿನ ಶಾಸನವನ್ನು (EI, XXI, 1-9) ಪ್ರಕಟಿಸಿದರು. ಈ ಶಾಸನವು ಮಾಹೇಶ್ವರ ಗುರು ಉದಿತಾಚಾರ್ಯನು ತನ್ನ ಗುರು ಭಗವತ್ ಕಪಿಲ ಹಾಗೂ ಗುರುವಿನ ಗುರು ಭಗವತ್ ಉಪಮಿತರ ಹೆಸರುಗಳಿಂದ ಎರಡು ಲಿಂಗಗಳನ್ನು ದತ್ತಿ ನೀಡಿದುದಾಗಿ ನಮೂದಿಸುತ್ತದೆ. ಉದಿತಾಚಾರ್ಯನು ಭಗವತ್ ಕುಶಿಕನ ತರುವಾಯದ ಇಳಿಕ್ರಮದಲ್ಲಿ ಹತ್ತನೆಯವನೆಂದೂ, ಭಗವತ್ ಪರಾಶರನ ತರುವಾಯದ ಇಳಿಕ್ರಮದಲ್ಲಿ ನಾಲ್ಕನೆಯವನೆಂದೂ ಬಣ್ಣಿಸಲಾಗಿದೆ. ಭಾಂಡಾರಕರರು ಈ ಕುಶಿಕನನ್ನು ಲಕುಲೀಶನ ಶಿಷ್ಯನಾದ ಕುಶಿಕನೊಂದಿಗೆ ಹೊಂದಿಸುತ್ತಾರೆ. ಈ ಶಾಸನವು ಕ್ರಿ.ಶ.380ರಿಂದ ಮುಂದಿನದಾದ ಕಾರಣ ಅವರು ಲಕುಲೀಶನನ್ನು ಕ್ರಿ. ಶ. ಎರಡನೆಯ ಶತಮಾನದ ಪೂರ್ವಾರ್ಧಕ್ಕೆ ಸೇರ್ಪಡಿಸುತ್ತಾರೆ.

ಈ ತಾರೀಖು ಬಹಳಷ್ಟು ಜನ ವಿದ್ವಾಂಸರ ಮನ್ನಣೆಯನ್ನು ಸಮರ್ಥವಾಗಿ ಗಳಿಸಿದ್ದರೂ ಕೆಲವು ಸಮಸ್ಯೆ ಹಾಗೂ ಅನಿಶ್ಚಿತತೆಗಳು ಉಳಿದುಕೊಳ್ಳುತ್ತವೆ. ಅವುಗಳತ್ತ ಸರಿಯಾಗಿ ಗಮನ ಹರಿಸದೆ ನಿರ್ಲಕ್ಷ್ಯ ತೋರಲಾಗಿದೆ. ಮೊದಲನೆಯದಾಗಿ ಈ ಶಾಸನದಲ್ಲಿ 'ಲಕುಲೀಶ' ಇಲ್ಲವೆ 'ಪಾಶುಪತ' ಎಂಬ ಒಂದೂ ಪದವನ್ನು ಬಳಸಲಾಗಿಲ್ಲ. ಮುಂದಿನ ತಲೆಮಾರಿನ ಮಾಹೇಶ್ವರರು ಅವೆರಡೂ ಲಿಂಗಗಳನ್ನು ಸರಿಯಾಗಿ ಕಾಪಾಡಲಿ ಹಾಗೂ ಗೌರವಿಸಲಿ ಎಂದು ಅದನ್ನು ಒಂದು ಮನವಿಯಾಗಿ ಪ್ರಕಟಿಸಲಾಗಿತ್ತು. ಮಾಹೇಶ್ವರ ಎಂಬ ಪದವನ್ನು ಶಿವೋಪಾಸಕರಿಗಾಗಿ ಸಾಮಾನ್ಯವಾಗಿ ಒಂದು ಜಾತಿವಾಚಕ ಪದವಾಗಿ ಬಳಸಲಾಗುತ್ತದೆ. ಉದಾಹರಣೆಗೆಂದು ಹೇಳುವುದಾದರೆ ಸಾಯಣ ಮಾಧವರು ಈ ಪದವನ್ನು ಪಾಶುಪತ ಹಾಗೂ ಶೈವ ಸಿದ್ಧಾಂತಗಳ ಅನುಯಾಯಿಗಳಿಬ್ಬರಿಗೂ ಬಳಸುತ್ತಾರೆ.[35] ಶಂಕರಾಚಾರ್ಯರು ಇದನ್ನು ಪಾಶುಪತರಿಗಾಗಿ ಮಾತ್ರ ಬಳಸುತ್ತಾರೆಂದು ಕಾಣುತ್ತದೆ.[36] ಆದರೆ ವಾಚಸ್ಪತಿ ಮಿಶ್ರ ಹಾಗೂ ಭಾಸ್ಕರಾಚಾರ್ಯರು ಮಾಹೇಶ್ವರರನ್ನು ಸ್ಪಷ್ಟವಾಗಿ ನಾಲ್ಕು ಸಂಪ್ರದಾಯಗಳಾಗಿ ವಿಭಜಿಸುತ್ತಾರೆ.[37] ಉದಿತಾಚಾರ್ಯನ ಒಳ ಪಂಗಡದ ನಿಷ್ಠೆಯನ್ನು ಗುರುತಿಸಲು ಸಂಬಲರ್ಹವಾದ ಸಾಧನಗಳೆಂದರೆ ಈ ಶಾಸನದ ಕೊನೆಗೆ ಬರುವ ರುದ್ರನ ದೊಣ್ಣೆಯನ್ನು (ರುದ್ರ ದಂಡ) ಹಿಡಿದು ಕೊಂಡವನಾದ 'ದಂಡ'ನೆಂಬ ದೇವನ ಹೊಗಳಿಕೆಯ ಒಂದು ಸಾಲು ಹಾಗೂ ಕಂಬದ ಮೇಲಿನ, ಲಕುಲೀಶನಂತೆ ಕಾಣುವ, ಎದ್ದು ನಿಂತಿರುವ ಒಂದು ಕೆತ್ತನೆಯ ಮನುಷ್ಯಾಕೃತಿ. ಇದೊಂದು ಲಕುಲೀಶ-ಪಾಶುಪತನ ಶಾಸನವೆಂದು

---

34. 'Vaisnavism ----,'ಪು. 117.
35. 'ಸರ್ವದರ್ಶನ ಸಂಗ್ರಹ', ಸಂ. ಯು. ಎಸ್. ಶರ್ಮಾ, pp. 297, 320.
36. 'ಬ್ರಹ್ಮಸೂತ್ರ ಭಾಷ್ಯ, ii, 2.37
37. ವಾಚಸ್ಪತಿ ಮಿಶ್ರ, 'Bhh ā mati on Brahma. Sūtra' ii. 2.37. ಭಾಸ್ಕರಾಚಾರ್ಯ, 'ಬ್ರಹ್ಮಸೂತ್ರಭಾಷ್ಯ'. ii. 2.37.

ನ್ಯಾಯವಾಗಿ ನಂಬಲು ಇವೆಗ ಸಂಗತಿಗಳು ಅನುವು ಮಾಡಿಕೊಡುವಂತಿವೆಯಾದರೂ ಭಗವತ್ ಕುಶಿಕನನ್ನು ಗುರುತಿಸುವಲ್ಲಿ ಈಗಲೂ ಸಮಸ್ಯೆ ಉಳಿದುಕೊಳ್ಳುವುದು ಖಂಡಿತ. ವಿ.ಎಸ್.ಪಾಠಕರು ಗಮನಿಸಿದಂತೆ[38] ಲಕುಲೀಶನ ಆಧ್ಯಾತ್ಮಿಕವಾಗಿ ಮುಂದಿನ ತಲೆಮಾರಿನವರಲ್ಲಿ ಇನ್ನಿಬ್ಬರಾದರೂ ಕುಶಿಕರಿರುವರು. ಮೊದಲನೆಯ ಕುಶಿಕನು ಆತನ ಪಟ್ಟಶಿಷ್ಯನಾಗಿದ್ದು ಹಲವು ಶಾಸನಗಳು ಹಾಗೂ ಸಾಹಿತ್ಯಿಕ ಆಕರಗಳಲ್ಲಿ ಅವನನ್ನು ಕುರಿತು ನಮೂದಿಸಲಾಗಿದೆ.[39] ಎರಡನೆಯ ಕುಶಿಕನನ್ನು ಕುರಿತು ರಾಜಶೇಖರನ 'ಷಡ್ದರ್ಶನ ಸಮುಚ್ಚಯ'(ಇಸವಿ 1350),[40] ಹರಿಭದ್ರನ ಇದೇ ಹೆಸರಿನ [41] ಕೃತಿಯ ಬಗೆಗಿನ ಗುಣರತ್ನ (ಇಸವಿ 1375) ಬಾಷ್ಯ ಹಾಗೂ ಅಪ್ರಕ್ಷವಾಗಿ 'ಪಾಶುಪತ ರತ್ನ ಟೀಕಾ'ಎಂಬ 'ಗಣಕಾರಿಕಾ'ದ ಭಾಷ್ಯದಲ್ಲಿ ನಮೂದಿಸಲಾಗಿದೆ.[42] ಲಕುಲೀಶನಿಂದ ಶುರುವಾಗುವ ಹದಿನೇಳು ಅಥವಾ ಹದಿನೆಂಟು 'ತೀರ್ಥೇಶರು' ಅಥವಾ 'ತೀರ್ಥಕರ'ರ ಪಟ್ಟಿಯಲ್ಲಿ ಎರಡನೆಯ ಕುಶಿಕನು ಹತ್ತನೆಯವನು. ಈ ಪಟ್ಟಿ ಬಿಗಿಯಾಗಿ ಕ್ರಮಬದ್ಧವಾಗಿಲ್ಲವಾದರೂ ಲಕುಲೀಶನ ನಾಲ್ವರು ಶಿಷ್ಯಂದಿರು ಒಬ್ಬರನ್ನೊಬ್ಬರು

---

38. History of Saiva Cults ----ಪು. 9.
39. ಕೌಂಡಿಣ್ಯನ 'ಪಾಶುಪತ ಸೂತ್ರ'ದ 'ಭಾಷ್ಯ' i, I ದ ಹೊರತಾಗಿ ಕೌಶಿಕನ ಹೆಸರು 'ಚಿಂತ್ರ ಪ್ರಶಸ್ತಿ' (Bühler, EI, I, 273 ಮತ್ತು 281), 'ಏಕಲಿಂಗಿ'ಶಾಸನ (ಡಿ. ಆರ್. ಭಾಂಡಾರಕರ, JBBRAS, XXII, 152 ಮತ್ತು 157), ಪಳದಿಯ ಶಾಸನ (ವ್ಯಾಸ, EI, XXX, 9 ಮತ್ತು 11), ಕ್ರಿ.ಶ.987 ಉದಯಪುರ ಶಾಸನ, ಸರವಾಹನನದು (ಪಾಠಕರಿಂದ, pp. 9-10 ಗಳಿಂದ ಉದ್ಧೃತ), 'ವಾಯು ಪುರಾಣ', xxiii. 23, 'ಲಿಂಗ ಪುರಾಣ', i. 24-131, ಮತ್ತು 'ಕುಣಿಕ'ನೆಂದು 'ಕೂರ್ಮಪುರಾಣ' i. 53 (ಪು. 443), ಇವುಗಳಲ್ಲಿ ನಮೂದಿತವಾಗಿದೆ. ಅವನು ರಾಜಶೇಖರ ಮತ್ತು ಗುಣರತ್ನರ, ಕೆಳ ಬದಿಯಲ್ಲಿ ನಮೂದಿಸಲಾದ ಕೃತಿಗಳಲ್ಲಿ 'ಕೌಶಿಕ' ಹಾಗೂ 'ಸೌಷ್ಯ ಕೌಶಿಕ'ನಾಗಿಯೂ ಕಾಣಿಸಿಕೊಳ್ಳುತ್ತಾನೆ.
40. ದಲಾಲರಿಂದ 'ಗಣಕಾರಿಕಾ'ದ ಸಂಪಾದಿತ ಸಾರಾಂಶದಲ್ಲಿ, pp. 35-36.
41. ಸಂಪಾದಿತ ಹಾಗೂ ಅನುವಾದಿತ ಸಾರಾಂಶ, ಡಿ. ಆರ್. ಭಾಂಡಾರಕರರಿಂದ, Archeological Survey of India, Annual Report : 1906-7, pp. 190-92 ಗಳಲ್ಲಿ. ಈ ಸಾರಾಂಶವು, ದಲಾಲರಿಂದ ಸಂಪಾದಿತವಾದ ಗಣಕಾರಿಕಾ pp. 29-30ದ ಸಾರಾಂಶವು ಒಂದೇ ಆಗಿದ್ದರೂ ಅವುಗಳಲ್ಲಿ ತುಸುಮಟ್ಟಿಗಿನ ವ್ಯತ್ಯಾಸಗಳಿವೆ.
42. ಸಂ. ದಲಾಲರಿಂದ, ಪು.19 'ರತ್ನಟೀಕಾ'ವು ಲಕುಲೀಶನಿಂದ ಆರಂಭಿಸಿ, ರಾಜಶೇಖರ ಮತ್ತು ಗುಣರತ್ನರ ಪಟ್ಟಿಗಳಲ್ಲಿ ಹದಿನೇಳನೆಯ 'ತಿರ್ಥೇಶ'ನೆಂದು ಹೇಳಲಾಗಿರುವ ರಾಶಿಕರನೊಂದಿಗೆ ಮುಕ್ತಾಯಗೊಳ್ಳುವ 'ತೀರ್ಥಕರ'ರನ್ನು ನಮೂದಿಸುತ್ತದೆ. ಈ ಲೇಖಕರೀರ್ವರು ಹದಿನೆಂಟು ತೀರ್ಥೇಶರ ಹೆಸರುಗಳನ್ನು ಹೀಗೆ ನೀಡಿದ್ದಾರೆ: (1) ನಕುಲೀಶ ಅಥವಾ ನಕುಲಿನ್, (2) ಕೌಶಿಕ ಅಥವಾ ಸೌಷ್ಯ ಕೌಶಿಕ (=ಕುಶಿಕ I), (3) ಗಾರ್ಗ್ಯ, (4) ಮೈತ್ರ್ಯ, (5)ಕೌರುಷ ಅಥವಾ ಅಕೌರುಷ, (6) ಈಶಾನ, (7) ಪಾರಗಾರ್ಗ್ಯ, (8) ಕಪಿಲಾಣ್ಡ, (9) ಮನುಷ್ಯಕ, (10) ಅಪರಕೌಶಿಕ ಅಥವಾ ಕೌಶಿಕ (=ಕೌಶಿಕ II), (11) ಅತ್ರಿ, (12) ಪಿಂಗಲಾಕ್ಷ ಅಥವಾ ಪಿಂಗಳ, (13) ಪುಷ್ಪಕ ಅಥವಾ ಪುಷ್ಯಕ, (14) ಬೃಹದಾಚಾರ್ಯ ಅಥವಾ ಬೃಹದಾರ್ಯ, (15) ಅಗಸ್ತಿ, (16) ಸಂತಾನ (17)ರಾಶಿಕರ, ಮತ್ತು (18) ವಿದ್ಯಾಗುರು. ದಲಾಲರ ಗುಣರತ್ನ ಆವೃತ್ತಿಯಲ್ಲಿರುವ ಬಹಳಷ್ಟು ಹೆಸರುಗಳ ಪಟ್ಟಿಯು ಭಾಂಡಾರಕರ ಆವೃತ್ತಿಗಿಂತಲೂ ರಾಜಶೇಖರನ ಪಟ್ಟಿಗೆ ಹೆಚ್ಚು ಹೊಂದಿಕೊಳ್ಳುತ್ತವೆ.

ಹಿಂಬಾಲಿಸುತ್ತ ಬಂದವರು. ಎರಡನೆಯ ಕುಶಿಕನು ಮೊದಲನೆಯ ಕುಶಿಕನ ತುಸು ಸಮಯದ ತರುವಾಯದಲ್ಲಿ ಬಾಳಿದವನಾಗಿರುವಂತಿದೆ. ಮಥುರಾ ಶಾಸನವು ಎರಡನೆಯ ಕುಶಿಕನನ್ನು ಕುರಿತು ನಮೂದಿಸಿದ್ದರೆ ಲಕಲೀಶನ ಕಾಲವನ್ನು ಇನ್ನೊಂದು ನೂರು ವರ್ಷಗಳಷ್ಟು ಹಿಂದಕ್ಕೆ ನೂಕಲೇಬೇಕಾಗುತ್ತದೆ. ಹೀಗೇಯೇ ಮೂರನೆಯ ಇಲ್ಲವೆ ನಾಲ್ಕನೆಯ ಕುಶಿಕನೊಬ್ಬನು ಆಗಿ ಹೋಗಿರುವುದು ಅಸಾಧ್ಯವೇನಲ್ಲ.

ಲಕುಲೀಶನಿಗೆ ಕುಶಿಕನಲ್ಲದೆ ಇನ್ನೂ ಮೂರು ಜನ ಮುಖ್ಯರಾದ ಶಿಷ್ಯಂದಿರಿದ್ದರು. ಈ ನಾಲ್ಕೂ ಜನರ ಹೆಸರುಗಳನ್ನು ಕೆಲವು ಏರುಪೇರುಗಳೊಂದಿಗೆ 'ಕೂರ್ಮ', 'ವಾಯು' ಹಾಗೂ 'ಲಿಂಗ' ಪುರಾಣಗಳಲ್ಲಿಯಲ್ಲದೆ[43] ರಾಜಶೇಖರ ಹಾಗೂ ಗುಣರತ್ನರಿಂದ[44] ಮತ್ತು 'ಚಿಂತ್ರ ಪ್ರಶಸ್ತಿ'ಯಲ್ಲಿ ನಮೂದಿಸಲಾಗಿದೆ. ಈ ಕೊನೆಯ ಶಾಸನವು ಲಕುಲೀಶನು ಲಾಟದ ಕಾರೋಹಣಕ್ಕೆ ಆಗಮಿಸಿದುದನ್ನು ಬಣ್ಣಿಸಿ ಈ ರೀತಿಯಾಗಿ ಮುಂದುವರಿಯುತ್ತದೆ :

> ಅವನ ನಾಲ್ಕು ಜನ ಶಿಷ್ಯಂದಿರಾದ ಕುಶಿಕ, ಗಾರ್ಗ್ಯ, ಕೌರುಷ ಹಾಗೂ ಮೈತ್ರೇಯರು ಪಾಶುಪತ ವ್ರತದ ವಿಶೇಷವಾದ ಆಚರಣೆಗಳನ್ನು (ಚರ್ಯಾ) ಕಲಿತುಕೊಳ್ಳಲು ಈ ಸ್ಥಳಕ್ಕೆ ಆಗಮಿಸಿದರು (ಅವತೆರುಃ). ತರುವಾಯದಲ್ಲಿ ಈ ಯತಿಗಳ ನಾಲ್ಕು ಬಗೆಯ ಪರಂಪರೆಯು (ಜಾತಿ) ಅಸ್ತಿತ್ವಕ್ಕೆ ಬಂದಿತಲ್ಲದೆ, ನಾಲ್ಕು ಸಾಗರಗಳ ನಡುಪಟ್ಟಿಯಿಂದ ಕಟ್ಟಲಾದ ಭೂಮಿಯನ್ನು ಅಲಂಕರಿಸಿತು.[45]

ಗಾರ್ಗ್ಯ ಗೋತ್ರದ ಒಡವೆಯೆನ್ನಿಸಿದ, ಪ್ರಮುಖ (ಸ್ಥಾನಾಧಿಪ)ನಾದ ಕಾರ್ತಿಕರಾಶಿಯನ್ನು ತರುವಾಯದಲ್ಲಿ ಪರಿಚಯಿಸಲಾಗಿದೆ. ಅವನು ಹದಿಮೂರನೆಯ ಶತಮಾನದ ಪ್ರಾರಂಭಕ್ಕೆ ಸೇರಿದವನು. ಈ ಹೊತ್ತಿಗೆ ಲಕುಲೀಶನ ನಾಲ್ಕು ಜನ ಶಿಷ್ಯಂದಿರು ಬೇರೆ ಬೇರೆ ಗುಂಪುಗಳಾಗಿ ಚೆನ್ನಾಗಿ ಸಂಘಟಿತರಾಗಿದ್ದರೆಂದು ಕಾಣುತ್ತದೆ. ಮಥುರೆಯ ಕಂಬದ ಶಾಸನದ ಪುರಾವೆಯಿಂದಾಗಿ ಈ ವಿಭಜನೆಯು ಬಹುಮಟ್ಟಿಗೆ ಕ್ರಿ.ಶ.ನಾಲ್ಕನೆಯ ಶತಮಾನದಷ್ಟು ಹಿಂದಕ್ಕೆ ಸರಿಯುತ್ತದೆ.

ಮೈತ್ರೇಯ ಅಥವಾ ಕೌರುಷನಿಂದ ಇಳಿದು ಬಂದ ಹಾಗೂ ಇವರ ಮೂಲಗಳನ್ನು ಗುರುತಿಸುವ ಯಾವುದೇ ಯತಿತ್ವದ ಯಾವುದೇ ಶಾಸನಗಳು ಉಳಿದಿಲ್ಲ. ಆರ್. ಜಿ.

43. 'ಕೂರ್ಮ ಪುರಾಣ' i 53 (ಕುಣಿತ, ಗರ್ಗ, ಮಿತ್ರಕ, ರುರು), 'ವಾಯು ಪುರಾಣ' xxiii. 223. (ಕುಶಿಕ, ಗಾರ್ಗ್ಯ, ಮಿತ್ರಕ, ರುಷ್ಯ), ಮತ್ತು 'ಲಿಂಗ ಪುರಾಣ' i. 24. 131 (ಕುಶಿಕ, ಗರ್ಗ, ಮಿತ್ರ, ಕೌರುಷ್ಯ).
44. ಮೇಲಿನ ಟಿಪ್ಪಣಿ 42ನ್ನು ನೋಡಿ.
45. ಸಂ. Bühler, EI, 281 (ನನ್ನ ಅನುವಾದ).

ಭಾಂಡಾರಕರರು ಮೂರನೆಯ ಶಿಷ್ಯನಾದ ಕೌರುಷನನ್ನು, ಭಾಷ್ಯಕಾರರಿಂದ ಹಾಗೂ ಬ್ರಹ್ಮಸೂತ್ರ ii. 2. 37 ದಿಂದ [46] ನಾಲ್ಕು ಶೈವ ಸಂಪ್ರದಾಯಗಳಲ್ಲಿ ಒಂದೆಂದು ಹೆಸರಿಸಲಾದ ಕಾರುಕ ಸಿದ್ಧಾಂತಿನ್‌ರೊಂದಿಗೆ ಜೋಡಿಸಲು ಯತ್ನಿಸಿದರು. ಈ ಕಾರುಕ ಸಿದ್ಧಾಂತಿನ್‌ರು ವಾಚಸ್ಪತಿಯ (ಇಸವಿ 850) 'ಭಾಮತಿ'ಯಲ್ಲಿ ಕಾರುಣಿಕ ಸಿದ್ಧಾಂತಿನ್‌ರಾಗಿ, ಭಾಸ್ಕರಾಚಾರ್ಯನ (ಇಸವಿ 850) 'ಬ್ರಹ್ಮಸೂತ್ರ ಭಾಷ್ಯ'ದಲ್ಲಿಯಲ್ಲದೆ ರಾಮಾನುಜರ 'ಶ್ರೀ ಭಾಷ್ಯ'ದಲ್ಲಿ ಹಾಗೂ ಇನ್ನಿತರರ ಬ್ರಹ್ಮಸೂತ್ರ ಭಾಷ್ಯಗಳಲ್ಲಿ ಕಾಳಾಮುಖರಾಗಿ ಕಾಣಿಸಿಕೊಳ್ಳುತ್ತಾರೆ.[47] ನಾವು ಭಾಂಡಾರಕರರ ಸಿದ್ಧಾಂತವನ್ನು ಒಪ್ಪಿಕೊಳ್ಳಲಾರೆವು. ಎಲ್ಲಕ್ಕೂ ಮೊದಲಿಗೆ, 'ಕೌರುಷ' ಪದವು ಭಾಷಾಧ್ವನಿವಿಜ್ಞಾನದ ನಿಯಮದಂತೆ 'ಕಾರುಕ' 'ಕಾರಕ' ಇಲ್ಲವೆ 'ಕಾಳಾಮುಖ'ಕ್ಕೆ ಅಂತಹ ಹತ್ತಿರದ್ದೇನೂ ಅಲ್ಲ. ಎರಡನೆಯದಾಗಿ, ಮೂರು ಶೈವ ಸಂಪ್ರದಾಯಗಳಾದ ಪಾಶುಪತ, ಶೈವ ಹಾಗೂ ಕಾಪಾಲಿಕಗಳನ್ನು ಲಕುಲೀಶನ ಇತರ ಮೂವರು ಶಿಷ್ಯರಿಗೆ ಜೋಡಿಸುವಂತಹ ಯಾವುದೇ ಪೂರ್ವನಿದರ್ಶನವಾಗಲಿ ಇಲ್ಲವೆ ಕಾರಣವಾಗಲಿ, ಇಲ್ಲ. ಕುಶಿಕ ಹಾಗೂ ಗಾರ್ಗ್ಯ ಇವರಿಬ್ಬರ ಅನುಯಾಯಿಗಳೆಲ್ಲ ಪಾಶುಪತರಾಗಿದ್ದಂತೆ ಕಾಣುತ್ತದೆ. ಮೂರನೆಯದಾಗಿ, ಕಾರುಕ. ಕಾರುಣಿಕ ಹಾಗೂ ಕಾರಕ ಸಿದ್ಧಾಂತಿನ್‌ರನ್ನು ಮುಂದಿನ ಕಾಲದಲ್ಲಿ ಕಾಳಾಮುಖರೆಂದು ತಿಳಿಯಲಾಗುತ್ತಿದ್ದರೆ [48] - ಹೀಗಿರುವ ಹೆಚ್ಚಿನ ಸಾಧ್ಯತೆಯಿದ್ದೇ ಇದೆ - ಹಾಗೂ ಅವರೆಲ್ಲರೂ ಕೌರುಷನ ಪರಂಪರೆಯವರಾಗಿದ್ದರೆ, ಕಾಳಾಮುಖ ಶಾಸನಗಳಲ್ಲಿ ಈ ಶಿಷ್ಯನನ್ನು ಕುರಿತು ನಮೂದಿಸದಿರುವುದು ಬಲು ವಿಚಿತ್ರ ಸಂಗತಿ ಎನ್ನಿಸುತ್ತದೆ.

ಹರ್ಷವರ್ಧನನ (606-647) ಕಾಲಕ್ಕೆ ಅಂದರೆ ಗುಪ್ತರ ಕಾಲದಷ್ಟು ಹಿಂದಿನಿಂದಲೇ ಭಾರತದ ಬಹಳಷ್ಟು ಭಾಗಗಳಲ್ಲಿ ಪಾಶುಪತರ ದೇವಾಲಯಗಳಿದ್ದವು.[49]

---

46. ಆರ್. ಜಿ. ಭಾಂಡಾರಕರ, 'Vaisnavism ----,'ಪು. 121. ಯಾವುದೇ ಭಾಷ್ಯಕಾರರನ್ನು ಕಂಡುಹಿಡಿಯಲು ನಾವು ಅಸಮರ್ಥರಾಗಿದ್ದೇವೆ. ಆದರೆ ಕಾರುಕ ಸಿದ್ಧಾಂತಿನ್‌ರ ಹೆಸರನ್ನು ಎಮ್. ಮೋನಿಯರ ವಿಲಿಯಮ್ಸ್ ಇವರ 'ಸಂಸ್ಕೃತ - ಇಂಗ್ಲಿಷ್' ನಿಘಂಟುವಿನಲ್ಲಿ ನಮೂದಿಸಲಾಗಿದೆ.
47. ಮೇಲಕ್ಕೆ ನೋಡಿ, ಪು. 1.
48. ಕಾರಕ ಸಿದ್ಧಾಂತ ಮತ್ತು 'ಪಾಶುಪತ ಸೂತ್ರ'ಗಳ ನಡುವೆ ಒಂದು ಸೂಕ್ಷ್ಮವಾದ ನಂಟು ಇದೆ. ಈ ಕೃತಿಯಲ್ಲಿರುವ ಬಹಳಷ್ಟು ಸೂತ್ರಗಳು 'ತೈತ್ತರೀಯ ಆರಣ್ಯಕ'ವನ್ನು ಆಧರಿಸಿದವುಗಳು (ನೋಡಿ ಸಿ. ಚಕ್ರವರ್ತಿ, 'P ās upatas ū tra, IHQ, XIX, 271). ಕಾರಕವು 'ಕಪ್ಪು ಯಜುರ್ವೇದ'ದ ಒಂದು ಪರಂಪರೆಯಾಗಿದೆ (ಸ್ಕೂಲ). 'ತೈತರೀಯ ಆರಣ್ಯಕ'ವು ಈ ವೇದಕ್ಕೆ ಸೇರಿದುದು.
49. ಪಾಶುಪತ ಸಂಪ್ರದಾಯದ ಮುಂದಿನ ಕಾಲದ ಇತಿಹಾಸವನ್ನು ಕುರಿತು ಅನೇಕ ಚಿಕ್ಕಪುಟ್ಟ ಅಧ್ಯಯನಗಳನ್ನು ಹಾಗೂ ಪರಿಶೀಲನೆಗಳನ್ನು ಪ್ರಕಟಿಸಲಾಗಿದ್ದರೂ ಒಂದು ಸಂಪೂರ್ಣವಾದ ಕೃತಿಯ ಆವಶ್ಯಕತೆಯಿದೆ. ವಿಶೇಷವಾಗಿ ಪೌರಾಣಿಕ ಸಾಮಗ್ರಿಯನ್ನು ಇನ್ನಷ್ಟು ವಿವರವಾಗಿ ಪರೀಕ್ಷಿಸುವುದು ಅಗತ್ಯವಾಗಿದೆ. ಇವುಗಳಲ್ಲಿ ಬಹಳಷ್ಟು ಕೃತಿಗಳು ಪಾಶುಪತರ ಪ್ರಭಾವವನ್ನು ನಿದರ್ಶಿಸುತ್ತವೆ. ಆರ್. ಸಿ. ಹಝ್ರಾ ಅವರು ತಮ್ಮ 'The Smrti-chapters of the 'K ū rma Pur ā ṇ a', IHQ, XI (1935). 265-86ದಲ್ಲಿ 'ಕೂರ್ಮ ಪುರಾಣ'ದ ಮೇಲಿರುವ ಈ ಪ್ರಭಾವದ ಪ್ರಾಥಮಿಕ ಅಧ್ಯಯನವನ್ನು ಕೈಕೊಂಡಿರುವರು. 'ವಾಯು ಪುರಾಣ'ದಲ್ಲಿ ಪಾಶುಪತ ಯೋಗವನ್ನು ಕುರಿತು ಎರಡು ಅಧ್ಯಾಯನಗಳಿವೆ. (xi ಮತ್ತು xiv). ಅವುಗಳ ಆಶಯವು 'ಪಾಶುಪತ ಸೂತ್ರ'ದೊಂದಿಗೆ ಕೆಲವು ಮಟ್ಟಿಗಿನ ಸಾಮ್ಯತೆಯನ್ನು ಹೊಂದಿದೆ.

ಯಾತ್ರಿಕನಾದ ಹುಯೇನ್ ತ್ಸಾಂಗ್ ಇವನು 'ಹೊರಗಿನ ದಾರಿಗಳ ಮೇಲೆ ಭಸ್ಮ ಬಳಿದುಕೊಂಡವರನ್ನು (ಅನುಯಾಯಿಗಳನ್ನು),' ಅಂದರೆ ಪಾಶುಪತ ಪಾಷಂಡಿಗಳನ್ನು[50] ಪೂರ್ವ ಪಂಜಾಬದ ಜಲಂಧರ, ಉತ್ತರ ಪ್ರದೇಶದ ಅಹಿಚ್ಛಾತ್ರಾ, ದಕ್ಷಿಣ ಭಾರತದ ಮಲಕುಟ, ಮಾಲವ, ಖೊತನ, ಪೂರ್ವ ಅಫಘಾಣಿಸ್ತಾನದ ಕಪಿಶ (ನುರಿಸ್ತಾನ), ಗಾಂಧಾರ, ವಾರಣಾಸಿ ಹಾಗೂ ಇನ್ನಿತರ ಊರುಗಳಲ್ಲಿ ಕಂಡಿದ್ದನು, ಅಥವಾ ಅವರನ್ನು ಕುರಿತು ಕೇಳಿದ್ದನು.[51] ಪಾಶುಪತ ಯತಿಗಳಿಗೆ ನೀಡಲಾದ ದತ್ತಿಗಳನ್ನು ನಮೂದಿಸುವ ಏಳನೆಯ ಶತಮಾನದ ಆರಂಭ ಕಾಲದ ಎರಡು ಶಾಸನಗಳು ಆಗ್ನೇಯ ಏಶಿಯದಷ್ಟು ದೂರದ ನಾಡುಗಳಲ್ಲೂ ಕೂಡ ದೊರೆತಿವೆ.[52] ಪಾಶುಪತರನ್ನು ಕುರಿತಾದ ಮೊದಲ ಸಂದರ್ಭಗಳು ಮಹೇಂದ್ರ ವರ್ಮನ ದಕ್ಷಿಣ ಭಾರತದ ನಾಟಕವಾದ 'ಮತ್ತ ವಿಲಾಸ' ಹಾಗೂ ವರಾಹಮಿಹಿರನ 'ಬೃಹತ್ ಸಂಹಿತಾ'ದಲ್ಲಿ ಅಪ್ರತ್ಯಕ್ಷವಾಗಿ ದೊರಕುತ್ತವೆ.[53] ಸಂಸ್ಕೃತ ಲೇಖಕರಾದ ಬಾಣನಿಂದ ಹಿಡಿದು ಮುಂದಿನವರು ಇವರನ್ನು ಕುರಿತು ಮತ್ತೆ ಮತ್ತೆ ನಮೂದಿಸುವರಲ್ಲದೆ ಸುಮಾರು ಹತ್ತನೆಯ ಶತಮಾನದ ಶಾಸನದ ಸಂದರ್ಭಗಳು ಕೂಡ ಹೇರಳವಾಗಿವೆ. ಶಿಲ್ಪಕಲೆ ಹಾಗೂ ಶಾಸನಗಳ ಕೇಂದ್ರಬಿಂದು ಹತ್ತನೆಯ ಶತಮಾನದ ಕೊನೆಯಲ್ಲಿ ದಕ್ಷಿಣದತ್ತ ಸರಿದಿದ್ದರೂ, ಗುಪ್ತಕಾಲದ ತರುವಾಯದ ಲಕುಲೀಶನ ಶಾಸನಗಳು ಭಾರತದ ತುಂಬೆಲ್ಲ ದೊರೆತಿವೆ.[54]

ಧರ್ಮಾಚರಣೆಗೆ ಸಂಬಂಧಿಸಿದ ಆಡಳಿತೆ ಹಾಗೂ ಕಾಳಾಮುಖರು ಬೋಧಿಸುತ್ತಿದ್ದ ಧಾರ್ಮಿಕ ತತ್ವಶಾಸ್ತ್ರಗಳನ್ನು ಕುರಿತು ಯಾವುದೇ ಗ್ರಂಥಗಳನ್ನು ಈವರೆಗೂ ಕಂಡು ಹಿಡಿಯಲಾಗಿಲ್ಲ. ಆದರೆ ಪಾಶುಪತರಿಂದರಾಗಲಿ ಇಲ್ಲವೆ ಅವರನ್ನು ಕುರಿತಾಗಲಿ ಹಲವಾರು ಸಾಹಿತ್ಯ ಕೃತಿಗಳು ಇವೆ. ಇವುಗಳ ವಿರುದ್ಧವಾದ ಪುರಾವೆಗಳು ಸಿಕ್ಕದ್ದರಿಂದ ಕಾಳಾಮುಖರು ಪಾಶುಪತರ ಆಡಳಿತ ಪದ್ಧತಿ ಹಾಗೂ ದೇವತಾ ಶಾಸ್ತ್ರಗಳನ್ನು ಸುಮಾರಾಗಿ ಗಟ್ಟಿಯಾಗಿ ಉಳಿಸಿಕೊಂಡು ಬಂದರೆಂದು ನಾವು ನಂಬಲೇಬೇಕಿದೆ.

ಆಧುನಿಕ ವಿದ್ವಾಂಸರು ಗಮನಿಸಿದ, ಪಾಶುಪತರನ್ನು ಕುರಿತಾದ ಸಂಸ್ಕೃತದ ಮೊದಲ

---

50. ಅಕ್ಷರಗಳು ಹೀಗಿವೆ : (ಚೀನೀ ಭಾಷೆಯ ಅಕ್ಷರಗಳು.) ಹೋಡಸ್ ಮತ್ತು ಸೂಥಿಲ್, ಬೀಲ್. ವಾಟ್ಟರ್ಸ್ ಹಾಗೂ ಇತರರು ಇವುಗಳನ್ನು 'ಪಾಶುಪತ' ಎಂದು ಅನುವಾಗಿಸುತ್ತಾರೆ. ಈ ಅರ್ಥೈಸುವಿಕೆಗಾಗಿ ವಾದಕ್ಕಿಳಿಯುವ ಕಾರಣವಿಲ್ಲ. ಆದರೆ ಹುಯೇನ್ ತ್ಸಾಂಗ್‌ನ ಪಾಠದಲ್ಲಿ ಇವುಗಳಿಗೆ ಚೀನೀ ಭಾಷೆಯ ಸಮಾನ ಸ್ವರಗಳನ್ನು ನೀಡಲಾಗಿಲ್ಲ.
51. ಬೀಲ್ (ಅನು.), 'Chinese Accounts of India', pp. 118, 163, 209, 228, 291, 433, 453, 461 ಮತ್ತು 464-67.
52. ಕೆ. ಭಟ್ಟಾಚಾರ್ಯ, 'Journal asiatique, CCXLIII (1955), 479-81.
53. ನೋಡಿ ಬ್ಯಾನರ್ಜಿ, 'Development ----' pp. 230-31.
54. ಈ ವಲಸೆಯನ್ನು ಕುರಿತು ವಿವರಿಸಲು ಕೈಕೊಳ್ಳಲಾದ ಯತ್ನವನ್ನು ಕುರಿತು ಹಿಂದೆ ನೋಡಿ, pp. 108-109.

ಆಕರಗಳೆಂದರೆ 'ಬ್ರಹ್ಮಸೂತ್ರ'ದ ಭಾಷ್ಯಗಳಲ್ಲಿರುವ ಸಂಕ್ಷಿಪ್ತವಾದ ಪರಿಚ್ಛೇದಗಳು, 'ಅಥರ್ವಶೀರ್ಷ ಉಪನಿಷತ್ತಿನ 'ಪಾಶುಪತ ಪ್ರಮಾಣ ವಚನ',[55] ಹಾಗೂ ಸಾಯಣ ಮಾಧವರ 'ಸರ್ವ ದರ್ಶನ ಸಂಗ್ರಹ'ದ ಒಂದು ಅಧ್ಯಾಯವಾದ 'ನಕುಲೀಶ ಪಾಶುಪತ ದರ್ಶನ'. ಸಾಯಣ ಮಾಧವರು ತಮ್ಮ ವಿಷಯ ಕಥನವನ್ನು ಹದಿನಾಲ್ಕನೆಯ ಶತಮಾನದಲ್ಲಿ ಬರೆದಿದ್ದರೂ ಅದು ಇಂದಿಗೂ ಈ ವಿಷಯವನ್ನು ಕುರಿತಾದ ಎಲ್ಲಕ್ಕೂ ಉತ್ತಮವಾದ ಸಂಕ್ಷಿಪ್ತಗೊಳಿಸಿದ ಸಾರಾಂಶವೆನ್ನಿಸಿದೆ. ಎ. ಈ. ಗೌಘ ಅವರು (Gough) 1882ರಲ್ಲಿ ಇದನ್ನು ಇಂಗ್ಲಿಷ್‌ಗೆ, ಎಸ್. ಲೆವಿ ಅವರು 1889ರಲ್ಲಿ ಫ್ರೆಂಚಿಗೆ, ಪಿ. ಡ್ಯುಸೆನ್ ಇವರು 1908ರಲ್ಲಿ ಜರ್ಮನ್ ಭಾಷೆಗೆ ಭಾಷಾಂತರಿಸಿದ್ದು, ಆರ್. ಜಿ. ಭಾಂಡಾರಕರರು ಮತ್ತೆ ಇದನ್ನು 1913ರಲ್ಲಿ ಇಂಗ್ಲಿಷ್‌ಗೆ ಸರಳಾನುವಾದ ಮಾಡಿರುವರು.[56] ಇವೆಲ್ಲ ಅನುವಾದಗಳು ಯಥೋಚಿತವಾದ ಪಠ್ಯಗಳ ಕೊರತೆ ಹಾಗೂ ಕೆಲವು ತಾಂತ್ರಿಕ ಪಾರಿಭಾಷಿಕ ಪದಗಳ ಕೊರತೆಯಿಂದ ಬಳಲಿವೆ. 1920ರಲ್ಲಿ ಸಿ. ಡಿ. ದಲಾಲರು ನೇರವಾಗಿ ಪಾಶುಪತರ ಮೊದಲ ಕೃತಿಯಾದ 'ಗಣಕಾರಿಕಾ'ವನ್ನು, ಇಂದು ಭಾಸರ್ವಜ್ಞನದೆಂದು ಹೇಳಲಾಗುವ 'ರತ್ನಟೀಕಾ'ಭಾಷ್ಯದೊಡನೆ ಪ್ರಕಟಿಸಿದರು. 1940ರಲ್ಲಿ ಆರ್.ಎ.ಶಾಸ್ತ್ರಿಯವರು ಹೊಸದಾಗಿ ಕಂಡುಹಿಡಿಯಲಾದ 'ಪಾಶುಪತ ಸೂತ್ರ'ವನ್ನು ಕೌಂಡಿನ್ಯನ 'ಪಂಚಾರ್ಥ ಭಾಷ್ಯ'ದೊಂದಿಗೆ ಪ್ರಕಟಿಸಿದರು.[57]

1940ರಿಂದ ಈಚೆಗೆ ಹಲವು ಜನ ವಿದ್ವಾಂಸರು ಪಾಶುಪತ ಪದ್ಧತಿಯನ್ನು ಹೊಸ ಹೊಸ ಪುರಾವೆಗಳ ಬೆಳಕಿನಲ್ಲಿ ಇನ್ನೊಮ್ಮೆ ಮೌಲ್ಯಮಾಪನಕ್ಕೆ ಒಳಪಡಿಸ ತೊಡಗಿದ್ದಾರೆ. ಎಲ್ಲಕ್ಕೂ ಹೆಚ್ಚು ಮಹತ್ವದ ಕೃತಿಯೆಂದರೆ ಎಮ್. ಹರ ಇವರು ಮಾಡಿದ ಸಾಯಣ ಮಾಧವರ 'ನಕುಲೀಶ ಪಾಶುಪತ ದರ್ಶನ' ಅಧ್ಯಾಯದ ವಿಮರ್ಶಾತ್ಮಕ ಅನುವಾದ (11J. 11, 8-32). ಡಿ. ಎಚ್. ಎಚ್. ಇಂಗಾಲ್ಸ್‌ರು 'ಪಾಶುಪತ ಸೂತ್ರ'ದ ಮೂರನೆಯ ಅಧ್ಯಾಯದ ಪಠ್ಯ ಹಾಗೂ ಅದರ ಭಾಷ್ಯದ ಬಹಳಷ್ಟು ಭಾಗವನ್ನು ಅನುವಾದಿಸಿರುವರು.[58] ಎಫ್. ಎ, ಶುಲ್ಟ್ಜ ಅವರು (Schultz) ಪಾಶುಪತರ ದೇವತಾಶಾಸ್ತ್ರವನ್ನು ಕುರಿತು ಬಲು ಮೌಲ್ಯದಿಂದ

---

55. ಅನು. ಆರ್. ಜಿ. ಭಾಂಡಾರಕರ, 'Vaisnavism ----', ಪು. 112. ಟಿ. ಆರ್. ಎಸ್. ಅಯ್ಯಂಗಾರರು ಈ ಇಡಿಯ ಉಪನಿಷತ್ತನ್ನು 'ṡaiva Upanisads', pp. 28-53ದಲ್ಲಿ ಅನುವಾದಿಸಿರುವರು.

56. ನೋಡಿ ಎಮ್. ಹರ (ಅನು.), 'Nakul ī sa-Pāṡupata-darṡanam', IIJ, II (1958), 8-9.

57. ಸಿ. ಚಕ್ರವರ್ತಿಯವರು. 'P āṡpatas ū tra', IHQ, XIX, 270-71ದಲ್ಲಿ ಕೆಲವು ಸೂತ್ರಗಳ ಪಠ್ಯಗಳ ಏರುಪೇರುಗಳನ್ನು ಕುರಿತು ಒಂದು ಪಟ್ಟಿಯನ್ನು ಒದಗಿಸಿರುವರು.

58. HTR, LV, 285-91. ಎಮ್. ಹರ ಇವರು ಇಡಿಯ ಕೃತಿಯ ಅನುವಾದವನ್ನು ತಯಾರಿಸುತ್ತಿರವರು.

ಕೂಡಿದ ಒಂದು ಅಧ್ಯಯನವನ್ನು ಪ್ರಕಟಿಸಿರುವರು.[59] ಇವರಲ್ಲದೆ ಎಸ್. ಎನ್. ದಾಸಗುಪ್ತ,[60] ಕೆ. ಕೆ. ಹಂಡಿಕಿ (pp. 199-204, 234-44) ಹಾಗೂ ಕೆ. ಸಿ. ಪಾಂಡೆಯ[61] ಅವರು ಕೂಡ ಉಪಯುಕ್ತವಾದ ಪರಿಶೀಲನೆಗಳನ್ನು ಪ್ರಕಟಿಸಿರುವರು.

ಶುಲ್ಟ್ಜ (Schultz) ಮತ್ತು ಇಂಗಾಲ್ಸ್(Ingalls)ರು ಪಾಶುಪತರ ದೇವತಾಶಾಸ್ತ್ರ ಹಾಗೂ ಧರ್ಮಾಡಳಿತೆ ಅಥವಾ ಸಂಪ್ರದಾಯಗಳು ಮೂಲಭೂತವಾಗಿ ಬೇರೆ ಬೇರೆಯಾದವುಗಳೆಂದು ಸರಿಯಾಗಿಯೇ ಬಗೆದಿದ್ದಾರೆ. ಈ ಸಂಪ್ರದಾಯದ ಇಂದಿಗೂ ಚಾಲ್ತಿಯಲ್ಲಿರುವ ಎಲ್ಲಕ್ಕೂ ಹಳೆಯದಾದ ಹಾಗೂ ಸಂಪ್ರದಾಯದ ಮೂಲ ಕೃತಿಯಾಗಿರಬಹುದಾದ 'ಪಾಶುಪತ ಸೂತ್ರ'ವು ಕೇವಲ ಧಾರ್ಮಿಕ ಆಚರಣೆಗಳಿಗಾಗಿಯೇ ಮೀಸಲಾದ, ಎನ್ನಬಹುದಾದುದಾಗಿದ್ದು, ತತ್ತ್ವಶಾಸ್ತ್ರವು ಎರಡನೆಯ ಮಟ್ಟದ ಬೆಳವಣಿಗೆಯಾಗಿರರುವ ಸಾಧ್ಯತೆಯಿದೆ. ಹೇಗಿದ್ದರೂ, ಈಗಾಗಲೇ 'ಪಂಚಾರ್ಥ ಭಾಷ್ಯ'ದಲ್ಲಿ ಪಾಶುಪತ ತತ್ತ್ವಶಾಸ್ತ್ರವನ್ನು ಬಲು ಅಚ್ಚುಕಟ್ಟಾಗಿ ನೀಡಲಾಗಿದೆ. ಈ ಸಂಪ್ರದಾಯವು ತುಂಬ ಪುರಾತನದ್ದಾಗಿ ಕಾಣುವುದರಿಂದ ನಾವು ಇದರ ಮೂಲಭೂತವಾದ ರೂಪಲಕ್ಷಣಗಳನ್ನು ಕುರಿತು ಮೊದಲಿಗೆ ಬರೆಯಲಿರುವೆವು.

'ಸೂತ್ರಗಳ' ಧಾರ್ಮಿಕ ಆಚರಣೆಗಳನ್ನು ಕುರಿತಾದ ಕಟ್ಟಳೆಗಳು ಬಿಗುವಿನ ಏರ್ಪಾಡು ಇಲ್ಲವೆ ಕ್ರಮಗಳಿಂದ ಕೂಡಿದುವೇನಲ್ಲ. ಕೌಂಡಿಣ್ಯ ಹಾಗೂ ತರುವಾಯದ ಬರಹಗಾರರು ಈ ಸನ್ನಿವೇಶಕ್ಕೆ ಪರಿಹಾರವನ್ನು ಒದಗಿಸಲು ಯತ್ನಿಸಿದರಲ್ಲದೆ ಒಂದೇ ಸೈದ್ಧಾಂತಿಕ ಪದ್ಧತಿಯಡಿ ದೇವತಾಶಾಸ್ತ್ರ ಹಾಗೂ ಧಾರ್ಮಿಕ ಆಚರಣೆಗಳನ್ನು ಅಳವಡಿಸಲು ಯತ್ನಿಸಿದರು. ಬಹಳಷ್ಟು ಮಟ್ಟಿಗೆ ಒಂದು ತತ್ತ್ವಕ್ಕೆ ಕಟ್ಟಿ ಬೀಳುವ ಇಬ್ಬಗೆಯ ವರ್ಗೀಕರಣಗಳು ಉತ್ಕ್ರಾಂತಗೊಂಡವು. ಮೊದಲಿನದು ಕೌಂಡಿಣ್ಯನಿಂದ ಹಾಗೂ ಎರಡನೆಯದು 'ಗಣಕಾರಿಕಾ'ದಿಂದ ಪ್ರತಿನಿಧಿಸಲ್ಪಡುತ್ತವೆ.

ಕೌಂಡಿಣ್ಯನು ಪಾಶುಪತ ಸಿದ್ಧಾಂತವನ್ನು ಐದು ಮುಖ್ಯ ಅಧ್ಯಾಯಗಳನ್ನಾಗಿ ವಿಂಗಡಿಸಿದನು (ಪಂಚಾರ್ಥಗಳು). ಇವೆಂದರ : ಪರಿಣಾಮ (ಕಾರ್ಯ), ಕಾರಣ, ಒಂದಾಗುವಿಕೆ (ಯೋಗ), ವೀಕ್ಷಣೆ (ವಿಧಿ) ಹಾಗೂ ದುಃಖದ ಕೊನೆ (ದುಃಖಾಂತ).[62] ಈ ಐದು ಅಧ್ಯಾಯಗಳನ್ನು ಪಾಶುಪತ (ಅಥವಾ ಮಾಹೇಶ್ವರ) ಸಿದ್ಧಾಂತದ ಕೇಂದ್ರ ಲಕ್ಷಣವೆಂದು

---

59. Die philosophisch theologischen Lehren des P āś upata-systems nach dem Pa ñ c ā rthabh ā ṣ ya und der Ratnaṭ ī k ā . ಅಲ್ಲದೆ ನೋಡಿ ಎಮ್. ಹರ ಇವರ ಅಭಿಪ್ರಾಯಗಳನ್ನು IIJ, IV (1960), 165-70.
60. ಅವರ 'A History of India Philosophy', V, 1-10, 130-49.
61. 'Bh ā skar ī ', Vol. III.
62. 'Pa ñ c ā rtha-bh ā ṣya' on 'P ā ś upata-s ū tra' i. 1. (ಪು. 6).

ಶಂಕರಾಚಾರ್ಯ, ವಾಚಸ್ಪತಿಮಿಶ್ರ ಹಾಗೂ ಭಾಸ್ಕರಚಾರ್ಯರ ಬ್ರಹ್ಮಸೂತ್ರ ii. 2. 37 ದ ಭಾಷ್ಯಗಳಲ್ಲಿ ಬಣ್ಣಿಸಲಾಗಿದೆ. ಪಾಶುಪತ ಸಂಪ್ರದಾಯದ ಎಲ್ಲಕ್ಕೂ ಹೆಚ್ಚಿನ ಪಾಲು 'ಆಚರಣೆ' ಎಂಬ ಶೀರ್ಷಿಕೆಯಡಿ ಬರುವಂತಿದೆ.

'ಗಣಕಾರಿಕಾ' ದಲ್ಲಿ ತಯಾರಿಸಿ ಕೊಡಲಾದ ವರ್ಗೀಕರಣದ ಪದ್ಧತಿಯು ತುಸು ಹೆಚ್ಚು ತೊಡಕಿನದಾಗಿದೆ. ಅದು ಎಂಟು ಜ್ಞಾಪಕಸೂತ್ರಗಳ ಕಿರಿದಾದ ಪದ್ಯಗಳಲ್ಲಿದ್ದು ಒಟ್ಟು ಪಾಶುಪತ ಸಿದ್ಧಾಂತವನ್ನು ಒಂಬತ್ತು ಮೂಲ ಗುಂಪುಗಳಾಗಿ (ಗಣಗಳು)ಅಂದರೆ ಎಂಟು ಪಂಚಕಗಳು ಹಾಗೂ ಮೂರರ ಒಂದು ಗುಂಪನ್ನಾಗಿ ವಿಭಜಿಸುತ್ತದೆ. ಮೂರನೆಯ ಪಂಚಕವು ದೀಕ್ಷೆ ಪಡೆದವನ ಆಧ್ಯಾತ್ಮಿಕ ಅಭಿವೃದ್ಧಿಯ ಐದು ಹಂತಗಳನ್ನು ('ಅವಸ್ಥಾ') ಒಳಗೊಂಡಿದೆ. ಇವೆಂದರೆ : (1) ವ್ಯಕ್ತ(ಪ್ರಕಟ) (2) ಅವ್ಯಕ್ತ(ಅಪ್ರಕಟ) (3) ಜಯ (ಗೆಲವು) (4) ಛೇದ (ಕತ್ತರಿಸುವುದು) ಹಾಗೂ (5) ನಿಷ್ಠಾ(ನಿಷ್ಠೆ) .[63] ವ್ಯಕ್ತಾವಸ್ಥೆಯ ಒಬ್ಬ ಸಾಧಕನು ಸಂಪ್ರದಾಯದ ಲಾಂಛನಗಳನ್ನು ಸ್ವೀಕರಿಸುತ್ತಾನೆ, ಅಲ್ಲದೆ ಕೆಲವು ಪ್ರಮಾಣ ವಚನಗಳನ್ನು ಕೈಕೊಳ್ಳುತ್ತಾನೆ. ಅವನು 'ಸ್ನಾನ ಮಾಡುತ್ತಾನೆ' ಹಾಗೂ ಚಿತಾಭಸ್ಮದಲ್ಲಿ ಒರಗುತ್ತಾನೆ. ಶಿವನ ಪ್ರತಿಮೆಯಿಂದ ಒಂದು ಹೂವನ್ನು ತೆಗೆದುಕೊಂಡು ಅವನು ಅದನ್ನು ಮುಡಿದುಕೊಳ್ಳುತ್ತಾನೆ. ಒಂದು ದೇವಾಲಯದಲ್ಲಿ ವಾಸಿಸುತ್ತ ಉಪಹಾರದ (ಪೂಜೆಯ) ಆರು ವಿಧಿಗಳನ್ನು ಆಚರಿಸುತ್ತಾನೆ. ಇವೆಂದರೆ : ನಗುವುದು, ಕುಣಿವುದು, ಹಾಡುವುದು, ಪವಿತ್ರ ಧ್ವನಿಯಾದ 'ಹುಡುಕ್' (ಇಲ್ಲವೆ ಡುಮ್ ಡುಮ್) ಎಂಬುದನ್ನು ಗಟ್ಟಿಯಾಗಿ ಅರಚುವುದು, ನಮಸ್ಕಾರ ಮಾಡುವುದು (ಶ್ರದ್ಧಾಗೌರವವನ್ನು ಅರ್ಪಿಸುವುದು) ಹಾಗೂ ಜಪ (ಪವಿತ್ರ ನಾಮೋಚ್ಚಾರಣೆ)ಮಾಡುವುದು. ಇವೆಲ್ಲ ವಿಧಿಗಳನ್ನು ಬೇರೆ ಪಾಶುಪತರ ಎದುರಿಗೆ ಕೈಕೊಳ್ಳತಕ್ಕದ್ದು. ಲಾಂಛನಗಳಿಲ್ಲದ ಸಾಧಕನು ದೇವಾಲಯವನ್ನು ತ್ಯಜಿಸುತ್ತಾನೆ. ಹೀಗೆ ತನ್ನ ಸಂಪ್ರದಾಯದ ಲಾಂಛನ ತೊರೆದು, ತನ್ನ ಹಲವು ಬಗೆಯ ವಿಚಿತ್ರವಾದ ನಡೆವಳಿಕೆಗಳಿಂದಾಗಿ ಸಾಮಾನ್ಯ ಜನರು ತನ್ನನ್ನು ದೂಷಿಸುವಂತೆ ಅವರನ್ನು ಉತ್ತೇಜಿಸುತ್ತಾನೆ. ಇಂಥ ನಡೆವಳಿಕೆಗಳನ್ನು ಆರುದ್ವಾರ(ಬಾಗಿಲು) ಗಳೆಂದು ಕರೆಯಲಾದುದು ಗಮನಾರ್ಹವಾಗಿದೆ. ಇವು ಹೀಗಿವೆ: 'ಕ್ರಾಥನ' (ಮಲಗಿ ನಿದ್ರೆ ಹತ್ತಿಲ್ಲದಾಗ ನಿದ್ರೆ ಹತ್ತಿದಂತೆ ಇಲ್ಲವೆ ಗೊರಕೆ ಹೊಡೆಯುವಂತೆ ನಟಿಸುವುದು), 'ಸ್ಪಂದನ' ('ಗಾಳಿ ಬೇನೆ' ಯಾದವನಂತೆ ತನ್ನ ಅವಯವಗಳನ್ನೆಲ್ಲ ನಡುಗಿಸುವುದು),[64] 'ಮಂದನ'

63. ಸಾಯಣ ಮಾಧವರು 'ಸರ್ವದರ್ಶನ ಸಂಗ್ರಹ'ದ 'ನಕುಲೀಶ ಪಾಶುಪತ ದರ್ಶನ' ಅಧ್ಯಾಯದಲ್ಲಿ 'ಗಣಕಾರಿಕಾ'ದ ಬಹಳಷ್ಟು ಪದ್ಯಗಳನ್ನು ಉದ್ಧರಿಸಿರುವರು. ಈ ಪಾರಿಭಾಷಿಕ ಪದಗಳ ನಮ್ಮ ಅನುವಾದಗಳು ಹರ ಅವರು ಈ ಎರಡನೆಯ ಕೃತಿಯ ತಮ್ಮ ಅನುವಾದದಲ್ಲಿ (IIJ, II, 12-32) ನೀಡಿದ ಅನಿವಾದಗಳನ್ನೇ ಬಲು ಹತ್ತಿರದಿಂದ ಅನುಸರಿಸುತ್ತವೆ. ಹರ ಅವರು ಬೇರೆ ಪಾಶುಪತ ಕೃತಿಗಳನ್ನು ಕುರಿತು ವಿವರವಾಗಿ ಹಾಸುಹೊಕ್ಕಾದ ಸಂದರ್ಭಗಳನ್ನು ನೀಡುತ್ತಾರೆ.

64. 'ವಾಯು ಅಭಿಭೂತ'. ಹಿಂದೂ ವೈದ್ಯಕೀಯ ಕೃತಿಗಳ ಹೇಳಿಕೆಯಂತೆ ಬಹಳಷ್ಟು ದೋಷಗಳು ವಾಯುವಿನ ಸ್ಥಿತಿಯಿಂದಾಗಿ ಹುಟ್ಟಿಕೊಳ್ಳುತ್ತವೆ. ನೋಡಿ ಜೆ. ಫಿಲ್ಲೋಝಾಟ್, 'The Classical Doctrine of Indian Medicine,' pp. 61-79. 196-228.

(ಹೆಳವನಂತೆ ಹೆಜ್ಜೆಯಿಕ್ಕುವುದು). 'ಶೃಂಗಾರಣ' (ಹೆಣ್ಣುಗಳೆದುರು ಪ್ರಣಯ ಭಂಗಿಗಳನ್ನು ಮಾಡುವುದು). 'ಅವಿತತ್ಕರಣ' (ಅನಿರ್ಣಯವನ್ನು ನಟಿಸುವುದು) ಹಾಗೂ 'ಅವಿತದ್ಭಾಷಣ' (ಅರ್ಥಹೀನವಾದ ಇಲ್ಲವೆ ಪರಸ್ಪರ ವಿರೋಧಿ ಪದಗಳನ್ನು ಗಟ್ಟಿಯಾಗಿ ಕೂಗುವುದು). ಮೂರನೆಯದು ಹಾಗೂ ವಿಜಯದ ಹಂತವು ಇಂದ್ರಿಯಗಳ ಮೇಲಣ ನಿಯಂತ್ರಣದ ಲಕ್ಷಣಗಳಿಂದ ಒಡಗೂಡಿದುದು. ನಾಲ್ಕನೆಯದರಲ್ಲಿ, ಅಂದರೆ ಛೇದನ (ಕಡಿದು ಹಾಕುವ ) ಹಂತದಲ್ಲಿ ಸಾಧಕನು ತನ್ನ ಅಳಿದುಳಿದ ಭೌತಿಕ ನಂಟುಗಳನ್ನೆಲ್ಲ ಕಡಿದು ಹಾಕುತ್ತಾನೆಂದು ತಿಳಿಯಲಾಗಿದೆ.[65] ಕೊನೆಯ ನಿಷ್ಠಾ ಹಂತವು ಮನಸ್ಸು. ದೇಹ, ಧರ್ಮ, ಇಲ್ಲವೆ ಪಾಷಂಡಿತನದ ಎಲ್ಲ ಬಗೆಯ ಶ್ರಮಗಳು ನಿಂತು ಹೋಗುವುದನ್ನು ಗುರುತಿಸುತ್ತದೆ.

ಐದರಲ್ಲಿ ಪ್ರತಿಯೊಂದು ಹಂತ(ಅವಸ್ಥೆ)ವು ವಿಶಿಷ್ಟವಾದ ದೇಶ, ಬಲ, ಮಲ, ವಿಶುದ್ಧಿ, ಉಪಾಯ, ಲಾಭ ಹಾಗೂ ದೀಕ್ಷಾ ಕಾರಿನ್‌ಗಳಿಗೆ ಸಂಬಂಧಿಸಿರುತ್ತದೆ. ಇವು ಉಳಿದ ಏಳು ಪಂಚಕಗಳನ್ನು ತಯಾರಿಸುತ್ತವೆ. ಇವೆಲ್ಲ ಸಂಗತಿಗಳ ನಡುವಣ ನಂಟನ್ನು ಕೆಳಗಿನಂತೆ ಕಾಣಬಹುದು.

| ಅವಸ್ಥೆ | ವ್ಯಕ್ತ | ಅವ್ಯಕ್ತ | ಜಯ | ಛೇದ | ನಿಷ್ಠಾ |
|---|---|---|---|---|---|
| ದೇಶ | ಗುರುವಿನೊಂದಿಗೆ | ಜನರು | ಗುಹೆ ನಡುವೆ | ಸ್ಮಶಾನ (ಗುಹಾದೇಶ) | ರುದ್ರನೊಂದಿಗೆ |
| ಬಲ | ಗುರುಭಕ್ತಿ | ಮನದ ಶಾಂತಿ (ಮತಿ ಪ್ರಸಾದ) | ವಿರೋಧಿಗಳ ಮೇಲೆ ಜಯ (ದ್ವಂದ್ವ ಜಯ) | ಶ್ರೇಯಸ್ಕರ ಕಾರ್ಯ(ಧರ್ಮ) | ಯಾವತ್ತೂ ಎಚ್ಚರ (ಅಪ್ರಮಾದ) |
| ಮಲ | ಸುಳ್ಳು ಅರಿವು (ಮಿಥ್ಯಾಜ್ಞಾನ) | ಶ್ರೇಯಸ್ಕರವಲ್ಲದ ಕಾರ್ಯ (ಅಧರ್ಮ) | ಮಮತ್ವದ ಕಾರಣ (ಶಕ್ತಿ ಹೇತು) | ಏರುಪೇರು (ಚ್ಯುತಿ) | ಪಶುತ್ವ |
| ವಿಶುದ್ಧಿ | ಅಜ್ಞಾನ ನಿವಾರಣೆ (ಅಜ್ಞಾನ ಹಾನಿ) | ಅಧರ್ಮ ನಿವಾರಣೆ | ಮಮತ್ವದ ಕಾರಣಗಳನ್ನು ನಿವಾರಿಸಿ ಕೊಳ್ಳುವುದು | ಚ್ಯುತಿಯನ್ನು ನಿವಾರಿಸಿ ಕೊಳ್ಳುವುದು | ಪಶುತ್ವವನ್ನು ನಿವಾರಿಸಿ ಕೊಳ್ಳುವುದು |

65. 'ರತ್ನಟೀಕಾ'ವು ಈ ಪದವನ್ನು ಸರಿಯಾಗಿ, ಸ್ಪಷ್ಟವಾಗಿ ವಿವರಿಸುವುದಿಲ್ಲ.

| | | | | | |
|---|---|---|---|---|---|
| ಉಪಾಯ | ಸಿದ್ಧಾಂತದಿಂದ ತುಂಬು (ವಾಸ)[66] | ವಿಧಿಸಲಾದ ನಡತೆ (ಚರ್ಯಾ) | ಪವಿತ್ರ ನಾಮೋಚ್ಚಾರ ಹಾಗೂ ಧ್ಯಾನಧಾರಣೆ (ಜಪ ಮತ್ತು ಧ್ಯಾನ) | ಒಂದೇ ಸಮನೆ ರುದ್ರನನ್ನು ನೆನೆಸುವುದು (ಸದಾ ರುದ್ರ ಸ್ಮೃತಿ) | ದಯೆ (ಪ್ರಸಾದ) |
| ಲಾಭ | ಜ್ಞಾನ | ತಪಸ್ಸು | ದೇವನೊಡನೆ ನಿತ್ಯ ಸಾಹಚರ್ಯ (ದೇವ ನಿತ್ಯತ್ವ)[67] | (ರುದ್ರನಲ್ಲಿ) ಮನನೆಡುವುದು (ಸ್ಥಿತಿ) | ಮಾಂತ್ರಿಕ ಸಿದ್ಧಿ (ಸಿದ್ಧಿ) |
| ದೀಕ್ಷಾಕಾರಿನ್ | ಭೌತಿಕ (ದ್ರವ್ಯ) | ವೇಳೆ (ಕಾಲ) | ಮತಾಚರಣೆ (ಕ್ರಿಯಾ) | ದೇವತಾವಿಗ್ರಹ (ಮೂರ್ತಿ) | ಗುರು |

ಒಂಬತ್ತರ ಗುಂಪಿನ ಕೊನೆಯದನ್ನು ವೃತ್ತಿ (ಉದರ ನಿರ್ವಹಣೆ) ಎಂದು ಕರೆಯಲಾಗಿದೆ. ಇದು ಮೂರು ವಿಧಗಳಿಂದ ಕೂಡಿದೆ : ಭೈಕ್ಷ್ಯ (ಭಿಕ್ಷೆ ಬೇಡುವುದು), ಉಚ್ಛಿಷ್ಟ (ಎಂಜಲು) ಹಾಗೂ ಯಥಾಲಬ್ಧ (ಅಕಸ್ಮಾತ್ ಪಡೆಯಲಾದ ಆಹಾರ). 'ರತ್ನ ಟೀಕಾ'ದ ಹೇಳಿಕೆಯಂತೆ ಇವೆಲ್ಲವು ಆಗಮಗಳಿಂದ ಒಪ್ಪಿಕೊಳ್ಳಲಾದ ಪೋಷಣೆಯ ಮೂಲಗಳು.

'ರತ್ನಟೀಕಾ'ಗ್ರಂಥವು ಐದು ಸಿದ್ಧಿಗಳಲ್ಲಿ ಒಂದನೆಯದಾದ 'ಜ್ಞಾನ' ಶೀರ್ಷಿಕೆಯಡಿ ಈ ಐದು ಅಧ್ಯಾಯಗಳನ್ನು ಒಳಪಡಿಸಿ, ಕೌಂಡಿಣ್ಯನ ಐದು ಮುಖ್ಯ ಅಧ್ಯಾಯಗಳೊಂದಿಗೆ ಈ ವರ್ಗೀಕರಣದ ಪದ್ಧತಿಯನ್ನು ಒಂದುಗೂಡಿಸಲು ಯತ್ನಿಸುತ್ತದೆ. ಪಾಲನೆ(ವಿಧಿ)ಯ ಮುಖ್ಯ ಅಧ್ಯಾಯಕ್ಕೂ ಜ್ಞಾನಕ್ಕೂ ಯಾವುದೇ ಬಗೆಯ ನಂಟು ಇಲ್ಲದಿದ್ದರೂ ಅದನ್ನು ಲಾಂಛನರಹಿತ ಹಂತದ ಕಾರ್ಯವಿಧಾನದಡಿ ವಿಧಿಸಲಾದ ನಡೆವಳಿಕೆಯಲ್ಲಿ (ಚರ್ಯಾ) ಸೇರ್ಪಡಿಸಲಾಗಿದೆ.[68]

ಈ ಐದು ಹಂತಗಳಲ್ಲಿ ತುಂಬ ಮುಖ್ಯವಾದವುಗಳೆಂದರೆ ವ್ಯಕ್ತ ಹಾಗೂ ಅವ್ಯಕ್ತವೆಂಬ ಮೊದಲಿನವೆರಡು. ಉಳಿದ ಮೂರು ಹಂತಗಳು ಮನದ ಅವಸ್ಥೆಯನ್ನು ಕುರಿತು

---

66. ಈ ಪದದ ಉಚ್ಚಾರ ಹಾಗೂ ಅರ್ಥ ಖಚಿತವಿಲ್ಲ. ನೋಡಿ ಹರ, IIJ, II, 15-16, ಮತ್ತು ದಾಸಗುಪ್ತಾ, 'A History ----' V, 148.
67. ನೋಡಿ ಎಮ್. ಹರ, 'A Note on the Sanskrit Word Ni-Tya-', JAOS, LXXIX (1959), 90-96.
68. ನೋಡಿ 'ಗಣಕಾರಿಕಾ', pp. 9-15, 17-19.

ಹೇಳುವಷ್ಟೇ ನಡವಳಿಕೆಯ ದಾರಿಯನ್ನು ಕುರಿತೂ ಮಾತನಾಡುತ್ತವೆ. ಲಾಂಛನವಿರುವ ಹಂತದ ಎಲ್ಲಕ್ಕೂ ಹೆಚ್ಚು ಗಮನಾರ್ಹವಾದ ಲಕ್ಷಣವೆಂದರೆ ಆರಾಧನೆಯ 'ಆರು ಲಿಂಗಗಳ' ಕೃತಿಯಾದ (ಉಪಹಾರ): ನಗುವಿಕೆ, ಕುಣಿತ, ಗಾಯನ ಹಾಗೂ ಮುಂದಿನವುಗಳು. ನಾವು ಈಗಾಗಲೇ ಕಂಡಂತೆ ಬಳ್ಳಿಗಾವೆಯ ಕೇದಾರೇಶ್ವರ ದೇವಾಲಯದ ಕಾಳಾಮುಖ ಯತಿ, ವಾಮಶಕ್ತಿಯು 'ದಿನಾಲು ಸಂತೋಷಕರವಾದ ನೃತ್ಯದ ಕಾರ್ಯಕ್ರಮವನ್ನು ನೆರವೇರಿಸುವಲ್ಲಿ ವಿಶ್ವದಲ್ಲೇ ಎಲ್ಲರಗಿಂತಲೂ ನಿಪುಣನಾಗಿದ್ದನು.'[69] ಪಾಶುಪತರ ಆರಾಧನೆಯ ಕೃತ್ಯಕ್ಕೆ ಇದೊಂದು ಒಳ್ಳೆಯ ನಿದರ್ಶನ ಎನ್ನಬಹುದು. ಬೇರೆ ಕಾಳಾಮುಖ ಯತಿಗಳನ್ನು ನಾಟಕ ಹಾಗೂ ಸಂಗೀತಗಳಲ್ಲಿ ಪಳಗಿದವರೆಂದು ಬಣ್ಣಿಸಲಾದುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಅವ್ಯಕ್ತ ಹಂತದ ಕಾಲಾವಧಿಯಲ್ಲಿ ಹೆಸರನ್ನು ಕೆಡಿಸಿಕೊಳ್ಳುವ ನಡವಳಿಕೆಗಳಿಂದಾಗಿ ಅವಮಾನವನ್ನು ಪ್ರೀತಿಯಿಂದ ಬರಮಾಡಿಕೊಳ್ಳುವ ಕುತೂಹಲಕರ ಪದ್ಧತಿಯು ಪಾಶುಪತ ಸಂಪ್ರದಾಯದ ಎಲ್ಲಕ್ಕೂ ಹೆಚ್ಚು ಎದ್ದು ಕಾಣುವ ಲಕ್ಷಣವೆನ್ನಿಸಿದೆ. ಇದನ್ನು ಕುರಿತು 'ಪಾಶುಪತ ಸೂತ್ರ'ದ ಮೂರನೆಯ ಅಧ್ಯಾಯ ಹಾಗೂ ಅದನ್ನು ಕುರಿತಾದ ಕೌಂಡಿಣ್ಯನ ಭಾಷ್ಯದಲ್ಲಿ ವಿವರವಾಗಿ ಬಣ್ಣಿಸಲಾಗಿದೆ.[70] ಇವೆರಡು ಆಕರಗಳ ಅಭಿಪ್ರಾಯದಂತೆ ಇಂಥ ನಡವಳಿಕೆಗಳಿಗೆ ಇರುವ ಮುಖ್ಯ ತತ್ವಾಧಾರವೆಂದರೆ ಸುಕರ್ಮ ಹಾಗೂ ಕುಕರ್ಮಗಳ ವರ್ಗಾವಣೆ. ಈ 'ಸೂತ್ರ'ವು ಇದನ್ನು ಹೀಗೆ ಬಣ್ಣಿಸುತ್ತದೆ: 'ಬೇರೆಯವರಿಂದ ದೋಷಾರೋಪಣೆಗಳಿಗೆ ಒಳಗಾಗುವುದರಿಂದ ಅವನು ತನ್ನ (ಸಂಗ್ರಹಿತ) ಪಾಪ (ಅಧರ್ಮ)ವನ್ನು ಅವರಿಗೆ ನೀಡುವನಲ್ಲದೆ ಅವರಿಂದ (ಸಂಗ್ರಹಿತ) ಅವರ ಪುಣ್ಯ (ಸುಕೃತ ಅಥವಾ ಧರ್ಮ)ವನ್ನು ತಾನು ಪಡೆದುಕೊಳ್ಳುತ್ತಾನೆ.'[71] ಬೇರೆಯವರಿಂದ ಖಂಡನೆಗೆ ಒಳಗಾಗದಿದ್ದರೆ ಇಂಥ ಕೃತಿಗಳನ್ನು ಎಸಗುವವನು ಅಪಶ್ರೇಯಕ್ಕೆ ಮಾತ್ರ ಈಡಾಗುತ್ತಾನೆ.[72] ಇಂಗಾಲ್ಸ್‌ರು ಗಮನಿಸುವಂತೆ (HTR, LV, 293) ಸುಕರ್ಮ ಹಾಗೂ ಕುಕರ್ಮಗಳ ಅದಲು ಬದಲಾವಣೆಯ ಈ ವಿಚಾರವು ಸಂಸ್ಕೃತದ ಅಭಿಜಾತ ಸಾಹಿತ್ಯದಲ್ಲಿ ಒಂದು ತೀರ ಸಾಮಾನ್ಯ ಸಂಗತಿಯಾಗಿದೆ. ಆದರೆ ಈ ಉದ್ದೇಶದಿಂದ ಬೇಕೆಂದೇ ಅವಮಾನವನ್ನು ಪ್ರೀತಿಸುವುದು ಮಾತ್ರ ಬಲು ಅಸಾಮಾನ್ಯ ಹಾಗೂ ವಿವರಿಸಲು ತುಂಬ ಕಷ್ಟದ ಸಂಗತಿ.

ಇಂಗಾಲ್ಸ್‌ರು (HTR, LV, 295-98) ಈ ಕೆಲವು ಜನ ಯತಿಗಳ ವಿಚಿತ್ರವಾದ ನಡೆವಳಿಕೆಗಳ ಮೂಲವನ್ನು 'ಜೈಮಿನೀಯ ಬ್ರಾಹ್ಮಣ'ದಲ್ಲಿ ನಮೂದಿತವಾದ ಪಶುಪ್ರಮಾಣ

69. ಹಿಂದೆ ನೋಡಿ, ಪು. 128.
70. ಈ ಅಧ್ಯಾಯದ ಬಹಳಷ್ಟು ಭಾಗ ಹಾಗೂ ಅದರ ಭಾಷ್ಯಗಳನ್ನು ಇಂಗಾಲ್ಸ್ ಅವರು ಅನುವಾದಿರುವರು, HTR, LV, 285-91.
71. ಪಾಶುಪತ ಸೂತ್ರ iii, 7, 8 ಮತ್ತು 9.
72. ಕೌಂಡಿಣ್ಯನ 'ಪಂಚಾರ್ಥ ಭಾಷ್ಯ', 'ಸೂತ್ರ'ವನ್ನು ಕುರಿತು iii, 7.

ವಚನ ಹಾಗೂ ಮುಂದಿನ ಸಂಸ್ಕೃತ ಸಾಹಿತ್ಯವಲ್ಲದೆ ಭೂತಪ್ರೇತ ಬಡಿದುಕೊಂಡಾಗ ವಿಶ್ವವಿಡಿ ಮಾಂತ್ರಿಕರು (ಸೈಬೇರಿಯದ ಶಮನ್ ಯತಿಗಳು)ಬುಡಕಟ್ಟಿನವರಲ್ಲಿ ಬಳಸುವ ತಾಂತ್ರಿಕ ವಿಧಾನಗಳಲ್ಲಿ ಕಂಡುಕೊಳ್ಳಲು ಯತ್ನಿಸುತ್ತಾರೆ. ಇಂಗಾಲ್ಸ್‌ರ ಈ ಆಧಾರಭೂತಕಲ್ಪನೆಯನ್ನು ಇಡಿಯಾಗಿ ತಳ್ಳಿಹಾಕಲು ಇಷ್ಟಪಡದೆ ನಾವು ನಂಬುವುದೇನೆಂದರೆ ಈ ಬಗೆಯ ಬಹಳಷ್ಟು ಆಚರಣೆಗಳ ಬಗೆಗೆ ಇರುವ ಮನೋವೈಜ್ಞಾನಿಕ ಹಾಗೂ ಐತಿಹಾಸಿಕ ಅಡಿಪಾಯಗಳನ್ನು ಕಂಡುಕೊಳ್ಳಲು ಇಷ್ಟೊಂದು ದೂರದ ನಾಡುಗಳಿಗೆ ಹೋಗುವ ಬದಲು ಅವುಗಳನ್ನು ಭಾರತೀಯ ಧರ್ಮದ ಬಲು ಪ್ರಭಾವಿಯಾದ ಸಂನ್ಯಾಸ ಪದ್ಧತಿಯ ತುಂಬ ಸಂಕೀರ್ಣವಾದ ರಚನೆಯಲ್ಲೇ ಕಂಡುಕೊಳ್ಳಲು ಸಾಧ್ಯವೆಂದು.

ತನ್ನ ಜೊತೆಯ ವ್ಯಕ್ತಿಗಳಿಂದ ಖಂಡನೆಗೆ ಒಳಪಡುವುದನ್ನು ಪ್ರೀತಿಸುವುದು, ಏನೆಂದರೂ ಅವರಿಂದ ತನ್ನ ನಂಟು ಕಡಿದುಕೊಳ್ಳಲು, ಒಂಟಿಗನಾಗಲು ಹಾಗೂ ಪ್ರಾಪಂಚಿಕ ನಿರ್ಮಮತ್ವವನ್ನು ಹೊಂದಲು ಎಲ್ಲಕ್ಕೂ ಹೆಚ್ಚು ಕಾರ್ಯದಕ್ಷತೆಯ ವಿಧಾನವಾಗಿದೆ. ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುವ ಅನಾಸಕ್ತ ಅವಸ್ಥೆಯು ಜೈನ, ಬೌದ್ಧ ಹಾಗೂ ಉಪನಿಷತ್ತುಗಳ ಹಿಂದೂ ಧರ್ಮ, ಅವುಗಳ ಅತ್ಯಗತ್ಯವಾದ ಒಂದು ಘಟಕಾಂಶವೆನ್ನಿಸಿದೆ. ನಾವು ಈಗಾಗಲೇ ಕಂಡಂತೆ ಆಸಕ್ತಿಯ ಕಾರಣಗಳನ್ನು (ಸಂಗಕರ ಹಾನಿ) ನಿವಾರಿಸಿಕೊಳ್ಳುವುದು ಪಾಶುಪತ ಸಿದ್ಧಾಂತದ ಐದು ಶುದ್ಧೀಕರಣಗಳಲ್ಲಿ ಒಂದಾಗಿದೆ. ಪಾಶುಪತರ ಕೃತಿಗಳ ಹಿಂದಿರುವ ಪ್ರೇರಕ ಶಕ್ತಿಯೆಂದರೆ ಶ್ರೇಯಸ್ಸನ್ನು ವರ್ಗಾಯಿಸುವಂತೆಯೇ ಅನಾಸಕ್ತಿಯನ್ನು ಮೈಗೂಡಿಸಿಕೊಳ್ಳುವುದೆಂದು ಸ್ವತಃ ಕೌಂಡಿಣ್ಯನೇ ಸ್ಪಷ್ಟ ಪಡಿಸುತ್ತಾನೆ. ಉದಾ: ಸೂತ್ರ iii. 3 ರ ' ಅವಮಾನಿತ (ಅವಮತಃ)' ದಡಿ ಅವನು ಒಂದು ಪದ್ಯವನ್ನು ಉದ್ಧರಿಸುತ್ತಾನೆ. ಅದು ಹೀಗಿದೆ: 'ಹೇಯವಾಗಿ ಕಾಣಲಾದವನು ಎಲ್ಲ ಬಗೆಯ ಆಸಕ್ತಿಗಳಿಂದ ಬಿಡುಗಡೆ ಹೊಂದಿ ಹಾಯಾಗಿ ಮಲಗಬಹುದು'. [73] ಸೂತ್ರ iii, 11ವನ್ನು ಕುರಿತಾದ ಅವನ ಭಾಷ್ಯಗಳು ಅಷ್ಟೇ ಸ್ಪಷ್ಟವಾಗಿವೆ. ಈ ಸೂತ್ರ ಹೀಗೆನ್ನುತ್ತದೆ: ' ಒಬ್ಬ ಜಾತಿಬಾಹಿರನಂತೆ (ಪ್ರೇತ) ಅವನು ಅಂಡಲೆಯುತ್ತ ಹೋಗಬೇಕು'.[74] ಕೌಂಡಿಣ್ಯ ಹೀಗೆ ಭಾಷ್ಯ ಮಾಡುತ್ತಾನೆ :

> ಅವನು ತಲೆ ಕೆಟ್ಟವನ ಹಾಗೆ, ದರಿದ್ರನ ಹಾಗೆ ಕಾಣಬೇಕು. ಅವನ ದೇಹವು ಕೊಳೆಯಿಂದ ಮುಸುಕಿರಬೇಕು. ದೇಹದ ಬಗೆಗೆ ಯಾವುದೇ ಎಚ್ಚರ ವಹಿಸದ್ದರಿಂದ ಅವನ ದೇಹವು ಕೊಳೆಯಿಂದ ಮುಸುಕಿರಬೇಕು. ದೇಹದ ಬಗೆಗೆ ಯಾವುದೇ ಎಚ್ಚರ ವಹಿಸದ್ದರಿಂದ ಅವನ ಗಡ್ಡ, ಉಗುರುಗಳು ಹಾಗೂ ತಲೆಗೂದಲುಗಳು ಉದ್ದಾಗಿ ಬೆಳೆದಿರಬೇಕು. ಹೀಗೆ ಅವನು

73. ಅನು. ಇಂಗಾಲ್ಸ್, HTR, LV, 286.

74. ಅನು. ಅದೇ. ಪು. 289, 'ಪ್ರೇತ'ದ ಅರ್ಥವು ಸಾಮಾನ್ಯವಾಗಿ 'ಸತ್ತ ಮನುಷ್ಯ'ಅಥವಾ 'ದೆವ್ವ' ಎಂದಾಗುತ್ತದೆ. 'ಸೂತ್ರ'ಕ್ಕೆ ಈ ಅರ್ಥವು ಒಪ್ಪಿಗೆಯಾಗಿರಬೇಕು. ಆದರೆ ಕೌಂಡಿಣ್ಯನು ಮಾತ್ರ 'ಜಾತಿ ಬಾಹಿರ'ನೆಂದು ಅರ್ಥೈಸುತ್ತಾನೆ.

> ಗೌರವಾನ್ವಿತ ಜಾತಿ ಹಾಗೂ ಪರಿಸ್ಥಿತಿಗಳಿಂದ ನಂಟು ಕಡಿದುಕೊಳ್ಳುತ್ತಾನೆ. ಹೀಗಾದ ಬಳಿಕ ಆಕಾಂಕ್ಷೆಯಿಲ್ಲದ ಅನಾಸಕ್ತಿಯ ಸಾಮರ್ಥ್ಯವು ಹುಟ್ಟಿಕೊಳ್ಳುತ್ತದೆ.[75]

ಬುಡಕಟ್ಟಿನ ಭೂತಾರಾಧನೆಯ ಮಾಂತ್ರಿಕ ಪೂಜಾರಿಯಲ್ಲಿ ಈ ಬಗೆಯ ಆಲೋಚನೆಗಳಿಗೆ, ಅದಾವ ಸ್ಥಾನವೂ ಇಲ್ಲ. ಅವನ ಅಸಂಬದ್ಧ, ಅತಿಯಾದ, ತೊದಲು ಮಾತುಗಳು, ಪ್ರಾಣಿಗಳ ಕರ್ಕಶ ಧ್ವನಿಗಳು; ಮುಂ. ಅವನನ್ನು ಅವನ ಜನರಿಂದ ಬೇರೆಯವನನ್ನಾಗಿ ಮಾಡುತ್ತವೆ. ಅವನಾಗಲಿ, ಅವನ ಜನರಾಗಲಿ ಇದೇ ನಡವಳಿಕೆಯನ್ನು ಅವನ ಅತೀಂದ್ರಿಯ ಆಧ್ಯಾತ್ಮಿಕ ಸಾಮರ್ಥ್ಯದ ಕುರುಹೆಂದು ಬಗೆಯುತ್ತಾರೆ. ಈ ಮಾಂತ್ರಿಕನು ತನ್ನ ಸಮಾಧಿಯ ಅವಸ್ಥೆಯನ್ನು ನಿಯಂತ್ರಿಸಬಯಸುವಂತೆಯೇ ತಾನು ಈ ಅತೀಂದ್ರಿಯ ವಿಶ್ವದೊಂದಿಗೆ ಸಂವಹನೆಯನ್ನು ಕೈಕೊಳ್ಳುತ್ತಿರುವೆನೆಂದೂ ನಂಬುತ್ತಾನೆ. ಇದಕ್ಕೆದುರಾಗಿ, ಪಾಶುಪತನ ತಲೆಕೆಟ್ಟ ನಡತೆಯು ಒಂದು ಸೋಗು ಮಾತ್ರವಾಗಿದ್ದು ಅವನು ಸಾಮಾನ್ಯ ಜನರ ತಿರಸ್ಕಾರಕ್ಕೇನೆ ಈಡಾಗುತ್ತಾನೆ. ಇವನ ನಡತೆಯ ಕೆಲವು ಸಂಗತಿಗಳ ಮೂಲವು ಮಾಂತ್ರಿಕನ ಮತದಲ್ಲಿಯೂ ಕಂಡು ಬರಬಹುದಾದರೂ ಅವುಗಳ ಮನೋವೈಜ್ಞಾನಿಕ ತಳಹದಿ ಮಾತ್ರ ಪೂರ್ತಿ ಬದಲಾಯಿಸಿದೆ. ಈ ಕಾರಣದಿಂದಾಗಿ ನಾವು ಪಾಶುಪತರ ಈ ಅವಮಾನ ಪ್ರೀತಿಯನ್ನು, ಸಂನ್ಯಾಸದ ತಪೋಮಾರ್ಗದಿಂದ ಐಹಿಕ ವಿಶ್ವದಿಂದ ಬಿಡಿಸಿಕೊಳ್ಳಲೆಳೆಸುವ ಮೂಲಭೂತ ಅನ್ವೇಷಣೆಯ ಒಂದು ಬಗೆಯ ವಿಸ್ತಾರಿತವಾದ ಚಟುವಟಿಕೆಯೆಂದು ಖಂಡಿತವಾಗಿಯೂ ಕಾಣಲು ಇಷ್ಟ ಪಡುತ್ತೇವೆ.[76]

75. ಅವೇ ಅನು, ಇಟ್ಯಾಲಿಕ್ ಅಕ್ಷರಗಳಲ್ಲಿ ಬರೆಯಲಾದ ಪರಿಚ್ಛೇದಗಳನ್ನು ಬಿಟ್ಟು. ಇಲ್ಲಿ, ಇಂಗಾಲ್ಸ್‌ರ ಅನುವಾದ ಗಮನಾರ್ಹವಾಗಿ ದಾರಿತಪ್ಪಿಸುವಂತಿದೆ. ಪೂರ್ತಿ ಸಂಸ್ಕೃತ ವಾಕ್ಯ ಹೀಗಿದೆ: ಅತೋ ವರ್ಣಾಶ್ರಮವ್ಯುಚ್ಛೇದೋ ವೈರಾಗ್ಯೋತ್ಪಾಹಶ ಚ ಜೀಯ ತೇ'. ಇಂಗಾಲ್ಸರು ಇಲ್ಲಿ ಇಟ್ಯಾಲೀಕರಣಗೊಳಿಸಿದ ಭಾಗವನ್ನು ಜಿಗುಪ್ಸೆಯನ್ನು ಉಂಟುಮಾಡುತ್ತದೆ'ಎಂದು ಅನುವಾದಿಸಿದ್ದಾರೆ. ಈ ಸಂದರ್ಭದಲ್ಲಿ, 'ವೈರಾಗ್ಯ'ವೆಂಬುದು, ಎಲ್ಲ ಬಗೆಯ ಭೌತಿಕ ಆಸೆಗಳಿಂದ ಬಿಡುಗಡೆ' ಎಂಬುದಾಗಿ ಒಂದು ಧನಾತ್ಮಕವಾದ ಗುಣವನ್ನು ನಿದರ್ಶಿಸುವುದೆಂದು ಕಾಣುತ್ತದೆ. ಕೌಂಡಿನ್ಯನು ತನ್ನ ಬಾಷ್ಯದ ಬೇರೊಂದೆಡೆಯಲ್ಲಿ ಇದೇ ಅರ್ಥದಿಂದ ಇದನ್ನು ಬಳಸಿರುವನು. ಉದಾಹರಣೆಗೆ ಹೇಳಬೇಕೆಂದರೆ ಸೂತ್ರ i. 42, ದಲ್ಲಿ ನಾವು ಒಂದು ಸಂಯುಕ್ತ ಪದರಚನೆಯನ್ನು ಕಾಣುತ್ತೇವೆ.ಅದುಹೀಗಿದೆ:'ಧರ್ಮಜ್ಞಾನವೈರಾಗ್ಯೈಶ್ವರ್ಯಾಧರ್ಮಾಜ್ಞಾನಾವೈಶ್ವರಾಗ್ಯಾನೈಶ್ವರ್ಯಾನಾಮ್'. 'ಎಲ್ಲ ಬಗೆಯ ಭೌತಿಕ ಆಸೆಗಳಿಂದ ಬಿಡುಗಡೆ'ಯು ಸ್ವಾಭಾವಿಕವಾಗಿಯೇ ಉಪಾಸಕನಲ್ಲಿ ಹುಟ್ಟಿಬರುತ್ತವೆ, ಅವನನ್ನು ಕಾಣುವವರಲ್ಲಲ್ಲ.

76. 'ಆಚಾರಾಂಗ ಸೂತ್ರ'ದ (ಅನು. ಎಚ್. ಜೇಕೊಬಿ, iv. 16. 2-3) ಈ ಪರಿಚ್ಛೇದದಲ್ಲಿ, ಜೈನಮುನಿಗಳು ಅವಮಾನವನ್ನು ಪ್ರೀತಿಸಲಾಗದಿದ್ದರೂ ಅದನ್ನು ಒಪ್ಪಿಕೊಳ್ಳುವಂತೆ ಮಾತ್ರ ವಿಧಿಸಲಾಗಿದ್ದು, ಅದು ಹೀಗೆ: 'ಈ ಬಗೆಯಾಗಿ ಬಾಳುವ ಭಿಕ್ಷು ಅಂದರೆ ಅಮರತ್ವದ (ಜೀವಿಗಳ ಲೋಕದ) ಬಗೆಗೆ ಆತ್ಮ ಸಂಯಮವುಳ್ಳ, ಸರಾಸಾಟಿಯಿಲ್ಲದ ಋಷಿಯು ಭಿಕ್ಷೆ ಬೇಡುವಾಗ ಜನರು, ಯುದ್ಧದ ಕಾಲಕ್ಕೆ ಬಾಣಗಳಿಂದ ಆನೆಯ ಮೇಲೆ ರಾಶಿಯಿಕ್ಕುವಂತೆ ಅವನ ಮೇಲೆ ಮಾತುಗಳಿಂದ ದಾಳಿಯಿಕ್ಕುತ್ತಾರೆ. ಇಂಥ ಜನರ ಬಗೆಗೆ ಜಿಗುಪ್ಸೆಯನ್ನು ತಳೆವ ನಿರಿಚ್ಛನಾದ ಜಾಣ ಮನುಷ್ಯನು ಗಾಳಿಯಿಂದ ಅಲ್ಲಾಡದ ಒಂದು ಬೆಟ್ಟದ ಹಾಗೆ ಅವರ ಮಾತು ಹಾಗೂ ಏಟುಗಳನ್ನು ಸಹಿಸಿಕೊಳ್ಳುತ್ತಾರೆ.'

ಪಾಶುಪತ ಸಂಪ್ರದಾಯದ ಬಗೆಗಿನ ಇನ್ನೊಂದು ಸಂಗತಿಯತ್ತಲೂ ಗಮನ ಹರಿಸುವುದು ಆವಶ್ಯಕ. ಇದೆಂದರೆ, ಹತ್ತು ಬಗೆಯ ಯಮ-ನಿಯಮಗಳು ಅಥವಾ 'ಮುಖ್ಯ-ಅಮುಖ್ಯ ನಿಯಮಗಳಿ'ಗೆ ಕೌಂಡಿನ್ಯನಿಂದ ಎಲ್ಲಕ್ಕೂ ಹೆಚ್ಚಿನ ಒತ್ತು ನೀಡಲಾದರೆ 'ರತ್ನಟೀಕಾ'ದಿಂದ ತೀರ ಕಡಿಮೆ ಒತ್ತು ನೀಡಲಾದುದು. ಕೌಂಡಿನ್ಯನು ಈ ಐದು ಯಮಗಳೆಂದರೆ ಅಹಿಂಸೆ, ಬ್ರಹ್ಮಚರ್ಯ, ಸತ್ಯ, ನಿರ್ವಾಣಿಜ್ಯ (ಅಸಂವ್ಯವಹಾರ) ಹಾಗೂ ಕಳವು ಮಾಡದಿರುವುದು (ಅಸ್ತೇಯ)ಎಂದು ವ್ಯಾಖ್ಯಾನಿಸುತ್ತಾನೆ. ಅವನು ಈ ಐದು ನಿಯಮಗಳೆಂದರೆ ಕೋಪ ಮಾಡದಿರುವುದು (ಅಕ್ರೋಧ), ಗುರುವಿನತ್ತ ಎಲ್ಲಕ್ಕೂ ಹೆಚ್ಚು ಗಮನ ನೀಡುವುದು (ಗುರು ಶುಶ್ರೂಷಾ), ಸ್ವಚ್ಛತೆ (ಶೌಚ) ಮಿತಾಹಾರ (ಆಹಾರ ಲಾಘವ) ಹಾಗೂ ಸತತ ದಕ್ಷತೆ (ಅಪ್ರಮಾದ) [77] ಎಂದು ಹೇಳುತ್ತಾನೆ. ಸಂಸ್ಕೃತದ ಇನ್ನಿತರ ಕೃತಿಗಳು ಯಮ-ನಿಯಮಗಳನ್ನು ತುಸು ಭಿನ್ನವಾಗಿ ವ್ಯಾಖ್ಯಾನಿಸುತ್ತವೆ.[78] ಇವು ಯೋಗಸೂತ್ರದ ii. 29ದಲ್ಲಿ[79] ನಮೂದಿಸಲಾದ ಯೋಗದ ಐದು 'ಅಂಗಗಳ'ಲ್ಲಿ ಮೊದಲಿನವೆರಡು ಆಗಿವೆ. ಅಲ್ಲದೆ, ಅವು ಇದೇ ರೀತಿಯಾಗಿ ಶಾಸನಗಳಲ್ಲಿ ಕಾಳಾಮುಖ ಯತಿಗಳಿಗೆ ಮತ್ತೆ ಮತ್ತೆ ನೀಡಲಾದ ಯೋಗ ಸಿದ್ಧಿಗಳ ಪಟ್ಟಿಗಳಲ್ಲಿ ಮೊದಲಿಗೆ ಬರುತ್ತವೆ.ಮಹಾವ್ರತಿನ್ ಎಂಬ ಬಿರುದನ್ನು ಸಾಮಾನ್ಯವಾಗಿ ಕಾಳಾಮುಖ ಯತಿಗಳಾಗಿ ಬಳಸಲಾಗುವುದರಿಂದ ಈ ಐದು ನಿಯಮಗಳು ಅವರಿಗೆ ಸಂಬಂಧಿಸಿದಂತೆ ಕಾಣುತ್ತವೆ. (ಯೋಗ ಸೂತ್ರ ii. 31 ರ ಹೇಳಿಕೆಯಂತೆ ಐದು ಯಮಗಳನ್ನು ಜಾತಿ, ಸ್ಥಳ, ಕಾಲ, ಇಲ್ಲವೆ ಸಂದರ್ಭಗಳಿಲ್ಲದೆ ಯಾವುದೇ ಪರಿಸ್ಥಿತಿಯಲ್ಲಿ ಕೂಡ ಪಾಲಿಸುವುದನ್ನು 'ಮಹಾವ್ರತ' ಎಂದೆನ್ನಲಾಗುತ್ತದೆ.) [80]

ಪಾಶುಪತರ ದೇವತಾಶಾಸ್ತ್ರವು ಬಲು ಹಿರಿದು ಹಾಗೂ ತುಂಬ ಸಂಕೀರ್ಣ ವಿಷಯವಾಗಿದ್ದು ಅದನ್ನು ವಿವರವಾಗಿ ಚರ್ಚಿಸುವ ಯೋಗ್ಯತೆ ನಮ್ಮದಲ್ಲವೆಂದೇ ಬಗೆದಿದ್ದೇವೆ.[81] ಇದರ ಮೂಲಭೂತ ರೂಪುರೇಖೆಗಳನ್ನು ಮುಖ್ಯವಾದ ಐದು ಅಧ್ಯಾಯಗಳಲ್ಲಿ ಸಂಕ್ಷಿಪ್ತವಾಗಿ (ಸಂಪ್ರದಾಯವನ್ನು ಸೂಚಿಸುವ, ಆಚರಣೆಗೆ ಸಂಬಂಧಿಸಿದ ಮೂರನೆಯ ಅಧ್ಯಾಯವನ್ನುಳಿದು) ನೀಡಲಾಗಿದೆ. ಮೊದಲನೆಯ ಅಧ್ಯಾಯ ಪರಿಣಾಮದ್ದು

---

77. 'ಪಂಚಾರ್ಥ ಭಾಷ್ಯ', 'ಪಾಶುಪತ ಸೂತ್ರ' i. 9 (pp. 16-33) ಕುರಿತು.
78. ನೋಡಿ ಪಿ. ವಿ. ಕಾಣೆ, HDS, V, Part II, 1418-24.
79. 'ಯಮ ನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧಾರಣಾ ಧ್ಯಾನ ಸಮಾಧಯೋಷ್ಟಾಂಗಾನಿ.' ಅಲ್ಲದೆ ಮೇಲೆ ನೋಡಿ, ಪು. 111.
80. 'ಅಹಿಂಸಾ ಸತ್ಯಮಸ್ತೇಯ ಬ್ರಹ್ಮಚರ್ಯಾಪರಿಗ್ರಹಾಯಮಾ: ಜಾತಿ ದೇಶ ಕಾಲ ಸಮಯಾನವಚ್ಛಿನ್ನಾ: ಸಾರ್ವಭೌಮಾ: ಮಹಾವ್ರತಮ್.'
81. ಓದುಗರು ಎಫ್. ಎ. ಶುಲ್ಟ್ಜ್ ಅವರ ಕೃತಿ, ಸಾಯಣ ಮಾಧವರ 'ಸರ್ವದರ್ಶನ ಸಂಗ್ರಹ'ದ 'ಲಕುಲೀಶ ಪಾಶುಪತ ದರ್ಶನ' ಎಂಬ ಅಧ್ಯಾಯದ ಹರ ಅವರ ಅನುವಾದ ಹಾಗೂ ಎಸ್. ಎನ್. ದಾಸಗುಪ್ತಾ ಅವರ 'A History -----, ' Vol.V. ಗಳತ್ತ ವಿಶೇಷವಾಗಿ ಗಮನ ಹರಿಸಬೇಕು.

(ಕಾರ್ಯ). ಇದನ್ನು ಮೂರು ಬಗೆಯಾಗಿ ವಿಭಾಗಿಸಲಾಗಿದೆ: (1) ಹಲವು ಬಗೆಯ ಎಚ್ಚರಗಳಿಂದ ಕೂಡಿದ, ಹಾಗೂ ಎಚ್ಚರಗಳಿಲ್ಲದ ಮಾನಸಿಕ ಚಟುವಟಿಕೆಗಳನ್ನು ಒಳಗೊಂಡ ಅರಿವು (ವಿದ್ಯಾ), (2)ಭೌತಿಕ ಮೂಲಾಂಶಗಳು ಹಾಗೂ ಮಾನವನ ಅವಯಗಳು, ಜ್ಞಾನೇಂದ್ರಿಯ ಹಾಗೂ ಮನೋಸಾಮರ್ಥ್ಯಗಳನ್ನೊಳಗೊಂಡ ವಿಶ್ವ ಮತ್ತು ದೈಹಿಕ ಭಾಗಗಳು (ಕಲಾ) ಹಾಗೂ (3) ವ್ಯಕ್ತಿಗತ ಆತ್ಮ (ಪಶು), ಇವುಗಳ ಒಟ್ಟು ಪರಿಣಾಮವೆಂದರೆ ಪರಾವಲಂಬನೆ (ಅಸ್ವತಂತ್ರ) ಎಂದೆನ್ನಲಾಗಿದೆ.

ಎರಡನೆಯ ಅಧ್ಯಾಯ 'ಕಾರಣ'ದ್ದು. ಇದನ್ನು 'ದೇವರು' ಅಥವಾ 'ಈಶ್ವರ' ಎಂದು ತುಂಬ ಹಗುರಾಗಿ ವ್ಯಾಖ್ಯಾನಿಸಲಾಗಿದೆ. ಪಾಶುಪತ ಸಂಪ್ರದಾಯವು ಸಂಪೂರ್ಣವಾಗಿ ಆಸ್ತಿಕವಾದ್ದರಿಂದ ದೇವನು ಅದರ ಆಧ್ಯಾತ್ಮಿಕ ಪದ್ಧತಿಯ 'ಕೀಲು'ವಿನಂತೆ ಕೆಲಸವನ್ನು ಮಾಡುತ್ತಾನೆ. ಅವನನ್ನು ಈ ಇಡಿಯ ವಿಶ್ವದ ಸೃಷ್ಟಿ, ಸ್ಥಿತಿ, ಲಯಕರ್ತನೆಂದು ಬಣ್ಣಿಸಲಾಗುತ್ತದೆ.[82] ಅವನಿಗೆ ಎರಡು ಮುಖ್ಯ ಲಕ್ಷಣ (Aspect)ಗಳಿದ್ದು ಅವು ಅಂತಸ್ಥವಾಗಿದ್ದು ವೈವಿಧ್ಯಗಳಿಂದ ಕೂಡಿದುದಾಗಿವೆ. (ಸಕಲ). ಅಲ್ಲದೆ ಅದು ಅತೀಂದ್ರಿಯವೂ, ನಿರಾಕಾರವೂ (ನಿಷ್ಕಲ) ಆಗಿದೆ. ಇವೆರಡೂ ಸಂಗತಿಗಳು ಅಸೀಮ ಜ್ಞಾನದ ಸಾಮರ್ಥ್ಯ (ಜ್ಞಾನ ಶಕ್ತಿ) ಹಾಗೂ ಕೃತಿ ಸಾಮರ್ಥ್ಯ(ಕ್ರಿಯಾಶಕ್ತಿ)ಗಳಂತಹ ಅಸಾಧಾರಣವಾದ ಲಕ್ಷಣಗಳಿಂದ ಕೂಡಿದವುಗಳು. [83] ಅವನ ನಿರಾಕಾರ ಅವಸ್ಥೆಯನ್ನು ಬಣ್ಣಿಸಲು ಮಾತು ಅಸಮರ್ಥವಾಗಿದೆ.[84] ಅವನ ಹಲವು ವಿಧದ ಅವಸ್ಥೆಗಳಲ್ಲಿರುವ ಹಲವಾರು ಗುಣಲಕ್ಷಣಗಳು ಹಾಗೂ ಕಾರ್ಯಗಳಾದ ಪತಿತ್ವ, ಸತ್ವ, ಆದ್ಯತ್ವ, ಅಜಾತತ್ವ, ಮುಂ.ಗಳಿಗೆ ತಕ್ಕಂತೆ ಅವನನ್ನು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ.[85] ಈ ಬಗೆಗೆ ಅವನು 'ಕಾರ್ಯ'ವನೆಲ್ಲ (ಸಾಂಖ್ಯರ ಇಪ್ಪತ್ತೈದು ಬಗೆಯವುಗಳು ಅಥವಾ ತತ್ವಗಳೆಂದು ವ್ಯಾಖ್ಯಾನಿಸಲಾದವುಗಳು) ಇಡಿಯಾಗಿ ವ್ಯಾಪಿಸಿರುತ್ತಾನೆಂದೂ ಹೇಳಲಾಗಿದೆ.[86]

ದೇವರು ಕಾರಣನು ಎಂಬ ಸಿದ್ಧಾಂತವು, ಹನ್ನೊಂದನೆಯ ಶತಮಾನದ ಹೊಂಬಳದ ಕಾಳಾಮುಖ ಯತಿ ಬೊಂತೆಯ ಮುನಿಯು ಬೋಧಿಸಿದ 'ಈಶ್ವರ ಕರ್ತೃವಾದ' ದಂತೆಯೇ ಇದೆ. ಅವನ ಸಿದ್ಧಾಂತದ ಈ ಹೆಸರನ್ನೊಂದು ಬಿಟ್ಟರೆ ಅದರ ಬಗೆಗೆ ಹೆಚ್ಚೇನೂ ತಿಳಿಯದೆ ಹೋದರೂ ಅವನು ತನ್ನ ಪಯಣಗಳ ಕಾಲಕ್ಕೆ ನಡೆಯಿಸಿದ ಒಂದು ಪವಾಡವು ಹೆಚ್ಚಿನ ಮಾಹಿತಿಯನ್ನು ಒದಗಿಸುತ್ತದೆ. ಅವನ ಸಿದ್ಧಾಂತದ 'ಕರ್ತೃ'ವಿಗೆ 'ನಿರಾಕಾರ' ಅವಸ್ಥೆಯೂ

82. 'ಗಣಕಾರಿಕಾ'ದಲ್ಲಿಯ 'ರತ್ನಟೀಕಾ', ಪು. 11.
83. ಕೌಂಡಿಣ್ಯ, 'ಪಾಶುಪತ ಸೂತ್ರ'ವನ್ನು ಕುರಿತು, ii. 27 ಮತ್ತು v. 27.
84. ಅದೇ, V. 27. ಅಲ್ಲದೆ ನೋಡಿ 'ಗಣಕಾರಿಕಾ', ಪು. 11ದಲ್ಲಿ 'ರತ್ನಟೀಕಾ' ನೋಡಿ.
85. 'ಗಣಕಾರಿಕಾ'ದ ಪು. 11ರಲ್ಲಿ 'ರತ್ನಟೀಕಾ'.
86. 'ಕೌಂಡಿಣ್ಯ, 'ಪಾಶುಪತ ಸೂತ್ರ' ii. 5. ವನ್ನು ಕುರಿತು.

ಒಂದಿತ್ತೆಂಬುದನ್ನು ಅದು ಹೇಳುತ್ತದೆ. ಬೃಹತ್ ಸಭೆಯೊಂದರಲ್ಲಿ ಅವನ ಎದುರಾಳಿಗಳು, "ಅವನು ಸಮರ್ಥಿಸುವ 'ಕರ್ತೃ' ನಿರಾಕಾರನಾಗಿರಲು ಹೇಗೆ ಸಾಧ್ಯ?" ಎಂದು ಕೇಳಿದರು. ಅದಕ್ಕೆ ಉತ್ತರವೆಂದು 'ಅವನು ಕೆಲಹೊತ್ತು ಅದೃಶ್ಯನಾಗಿದ್ದು ಅವರನ್ನು ಮೂಕವಿಸ್ಮಿತರನ್ನಾಗಿ ಮಾಡಿದನು----'[87]

ಕೌಂಡಿಣ್ಯ ಹಾಗೂ 'ರತ್ನಟೀಕಾ' ಬಲು ಗಂಭೀರವಾಗಿ ಪ್ರತಿಪಾದಿಸುವ ಪಾಶುಪತ ಸಿದ್ಧಾಂತದ ಎದ್ದು ಕಾಣುವ ಸ್ಪಷ್ಟವಾದ ಲಕ್ಷಣವೆಂದರೆ ದೇವನಿಗಿರುವ ಸಂಪೂರ್ಣ ಸ್ವಾತಂತ್ರ್ಯದಲ್ಲಿ (ಸ್ವತಂತ್ರತಾ) ನಂಬಿಕೆ.[88] ವ್ಯಾವಹಾರಿಕ ಮಟ್ಟದಲ್ಲಿ ಈ ಸ್ವಾತಂತ್ರ್ಯವೆಂದರೆ, ದೇವರು ಮಾನವನ ಕರ್ಮಗಳನ್ನು ಗಣನೆಗೆ ತೆಗೆದುಕೊಳ್ಳದೆಯೇ (ಕರ್ಮಾಧಿನಿರಪೇಕ್ಷ) ಕೆಲಸ ಮಾಡುತ್ತಾನೆಂಬುದು. ಹೀಗಾಗಿ ದೇವರ ಇಚ್ಛೆಯನ್ನು ನೈತಿಕ ವ್ಯವಸ್ಥೆಯ (ಧರ್ಮ) ಮೇಲಕ್ಕೆ ಹಾಗೂ ಮೇಲ್ದರ್ಜೆಯಲ್ಲಿ ಇರಿಸಲಾಗಿದೆ. ಸಾಯಣ ಮಾಧವರು ಈ ದೃಷ್ಟಿಕೋನ ಹಾಗೂ ಶೈವದರ್ಶನದ ಅನುಯಾಯಿಗಳಾದ ಮಾಹೇಶ್ವರರ ದೃಷ್ಟಿಕೊನಗಳ ನಡುವಿನ ವೈರುಧ್ಯಗಳನ್ನು ವಿರೋಧಿಸುತ್ತಾರೆ. ಅವರು ಈ ಪಾಶುಪತ ಸಿದ್ಧಾಂತವನ್ನು ತಳ್ಳಿ ಹಾಕಲು 'ಕಾರಣವೇನೆಂದರೆ ಇದು ಕ್ರೌರ್ಯ ಹಾಗೂ ಅನ್ಯಾಯಗಳ ದೋಷಗಳಿಗೆ ಈಡಾಗಿದೆ'ಅಲ್ಲದೆ ಮುಂದೆ 'ಕಾರಣನೆನ್ನಿಸಿದ ಸರ್ವಶ್ರೇಷ್ಠನಾದ ದೇವರು, (ಮಾನವನ) ಕರ್ಮಗಳನ್ನನುಸರಿಸಿ (ಕ್ರಮ) ತೆಗೆದುಕೊಳ್ಳುತ್ತಾನೆ,' ಎಂಬುದು.[89] ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ ದೇವರು ತನ್ನ ಮನಬಂದಂತೆ ನಿರಂಕುಶನಾಗಿ ವರ್ತಿಸಲಾರನಾದರೂ, ಒಳ್ಳೆಯ ಕೃತ್ಯಗಳಿಗೆ ಅವನು ಬಹುಮಾನವನ್ನು ನೀಡತಕ್ಕದ್ದು ಹಾಗೂ ಕೆಟ್ಟ ಕೃತ್ಯಗಳಿಗೆ ಶಿಕ್ಷೆಯನ್ನು ವಿಧಿಸತಕ್ಕದ್ದು. ಎಚ್. ಜೇಕೊಬಿ ಅವರು ಸೂಚಿಸುವಂತೆ, ತನ್ನನ್ನು ತಾನು ಪಾಶುಪತಾಚಾರ್ಯನೆಂದು ಕರೆದುಕೊಳ್ಳುವ ನ್ಯಾಯ ತಾರ್ಕಿಕನಾದ ಉದ್ಯೋತಕರನು (ಇಸವಿ 620) ಈ ಅಂಶವನ್ನು ಕುರಿತು 'ಶಿವದರ್ಶನ'ದ ದೃಷ್ಟಿಕೋನವನ್ನೇ ಸ್ವೀಕರಿಸುತ್ತಾನೆ.[90] ಇದರಿಂದಾಗಿ ಕಂಡುಬರುವ ಸಂಗತಿಯೆಂದರೆ ಏಳನೆಯ ಶತಮಾನದವರೆಗೆ ಅಂದರೆ ಪಾಶುಪತ ಸಂಪ್ರದಾಯದಲ್ಲಿ ಏನಿಲ್ಲೆಂದರೆ ಒಂದಾದರೂ ಮುಖ್ಯ ಸೈದ್ಧಾಂತಿಕ ಬಿರುಕು ಹುಟ್ಟಿಕೊಂಡಿತ್ತೆಂಬುದು. ಇದರಬಗೆಗೆ ಯಾವುದೇ ಬಗೆಯ ಸೋಜಿಗವೆನ್ನಿಸದಿರಲು ಕಾರಣವೆಂದರೆ ಕೌಂಡಿಣ್ಯನ ಹಾಗೂ 'ರತ್ನ ಟೀಕಾ'ದ ಮೂಲಸ್ವರೂಪದ ಅಭಿಪ್ರಾಯವು ಭಾರತೀಯ ನೈತಿಕ ಪದ್ಧತಿಗಳ ಹೃದಯವೆನ್ನಿಸಿದ ಕರ್ಮವಾದಕ್ಕೆ ಬಲವಾದ ಪೆಟ್ಟನ್ನು ಹಾಕುತ್ತದೆನ್ನುವುದು. ದೇವರು ಸ್ವತಂತ್ರನಾದ ಕಾರಣನೆಂಬ

---

87. ಸಂ. ದೇಸಾಯಿ, SII, XV, no. 73. ಸಮಗ್ರಾಗಿ ಎಚ್. ಎಸ್. ಬಿಳಿಗಿರಿಯವರಿಂದ ಅನುವಾದಿತ, ಅಲ್ಲದೆ ಮೇಲೆ ನೋಡಿ.

88. ಕೌಂಡಿಣ್ಯ, 'ಪಾಶುಪತಸೂತ್ರ'v. 47 ಮತ್ತು 'ಗಣಕಾರಿಕಾ' ಪು. 15ನ್ನು ಕುರಿತು.

89. 'ಕುರ್ಮಾದಿಸಾಪೇಕ್ಷ: ಪರಮೇಶ್ವರ: ಕಾರಣಮ್ ಇತಿ.' 'ಸರ್ವದರ್ಶನ ಸಂಗ್ರಹ', 320.

90. Die Entwicklung der Gottesidee bei den Indern, p. 53.

ಪಾಶುಪತದ ಸಿದ್ಧಾಂತವು 'ಮಾನವರ ಕೃತಿಗಳು (ಕರ್ಮ) ಯಾವುದೇ ಬಗೆಯ ಫಲಿತಾಂಶಗಳನ್ನು ಹುಟ್ಟುಹಾಕಲಾರವಲ್ಲದೆ ಎಲ್ಲ ಪರಿಣಾಮಗಳನ್ನೂ ಒಂದೇ ಕಾಲಕ್ಕೆ ಹುಟ್ಟುಹಾಕುತ್ತವೆ',[91] ಎಂದೆನ್ನುವ ಸನ್ನಿವೇಶದತ್ತ ಕೊಂಡೊಯ್ಯುತ್ತದೆ, ಎಂಬ ಆಪಾದನೆಯನ್ನು ಖಂಡಿಸಲು ಸಾಯಣ ಮಾಧವರು ಅವರಿಗೆ ಒಂದು ಅವಕಾಶವನ್ನು ಮಾಡಿಕೊಡುತ್ತಾರೆ. ಆದರೆ ಸಾಯಣ ಮಾಧವರು ಅದನ್ನು ಮುಂದಿರಿಸಿದ ಬಗೆಯಲ್ಲಿಯಂತೂ ಅದು ಒಟ್ಟಿನಲ್ಲಿ ಸುಸ್ಪಷ್ಟ ಹಾಗೂ ಮನಗಾಣಿಸುವಂತಿಲ್ಲ. ಏನಿದ್ದರೂ ಈ ಸಂಗತಿಯಿಂದಾಗಿ ಕಂಡುಬರುವುದೇನೆಂದರೆ ಉದ್ಯೋತಕರ ಹಾಗೂ ಲಕುಲೀಶರ (ಮೂಲದಲ್ಲಿದ್ದಂತೆ) ನಡುವಣ ವ್ಯತ್ಯಾಸವು ತೋರಿಕೆಗೆ ಮಾತ್ರ ಇರುವಂಥದು, ಎಂದೆನ್ನುವ ಜೆಕೋಬರೊಡನೆ (ಪು.53) ಒಪ್ಪಿಕೊಳ್ಳುವ ಮಟ್ಟಿಗಲ್ಲದಿದ್ದರೂ ಅವರು ತಮ್ಮ ಸಿದ್ಧಾಂತವನ್ನು ತುಸು ಹದಗೊಳಿಸುವ ಮಟ್ಟಿಗಾದರೂ ಈ ಒತ್ತಾಯಕ್ಕೆ ಖಂಡಿತ ಮಣಿದರೆಂದು ಕಾಣುತ್ತದೆ.

ಪಾಶುಪತ ಸಿದ್ಧಾಂತದಲ್ಲಿ ಮೋಕ್ಷವೆಂದರೆ ದುಃಖದ ಅಂತ್ಯ, (ದುಃಖಾಂತ), ಎಂದು ಕರೆಯಲಾಗಿದೆ. ಐದು ಅಧ್ಯಾಯಗಳಲ್ಲಿ ಇದು ಕೊನೆಯದು. ಯಾವುದೇ ಬಗೆಯ ಒಪ್ಪಂದಕ್ಕೆ ಸಿದ್ಧವಿರದ ಇಂತಹ ಒಂದು ದೇವತಾಶಾಸ್ತ್ರದ ಪದ್ಧತಿಯಿಂದ ನಿರೀಕ್ಷಿಸಬಹುದಾದಂತೆ, ಕೇವಲ ದೇವರ ಅನುಗ್ರಹ ಮಾತ್ರದಿಂದಲೇ ಮೋಕ್ಷವನ್ನು ಪಡೆಯಲು ಸಾಧ್ಯ. ಸೂತ್ರ v. 40 ಘೋಷಿಸುವಂತೆ : 'ಸತತವಾಗಿ ಜಾಗರೂಕನಾಗಿರುವವನೇ ದೇವರ ದಯೆಯಿಂದ ದುಃಖದಿಂದ ಬಿಡುಗಡೆಯನ್ನು ಪಡೆಯುತ್ತಾನೆ.'[92] ಹೇಗಿದ್ದರೂ ಈ ಅಂತಿಮವಾದ ಮೋಕ್ಷದ ಮೊದಲ ಹಂತದಲ್ಲಿ ನಾಲ್ಕನೆಯ ಅಧ್ಯಾಯವಾದ ಯೋಗವಿದೆ. ಕೌಂಡಿನ್ಯನು ಇದನ್ನು 'ಆತ್ಮ ಮತ್ತು ಈಶ್ವರನ ಐಕ್ಯ'ವೆಂದು[93] ಮತ್ತೆ ಮತ್ತೆ ವ್ಯಾಖ್ಯಾನಿಸುತ್ತಾನೆ. ಅದ್ವೈತ ವೇದಾಂತದಲ್ಲಿ ಇರುವಂತೆ ಆತ್ಮವು ಈಶ್ವರ ಇಲ್ಲವೆ ಬ್ರಹ್ಮನಲ್ಲಿ ಕರಗಿ ಹೋಗದೆ ಸೂತ್ರಗಳು ರುದ್ರಸಾಯುಜ್ಯ'ವೆಂದು[94] ಕರೆಯುವಂತೆ ಅದು ಬೇರ್ಪಡಿಸಲಾಗದಂತೆ ದೇವರಿಗೆ ಅಂಟಿಕೊಂಡು ಉಳಿಯುತ್ತದೆ.

ಮೋಕ್ಷವೆಂದರೆ ದುಃಖದ ಅವಸ್ಥೆಯಿಂದ ಬಿಡುಗಡೆ ಎಂದು ಹೇಳುವುದರಿಂದ ಅವಕ್ಕೊಂದು ಋಣಾತ್ಮಕವೆನ್ನಬಹುದಾದ ವಲಯ ಪ್ರಾಪ್ತವಾಗಿದೆ. ಪಾಶುಪತರು, ವೈಶೇಷಿಕರು, ನೈಯಾಯಿಕರು ಹಾಗೂ ಕಾಪಾಲಿಕರೆಲ್ಲರೂ ದುಃಖದ ಅಂತ್ಯ ಹಾಗೂ ಮೋಕ್ಷ ಇವೆರಡೂ ಒಂದೇ ಬಗೆಯವೆಂದು ಬಗೆಯುತ್ತಾರೆಂದು ಭಾಸ್ಕರಾಚಾರ್ಯನು ಸಾಧಿಸುತ್ತಾನೆ. ಅಲ್ಲದೆ, ಇಂಥ ಪರಿಸ್ಥಿತಿಯಲ್ಲಿ ಆತ್ಮಗಳು ಯಾವುದೇ ಬಗೆಯ ಉಪಾಧಿಯನ್ನು ಹೊಂದದ

---

91. ಅನು. ಹರ, IIJ, II, 31.
92. 'ಅಪ್ರಮಾದೀ ಗಚ್ಛೇದ್ ದುಃಖಾನಾಮ್ ಅಂತಂ ಈಶ ಪ್ರಸಾದಾತ್'.
93. ನೋಡಿ, ಉದಾಹರಣೆಗಾಗಿ, ಸೂತ್ರ i, 1(ಪು. 6), i. 20, ಮತ್ತು v. 2 ಇವುಗಳನ್ನು ಕುರಿತಾದ ಅವರ ಭಾಷ್ಯಗಳನ್ನು.
94. 'ಪಾಶುಪತಸೂತ್ರ,' v. 33.

ಕೇವಲ ಕಲ್ಲು ಬಂಡೆಗಳಾಗಿ ಬಿಡುತ್ತವೆ,[95] ಎಂದು ಸೇರಿಸುತ್ತಾನೆ. ಯಾಮುನಾಚಾರ್ಯರು ಹೆಚ್ಚಾಗಿ ಇದನ್ನೇ ಸಾಧಿಸಿದ್ದಾರೆ.[96] ಇದು ಯಾವ ಬಗೆಯಲ್ಲೂ ಕಾಪಾಲಿಕರಿಗಿಂತ ಪಾಶುಪತರ ಸಂದರ್ಭದಲ್ಲಿ ಹೆಚ್ಚು ನಿಜವೆಂದು ಕಾಣುವಂತಿಲ್ಲ. ಇದು ಖಂಡಿತ ಕೌಂಡಿಣ್ಯ ಇಲ್ಲವೆ 'ರತ್ನಾಟೀಕಾ'ದ ಲೇಖಕನ ದೃಷ್ಟಿಕೋನವಲ್ಲ. ತರುವಾಯದ ಒಂದು ಕೃತಿಯು ವ್ಯಕ್ತಿಗತವಲ್ಲದ ('ಅನಾತ್ಮಕ') ಹಾಗೂ ವ್ಯಕ್ತಿಗತ ('ಸಾತ್ಮಕ') ಎಂದು ಎರಡು ಬಗೆಯಾಗಿ ದುಃಖಾಂತ್ಯಗಳನ್ನು ವಿಂಗಡಿಸುತ್ತದೆ. ವ್ಯಕ್ತಿಗತವಲ್ಲದ ದುಃಖಾಂತ್ಯವು ಭಾಸ್ಕರ ಇಲ್ಲವೆ ಯಾಮುನರು ನಿರ್ದೇಶಿಸಿದ ಅವಸ್ಥೆಯನ್ನು ಹೋಲುವುದಿಲ್ಲ. ಇದರ ಮುಖ್ಯವಾದ ಲಕ್ಷಣವೆಂದರೆ ಎಲ್ಲ ಬಗೆಯ ದುಃಖಗಳನ್ನು ಬೇರುಸಹಿತ ಕಿತ್ತೆಸೆಯುವುದು. ಆದರೆ ವ್ಯಕ್ತಿಗತ ದುಃಖಾಂತ್ಯವು 'ಮಹೇಶ್ವರನ ಪ್ರಭುತ್ವದ ಸಾಮರ್ಥ್ಯದ (ಐಶ್ವರ್ಯ) ಗುಣಲಕ್ಷಣಗಳನ್ನು ಹೊಂದಿದ ಪರಿಪೂರ್ಣ ಅವಸ್ಥೆ (ಸಿದ್ಧಿ)ಯೆನ್ನಿಸಿದೆ'.[97] ಇಂಥ ಪರಿಪೂರ್ಣ ಅವಸ್ಥೆಯು, ಜ್ಞಾನ ಅಥವಾ ಗ್ರಹಿಕೆಯ ಸಾಮರ್ಥ್ಯ (ಜ್ಞಾನ ಅಥವಾ ದೃಕ್ಶಕ್ತಿ) ಹಾಗೂ ಕ್ರಿಯಾಶಕ್ತಿಯನ್ನು ಒಳಗೊಂಡಿರುತ್ತದೆ. ಇವೆರಡೂ ಕೂಡ ಹಲವಾರು ಬಗೆಯ ಅತಿಮಾನವೀಯ ಸಾಮರ್ಥ್ಯಗಳಾಗಿ ವಿಂಗಡಿಸಲಾಗಿವೆ. ಜ್ಞಾನದ ಸಾಮರ್ಥ್ಯವು ಐದು ಮಗ್ಗಲುಗಳುಳ್ಳದ್ದು. ಅಲ್ಲದೆ ಕಾಣುವ, ಕೇಳುವ, ಯೋಚಿಸುವ, ವ್ಯತ್ಯಾಸಗಳನ್ನರಿವ ಹಾಗೂ ಸರ್ವಜ್ಞತ್ವವನ್ನು ಅದು ಒಳಗೊಂಡಿರುವಂಥದು. ಕ್ರಿಯಾಶಕ್ತಿಗೆ ಮಗ್ಗಲುಗಳು ಮೂರು. ಇದು, ಮನದಷ್ಟು ಶೀಘ್ರವಾಗಿ ಕೃತಿಯನ್ನೆಸಗುವ (ಮನೋಜವಿತ್ವ), ಮನಬಂದಂತೆ ಆಕಾರಗಳನ್ನು ಧರಿಸುವ ಸಾಮರ್ಥ್ಯ (ಕಾಮರೂಪಿತ್ವ) ಹಾಗೂ ದೇಹದ ಅವಯವಗಳ ನೆರವಿಲ್ಲದೆಯೇ ಕ್ರಿಯೆಯನ್ನು ಕೈಕೊಳ್ಳುವ ಸಾಮರ್ಥ್ಯಗಳನ್ನು (ವಿಕರ್ಣಧರ್ಮಿತ್ವ) ಹೊಂದಿರುತ್ತದೆ. ಇದಲ್ಲದೆ, ವೈಯಕ್ತಿಕ ದುಃಖದಿಂದ ಮುಕ್ತವಾದ ಆತ್ಮವು ನಿರ್ಭಯತೆ, ನಿರ್ಜರತೆ, ನಿರ್ಮರಣ ಹಾಗೂ ಪ್ರಭುತ್ವ (ಪತಿತ್ವ) ಗಳನ್ನೊಳಗೊಂಡ ಹತ್ತು ವಿಶೇಷ ಗುಣ ಲಕ್ಷಣ ಇತ್ಯಾದಿಗಳನ್ನು ಗಳಿಸಿಕೊಳ್ಳುತ್ತದೆ.[98] ಸ್ವಲ್ಪದರಲ್ಲಿ ಹೇಳುವುದಾದರೆ, ಅದು ಸುಮಾರಾಗಿ ಈಶ್ವರನವೆಂದು ಹೇಳಲಾದ ಸಂಗತಿಗಳನ್ನೆಲ್ಲ ಪಡೆಯುವುದು.

❖ ❖ ❖

---

95. ಬ್ರಹ್ಮಸೂತ್ರ ಭಾಷ್ಯ ii. 2. 37.

96. ನೋಡಿ ಹಂಡಿಕಿ, ಪು. 235.

97. 'ಗಣಕಾರಿಕಾ', pp. 9-10ರಲ್ಲಿ 'ರತ್ನಟೀಕಾ'.

98. ಅದೇ. ಅಲ್ಲದೆ ನೋಡಿ, ಸಾಯಣ ಮಾಧವರ 'ನಕುಲೀಶ ಪಾಶುಪತ ದರ್ಶನ್', ಅನು. ಹರ, IIJ, 11, 19-21.

# ಪರಿಶಿಷ್ಟಗಳು

# ಪರಿಶಿಷ್ಟ - ಅ

# ಕಾಪಾಲಿಕರ ಬಗೆಗಿನ ಹೊಸ ಮಾಹಿತಿ

ಭಾರತದ ಕಾಪಾಲಿಕ ಪರ್ಯಾಯನಾಮದ ಪ್ರಾಚೀನ 'ಬೈರಾಗಿ'ಗಳನ್ನು ಎರಡು ಮಾದರಿಗಳಲ್ಲಿ ಗಮನಿಸಲು ಸಾಧ್ಯ.[1] ಮೊದಲನೆಯದಾಗಿ, ಕಾಪಾಲಿಕರ ನಂಬಿಕೆ ಹಾಗೂ ವಾಮಾಚರಣೆಗಳನ್ನು ಗಮನಿಸಿ ಕಾಪಾಲಿಕ ವಿರೋಧಿಗಳು ರಚಿಸಿದ ಆಕರ ಸಾಮಗ್ರಿಯ ಕಣ್ಣಲ್ಲಿ ಅವರೆಂದರೆ ಅದ್ವಿತೀಯ ಹಾಗೂ ಪಾಷಂಡಿತನದ ಯತಿಗಳ ಒಂದು ಮಾದರಿಯಾಗಿ ಕಾಣುವಂತಾಗಿದೆ. ಏಕೆಂದರೆ ಸಂಸ್ಕೃತ ಸಾಹಿತ್ಯದ ಕಾಪಾಲಿಕರ ಪಾತ್ರಗಳು ನರಬಲಿಯನ್ನು ಪ್ರತಿನಿಧಿಸುತ್ತವೆ, ಇಲ್ಲವೆ ಮದ್ಯಸೇವನೆಗಳ ವೇಳೆಯಲ್ಲಿ ಇಲ್ಲವೆ ಅಂದಗಾತಿಯರಾದ ಶಿಷ್ಯೆಯರನ್ನೊಡಗೂಡಿ ಕಾಲಕಳೆಯುವಲ್ಲಿ ವೈದಿಕ ಸಿದ್ಧಾಂತಗಳನ್ನು ಕೀಟಲೆಗೆ ಗುರಿಪಡಿಸುತ್ತವೆ. ಎರಡನೆಯದಾಗಿ ಬ್ರಹ್ಮನ ಒಂದು ತಲೆಯನ್ನು ಕಡಿದು ಚೆಲ್ಲಿದ ಪಾಪಕ್ಷಾಲನೆಗಾಗಿ ದೀರ್ಘಕಾಲ ತಪಸ್ಸನ್ನು ಆಚರಿಸಿದ ಶಿವಕಪಾಲಿಕನನ್ನು ಕಾಪಾಲಿಕರು ತಮ್ಮ ಮತಾಚರಣೆಯ ಒಂದು ಮಾದರಿಯನ್ನಾಗಿ ಮಾಡಿಕೊಂಡರೆಂದು ಇವೇ ಕೆಲವು ಆಕರಗಳು ಸೂಚಿಸುತ್ತವೆ. ಶಿವನ ಈ ಮಹಾವ್ರತವನ್ನು ಅನುಕರಿಸಿದ್ದರಿಂದಲೇ ಕಾಪಾಲಿಕರಿಗೆ 'ಮಹಾವ್ರತಿನ್' ರೆಂಬ ಬಿರುದು ಬಂದಿತು.

---

1. ಈ ಪರಿಶಿಷ್ಟವು ಆಲ್ಫ್ ಹಿಲ್ಟೆಬೆಯಿಟೆಲ್ (Hiltebeitel) ದಲ್ಲಿ (ಸಂ.) ಪರಿಷ್ಕರಿಸಿ ಪ್ರಕಟಿಸಿದ 'Criminal Gods and Demon Devotees : Essays on the Guardians of Popular Hinduism' (Albany : State University of New York Press, 1989) ಒಂದು ನಿಬಂಧವಾಗಿದೆ.

ಕಾಪಾಲಿಕರ ಈ ಎರಡು ಮೂಲ ಮಾದರಿಗಳ ಲಕ್ಷಣ ಅಥವಾ ಸಂಸ್ಕೃತ ವಾಙ್ಮಯದಲ್ಲಿ ಅವರನ್ನು ಕುರಿತ ಚಿತ್ರಣಗಳು ಅವರನ್ನು ರಚನಾವಾದಿ (ಸ್ಟ್ರಕ್ಚರ‍್ಯಾಲಿಸ್ಟ್) ಪ್ರತಿಮಾವಾದಿ (ಸಿಂಬಾಲಿಸಿಸ್ಟ್) ಹಾಗೂ ಮೂಲಮಾದರಿವಾದಿ (ಆರ್ಕೆಟೈಪಿಸ್ಟ್) ದೃಷ್ಟಿಕೋನಗಳಿಂದ ಆಧುನಿಕ ಪ್ರೌಢ ವಿಶ್ಲೇಷಣೆಗೆ ಸಾಧನವಾಗಿವೆ. ಈ ಬಗೆಯ ವಿಶ್ಲೇಷಣೆಯ ಉದಾಹರಣೆಗಳನ್ನು ಈ ಪುಸ್ತಕದಲ್ಲಿ ವೆಂಡಿ ಓ ಫ್ಲ್ಯಾಹರ್ಟಿ ಇವಳ 'The Origins of Evils in Hindu Mythology' ಪುಸ್ತಕದಲ್ಲಿರುವ 'ಶಿವ ಕಪಾಲಿನ್ ಮಿಥ್' ವನ್ನು ಕುರಿತಾದ ಚರ್ಚೆ ಹಾಗೂ ಎಲೆರ್ಝುಬೆತ್ ಚಾಲಿಯ ವಿಸುವಲಿಂಗಮ್ ಅವರ ಭೈರವನನ್ನು ಕುರಿತ ಎರಡು ಲೇಖನಗಳಲ್ಲಿ ಕಾಣಬಹುದು.[2]

ಇಷ್ಟರಲ್ಲಿಯೇ, ಅಲೆಕ್ಸಿಸ್ ಸ್ಯಾಂಡರ್ಸನ್ ಇವರು ಕಾಪಾಲಿಕರ ಪೂಜಾವಿಧಾನ ಹಾಗೂ ವ್ರತಾಚರಣೆಗಳನ್ನು ಬಣ್ಣಿಸುವ ಶೈವ ತಾಂತ್ರಿಕ ಪಠ್ಯಗಳ ಅಪ್ರಕಟಿತ ಒಂದು ಗ್ರಂಥ ಸಂಗ್ರಹವನ್ನು ತಾವು ಗಮನಿಸಿರುವುದಾಗಿ ಹೇಳಿದ್ದಾರೆ. ಇವುಗಳಲ್ಲಿ ಎಲ್ಲಕ್ಕೂ ಹೆಚ್ಚು ಮಹತ್ವದ ಗ್ರಂಥ 'ಜಯದ್ರಥಯಾಮಲ'. ಈ ಗ್ರಂಥದ ಕೈಬರಹದ ಪ್ರತಿಯನ್ನು ನೇಪಾಳದ ರಾಷ್ಟ್ರೀಯ ಸಂಗ್ರಹಾಲಯದಲ್ಲಿ (ನ್ಯಾಶನಲ್ ಆರ್ಕೈವ್ಸ್) ಸುರಕ್ಷಿತವಾಗಿ ಇಡಲಾಗಿದೆ. ನೇಪಾಳ - ಜರ್ಮನ್ ಕೈಬರಹಗಳ ಸಂರಕ್ಷಣೆಯನ್ನು ಕುರಿತಾದ ಜಂಟಿ ಯೋಜನೆಯಡಿ ಇವುಗಳ ಛಾಯಾಚಿತ್ರಗಳನ್ನು ತಯಾರಿಸಲಾಗಿದೆ. ಸ್ಯಾಂಡರ್ಸನ್ನರು ಈ ಸಾಮಗ್ರಿಯನ್ನು ಕುರಿತು ವಿವರಣಾತ್ಮಕ ವಿಶ್ಲೇಷಣೆಯನ್ನು ಪೂರ್ತಿಯಾಗಿ ಪ್ರಕಟಿಸಬೇಕಿದೆ. ಅವರ ಇತ್ತೀಚಿನ

---

2. ಮೇಲಿನ ಮೂರನೆಯ ಅಧ್ಯಾಯವನ್ನು ನೋಡಿ; W. O' Flaherty, 'The Origins of Evil in Hindu Mythology, (Berkeley : University of California Press, 1976): ಈ. ಪಿ. ವಿಸುವಲಿಂಗಮ್, "Bhairav : kotw ā l of V ā ran ā si", ವಿ. ಪಿ. ವರ್ಮಾ (ಸಂ.) 'V ā ran ā si Through the Ages (Varanasi : Bharatiya litihas Samkalan Samiti, 1986) p.p. 241-60 ಗಳಲ್ಲಿ ಮತ್ತು ಆಕೆಯ "Bhairava's Royal Brahmanicide: TheProblem of the Mah ā br ā hma ṇ a", in Alf Hiltebeitel, 'Criminal Gods...... ಅಲ್ಲದೆ ನೋಡಿ, H. Stietencron, "Bhairav", Zeitschrift der Deutschen Morgenlāndischer Gesellschaft, Supplement I, Teil 3 (1969), pp. 863-71; S. Kramrisch, 'The Presence of Śiva (Princeton; Princeton University Press, 1981) ; S. Gupta, D. J. Hoens and T. Goudriaan, 'Hindu Tantrism' (Leiden : E. J. Brill 1979) ; and J. Parry, "Sacrificial Death and the necrophagous ascetic", in M Bloch and J. Parry (ed.), 'Death and the Regeneration of Life' (Cambridge : Cambridge University Press, 1982) , pp. 74-110.

ಹಾಗೂ ಇಷ್ಟರಲ್ಲಿಯೇ ಪ್ರಕಟಗೊಳ್ಳಲಿರುವ ಬರಹಗಳಲ್ಲಿ ಇದನ್ನು ಕುರಿತು ಚರ್ಚಿಸಿದ್ದಾರೆ.[3] ಈ ಸಾಮಗ್ರಿಯನ್ನು ಕಾಪಾಲಿಕ ತಾಂತ್ರಿಕ ಪಂಥಗಳಾದ 'ಕೌಲ'ದಂಥವುಗಳಿಗೆ ಅನ್ವಯಿಸಬಹುದಾದಷ್ಟು ನೇರವಾಗಿ ಕಾಪಾಲಿಕರಿಗೆ ಅದೆಷ್ಟರ ಮಟ್ಟಿಗೆ ಅನ್ವಯಿಸಬಹುದೆಂಬುದು ಸ್ಪಷ್ಟವಾಗಿಲ್ಲ.[4]

ಕಾಪಾಲಿಕರನ್ನು ಕುರಿತು ಈವರೆಗೆ ಪ್ರಕಟಗೊಂಡ ಭಾರತೀಯ ಸಾಹಿತ್ಯ ಹಾಗೂ ಶಾಸನಗಳಲ್ಲಿ ದೊರೆತಿರುವ ಬಹಳಷ್ಟು ಮೂಲಸಾಮಗ್ರಿಯನ್ನು ಕುರಿತು ಈ ಪುಸ್ತಕದ ಮೊದಲ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ. ತಮಿಳು ಪಠ್ಯ, 'ಪೆರಿಯ ಪುರಾಣಮ್' ದಲ್ಲಿರುವ ಸಿರುತ್ತೊಂಡನ ಕಥೆ.[5] "ಬೈರವ"ಸಂನ್ಯಾಸಿಯೊಬ್ಬ ಸಿರುತ್ತೊಂಡನೆಂಬ ಭಕ್ತನ

---

3. Alexis Sanderson, "Purity and Power among the Brahmans of Kashmir", in M. Carrithers et al. (eds.) 'The Category of the Person (Cambridge : Cambridge University Press. 1985). pp. 120 - 216, "Maṇḍala and Āgamic Identity in the Trika of Kashmir", in 'Mantras et diagrammes rituels dans l' ;'hindouisme' (Paris : Editions du Centre National de la Recherche Scientifique, 1986), pp. 169 - 207, review of two 'ā gama' texts edited by N. R. Bhatta in 'Bulletin of the School of Oriental and African Studies, 48 (1985), pp. 564 - 68; entries on "Karma Śaivism", " Śaivism in Kasmir" and "Trika Śaivism", in M. Eliade (ed.), 'Encyclopedia of Religion (New York : Macmillan, 1987) ; and " Śaivism and the Tantric Tranditions", in Stuart Sutherland (ed), 'The World's Religions' (London : Coom Helm Press, forthcoming). ಸ್ಯಾಂಡರ್ಸನ್ನರು ನನಗೆ ಈ ಮಾಹಿತಿಯನ್ನು ಹಾಗೂ ಬಹಳಷ್ಟು ಸಾಮಗ್ರಿಗಳ ಪ್ರತಿಗಳನ್ನು ನೀಡಿ ಉಪಕರಿಸಿದರು.

   ಜಿ. ಕವಿರಾಜ ಅವರ "ತಾಂತ್ರಿಕ ಸಾಹಿತ್ಯ" (ಲಖನೌ : ಹಿಂದಿ ಸಮಿತಿ, 1972) ದ ಪುಸ್ತಕ ಪಟ್ಟಿಯಲ್ಲಿ 'ಕಾಪಾಲಿಕಮತವ್ಯವಸ್ಥಾ' ಹಾಗೂ 'ಸೋಮಸಿದ್ಧಾಂತ'ಗಳೆಂಬ ಕಾಪಾಲಿಕರವಾಗಿರಬಹುದಾದ ಎರಡು ಕೈಬರಹಗಳನ್ನು ಸೇರ್ಪಡಿಸಲಾಗಿದೆ. ಒಂದು 'ಯಾಮಲ' ಪಠ್ಯವನ್ನು ಪ್ರಕಟಿಸಲಾಗಿದೆ. 'ರುದ್ರಯಾಮಲಮ್' (ಸಂ.) ಭಾಗೀರಥ ಪ್ರಸಾದ ತ್ರಿಪಾಠೀ [ವಾರಣಾಸಿ: ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, 1980]. ಇದರಲ್ಲಿ ಶಿವ ಭೈರವ ಹಾಗೂ ದುರ್ಗಾ-ಕಾಲಿಯರ ರುದ್ರಸ್ವರೂಪಗಳನ್ನು ಕುರಿತಾದ ತಲೆಬುರುಡೆಗಳು, ಎಲುಬುಗಳು. ಖಟ್ವಾಂಗಗಳು ಹಾಗೂ ಇನ್ನೂ ಇಂಥ ಸಂಗತಿಗಳ ಬಗೆಗೆ ತುಂಬ ಸಾಮಗ್ರಿಯಿದೆಯಾದರೂ ನಾನು ಅದರಲ್ಲಿ ಕಾಪಾಲಿಕರಿಗೆ ಸಂಬಂಧಿಸಿದೇನನ್ನೂ ಕಾಣದೆ ಹೋದೆ.

4. 'ಕೌಲರ'ನ್ನು ಕುರಿತು ನೋಡಿ, ಅವರ ಸಿದ್ಧಾಂತಗಳು ಹಾಗೂ ಸಾಹಿತ್ಯವನ್ನು ಸಂಗ್ರಹಿಸಿ ಒಟ್ಟಿಗೆ ಅರ್ಥೈಸುವ ಯತ್ನವು ಮಾರ್ಕ್ ಎಸ್. ಜಿ. Dyczkowski ಅವರ 'The canon of Śaivagama and the Kubjika Tantras of the Western Kaula Tradition' (Albany : State University of New York Press, 1988) ದಲ್ಲಿ ನಡೆದಿದೆ.

5. ನೋಡಿ ಎಮ್. ಎ. ದೊರೈ ರಂಗಸ್ವಾಮಿ, 'The Religion and Phiolosophy of Tevaram'; 4 vol.in 2 (Madras : University oı Madras, 1958 - 59), p. 1018 ; ಮತ್ತು ಜಿ. ವನ್ಮಿಕನಾಥನ್ (ಅನು), 'ಪೆರಿಯ ಪುರಾಣಮ್' (Madras : ಶ್ರೀ ರಾಮಕೃಷ್ಣ ಮಠ, 1985). pp. 353 - 64.

ಮನೆಗೆ ಬಂದು ಅವನ ಮಗನ ಮಾಂಸದಿಂದ ತಯಾರಿಸಿದ ಭೋಜನವನ್ನು ತನಗೆ ಉಣಬಡಿಸೆಂದುದನ್ನು ಈ ಪುರಾಣ ಕಥೆ ಹೇಳುತ್ತದೆ. ಆ ಮಗುವಿನ ತಂದೆಯು ತನ್ನ ಮಗುವನ್ನು ಕೊಂದು ಮಗುವಿನ ತಾಯಿಯ ಕೈಲಿ ಮಾಂಸವನ್ನು ಬೇಯಹಚ್ಚುವನು. ಈ ಊಟವನ್ನು ಬಡಿಸುತ್ತಲೇ ಶಿವ ತನ್ನ ನಿಜರೂಪದಲ್ಲಿ ಪ್ರಕಟನಾಗಿ ಮಗುವನ್ನು ಮತ್ತೆ ಜೀವಂತಗೊಳಿಸುತ್ತಾನೆ. ಈ ಪಠ್ಯವು ಈ ಬೈರಾಗಿಯನ್ನು ಕಾಪಾಲಿಕನೆಂದು ಸ್ಪಷ್ಟವಾಗಿ ಕರೆಯದೆ ಹೋದರೂ, ಅವನ ಪಾತ್ರವು ಕಾಪಾಲಿಕರ ಮೂಲ ಮಾದರಿಗೆ ಸರಿಹೊಂದುವಂಥದಾಗಿದೆ.

ಎರಡನೆಯ ಕಥೆಯು 'ತಿರಿಲೋಕ ಚೋಳನ್' ಎಂಬ ಚೋಳ ನಾಡಿನ ಅರಸ ಹಾಗೂ ನೇಪಾಳದಿಂದ ಬಂದ ಕಾಪಾಲಿಕ ಬ್ರಾಹ್ಮಣರ ಒಂದು ತಂಡಕ್ಕೆ ಸಂಬಂಧಪಟ್ಟುದು. ಈ ಕಥೆಯು ಮಧ್ಯಯುಗದ ಉತ್ತರಾರ್ಧದಲ್ಲಿ 'ಪೆರೂರ್‌ಪ್ಪುರಾಣಮ್' ದಲ್ಲಿ ಕಾಣಸಿಗುತ್ತದೆ. ಡೆವಿಡ್ ಶುಲ್ಮನ್ ಇವರು ಇದನ್ನು ಅನುವಾದಿಸಿದವರು.[6] ಈ ಆಖ್ಯಾಯಿತೆಯಲ್ಲಿ ಕಾಪಾಲಿಕರು ಸ್ವೇಚ್ಛಾಪೂರ್ತಿಗಾಗಿ ಪಾಷಂಡಿಯಾಗಿ ಬಾಳುವಂತೆ ಅರಸನನ್ನು ಮನವೊಲಿಸುತ್ತಾರೆ :[7]

> "ಮಹಾರಾಜರೆ, ನಮ್ಮ ಮನೆ ನೇಪಾಳದಲ್ಲಿದೆ. ನಿಮ್ಮ ಕೀರ್ತಿ ಹಾಗೂ ನಿಮ್ಮ ನಾಡಿನ ಶ್ರೀಮಂತಿಕೆಯನ್ನು ಕೇಳಿ ಇಲ್ಲಿಗೆ ಬಂದೆವು. ನಮ್ಮ ಜ್ಞಾನ ಈ ಬಗೆಯದು : ಈ ವಿಶ್ವದಲ್ಲಿ ನಿಜವಾದ ಸುಖವೆಂದರೆ ಹೆಣ್ಣಿನೊಡನೆ ಸಂಭೋಗವನ್ನು ಮಾಡುವುದು. ದೇವನು ಈ ವಿಶ್ವವನ್ನು ನಿರ್ಮಿಸಿದನೆಂದು ಕೆಲವರು ಹೇಳುತ್ತಾರೆ. ಆದರೆ ಹೀಗೆ ಹೇಳುವ ಆ ಮುಠ್ಠಾಳರು ಇಂಥ ಒಬ್ಬ ದೇವನನ್ನು ಎಂದಾದರೂ ಕಂಡಿದ್ದಾರೆಯೆ ? ಅಮರನೆನ್ನಿಸಿದ ದೇವ ಎನ್ನುವವನೊಬ್ಬ ಅಸ್ತಿತ್ವದಲ್ಲೇ ಇಲ್ಲ. ಬರಿ ದೇಹವೊಂದೇ ತಾಳಿಕೆಗೆ ಬರುವಂಥದು ಹಾಗೂ ನಿಜವಾದುದು. ಈ ವಿಶ್ವವು ಸೃಜನಗೊಳ್ಳುವುದಾಗಲಿ, ಅಭಿವೃದ್ಧಿ ಹೊಂದುವುದಾಗಲಿ ಸಂಭೋಗದ ಮೂಲಕ. ಇಲ್ಲಿರುವ ಎಲ್ಲಕ್ಕೂ ಅತ್ಯುತ್ತಮ ಸಂಗತಿಯೆಂದರೆ ಸಂಭೋಗ. ಮದ್ಯ ಸೇವನೆಯಿಂದ ಅದನ್ನು ಹೆಚ್ಚಿಸಲು ಸಾಧ್ಯ. ಹೀಗಾಗಿ ಮಹಾರಾಜರೇ, ಮೋಕ್ಷವನ್ನು ಕುರಿತಾದ ಮಾತುಗಳನ್ನೆಲ್ಲ ಕಿತ್ತೆಸೆದುಬಿಡಿ!"

---

6. 'ಪೆರೂರ್‌ಪ್ಪುರಾಣಮ್' 30. 1-33. ಡೆವಿಡ್ ಡೀನ್ ಶುಲ್ಮನ್, 'The King and the clown in South Indian Myth and Poetry' (Princeton : Princeton, University Press, 1985).
7. ಶುಲ್ಮನ್‌ರಿಂದ ಅನುವಾದಿತ, The King.... pp. 305 - 06.

ಅರಸನು ಅವರ ಮಾತನ್ನು ಒಪ್ಪಿಕೊಂಡು "ವೈದಿಕ ಮಾರ್ಗ' ವನ್ನು ತ್ಯಜಿಸುತ್ತಾನೆ. ಇದರ ಪರಿಣಾಮವಾಗಿ ಅವನ ರಾಜ್ಯವು ಸರ್ವನಾಶದ ಅಪಾಯಗಳಿಗೆ ತುತ್ತಾಗಿ ಬಿಡುತ್ತದೆ. ಮುಂದೆ, ಅವನಿಗೆ ಬುದ್ಧಿ ಹೇಳಲೆಂದು ಬ್ರಹ್ಮನು ನಾರದನನ್ನು ಕಳಿಸುತ್ತಾನೆ. ಹೀಗಾಗುತ್ತಲೇ ಕಾಪಾಲಿಕರು ಆ ನಾಡಿನಿಂದ ಕಾಲು ಕೀಳುತ್ತಾರೆ.

ಈ ಪರ್ವವು ಮುಂದಿನ ಕಾಲದ್ದು ಎಂದುಕೊಂಡರೆ ಕಾಪಾಲಿಕರ ಭಾಷಣವು ಪಾಷಂಡಿವಾದದ ವಿರುದ್ಧ ಒಂದೇ ಪಡಿಯಚ್ಚಿನ ವಾದಕ್ಕಿಂತಲೂ ಹೆಚ್ಚೇನೂ ಆಗಿರುವ ಸಾಧ್ಯತೆಯಿಲ್ಲ. ಅವರನ್ನು ಭೌತಿಕವಾದಿಗಳು ಹಾಗೂ ಪಾಷಂಡಿಗಳೆಂದು ಚಿತ್ರಿಸಲಾಗುವುದೆಂದರೆ ಈ ಲೇಖಕನು ಐತಿಹಾಸಿಕ ಕಾಪಾಲಿಕರ ನಿಜವಾದ ಮತಾಚರಣೆಗಳನ್ನು ಕುರಿತು ಅಷ್ಟಾಗಿ ತಿಳಿದವನಲ್ಲ ಎಂಬುದನ್ನು ಸೂಚಿಸುತ್ತದೆ. ಬದಲು, ಅವರನ್ನು ಬ್ರಾಹ್ಮಣರೆಂದು ಹಾಗೂ ನೇಪಾಳದಿಂದ ಬಂದವರೆಂದು ಗುರುತಿಸುವುದು ಗಮನಾರ್ಹವಾದ ವಾಸ್ತವ ಸಂಗತಿಯೆನ್ನಿಸಿದರೂ ಈ ವೇಳೆಗೆಂದರೆ ನೇಪಾಳವು ಉಗ್ರವಾದ ತಾಂತ್ರಿಕ ಮತಗಳ ಭದ್ರವಾದ ನೆಲೆಯೆನ್ನಿಸಿತ್ತು. ಇಷ್ಟೇ ಅಲ್ಲದೆ, ಅಸಾಂಪ್ರದಾಯಿಕವಾದ ಈ ಧಾರ್ಮಿಕ ಪ್ರವಾಹವು ಯಹೂದಿ, ಕ್ರಿಸ್ತೀಯರ ಗೂಢ ಮತಗಳಂತಹ - ಕೆಳವರ್ಗಗಳ ಜನಪ್ರಿಯವಾದ ಒಂದು ಚಳುವಳಿಗಿಂತ ಸಮಾಜದ ಗಣ್ಯರ ಗುಂಪುಗಳಿಂದ ನಿಯಂತ್ರಿತವಾಗಿರುವ ಸಾಧ್ಯತೆ ಹೆಚ್ಚು.

ಕಾಪಾಲಿಕರನ್ನು ಕುರಿತಾದ ಇನ್ನೊಂದು ಕುತೂಹಲಕರ ಆದರೆ ಈ ಮೊದಲು ಗಮನಕ್ಕೆ ಬಾರದಿದ್ದ ಒಂದು ಸಂದರ್ಭವೆಂದರೆ ಹೆಸರಾದ ' ನಾಥ ಸಂಪ್ರದಾಯ' ದ ಗ್ರಂಥವಾದ ಸ್ವಾತ್ಮಾರಾಮನ ' ಹಠಯೋಗ ಪ್ರದೀಪಿಕಾ' ಎನ್ನುವುದು.[8] ಸ್ವಾತ್ಮಾರಾಮನು 'ಅಮರೋಲಿ ಮುದ್ರೆ'ಯನ್ನು ತಾನು ' ಕಾಪಾಲಿಕರ ಖಂಡ ಸಿದ್ಧಾಂತವನ್ನನುಸರಿಸಿ ಬಣ್ಣಿಸಿರುವುದಾಗಿ ಸಾರುತ್ತಾನೆ. ' ಅಮರೋಲಿ ಮುದ್ರೆ'ಯೆಂದರೆ ಹೆಸರಾದ 'ವಜ್ರೋಲಿ ಮುದ್ರೆ'ಯ ವ್ಯತ್ಯಾಸಗೊಂಡ ಒಂದು ರೂಪ. ವಜ್ರೋಲಿ ಮುದ್ರೆಯು ಒಂದು ಲೈಂಗಿಕ ಯೋಗಮುದ್ರೆಯಾಗಿದ್ದು, ಅದರಲ್ಲಿ ಪಳಗಿದವನು ಸಂಭೋಗದ ಕಾಲಕ್ಕೆ ತಾನು ಉತ್ಸರ್ಜಿಸಿದ ವೀರ್ಯವನ್ನು ಮತ್ತೆ ಹಿಂದಕ್ಕೆ ಹೀರಿಕೊಳ್ಳುವನು.

ಮಿನೊರು ಹರ ಹಾಗೂ ಎ. ಸಿ. ಬರ್ಥಕುರಿಯ[9] ಅವರು ಈ ಮೊದಲು

---

8. ಸ್ವಾತ್ಮಾರಾಮ, 'ಹಠಯೋಗಪ್ರದೀಪಿಕಾ' Madras : The Adyar Library, 1972). ಪದ್ಯ, 3. 96.

9. ಎಮ್. ಹರ, ಡಿ. ಲಾರೆಂಜೆನ್ನರ 'The Kāpālikas and Kālāmukhas'ದ ವಿಮರ್ಶೆಯಲ್ಲಿ 'Indo - Iranian Journal' 17(1975), pp. 253 - 61 ; ಎ. ಸಿ. ಬರ್ಥಕುರಿಯ, The Kapalikas : A Critical Study of the Religion, Philosophy and Literature of a Tantric Sect' (Calcutta : Sanskrit Pustak, 1984)

ಗಮನಕ್ಕೆ ಬಾರದ ಕಾಪಾಲಿಕರ ಬಗೆಗಿನ ಪ್ರಕಟಗೊಂಡ ಸಂಸ್ಕೃತ ಆಕರಗಳನ್ನು ಗುರುತಿಸಿ ಅವುಗಳನ್ನು ಕುರಿತು ಚರ್ಚಿಸಿರುವರು. ದುರ್ದೈವದ ಸಂಗತಿಯೆಂದರೆ ಕಾಪಾಲಿಕರ ನಂಬಿಕೆ, ಹಾಗೂ ಮತಾಚರಣೆಗಳನ್ನು ಕುರಿತು ಅವರು ನಮ್ಮ ಅರಿವಿಗೆ ಹೆಚ್ಚೇನನ್ನೂ ಸೇರ್ಪಡಿಸಲು ಸಾಧ್ಯವಾಗಿಲ್ಲ.

ಇತ್ತೀಚೆಗಷ್ಟೆ, ಬನಾರಸ ಹಿಂದೂ ವಿಶ್ವವಿದ್ಯಾಲಯದ ನಾಗೇಂದ್ರನಾಥ ಉಪಾಧ್ಯಾಯರು 'ಬೌದ್ಧ ಕಾಪಾಲಿಕ ಸಾಧನಾ ಔರ ಸಾಹಿತ್ಯ' ಎಂಬ ಒಂದು ಹಿಂದೀ ಪ್ರಬಂಧವನ್ನು ಪ್ರಕಟಿಸಿರುವರು. ಅವರು ಬೌದ್ಧ ಕಾಪಾಲಿಕವೆಂದು ಕರೆಯುವ ಒಂದು ಸಂಪ್ರದಾಯದ ನಂಬಿಕೆ ಹಾಗೂ ಮತಾಚರಣೆಗಳನ್ನು ಕುರಿತು ಚರ್ಚಿಸುತ್ತಾರೆ.[10] ಅವರು ಬೌದ್ಧ ತಾಂತ್ರಿಕತೆಯನ್ನು ಕುರಿತು ಒಂದು ಉಪಯುಕ್ತವಾದ ಅಧ್ಯಯನವನ್ನು ಕೈಕೊಂಡಿದ್ದುದು ನಿಜ. ಈ ಬೌದ್ಧ ತಾಂತ್ರಿಕ ಸಂಪ್ರದಾಯಗಳು ಆರಂಭದಲ್ಲಿ ಕಾಪಾಲಿಕರಿಂದ ತುಂಬ ಪ್ರಾಭಾವಿತವಾಗಿದ್ದವು. ಏನಿದ್ದರೂ ಮೊದಲ ಕಾಪಾಲಿಕರು ಶೈವರಾಗಿದ್ದರೇ ಹೊರತು ಬೌದ್ಧರಲ್ಲ, ಎಂಬುದು ಸ್ಪಷ್ಟ. ಕೃಷ್ಣಾಚಾರ್ಯಪಾದನು ತನ್ನ ಚರ್ಯಾಪದಗಳಲ್ಲಿ ತನ್ನನ್ನೇ ಕಾಪಾಲಿಕನೆನೆಂದು ಹೇಳಿಕೊಳ್ಳುವ ರೂಪಕ ಅಲಂಕಾರವನ್ನು ಮತ್ತು[11] ಬೌದ್ಧರಂತೆಯೇ ನಾಥರೊಂದಿಗೂ ಸಂಬಂಧಪಟ್ಟ ಸಂಪ್ರದಾಯದ ಸಂದರ್ಭಗಳನ್ನು ಬಿಟ್ಟರೆ, ಉಪಾಧ್ಯಾಯರು ಬೌದ್ಧರನ್ನು ಕಾಪಾಲಿಕರೆಂದು ಗುರುತಿಸುವ ತಮ್ಮ ಅಧ್ಯಯನದ ಸಮರ್ಥನೆಗಾಗಿ ಸಾಕಷ್ಟು ಪುರಾವೆಗಳನ್ನು ನೀಡಿಲ್ಲವೆಂದೇ ನನ್ನ ಭಾವನೆ. ಇದಕ್ಕೆ ಬದಲಾಗಿ, ಬೌದ್ಧಮತದ 'ಯೋಗಿನಿ ತಂತ್ರ' ಸಂಪ್ರದಾಯದ ಅಪ್ರಕಟಿತ ಕೈಬರಹಗಳ ಸಂದರ್ಭದಲ್ಲಿ ಕೆಲಸವನ್ನು ಕೈಗೊಂಡಿರುವ ಎಲೆಕ್ಸಿ ಸ್ಯಾಂಡರ್ಸನ್ ಈಕೆಯು ಈ ಸಂಪ್ರದಾಯವನ್ನು "ಶೈವ ಕಾಪಾಲಿಕರ ಪರಿವರ್ತಿತ ರೂಪ" ಎಂದು ಪರಿಗಣಿಸಬೇಕೆಂದು ಹೇಳುತ್ತಾರೆ.[12]

ಕಾಪಾಲಿಕರು ಒಂದು ವಿಶಿಷ್ಟವಾದ "ಪಂಗಡ" ದ ಸದಸ್ಯರಾಗಿರದೆ ಅವರು ಬೇರೆ ಬೇರೆ ತಾಂತ್ರಿಕ ತಂಡಗಳಿಗೆ ಹೊಸದಾಗಿ ಸೇರಿಕೊಂಡವರು ಹಾಗೂ ಕೇವಲ ಕಾಪಾಲಿಕ "ವ್ರತ"ವನ್ನು ಪಾಲಿಸುವವರು ಮಾತ್ರರಾಗಿದ್ದರೆಂದು ಮಾರ್ಕ್ ಡೈಝುಕೋವಸ್ಕಿಯವರು (Mark Dyezkowski) ನನಗೆ ಸೂಚಿಸಿರುವರು. ಈ ಅಭಿಪ್ರಾಯವು ತೋರಿಕೆಗೆ ಸರಿಯೆಂದು ಕಂಡರೂ ಹಲವಾರು ಶೈವ ಸಂಪ್ರದಾಯಗಳಲ್ಲಿ ಕಾಪಾಲಿಕರದೂ ಒಂದು ಸಂಪ್ರದಾಯವೆಂಬ ಬಗೆಗಿನ ಹಲವು ಸಂದರ್ಭಗಳನ್ನು ಹಾಗೂ ಅವರ 'ಸೋಮ ಸಿದ್ಧಾಂತ'

---

10. ಎನ್. ಎನ್. ಉಪಾಧ್ಯಾಯ, 'Bauddha Kāpālika Sādhanā aur Sāhitya' (Allahabad : Smriti Prakāsan, 1983)

11. ಮೇಲೆ ನೋಡಿ, pp. 69-71 ; ಮತ್ತು ಿ. ಕ್ಯಾವೆರ್ನ್ಸ, 'An Anthology of Buddhist Tantric Songs', (2nd ed. ; Bankok ; White Orchid Press, 1986) pp. 37, 113 - 22. 150 - 55.

12. ಓಲೆ. ದಿ. 16 ಜನೆವರಿ, 1987.

ದ ವಿಶೇಷವಾದ ಸಿದ್ಧಾಂತವನ್ನು ವಿವರಿಸುವಲ್ಲಿ ಅದು ಸೋಲನ್ನನುಭವಿಸುತ್ತದೆ. ಇದಲ್ಲದೆ, ಯಾರೇ ಆದರೂ, ಈಗಲೂ ಕೂಡ ಅವರನ್ನು ಶಾಸನಗಳ ಪುರಾವೆಯಿಂದ ಐತಿಹಾಸಿಕ ಕಾಲ ಹಾಗೂ ಸ್ಥಳಗಳಲ್ಲಿ ಕಂಡು ಹಿಡಿಯತಕ್ಕದ್ದು.

ಈ ಪುಸ್ತಕದ ಮೊದಲ ಮುದ್ರಣದಲ್ಲಿ ಕಾಪಾಲಿಕ ಯತಿಗಳಾಗಿರಬಹುದಾದ (ಮೇಲಕ್ಕೆ ಪು. 27-28) ವ್ಯಕ್ತಿಗಳನ್ನು ಕುರಿತು ದಾಖಲಿಸುವ ಎರಡೇ ಎರಡು ಶಾಸನಗಳನ್ನು ಗುರುತಿಸಲು ನನ್ನಿಂದ ಸಾಧ್ಯವಾಗಿತ್ತು. ಇವೆರಡೂ ಪಶ್ಚಿಮ ಭಾರತದವಾಗಿವೆ. ನಾಸಿಕ ಜಿಲ್ಲೆಯ ಇಗತಪುರಿಯಲ್ಲಿ ದೊರೆತ ಒಂದು ತಾಮ್ರಪಟದ ದತ್ತಿಯು ಕಾಪಾಲೇಶ್ವರನ ದೇವಾಲಯದಲ್ಲಿ 'ಗುಗ್ಗುಳ ಪೂಜೆ'ಗಾಗಿ ಹಣವನ್ನು ಒದಗಿಸಲೆಂದು ಒಂದು ಗ್ರಾಮವನ್ನು ದಾನವಾಗಿ ನೀಡಲಾದುದನ್ನು ಉಲ್ಲೇಖಿಸುತ್ತದೆ. ಈ ದತ್ತಿಯನ್ನು ಸ್ವೀಕರಿಸುವವರೆಂದರೆ ದೇವಾಲಯದಲ್ಲಿ ನೆಲೆಸಿದ್ದ ಮಹಾವ್ರತಿನ್ ಯತಿಗಳಾಗಿದ್ದರು. ಏಳನೆಯ ಶತಮಾನದ ಮಧ್ಯಕಾಲೀನ ಚಾಲುಕ್ಯ ಅರಸನಾದ ನಾಗವರ್ಧನನು ಈ ದತ್ತಿಯನ್ನು ನೀಡಿದ್ದಾನೆ. ಬರೋಡಾ ಜಿಲ್ಲೆಯ ತಿಲಕವಾಡಾ ಬಳಿ ದೊರೆತ ಕ್ರಿಸ್ತ ಶಕದ ಇನ್ನೊಂದು ತಾಮ್ರ ಶಾಸನವು ಒಂದು ದತ್ತಿಯನ್ನು "ದೇಹರೂಪಿಯಾದ ಕಪಾಲಿನ್ ಶಂಕರ ಎನ್ನಿಸಿದ ಒಬ್ಬ ಮಹಾವ್ರತಿನ್ ಮುನಿ ದಿನಕರನಿಗೆ" ನೀಡಲಾದುದ್ದನ್ನು ದಾಖಲಿಸಿದೆ. ಪರಮಾರ ರಾಜನಾದ ಭೋಜನ ಒಬ್ಬ ಮಾಂಡಲಿಕ ಇಲ್ಲವೆ ಅಧಿಕಾರಿಯು ಇದರ ದಾನಿಯಾಗಿದ್ದಾನೆ. ಸಮಕಾಲೀನನಾದ ಕಾಪಾಲಿಕ ಯತಿಯನ್ನು (ಇಲ್ಲಿ ಸೋಮಸಿದ್ಧಾಂತಿನ್ ಎಂದೆನ್ನಲಾಗಿದೆ) ಕುರಿತು ಈ ಮೊದಲಿಗೆ ಗುರುತಿಸಲಾದ ಸಂದರ್ಭವು ತಮಿಳು ನಾಡಿನ ಇಂದಿನ ಚಿಂಗಲ್ಪೇಟೆ ಜಿಲ್ಲೆಯ 'ತಿರುವೊರ್ರಿಯೂರ ಮಠದ ಕ್ರಿ.ಶ.೧೧೭೧-೭೨ರ ಶಾಸನದಲ್ಲಿ ದೊರೆತಿದೆಯಾದರೂ ಈ ದಾಖಲೆಯಲ್ಲಿ ಪ್ರತ್ಯಕ್ಷದಲ್ಲಿ ದಾನವನ್ನು ಸ್ವೀಕರಿಸಿದವನಾದ ಚತುರಾನನಪಂಡಿತ ಎನ್ನುವವನು ನಿಜವಾಗಿಯೂ ಒಬ್ಬ ಕಾಪಾಲಿಕನಾಗಿದ್ದನೇ ಹೇಗೆಂಬುದು ಸ್ಪಷ್ಟವಿಲ್ಲ (ಮೇಲಿನ ಪುಟ. 83).

ಇತ್ತೀಚಿನ ವರ್ಷಗಳಲ್ಲಿ ಇನ್ನೆರಡು ಶಾಸನಗಳನ್ನು ಸಂಪಾದನೆಗೆ ಒಳಪಡಿಸಿ, ಪ್ರಕಟಿಸಲಾಗಿದೆ. ಇವೆಂದರೆ ಕಾಪಾಲಿಕ ಯತಿಗಳು ಕಾಪಾಲಿಕ ಯತಿಗಳಿಗೆ ನೀಡಿದ ದತ್ತಿಗಳೆನ್ನಬಹುದು. ಇವುಗಳ ಸಂಪಾದಕರು ಮಾತ್ರ ಈ ಸಂಗತಿಯನ್ನು ಗುರುತಿಸಿಲ್ಲ. ಇದಕ್ಕೂ ಹೆಚ್ಚು ಮಹತ್ವದ ಒಂದು ಶಾಸನವು ಆಂಧ್ರ ಪ್ರದೇಶದ ನಲಗೊಂಡಾ ಜಿಲ್ಲೆಯ ಪುರಾತನ ಕೊಲ್ಲಪಾಕೆ ಎನ್ನಿಸಿದ ಕೊಲನುಪಾಕ ಎಂಬ ಊರಲ್ಲಿ ದೊರೆತಿದೆ.[13] ಇದನ್ನು ತುಂಬ ಸಂಸ್ಕೃತದಿಂದ ಕೂಡಿದ ಕನ್ನಡ ಗದ್ಯದಲ್ಲಿ ಬರೆಯಲಾಗಿದೆ. ಇದರಲ್ಲಿ ನಮೂದಿಸಲಾದ ತೇದಿಯು ಶಕೆ 973 (ಕ್ರಿ.ಶ.1050) ಆಗಿದ್ದು, ಅದು ಚಾಲುಕ್ಯ ಅರಸ

13. ಪಿ. ವಿ. ಪರಬ್ರಹ್ಮಶಾಸ್ತ್ರಿ, 'Select Epigraphs of Andhra Pradesh (Hyderabad : Government of Andhra Pradesh, 1965), pp. 7-10.

(ಕಲ್ಯಾಣ ಚಾಲುಕ್ಯ) ತ್ರೈಲೋಕ್ಯ ಮಲ್ಲನ (ಒಂದನೆಯ ಸೋಮೇಶ್ವರ) ಕಾಲದ್ದಾಗಿದೆ. ಅದು, ಸೋಮಿಭಟ್ಟಾರಕನೆಂಬ ಬ್ರಾಹ್ಮಣನಿಂದ (ವಿಪ್ರ) ಗಂಗಮರಾಜನ ಸೇವಕನಾದ ಚಂಡಮಯ್ಯ ಎನ್ನುವವನಿಗೆ ನೀಡಿದ ಭೂದತ್ತಿಯನ್ನು ದಾಖಲಿಸುತ್ತದೆ. ಈ ಸೋಮಿ ಭಟ್ಟಾರಕನು ಕೊಲ್ಲಿಪಾಕೆಯ ಶಂಕರೇಶ್ವರ (ಶಿವ) ದೇವಾಲಯದ ಪ್ರಮುಖ (ಸ್ಥಾನಾಧಿಪತಿ)ನಾಗಿದ್ದನು, ಎಂದೆನ್ನಲಾಗಿದೆ.

ಈ ಶಾಸನಗಳು ಮೊದಲ ಬಾರಿಗೆ, ಕಾಪಾಲಿಕ ಯತಿಯೊಬ್ಬನ ಒಂದು ಶಬ್ದ ಚಿತ್ರವನ್ನು ಈ ಯತಿಗಳ ಬಗೆಗೆ ಸಹಾನುಭೂತಿಯನ್ನು ಹೊಂದಿದ ಆಕರವೊಂದರಿಂದ ನೀಡುತ್ತವೆ. ಸರಿಯಾಗಿ, ಪೂರ್ತಿ ಅರ್ಥವಾಗದ ಕೆಲವು ಪದಗಳ ತರುವಾಯ ಈ ಶಾಸನವು ಸೋಮಿಭಟ್ಟಾರಕನನ್ನು ಕುರಿತು, "ಕಮಲಮುಖದಿಂದ (ಶಿವನ) ಪ್ರಕಟಗೊಂಡ ಸೋಮಸಿದ್ಧಾಂತದ ಅರ್ಥಕ್ಕೆ ಸಮರ್ಪಿಸಿಕೊಂಡವನು" ಎಂದು ನಮೂದಿಸುತ್ತದೆ. ಸೋಮಿಭಟ್ಟಾರಕನನ್ನು "ಭಸ್ಮವನ್ನು ಬಳಿದುಕೊಂಡವನು, ಆರು ಮುದ್ರೆಗಳಿಂದ ಅಲಂಕೃತನು ಹಾಗೂ ಖಟ್ವಾಂಗವೆಂಬ ದೊಣ್ಣೆ, ತಲೆಬುರುಡೆ (ಕಪಾಲ), ಡಮರುಗ, ಮೃದಂಗ ಹಾಗೂ ಒಂದು ಕಾಹಲ (= ಕಹಳೆ) ವನ್ನು ಹಿಡಿದುಕೊಂಡವನು " ಎಂದೆನ್ನಲಾಗಿದೆ. ಮುಂದಕ್ಕೆ, "ವೈಭವಪೂರ್ಣನಾದ ಶ್ರೀನಾಥನ (ದೇವರ) ಪಾದಕಮಲಗಳ (ಸುತ್ತ ಗುಂಯ್ಗುಡುತ್ತ ಹಾರಾಡುವ ) ತುಂಬಿ" ಎಂದು ಅವನನ್ನು ಕುರಿತು ಹೇಳಲಾಗಿದೆ. ಕೊನೆಯಲ್ಲಿ "ಔದಾರ್ಯದ ಮಹಾಸಾಗರ, ಸತ್ಯ ಮತ್ತು ಯತಿತ್ವಗಳ ಬೊಕ್ಕಸನಾದ ಮಹಾವ್ರತಿನ್"ಎಂದೆನ್ನಲಾಗಿದೆ.[14]

ಸೋಮಿಭಟ್ಟಾರಕನನ್ನು ಕುರಿತಾದ ಬಣ್ಣನೆ ಎಲ್ಲಕ್ಕಿಂತಲೂ ಹೆಚ್ಚಿನ ಕುತೂಹಲದ ಮುಖಗಳೆಂದರೆ ಸೋಮ ಸಿದ್ಧಾಂತದ ಬಗೆಗಿನ ಅವನ ಭಕ್ತಿ ಹಾಗೂ ಆರು ಮುದ್ರೆಗಳು. ಖಟ್ವಾಂಗ, ಹಾಗೂ ತಲೆಬುರುಡೆಗಳ ಉಲ್ಲೇಖ. ಕಾಪಾಲಿಕರನ್ನು ಕುರಿತಾದ, ಹೊಸ, ಹಾಗೂ ಎರಡನೆಯ ಶಾಸನದ ಒಳ ವಿಷಯಗಳನ್ನು ಕುರಿತು ಪರಿಶೀಲಿಸಿದ ತರುವಾಯ 'ಸೋಮಸಿದ್ಧಾಂತ'ವನ್ನು ಇನ್ನಷ್ಟು ಚೆನ್ನಾಗಿ ಚರ್ಚೆಗೆ ಒಳಪಡಿಸಬಹುದಾಗಿದೆ. ಆರು ಮುದ್ರೆಗಳು, ಖಟ್ವಾಂಗ ದೊಣ್ಣೆ ಹಾಗೂ ತಲೆಬುರುಡೆಗಳ ಉಲ್ಲೇಖವು ಸೋಮಿಭಟ್ಟಾರಕನ ಸಮಕಾಲೀನರಾದ ಯಾಮುನಾಚಾರ್ಯ ಹಾಗೂ ರಾಮಾನುಜರ ಹೇಳಿಕೆಗಳ ಬಗೆಗೆ ಮಹತ್ವದ ಹಾಗೂ ಬೆರಗುಂಟು ಮಾಡುವಂತಹ ಖಚಿತತೆಯನ್ನು ಒದಗಿಸುತ್ತದೆ.

---

14. ಮುಖಕಮಲವಿನಿರ್ಗ್ಗತ ಸೋಮಸಿದ್ಧಾಂತಾಭಿಪ್ರಾಯ ಪರಾಯಣಾಮ್ [*=ಭ] ಸ್ಮೋಧೂಲಿತಷ [*=ಣ್ಮುದ್ರಾ] [*=ದ್ರಾ]ಲಂಕೃತ ಖಟ್ವಾಂಗ ಕಪಾಲ ಡಮರುಗ ಮೃದಂಗ ಕಾಹಲಮ್ ಶ್ರೀ ಶ್ರೀನಾಥಪಾದಪಂಕಜಭ್ರಮರಮಹಾವ್ರತೀದಾನಾಂಬುರಾಸಿಸತ್ಯತಪೋನಿಧಿ _ .... ಇಲ್ಲಿಯ ನಕ್ಷತ್ರ ಚಿಹ್ನೆಗಳು, ತಿದ್ದುಪಡಿ ಹಾಗೂ ಅನುವಾದ ನನ್ನವೇ ಆಗಿವೆ.

ಯಾಮುನಾಚಾರ್ಯರು ತಮ್ಮ 'ಆಗಮ ಪ್ರಾಮಾಣ್ಯ'ದಲ್ಲಿ ಕಾಪಾಲಿಕರು ಒತ್ತು ನೀಡುವ ಈ ಸಂಗತಿಗಳ ಬಗೆಗೆ ಹೀಗೆನ್ನುತ್ತಾರೆ:[15]

> ಆರು ಮುದ್ರೆಗಳ (ಮುದ್ರಾ ಷಟ್ಕ) ಅರಿವು ಹಾಗೂ ಅವುಗಳನ್ನು ಧರಿಸುವ ಮೂಲಕ ಮೋಕ್ಷಫಲವನ್ನು (ಅಪವರ್ಗ) ಪಡೆಯಲು ಸಾಧ್ಯ; ಬ್ರಹ್ಮನನ್ನು ಅರಿತು ಅಲ್ಲ. ಆರು ಮುದ್ರೆಗಳ ತಿರುಳನ್ನು ಬಲ್ಲವನು, ಎಲ್ಲಕ್ಕೂ ಉಚ್ಚತಮವಾದ ಮುದ್ರೆಯಲ್ಲಿ ಪಳಗಿದವನು, ತಾನು ಯೋನಿಮುಖದಲ್ಲಿ (ಭಗಾಸನಸ್ಥ) ಕುಳಿತಂತೆ ತನ್ನನ್ನೇ ಕುರಿತು ಧ್ಯಾನಧಾರಣೆಯನ್ನು ಮಾಡುವವನು ಮಾತ್ರ ನಿರ್ವಾಣವನ್ನು ಹೊಂದುವನು. (ಕಾಪಾಲಿಕರು)ಈ ಆರು ಮುದ್ರೆಗಳನ್ನು ಕರ್ಣಿಕಾ(ಕಿವಿಯೋಲೆಗಳು), ರುಚಕ (ಕೊರಳ ಸರ),ಕುಂಡಲ (ಕಿವಿಯುಂಗುರ),ಶಿಖಾಮಣಿ(ಚಂಡಿಕೆಯ ಮೇಲಿನ ವಜ್ರಮಣಿ), ಭಸ್ಮ ಹಾಗೂ ಪವಿತ್ರದಾರ (ಯಜ್ಞೋಪವೀತ) ಎಂದು ವ್ಯಾಖ್ಯಾನಿಸುತ್ತಾರೆ. ತಲೆಬುರುಡೆ (ಕಪಾಲ)ಹಾಗೂ ಖಟ್ವಾಂಗದ ದೊಣ್ಣೆಗಳನ್ನು ಗೌಣ ಮುದ್ರೆಗಳೆಂದು (ಉಪಮುದ್ರಾ)ಘೋಷಿಸಲಾಗಿದೆ. ಇಂಥ (ಬಗೆ ಬಗೆಯ) ಮುದ್ರೆಗಳನ್ನು ಧರಿಸುವ ದೇಹವು ಮತ್ತೆ (ಈ ಭೂಮಿಯ ಮೇಲೆ) ಹುಟ್ಟಿ ಬರುವುದಿಲ್ಲ.

ಸೋಮಿಭಟ್ಟಾರಕನ ಶಾಸನದಲ್ಲಿ "ಆರು ಮುದ್ರೆಗಳು"('ಷಣ್ಮುದ್ರಾ')ಎಂಬ ಪದವು ಪೂರ್ತಿ ಸ್ಪಷ್ಟವಾಗಿಲ್ಲ. ಆದರೆ ಯಾಮುನಾಚಾರ್ಯರ ಪಠ್ಯದೊಂದಿಗಿನ ಹೋಲಿಕೆಯು ಅದನ್ನು ಸ್ಪಷ್ಟಪಡಿಸುತ್ತದೆ. ತಲೆಬುರುಡೆ ಹಾಗೂ ಖಟ್ವಾಂಗಗಳು ಇವೆರಡೂ ಪಠ್ಯಗಳಲ್ಲಿ ಆ ತರುವಾಯದಲ್ಲಿ ಕಾಣಿಸಿಕೊಳ್ಳುತ್ತವೆ. ಡಮರು ಹಾಗೂ ಇತರ ತಾಲ ವಾದ್ಯ ಹಾಗೂ ಸಂಗೀತ ವಾದ್ಯಗಳು ಶೈವಯತಿಗಳ ಸಂದರ್ಭದಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವವಾದರೂ ಅವು ಕಾಪಾಲಿಕರ ವಿಶೇಷವಾದ ಕುರುಹುಗಳೇನೂ ಆದಂತಿಲ್ಲ. ಸುಮಾರಾಗಿ ಶೈವಯತಿಗಳೆಲ್ಲರೂ ಭಸ್ಮವನ್ನು ಬಳಿದುಕೊಳ್ಳುತ್ತಾರೆ.

---

15. ಯಾಮುನಾಚಾರ್ಯ, 'ಆಗಮ ಪ್ರಾಮಾಣ್ಯ', 'ಸಂ' J.A.B. Buitenen (Madras : Ramanuja Research Society, 1971). ಪು 43, ಸಾಲುಗಳು 7-16, ಅನುವಾದ ನನ್ನದು. ರಾಮಾನುಜರು ಮೊದಲನೇ ಹಾಗೂ ಕೊನೆಯ ಪದವನ್ನುಳಿದು ಉಳಿದವುಗಳನ್ನು ಮತ್ತೆ ಮತ್ತೆ ಬರೆಯುತ್ತಾರೆ. (ಮೇಲೆ ನೋಡಿ. pp 1-4).

ಆರು ಮುದ್ರೆಗಳು, ಎರಡು ಉಪಮುದ್ರೆಗಳು ಹಾಗೂ "ಮಹಾವ್ರತಿನ್"ಪದಗಳನ್ನು ಕುರಿತಾದ ವಿವರವಾದ ಚರ್ಚೆಯನ್ನು ಈ ಪುಸ್ತಕದ ಮೊದಲ ಅಧ್ಯಾಯಗಳಲ್ಲಿ ಕಾಣಬಹುದಾಗಿದ್ದು ಅವುಗಳನ್ನು ಇಲ್ಲಿ ಮರುಕಳಿಸುವ ಆವಶ್ಯಕತೆಯಿಲ್ಲ (ಮೇಲಿನ pp. 2-7, 73-82). ನಾನಿಲ್ಲಿ ಸೂಚಿಸಬಯಸುವ ಒಂದೇ ಒಂದು ಸಂಗತಿಯೆಂದರೆ ಮಿನೋರು ಹರ ಅವರ " 'ಮಹಾವ್ರತ' ಪದದ 'ಮಹತ್'ಎನ್ನುವ ವಿಶೇಷಣವು 'ಮಹಾಬ್ರಾಹ್ಮಣ' ಪದದಲ್ಲಿ ಇರುವಂತೆ ಒಂದು ಸಾಮಾನ್ಯ ಅರ್ಥದ ಪದವಾಗಿರಬಹುದು" ಎಂಬ ಸೂಚನೆಯನ್ನು ನಾನು ಸುತರಾಂ ಒಪ್ಪಲಾರೆನೆಂದು.[16] ಈ ಶಾಸನ ಹಾಗೂ ಇನ್ನೂ ಹಲವಾರು ಆಕರಗಳಿಂದ ಸ್ಪಷ್ಟವಾಗುವ ಸಂಗತಿ ಎಂದರೆ ಕಾಪಾಲಿಕರೇ ತಮ್ಮನ್ನು 'ಮಹಾವ್ರತಿನ್'ರೆಂದು ಕರೆದುಕೊಳ್ಳುವುದು. ಇದೊಂದು ಚಿಲ್ಲರೆ ಪದವಾಗಿದ್ದರೆ ಅವರು ಹಾಗೆ ಮಾಡುತ್ತಿದ್ದರೆಂದು ನನಗೆ ಅನ್ನಿಸುವುದಿಲ್ಲ.

ಎರಡನೆಯ ಹೊಸ ಶಾಸನದಲ್ಲಿ ದಾನವನ್ನು ಸ್ವೀಕರಿಸುವವನು ಒಬ್ಬ ಕಾಪಾಲಿಕನೆಂದು ತೋರುತ್ತದೆ. ಆದರೆ ಈ ಸಂದರ್ಭದಲ್ಲಿ ಅವನನ್ನು ಕುರಿತು ಹೆಚ್ಚಿನ ಸಮಸ್ಯೆ ಎದುರಾಗುತ್ತದೆ. ಈ ಶಾಸನವು ಬೆಂಗಳೂರು ಜಿಲ್ಲೆಯಲ್ಲಿ ದೊರೆತಿದೆ.[17] ಇದರ ಒಕ್ಕಣೆ ಸಂಸ್ಕೃತ ಹಾಗೂ ಕನ್ನಡಗಳೆರಡರಲ್ಲೂ ಇದೆ. ಇದರಲ್ಲಿ ನಮೂದಿತಗೊಂಡ ಕಾಲ ಸುಮಾರು ಆರನೆಯ ಶತಮಾನದ್ದು. "ಪೃಥ್ವಿ ಕೊಂಕಣಿ ಮಹಾಧಿರಾಜನಾ"ದ ದುರ್ವಿನೀತ ಎನ್ನುವವನು ದಾನವನ್ನು ನೀಡಿದವನಾಗಿದ್ದಾನೆ. ತನ್ನ ರಾಜ್ಯಾಡಳಿತೆಯ ನಾಲ್ಕನೆಯ ವರ್ಷ ದುರ್ವಿನೀತನು "ಅಗ್ನಿಶರ್ಮನ ಮಗನು ಸೋಮಯಜ್ಞಗಳ ಲಕ್ಷಣಗಳಿಂದ ಕೂಡಿದ ಮತಾಚರಣೆಯವನು, ಉಪಕೊಟ್ಟ ಊರಿನ ನಿವಾಸಿ, ಕುತ್ಸಗೋತ್ರ, ತೈತ್ತರೀಯ ಚರಣ ಹಾಗೂ ಪ್ರವಚನ ಕಲ್ಪದ ಕಾಪಾಲಿ ಶರ್ಮನ್ನನಿಗೆ"[18] ಈ ಗ್ರಾಮವನ್ನು ನೀಡಿದನು.

---

16. ನೋಡಿ, ಹರ, ನಂ. 257n.
17. ಕೆ. ವಿ. ರಮೇಶ, 'Inscriptions of Western Gangas' (Delhi : ICHR and Agam Prakashan, 1984). pp 70-74 (no. 19).
18. "ಕುತ್ಸ ಗೋತ್ರಾಯ ತೈತ್ತಿರೀಯ ಚರಣಾಯ ಪ್ರಾವಚನ ಕಲ್ಪಾಯ ಉಪಕೊಟ್ಟ ನಿವಾಸಿನೇ ಸೋಮೇನೇಷ್ಟ ವಿಶಿಷ್ಟ ಕರ್ಮಣಃ ಅಗ್ನಿಶರ್ಮಣಃ, ಪುತ್ರಾಯ ಕಾಪಾಲಿಶರ್ಮಣೇ....." ರಮೇಶರಿಗಿಂತ ನನ್ನ ಅನುವಾದ ತುಸು ಭಿನ್ನವಾಗಿದೆ. ಅವರು 'ಸೋಮೇನೇಷ್ಟ ವಿಶಿಷ್ಟ ಕರ್ಮಣಃ ಎನ್ನುವ ವಾಕ್ಯಖಂಡವನ್ನು "ಅವನು ಸೋಮನೊಂದಿಗೆ ಆ ಮತಾಚರಣೆಗಳನ್ನು ಕೈಕೊಳ್ಳುವುದರಿಂದಾಗಿ ಅವು ವಿಶಿಷ್ಟವಾದವುಗಳೆನಿಸಿದ್ದವು" ಎಂದು ಅನುವಾದಿಸುತ್ತಾರೆ. ಅದೇ ವೇಳೆಗೆ ರಮೇಶ ಅವರು ಇದೇ ಶಾಸನದ ಈ ಮೊದಲಿನ ಪಠ್ಯವು 'mysore Archaeological Reports'ದಲ್ಲಿ 'ಸೋಮೇನೇಷ್ಟ'ಕ್ಕೆ ಬದಲಾಗಿ 'ಸೋಮನೇಷ್ಟಿ'ಯೆಂದಿದೆ, ಎಂದು ಹೇಳುತ್ತಾರೆ. ರಮೇಶ ಅವರ ಪಠ್ಯವು ಸಾಂಪ್ರದಾಯಿಕ ಬರವಣಿಗೆಯಂತೆ ಸೂಕ್ತವೆಂದು ನಂಬಿದರೂ ಮೊದಲ ಆವೃತ್ತಿಯಲ್ಲಿ ಸರಿಯಾದ ತಿದ್ದುಪಡಿಯನ್ನು ಕೈಕೊಂಡರೆ ಇದಕ್ಕೆ ಇನ್ನೂ ಹೆಚ್ಚು ಒಳ್ಳೆಯ ಅರ್ಥಪಂಕ್ತಿ ಬಂದೀತು.

ಕಾಪಾಲಿಶರ್ಮನ್ ಹೆಸರಿನಿಂದಾಗಿ ಅವನು ಕಾಪಾಲಿಕನಾಗಿರುವ ಸಾಧ್ಯತೆ ಇರಬಹುದಾದರೂ ಖಂಡಿತ ಹಾಗೆನ್ನುವಂತಿಲ್ಲ. ಸೋಮಿಭಟ್ಟಾರಕನನ್ನು ಒಬ್ಬ ವಿಪ್ರ. ಅಂದರೆ ಬ್ರಾಹ್ಮಣನೆಂದು ಕರೆಯಲಾಗುತ್ತಿದ್ದುದನ್ನು ಆಗಲೆ ಗಮನಿಸಿದ್ದೇವೆ. ಕಾಪಾಲಿಶರ್ಮ ಕೇವಲ ಒಬ್ಬ ಬ್ರಾಹ್ಮಣನಾಗಿರದೆ ವೇದಾಧ್ಯಯನ ಹಾಗೂ ಮತಾಚರಣೆಗಳಲ್ಲಿ ನುರಿತವನಾಗಿ ಕಾಣುತ್ತಾನೆ. ಸೋಮಯಜ್ಞದೊಂದಿಗಿನ ಅವನ ನಿಕಟ ಸಂಬಂಧವು ವಿಶೇಷ ಗಮನಾರ್ಹವೆಂದೆನ್ನಲು ಕಾರಣವೆಂದರೆ ಯಜ್ಞ ಮತ್ತು ಸೋಮಿಭಟ್ಟಾರಕರ ನಡುವಿನ ನಂಟು ಹಾಗೂ 'ಸೋಮಸಿದ್ಧಾಂತ' ಮತ್ತು ಕಾಪಾಲಿಕ ಯತಿಗಳ ನಡುವೆ ಇರಬಹುದಾದ ನಂಟನ್ನು ಸೂಚಿಸುತ್ತದೆ.

'ಸೋಮಸಿದ್ಧಾಂತ'ವನ್ನು ಕುರಿತು ಮೂರನೆಯ ಅಧ್ಯಾಯದಲ್ಲಿ ತಕ್ಕಮಟ್ಟಿಗೆ ವಿವರವಾಗಿ ಚರ್ಚಿಸಲಾಗಿದ್ದರೂ (ಮೇಲಿನ pp. 82-83) ನಾನು ಮೂಲ ಸಿದ್ಧಾಂತವನ್ನು ಸಂಕ್ಷಿಪ್ತವಾಗಿ ಪರಿಶೀಲಿಸಲು ಇಚ್ಛಿಸುತ್ತೇನೆ. ಸಂಸ್ಕೃತದ ಆಕರಗಳಿಂದ ದೊರಕುವ ನಾಲ್ಕು (ಅಥವಾ ಹೆಚ್ಚಿನ) ಶೈವ ಸಂಪ್ರದಾಯಗಳಲ್ಲಿ ಕಂಡು ಬರುವ ಸೋಮ, ಸೌಮ ಅಥವಾ ಸೌಮ್ಯವು ಕೆಲವು ಸಲ ಕಾಪಾಲಿಕ ಪದದ ಸ್ಥಾನದಲ್ಲಿ ಬರುತ್ತದೆ. 'ಅಮರಕೋಶ'ವನ್ನು ಕುರಿತಾದ ಕ್ಷೀರಸ್ವಾಮಿಯ ಭಾಷ್ಯವು ಕಾಪಾಲಿನ್, ಮಹಾನ್, ಮಹಾವ್ರತಿನ್, ಸೋಮಸಿದ್ಧಾಂತಿನ್ ಹಾಗೂ ತಾಂತ್ರಿಕರನ್ನೆಲ್ಲ ಸರಿಸಮರೆಂದು ತೋರಿಸುತ್ತದೆ. ಕೃಷ್ಣಮಿಶ್ರನ 'ಪ್ರಬೋಧ ಚಂದ್ರೋದಯ' ಹಾಗೂ ಆನಂದರಾಯನ 'ವಿದ್ಯಾಪರಿಣಯನ'ಗಳಲ್ಲಿ ಕಾಪಾಲಿಕ ಪಾತ್ರಗಳನ್ನು ಸೋಮಸಿದ್ಧಾಂತರೆಂದು ಹೆಸರಿಸಲಾಗಿದೆ. ಕೃಷ್ಣಮಿಶ್ರನ 'ಪ್ರಬೋಧ ಚಂದ್ರೋದಯ'ವನ್ನು ಕುರಿತಾದ ಹಲವು ಭಾಷ್ಯಗಳು 'ಸೋಮ' ಪದವನ್ನು 'ಸ ಉಮಾ' ಅಥವಾ 'ಉಮಾಯಾ: ಸಹಿತ' ಅಂದರೆ 'ಉಮೆಯ ಜೊತೆಗಿರುವವನು' ಅಥವಾ ಉಮಾ ಇಲ್ಲವೆ ಪಾರ್ವತಿಯ ನಲ್ಲನಾದ ಶಿವನೆಂಬ ವ್ಯುತ್ಪತ್ತಿಯನ್ನು ಹೇಳುತ್ತವೆ. ಬೋಧನ ಪರವಾದ ಈ ವ್ಯುತ್ಪತ್ತಿಯು ಸ್ವಾಭಾವಿಕವಾಗಿಯೇ ತಾಂತ್ರಿಕ ಹಿಂದುತ್ವದ ಲೈಂಗಿಕ ಸ್ವರೂಪದ ಸಾಂಕೇತಿಕತೆಯೊಂದಿಗೆ ಚೆನ್ನಾಗಿ ಹೊಂದಿಕೊಳ್ಳುತ್ತದಾದರೂ ಕಾಪಾಲಿಶರ್ಮನ್ನನ ಸೋಮಯಜ್ಞ ಅಥವಾ ಆಚರಣೆಯೊಂದಿಗೆ ಇರುವ ಸಾಹಚರ್ಯವು ಈ ಪದಕ್ಕೆ ಹೆಚ್ಚಿನ ಸಾಂಪ್ರದಾಯಿಕ, ವೈದಿಕ ಹಿನ್ನೆಲೆಯನ್ನು ಒದಗಿಸುತ್ತದೆ.

'ಸೋಮಸಿದ್ಧಾಂತವು' ಕೇವಲ ಕಾಪಾಲಿಕರಿಗೆ ಮಾತ್ರ ಸಂಬಂಧಿಸಿದ ಸಿದ್ಧಾಂತವೆಂದು ಗುರುತಿಸಿದೆನೆಂದು ವಿನೋದಚಂದ್ರ ಶ್ರೀವಾಸ್ತವರು 'ಸೋಮಸಿದ್ಧಾಂತ' ಹಾಗೂ 'ನ್ಯಾಯಸಿದ್ಧಾಂತ' ಸರಿಸಮನಾದ ಪದವೆಂದು ಸೂಚಿಸುತ್ತ ನನ್ನನ್ನು ಟೀಕಿಗೆ

ಗುರಿಪಡಿಸಿರುವರು.[19] ಈ ಸಮೀಕರಣವು ಕಾಪಾಲಿಕರನ್ನು ಎಲ್ಲಕ್ಕೂ ಹೆಚ್ಚಿಗೆ ನೈಯಾಯಿಕರೆಂದು ತಿಳಿಯಲ್ಪಡುವ ಕಾಳಾಮುಖರೊಂದಿಗಿನ ಆಧ್ಯಾತ್ಮಿಕ ಅಂಗಸಂಸ್ಥೆಯೆಂದು ಜೋಡಿಸುವ ಸಾಧ್ಯತೆಯನ್ನು ಉಂಟುಮಾಡುವಂತಿದೆಯಾದರೆ ಶ್ರೀವಾಸ್ತವರು ತಮ್ಮ ಆಧಾರ ಕಲ್ಪನೆಯನ್ನು ಸಾಕಾಗದ ಪುರಾವೆಯಿಂದ ಬೆಂಬಲಿಸುತ್ತಾರೆ. ಈವರೆಗೆ ಸಂಭವಿಸಿದ ಸಂಗತಿಗಳಲ್ಲೆಲ್ಲ 'ಸೋಮಸಿದ್ಧಾಂತ' ಪದವು ಕಾಪಾಲಿಕ ಸಿದ್ಧಾಂತವನ್ನು ಅಥವಾ ಒಂದೆರಡು ಇನ್ನಿತರ ತಾಂತ್ರಿಕ ಯತಿಗಳನ್ನು ಸೂಚಿಸುವಂತಿದೆ. ಮುಂದಿನ ಪುರಾವೆಗಳು ದೊರಕುವವರೆಗೂ 'ಸೋಮಸಿದ್ಧಾಂತ'ವನ್ನು ನ್ಯಾಯ ಇಲ್ಲವೆ ಗೊತ್ತಿರುವ ಇನ್ನಾವುದೇ ಆಧ್ಯಾತ್ಮಿಕ ಪರಂಪರೆಯೊಂದಿಗೆ ಜೋಡಿಸಲು ಯಾವುದೇ ಕಾರಣವಿಲ್ಲ.

ಭಾರತೀಯ ಸಾಹಿತ್ಯದಲ್ಲಿ ಕಾಪಾಲಿಕ ಯತಿಯ ಪ್ರತಿಮೆಯು ಐತಿಹಾಸಿಕ ವಾಸ್ತವದೊಂದಿಗಿನ ಇದರ ತಾಳೆ ಹೊಂದುವಿಕೆ ಇಲ್ಲವೆ ಹೊಂದದಿರುವಿಕೆಯನ್ನು ಅವಲಂಬಿಸಿರದೆ, ಅದು ಕುತೂಹಲ ಹಾಗೂ ಅಧ್ಯಯನದ ಒಂದು ವಿಷಯವೆನ್ನಿಸಿದೆ. ಇದಲ್ಲದೆ, ಈ ಐತಿಹಾಸಿಕ ವಾಸ್ತವತೆಯನ್ನು ಪುನರ್ರಚಿಸುವ ಯತ್ನವು ಅಷ್ಟೇ ಅಥವಾ ಎಲ್ಲಕ್ಕೂ ಹಿರಿದಾದ ಮೌಲ್ಯದ ಕಾರ್ಯಭಾರವೆನ್ನಿಸಿದೆ. ನೇಪಾಳದಲ್ಲಿ ಕಾಪಾಲಿಕ ಪಠ್ಯಗ್ರಂಥಗಳ ಸಂಗ್ರಹದ ಸಂರಕ್ಷಣೆಯನ್ನು ಕುರಿತು ಎ. ಸ್ಯಾಂಡರ್ಸನ್‌ರು ಗುರುತಿಸಿದ ಸೂಚನೆಯಲ್ಲಿ ಕಾಪಾಲಿಕರ ನಿಜವಾದ ನಂಬಿಕೆಗಳು ಹಾಗೂ ಆಚರಣೆಗಳನ್ನು ಕುರಿತಾದ ನಮ್ಮ ಅರಿವಿನಲ್ಲಿ ಕ್ರಾಂತಿಯನ್ನು ಉಂಟು ಮಾಡುವ ಅಂತಃ ಸಾಮರ್ಥ್ಯವಿದೆ. ಹೀಗಿದ್ದರೂ ಕಾಪಾಲಿಕರ ಐತಿಹಾಸಿಕ ಉತ್ಕ್ರಾಂತಿ, ಅವರ ಹರಡುವಿಕೆ ಹಾಗೂ ಸಾಮರ್ಥ್ಯಗಳನ್ನು ಕುರಿತು ಇನ್ನೂ ಹೆಚ್ಚಿನ ಅರಿವಿಗಾಗಿ ಈ ಯತಿಗಳ ಬಗೆಗೆ ಲಭ್ಯವಿದ್ದ ಎಲ್ಲ ಬಗೆಯ ಶಾಸನ ಸಾಮಗ್ರಿಯನ್ನು ಗುರುತಿಸುವುದು ಹಾಗೂ ಅದನ್ನು ವಿಶ್ಲೇಷಿಸುವುದು ತುಂಬ ಅಗತ್ಯದ್ದಾಗಿದೆ. ಸೋಮಿ ಭಟ್ಟಾರಕ ಹಾಗೂ ಕಾಪಾಲಿಶರ್ಮನ್ನರ ಶಾಸನಗಳು ಕಾಪಾಲಿಕರನ್ನು ಕುರಿತು ಈಗಾಗಲೇ ತಿಳಿದಿರುವ ಅಂಶಕ್ಕೆ ಮಹತ್ವದ ಐತಿಹಾಸಿಕ ಆಧಾರಾಂಶಗಳನ್ನು ಸೇರ್ಪಡಿಸುತ್ತವೆ.

❖ ❖ ❖

19. ವಿ. ಶ್ರೀವಾಸ್ತವ, "ಕಾಪಾಲಿಕ ಏವಂ ಕಾಳಾಮುಖ : ಏಕ ಐತಿಹಾಸಿಕ ಸಂಹಿತಾ", Journal of Bihar Puravid Parishad (1979), pp. 155-78. ಶ್ರೀವಾಸ್ತವರು ತಮ್ಮ ಆಧಾರ ಕಲ್ಪನೆಗಾಗಿ ಎಲ್ಲಕ್ಕೂ ಉತ್ತಮವಾದ ಪುರಾವೆಯನ್ನು ಒದಗಿಸಲು ಸೋಲುತ್ತಾರೆ. ಜಿ. ತುಚ್ಚಿ ಅವರು ಚೀನೀ ಭಾಷೆಯ ಅನುವಾದದಲ್ಲಿ ಬಂದ ಪದವಾದ 'na ya xin mo' ಎಂಬುದು ಹರಿವರ್ಮನ್‌ನ ಕಣ್ಮರೆಯಾದ ಸಂಸ್ಕೃತಕೃತಿ 'ತತ್ತ್ವಸಿದ್ಧಿಶಾಸ್ತ್ರ'ದಲ್ಲಿ ಬರುವ 'ನ್ಯಾಯಸೌಮ' ಅಥವಾ 'ನ್ಯಾಯಸೌಮ್ಯ' ಎಂಬ ಪದಕ್ಕೆ (ನೋಡಿ, ಮೇಲೆ, ಪು. 82) ಸಮನಾದುದು, ಎಂದು ಸೂಚಿಸುತ್ತಾರೆ. ಶ್ರೀವಾಸ್ತವರು ಮುಂದುವರೆದು 'ಸೋಮ' ಎಂಬುದು 'ಸೋಮಸಿದ್ಧಾಂತ'ದ ಕರ್ತೃವಿನ ಹೆಸರಾಗಿರಬಹುದೆಂಬ ಊಹೆಯನ್ನು ಕಟ್ಟುತ್ತಾರೆ. ಈ ಸೂಚನೆ ತೋರಿಕೆಗೆ ಸರಿ ಕಂಡರೂ ಅದಕ್ಕಾಗಿ ಒಂದು ಭದ್ರವಾದ ಪುರಾವೆಯನ್ನು ಒದಗಿಸಲಾಗಿಲ್ಲ.

# ಪರಿಶಿಷ್ಟ - ಬ

# ವೀರಶೈವ ಧರ್ಮಕ್ಕೆ ಇರುವ ಕಾಳಾಮುಖ ಹಿನ್ನೆಲೆ

ಈ ಪುಸ್ತಕವು 1972 ರಲ್ಲಿ ಪ್ರಕಟಗೊಂಡರೂ ಅದರ ಬರವಣಿಗೆ ನಡೆದುದು 1967ರಲ್ಲಿ.[1] ಇಲ್ಲಿಂದ ಮುಂದಿನ ಕಾಲದಲ್ಲಿ ಕಾಳಾಮುಖರನ್ನು ಕುರಿತು ಸಾಕಷ್ಟು ಆಕರ ಮಾಹಿತಿಯು ಶಾಸನಗಳ ರೂಪದಲ್ಲಿ ಪ್ರಕಟಗೊಂಡಿದೆ. ಈ ಹೆಚ್ಚಿನ ಮಾಹಿತಿಯನ್ನೆಲ್ಲ ಪರಿಶೀಲಿಸಿ ನನ್ನೀ ನಿಬಂಧದಲ್ಲಿ, ಇಂದಿಗೂ ಬಹುಮಟ್ಟಿಗೆ ಬಗೆಹರಿಯದಿದ್ದ, ಕಾಳಾಮುಖರಿಂದ ಸಂಕ್ರಮಣ ಹೊಂದಿದ ಒಂದು ಐತಿಹಾಸಿಕ ಸಮಸ್ಯೆಯಾದ ಹಾಗೂ ಹನ್ನೆರಡನೆಯ ಶತಮಾನದ ಮಧ್ಯದವರೆಗೆ ಅಂದರೆ ಬಸವ ಹಾಗೂ ಅವನ ಸಮಕಾಲೀನ ವೀರಶೈವರ ಉದಯದಿಂದ ಹಿಡಿದು ವೀರಶೈವರ ಪ್ರಭಾವಗಳನ್ನು ಕುರಿತು ತಾತ್ಕಾಲಿಕವಾದ ಒಂದು ಮೌಲ್ಯಮಾಪನವನ್ನು ಕೈಕೊಳ್ಳಲು ಇಚ್ಛಿಸುತ್ತೇನೆ.

ಕಾಳಾಮುಖ ಸಂಪ್ರದಾಯವು ಒಂಬತ್ತರಿಂದ ಹದಿಮೂರನೆಯ ಶತಮಾನದ ನಡುವಿನ ಕಾಲಾವಧಿಯಲ್ಲಿ ಕರ್ನಾಟಕದಲ್ಲಿದ್ದ ಶೈವವಾದದ ಪಾಶುಪತ "ಪಂಥ"ದ ಪ್ರಮುಖ ಶಾಖೆಯಾಗಿತ್ತು. ವಿಶೇಷವಾಗಿ ಕಲ್ಯಾಣ ಚಾಲುಕ್ಯಅರಸುಮನೆತನದ ಕಾಲಕ್ಕೆ ಹಾಗೂ ತುಸುಮಟ್ಟಿಗೆ ಕಳಚೂರಿ ಹಾಗೂ ಸೇವುಣ ಅಥವಾ ದೇವಗಿರಿಯ ಯಾದವರ ಕಾಲಕ್ಕೆ ಈ ನಾಡಿನಲ್ಲಿ ಕಾಳಾಮುಖ ಸಂಪ್ರದಾಯವು ಪ್ರಬಲವಾದ ಒಂದು ಧಾರ್ಮಿಕ ಶಕ್ತಿ ಎನ್ನಿಸಿತ್ತು. ಬಹಳಷ್ಟು ಜನ ಕಾಳಾಮುಖ ಯತಿಗಳು ಈ ಅರಸು ಮನೆತನಗಳು ಹಾಗೂ ಅವರ

1. ಡೆವಿಡ್ ಎನ್. ಲಾರೆಂಜನ್, 'The Kāpālikas and Kālāmukhas : Two Lost Śaivite sects' (Berkeley : University of California Press ; and New Delhi : Thomson Press, 1972).

ಮಾಂಡಲಿಕರಿಗೆ 'ರಾಜಗುರು'ಗಳು ಎನ್ನಿಸಿದ್ದರು. ಹದಿಮೂರನೆಯ ಶತಮಾನದಲ್ಲಿ ಕಾಳಾಮುಖ ಸಂಪ್ರದಾಯ ಒಮ್ಮೆಲೆ ಇಳಿಮುಖ ಹೊಂದಲು ಈ ಅರಸುಮನೆತನಗಳ ಅವನತಿ ಒಂದು ಕಾರಣವಾದರೆ, ವೀರಶೈವ ಹಾಗೂ ಇನ್ನಿತರ ಧಾರ್ಮಿಕ ಎದುರಾಳಿಗಳ ಚಳುವಳಿಗಳೂ ಅಷ್ಟೇ ಮುಖ್ಯ ಕಾರಣಗಳೆನ್ನಿಸಿವೆ. ದುರ್ದೈವದ ಸಂಗತಿಯೆಂದರೆ, ಉಪಲಬ್ಧವಿದ್ದ ಐತಿಹಾಸಿಕ ದಾಖಲೆ ತೀರ ಕಡಿಮೆಯಿದ್ದು, ಈ ಅಂಶವನ್ನು ಕುರಿತು ಅನುಮಾನ, ಊಹೆಗಳನ್ನು ಮೀರಿ ಯಾವುದೇ ಚರ್ಚೆ ಸಾಧ್ಯವಿಲ್ಲ.

ಕಾಳಾಮುಖ ದೇವಾಲಯ, ಮಠ ಹಾಗೂ ಯತಿಗಳನ್ನು ಕುರಿತ ಅಸಂಖ್ಯವಾದ ಶಾಸನಗಳು ಹಲವು ಸಲ ಅವರ ಧಾರ್ಮಿಕ ನಂಬಿಕೆ ಹಾಗೂ ಸಾಧನೆಗಳನ್ನು ವಿಶದ ಪಡಿಸುತ್ತವೆ. ಆ ಶಾಸನಗಳು ಕಾಳಾಮುಖರನ್ನು ಅವರ ದೇವತಾಶಾಸ್ತ್ರೀಯ ಹಾಗೂ ಧಾರ್ಮಿಕ ಎದುರಾಳಿಗಳಾದ ಯಾಮಾನಾಚಾರ್ಯ ಹಾಗೂ ರಾಮಾನುಜರಂಥವರು ಆಕ್ರಮಕತೆಯಿಂದ ಚಿತ್ರಿಸುವುದಕ್ಕಿಂತಲೂ ತುಂಬ ಬೇರೆಯಾಗಿ ಚಿತ್ರಿಸುತ್ತವೆ. ಎದುರಾಳಿಗಳ ಈ ದಾಳಿಗಳು, ಪಾಶುಪಾತ ಗ್ರಂಥಗಳಲ್ಲಿ ವಿಧಿಸಲಾದ ಹಾಗೂ ತುಸುಮಟ್ಟಿಗೆ ವಿಚಿತ್ರವಾಗಿ ತೋರುವ ಮತಾಚರಣೆಗಳೆಲ್ಲ ಕೂಡಿ ಕಾಳಾಮುಖರೆಂದರೆ ಪಾಷಂಡಿಗಳು ಹಾಗೂ ಅವರ ಸಂಪ್ರದಾಯವು ಅಬ್ರಾಹ್ಮಣ ಸಂಪ್ರದಾಯ, ಅಲ್ಲದೆ ಅದು ಕಾಪಾಲಿಕರಂಥವರ ತಾಂತ್ರಿಕ ಪ್ರಭಾವಗಳಿಗೆ ಒಳಪಟ್ಟುದು, ಎಂದೆಲ್ಲ ಆಧುನಿಕ ವಿದ್ವಾಂಸರಿಗೆ ಸೂಚಿಸುತ್ತ ಬಂದಿವೆ. ಉದಾ: ದಕ್ಷಿಣ ಭಾರತದ ಹೆಸರಾದ ಇತಿಹಾಸಕಾರರೊಬ್ಬರು ಇತ್ತೀಚೆಗೆ ಒಂದು ಸಾರ್ವಜನಿಕ ಸಭೆಯಲ್ಲಿ ಕಾಳಾಮುಖ ಹಾಗೂ ಪಾಶುಪತ ಯತಿಗಳನ್ನು ಕುರಿತು "ಬ್ರಾಹ್ಮಣರೆಂದೆನ್ನಲಾದ" ಹಾಗೂ "ಬ್ರಾಹ್ಮಣರ ಅಂತಸ್ತನ್ನು ತಮ್ಮದೆನ್ನುವ" ಯತಿಗಳಾಗಿದ್ದರೆಂದು ಉಲ್ಲೇಖಿಸಿದರು. ಒಂದೆರಡು ಪ್ರಸಂಗಗಳನ್ನು ಬಿಟ್ಟರೆ ಶಾಸನಗಳು ವಾಸ್ತವದಲ್ಲಿ ಕಾಳಾಮುಖ ಯತಿಗಳ ಜಾತಿಗಳನ್ನು ಉಲ್ಲೇಖಿಸುವುದಿಲ್ಲ. ಆದರೆ ಹೆಚ್ಚಿನ ಶಾಸನಗಳೆಲ್ಲ ಅವರು ಸಂಸ್ಕೃತ ವಿದ್ಯೆಯಲ್ಲಿ ಪಳಗಿದ 'ಪಂಡಿತ' ರಾಗಿದ್ದರೆಂದು ಘೋಷಿಸುತ್ತವೆ.

ಇನ್ನು ಯಾವ ಅರ್ಥದಿಂದ ನಾವು ಕಾಳಾಮುಖರನ್ನು ಪಾಷಂಡಿ(Heterodox) ಗಳೆನ್ನುವುದು? ಹಿಂದೂ ಸಂಪ್ರದಾಯದ ಯಾವುದೇ 'ಪಂಥ' ಅಥವಾ 'ಸಂಪ್ರದಾಯ'ವು ಒಂದು ಅರ್ಥದಲ್ಲಿ ಅಸಾಂಪ್ರದಾಯಿಕವೇ (Unorthodox) ಸರಿ. ಹೀಗೆನ್ನಲು ಕಾರಣವೆಂದರೆ, ಬಹಳಷ್ಟು ಹಿಂದೂ ಪಂಥಗಳು ಯಾವುದೇ ಒಂದು ವಿಶಿಷ್ಟ ಸಂಪ್ರದಾಯವನ್ನು ಅನುಸರಿಸಬೇಕೆಂದು ಬೋಧಿಸುವುದಿಲ್ಲ. ಏಕೆಂದರೆ ಇವು ಕೆಲವು ವಿಶಿಷ್ಟವಾದ ನಂಬಿಕೆ ಹಾಗೂ ಮತಾಚರಣೆಗಳನ್ನು ಕಾಪಾಡಿಕೊಂಡವುಗಳಾಗಿವೆ. ಅವು ಬಗೆಬಗೆಯ ನಂಬಿಕೆ ಹಾಗೂ ಆಚರಣೆಗಳಿಂದಾಗಿ ಒಂದರಿಂದೊಂದು ಬೇರೆಯಾದವುಗಳಾಗಿವೆ. ಇವುಗಳ ನಂಬಿಕೆ ಹಾಗೂ ಆಚರಣೆಗಳು ಬಲು ಸಡಿಲಾಗಿ ನಿರ್ದೇಶಿಸಲಾದವುಗಳು ಹಾಗೂ ವ್ಯಾಖ್ಯಾನಿಸಲಾದವುಗಳೆನಿಸಿವೆ. ಈ ಪಂಥಗಳ ಅಸ್ತಿತ್ವವು

ಈ ಬಗೆಯದು. ಸಾಮಾನ್ಯವಾಗಿ ನಿರ್ದಿಷ್ಟ ದೇವತಾಶಾಸ್ತ್ರ ಅಂದರೆ ಅದ್ವೈತ ವೇದಾಂತ ಹಾಗೂ ವಿಶಿಷ್ಟ ರೂಪವಾದ ಪಾಂಚಾಯತನ ಪೂಜೆಯನ್ನು ಅನುಸರಿಸುವ ಸ್ಮಾರ್ತ ಬ್ರಾಹ್ಮಣರ ಸಂಪ್ರದಾಯವಾದಿ ಹಾಗೂ "ಪಂಥಾಭಿಮಾನರಹಿತ" (Non-Sectarian) ಸಂಘಟನೆಯ ಬಗೆಗೂ ಈ ಮಾತು ಅಷ್ಟೇ ನಿಜವಾದುದು. ಆದರೂ ಕೂಡ ದೇವಾಲಯಗಳು ಹಾಗೂ ಮಠಗಳಲ್ಲಿ ಕೇಂದ್ರಿತಗೊಳ್ಳುವ ಬದಲು ಮೂಲತಃ ಮನೆಯಲ್ಲಿಯೇ ಇರುವ ಸ್ಮಾರ್ತಪಂಥವು ಉಳಿದವುಗಳಿಗಿಂತ ಭಿನ್ನವಾದುದು.

ಯಾವುದೇ ಸಂಪ್ರದಾಯದಲ್ಲೂ ಬಳುವಳಿಯಾಗಿ ಬರುವ ಪಾಷಂಡಿತನವನ್ನು ಬಿಟ್ಟರೆ, ಪಂಡಿತ, ಪಂಡಿತವೇದನೆಂಬ ಬಿರುದುಗಳನ್ನು ಹೊಂದುವ ಯೋಗ್ಯತೆಯುಳ್ಳ ಕಾಳಾಮುಖ ಯತಿಗಳ ಜಾತಿ ಯಾವುದೇ ಆಗಿದ್ದರೂ ಅವರನ್ನು ಸಾಂಪ್ರದಾಯಿಕ ಪಂಡಿತರೆಂದು ಒಪ್ಪಿಕೊಳ್ಳದಿರಲು ಯಾವುದೇ ಕಾರಣಗಳಿಲ್ಲ. ಅವರ ಧಾರ್ಮಿಕ ಹಾಗೂ ಜ್ಞಾನ ಸಾಧನೆಗಳನ್ನು ಕುರಿತಾದ ದೀರ್ಘವಾದ ಹೊಗಳಿಕೆಗಳು ಸ್ಪಷ್ಟವಾಗಿ ನಿರ್ದೇಶಿಸುವ ಸಂಗತಿಯೆಂದರೆ ಬಹಳಷ್ಟು ಜನ ಪ್ರಮುಖ ಕಾಳಾಮುಖ ಯತಿಗಳು ಸಾಂಪ್ರದಾಯಿಕ ದೇವತಾಶಾಸ್ತ್ರಗಳ ಪರಂಪರೆಗಳಾದ ನ್ಯಾಯ ಹಾಗೂ ವೈಶೇಕ್ಷಿಕ ಸಂಪ್ರದಾಯಗಳ ಅನುಯಾಯಿಗಳಾಗಿದ್ದರಲ್ಲದೆ ಅವರು ಯೋಗದ ಮಾನಸಿಕ ಹಾಗೂ ದೈಹಿಕ ಶಿಸ್ತುಗಳಲ್ಲಿ ಕೂಡ ಅನುಭವಿಗಳಾದ ಸಮರ್ಥಕರಾಗಿದ್ದರು. ಇವರಲ್ಲಿ ಕೆಲವರಂತೂ ತಮ್ಮ ಎದುರಾಳಿಗಳ ದೇವತಾಶಾಸ್ತ್ರದ ಸಿದ್ಧಾಂತಗಳಲ್ಲಿ ಕೂಡ ವಿದ್ವಾಂಸರಾಗಿದ್ದರು. ತಮ್ಮ ಧಾರ್ಮಿಕ ಸಹಿಷ್ಣುತೆ ಹಾಗೂ ಧಾರ್ಮಿಕ ವಾದವಿವಾದಗಳ ಬಗೆಗೂ ಕೂಡ ಅವರು ಎದ್ದು ಕಾಣುವ ಪುರಾವೆಯೆನ್ನಿಸಿದ್ದರು. ಕಾಳಾಮುಖ ಯತಿಗಳನ್ನು ಹಲವು ಸಲ "ಆಜೀವನ ಬ್ರಹ್ಮಚಾರಿ" ಗಳೆಂದು ಬಣ್ಣಿಸಲಾಗುತ್ತಿತ್ತು. ಇದರಿಂದ ಸೂಚಿತವಾಗುವ ಸಂಗತಿಯೆಂದರೆ ಈ ಸಂಪ್ರದಾಯವು ಮುಖ್ಯವಾಗಿ ಬ್ರಹ್ಮಚಾರಿ ಯತಿಗಳು ಹಾಗೂ ಅವರ ಅನುಯಾಯಿಗಳಿಂದ ಕೂಡಿದುದಾಗಿತ್ತೆಂಬುದು. ಆದರೆ ಕೆಲವರು ಯತಿಗಳು ಮದುವೆಯಾದವರಿದ್ದರೆನ್ನಲು ಪುರಾವೆಗಳು ದೊರಕುತ್ತವೆ.

ಕಾಳಾಮುಖರು ಏನಿಲ್ಲೆಂದರೆ ಶಕ್ತಿಪರಿಷತ್ತು ಹಾಗೂ ಸಿಂಹಪರಿಷತ್ತುಗಳೆಂಬ ಎರಡು ಪರಿಷತ್ತುಗಳಾಗಿ ವಿಭಜನೆ ಹೊಂದಿದ್ದರೆಂದು ಶಾಸನಗಳು ನಿರ್ದೇಶಿಸುತ್ತವೆ. ಮುಂದುವರಿದು, ಶಕ್ತಿಪರಿಷತ್ತು ಬೇರೆ ಬೇರೆ ಇನ್ನೆರಡು 'ಆವಳಿ' ಇಲ್ಲವೆ 'ಆಮ್ನಾಯ' ಗಳೆನ್ನಿಸಿದ ('ಪರಂಪರೆಗಳು') 'ಪರ್ವತಾವಳಿ' ಹಾಗೂ 'ಭುಜಾಂಗಾವಳಿ'ಗಳೆಂದು ವಿಭಜಿಸಲ್ಪಟ್ಟಿತ್ತು. ಇವೆರಡೂ ಶಾಖೆಯ ಮಠಗಳ ಕೇಂದ್ರಗಳು ವಾಯವ್ಯ ಹಾಗೂ ಅದಕ್ಕೆ ಹೊಂದಿಕೊಂಡ ಜಿಲ್ಲೆಗಳಲ್ಲಿ ಸ್ಥಾಪನೆಗೊಂಡವು. ಇನ್ನಷ್ಟು ಮುಂದುವರಿದು, ಈ ಆವಳಿಗಳು 'ಸಂತತಿ' ಇಲ್ಲವೆ 'ಸಂತಾನ'ಗಳಾಗಿ ವಿಭಜನೆ ಹೊಂದಿದವು. ಶಿವಮೊಗ್ಗ ಜಿಲ್ಲೆಯ ಮತ್ತಿಕೋಟೆಯ ಇಟ್ಟಿಗೆ ಸಂತತಿಯು ಭುಜಂಗಾವಳಿಗೆ ಸೇರಿದ್ದರೆ ಇದೇ ಜಿಲ್ಲೆಯ

ಬಳ್ಳಿಗಾವೆಯ ಮೂವರ ಕೋಣೆಯ ಸಂತತಿ ಹಾಗೂ ಧಾರವಾಡ ಜಿಲ್ಲೆಯ ಪುಲಿಗೆರೆ ಹಾಗೂ ಹೊಂಬಳಗಳ ಬೆಳ್ಳಿಯ ಸಂತಾನಗಳೆರಡೂ ಪರ್ವತಾವಳಿಗೆ ಸೇರಿದ್ದವು. ಇತ್ತೀಚೆಗೆ ಇನ್ನೆರಡು ಶಾಸನಗಳು ಪ್ರಕಟವಾಗಿವೆ. ಇವುಗಳಲ್ಲಿ ಮಹಾರಾಷ್ಟ್ರದ ಉಸ್ಮಾನಾಬಾದ ಜಿಲ್ಲೆಯ ಹಿಪ್ಪಳಗಾಂತ (ಪಿಪ್ಪಲಗ್ರಾಮ) ಶಾಸನವು 'ಶಿವಲಿಂಗಿ ಸಂತಾನ'ವನ್ನು ಧಾರವಾಡ ಜಿಲ್ಲೆಯ ತಿಳಿವಳ್ಳಿ ಹಾಗೂ ಇನ್ನಿತರೆಡೆಗಳ ಶಾಸನಗಳು ' ಕಿಟ್ಟಗಾವೆ ಸಂತತಿಗಳನ್ನು ಸೂಚಿಸುತ್ತವೆ. ಸಿಂಹಪರಿಷತ್ತಿನ ಮುಖ್ಯ ಕೇಂದ್ರಗಳೆಲ್ಲ ಆಂಧ್ರಪ್ರದೇಶದಲ್ಲಿ ಕೃಷ್ಣಾ ನದಿಯ ಮುಖದಿಂದ ಸುಮೂರು 100 ಕಿ.ಮೀ. ಅಂತರದ ಮೇಲಿರುವ ವಿಜಯವಾಡಾ (ಬೆಜವಾಡಾ) ದಲ್ಲಿ ಹಾಗೂ ಕರ್ನಾಟಕದ ಬಳ್ಳಾರಿ ಜಿಲ್ಲೆಯ ಕೋಗಳಿಯಲ್ಲಿ ಇವೆ. ಬಹಳಷ್ಟು ಶಾಸನಗಳು ಕಾಳಾಮುಖ ಯತಿಗಳ ಪರಿಷತ್ತು, ಸಂತತಿಗಳನ್ನು ನಮೂದಿಸದೆಯೇ ಅವರನ್ನು ಉಲ್ಲೇಖಿಸುತ್ತವೆ. ಹೆಚ್ಚಿನವರೆಲ್ಲ ಎರಡರಲ್ಲಿ ಒಂದು ಪರಿಷತ್ತಿನ ಸದಸ್ಯರಾಗಿದ್ದರು.

ಹೊಸದಾಗಿ ಪ್ರಕಟವಾದ ಬಹಳಷ್ಟು ಕಾಳಾಮುಖ ಶಾಸನಗಳು ಹಿಂದಕ್ಕೆ ಅವರು ಅಸ್ತಿತ್ವದಲ್ಲಿದ್ದರೆಂದು ತಿಳಿದಿರದ ಜಿಲ್ಲೆಗಳಲ್ಲಿ ದೊರೆತಿವೆ. ಎಸ್. ರಿತ್ತಿ ಹಾಗೂ ಜಿ. ಸಿ. ಶೇಳ್ಕೆ ಅವರು ಸಂಪಾದಿಸಿದ ದಕ್ಷಿಣ ಮಹಾರಾಷ್ಟ್ರದ ನಾಂದೇಡ ಜಿಲ್ಲೆಯ ಹಲವು ದೇವಾಲಯಗಳ ಶಾಸನಗಳಿಗೆ ಮಾತ್ರ ಈ ಮಾತು ಅನ್ವಯಿಸುತ್ತದೆ.[2] ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯ (1076-1126 ಕ್ರಿ.ಶ.) ಹಾಗೂ ಮುಮ್ಮಡಿ ಸೋಮೇಶ್ವರರ (1126-1138 ಕ್ರಿ.ಶ.) ಕಾಲದ ದೇಗಲೂರ ತಾಲೂಕಿನ ಕರಾಡಖೇಡ ಎಂಬಲ್ಲಿರುವ ಸೋಮೇಶ್ವರ ಅಥವಾ ಸೋಮನಾಥ ದೇವಾಲಯಕ್ಕೆ ಸಂಬಂಧಪಟ್ಟ ವಿಪುಲ ಶಾಸನಗಳು ಚಂದ್ರಶೇಖರ ಪಂಡಿತದೇವ (1079-1102 ಕ್ರಿ.ಶ.), ಇದೇ ಯತಿ ಹಾಗೂ ಈಶಾನಶಕ್ತಿ ಮತ್ತು ಜ್ಞಾನೇಶಯೋಗೀಶ್ವರ (ಹನ್ನೆರಡನೆಯ ಶತಮಾನದ ತಿಥಿವಿರಹಿತ ಒಂದು ಶಾಸನ) ಹಾಗೂ ತರುವಾಯದ ಯತಿಯನ್ನು ಜ್ಞಾನೇಶ್ವರಪಂಡಿತ (1130 ಕ್ರಿ.ಶ. )[3] ಎಂಬ ಬಹಳಷ್ಟು ಮಟ್ಟಿಗೆ ಕಾಳಾಮುಖರಾಗಿರಬಹುದಾದ ಯತಿಗಳನ್ನು ಉಲ್ಲೇಖಿಸುತ್ತವೆ.

ಪಶ್ಚಿಮ ಚಾಲುಕ್ಯ ಸೋಮೇಶ್ವರನ ಕ್ರಿ.ಶ.1047ರ ಇದೇ ಜಿಲ್ಲೆಯ ದೇಗಲೂರ ತಾಲೂಕಿನ ತಡಖೇಲದ ಒಂದು ಶಾಸನವು ಬ್ರಹ್ಮಚರ್ಯ ನಿಷ್ಠೆಯುಳ್ಳವ (ಪರಮ ನೈಷ್ಠಿಕರುಮ್) ಹಾಗೂ ಸಂನ್ಯಾಸಿಯಾದ (ತಪೋಧನ) ಅಲ್ಲದೆ ಕಾಳಾಮುಖರ ಮುಖ್ಯಸ್ಥನೆಂದು (ಕಾಳಾಮುಖ ಮುಖ್ಯರುಮ್) ಬಣ್ಣಿಸಲಾದ ವಾಗೇಶ್ವರನೆನ್ನುವವನನ್ನು

2. ಎಸ್. ರಿತ್ತಿ ಮತ್ತು ಜಿ. ಸಿ. ಶೇಳ್ಕೆ (ಸಂ. ರು.), 'Inscriptions from Nanded District' (Nanded : Yashwant Mahavidyalaya, 1968). ಈ ನಿಬಂಧದ ತುಂಬೆಲ್ಲ ಸೂಕ್ತವಿಲ್ಲದವುಗಳನ್ನು ಹೊರತುಪಡಿಸಿ ಸಂಸ್ಕೃತಾಧಾರಿತವಾದ ಪದಗಳನ್ನೆಲ್ಲ ಸೂಕ್ತವಾದ ಸಂಸ್ಕೃತಕ್ಕೆ ಲಿಪ್ಯಂತರಗೊಳಿಸಲಾಗಿದೆ.

3. ಅದೇ. ನಂ. 10, 13, 24, 28.

ದಾನ ಪಡೆದಿದವನೆಂದು ನಮೂದಿಸುತ್ತದೆ.[4]

ಪಶ್ಚಿಮ ಚಾಲುಕ್ಯರ ಇಮ್ಮಡಿ ಸೋಮೇಶ್ವರನ (1068-1076 ಕ್ರಿ.ಶ.) ಕಾಲದ, ಇದೇ ತಾಲೂಕಿನ ಹೊಟ್ಟುಲ ಗ್ರಾಮದ ದೀರ್ಘವಾದ ಒಂದು ಸಂಸ್ಕೃತ ಶಾಸನವು ಗುರು ಚಂದ್ರರಾಶಿಗಿಂತ ಮೊದಲು ರಾಜಧಾನಿ ಕಲ್ಯಾಣ ಪಟ್ಟಣದಲ್ಲಿ ಕಟ್ಟಿಸಲಾದ ಸಿದ್ಧೇಶ್ವರ ದೇವಾಲಯವನ್ನು ಕುರಿತು ಉಲ್ಲೇಖಿಸುತ್ತದೆ. ದೇವಾಲಯ ಹಾಗೂ ಯತಿಯ ಹೆಸರುಗಳನ್ನು ಅವನು ಕಾಳಾಮುಖನಾಗಿದ್ದುದನ್ನು ಸೂಚಿಸುತ್ತವೆ.[5]

ಆರನೆಯ ವಿಕ್ರಮಾದಿತ್ಯನ ಕಾಲದ, ಇದೇ ನಾಂದೇಡ ಜಿಲ್ಲೆಯ ಬಿಲೋಳಿ ತಾಲೂಕಿನ ಸಗ್ರೋಳಿ ಎಂಬಲ್ಲಿಯ ಎರಡು ಶಾಸನಗಳು ಸವರವಳ್ಳಿ ಎಂಬ ಊರಿನ ಸರ್ವೇಶ್ವರ ದೇವಾಲಯದ ಮುಖ್ಯಸ್ಥನಾಗಿದ್ದನೆಂದು ಕೊಂಡಾಡಲಾದ ಬ್ರಹ್ಮರಾಶಿಪಂಡಿತ (1110 ಕ್ರಿ.ಶ. )ಅಥವಾ ಬಮ್ಮರಾಶಿ ಪಂಡಿತ (1115 ಕ್ರಿ.ಶ. )ನನ್ನು ನಮೂದಿಸುತ್ತವೆ.[6] ಈ ಹೆಸರುಗಳು ಅವನೊಬ್ಬ ಕಾಳಾಮುಖನಾಗಿರುವುದನ್ನು ಇನ್ನೊಮ್ಮೆ ಸೂಚಿಸುತ್ತವೆ.

ನಾಂದೇಡ ಜಿಲ್ಲೆಯ ಊರುಗಳಲ್ಲಿ ದೊರೆತ ಎಲ್ಲಕ್ಕೂ ಹೆಚ್ಚು ಕುತೂಹಲಕರವಾದ ಒಂದು ಕಾಳಾಮುಖ ಶಾಸನವು ನಾಂದೇಡ ತಾಲೂಕಿನ ಅರ್ಧಾಪುರ ಎಂಬಲ್ಲಿಯದು. ಕನ್ನಡದ ಬಹಳಷ್ಟು ಕಾಳಾಮುಖ ಶಾಸನಗಳಿಗೆ ಎದುರಾಗಿ ಇದು ಸಂಸ್ಕೃತದಲ್ಲಿದೆ. ಇದು ಸೇವುಣರ ಇಮ್ಮಡಿ ಮಲ್ಲುಗಿ ಮತ್ತು ರಟ್ಟರ ಪ್ರಮುಖನಾದ ಬಲ್ಲಾಳನ ಆಳ್ವಿಕೆಯ 1192 ಕ್ರಿ.ಶ.[7] ಕಾಲದ್ದು. ಬಲ್ಲಾಳ ಮನೆತನದ ಬಲು ದೀರ್ಘವಾದ ಬಣ್ಣನೆಯ ತರುವಾಯ ಇದು ಮಲ್ಲಿಕಾರ್ಜುನ ಹಾಗೂ ಸರ್ವೇಶ್ವರ ದೇವಸ್ಥಾನಗಳ ನೈವೇದ್ಯಗಳಿಗಾಗಿ ನೆಲ ಹಾಗೂ ದುಡ್ಡಿನ ದತ್ತಿಯನ್ನು ನಮೂದಿಸುತ್ತದೆ. ಕಾಲೇಶ್ವರನ ಶಿಷ್ಯ ಕಲ್ಯಾಣಶಕ್ತಿ, ಈ ಕಲ್ಯಾಣಶಕ್ತಿಯ ಶಿಷ್ಯ ಬ್ರಹ್ಮರಾಸಿಯೆಂಬ ಕಾಳಾಮುಖ ಯತಿಯು ಈ ದಾನವನ್ನು ಸ್ವೀಕರಿಸಿದವನಾಗಿದ್ದನು. ಬ್ರಹ್ಮರಾಸಿಯ "ಮಗ"ನಾದ ಭೋಗರಾಸಿಯನ್ನೂ ನಮೂದಿಸಲಾಗಿದೆ. ಬ್ರಹ್ಮರಾಸಿಯನ್ನು ಹೀಗೆಂದು ಬಣ್ಣಿಸಲಾಗಿದೆ. "ಯೋಗದ ಸದ್ಗುಣಗಳಾದ ಸಂಯಮ, ಶಿಸ್ತುಗಳನ್ನುಳ್ಳವನು ಧರ್ಮಗ್ರಂಥಗಳನ್ನು ತನ್ನ ಅಂತರ್ಯದಲ್ಲಿ ಮತ್ತೆ ಮತ್ತೆ ಉಚ್ಚರಿಸುವವನು, ಧ್ಯಾನಧಾರಣೆ, ಏಕಾಗ್ರತೆ, ಸತತ ಶಾಂತಿ, ಗುಣುಗುಡುವ ಸಂಕೀರ್ತನೆ ಹಾಗೂ ಯೋಗದ ಆನಂದ ಪರವಶತೆಗಳನ್ನು ಹೊಂದಿದವನು, ಆಗಮಗಳು ಹಾಗೂ ಕಲೆಗಳ ಇಡಿಯ ಸಂಗ್ರಹದಲ್ಲಿ ಪಳಗಿದವನು; ಕಾಳಾಮುಖ ದೀಕ್ಷೆಯಲ್ಲಿ

---

4. ಅದೇ ಸಂ. 3.
5. ಅದೇ ಸಂ. 33.
6. ಅದೇಸಂ. 14, 18
7. ಅದೇ ಸಂ. 40

ನೆಲೆಯೂರಿದವನು; ತ್ರಿಪುರಾಂತಕದೇವರ ಪಾದಪದ್ಮಗಳ ಪೂಜೆಗೆ ತನ್ನನ್ನೇ ಮೀಸಲಾಗಿರಿಸಿಕೊಂಡವನು; ಎಪ್ಪತ್ತೇಳು ಮಠಗಳಿಗೆ ಅಧಿಪತಿ ಹಾಗೂ ತನ್ನ ವ್ರತಕ್ಕೆ ನಿಷ್ಠನಾಗಿರುವವನು." [8]

ಇವೆಲ್ಲ ವಿಶೇಷಣ ಪದಗಳಲ್ಲಿ ಎಲ್ಲಕ್ಕೂ ಹೆಚ್ಚಿನ ಕುತೂಹಲದ್ದೆಂದರೆ 'ಎಪ್ಪತ್ತೇಳು ಮಠಗಳ ಅಧಿಪತಿ" ಎಂಬ ವಿಶೇಷಣ. ವಾಸ್ತವದಂತೆ ಕಾಣುವ ಈ ವಿಶೇಷಣವನ್ನು ಧಾರವಾಡ ಜಿಲ್ಲೆಯ ತಿಳಿವಳ್ಳಿಯ ಇಬ್ಬರು ಕಾಳಾಮುಖರಿಗೂ ಬಳಸಲಾಗಿದೆ. ಈ ಯತಿಗಳೆಲ್ಲರೂ ಶಕ್ತಿ ಪರಿಷತ್ತಿನ ಪರ್ವತಾವಳಿಯ ಕಿಟ್ಟಗಾವೆ ಸಂತತಿಯ ಕಾಳಾಮುಖರ ಒಂದೇ ಶಾಖೆಗೆ ಸೇರಿದವರಾಗಿರುವ ಸಾಧ್ಯತೆಯಿದೆ. ಕಾಳಾಮುಖರ ಈ ಹೊಸದಾಗಿ ಕಂಡು ಹಿಡಿಯಲಾದ ಶಾಖೆಗೆ ಸಂಬಂಧಪಟ್ಟ ತಿಳಿವಳ್ಳಿಯ ಶಾಸನ ಹಾಗೂ ಇನ್ನಿತರ ದಾಖಲಾತಿಗಳನ್ನು ಕುರಿತು ಇನ್ನಷ್ಟು ವಿವರವಾಗಿ ಚರ್ಚಿಸುವಾ.

ಪಶ್ಚಿಮ ಚಾಲುಕ್ಯರ ಆರನೆಯ ವಿಕ್ರಮಾದಿತ್ಯನ 1099ರ ದಕ್ಷಿಣ ಮಹಾರಾಷ್ಟ್ರದ ಉಸ್ಮಾನಾಬಾದ ಜಿಲ್ಲೆಯ ಹಿಪ್ಪಳಗಾಂವದ (ಪಿಪ್ಪಲ ಗ್ರಾಮ) ಒಂದು ಸಂಸ್ಕೃತ ಶಾಸನವು ಪರ್ವತಾವಳಿ ಹಾಗೂ ಶಕ್ತಿ ಪರಿಷತ್ತಿನ[9] ಇನ್ನೊಂದು ಸಂತತಿಯು ಅಸ್ತಿತ್ವದಲ್ಲಿರುವುದನ್ನು ತಿಳಿಸುತ್ತದೆ. ಇದನ್ನು 'ಶಿವಲಿಂಗಿ'ಸಂತಾನ ಎಂದು ಕರೆಯಲಾಗಿದೆ. ಈ ಶಾಸನವು ಅರಸನ ಪ್ರಧಾನಮಂತ್ರಿಯಾದ ಭೀಮನಾಥನಿಂದ ಈ ಊರಿನ ಸರಸ್ವತಿ ಮಂಟಪಕ್ಕೆ ನೀಡಲಾದ ಒಂದು ದತ್ತಿಯನ್ನು ನಮೂದಿಸುತ್ತದೆ. ಆ ಕಾಣಿಕೆಯನ್ನು ಕ್ರಿಯಾಶಕ್ತಿ ಪಂಡಿತದೇವನ ಶಿಷ್ಯನಾದ ಹಾಗೂ ತ್ರಿಲೋಚನಾಚಾರ್ಯನ "ತಮ್ಮನಾದ" ಕಾಳಾಮುಖ ನಾಯಕನಾದ ತತ್ಪುರುಷಪಂಡಿತ ದೇವನಿಗೆ ವಹಿಸಲಾಗಿತ್ತು. ಕ್ರಿಯಾಶಕ್ತಿಯು ವಾದಿರುದ್ರ ಪಂಡಿತನ ಶಿಷ್ಯನಾಗಿದ್ದನು. ನಾಲ್ಕೂ ಜನ ಯತಿಗಳ ಹಾಗೂ ತತ್ಪುರುಷನ ಸ್ವಂತ ಶಿಷ್ಯನಾದ ಶ್ರೀಕಂಠನ ಸದ್ಗುಣಗಳನ್ನೆಲ್ಲ ಕೆಲಮಟ್ಟಿಗೆ ವಿವರವಾಗಿ ಎಣಿಕೆಗೆ ತಂದುಕೊಳ್ಳಲಾಗಿದೆ. ಹಲವರಿಗೆಲ್ಲ ಎಂದಿನ ಯೋಗಸಿದ್ಧಿಗಳ ಪಟ್ಟಿಯನ್ನು (ಯಮ, ನಿಯಮ, ಮುಂ.) ಆರೋಪಿಸಲಾಗಿದ್ದು, ಅವರೆಲ್ಲ ಲಾಕುಲಾಗಮ ಅಥವಾ ಲಕುಲೀಶ್ವರಾಗಮದ ಅನುಯಾಯಿಗಳಲ್ಲದೆ ನ್ಯಾಯ, ವೈಶೇಷಿಕ, ಸಾಂಖ್ಯ ಹಾಗೂ ಮೀಮಾಂಸಾಗಳ ಸಾಂಪ್ರದಾಯಿಕ ದರ್ಶನಗಳ ವಿದ್ವಾಂಸರೆನ್ನಲಾಗಿದೆ.

---

8. ಯಮ ನಿಯಮ ಸ್ವಾಧ್ಯಾಯ ಧ್ಯಾನ ಧಾರಣ ಮೌನಾನುಷ್ಠಾನ ಜಪ ಸಮಾಧಿಶೀಲ ಗುಣಸಂಪನ್ನ: ಸಕಲಾಗಮ ಕಲಾ ಕಲಾಪ ಕುಶಲ : ಕಾಲಾಮುಖದೀಕ್ಷಾ ಪ್ರತಿಷ್ಠಾಚಾರ್ಯ: ಶ್ರೀ ತ್ರಿಪುರಾಂತಕ ದೇವ ಪಾದಾರವಿಂದವಂದನಾರತ: ಸಪ್ತಾಧಿಕ ಸಪ್ತತಿ ಮಠಾನಾಮ್ ಅಧಿಷ್ಠೋವ್ರತೀ.

9. ವಿ. ಬಿ. ಕೊಟ್ಟೆ, "Ganeshvati Inscription of the Time of Chalukya 'Tribhuvanamalla', year 24, "Epigraphica Indica, vol. 38' (1970 [1981] ) pp. 289 - 304.

ನಾಂದೇಡ ಹಾಗೂ ಉಸ್ಮಾನಾಬಾದ ಜಿಲ್ಲೆಗಳ ಕಾಳಾಮುಖ ಯತಿಗಳ ಈ ಹಲವಾರು ಆಧ್ಯಾತ್ಮಿಕ ಸಂಪ್ರದಾಯಗಳು ಈ ಮೊದಲು ಬೆಳಕಿನ ಬಂದಿರಲಿಲ್ಲವಾದರೂ ಹನ್ನೊಂದನೆ ಹಾಗೂ ಹನ್ನೆರಡನೆಯ ಶತಮಾನಗಳಲ್ಲಿ ನೈಋತ್ಯ ಮಹಾರಾಷ್ಟ್ರದಲ್ಲಿ ಅವರು ಅಸ್ತಿತ್ವದಲ್ಲಿರುವುದು ಅಚ್ಚರಿಯ ಸಂಗತಿಯೇನಲ್ಲ. ಈ ಕಾಲಾವಧಿಯಲ್ಲಿ ಈ ನಾಡನ್ನು ನಿಯಂತ್ರಿಸುವ ಅರಸುಮನೆತನಗಳೆಂದರೆ ಕಲ್ಯಾಣ ಚಾಲುಕ್ಯ ಹಾಗೂ ಅವರ ತರುವಾಯ ಸೇವುಣ. ಇವೆರಡೂ ಮನೆತನಗಳು ಅದರಲ್ಲೂ ವಿಶೇಷವಾಗಿ ಕಲ್ಯಾಣ ಚಾಲುಕ್ಯರು ಕಾಳಾಮುಖರಿಗೆ ಉದಾರವಾದ ಆಶ್ರಮವನ್ನು ನೀಡಿದರು. ಕರ್ನಾಟಕದಲ್ಲಿ ಶಿವಮೊಗ್ಗೆ, ಧಾರವಾಡ ಹಾಗೂ ಬೆಳಗಾವಿ ಜಿಲ್ಲೆಗಳನ್ನು ಒಳಗೊಂಡಂತೆ ಈ ವಲಯವು ಹದಿಮೂರನೆಯ ಶತಮಾನದ ತುಂಬೆಲ್ಲ ಸೇವುಣ ಹಾಗೂ ಹೊಯ್ಸಳರ ನಡುವಿನ ಕಾಳಗಗಳಿಂದ ಕೂಡಿತ್ತೆಂಬುದನ್ನು ಗಮನಿಸಬೇಕು. ಇವೆರಡೂ ಅರಸು ಮನೆತನಗಳು ಕಾಳಾಮುಖರಿಗೆ ಆಶ್ರಯವನ್ನು ಕೊಟ್ಟವುಗಳಲ್ಲ. ಆ ಶತಮಾನದ ಕೊನೆಗೆ ಅಲಾವುದ್ದಿನ್ ಖಿಲ್ಜಿಯು ಈ ಸೀಮೆಯನ್ನು ತನ್ನ ಹಿಡಿತಕ್ಕೆ ತಂದುಕೊಳ್ಳಹತ್ತಿದನು. ಇದರಿಂದಾಗಿ ಕಾಳಾಮುಖ ದೇವಾಲಯಗಳ ಹಾಗೂ ಮಠಗಳ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿತು.[10]

ಹನ್ನೊಂದನೆಯ ಹಾಗೂ ಹನ್ನೆರಡನೆಯ ಶತಮಾನದ ಪೂರ್ವಾರ್ಧದಲ್ಲಿ ಇಂದಿನ ಆಂಧ್ರ ಪ್ರದೇಶದ ಕೆಲವು ಭಾಗವೂ ಕೂಡ ಕಲ್ಯಾಣ ಚಾಲುಕ್ಯರಿಗೆ ಸೇರಿದ್ದಿತು. ಈ ಅರಸರು ಹಾಗೂ ಮಾಂಡಲಿಕರು ಈ ನಾಡಿನ ಕಾಳಾಮುಖ ದೇವಾಲಯ ಹಾಗೂ ಮಠಗಳಿಗೆ ದತ್ತಿಗಳನ್ನು ನೀಡಿದ್ದರಲ್ಲಿ ನಮಗಾವ ಅಚ್ಚರಿಯೂ ಕಾಣುತ್ತಿಲ್ಲ. ಕರ್ನೂಲ ಜಿಲ್ಲೆಯ ಹೆಸರಾದ ಯಾತ್ರಾಸ್ಥಳವಾದ ಶ್ರೀ ಶೈಲ ಅಥವಾ ಶ್ರೀ ಪರ್ವತದ ಮೇಲಿನ ಮಹತ್ವದ್ದಾದ ಮಲ್ಲಿಕಾರ್ಜುನ ಮಠವು ಶಕ್ತಿ ಪರಿಷತ್ತಿನ ಪರ್ವತಾವಳಿಯ ಕಾಳಾಮುಖ ಯತಿಗಳಿಂದ ನಿಯಂತ್ರಿಸಲ್ಪಡುತ್ತಿತ್ತು. ಅದಕ್ಕೂ ಮೊದಲು, ಅಂದರೆ ಹತ್ತನೆಯ ಶತಮಾನದಲ್ಲಿ, ಪೂರ್ವ ಚಾಲುಕ್ಯರ ಒಬ್ಬ ಅರಸನು ಕೃಷ್ಣಾ ನದಿ ತೀರದ ಮೇಲಿರುವ ವಿಜಯವಾಡಾದ (ಬೆಜವಾಡಾ)ಸಮಸ್ತಭುವನಾಶ್ರಯ ದೇವಾಲಯಕ್ಕೆ ದತ್ತಿಯನ್ನು ನೀಡಿದ್ದನು. ಆ ಕಾಲಕ್ಕೆ ಈ ದೇವಾಲಯವು ಸಿಂಹಪರಿಷತ್ತಿನ ಕಾಳಾಮುಖ ಬೋಧಕರ ನಿಯಂತ್ರಣದಲ್ಲಿದ್ದಿತು.[11] ಇತ್ತೀಚೆಗಷ್ಟೆ ಆಂಧ್ರ ಪ್ರದೇಶದ ಪ್ರಾಚ್ಯ ಸಂಶೋಧನ ಇಲಾಖೆಯಿಂದ ಪ್ರಕಟಿಸಲಾದ ಶಾಸನಗಳಿಂದಾಗಿ ಆ ನಾಡಿನ ಹಲವಾರು ಕಾಳಾಮುಖ ಸ್ಥಾನಗಳು ಹೊಸದಾಗಿ ಬೆಳಕಿಗೆ ಬಂದಿವೆ.

---

10. ಈ ಐತಿಹಾಸಿಕ ಸನ್ನಿವೇಶವನ್ನು ಕುರಿತಾದ ಸ್ಪಷ್ಟವಾದ ಚರ್ಚೆಯು ಬಹುಮಟ್ಟಿಗೆ ಎ. ವಿ. ನರಸಿಂಹ ಮೂರ್ತಿಯವರದು, 'The sevunas of Devagiri' (Mysore : Rao and Raghavan, 1977)

11. ಮೇಲಕ್ಕೆ ನೋಡಿ - pp. 136 - 37. 141 - 43, 165.

ಕರೀಮ ನಗರ ಜಿಲ್ಲೆಯ ಸನಿಗ್ರಾಮದಲ್ಲಿ ಎರಡು ಶಾಸನಗಳು ದೊರೆತಿದ್ದು ಅವು ಅನುಕ್ರಮವಾಗಿ ಕೊಮ್ಮೇಶ್ವರ ದೇವಾಲಯ ಹಾಗೂ ಅದರ ಯತಿಯಾದ ಚಂದ್ರಭರಣ ಪಂಡಿತನಿಗೆ 1149 ಕ್ರಿ.ಶ.ದಲ್ಲಿ ನೀಡಲಾದ ದತ್ತಿಗಳನ್ನು ನಮೂದಿಸುತ್ತವೆ.[12] ಮೊದಲ ಶಾಸನವು ಕಲ್ಯಾಣ ಚಾಲುಕ್ಯ ಭೂಲೋಕಮಲ್ಲ ದೇವ (ಮುಮ್ಮಡಿ ಸೋಮೇಶ್ವರ), ಅವನ ಮಾಂಡಲಿಕನಾದ ಕಾಕತೀಯ ಪ್ರೋಳಲರಸ ಹಾಗೂ ಅವನ ಪ್ರಮುಖ ಮಾಂಡಲಿಕನಾದ ರೇಪೋಲ ಕುರುವರಸ ಇವರನ್ನು ನಮೂದಿಸುತ್ತದೆ. ಎರಡನೆಯ ಶಾಸನವು ಕಲ್ಯಾಣ ಚಾಲುಕ್ಯ (ಮುಮ್ಮಡಿ) ಜಗದೇಕಮಲ್ಲ ಹಾಗೂ ಯತಿಗಳ ಇಬ್ಬರು ಮಾಂಡಲಿಕರನ್ನು ನಮೂದಿಸುತ್ತದೆ. ದೇವರ ಹಾಗೂ ಯತಿಗಳ ಹೆಸರುಗಳು ಅವರು ಕಾಳಾಮುಖರಾಗಿದ್ದುದನ್ನು ಸೂಚಿಸುತ್ತವೆ.

ಕರೀಮ ನಗರ ಜಿಲ್ಲೆಯ ಹೆಚ್ಚಿನ ಪುರಾವೆಗಳು ವೇಮುಲವಾಡದಲ್ಲಿ ಲಭಿಸಿವೆ. ಪಶ್ಚಿಮ ಚಾಲುಕ್ಯ ತ್ರಿಭುವನಮಲ್ಲ ದೇವನ (ನಾಲ್ಮಡಿ ವಿಕ್ರಮಾದಿತ್ಯ) ಕಾಲಕ್ಕೆ ನೀಡಲಾದ 1083 ಕ್ರಿ.ಶ.ದ ಒಂದು ಶಾಸನವು ಈ ಅರಸನ ಒಬ್ಬ ಮಾಂಡಲಿಕನು ಕಟ್ಟಿಸಿದ ರಾಜಾದಿತ್ಯೇಶ್ವರ ದೇವಾಲಯ ಹಾಗೂ ಭುಜಂಗಾವಳಿಗೆ ಸೇರಿದ ಯತಿಗಳಿಗೆ ನೀಡಿದ ಕಾಣಿಕೆಗಳನ್ನು ಕುರಿತು ಬಣ್ಣಿಸುತ್ತದೆ.[13] ಮೇಲ್ಗಡೆ ಗಮನಿಸಲಾದಂತೆ, ಭುಜಂಗಾವಳಿಯು ಕಾಳಾಮುಖರ ಶಕ್ತಿ ಪರಿಷತ್ತಿನ ಒಂದು ಮುಖ್ಯವಾದ ಶಾಖೆಯಾಗಿತ್ತು.[14] ಇದೇ ಪಟ್ಟಣದ, ಇದೇ ಅರಸನ ಕ್ರಿ.ಶ.1108ರ ಇನ್ನೊಂದು ಶಾಸನವು ಹರಿಕೇಶ್ವರ ದೇವಾಲಯಕ್ಕೊಂದು "ಸಿಂಘ ಪರಿಶೆ"ಯ(ಸಿಂಹ ಪರಿಷತ್)[15] ಯತಿಯಾದ ಬ್ರಹ್ಮೇಶ್ವರಪಂಡಿತನಿಗೆ ಕಾಣಿಕೆಯನ್ನು ಒಪ್ಪಿಸಿದುದನ್ನು ನಮೂದಿಸುತ್ತದೆ. ಕಾಳಾಮುಖರ ಮುಖ್ಯವಾದ ಈ ಎರಡನೆಯ ವಿಭಾಗವೂ (ಸಿಂಹಪರ್ಷೆ) ಕೂಡ ಈ ಸ್ಥಳದಲ್ಲಿ ತನ್ನದೊಂದು ಸಂಸ್ಥೆಯನ್ನು ಹೊಂದಿದ್ದಿತೆಂಬುದನ್ನು ನಿರ್ದೇಶಿಸುತ್ತದೆ.

---

12. Epigraphica Andhrica, vol. 4, ಸಂ. ಪಿ. ವಿ. ಪರಬ್ರಹ್ಮ ಶಾಸ್ತ್ರಿ (Hyderabad : Government of Andhra Pradesh, 1975), pp. 67-89.
13. Inscriptions of Andhra Pradesh : karimnagar District, ಸಂ. ಪಿ. ವಿ. ಪರಬ್ರಹ್ಮ ಶಾಸ್ತ್ರಿ (Hyderabad : Government of Andhra Pradesh, 1974), no. 13 (ಅಲ್ಲದೆ p. xv).
14. ಮೇಲಕ್ಕೆ ನೋಡಿ - pp, 98-99, 108, 138 - 40, 156.
15. 'Inscriptions of Andhra Pradesh : Karimangar District' No. 21, ಉತ್ತರ ಕನ್ನಡ ಜಿಲ್ಲೆಯ ಓಣಿಕೇರಿ ಎಂಬಲ್ಲಿಯ ಕ್ರಿ.ಶ.1122ರ ಸಿಂಹ ಪರಿಷತ್ತಿನ ಒಂದು ಶಾಸನದ ಬಗೆಗೆ ಟಿಪ್ಪಣಿ ಮಾಡಲಾಗಿದೆ. Archaeological Survey of India, Annual Report on Indian Epigraphy for 1972-73ಯಲ್ಲಿ (Delhi, 1983) Stone no. 77.

ಆಂಧ್ರ ಪ್ರದೇಶದ ವಾರಂಗಲ್ ಜಿಲ್ಲೆಯಲ್ಲಿ ಹಲವು ಕಾಳಾಮುಖ ಶಾಸನಗಳು ದೊರೆತಿವೆ.[16] ಇತ್ತೀಚೆ ಪ್ರಕಟಿಸಲಾದ ಹನುಮಕೊಂಡದ (ಹನನಕೊಂಡ, ಅನಮ್ಕೊಂಡ) ಶಾಸನವು ಭಗ್ನಗೊಂಡಿದ್ದು ಅದರ ಮೇಲೆ ತಾರೀಖನ್ನು ನಮೂದಿಸಲಾಗಿಲ್ಲ. ಇದು ಶ್ರೀವರ್ಧನದಕೊಟ ಎಂಬಲ್ಲಿಯ ಮೂಲೇಶ್ವರ ದೇವಾಲಯದ ಯತಿ ಸುರೇಶ್ವರ ಪಂಡಿತನಿಗೆ ನೀಡಲಾದ ಕಾಣಿಕೆಯನ್ನು ನಮೂದಿಸುತ್ತದೆ. ಅವನು ಭುಜಂಗಾವಳಿಗೆ (ಶಕ್ತಿ ಪರಿಷತ್ತಿನ) ಸೇರಿದವನಾಗಿದ್ದನಲ್ಲದೆ, ಅವನನ್ನು " ಸಕಲ ಲಕುಲ ಸಿದ್ಧಾಂತ ---- ಪ್ರದೀಪಮ್" ಎಂದು ಬಣ್ಣಿಸಲಾಗಿದೆ.[17] ಲಕುಲೀಶನು ಪಾಶುಪತದ ಸಂಸ್ಥಾಪಕನಾದ ಕಾರಣ ಅವರ ಸಿದ್ಧಾಂತವನ್ನು "ಲಾಕುಲ ಸಿದ್ಧಾಂತ"ವೆಂದು ಕರೆಯಬಹುದು. ಈ ಜಿಲ್ಲೆಯ ಇನ್ನೊಂದು ಶಾಸನವು ಅಯನವೊಲು ಎಂಬಲ್ಲಿ ದೊರೆತಿದೆ. ಅದು ಲಕುಲೇಶ್ವರ ಪಂಡಿತನೆಂಬ ಯತಿಗೆ ನೀಡಲಾದ ಒಂದು ದತ್ತಿಯನ್ನು ನಮೂದಿಸುತ್ತದೆ. ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ 1118 ಕ್ರಿ.ಶ.ದಲ್ಲಿ ಇದನ್ನು ನೀಡಲಾಗಿದೆ..[18]

ಇತ್ತೀಚೆ ಪ್ರಕಟಿಸಲಾದ ಕಾಳಾಮುಖರಿಗೆ ಸಂಬಂಧಿಸಿದ ಹಲವಾರು ಶಾಸನಗಳು ಆಂಧ್ರ ಪ್ರದೇಶದ ಕಡಪಾ ( Cuddapah) ಜಿಲ್ಲೆಯಲ್ಲಿ ದೊರೆತಿವೆ.[19] ಈ ನಾಡಿನ ಇಂಥ ಬೇರೆ ಹಲವಾರು ಶಾಸನಗಳನ್ನು ರಾಜ್ಯ ಸರಕಾರದ ಪ್ರಕಟಣೆಗಳಲ್ಲಿ ಟಿಪ್ಪಣಿ ಅಥವಾ ಸಂಪಾದನೆ ಮಾಡಲಾಗಿದೆ.[20] ಮೇಡಕ ಜಿಲ್ಲೆಯ ಅಲ್ಲದುರ್ಗಎಂಬಲ್ಲಿ ದೊರೆತ ಪಾಶುಪತ-

16. ಮೇಲೆ ನೋಡಿ, pp. 136 - 37.
17. 'Inscriptions of Andhra Pradesh : Warangal District', ಸಂ. ಎನ್. ವೆಂಕಟರಮಣಯ್ಯ (Hyderabad : Government of Andhra Pradesh, 1974), No. 113.
18. ಅದೇ no. 35.
19. 'Inscriptions of Andhra Pradesh : Cuddapah District ', ಸಂ. ಪಿ. ವಿ. ಪರಬ್ರಹ್ಮ ಶಾಸ್ತ್ರಿ (Hyderabad : Government of Andhra Pradesh, 1977 - 78), Part I, no. 129, 162, 140, 142 ; part II no. 1.
20. ನೋಡಿ ಎನ್. ವೆಂಕರಮಣಯ್ಯ, 'Andhra Pradesh : Report on Epigraphy for 1966 (Hyderabad : Government of Andhra Pradesh, [1972]). nos. 130, 131, 132 ; ಪಿ. ವಿ. ಪರಬ್ರಹ್ಮ ಶಾಸ್ತ್ರಿ (ಸಂ.). Department of Archaeology and Museums, Andhra Pradesh : Annual Report on Epigraphy, 1967 (Hyderabad : Government of Andhra Pradesh, 1975), no. 406 ; ಮಲ್ಲಮಪಲ್ಲಿ ಸೋಮಶೇಖರ ಶರ್ಮ, 'Corpus of Inscriptions in the Telangana Districts', Part 4 (Hyderabad : Government of Andhra Pradesh, 1973), nos. 3, 6, 7, 10, 11, 12, 13, 19, 20, 21 ; ಪಿ. ಶ್ರೀನಿವಾಸಾಚಾರ್, 'Kannada Inscriptions of Andhra Pradesh' (Hyderabad : Government of Andhra Pradesh, 1961), nos. 30, 50, ಅಲ್ಲದೆ ನೋಡಿ Epigraphica India, 37 (1967), 41 - 44 ಮತ್ತು ಅದೇ, 36(1965), 69 - 74. ಮತ್ತು ನೋಡಿ Archaeological Survey of India, Annual Report on Indian Epigraphy for 1961 - 62 (Delhi, 1966), Stone no. 94 ; ARIE for 1962 - 63 (1967), stone nos. 186, 199, 200.

ಕಾಳಾಮುಖ ಸಂಸ್ಥಾಪಕನಾದ ಯತಿ ಲಕುಲೀಶನ ಭಿತ್ತಿವರ್ಣ ಚಿತ್ರವಂತೂ ವಿಶೇಷ ಕುತೂಹಲದ್ದು.[21]

ಕಾಳಾಮುಖರು ತಮ್ಮ ಎಲ್ಲಕ್ಕೂ ಹೆಚ್ಚಿನ ಪ್ರಭಾವವನ್ನು ಬೀರಿದ ನಾಡೆಂದರೆ ಇಂದಿನ ವಾಯವ್ಯ ಕರ್ನಾಟಕದ ಶಿವಮೊಗ್ಗ. ಧಾರವಾಡ. ಹಾಗೂ ಬೆಳಗಾವಿ ಜಿಲ್ಲೆಗಳ ಗಡಿಗಳನ್ನೊಳಗೊಂಡ ಭಾಗ. ಈ ಜಿಲ್ಲೆಗಳ ಇತ್ತೀಚೆಗೆ ಪ್ರಕಟಿಸಲಾದ ಶಾಸನಗಳು ಚರ್ಚೆಗೆ ಒಳಪಡುವ ಯೋಗ್ಯತೆಯವು.

ಶಾಸನಗಳ ಕುತೂಹಲಕರವಾದ ಒಂದು ಸಾಲು ಬೆಳಗಾವಿ ಜಿಲ್ಲೆಯ ಉತ್ತರದ ಅಥಣಿ ತಾಲೂಕಿನ ರಾಮತೀರ್ಥದ ರಾಮೇಶ್ವರ ದೇವಾಲಯಕ್ಕೆ ಸಂಬಂಧಿಸಿದ ಯತಿ ಪರಂಪರೆಯನ್ನು ಸೂಚಿಸುತ್ತದೆ. ಇವುಗಳಲ್ಲಿ ಎಲ್ಲಕ್ಕೂ ಹಳೆಯದು ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ, 1115 ಕ್ರಿ.ಶ.ದಲ್ಲಿ ನೀಡಲಾದುದು.[22] ಇದು ರಾಮೇಶ್ವರ ದೇವಾಲಯದ ಪ್ರಾಕಾರದಲ್ಲಿಯೇ ದೊರೆತಿದೆ. ಇದು ಈ ದೇವರಿಗೆಂದು ಶಿವಶಕ್ತಿಪಂಡಿತನಿಗೆ ವಹಿಸಿಕೊಡಲಾದ ದತ್ತಿಯನ್ನು ನಮೂದಿಸುತ್ತದೆ. ಅದು ಈತನನ್ನು ಸೋಮೇಶ್ವರನ ಭಕ್ತ, ಗೊಟಕನೂರಿನ (ಗುರು ಕುಲದ) ಗುರು ಪರಂಪರೆಯನ್ನು ಎತ್ತಿ ಹಿಡಿಯುವವ, ಅಲ್ಲದೆ ಸಾಮಾನ್ಯವಾಗಿ ಕಾಳಾಮುಖ ಯತಿಗಳಿಗೆ ಆರೋಪಿಸಲಾಗುವ ಯೋಗಸಾಮರ್ಥ್ಯ ಹೊಂದಿದವನೆಂದು ಬಣ್ಣಿಸುತ್ತದೆ. ಈ ಗೊಟಕನೂರು ಅಥಣಿ ತಾಲೂಕಿನ ಕೊಕಟನೂರಿನಂತೆ ಕಾಣುತ್ತದೆ. ಕಳಚೂರಿ ರಾಯಮುರಾರಿ ಸೋವಿದೇವನ ಆಳ್ವಿಕೆಯಲ್ಲಿ 1169ಕ್ರಿ.ಶ.ದಲ್ಲಿ ನೀಡಲಾದ ಕೊಕಟನೂರಿನ ಒಂದು ಶಾಸನವು ಕೊರ್ಗೋಟನೂರದ (ಅಂದರೆ ಕೊಕಟನೂರ) ಅಗ್ರಹಾರದ ಸ್ವಯಂಭೂ ವಿಶ್ವೇಶ್ವರ ದೇವಾಲಯದ ಯತಿ ವಿದ್ಯಾರಾಶಿಪಂಡಿತದೇವನಿಗೆ ನೀಡಲಾದ ಕಾಣಿಕೆಯನ್ನು ನಮೂದಿಸುತ್ತದೆ.[23] ರಾಮತೀರ್ಥದಿಂದ ಅನತಿ ದೂರದಲ್ಲಿ ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಉಮ್ರಾಣಿಯಲ್ಲಿ ದೊರೆತ ಒಂದು ಶಾಸನವು ಅಲ್ಲಿಯ ಹೆಮ್ಮೇಶ್ವರ ದೇವಾಲಯಕ್ಕೆ ನೀಡಲಾದ ಒಂದು ಕಾಣಿಕೆಯನ್ನು ಲೋಕಾಭರಣಪಂಡಿತ ದೇವನ ಶಿಷ್ಯ, ಹಾಗೂ ಸ್ವಯಂಭೂ ರಾಮೇಶ್ವರದೇವಾಲಯದ ಯತಿ ಚಂದ್ರಾಭರಣ ಪಂಡಿತ ದೇವನಿಗೆ ಒಪ್ಪಿಸಲಾದುದನ್ನು ನಮೂದಿಸುತ್ತದೆ. ಈ ಶಾಸನದ

---

21. ಅಲ್ಕುಲ ವಹೀದ ಖಾನ್, 'A monography on the Discovery of mural Paintings of Kalyani Chalukyas at Alladurg' (Hyderabad : Government of Andhra Pradesh, 1968), ಪು. 4 ಮತ್ತು ಪ್ಲೇಟ್ I.

22. 'Karnatak Inscriptions', vol. 2. ಸಂ. ಆರ್. ಎಸ್. ಪಂಚಮುಖಿ (Dharwar : Kannada Research Institute, 1951), no. 13 of 1940 - 41.

23. ಅದೇ no. 25 of 1940 - 41.

ತಿಥಿಯು ಶಕ ವರ್ಷದಲ್ಲಿದ್ದು ಅದು ಬಹುಮಟ್ಟಿಗೆ 1141ಕ್ರಿ.ಶ.ಕ್ಕೆ ಸಮನಾದುದು.[24] ಈ ರಾಮೇಶ್ವರದೇವಾಲಯವೆಂದರೆ ರಾಮತೀರ್ಥದಲ್ಲಿರುವ ದೇವಾಲಯವೇ ಸರಿ, ಎಂಬ ಸಂಗತಿಯು ನಿಜವೆಂದು ಕಳಚೂರಿ ಬಿಜ್ಜಳನ (ಇಸವಿ 1145-1167 ಕ್ರಿ.ಶ.) ಕ್ರಿ.ಶ.1167 ರ ಅಲ್ಲಿಯ ಶಾಸನದಿಂದ ತಿಳಿದುಬರುತ್ತದೆ. ಬಿಜ್ಜಳನ ಸೂಚನೆಯಂತೆ ಮಹಾಮಂಡಲೇಶ್ವರನಾದ ಪೆರ್ಮಾಡಿಯು ಸ್ವಯಂಭೂ ರಾಮೇಶ್ವರ ದೇವಾಲಯದ ಜೀರ್ಣೋದ್ಧಾರಕ್ಕಾಗಿ ದತ್ತಿಯನ್ನು ನೀಡಿದ್ದನು. ಈ ದತ್ತಿಯನ್ನು ಲೋಕಾಭರಣನ ಶಿಷ್ಯನಾದ ಇದೇ ಚಂದ್ರಾಭರಣನಿಗೆ ವಹಿಸಲಾಯಿತು.

ಬೆಳಗಾವಿ ಜಿಲ್ಲೆಯ ಇನ್ನೆರಡು ಶಾಸನಗಳು ಇಲ್ಲಿ ನಮೂದಿಸಲು ಅರ್ಹವಾದವುಗಳು. ಮೊದಲನೆಯದು ಖಾನಾಪುರ ತಾಲೂಕಿನ ಗೋಳಿನಹಳ್ಳಿಯದಿದ್ದು ಅದು 1160, 1163 ಹಾಗೂ 1173 ಕ್ರಿ.ಶ.ಗಳಿಗೆ ಸಂಬಂಧಿಸಿದುದು.[26] ಕದಂಬ ಶಿವಚಿತ್ತ ವೀರಪೆರ್ಮಾಡಿದೇವನ ಒಬ್ಬ ಸಹಾಯಕನು 1160ರಲ್ಲಿ ಸೋಮೇಶ್ವರ ದೇವರಿಗಾಗಿ ಒಂದು ದೇವಾಲಯವನ್ನು ಕಟ್ಟಿಸಿ, ಅದನ್ನು ಶ್ರೋತ್ರಿಯದೇವನ ಶಿಷ್ಯನಾದ ಶಕ್ತಿಶಿವದೇವನಿಗೆ ಒಪ್ಪಿಸಿದನು. ಎರಡನೆಯ ಶಾಸನವು ಸವದತ್ತಿ ತಾಲೂಕಿನ ಸವದತ್ತಿಯದಿದ್ದು 1048 ಹಾಗೂ 1087ಕ್ರಿ.ಶ.ಗಳಿಗೆ ಸಮನಾದ ತಿಥಿಗಳದು.[27] ಇದಕ್ಕೂ ಹಿಂದಿನ ವರ್ಷ ಪಶ್ಚಿಮ ಚಾಲುಕ್ಯ ಅರಸ ಒಂದನೆಯ ಸೋಮೇಶ್ವರನ ಆಳ್ವಿಕೆಯಲ್ಲಿ ರಟ್ಟರ ಅಂಕರಸ ಎನ್ನುವವನು ಸವದತ್ತಿಯಲ್ಲಿ ಅಂಕೇಶ್ವರ ದೇವಾಲಯವನ್ನು ಕಟ್ಟಿಸಿ ಅದರ ಸುಸ್ಥಿತಿಗಾಗಿ ಕೆಲವು ಕಾಣಿಕೆಗಳನ್ನು ನೀಡಿದನು. ಈ ಕಾಣಿಕೆಗಳನ್ನು ಪುಲಿಯರಸ ಮಠದ ಸೋಮೇಶ್ವರಪಂಡಿತನಿಗೆ ಒಪ್ಪಿಸಲಾಗಿತ್ತು. 1087ರಲ್ಲಿ ಇನ್ನೊಬ್ಬ ರಟ್ಟ ಪ್ರಮುಖನು ಕಾಣಿಕೆಗಳನ್ನು ನವೀಕರಿಸಿ ಸೋಮೇಶ್ವರಪಂಡಿತನ ಶಿಷ್ಯನಾದ ಜ್ಞಾನಶಕ್ತಿಗೆ ಒಪ್ಪಿಸಿದನು. ಈ ಪುಲಿಯರಸ ಮಠವು ಬೆಳಗಾವಿ ಜಿಲ್ಲೆಯ ಹಳೆಗಾಲದಲ್ಲಿ 'ಪುಲಿ' ಎನ್ನಿಸಿದ 'ಹೂಲಿ' ಪಟ್ಟಣದಲ್ಲಿತ್ತು. ಈ ಯತಿ ಪರಂಪರೆಗೆ ಸಂಬಂಧಿಸಿದ, ಈ ಮೊದಲು ಪ್ರಕಟಗೊಂಡ ಶಾಸನಗಳು ಹೂಲಿಯಲ್ಲಿಯೇ ದೊರೆತಿವೆ.[28]

ಧಾರವಾಡ ಜಿಲ್ಲೆಯು ಕಾಳಾಮುಖರ ಸ್ಥಳಗಳಿಗಾಗಿ ವಿಶೇಷ ಸಮೃದ್ಧವಾದುದು. ಕಳೆದ ಇಪ್ಪತ್ತು ವರ್ಷಗಳಿಗಿಂತಲೂ ಹೆಚ್ಚಿನ ಕಾಲದಲ್ಲಿ, ಈ ಜಿಲ್ಲೆಯ ಈ ಮೊದಲು ತಿಳಿದ ಹಾಗೂ ತಿಳಿದಿರದ ಸ್ಥಳಗಳಿಗೆ ಸಂಬಂಧಿಸಿದ ಅದೆಷ್ಟೋ ಶಾಸನಗಳು ಪ್ರಕಟಣೆ

24. ಅದೇ, ನಂ. 14 of 1940 - 41.

25. ಅದೇ, ನಂ. 24 of 1940 - 41.

26. Karnataka Inscriptions Series, vol. 5. ಸಂ. ಬಿ. ಆರ್. ಗೋಪಾಲ (Dharwar : Kannada Research Institute [1969], no. 64.

27. ಅದೇ, ನಂ. 52

28. ಮೇಲೆ ನೋಡಿ - pp. 150 - 53.

ಇಲ್ಲವೆ ಸಂಕ್ಷಿಪ್ತ ಟಿಪ್ಪಣಿಗಳಾಗಿ ಹೊರಬಂದಿದೆ.

ಹಿರೇಕೇರೂರ ತಾಲೂಕಿನ ಅಣಜಿಯಲ್ಲಿ ದೊರೆತ ಒಂದು ಕಿರಿದಾದ ಶಾಸನವು "ಶಕ್ತಿ ಪರಿಸೆ"ಗೆ[29] ಸಂಬಂಧಿಸಿದ ಒಂದು ದೇವಾಲಯಕ್ಕೆ ನೆಲದ ಕಾಣಿಕೆಯಿತ್ತುದನ್ನು ನಮೂದಿಸುತ್ತದೆ. ಇದು "ಶಕ್ತಿಪರಿಷತ್ತೇ" ಆಗಿರಬೇಕು. ಈ ಶಾಸನದ ಬಗೆಗಿನ ಮುಖ್ಯ ಸಂಗತಿಯೆಂದರೆ ಅದರ ಪ್ರಾಚೀನತೆ. ಇದು ಬನವಾಸಿ ಪ್ರಾಂತದ ಒಬ್ಬ ಸ್ಥಾನಿಕ ಆಳುವವನನ್ನು ನಮೂದಿಸುತ್ತದೆ. ಬೇರೆ ದಾಖಲೆಗಳಿಂದ ತಿಳಿದು ಬಂದ ಸಂಗತಿಯೆಂದರೆ ಈತ ರಾಷ್ಟ್ರಕೂಟ ಅರಸ ಇಮ್ಮಡಿ ಕೃಷ್ಣನ (ಇಸವಿ 880-914ಕ್ರಿ.ಶ.) ಕೈಕೆಳಗಿನವನಾಗಿದ್ದುದು. ಈ ಸಂಗತಿಯು ಈ ಶಾಸನವನ್ನೂ ಶಕ್ತಿಪರಿಷತ್ತಿನ ಎಲ್ಲಕ್ಕೂ ಮೊದಲನೆಯ ಶಾಸನ ಹಾಗೂ ಕಾಳಾಮುಖರ ತೀರ ಹಳೆಯ ಕಾಲದವುಗಳಲ್ಲಿ ಒಂದನ್ನಾಗಿ ಮಾಡುತ್ತದೆ. ಕರ್ನಾಟಕದ ಕೋಲಾರ ಜಿಲ್ಲೆಯ ನಂದಿಬೆಟ್ಟದ ಕ್ರಿ.ಶ.810 ಹಾಗೂ 806ರ ದತ್ತಿಗಳು ಗಮನಾರ್ಹವಾಗಿ ಹಳೆಗಾಲದವು.[30]

ಇದೇ ಧಾರವಾಡ ಜಿಲ್ಲೆಯ ಹಾನಗಲ್ಲಿನ ಎರಡು ಶಾಸನಗಳು ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಕ್ರಿ.ಶ.1119ದವುಗಳಾಗಿದ್ದು, ಬಹಳಷ್ಟು ಮಟ್ಟಿಗೆ ಕಾಳಾಮುಖ ದೇವಾಲಯ ಹಾಗೂ ಯತಿಗಳನ್ನು ಕುರಿತು ಉಲ್ಲೇಖಿಸುತ್ತವೆ. ಒಂದು ಶಾಸನವು ಪಾಂತಿಪುರದ ಮೂಲಸ್ಥಾನ ಬಿಲ್ಲೇಶ್ವರ ದೇವಾಲಯಕ್ಕಾಗಿ ದೇವರ್ಷಿಪಂಡಿತ ಎನ್ನುವವನಿಗೆ ಒಪ್ಪಿಸಲಾದ ಕಾಣಿಕೆಯನ್ನು ನಮೂದಿಸುತ್ತದೆ.[31] ಎರಡನೆಯ ಶಾಸನವು ಇನ್ನೊಂದು ಕಾಣಿಕೆಯನ್ನು ಉಲ್ಲೇಖಿಸುತ್ತದೆ. ಪಾಂತಿಪುರದ ಚಿಕೇಶ್ವರ ದೇವಾಲಯಕ್ಕೆ ಪ್ರತಿಬದ್ಧಗೊಳಿಸಲಾದ ತೆಲ್ಲಿಗೇಶ್ವರ ದೇವಾಲಯಕ್ಕೆ ನೀಡಲಾದ ಇದನ್ನು ಸಕಲೇಶ್ವರ ಪಂಡಿತನ "ಸೋದರ"ನಾದ ತ್ರಿಭುವನಶಕ್ತಿ ಪಂಡಿತನಿಗೆ ಒಪ್ಪಿಸಲಾಗಿದೆ.[32] ಈ ಯತಿಗಳೆಲ್ಲ

---

29. Karnatak Inscriptions Series, vol. 6, ಸಂ. ಬಿ. ಆರ್. ಗೋಪಾಲ (Dharwar : Kannada Research Institute, 1973), ನಂ. 3.

30. ಮೇಲೆ ನೋಡಿ - pp. 160-61, 141-42. ಅಲ್ಲದೆ ಇದನ್ನೂ ನೋಡಿ, ಕೆ. ವಿ. ರಮೇಶರ 'Inscriptions of the Western Gangas' (Delhi Indian Council of Historical Research, 1084). ನಂ.104ದಲ್ಲಿ ಹೊಸದಾಗಿ ಪ್ರಕಟಿಸಲಾದ ಮೈಸೂರು ಜಿಲ್ಲೆಯ ಬಸವನಹಳ್ಳಿಯ ಒಂಬತ್ತನೆಯ ಶತಮಾನದ ಶಾಸನವನ್ನು ನೋಡಿ. ಈ ಶಾಸನವು ಶ್ರೀಕಂಠಪಂಡಿತನ ಶಿಷ್ಯ ಹಾಗೂ ಎರೆಯಂಗೇಶ್ವರ ದೇವಾಲಯದ ಸ್ಥಾನಿಕನಾದ ಲಕುಲೀಶ್ವರಭಟಾರ ಇವರಿಬ್ಬರನ್ನೂ ವಿಶಿಷ್ಟವಾಗಿ ಪಾಶುಪತ ಇಲ್ಲವೆ ಕಾಳಾಮುಖರೆಂದು ಕರೆಯದೆಯೇ ಉಲ್ಲೇಖಿಸುತ್ತದೆ. ಆರಂಭ ಕಾಲದ ಚಾಲುಕ್ಯ ಅರಸನಾದ ಇಮ್ಮಡಿ ವಿಕ್ರಮಾದಿತ್ಯನ (733-45 ಕ್ರಿ.ಶ.) ಕಾಲದಲ್ಲಿ ವಿಜಾಪೂರ ಜಿಲ್ಲೆಯ ಪಟ್ಟದಕಲ್ಲಿನಲ್ಲಿ ಕಟ್ಟಿಸಲಾದ ಲೋಕೇಶ್ವರ, ಇಂದಿನ ವಿರೂಪಾಕ್ಷ ದೇವಾಲಯದಲ್ಲಿ ಲಕುಲೀಶನ ಒಂದು ಶಿಲ್ಪವಿದೆ. ನೋಡಿ Epigraphica India, 32 (1957). 179.

31. Karnatak Inscriptions Series, vol. 5, No. 18.

32. ಅದೇ no. 95.

ಸಾಮಾನ್ಯವಾಗಿ ಕಾಳಾಮುಖ ಶಾಸನಗಳಲ್ಲಿ ಪಟ್ಟಿ ಮಾಡಲಾದ ಯೋಗಸಾಮರ್ಥ್ಯಗಳನ್ನು ಹೊಂದಿದವರಾಗಿದ್ದಾರೆ.

ಧಾರವಾಡ ಜಿಲ್ಲೆಯ ಬ್ಯಾಡಗಿ ತಾಲೂಕಿನ ಕುಮ್ಮೂರು ಗ್ರಾಮದ, ಕಲ್ಯಾಣ ಚಾಲುಕ್ಯ ನಾಲ್ಮಡಿ ಸೋಮೇಶ್ವರನ ಕ್ರಿ.ಶ.1195ರ ಶಾಸನವು ಅಲ್ಲಿಯ ರಾಮನಾಥ ದೇವಾಲಯಕ್ಕೆ ನೀಡಲಾದ ದತ್ತಿಯನ್ನು ನಮೂದಿಸುತ್ತದೆ.[33] ಇದನ್ನು ಸ್ವೀಕರಿಸಿದವನು ವಕ್ರಶಿವಪಂಡಿತನ ಶಿಷ್ಯನಾದ ವಾಮಶಕ್ತಿದೇವನ ಶಿಷ್ಯನಾದ ಮಲ್ಲಿಕಾರ್ಜುನದೇವನ ಶಿಷ್ಯನಾದ ಕೇದಾರಪಂಡಿತ ದೇವನೆಂಬ ಯತಿಯು. ಇವನಿಗೆ ಎಲ್ಲ ಬಗೆಯ ಯೋಗ ಸಾಮರ್ಥ್ಯಗಳನ್ನು ಆರೋಪಿಸಲಾಗಿದೆ.

ಹಿರೇಕೇರೂರ ತಾಲೂಕಿನ, ಕಣವಿ ಸಿದ್ಧಗೇರಿಯ, ಹನ್ನೆರಡನೆಯ ಶತಮಾನದ ತಿಥಿರಹಿತ ಒಂದು ಶಾಸನದಲ್ಲಿ ಕಾಳಾಮುಖ ಯತಿಗಳದ್ದಾಗಿರಬಹುದಾದ ಇನ್ನೊಂದು ಪರಂಪರೆ ದೊರೆತಿದೆ.[34] ಅದು ಜಮದಗ್ನಿ ರಾಮೇಶ್ವರದೇವನ ದೇವಾಲಯಕ್ಕೆ ನೀಡಲಾದ ಹಾಗೂ ರಾಮಶಕ್ತಿ ಎನ್ನುವವನ ಶಿಷ್ಯ ಮಾಣಿಕರಾಶಿ ಪಂಡಿತನ ಶಿಷ್ಯನಾಗಿರಬಹುದಾದ ಸ್ಥಾನಾಚಾರ್ಯನಾದ ರಾಮಶಕ್ತಿ ದೇವನಿಗೆ ಒಪ್ಪಿಸಲಾದ ಕಾಣಿಕೆಯನ್ನು ದಾಖಲಿಸುತ್ತದೆ.

ಮೂಲತಃ ಮಣಿಗುಂಡಗೆ ಗ್ರಾಮಕ್ಕೆ ಸಂಬಂಧಿಸಿರಬಹುದಾದ, ಆದರೆ ಇಂದು ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯಲ್ಲಿರುವ ಹದಿಮೂರನೆಯ ಶತಮಾನದ ಆರಂಭದ ಎರಡು ಶಾಸನಗಳು ಮಣಿಗುಂಡಗೆಯಲ್ಲಿದ್ದ ಗ್ರಾಮೇಶ್ವರ ಹಾಗೂ ಸಿದ್ದೇಶ್ವರದೇವಾಲಯಗಳ ಮುಖ್ಯ ಅಧಿಕಾರಿಯಾದ ಚಂದ್ರಭೂಷಣನೆಂಬ ಯತಿಯ ಚಟುವಟಿಕೆಗಳು ಹಾಗೂ ಸದ್ಗುಣಗಳನ್ನು ಕುರಿತು ವಿಪುಲವಾಗಿ ಬಣ್ಣಿಸುತ್ತದೆ.[35] ಇವೆರಡೂ ಶಾಸನಗಳು ಗೋವೆಯ ಕದಂಬ ಮುಮ್ಮಡಿ ಜಯಕೇಶಿಯ ಆಳ್ವಿಕೆಗೆ ಸಂಬಂಧಿಸಿದ್ದು ಮೊದಲಿನದು ಕ್ರಿ.ಶ.1203,1211 ಹಾಗೂ 1215ರಲ್ಲಿ ಎರಡನೆಯದು ಕ್ರಿ.ಶ. 1216ರಲ್ಲಿ ಬರೆಯಲಾಗಿವೆ. ಇಲ್ಲಿಯ ಮೊದಲನೆಯ ಮಿತಿಯಂದು ಚಂದ್ರ ಭೂಶಣನ ವಿನಂತಿಯ ಮೇರೆಗೆ ಮಣಿಗುಂಡಗೆಯ ಶೆಟ್ಟಿಗಳು ಕದಂಬ ಅರಸನ ಹೆಸರಿನಲ್ಲಿ ಶಿವದೇವಾಲಯ ನಿರ್ಮಾಣಮಾಡಿದುದಾಗಿ ತಿಳಿದುಬರುತ್ತದೆ. ಈ ಅರಸನ ಆಳ್ವಿಕೆಯನ್ನು ಉಲ್ಲೇಖಿಸುವ 1207ಕ್ರಿ.ಶ.ದ ಶಾಸನವು ಸಿದ್ದೇಶ್ವರಮಠಕ್ಕೆ ಸಂಬಂಧಿಸಿದ, ಸೋಮೇಶ್ವರ ಪಂಡಿತನ ಶಿಷ್ಯನಾದ ಸಕಲೇಶ್ವರ ಪಂಡಿತನಿಗೆ ನೀಡಲಾದ ಕಾಣಿಕೆಯನ್ನು ನಮೂದಿಸುತ್ತದೆ. ಈ ಶಾಸನವು ಎಲ್ಲಿ ದೊರಕಿತೆಂಬುದು ತಿಳಿದಿಲ್ಲ.[36]

33. ಅದೇ. Vol. 6, no. 33.
34. ಅದೇ. ಸಂ. 7.
35. ಅದೇ, vol. 5, nos. 32, 67.
36. ಅದೇ, ಸಂ. 31.

ಕಳೆದ ಇಪ್ಪತ್ತು ವರ್ಷಗಳಲ್ಲಿ ಪ್ರಕಟಿಸಲಾದ ಕಾಳಾಮುಖ ಶಾಸನಗಳಲ್ಲೆಲ್ಲ ಎಲ್ಲಕ್ಕೂ ಹೆಚ್ಚು ಮಹತ್ವದ್ದೆನ್ನಿಸಬಹುದಾದ ಶಾಸನವು ಧಾರವಾಡ ಜಿಲ್ಲೆಯ ಹಾನಗಲ್ಲ ತಾಲೂಕಿನ ತಿಳವಳ್ಳಿಗೆ ಸಂಭಂದಿಸಿದುದು.[37] ಕ್ರಿ.ಶ.1239ರ ಇದು ಸೇವುಣ ಯಾದವ ಇಮ್ಮಡಿ ಸಿಂಘಣನ ಆಳ್ವಿಕೆಯ ಕಾಲದ್ದಾಗಿದೆ. ಸಂಸ್ಕೃತ ಹಾಗೂ ಕನ್ನಡ ಭಾಷೆಯದಾದ ಇದು ಅರಸನ ಅಧಿಕಾರಿಯೊಬ್ಬನ ಇಬ್ಬರು ಗಂಡು ಮಕ್ಕಳು ಸಾವಂತೇಶ್ವರ ಹೆಸರಿನಿಂದ ಶಿವನಿಗಾಗಿ ಒಂದು ದೇವಾಲಯ ಕಟ್ಟಿಸಿ ಒಂದು ಗ್ರಾಮ ನೀಡಿದುದನ್ನು ಸಮೂದಿಸುತ್ತದೆ. ಈ ಗ್ರಾಮವನ್ನು ಕಾಳಾಮುಖ ಯತಿಯಾದ ರುದ್ರಶಕ್ತಿಗೆ ಒಪ್ಪಿಸಲಾಗಿದ್ದು ಅವನ ಆಧ್ಯಾತ್ಮಿಕ ಪರಂಪರೆಯನ್ನು ತುಸುಮಟ್ಟಿಗೆ ವಿವರವಾಗಿ ಬಣ್ಣಿಸಲಾಗಿದೆ. ಇವರ ಗುರುಪರಂಪರೆ ಹೀಗಿದೆ: ವಿದ್ಯಾಭರಣದೇವ, ಗೋಕರ್ಣ, ಕುಮಾರ, ಸರ್ವೇಶ್ವರದೇವ, ಶಕ್ತಿದೇವ, ರುದ್ರಶಕ್ತಿ.

ಇಲ್ಲಿ ವಿದ್ಯಾಭೂಷಣ ಗುರುವಿನ ಗುಣಗಾನವು ಎಂದಿನ ಕಾಳಾಮುಖ ಶಾಸನಗಳಲ್ಲಿ ಕಂಡುಬರುವ ಯೋಗಸಾಮರ್ಥ್ಯಗಳ ಪಟ್ಟಿಯಿಂದ ಶುರುವಾಗುತ್ತದೆ. ಮುಂದುವರಿಯುತ್ತ, ಅವನನ್ನು ಎಪ್ಪತ್ತೇಳು ಸ್ಥಾನಗಳ (ಸಪ್ತಾಹತ್ತನಿಷ್ಠಾನಾಚಾರ್ಯರುಂ) ಗುರುವೆಂದು, ನಾಲ್ಕು ವೇದ ಹಾಗೂ ಸಂಸ್ಕೃತ ವಿದ್ಯೆಯ ಸಾಂಪ್ರದಾಯಿಕ ವಿಷಯಗಳಲ್ಲಿ ಪಾರಂಗತನೆಂದು, ಲಾಕುಲಾಗಮ ಸಿದ್ಧಾಂತಗಳನ್ನು ಎತ್ತಿ ಹಿಡಿಯುವವನೆಂದು, ಕಬ್ಬಿನ ಸಿರಿವೂರಿನ ಶ್ರೀ ಸಿದ್ಧನಾಥ ಅಥವಾ ಸಿದ್ಧೇಶ್ವರ ದೇವರ ಆರಾಧಕನೆಂದು, ಕಿಟ್ಟಿಕ್ರೋಮ ಮಠದ ಬೋಧಕ ಯತಿಯೆಂದು (ಕಿಟ್ಟಕ್ರೋಮ ಮಠಾದ್ವೇಶಿಕ ಪದಃ) ಹಾಗೂ "ಕಾಳಾಮುಖ" ರ ನಾಯಕನೆಂದು (ಕಾಳಾಮುಖಸ್ಯಾಗ್ರಣಿ) ಕರೆಯಲಾಗಿದೆ.

ಬೇರೆ ಆಕರಗಳಿಂದ ತಿಳಿದುಬಂದಂತೆ ಈ ಪರಂಪರೆಯ ನಾಲ್ಕನೆಯ ಯತಿಯಾದ ಸರ್ವೇಶ್ವರನು ಶಿವಮೊಗ್ಗ ಜಿಲ್ಲೆಯ ಕುಪ್ಪಟೂರಿನಲ್ಲಿ ಇಲ್ಲವೆ ಕುಪ್ಪಟೂರ ಬಳಿಯ ದೇವಸ್ಥಾನ ಹಕ್ಕಲು ಎಂಬಲ್ಲಿರುವ ಕೋಟೀಶ್ವರ ದೇವನಿಗೆ ಸಂಬಂಧಪಟ್ಟವನಾಗಿದ್ದನು. ಐದನೆಯ ಯತಿಯಾದ ಶಕ್ತಿದೇವನು ದಾನವನ್ನು ಸ್ವೀಕರಿಸಿದ ರುದ್ರಶಕ್ತಿಯ ಗುರುವಾಗಿದ್ದಾನೆ. ಅವನ ಹೊಗಳಿಕೆ ಕೂಡ ವಿದ್ಯಾಭರಣನಿಗೆ ನೀಡಲಾದ ಯೋಗ ಸಾಮರ್ಥ್ಯಗಳ ಪಟ್ಟಿಯಿಂದಲೇ ಶುರುವಾಗಿ ಅದೇ ಬಗೆಯ ನುಡಿಗಟ್ಟುಗಳಿಂದ ಮುಂದುವರೆದು ಶಕ್ತಿದೇವನನ್ನು ಎಪ್ಪತ್ತೇಳು ಸ್ಥಾನಗಳ ಗುರು, ನಾಲ್ಕು ವೇದ ಹಾಗೂ ಸಂಸ್ಕೃತ ವಿದ್ಯೆಯ ಇತರ ಸಾಂಪ್ರದಾಯಿಕ ವಿಷಯಗಳಲ್ಲಿ ಪಾರಂಗತ ಹಾಗೂ

37. ಅದೇ, ಸಂದ. 42 (also p. xxxvi).

ಲಾಕುಲಾಗಮವನ್ನು ಎತ್ತಿ ಹಿಡಿಯುವವನೆಂದು ಬಣ್ಣಿಸಲಾಗಿದೆ. ಅವನು ದೇವಸ್ಥಾನದ ಹಕ್ಕಲಿನ ದೇವನಾದ ಶ್ರೀ ಕೋಟಿನಾಥ ಹಾಗೂ ಕಲ್ಲಮುಳುಗುಂದದ ಸ್ವಯಂಭೂ ದೇವರೊಂದಿಗೆ ಸಂಬಂಧಿಸಿದವನಾಗಿರುವನು. ಕೊನೆಯಲ್ಲಿ ಶಕ್ತಿದೇವನಿಗೆ 'ಎಕ್ಕೋಟಿ ಚಕ್ರವರ್ತಿ' ಎಂಬ ಕುತೂಹಲಕರ ವಿಶೇಷಣ ಪದವನ್ನು ಬಳಸಲಾಗಿದೆ. ಎಕ್ಕೋಟಿ ಎಂಬ ಪದವು ಕಾಳಾಮುಖರ ಇನ್ನೊಂದು ಅಧಿಕಾರದ ಹುದ್ದೆಯಾಗಿದೆಯೆಂದು ಬಿ. ಆರ್. ಗೋಪಾಲರು ವಾದಿಸುತ್ತಾರೆ.[38]

ಈ ಓಂದೆ ಪ್ರಕಟಿಸಲಾದ ಕ್ರಿ.ಶ.1231ರ ಶಾಸನ ಯತಿ ಪರಂಪರೆಯನ್ನು ಪೂರ್ತಿಯಾಗಿ ನೀಡದೆ ಇದೇ ರುದ್ರಶಕ್ತಿ ಗುರುವಲ್ಲದೆ ಎಪ್ಪತ್ತೇಳು ಸ್ಥಾನಗಳ ಗುರು ಎನ್ನಿಸಿದ ಇವನ "ತಮ್ಮ"ನಾದ ಸರ್ವೇಶ್ವರ ಶಕ್ತಿದೇವನನ್ನು ಶಿವಮೊಗ್ಗ ಜಿಲ್ಲೆಯ ಕುಪ್ಪಟೂರಿನ ಅಥವಾ ಕುಪ್ಪಟೂರಿನ ಬಳಿಯ ದೇವಸ್ಥಾನ ಹಕ್ಕಲು ಎಂಬಲ್ಲಿಯ ಕೋಟೀಶ್ವರ' ದೇವಾಲಯದ ಮುಖ್ಯಸ್ಥನೆಂದು ಉಲ್ಲೇಖಿಸುತ್ತವೆ.[39] ಈ ಶಾಸನವು ಕೋಟೀಶ್ವರಕ್ಕೆ ಪ್ರತಿಬದ್ಧಗೊಳಿಸಲಾದ ಕಬ್ಬಿನ ಸಿರಿವೂರಿನ ಸಿದ್ಧನಾಥ, ಮುಳುಗುಂದದ ಸ್ವಯಂಭೂ, ಕುರಿವದೆಯ ರಾಮನಾಥ, ಅಬ್ಬಲೂರಿನ ಗ್ರಾಮೇಶ್ವರ (?ಬ್ರಹ್ಮೇಶ್ವರ), ದೇವಂಗಿರಿಯ ಚೈತ್ರಪುರವಾದ ತಿಳುವಳ್ಳಿಯ (ತಿಳಿವಳ್ಳಿ) ಮೂಲಸ್ಥಾನ ವೊಸವಂತೇಶ್ವರ (ಸಾವಂತೇಶ್ವರ), ಹಾನುಂಗಲ (ಹಾನಗಲ್ಲ)ದ ಮೂಲಸ್ಥಾನ ಹಾಗೂ ಕುಪ್ಪಟೂರಿನ ರಾಮನಾಥ ದೇವಾಲಯವನ್ನು ಒಳಗೊಂಡಂತೆ ಇನ್ನೂ ಹಲವಾರು ದೇವಾಲಯಗಳನ್ನು ಹೆಸರಿಸುತ್ತದೆ. ಈ ಪರಂಪರೆಯು ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆಯಲ್ಲಿ ಮುಖ್ಯ ಕೇಂದ್ರವನ್ನು ಹೊಂದಿದ ಶಕ್ತಿಪರಿಷತ್ತಿನ ಪರ್ವತಾವಳಿಯ ಮೂವರ ಕೋಣೆಯ ಸಂತತಿಯೊಂದಿಗೆ ಸಂಬಂಧಿಸಿದುದಾಗಿರಬಹುದೆಂದು ಒಂದು ಚಿಕ್ಕ ಪುರಾವೆಯು ಸೂಚಿಸುತ್ತದೆ. ಆದರೆ ಹೆಚ್ಚು ಶಕ್ತಿಯುತವಾದ ಒಂದು ಪುರಾವೆಯು, ತಿಳಿವಳ್ಳಿ ಹಾಗೂ ದೇವಸ್ಥಾನ ಹಕ್ಕಲಿನ ಯತಿಗಳನ್ನು

---

38. 'ಎಕ್ಕೋಟಿ' ಎಂಬ ಪದವು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಕಂಬದಹಳ್ಳಿಯ ಹನ್ನೆರಡನೆಯ ಶತಮಾನದ ಶಾಸನದಲ್ಲಿ ಮತ್ತೆ ಕಾಣಿಸಿಕೊಳ್ಳುತ್ತದೆ. ನೋಡಿ ಹೊಸ Epigraphica Carnatica (Mysore : University of Mysore, 1972), vol. 7, no. 31 (Old edition, vol. 14, no. 131). ಧಾರವಾಡ ಜಿಲ್ಲೆಯ ಬೆಲ್ವಂತರದ 1150 ಕ್ರಿ.ಶ.ದ ಒಂದು ಶಾಸನವು ಎಕ್ಕೋಟಿ ಚಕ್ರವರ್ತಿಯೆಂಬ ಮುಳುಗುಂದದ ಸ್ವಯಂಭುದೇವರ ಯತಿಯನ್ನು ಕುರಿತು. Archaeological Survey of India, ARIE for 1965 - 66. (Delhi, 1970), stone no. 385 ದಲ್ಲಿ ನಮೂದಿಸಿದೆ.

39. Epigraphica Carnatica ಸಂ. ಬಿ. ಎಲ್. ರೈಸ್ (Bangalore : Mysore Government Press, 1886-1904), vol. 8, Sb 275. ಈ ಶಾಸನವನ್ನು ಕುರಿತು ಮೇಲ್ಗಡೆಯಲ್ಲಿ ಚರ್ಚಿಸಲಾಗಿದೆ. pp 100-01. 129-30.

ಧಾರವಾಡ ಜಿಲ್ಲೆಯ ಹಾವೇರಿ ತಾಲೂಕಿನ ಹರಳಹಳ್ಳಿ ಹಾಗೂ ಇದೇ ಜಿಲ್ಲೆಯ ಹಿರೇಕೇರೂರ ತಾಲೂಕಿನ ರಟ್ಟೆಹಳ್ಳಿಗಳಲ್ಲಿ ಇತರ ಮುಖ್ಯ ಕೇಂದ್ರಗಳನ್ನು ಹೊಂದಿರಬಹುದಾದ ಶಕ್ತಿ ಪರಿಷತ್ತಿನ ಪರ್ವತಾವಳಿಯ ಕಿಟ್ಟಗಾವೆ ಸಂತತಿಯೊಂದಿಗೆ ಜೋಡಿಸುತ್ತದೆ. ಮೇಲ್ಗಡೆಯಲ್ಲಿ ಚರ್ಚಿಸಲಾದ ಮಹಾರಾಷ್ಟ್ರದ ನಾಂದೇಡ ಜಿಲ್ಲೆಯ ಅರ್ಧಾಪುರದಲ್ಲಿರುವ ಮಲ್ಲಿಕಾರ್ಜುನ ಹಾಗೂ ಸರ್ವೇಶ್ವರ ದೇವಾಲಯಗಳು ಇವೇ ಕಿಟ್ಟಗಾವೆ ಸಂತತಿಗೆ ಸೇರಿರುವಂತಿದೆ. ಏಕೆಂದರೆ ಕ್ರಿ.ಶ.1192ರಲ್ಲಿ ಈ ದೇವಾಲಯಗಳ ಪ್ರಮುಖನಾಗಿರುವಂತೆ ತೋರುವ ಬ್ರಹ್ಮರಾಶಿ ಗುರುವನ್ನು ಕೂಡ "ಎಪ್ಪತ್ತೇಳು ಮಠಗಳ ಅಧಿಪತಿ" ಎಂದು ಕರೆಯಲಾಗುತ್ತದೆ.

ಧಾರವಾಡ ಜಿಲ್ಲೆಯ ಹಾವೇರಿ ತಾಲೂಕಿನ ಹರಳಹಳ್ಳಿಯಲ್ಲಿ ದೊರೆತ ಎರಡು ಶಾಸನಗಳಲ್ಲಿ ಸೋಮೇಶ್ವರ ಅಥವಾ ಸ್ವಯಂಭೂ ಸೋಮನಾಥ ದೇವಾಲಯಕ್ಕೆ ನೀಡಲಾದ ಕಾಣಿಕೆಗಳನ್ನು ನಮೂದಿಸಲಾಗಿದೆ.[40] ಇವೆರಡೂ ಸಂದರ್ಭಗಳಲ್ಲಿ ದಾನವನ್ನು ಪಡೆದವನು ಕಲ್ಯಾಣಶಕ್ತಿದೇವನಾಗಿದ್ದು ಅವನನ್ನು ಕಿಟ್ಟಗಾವೆ ಸಂತತಿಯ ಶಕ್ತಿ ಪರಿಷತ್ತಿನ ಪರ್ವತಾವಳಿಯ "ಕಾಳಾಮುಕ"ನಾಗಿದ್ದನೆಂದು ಬಣ್ಣಿಸಲಾಗಿದೆ. ಒಂದನೆಯ ಶಾಸನ ಕಳಚೂರಿ ಅರಸನಾದ ಆಹವಮಲ್ಲನನ್ನು (1161-1183 ಕ್ರಿ. ಶ. ) ಉಲ್ಲೇಖಿಸುವುದಲ್ಲದೆ ಕ್ರಿ.ಶ.1181 ಹಾಗೂ 1188ರ ಮಿತಿಗಳನ್ನು ಹೊಂದಿದೆ. ಎರಡನೆಯ ಶಾಸನವು ಗುತ್ತ (ಗುಪ್ತ) ಅರಸು ತ್ರಿವಿಕ್ರಮಾದಿತ್ಯ ದೇವನನ್ನು ಮಾತ್ರ ನಮೂದಿಸುತ್ತದಲ್ಲದೆ ಕ್ರಿ.ಶ.1188ರ ಮಿತಿಯನ್ನು ಹೊಂದಿದೆ. ಇವೆರಡೂ ಶಾಸನಗಳಲ್ಲಿ ಕಲ್ಯಾಣಶಕ್ತಿಯ ಹಾಗೂ ಅವನ ಪೂರ್ವಿಕರ ಧಾರ್ಮಿಕ ಸಾಮರ್ಥ್ಯಗಳನ್ನು ದೀರ್ಘವಾಗಿ ಬಣ್ಣಿಸಲಾಗಿದೆ. ಕಲ್ಯಾಣಶಕ್ತಿಯು ಅಮೃತರಾಶಿಯ ಶಿಷ್ಯನಾದ ಸರ್ವೇಶನ ಶಿಷ್ಯನಾಗಿದ್ದನು. ತರುವಾಯದ ಕಾಲದ್ದಾದ ವೀರ ವಿಕ್ರಮಾದಿತ್ಯ ದೇವನ 1213ಕ್ರಿ.ಶ.ದ ಶಾಸನವು ಸೋಮನಾಥ ದೇವಾಲಯದ ಸ್ಥಾನಾಚಾರ್ಯನಾದ ತ್ರಿಲೋಚನ ದೇವನೆಂಬವನಿಗೆ ಒಪ್ಪಿಸಲಾದ ಇನ್ನೊಂದು ಕಾಣಿಕೆಯನ್ನು ನಮೂದಿಸುತ್ತದೆ.[41]

ಇತ್ತೀಚೆಗೆ ಪ್ರಕಟಿಸಲಾದ ಧಾರವಾಡ ಜಿಲ್ಲೆಯ ಹಿರೇಕೇರೂರ ತಾಲೂಕಿನ ರಟ್ಟೆಹಳ್ಳಿಯ ಎರಡೂ ಶಾಸನಗಳು ಇವೇ ಕಿಟ್ಟಗಾವೆ ಸಂತತಿತಿಯ ಕಾಳಾಮುಖ ಯತಿಗಳಿಗೆ ನೀಡಲಾದ ಕಾಣಿಕೆಗಳನ್ನು ನಮೂದಿಸುತ್ತವೆ. ಇವುಗಳಲ್ಲಿ ಕ್ರಿ.ಶ.1174ರ ಮೊದಲ ಶಾಸನ ಕಳಚೂರಿ ರಾಯಮುರಾರಿ ಸೋವಿದೇವ ಹಾಗೂ ಅವನ ಕೈಕೆಳಗಿನ ಕದಂಬರ ಪಾಂಡ್ಯದೇವರಸನ ಆಳ್ವಿಕೆಯ ಕಾಲದ್ದಾಗಿದೆ.[42] ಇದು, ರಟ್ಟೆಪಳ್ಳಿಯ ಕದಂಬೇಶ್ವರನಿಗಾಗಿ

---

40. Karnatak Inscriptions Scries, vol. 6, nos. 39 and 74 respectively.
41. ಅದೇ, ಸಂ. 75.
42. ಅದೇ, ಸಂ. 37.

"ಕಾಳಾಮುಖ" ಕಲ್ಯಾಣಶಕ್ತಿ ಪಂಡಿತನಿಗೆ ನೀಡಲಾದ ಕಾಣಿಕೆಯನ್ನು ನಮೂದಿಸುತ್ತದೆ. ಈ ಕಾಲದ ವೇಳೆಗೆ ಆತ ತುಂಬ ಮುಪ್ಪಿನವನಾಗಿರಲು ಸಾಕು. ಏಕೆಂದರೆ, ಈ ದಾಖಲೆಯಲ್ಲಿ ಅವನ ಶಿಷ್ಯ ಹಾಗೂ ಶಿಷ್ಯನ ಶಿಷ್ಯ ಇವರಿಬ್ಬರ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಇಲ್ಲಿಯ ಗುರು ಪರಂಪರೆಯಲ್ಲಿ ಯತಿಗಳ ಹತ್ತು ತಲೆಮಾರುಗಳ ಹೆಸರಿದ್ದು, ಅವರು ಇನ್ನೂರು ವರ್ಷಗಳಿಗಿಂತ ಹೆಚ್ಚಿನ ಕಾಲಾವಧಿಯನ್ನು ವ್ಯಾಪಿಸುತ್ತಾರೆ. ಈ ಪರಂಪರೆಯು ಲಕುಲೀಶ್ವರದೇವ, ಗುರು (ಒಂದನೆಯ) ಮೂರುಜಾವಿದೇವ, ಗುರು ದಾನವನು ಪಡೆದ ಕಲ್ಯಾಣಶಕ್ತಿ, ಗುರು ಸರ್ವೇಶ್ವರ, ಗುರು(ಎರಡನೆಯ) ಕ್ರಿಯಾಶಕ್ತಿ, ಗುರು ಶ್ರೀಕಾಂತದೇವ, ಗುರು ಅಮೃತರಾಶಿ, ಗುರು (ಒಂದನೆಯ) ಕ್ರಿಯಾಶಕ್ತಿ, ಗುರು ವಾದಿರುದ್ರಯತಿ, ಗುರು ವಾಮದೇವ ಯತಿ.

ಎರಡನೆಯ ದತ್ತಿಯು ಕ್ರಿ.ಶ.1238 ಕ್ಕೆ ಸಂಬಂಧಿಸಿದ್ದು, ಅರಸನಾದ ಇಮ್ಮಡಿ ಸಿಂಘಣ ಹಾಗೂ ಅವನ ಕೈಕೆಳಗಿನ ಕದಂಬರ ಆಳ್ವಿಕೆಯ ಕಾಲದ್ದಾಗಿದೆ. [43] ಕಾಳಾಮುಖರ ಪರಂಪರೆಯನ್ನು ಬಹುಮಟ್ಟಿಗೆ ಮೊದಲು ಶಾಸನದಿಂದ ನಕಲು ಮಾಡಲಾಗಿದೆ. ದಾನವನ್ನು ಸ್ವೀಕರಿಸುವವನೂ, ಲಕುಲೀಶ್ವರನ ಶಿಷ್ಯನೂ ಆದ (ಎರಡನೆಯ ) ಮೂರುಜಾವಿಯ ಹೆಸರನ್ನು ಸೇರಿಸಲಾಗಿದ್ದು (ಒಂದನೆಯ) ಕ್ರಿಯಾಶಕ್ತಿ ಹಾಗೂ ಅಮೃತವಾರಾಶಿಗಳ ಹೆಸರನ್ನು ಅಜಾಗರೂಕತೆಯಿಂದಾಗಿ ಬಿಟ್ಟು ಬಿಡಲಾಗಿದೆ. ವಾದಿರುದ್ರಯತಿಯು ವಾದಿರುದ್ರಶಕ್ತಿ ಎಂದು ಕರೆಯಲಾಗಿರುವನು. ಈ ದತ್ತಿಯು ಈ ಮೊದಲು ಶಾಸನಗಳಲ್ಲಿ ದೊರೆಯದ ಮಹತ್ವದ ಮಾಹಿತಿಯನ್ನೊಳಗೊಂಡಿದೆ. ಈ ಮಾಹಿತಿಯೆಂದರೆ ಈ ಕಾಳಾಮುಖ ಯತಿಗಳು ಪರ್ವತಾವಳಿ ಹಾಗೂ ಕಿಟ್ಟಗಾವೆಗಳಿಗೆ (ಸಂತತಿ) ಸೇರಿದ್ದರೆಂಬುದು. ಇದಕ್ಕೂ ಹೆಚ್ಚಿನ ಸಂಗತಿಯೆಂದರೆ, ದಾನವನ್ನು ಸ್ವೀಕರಿಸಿದ ಮೂರುಜಾವಿಗೆ (ಎರಡನೆಯ) 'ರಾಜಗುರು' ಪದವಿಯನ್ನು ನೀಡಲಾಗಿದೆ. ಇದರಿಂದಾಗಿ ಅವನಿಗೆ ಮಾಂಡಲಿಕ ಕದಂಬನ ಇಲ್ಲವೆ ಸ್ವತಃ ಸೇವುಣ ಅರಸನ ಮಹತ್ವದ ರಾಜಕೀಯ ಆಶ್ರಯ ಹಾಗೂ ಪ್ರಭಾವಗಳು ಇದ್ದವೆಂದು ಕಂಡುಬರುತ್ತದೆ. ಪಶ್ಚಿಮ ಚಾಲುಕ್ಯ ಕಳಚೂರಿ ಹಾಗೂ ಸೇವುಣರ ಬೇರೆ ಬೇರೆ ಅರಸರ ಆಳ್ವಿಕೆಯ ಕಾಲಗಳಲ್ಲಿ ಹಲವು ಜನ ಕಾಳಾಮುಖ ಗುರುಗಳು ನಿಜವಾಗಿಯೂ ಈ ಪದವಿ ತಮ್ಮದೆಂದು ಸಾಧಿಸುತ್ತಿದ್ದರು. [44]

ರಟ್ಟಹಳ್ಳಿಯ ಮೂರುಜಾವಿ-೨ನೆ ಗುರುವಿಗೆ "ಎಪ್ಪತ್ತೇಳು ಸ್ಥಾನಗಳ ಗುರು"ವೆಂಬ (ಸಪ್ತಾಹತ್ತರಿ ಸ್ಥಾನಾಚಾರ್ಯ) ವಿಶೇಷಣವನ್ನು ಬಳಸಲಾಗಿದೆ. ಧಾರವಾಡ ಜಿಲ್ಲೆಯ

---

43. ಅದೇ. ನಂ. 44, ಅಲ್ಲದೆ ನೋಡಿ ಬಿ. ಆರ್. ಗೋಪಾಲ ಮತ್ತು ಎಸ್. ರಿತ್ತಿ, 'Summaries of Inscriptions (1943 - 44 to 1949 - 50) (Dharwar : Kannada Research Institute, 1966), nos. 25 and 26 of 1948 - 49.


44. ಮೇಲೆ ನೋಡಿ - pp. 122 - 25, 163.

ತಿಳಿವಳ್ಳಿಯ ಸಾವಂತೇಶ್ವರ ದೇವಾಲಯ, ಶಿವಮೊಗ್ಗ ಜಿಲ್ಲೆಯ ಹಕ್ಕಲಿನ (ಕುಪ್ಪಟೂರ) ಕೋಟೀಶ್ವರ ದೇವಾಲಯ (ಹಾಗೂ ಅದಕ್ಕೆ ಸಂಬಂಧಿಸಿದ ಈ ನಾಡಿನ ಹಲವಾರು ದೇವಾಲಯ) ಹಾಗೂ ನಾಂದೇಡ ಜಿಲ್ಲೆಯ ಅರ್ಧಾಪುರದ ಮಲ್ಲಿಕಾರ್ಜುನ ಹಾಗೂ ಸರ್ವೇಶ್ವರ ದೇವಾಲಯ, ಕಾಳಾಮುಖ ಸಂಪ್ರದಾಯದ ಶಾಸನಗಳಲ್ಲಿ ಕೂಡ ಇದೇ ಬಗೆಯ ಪ್ರಶಂಸೆಗಳನ್ನು ಕಂಡಿದ್ದೇವೆ. ತಿಳಿವಳ್ಳಿಯ ವಿದ್ಯಾಭರಣ ಗುರುವಿಗೆ "ಕಿಟ್ಟಕ್ರೋಮ ಮಠದ ಬೋಧಕ"ನೆಂಬ ಹೆಚ್ಚಿನ ವಿಶೇಷಣವನ್ನು ನೀಡಲಾದ್ದರಿಂದ ಕಿಟ್ಟಗಾವೆ ಸಂತತಿಯೊಂದಿಗಿನ ಅವನ ಸಂಪರ್ಕವನ್ನು ಇದು ಸೂಚಿಸುತ್ತದೆ. ಪರ್ವತಾವಳಿ ಹಾಗೂ ಶಕ್ತಿ ಪರಿಷತ್ತಿನ ಈ ಕಿಟ್ಟಗಾವೆ ಸಂತತಿಯು ಈ ಮೊದಲು ಆಧುನಿಕ ವಿದ್ವಾಂಸರಿಗೆ ಗೊತ್ತಿರಲಿಲ್ಲ. ರಟ್ಟಹಳ್ಳಿ, ತಿಳಿವಳ್ಳಿ, ದೇವಸ್ಥಾನ ಹಕ್ಕಲು, ಅರ್ಧಾಪುರ ಹಾಗೂ ಧಾರವಾಡ ಜಿಲ್ಲೆಯ ಹರಳಹಳ್ಳಿಯ ಪುರಾವೆಗಳನ್ನು ಒಟ್ಟುಗೂಡಿಸಿದರೆ ಕಿಟ್ಟಗಾವೆ ಸಂತತಿಯು ಕಾಳಾಮುಖರ ಮಹತ್ವದ ಉಪವಿಭಾಗವಿದ್ದು, ಶಿವಮೊಗ್ಗಾ ಜಿಲ್ಲೆಯ ಬಳ್ಳಿಗಾವೆಯಲ್ಲಿ ಕೇಂದ್ರೀಕೃತವಾದ ಮೂವರ ಕೋಣೆಯ ಸಂತತಿಯೊಂದೇ ಬಹಳಷ್ಟು ಮಟ್ಟಿಗೆ ಇದಕ್ಕೆ ಸ್ಪರ್ಧಿಯಾಗಿತ್ತೆಂದು ಕಾಣುತ್ತದೆ.[45]

ಕಾಳಾಮುಖರ ಗೊತ್ತಿದ್ದ ಶಾಖೆ, ಉಪಶಾಖೆಗಳನ್ನು ಕುರಿತು ದೊರಕುವ ಒಟ್ಟು ಮಾಹಿತಿಯ ರೇಖಾಚಿತ್ರ ಮುಂದಿನ ಪುಟದ ಮೇಲಿದೆ :

---

45. ಕಾಳಾಮುಖರಿಗೆ ಸಂಬಂಧಿಸಿದ, ಆದರೆ ಅಷ್ಟೊಂದು ಮಹತ್ವದ್ದಲ್ಲದ್ದರಿಂದ ನನ್ನ Kāpālikas and Kālāmukhas'ದಲ್ಲಾಗಲಿ, ಪರಿಶಿಷ್ಟದಲ್ಲಿ ಇನ್ನೆಲ್ಲಾಗಲಿ ಉಲ್ಲೇಖಿಸದ ಶಾಸನಗಳು ಇಂತಿವೆ: ಗೋಪಾಲ ಮತ್ತು ರಿತ್ತಿ. 'Summaries..... nos. 7 and 25 of 1943 - 44 ; nos. 8, 11, 13 and 17 of 1948 - 49, nos. 3, 1, and 7 of 1949 - 50. ಇವುಗಳಲ್ಲಿ ಕೆಲವನ್ನು Karnatak Inscriptions, vol. 4, ಸಂ. ಎ. ಎಮ್. ಅಣ್ಣಿಗೇರಿ (Dharwar : Kannada Research Institute, 1961), nos. 40, 39, 22 ಮತ್ತು 3 ರಲ್ಲಿ ಪ್ರಕಟಿಸಲಾಗಿದೆ. ಅಲ್ಲದೆ ನೋಡಿ Archaeological Survey of India, ARIE for 1958 - 59 (Delhi, 1963, stone no. 59) (Niḍanēgila) ; ARIE for 1960 - 61 (1964), stone nos. 454, 468, ARIE for 1962 - 63 (1967), stone nos. 796, 797, ARIE for 1965 - 66 (1970), stone no. 398, ARIE for 1967 - 68 (1979), stone nos. 330, 331, 333, ARIE for 1970 - 1971 (1979), stone no. 137, ARIE for 1972 - 73 (1983), stone nos. 64, 65, 80.


ಕಾಳಾಮುಖರು
ಶಕ್ತಿಪರಿಷತ್ತು
ಸಿಂಹಪರಿಷತ್ತು
(ಆಂಧ್ರಪ್ರದೇಶ, ಕರ್ನಾಟಕ)
ಪರ್ವತಾವಳಿ
ಭುಜಂಗಾವಳಿ
ಇಟ್ಟಿಗೆ ಸಂತತಿ
(ಮತ್ತಿಕೋಟೆ, ಶಿವಮೊಗ್ಗ ಜಿಲ್ಲೆ)
ಮೂವರ ಕೋಣೆಯ ಸಂತತಿ
(ಬಳ್ಳಿಗಾವೆ, ಶಿವಮೊಗ್ಗ ಜಿಲ್ಲೆ)
ಬೆಳ್ಳೆಯ ಸಂತಾನ
(ಪುಲಿಗೆರೆ, ಧಾರವಾಡ ಜಿಲ್ಲೆ)
ಕಿಟ್ಟಗಾವೆ ಸಂತತಿ
(ತಿಳಿವಳ್ಳಿ, ಮುಂ. ಧಾರವಾಡ ಜಿಲ್ಲೆ)
ಶಿವಲಿಂಗಿ ಸಂತತಿ
(ಪಿಪ್ಪಲಗ್ರಾಮ,
ಉಸ್ಮಾನಾಬಾದ ಜಿಲ್ಲೆ)

ಕಾಳಾಮುಖರನ್ನು ಕುರಿತಾದ ಪ್ರೌಢ ಸಂಶೋಧನೆ ಇನ್ನೂ ತನ್ನ ಆರಂಭದ ದೆಸೆಯಲ್ಲಿದ್ದು, ವಿಶೇಷವಾಗಿ ಎರಡು ಕ್ಷೇತ್ರಗಳಲ್ಲಿ ಇನ್ನೂ ಬಹಳಷ್ಟು ಕೆಲಸ ನಡೆಯಬೇಕಿದೆ. ಮೊದಲ ಸಮಸ್ಯೆಯೆಂದರೆ ಈ ಗುರು ಯತಿಗಳಿಗೆ, ಇವರ ಮಠಗಳು ಹಾಗೂ ದೇವಾಲಯಗಳಿಗೆ ದೊರಕುತ್ತಿದ್ದ ಆರ್ಥಿಕ ಹಾಗೂ ಸಾಮಾಜಿಕ ಸಹಾಯಗಳ ಮೂಲಗಳನ್ನು ಕುರಿತದ್ದು. ಶಾಸನಗಳು ಇದಕ್ಕೆ ಸಂಬಂಧಿಸಿದ ಸಾಕಷ್ಟು ಮಾಹಿತಿಯನ್ನು ಒಳಗೊಂಡಿವೆಯಾದರೂ ಆರ್.ಎನ್.ನಂದಿ ಅವರ ಮೂಲಗಾಮಿ (Pioneering) ಅಧ್ಯಯನಗಳು ಉಪಲಬ್ಧವಿದ್ದು, ಅವು ಈ ದತ್ತಮಾಹಿತಿಯನ್ನು (ಡಾಟಾ) ವಿಶ್ಲೇಷಿಸುವ ಗಂಭೀರ ಯತ್ನಗಳಾಗಿ ಕಾಣುತ್ತವೆ.[46] ವಿಕಸನಗೊಳ್ಳುತ್ತ ಬಂದಿದ್ದ ಕಾಳಾಮುಖ ಚಳುವಳಿಯ ಅಡಿಪಾಯ ಎನ್ನಿಸಿದ ದೇವಾಲಯಗಳ ಆಸ್ತಿಯಾದ ಹೊಲಗಳ ದೊಡ್ಡ ಪ್ರಮಾಣದ ಹಿಡುವಳಿ ಹಾಗೂ ವ್ಯವಹಾರಗಳನ್ನು ಮುಂದಿನ ಕಾಲದಲ್ಲಿ ಸ್ಮಾರ್ತ ಬ್ರಾಹ್ಮಣ, ಒಕ್ಕಲಿಗ, ಹಾಗೂ ಕಸಬಿನವರನ್ನೊಳಗೊಂಡ ವೀರಶೈವರು ನಿರಾಕರಿಸಿದುದನ್ನು ನಂದಿಯವರು ಈ ಪಂಗಡ, ಸಂಪ್ರದಾಯಗಳ ಆಸಕ್ತಿಗಳು ಆ ದೊಡ್ಡ ದೊಡ್ಡ ದೇವಾಲಯಗಳ ಆಸಕ್ತಿಗಳೊಂದಿಗೆ ಸರಿಹೊಂದುವಂತಿರಲಿಲ್ಲವೆಂದು ವಾದಿಸುತ್ತಾರೆ. ಇವರ ಪ್ರೌಢಪ್ರಬಂಧವೇನೋ ತುಂಬ ಆಕರ್ಷಕವಾದುದು. ಆದರೆ ಅವರು ಕಲ್ಯಾಣದ ಪಶ್ಚಿಮ ಚಾಲುಕ್ಯರ ಪತನ ಹಾಗೂ ಮುಂದಿನ ಕಾಲದಲ್ಲಿ ಮುಸಲ್ಮಾನರು ಈ ಅರಸುಮನೆತನದವರಿಂದ ರಾಜ್ಯಾಡಳಿತೆಯನ್ನು ವಶಪಡಿಸಿಕೊಂಡಂತಹ ಚಿಕ್ಕದೊಡ್ಡ ಐತಿಹಾಸಿಕ, ಘಟನೆಗಳ ಪ್ರಭಾವವನ್ನು ಅಳೆದು ನೋಡುವಲ್ಲಿ ಸೋಲನ್ನಪ್ಪಿರುವರು. ಪ್ರಾಯೋಗಿಕವಾದ ಈ ಪುರಾವೆಯನ್ನು ಕುರಿತು ಹೆಚ್ಚು ಆಳವಾದ ಹಾಗೂ ವಿವರವಾದ ಪರೀಕ್ಷೆ ಅವಶ್ಯವಿದೆ.

ಎರಡನೆಯ ಸಮಸ್ಯೆಯೆಂದರೆ ವೀರಶೈವರಿಂದ ಕಾಳಾಮುಖರ ದೇವಾಲಯಗಳನ್ನು ವಶಪಡಿಸಿಕೊಳ್ಳಲಾದ ಪ್ರಕ್ರಿಯೆ ಹಾಗೂ ಕಾಳಾಮುಖರು ಮತ್ತು ವೀರಶೈವರ ನಡುವಣ ಐತಿಹಾಸಿಕ ಸಂಬಂಧಗಳ ರೀತಿ ಹಾಗೂ ಅವರ ಪ್ರಮಾಣಗಳನ್ನು ನಿರ್ಧರಿಸುವುದನ್ನು ಕುರಿತಾದುದು. ನಾನು ಎರಡನೆಯ ಸಮಸ್ಯೆಯನ್ನು ಕುರಿತು ಇಲ್ಲಿ ಇನ್ನಷ್ಟು ಚರ್ಚಿಸಲಿದ್ದೇವೆ.

ಹದಿಮೂರನೆಯ ಶತಮಾನದ ಮಧ್ಯದ ವೇಳೆಗೆ ಕಾಳಾಮುಖಯತಿಗಳನ್ನು ಕುರಿತಾದ ಶಾಸನಗಳು ಒಮ್ಮೆಲೆ, ಅಲ್ಲದೆ ತುಸುಮಟ್ಟಿಗೆ ಗೂಢವಾದ ರೀತಿಯಲ್ಲಿ ತುಂಬ ವಿರಳವಾಗುತ್ತವೆ. ಕಾಳಾಮುಖಯತಿಗಳನ್ನು ಕುರಿತು ಉಲ್ಲೇಖಿಸುವ ತೀರ ಮುಂದಿನ ಕಾಲದ ಶಾಸನವೆಂದರೆ ಶಿವಮೊಗ್ಗೆ ಜಿಲ್ಲೆಯ ದೇವಸ್ಥಾನ ಹಕ್ಕಲು (ಕುಪ್ಪಟೂರ) ಗ್ರಾಮದಲ್ಲಿದೆ. ಇದು ಕ್ರಿ. ಶ. 1280 ಕ್ಕೆ ಸಂಭಂಧಿಸಿದುದಾಗಿದೆ. ಇದಕ್ಕೆ ಸ್ವಲ್ಪ ಹಿಂದಿನದು ಬೆಳಗಾವಿ

46. ಆರ್. ಎನ್. ನಂದಿ, 'Religious Institutions and Cults of the Deccan (Delhi : Motilal, 1973), pp. 76-90 ; "Origin and Nature of Saivite Monasticism : The Case of the Kalamukhas" ಆರ್.ಎಸ್.ಶರ್ಮ ಮತ್ತು ಪಿ.ಝಾ ಅವರ 'Indian Society : Historical Probings (New Delhi : People's Publishing House, 1974), pp. 190-201, "Origin of the Virasaiva Movement" The Indian Historical Review, 2 (1975), 32-46 ; and his "Introduction" to the new edition of ಎಸ್.ಸಿ. ನಂದೀಮಠ, A handbook of Virasaivism (Delhi : Motilal, 1979).

ಜಿಲ್ಲೆಯ ಮುನವಳ್ಳಿಯದು. ಇದರ ಕಾಲ ಕ್ರಿ.ಶ.1252.[47] ಇವೆರಡೂ ಶಾಸನಗಳು ಸೇವುಣ ಅರಸರ ಕಾಲಕ್ಕೆ ಸಂಬಂಧಿಸಿದವುಗಳು. ಅಲ್ಲಿಂದ ಮುಂದಕ್ಕೆ ಸುಮಾರು ಒಂದು ನೂರು ವರ್ಷಗಳಿಗಿಂತಲೂ ಹೆಚ್ಚಿನ ಕಾಲ ಕಾಳಾಮುಖರ ಎಲ್ಲ ಸ್ಥಾನಗಳಲ್ಲೂ ಶಾಸನಗಳು ಮೌನತಳೆದಂತಿದೆ. ಆ ಮೇಲೆ, ಹದಿನಾಲ್ಕನೆಯ ಶತಮಾನದ ಕೊನೆಯಿಂದ ಮುಂದೆ ಬಹಳಷ್ಟು ಊರುಗಳಲ್ಲಿ ಈ ಶಾಸನಗಳು ಮತ್ತೆ ಕಾಣಿಸಿಕೊಳ್ಳತೊಡಗುತ್ತವೆ. ಆದರೂ ಕೂಡ ಈ ವೇಳೆಗೆಂದರೆ ಬಹುಮಟ್ಟಿಗೆ ದೇವಾಲಯ ಹಾಗೂ ಮಠಗಳೆಲ್ಲ ವೀರಶೈವ ಯತಿಗಳ ಕೈಗೆ ಬಂದಿವೆ. ಕ್ರಿ.ಶ.1200ರ ವರೆಗೆ ಉತ್ತರ ಕರ್ನಾಟಕ ಹಾಗೂ ಸುತ್ತಲ

47. ಸಂ. ಮತ್ತು ಅನು. ಬಿ.ಎಲ್.ರೈಸ್, 'Epigraphica Carnatica, old. vol. 8, Sb 275 ಹಾಗೂ ಸಂ. ಮತ್ತು ಅನು ಜೆ. ಎಫ್. ಫ್ಲೀಟ್, 'Journal of the Bombay Branch of the Royal Asiatic Society', 12 (1876), 1-50, ಅನುಕ್ರಮವಾಗಿ. ಎರಡನೆಯ ಶಾಸನವನ್ನು 'Karnatak Inscriptions, vol. I ದಲ್ಲಿ ಮರುಸಂಪಾದನೆಗೆ ಒಳಪಡಿಸಲಾಗಿದ್ದು ಸಂ. ಆರ್. ಎಸ್. ಪಂಚಮುಖಿ (Dharwar : Kannada Research Office, 1941). ಮೇಲಕ್ಕೆ ನೋಡಿ - pp. 100, 123. ಅಲ್ಲದೆ ನೋಡಿ, ಬಿ. ಎಲ್. ರೈಸ್‌ರ, 'Epigraphica Carnatica, old vol. 12, ತಿಪಟೂರ 12 ದಲ್ಲಿ ತುಮಕೂರ ಜಿಲ್ಲೆಯ ಕ್ರಿ.ಶ.1285ರ ಶಾಸನದಲ್ಲಿ ಲಾಕುಲ ಪದ್ಧತಿಯನ್ನು ಬೆಂಬಲಿಸುವವನೊಬ್ಬನನ್ನು ಸಮೂದಿಸಲಾಗಿದೆ. ಇದಲ್ಲದೆ ನೋಡಿ, ಕೆ. ಎ. ನೀಲಕಂಠಶಾಸ್ತ್ರಿಯವರ, 'Epigraphica carnatica, old vol. 16 (1958), Gb 76 ಯಲ್ಲಿ ತುಮಕೂರ ಜಿಲ್ಲೆಯ ಕ್ರಿ.ಶ.1252ರ ಶಾಸನದಲ್ಲಿ ಒಬ್ಬ ಶಿವಯೋಗಿ ಚಿಕ್ಕ ಅಘಮ್ಮೆದೇವ ಹಾಗೂ ಅವನ ಆಧ್ಯಾತ್ಮಿಕ ಮಗನಾದ ಚಿಕ್ಕದೇವನನ್ನು ಸಮೂದಿಸಲಾಗಿದೆ. ಕೆ. ಎ. ನೀಲಕಂಠ ಶಾಸ್ತ್ರಿಗಳು (ಅದೇ, ಪು.19) ದಾಘವನ್ನು ಪಡೆದವರು ಲಿಂಗಾಯತರಾಗಿರಬಹುದೆಂದು ಯೋಚಿಸುತ್ತಾರಾದರೂ ಅವರು ಕಾಳಾಮುಖರಾಗಿರುವ ಸಾಧ್ಯತೆಯಿದೆ. ಇದೂ ಅಲ್ಲದೆ ನೋಡಿ, ಎಮ್.ಎಚ್.ಕೃಷ್ಣರ, 'Epigraphica Carnatica' old vol. 15 (1943). HN 112 ದಲ್ಲಿ ಹಾಸನ ಜಿಲ್ಲೆಯ 1292 ಕ್ರಿ.ಶ.ದ ಶಾಸನವು ಶ್ರೀ ಪರ್ವತದ ಮಲ್ಲಿಕಾರ್ಜುನ ದೇವರಿಗೆ ಸಂಬಂಧಿಸಿದ ಪರ್ವತಯ್ಯನೆಂಬ ಯತಿಯ ಜೀವನ ಚರಿತ್ರೆ ಹಾಗೂ ಅವನ ಪವಾಡಗಳನ್ನು ನಿರೂಪಿಸುತ್ತದೆ. ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಲ್ಲಿರುವ ಮಧುಕೇಶ್ವರ ದೇವಾಲಯದ ಕ್ರಿ.ಶ.1368ರ ಶಾಸನವು ಲಕುಲೇಶ್ವರದೇವನ ಮಗನಾದ ಬಿಕ್ಕಿದೇವನಿಗೆ ನೀಡಲಾದ ಒಂದು ದತ್ತಿಯನ್ನು ದಾಖಲಿಸುತ್ತದೆ. ಇದೇ ಸ್ಥಳದ ಹಾಗೂ ಇದೇ ಮಿತಿಯ ಇನ್ನೊಂದು ಶಾಸನವು ಲಾಕುಲೀಶ್ವರನ ಮಗನಾದ ಚಿಕ್ಕದೇವನಿಗೆ ನೀಡಲಾದ ಒಂದು ದತ್ತಿಯನ್ನು ದಾಖಲಿಸುತ್ತದೆ. ಇವರಿಬ್ಬರೂ ಒಬ್ಬನೇ ವ್ಯಕ್ತಿಗಳಾಗಿರುವಂತಿವೆ. (ನೋಡಿ ವಸುಂಧರ ಫಿಲಿಯೋಜ, L' Epigraphie de Vijayanagar du d'ebut a 1377 [Paris : E'cole francaise d'extreme - orient, 1973]. no. 88, 90). ಈ ಅರ್ಚಕರನ್ನು 'ರಾಯ ರಾಜಗುರು' ಎನ್ನಲಾಗಿದೆಯಲ್ಲದೆ ಅವರಲ್ಲಿ "ಶಿವ ಸಿದ್ಧಾಂತವೆಂಬ (ಸಿವ ಸಮಯ) ಸಾಗರವನ್ನು ಉಕ್ಕೇರಿಸುವ ಶರದೃತುವಿನ ಚಂದ್ರಮನ ಕಾಂತಿ" ಇತ್ಯೆಂದು ಹೇಳಲಾಗಿದೆ. ಅವರು ಕಾಳಾಮುಖರಾಗಿರುವುದಕ್ಕಿಂತಲೂ ಪಾಶುಪತರಾಗಿರುವ ಸಾಧ್ಯತೆ ಹೆಚ್ಚು. ಪಾಶುಪತರು 1584 ಕ್ರಿ.ಶ.ದಲ್ಲಿ ತ್ರೀಚಿನಾಪಲ್ಲಿ ಜಿಲ್ಲೆಯ ತಿರುವಾನೈಕ್ಕದಲ್ಲಿ ಆಗಲೂ ಸಕ್ರಿಯರಾಗಿದ್ದರು. (ನೋಡಿ ಟಿ. ವಿ. ಮಹಾಲಿಂಗಮ್, "A Family of Pāśupata Gṛhastha at Jambukēsvaram" Journal of Oriental Research, Madras, 25 [1957], 79-85).

ನಾಡಿನಲ್ಲೆಲ್ಲ ಪ್ರಬಲ ಧಾರ್ಮಿಕ ಶಕ್ತಿಯೆನ್ನಿಸಿದ್ದ ಕಾಳಾಮುಖರು ಒಮ್ಮೆಲೇ ಕಣ್ಮರೆಯಾದರು.[48]

ಧಾರವಾಡ ಜಿಲ್ಲೆಯ ತಿಳಿವಳ್ಳಿಯ ಸಾವಂತೇಶ್ವರನ ದೇವಾಲಯವನ್ನು ಉದಾಹರಣೆಗೆಂದು ಎತ್ತಿಕೊಳ್ಳುವುದಾದರೆ, ವೀರಶೈವ ಬಸವೇಶ್ವರನ ಪ್ರತಿಮೆಯ (ಲಿಂಗ?) ಸ್ಥಾಪನೆಯಾದ ಬಗೆಗೆ ಹದಿನೈದು ಅಥವಾ ಹದಿನಾರನೆಯ ಶತಮಾನದ ಒಂದು ಶಾಸನವನ್ನು ಕಾಣುತ್ತೇವೆ.[49] ಇದೇ ರೀತಿ ಆಂಧ್ರಪ್ರದೇಶದ ಶ್ರೀಶೈಲದಲ್ಲಿರುವ ಮಲ್ಲಿಕಾರ್ಜುನನ ಹೆಸರಾದ ತೀರ್ಥಕ್ಷೇತ್ರವು ಭಿಕ್ಷಾವೃತಿ ಹೆಸರಿನ ವೀರಶೈವಮಠದ ಕ್ಷೇತ್ರವಾಗಿದೆ. ಇದನ್ನು ಕುರಿತು ಮೊಟ್ಟಮೊದಲು ಗೆ 1385 ಕ್ರಿ.ಶ.ದ ದತ್ತಿ ಶಾಸನದಲ್ಲಿ ನಮೂದಿಸಲಾಗಿದ್ದು ಶ್ರೀಶೈಲದ 1506 ಕ್ರಿ.ಶ.ದ ತಾಮ್ರಪಟ ಶಾಸನದಲ್ಲಿ ವಿವರವಾಗಿ ಬಣ್ಣಿಸಲಾಗಿದೆ.[50]

48. ಸುಮಾರಾಗಿ ಇದೇ ಬಗೆಯ ಸನ್ನಿವೇಶವು ರಾಜಸ್ಥಾನದ ಉದಯಪುರ ಹತ್ತಿರದ ಪಾಶುಪತರದ್ದಾದ ಏಕಲಿಂಗಜೀ ದೇವಾಲಯದ ಸಂದರ್ಭದಲ್ಲಿ ಕಂಡುಬರುತ್ತದೆ. 971 ಕ್ರಿ.ಶ.ದ, ಅಲ್ಲಿ ದೊರೆತ ಒಂದು ಶಾಸನವು ಪಾಶುಪತ' ಸಂಪ್ರದಾಯದ ಸಂಸ್ಥಾಪಕನಾದ ಲಕುಲೀಶನ ಇತಿಹಾಸದೊಂದಿಗೆ ನಂಟುಗೂಡಿಸುತ್ತದೆ (ಸಂ. ಡಿ. ಆರ್. ಭಾಂಡರಕರ, JBBRAS, 22[1904-07] 151-65). ಪಾಶುಪತರು ಹದಿಮೂರನೆಯ ಶತಮಾನದ ಕೊನೆಯವರೆಗಾದರೂ ಈ ನಾಡಿನಲ್ಲಿ ಅಸ್ತಿತ್ವದಲ್ಲಿದ್ದರು. ಆದರೆ, ಏಕಲಿಂಗಜೀ ದೇವಾಲಯದ ಸಾಂಪ್ರದಾಯಿಕ ಇತಿಹಾಸವನ್ನು ಸಂಸ್ಕೃತದಲ್ಲಿ ಬರೆಯುವ ಕಾಲಕ್ಕೆ ಪಾಶುಪತರನ್ನು ಉಲ್ಲೇಖಿಸಿಯೂ ಇಲ್ಲ. ನೋಡಿ 'ಏಕಲಿಂಗ ಮಹಾತ್ಮ್ಯಮ್, ಸಂ. ಪ್ರೇಮಲತಾ ಶರ್ಮಾ (Delhi : Motilal, 1976)

49. ಗೋಪಾಲ ಮತ್ತು ರಿತ್ತಿ, 'Summaries ........, no. 53 of 1945 - 46.

50. ನೋಡಿ ಸಿಂಥಿಯಾ ಟ್ಯಾಲ್ಬೊಟ್, "Gōlaki Matha Inscriptions from Andhra : A Study of a Śaiva Monastic Lineage". ಎ. ಎಮ್. ಶಾಸ್ತ್ರಿ ಮತ್ತು ಆರ್. ಕೆ. ಶರ್ಮ (ಸಂ. ರು,) ಬಾಜಪೇಯ (ಕೆ.ಡಿ.ಬಾಜಪಾಯಿ ಗೌರವಗ್ರಂಥ)ದಲ್ಲಿ (Dalhi, ಆಗಮ ಕಲಾ ಪ್ರಕಾಶನ, 1987), pp. 133-46. ಇವೆರಡೂ ಶಾಸನಗಳು ಅನುಕ್ರಮವಾಗಿ 'South Indian Inscriptions'. vol. 16, 7ದಲ್ಲಿ ಹಾಗೂ 'Epigraphica Andhrica' vol. 1, ಸಂ. ಎನ್. ವೆಂಕಟರಮಣಯ್ಯ (Hyderabad : Andhra Pradesh, Director of Archaeology and museum, 1969), pp 44 - 51, ಗಳಲ್ಲಿ ಸಂಪಾದಿತಗೊಂಡಿವೆ. ಈ ಸಂಕ್ರಮಣವನ್ನು ಕುರಿತಾದ ಇನ್ನಿತರ ಉದಾಹರಣೆಗಳನ್ನು ಮೇಲೆ ನಮೂದಿಸಲಾಗಿದೆ. pp. 167-72. ಈ ಸಂಕ್ರಮಣದ ಮೇಲೆ ಇನ್ನಷ್ಟು ಬೆಳಕು ಬೀರಬಲ್ಲ ಸಾಹಿತ್ಯಕೃತಿಯೆಂದರೆ ಹದಿಮೂರನೆಯ ಶತಮಾನದ ಸುಮಾರಿಗೆ ಪಾಲ್ಕುರಿ ಸೋಮನಾಥನಿಂದ ತೆಲುಗಿನಲ್ಲಿ ಬರೆಯಲಾದ ವೀರಶೈವಪಠ್ಯವೆಂದರೆ 'ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತ್ರಮು' ಎಂಬುದು. ನೋಡಿ ಎಮ್.ರಾಮರಾವ್, The Temples of Śrīśailam' (Hyderabad: Govt. of Andhra Pradesh, 1967). ಕರ್ನೂಲ ಜಿಲ್ಲೆಯವನಾದ ಲಿಂಗಲನು ಶ್ರೀಶೈಲದ ಮಲ್ಲಿಕಾರ್ಜುನ ದೇವರಿಗೆ 1293 ಕ್ರಿ.ಶ.ದಲ್ಲಿ ನೀಡಲಾದ ದತ್ತಿಯನ್ನು (APRE 244 of 1966) ಸ್ವೀಕರಿಸಿದ ಕಲ್ಮಠದ ಯತಿ ಗುರು ಪರಮಶಿವನು ಬಹುಶಃ ಕಾಳಾಮುಖನಾಗಿರಬಹುದೆಂದು ಟ್ಯಾಲ್ಬೊಟ್ (ಪು.137 ಹಾಗೂ ಟಿಪ್ಪಣಿ,8) ಅವರು ಸೂಚಿಸುತ್ತಾರೆ. ಇತ್ತೀಚಿನದಾಗಿರುವ ಈ ಸಾಧ್ಯತೆಯನ್ನು ಕಡಿಮೆ ಮಾಡುತ್ತಿದ್ದರೂ ಕಲ್ಮಠವನ್ನು 'ಕಲ್ಲು' ಹಾಗೂ 'ಶಿಲಾ' ಮಠಗಳೊಂದಿಗೆ ನಂಟುಗೂಡಿಸುವುದು ಸರಿಯೆಂದೇ ಕಾಣುತ್ತದೆ. ಟ್ಯಾಲ್ಬೊಟ್‌ರು (pp. 140 - 41) ಅಸಂಖ್ಯಾತ ಮಹೇಶ್ವರರೆಂದು ಶ್ರೀಶೈಲದ ಕ್ರಿ.ಶ.1313 ಹಾಗೂ ಕ್ರಿ.ಶ.1315ರಲ್ಲಿ (ARIE 41 of 1915) ಕಂಡುಬರುವವರನ್ನು ವೀರಶೈವರೆಂದು ತಾತ್ಪೂರ್ತಿಕವಾಗಿ ಹೇಳುತ್ತಾರೆ. ಇವು (ಹಾಗೂ SII 10, 503 ಕ್ಕೆ 1312] ಶ್ರೀಶೈಲಮ್‌ದಲ್ಲಿಯೇ ದೊರೆತ ಎಲ್ಲಕ್ಕೂ ಹಳೆಯ ದಾಖಲೆಗಳಾಗಿದ್ದಂತೆ ಕಾಣುವಾಗಲೇ ಇವಕ್ಕೂ ಮೊದಲಿನ ಶಾಸನಗಳನ್ನು ಬೇಕೆಂದೇ ನಾಶಪಡಿಸಲಾಗಿರಬಹುದಾದ ಸಾಧ್ಯತೆಯನ್ನು ಸೂಚಿಸುತ್ತವೆ (ನೋಡಿ ಟ್ಯಾಲ್ಬೊಟ್, ಪು. 140).

ಭಿಕ್ಷಾವೃತ್ತಿ ಮಠವು ಶ್ರೀಶೈಲದ ಈ ಮೊದಲಿನ ಗೊಳಕಿ ಮಠದೊಂದಿಗೆ ಕೂಡ ಐತಿಹಾಸಿಕ ಸಂಪರ್ಕವನ್ನು ಹೊಂದಿತ್ತೆಂದು ಸಿಂಥಿಯಾ ಟ್ಯಾಲ್ಬೊಟ್ ಅವರು ತೋರಿಸಿಕೊಟ್ಟಿರುವರು. ಗೊಳಕಿ ಮಠದ ಯತಿಗಳು ಶೈವ ಸಿದ್ಧಾಂತದ ಸಂಪ್ರದಾಯಕ್ಕೆ ಸೇರಿದವರಾಗಿದ್ದಂತೆ ಕಾಣುತ್ತದೆ.[51]

ಕಾಳಾಮುಖರು ಕಣ್ಮರೆಯಾದುದನ್ನು ಕುರಿತು ಅರ್ಥ ಮಾಡಿಕೊಳ್ಳುವುದು ಹೇಗೆ? ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಅಂಶಗಳಂತೂ ಇದ್ದಿರಲೇಬೇಕು. ಶಾಸನಗಳು ಹಾಗೂ ಸಾಹಿತ್ಯಗಳ ಜೊತೆಗೆ ಪ್ರತ್ಯಕ್ಷವಾಗಿ ದೇವಾಲಯಗಳಿದ್ದಲ್ಲೆಲ್ಲ ನೇರ ಕ್ಷೇತ್ರಸಂಶೋಧನ ಕಾರ್ಯವು ವಿಸ್ತೀರ್ಣವಾಗಿ ನಡೆಯುವವರೆಗೂ ಈ ಪ್ರಶ್ನೆಯನ್ನು ಕುರಿತಾದ ಯಾವುದೇ ವಿಶ್ಲೇಷಣೆ ಬಹುಮಟ್ಟಿಗಿನ ಒಂದು ಊಹೆ ಮಾತ್ರವಾಗಿ ಉಳಿಯಲಿದೆ. ತುಸು ಹೆಚ್ಚಿನ ಮಟ್ಟಿಗೆ ಇತಿಹಾಸದಲ್ಲಿ ಹಿಂದಕ್ಕೆ ಗುರುತಿಸುತ್ತ ಹೋಗಬಹುದಾದ ಒಂದು ಪ್ರಾಥಮಿಕ ಪ್ರಶ್ನೆಯು ಕಾಳಾಮುಖರಿಂದ ವೀರಶೈವರತ್ತಲಿನ ಐತಿಹಾಸಿಕ ಮುಂದುವರಿಕೆಗೆ ಸಂಬಂಧ ಪಟ್ಟುದಾಗಿದೆ. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ, ವೀರಶೈವ ನಂಬಿಕೆ ಹಾಗೂ ಮತಾಚರಣೆಗಳ ರೂಪಲಕ್ಷಣಗಳು ಕಾಳಾಮುಖ - ಪಾಶುಪತರ ನಂಬಿಕೆ ಹಾಗೂ ಮತಾಚರಣೆಗಳ ವಿಕಸನಗಳಾಗಿವೆ ಎಂದೆನ್ನಲು ಸಾಧ್ಯವೆ ? ಇಪ್ಪತ್ತು ವರ್ಷಗಳಿಗಿಂತಲೂ ಹಿಂದಕ್ಕೆ ಬರೆಯುವಾಗ ನಾನು ಮುಂದಿರಿಸಿದ ವಾದವು ಹೀಗಿತ್ತು : "ಬಸವನನ್ನು ಲ್ಯೂಥರ್‌ನ ಪಾತ್ರಕ್ಕೆ ಅಳವಡಿಸಿದ ವೀರಶೈವ ಚಳುವಳಿಯು ಕಾಳಾಮುಖ ಮಠಸಂಪ್ರದಾಯದಿಂದ ಒಡೆದು ಹೊರಬಂದ ಒಂದು ಸುಧಾರಣಾವಾದಿ ಸಂಪ್ರದಾಯವಾಗಿದೆ." [52] ಇಂದು ಇದನ್ನು ಕುರಿತು ಇನ್ನೊಮ್ಮೆ ಯೋಚಿಸಲಾಗಿ, ಈ ನನ್ನ ಅಭಿಪ್ರಾಯದಲ್ಲಿ ತುಸುಮಟ್ಟಿಗಿನ ಮಾರ್ಪಾಟು ಅವಶ್ಯವೆನ್ನಿಸುತ್ತದೆ.

ಇವೆರಡೂ ಚಳುವಳಿಗಳಲ್ಲಿ ಏನಿಲ್ಲೆಂದರೆ ಒಂದು ಬಗೆಯ ಐತಿಹಾಸಿಕ ಸಾತತ್ಯವಾದರೂ ಇದೆಯೆಂಬುದನ್ನು ನಿರಾಕರಿಸುವಂತಿಲ್ಲ.[53] ಈ ಹೋಲಿಕೆಯನ್ನು ಕಾಳಾಮುಖರು ಹಾಗೂ ವೀರಶೈವರಿಬ್ಬರೂ ಶಿವೋಪಾಸಕರೆಂಬ ಸಂಗತಿಯಿಂದ ಆರಂಭಿಸಬಹುದು. ಇವೆರಡೂ ಸಂಪ್ರದಾಯಗಳು ಶಿವನ ಲಿಂಗರೂಪದ ಆರಾಧನೆಗೆ ಒತ್ತು ಕೊಡುತ್ತವೆ. ವೀರಶೈವ ಯತಿಗಳಂತೆಯೇ ಕಾಳಾಮುಖ ಯತಿಗಳನ್ನೂ ಕೂಡ ಕೆಲವು ಸಲ 'ಜಂಗಮ' ಇಲ್ಲವೆ 'ಜಂಗಮಲಿಂಗ'ವೆಂದು ('ಚರಲಿಂಗ') ಕರೆಯಲಾಗುತ್ತದೆ. ಇವೆರಡೂ ಚಳುವಳಿಗಳ ಭೌಗೋಲಿಕ ವ್ಯಾಪ್ತಿ ಹಾಗೂ ಸಾಂದ್ರತೆಗಳು ಒಂದೇ ಬಗೆಯಾಗಿದ್ದು ಮೊದಲಿನ ಹಲವು ಕಾಳಾಮುಖ ದೇವಾಲಯಗಳು ಮುಂದಿನ ಕಾಲದಲ್ಲಿ ವೀರಶೈವರಿಂದ

51. ನೋಡಿ ಟ್ಯಾಲ್ಬೊಟ್, pp. 134-41.
52. ಮೇಲೆ ನೋಡಿ - pp. 167-68.
53. ಈ ಪರಿಚ್ಛೇದದಲ್ಲಿ ಒತ್ತು ಕೊಡಲಾದ ಸಂಗತಿಗಳನ್ನು ಮೇಲಿನ pp. 167-72 ಗಳಲ್ಲಿ ಪೂರ್ತಿಯಾಗಿ ದಾಖಲಿಸಲಾಗಿದೆ.

ವ್ಯಾಪಿಸಲ್ಪಟ್ಟವು. ಇವೆರಡೂ ಚಳುವಳಿಗಳ ಬೌದ್ಧಿಕ ಕೇಂದ್ರಗಳೆಂದರೆ ಅವುಗಳ ಬೃಹತ್ ಮಠಗಳು. ಪಾಶುಪತ ಹಾಗೂ ವೀರಶೈವರ ದೇವತಾಶಾಸ್ತ್ರಗಳಲ್ಲೂ ಕೆಲವು ಸೈದ್ಧಾಂತಿಕ ಸಾಮ್ಯಗಳಿವೆ. ಹೀಗಾಗಿ, ಆಗ ಕಳಚೂರಿ ಬಿಜ್ಜಳನ (ಇಸವಿ 1145-1167 ಕ್ರಿ.ಶ.) ಮಂತ್ರಿಯಾಗಿದ್ದನೆಂದು ಹೇಳಲಾದ ಬಸವನು ರಾಜ್ಯದ ಬೊಕ್ಕಸದಿಂದ ದೊಡ್ಡ ದೊಡ್ಡ ಮೊತ್ತಗಳಲ್ಲಿ ಹಣವನ್ನು ದಾನ ನೀಡಿದನೆಂದು ಹೇಳುವ ಜಂಗಮರು ಬೇರಾರೂ ಆಗಿರದೆ ಕಾಳಾಮುಖರೇ ಆಗಿದ್ದರು.

ಇದಲ್ಲದೆ, ಏಕಾಂತದ ರಾಮಯ್ಯನನ್ನು ಕುರಿತು ಸಂದಿಗ್ಧತೆಯಿದೆ. ವೀರಶೈವ ಸಾಹಿತ್ಯದಲ್ಲಿ ಅವನನ್ನು ನಿರ್ದಿಷ್ಟವಾಗಿ ವೀರಶೈವನೆಂದೆನ್ನದೆ ಒಬ್ಬ ಮಹಾಶೈವನೆಂದು ಬಣ್ಣಿಸಲಾಗಿದೆ. ಬಿಜ್ಜಳನ ಕಾಲಕ್ಕೆ ಪಡೆಯಲಾದ ಜೈನರ ಮೇಲಿನ ವಿಜಯವನ್ನು ಕುರಿತು 'ಚನ್ನಬಸವ ಪುರಾಣ' ಹಾಗೂ ಧಾರವಾಡ ಜಿಲ್ಲೆಯ ಅಬ್ಬಲೂರಿನ ಸೋಮೇಶ್ವರ ದೇವಾಲಯದ ಮಿತಿಯನ್ನು ಒಳಗೊಂಡ 1200ಕ್ರಿ.ಶ.ದ ಸುಮಾರಿಗಿನ ಶಾಸನದಲ್ಲಿ ಬಣ್ಣಿಸಲಾಗಿದೆ.[54] 1144ರವರೆಗಾದರೂ ಕಾಳಾಮುಖರ ನಿಯಂತ್ರಣದಲ್ಲಿತ್ತೆಂದು ಬೇರೆ ಆಕರಗಳಿಂದ ತಿಳಿದು ಬರುವ ಅಬ್ಬಲೂರಿನ ಬ್ರಹ್ಮೇಶ್ವರ ದೇವಾಲಯದಲ್ಲಿ ಏಕಾಂತದ ರಾಮಯ್ಯನು ದೇವತಾಸ್ತೋತ್ರ ಮಾಡಿದನೆಂದು ಈ ಶಾಸನದಲ್ಲಿ ಹೇಳಲಾಗಿದೆ. ಏಕಾಂತದ ರಾಮಯ್ಯನು ಆ ಕಾಲಕ್ಕೆ ಕಾಳಾಮುಖನಿದ್ದನೆ ?- ಎಂಬುದನ್ನು ಅರಿಯಲು ನಿಜವಾಗಿಯೂ ಯಾವುದೇ ದಾರಿಯಿಲ್ಲ.

ಅಬ್ಬಲೂರಿನ ಸೋಮೇಶ್ವರ ದೇವಾಲಯದಲ್ಲಿ, ವೀರಶೈವ ಶರಣರಾದ ಜೇಡರ ದಾಸಿಮಯ್ಯ, ಸಿರಿಯಾಳಶೆಟ್ಟಿ ಹಾಗೂ ಚಂಗಾಳವ್ವೆಯರ ಆಖ್ಯಾಯಿಕೆಗಳೊಂದಿಗೆ ಏಕಾಂತದ ರಾಮಯ್ಯನ ಜೈನರ ಮೇಲಿನ ವಿಜಯವನ್ನು ಕುರಿತು ನಿರೂಪಿಸುವ ಶಿಲ್ಪಗಳಿವೆ. ಕರ್ನಾಟಕದ ಇನ್ನೂ ಹಲವಾರು ಊರುಗಳಲ್ಲಿರುವ ವೀರಶೈವ ಶಾಸನಗಳಲ್ಲೂ ಕೂಡ ಏಕಾಂತದ ರಾಮಯ್ಯನನ್ನು ಕುರಿತು ಉಲ್ಲೇಖಿಸಲಾಗಿದೆ. ಮೈಸೂರು ಜಿಲ್ಲೆಯ ಕೆಂಪನಪು ಎಂಬಲ್ಲಿಯ ಖಚಿತವಾದ ತಿಥಿಯಿಲ್ಲದ ಒಂದು ಶಾಸನವು ಏಕಾಂತದ ರಾಮಯ್ಯನ ವಾರಸುದಾರನೆಂದು ಬಣ್ಣಿಸಲಾದ, ವೀರಶೈವ ಬೋಧಕ ಯತಿ ಏಕಾಂತದ ಬಸವೇಶ್ವರನನ್ನು ನಮೂದಿಸುತ್ತದೆ.[55] ಬಹಳಷ್ಟು ಮಟ್ಟಿಗೆ ಇದು ಇದೇ ಏಕಾಂತದ ರಾಮಯ್ಯನನ್ನೇ ಕುರಿತು

55. Epigraphia Carnatica, vol. 6 (new edition), no. 144 (pp. 86, 632).

54. ಮೇಲೆ ನೋಡಿ - pp. 169 - 70, ಮತ್ತಷ್ಟು ವಿವರಗಳಿಗಾಗಿ, ಜೆ. ಎಫ್. ಫ್ಲೀಟ್‌ರು, 'Epigraphia Indica, 5 (1898-99), 213-65 (n. b. no. E) ಯಲ್ಲಿ ಅಬ್ಬಲೂರಿನ ಶಾಸನಗಳನ್ನು ಸಂಪಾದಿಸಿದ್ದಾರೆ. ಪಿ. ಬಿ. ದೇಸಾಯಿ ಅವರು ಅಬ್ಬಲೂರಿನ ಇನ್ನಷ್ಟು ಶಾಸನಗಳನ್ನು ಏಕಾಂತದ ರಾಮಯ್ಯ ಹಾಗೂ ಇನ್ನಿತರರೊಂದಿಗೆ ಹೋಲಿಸಿ Epigraphia Indica 29 (1951), 139 - 44 ವರಲ್ಲಿ ಸಂಪಾದಿಸಿದ್ದಾರೆ. ಇದಲ್ಲದೆ ನೋಡಿ ಗೋಪಾಲ ಮತ್ತು ರಿತ್ತಿ, 'Summaries....., nos. 40, 55 - 54 of 1948 - 49. ಅಲ್ಲದೆ ನೋಡಿ Archaeological Survey of India, ARIE for 1958 - 59 (Delhi, 1963), stone no. 543.

ಉಲ್ಲೇಖಿಸುತ್ತಿರಬಹುದು. ಮಂಡ್ಯ ಜಿಲ್ಲೆಯ ಇನ್ನೊಂದು ಶಾಸನವು ವೀರಶೈವ ಯತಿಗಳ ಪಟ್ಟಿಯೊಂದರಲ್ಲಿ ಏಕಾಂತದ ರಾಮಯ್ಯನ ಹೆಸರನ್ನು ಸೇರ್ಪಡಿಸಿದೆ. **ಈ ಶಾಸನವು** 1280 ಅಥವಾ 1305 ಕ್ರಿ.ಶ.ಕ್ಕೆ ಸಮನಾದ ಮಿತಿಯನ್ನು ಹೊಂದಿದ್ದು ಜೈನರ ಮೇಲಿನ ಅವನ ಪ್ರಸಿದ್ಧವಾದ ವಿಜಯದ ಸುಮಾರು 150 ವರ್ಷಗಳ ತರುವಾಯದ್ದಾಗಿದೆ.[56]

ಆದರೂ ಕೂಡ, ಕಾಳಾಮುಖರು ಹಾಗೂ ವೀರಶೈವ ಚಳುವಳಿಗಳ ನಡುವಣ ವ್ಯತ್ಯಾಸಗಳು ತುಂಬ ಎದ್ದು ಕಾಣುವಂತಿವೆ. ಒಟ್ಟಿನಲ್ಲಿ, ವೀರಶೈವರ ದೇವತಾಶಾಸ್ತ್ರ ಹಾಗೂ ಕಾಳಾಮುಖ ಇಲ್ಲವೆ ಹೆಚ್ಚು ಕರಾರುವಾಕ್ಕಾಗಿ ಹೇಳುವುದಾದರೆ ಪಾಶುಪತದ ದೇವತಾಶಾಸ್ತ್ರಗಳು ಎಳ್ಳಷ್ಟು ಹೊಂದಿಕೆಯಿಲ್ಲದವುಗಳು. ವೀರಶೈವರ 'ಷಟ್‌ಸ್ಥಲ' ಸಿದ್ಧಾಂತದ ರೂಪುಲಕ್ಷಣಗಳು ಬಸವನ ಕಾಲದ ತರುವಾಯವೇ ಜನಪ್ರಿಯವಾಗಿರಬಹುದು. ಆದರೆ ಅದು ಪಾಶುಪತ ಪಠ್ಯಗಳ ಪಂಚಕಗಳೊಂದಿಗೆ ಅದಾವುದೇ ಹೋಲಿಕೆಯನ್ನು ಹೊಂದಿಲ್ಲ. ಇದಕ್ಕಿಂತಲೂ ಹೆಚ್ಚು ಮಹತ್ವದ ಸಂಗತಿಯೆಂದರೆ ಪೂರ್ತಿ ಭಕ್ತಿಸಂಪ್ರದಾಯದ ವಾತಾವರಣದಲ್ಲಿ, ಹಿಂದಿನ ಕಾಲದ ವೀರಶೈವ ವಚನಗಳಲ್ಲಿ ಕಂಡುಬರುವ ಧಾರ್ಮಿಕ ಹಾಗೂ ಸಾಮಾಜಿಕ ಮತಾಚರಣೆಗಳ ನಿರಾಕರಣೆಗೆ ಮತ್ತು ಕಾಳಾಮುಖ ಮಠಗಳಲ್ಲಿ ಸಾಂಪ್ರದಾಯಿಕ ಅಂಧಶ್ರದ್ಧೆಗಳಿಗೆ ನೀಡಲಾಗುತ್ತಿದ್ದ ಪ್ರೋತ್ಸಾಹದೊಂದಿಗೆ ಯಾವುದೇ ಬಗೆಯ ಸಂಪರ್ಕ ಬಿಂದುವಿಲ್ಲ. ಇವೆರಡೂ ಚಳುವಳಿಗಳು ಭಾರತದ ಬೌದ್ಧಿಕ ಮತ್ತು ಧಾರ್ಮಿಕ ಪರಂಪರೆ, ಬ್ರಾಹ್ಮಣ್ಯ ಮತ್ತು ಬ್ರಾಹ್ಮಣ್ಯವಿರೋಧ, ವಿದ್ವತ್ತು ಮತ್ತು ಭಕ್ತಿ, ಸಂಸ್ಕೃತವಿದ್ಯೆ ಮತ್ತು ನಾಡನುಡಿಯ ಕಾವ್ಯಸ್ಫೂರ್ತಿ, ವಿಶಾಲ ಭಾರತ ಮಟ್ಟದ ಸಂಸ್ಕೃತಿ ಮತ್ತು ಪ್ರಾದೇಶಿಕ ಸಂಸ್ಕೃತಿ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಶ್ರೇಣೀಕೃತ ವ್ಯವಸ್ಥೆ ಮತ್ತು ಸಾಮಾಜಿಕ ಹಾಗೂ ಸರ್ವಸಮಾನತೆಗಳ ವೈರುದ್ಧ್ಯಗಳನ್ನು ಪ್ರತಿಪಾದಿಸುತ್ತವೆಂದೂ ಹೇಳಬಹುದಾಗಿದೆ. ನಾವು, ಕಾಳಾಮುಖರು ಹಾಗೂ ಮೊದಲ ವೀರಶೈವರ ನಡುವಣ ಮುಂದುವರಿಕೆಯನ್ನು ತುಸು ಮಟ್ಟಿಗೆ ಒಪ್ಪಿಕೊಳ್ಳಬಹುದು. ಆದರೆ, ಬಸವ ಹಾಗೂ ಅವನ ಜೊತೆಯ ವೀರಶೈವರು ಹಿಂದಿನ ಚಳುವಳಿಯ ಬಹಳಷ್ಟು ಸಾಂಸ್ಕೃತಿಕ ಹಾಗೂ ಸಾಮಾಜಿಕ ಮೌಲ್ಯಗಳಲ್ಲಿ ಕ್ರಾಂತಿಯನ್ನು ಉಂಟುಮಾಡಿದರೆಂಬಲ್ಲಿ ಸಂದೇಹವೇ ಇಲ್ಲ. ವೀರಶೈವ ಮತವು "ಕಾಳಾಮುಖ ಮತದ ಸುಧಾರಣೆಯ ಪರವಾದ ಒಂದು ಪಂಥವನ್ನು" ಪ್ರತಿನಿಧಿಸದೆ, ಆ ಮತವ್ಯವಸ್ಥೆಯನ್ನೇ ಬುಡಮೇಲು ಮಾಡಿತೆನ್ನಲು ಅಡ್ಡಿಯಿಲ್ಲ. ಮುಂದಿನ ಕಾಲದಲ್ಲಿ, ವೀರಶೈವರು ಕಾಳಾಮುಖರಂತಹ ಧಾರ್ಮಿಕ ಹಾಗೂ ಸಾಮಾಜಿಕ ಸಂಪ್ರದಾಯನಿಷ್ಠೆಯತ್ತ ಹಿಂತಿರುಗಿದರೆನ್ನುವುದು ಬೇರೊಂದು ಪ್ರಶ್ನೆಯಾಗಿದ್ದು ಚರ್ಚೆಗಾಗಿ ಅದನ್ನು ಬೇರೆಯವರಿಗೆ ಬಿಟ್ಟು ಕೊಡಲಾಗಿದೆ.

❖ ❖ ❖

56. Epigraphica carnatica, vol. 7 (new edition). No. 13 (pp. 197, 558).

# ಗ್ರಂಥ ವಿವರಣ ಪಟ್ಟಿ


Aiyangar, S. Krishnaswami. *Maṇimekhalai in its Historical Setting.* London: Luzac and Co., 1927.

Agrawala, R. C. 'Two Standing Lakulīśa Sculptures from Rajastan,' JOIB, XIV (1965), 388-91.

Agrawala, Vasudeva S. *Vāmana Purāna* - A Study. Varanasì : Prithivi Prakashan. 1964.

Ānandagiri. *Śamkara-vijaya.* Ed. J. Tarkapanch ā nana. ('Bibliotheca Indica.') Calcutta : Baptist Mision Press, 1968.

Āṇandar ā yamakhin. *Jī vā nanda.* Ed. M. Duraiswami Aiyangar. ('Adyar Library Series,' No. 59). Adyar : 1947.

____. *Vidyā pariṇayana.* Ed. Śivadatta and K. P. Parab. 2nd ed. ('Kāvyamālā ', No. 39) Bombay : Mirṇ aya Sāgar Press, 1930.

Ānnigeri, A. M. (ed.) *Karnatak Inscriptions,* Vol. IV. Dharwar : Kannada Research Institute, 1961.

*Āpastambīya Dharmasū tra.* With Haradatta's *Ujjvala commentary.* Ed. Mahādeva Śāstrī and K. Rangāchārya. Mysore : Government Press, 1898.

*Āpastambīya Dharmasūtra.* Trans. G. Bü hler. Vol. II of SBE. Oxford : The clarendon Prss, 1879.

*Atharavaṣ sīras Upanisad.* Ed. G. S. Murti and trans. T. R. S. Ayyangar in their *Śaiva Upanisads.* Madras : Adyar Library, 1953.

Atiya, A. S. *Crusade, Commerce and Culture.* Bloomington, Ind. : University Press, 1962.

Bādarāyan, *Brahma-Sūtra.* See Bhāskarācārya, Rāmānuja, Saṃkarācārya, and Vācaspati Miśra.

Balfour, Henry. 'The Life History of An Aghori Fakir,' *Journal of the Anthropogical Institute* [London], XXVI (1897), 340-57.

Bāṇa, *Harṣa-carita.* Ed. P. V. Kane. Two parts in one volume. 2nd ed. Delhi : Motilal Banarsidass, 1965.

____. *Harsa-carita*. Trans. E. B. Cowell and F. W. Thomas. Photo reprint of 1897 edition. Delhi : Motilal Banarsidass, 1961.

____. *Kādambarī*. 'Purvābhaga'. Ed. P. V. Kane. 2 parts. Bombay : by the editor, 1920-21.

____. *Kadambarī*. 'Uttarabh aga'. Ed. P. V. Kane. Bombay : Nirṇaya Sāgar Press, 1913.

____. *Kadambarī*. Trans. C. M. Ridding. London : Royal Asiatic Society, 1896.

Banerjea, Jitendra Nath. *Development of Hindu Iconography.* Calcutta : University of Calcutta, 1956.

____. 'Lakulīśa - the Founder or the Systematiser of the Pāśupata Order,' *Indian History Congress, proceedings of the Fourteenth Session, Jaipur* (1951), pp. 32-6.

*Bārhaspati-sūtra.* Ed. and trans F. W. Thomas. Lahore : Moti Lal Banarsi Dass, 1921.

Barnett, Lionel David (ed. and trans.). 'Inscriptions at Yewur,' EI, XII, 268-98 and 329-40

____. (ed. and trans.). 'Inscriptions of Huli,' EI, XVIII (1925-26), 170-218.

____. (ed. and trans.). 'Inscriptions of Sudi,' EI, XV (1919-20), 73-112.

____. (ed. and trans.). ' Three Inscriptions of Lakshmeshwar,' EI, XVI (1921-2), 31-52.

____. (ed. and trans.).'Two Inscriptions from Kurgod,' EI, XIV, 265-84.

____. (ed. and trans.). 'Two Inscriptions from Ron, of Śaka 944 and 1102,' EI, XIX, 222-36.

Barrow, H. W. 'On Aghoris and Aghorapanthis,' J An SB, III (1893), 197-251.

*Basava Purāna.* Trans. G. Würth in JBBRAS, VIII (1864-6), 65-97.

Basham, A. L. *History and Doctrines of the Ājīvikas : A Vanished indian Religion.* London : Luzac & Co., 1951.

____. *The Wonder That Was India.* London : Sidgwick and Jackson, 1954.

*Baudhāyana Dharmaśāstra.* Trans. g. Bühler. Vol. XIV of SBE. Oxford : The Clarendon Press, 1882.

Beal, Samuel (trans.). *Chinese Accounts of India.* 4 vols. New edition. Calcutta : Susil Gupta (India) Ltd., 1957-8. (First published in 1883).

Bhadarkar, D. R. (ed.) 'An Eklingji Stone Inscription and the Origin and History of the Lakulīsa,' Sect,' JBBRAS, XXII (1904-7), 151-65.

____. 'Lakulisa,' Archaeological Survey of India, *Annual Report* : 1906-7, pp. 179-92.

____. (ed. and trans.). 'Mathra Pillar Inscription of Chandragupta II : G. E. 61,' EI, XXI (1931-2), 1-9.

____. (ed.). 'Some Published Inscriptions Reconsidered,' IA, XLII (1913), 57- 64. Bhandarkar, R. G. *Early History of the Dekkan : Down to the Mahomedan Conquest.* Reproduced from the *Bombay Gazetteer*, Vol. I. Part II (1896). Calcuta : Susil Gupta (India) Private Ltd., 1957.

____. (ed. and trans.). 'A Revised Transcript and Translation of a chālukya Copper-plate Grant,' JBBRAS, XIV (1878-80), 16-28.

____. *Vaisṇavism, Śaivism and Minor Religious Systems.* Photo Reprint of 1913 edition. Varanasi : Indological Book House, [1965].

Bharati, Agehananda. *The Ochre Robe.* London : G. Allen and Unwin, 1961.

____. *The Tantric Tradition.* London : Rider and co., 1965.

Bhāsarvajña. See Gaṇakārikā.

Bhāskarācārya. *Brahma-sūtra-bhāsya.* Ed. Vindhyeśvari Prasāda Dvivedin. ('Chowkhambā Sanskrit Series,' Nos. 70, 185 and 209.) Benares : Vidya Vilas Press, 1915.

Bhattacharya, Kamaleswar. 'La Secte des Pācupata dans l'ancien Cambodge,' *Journal asiatique* [Paris], CCXLIII (1955), 497-90.

Bhavabhūti. *Mālatī-Mādhava.* With Jagaddhara's commentary. Ed. R. G. Bhandarkar. Bombay : Government Central Book Depot, 1905.

____. *Mālatī-Mādhava.* Ed. and trans. C. R. Devadhar and N. G. Suru. Poona : By the editors, 1935.

al-Birū ni. *Tarikh al-Hind.* Trans. Edward Sachau as *Alberuni's India.* Two volumes in one. New edition. London : Kegan Paul, Trench, Trübner & Co. Ltd., 1910. (First published in 1888.)

Bloomfield, Maurice, 'On False Ascetics and Nuns in Hindu Fiction,' JAOS, XLIV (1924), 202-42.

Böhtlingk, O., and Roth, R. *Sanskrit Wörterbuch.* 7 vols. St. Petersburg: 1855-75.

*Brahmā nda Purā na. Bombay* : Veṅ ka ṭ esvara Press, 1913.

Briggs, George Weston. *Gorakhnā th and Kā nphatā Yogī s.* Calcutta: Y. M. C. A. Publishing House, 1938.

Brown, Norman O. *Hermes the Thief.* Madison : University of Wisconsin Press, 1947.

Bühler, G. (ed. and trans.). 'The Cintra Praśasti of the Reign of Sarangadeva,' EI, I (1888), 271-87.

*Caṇḍ apā la.* See Trivikrama-bhatta.

*Canna-Basava Purā na.* Trans. G. Würth in JBBRAS, VIII (1864-6), 98-221.

Carstairs, George Morrison. *The Twice Born.* London : Hogarth Press, 1957.

Chakravarti, Chintaharan, 'The Soma or Sauma Sect of the Śaivas,' IHQ, VIII (1932), 221-3).

_____. *Tantras : Studies on their Religion and Literature.* Calcutta: Pundthi Pustak, 1963.

Chandra, Pramod. 'The Kaula-Kā pā lika Cults at Khajurā ho,' Lalit Kalā , Nos. 1-2 (1955-56), pp. 98-107.

Chattopadhyā ya, Sudhakar. *The Evolution of Theistic Sects in Ancient India.* calcutta : Progressive Publishers, 1962.

Chaudhuri, Nirad C. *The Continent of Circe.* London : Chatto and Windus, 1965.

Choudhary, Radhakrishna, 'Heretical Sects in the Purā ṇ as,' ABORI, XXXVII (1956), 234-57.

Cousens, Henry. *The Chālukyan Architecture of the Kanarese Districts.* ('Archaeological Survey of India,' New Imperial Series, Vol. XLII.) Calcutta : Government of India, Central Publication Branch, 1926.

Crooke, William. 'Aghori,' ERE, i, 210-13.

Cunningham, A *Report of a Tour in the Punjab in 1878-79.* ('Archaeological Survey of India Reports,' Old Series, Vol. XIV.) Calcutta : Office of Superintendant of Government Printing, 1882.

Daṇḍin. *Daśakumāra-carita.* Ed. And trans. V. Satakopan, V. Anantacharya, and N. Bhaktavatsalam. Madras : V. Ramaswamy Sastrulu and Sons, 1963.

Dasgupta, Shashi Bhusan. *An Introduction to Tāntric Buddhism.* 2d ed. Calcutta : University of Calcutta, 1958.

____. *Obscure Religious Cults.* 2d ed. Calcutta : Firma K. L. Mukhopadhay, 1962.

Dasgupta, Surendranatha. *A History of Indian Philosophy.* 5 vols. Cambridge : Cambridge University Press, 1922-55.

Desai, P. B. (ed.) *South Indian Inscriptions,* Vol. XV. Madras : Government Press, 1964.

Devaṇṇa Bhaṭṭa. *Smṛticandrikā*. Ed. L. Srinivasacharya. 6 vols. Mysore : Government Press, 1914-21.

Devendra Gaṇī. *Commentary on Uttarādhyayana.* Trans. J. J. Meyer in his *Hindu Tales.* London : Luzac & Co., 1909.

Dhanapatisūri. See Mādhavācārya.

Divanji, P. C. 'Lakuliśa of Kārvān and his Pāśupata Culture,' *Journal of the Gujarat Research Society,* XVII (1955), 267-74.

____. 'The Māheśvara Cult and its Offishoots,' *Journal of the Asiatic Society of Bombay,* XXX (1955), PArt II, 6-22.

Eliade, Mircea. *Cosmos and History : The Myth of the Eternal Return.* Translated by W. R. Trask. New York : Harper Torchbooks, 1959. (First published in 1949 as *Le Mythe de l'eternel retour : archetypes et repetition.*)

____. *Yoga : Immortality and Freedom.* Translated by W. R. Trask. London: Routledge & Kegan Paul, 1958. (First published in 1954 as *Le Yoga : Immortalité et Liberté*.)

Filliozat, Jean. *The Classical Doctrine of Indian Medicine.* Translated by D. R. Chanana. Delhi : Munshiram Manoharalal, 1964. (First published in 1949 as *La Doctrine classique de la Médecine indienne.*)

Fleet, John Faithful (ed. and trans.). *Corpus Inscriptionum Indicarum,* Vol. III. Calcuta : 1888.

____. (ed. and trans.) 'Inscriptions at Ablur,' EI. V (1898-9), 213-65.

____. (ed. and trans.). 'Notes on Inscriptions at Gaddak in the Dambal Tālukā of the Dhārwād District,' IA, II (1873), 296-303.

____. (ed. and trans.). 'Sanskrit and Old-Canarese Inscriptions,' IA, IX (1880), 123-5.

____. (ed. and trans.). 'Sanskrit and Old-Canarese Inscriptions,' IA. X (1881), 126-32.

____. (ed. and trans.). 'Sanskrit and Old-Canarese Inscriptions Relating to Yādava Kings of Dēvagiri,' JBBRAS, XII (1876),1-50.

____. 'Śiva as Lakulīśa,' JRAS for 1907, pp. 419-26.

____. (ed. and trans.). 'Sravana Belgola Epitaph of Marasimha II,' EI, V (1898-99). 151-80.

____. (ed. and trans.). 'A Series of Sanskrit and Old-Canarese Inscriptions Relating to the Raṭṭa Chieftains of Saundatti and Belgaum,' JBBRAS, X (1871-74), 167-298.

Gai, G. S. (ed.), *South Indian Inscriptions,* Vol. XX, Mysore : Government Press, 1965.

Gait, Edward Albert. 'Human Sacrifice (Indian),' ERE. VI, 849-53.

*Gaṇakārikā*. Often ascribed to Haradattācārya. With *Ratnaṭīkā* commentary often ascribed to Bhāsarvajña. Ed. C. D. Dalal. ('Gaekwad's Oriental Series,' No. 15.) Baroda : Central Library, 1920.

*Gautama Dharmaśāstra.* Trans. G. Bühler. Vol. II of SBE Oxford : The Clarendon Press, 1879.

Ghurye, G. S. *Indian Sadhus,* 2d. ed. Bombay : Popular Prakashan, 1964.

Gokulanātha,. *Amṛtodaya.* Ed. Śivadatta and K. P. Parab. 2d ed. revised. ('Kāvyamālā,' No. 59.) Bombay : Nirṇaya Sāgar Press, 1935.

*Gorakṣa-siddhānta-saṃgraha.* Ed. Gopi Nath Kaviraj. ('Princess of Wales Saraswati Bhavana Texts,' No. 18.) Benares : Vidya Vilas Press, 1925.

*Guṇaratna.* See Haribhadra.

*Hāla. Gāthāsaptaśatī.* With Gaṅgādhara's commentary. ('Kāvyamālā,' No. 21.) Bombay : Nirṇaya Sāgar Press, 1889.

Haldar, R. R. (ed.) 'Inscription of the Time of Hammir of Ranthambhor, Dated (V. S.) 1345,' EI. XIX, 45-52.

Handiqui, Krishna Kanta. *Yaśastilaka and Indian Culture.* Sholapur : Jainasaṃskṛti Saṃrakshaka Sangha, 1949.

Hara, Minoru. 'Pāśupata Kenkyu I,' *Journal of Indian and Buddhist Studies* [Tokyo], XII (1964), 57-73.

____. *'Pāśupata kenkyū II- Pañcārthabhāsya ad Pāśupatasūtra I, i,' Hikata Hakushi koki kinen ronbunshū* [Fukuoka : 1964], pp. (65)-(80).

____. 'A Note on the Sanskrit Word ni-tya-,' JAOS, LXXIX (1959), 90-6.

____. Review of *Die philosophisch-theologischen Lehren des Pāśupata-Systems nach dem Pañcārthbhāsya und der Ratnaṭīkā by F. a. Schultz,* IIJ, IV (1960), 165-70.

Haradattācārya. See *Gaṇakārikā.*

Haribhadra. Ṣaḍdarśana-samuccaya. With Guṇaratna's Tarkarahasya-dīpikā commentary. Ed. Luigi Suali. ('Bibliotheca Indica.') Calcutta : 1905-14.

____. *Samarāiccakahā.* Ed. H. Jacobi. ('Bibliotheca Indica.') Calcutta : 1926.

Hauer, J. W. *Der Vrā tya*. Stuttgart : W. Kohlhammer, 1927.

Hazra, Rajendra Chandra. '*The Kā lika-Purā na*,' ABORI, XXII (1941), 1-23.

____. 'The Smrti-chapters of the *Kūrma-Purāna*,' IHQ, XI (1935), 265-86.

Heesterman, J. c. 'Vrātya and Sacrifice,' IIJ, VI (1962-3), 1-37.

Hemacandra. *Trișaș tiśalākapuruṣa-caritra*. Trans. Helen M. Johnson. 6 vols.('Gaekwad's Oriental Series.' Nos. 51, 77, 108, 125,139 and 140) Baroda : Central Library, 1931-62.

Hultzsch, E. (ed. and trans.) 'Sravana Belgola Epitaph of Mallishena,' EI, III (1894-95), 184-207.

Hultzsch, E., and Sastri, H. Krishna (ed. and trans.). *South Indian Inscriptions*, Vol. III. Madras : Government Press, 1929.

Indraji, Bhagvānlāl, and Bühler, G. (ed. and trans.) 'Inscriptions from Nepal,' IA, IX (1880), 163-94.

Ingalls, Daniel.H. H. 'Cynics and Pāśupatas : The Seeking of dishonor,' HTR, LV (1962), 281-98.

Jacobi, Hermann. '*Die Enteicklung der Gottesidee bei den Indem und deren Beweise fur das Dasein Gottes*. Bonn : K. Schroeder, 1923.

Jairazbhoy, R. A. *Foreign Influence in Ancient India*. New York : Asia Publishing House, 1963.

Jambhaladatta. *Vetālapañcaviṃśati*. Ed. and trans. M. B. Emeneau. ('American Oriental Series,' Vol. IV.) New Haven : American Oriental Society, 1934.

*Jātakā*. Ed. V. Fausboll. 7 vols. Photo reprint of 1st edition of 1877-97. London : Luzac and Co., Ltd., 1962-4.

Joshi. Purushottam Balkrishna. 'On the Rite of Human Sacrifice in Ancient, Mediaeval and Modern India and Other Countries.' JAnSB III (1893), 275-300.

Kalhana. *Rājataranginī* . Ed. M. A. Stein. Bombay : Education Society Press, 1892.

____. *Rājataraṅginī*. Trans. M. A. Stein. 2 vols. Photo reprint of 1900 edition. Delhi : Motolal Banarsidass, 1961.

*Kālika Purāṇa*. chapter entitled 'Rudhirādhyāya,' Trans. W. c. Blaquiere in Asiatick Reserches, V (1797), 317-91.

Kane, Pandurang Vaman, *History of Dharmaśāstra*. 5 vols. Poona : Bhandarkar Oriental Research Institute, 1930-62.

Kāṇhapāda. See Shahidullah.

*Kāravaṇa Māhātmya*. Edited by C. D. Dalal in his edition of the *Gaṇakārikā*. See above.

Karmarkar, A. P. *The Vrātya or Dravidian Systems*. Vol. I of a projected *The Religions of India*. Lonavla (India) : Mira Publishing House, 1950.

*Kathākośa*. Ed. Jagdish Lal Shastri. Lahore : Shanti Lal Jain, 1942.

*Kathākośa*. Trans. C. H. Tawney. London : Royal Asiatic Society, 1895.

Kavikarṇapūra. *Caitanyacandrodaya*. Ed. Keḍarnātha and W. L. Sāstri. ('Kāvyamālā,' No. 87.) Bombay : Nirṇaya Sāgar Press, 1906.

Keith, A. Berriedale. *A History of Sanskrit Literature*. Photo reprint of 1920 edition. London : Oxford University Press, 1961.

____. *The Sanskrit Drama*. Photo reprint of 1924 edition. London: Oxford University Press, 1964.

Keilhorn, F. (ed.) 'Gadag Inscription of the Yadava Bhillama; Saka-Samvat 1113,' EI, III (1894-5), 217-220.

____. (ed.). 'Twenty-one Copper-plates of the Kings of Kanauj; [Vikrama-Samvat] 1171 to 1233,' EI, IV, 97-129.

Koestler, Arthur. *The Lotus and the Robot*. London : Hutchinson, 1960.

Kosambi, Damodar Dharmanand. *Myth and Reality*. Bombay : Popular Prakashan, 1962.

Krishnamacharlu, C. R. *List of Inscriptions Copied by the Office of the Superntendent for Epigraphy, Madras*. Delhi : Government Press, 1941.

____. (ed.). *South Indian Inscriptions*, Vol. XI, Part I. Madras : Government Press, 1940.

Krishnarao, Bhavaraj V. (ed.) 'Tandikonda Grant of Ammaraja II,' EI, XXIII, 161-70.

Kṛṣṇamisra. *Prabodhacandrodaya*. With *Candrikāvyākhyā and Prakāśaṭīkā* commentaries. *Ed. V. L. Paṇśīkar. 6th ed. Bombay : Nirṇaya Sāgar Press, 1965.*

Ksemendra. *Daśāvatāra-carita*. ed. Durgāprasād and K. P. Parab. Bombay : Nirṇaya Sāgar Press, 1891.

____. *Deśopadeśa and Narmamālā*. Ed. Madhusudan Kaul Shastri. Poona : Āryabhūshan Press, 1923.

Kṣemīśvara *Caṇḍakauśika*. Ed. and trans. Sibani Das Gupta. Calcutta: The Asiatic Society, 1962.

Kudalkar, J. S. (ed. and trans.) 'A Note on Tilakwādā Copper-plate Inscriptions of the Time of King Bhoja Paramāra of Mālwā,' All India Oriental Conference, *Prodeedings and Transactions of 1st session, Poona*, 1919, Vol. II, pp. 319-26.

*Kulārṇava-tantra*. Edited, with a rough paraphrase, by Tārānātha Vidyāratna. Madras : Ganesh and Co. (Madras) Private Ltd., 1965.

Kūrma Purāṇa. Ed. Nilamani Mukhopadhyaya. ('Bibliotheca Indica') Calcutta : Giriśa-Vidyāratna press, 1890.

Lal, Rai Bhadur Hira, 'The Golaki Matha,' *Journal of the Bihar and Orissa Research Society*, XIII (1927), 137-44.

*Lalitavistara*, Ed. P. L. Vaidya. ('Buddhist Sanskrit Texts,' No. 1.) Darbhanga : Mithila Institute, 1958.

*Liṅga Purāṇa*. Ed. Jīvānanda Vidyāsāgara. Calcutta : Nūtana Vālmīki Press, 1885.

Lüders, H. (ed.) 'Gadag Inscription of Vira-Ballala II; Saka-Samvat 1114,' EI, VI (1900), 89-97.

Mādhavācārya. *Samkara-digvijaya*. With Dhanapatisūri's *Diṇḍima commentary*. ( Ānandāsram Sanskrit Series,' no. 22.) Poona : Ānandāsram Press, 1915.

*Mahābhārata* (Critical edition). Vols. III-IV : *Āra ṇyakaparvan.* Ed. V. S. Sukthankar. Poona : Bhandarkar Orintal Research Institute, 1942.

*Mahābhārata* (Critical edition) Vol.s. XIII-XVI : *s ā ntiparavan.* Ed. V. S. Sultankar and S. K. Belvalkar. Poona : Bhandrkar Oriental Research Institute, 1949-54.

*Māhābhārata* (Critical edition). Vol. XI: *Śalyapayvan* Ed. R. C. Dandekar. Poona : Bhandarkar Oriental Research Institute, 1961.

Mahalingam, T. V. 'A Family of P āsupata G ṛhsathas at Jambuk ēsvaram,' JORM, XV (1957), 79-85.

____. 'The Pāśupatas in South India,' JIH, XXVII (1949), 43-53.

*Mahānirva ṇ a-tantra.* Ed. and trans. John Woodroffe as *The Great Liberation (Mahānirvā ṇ a Tantra).* 3d ed. Madras : Ganesh & CO. (Madras) Ltd., 1953.

Mahendravarman. *Mattavil ā sa.* Ed. T. Ganapati S ā stri. ('Trivandrum Sanskrit Series,' No. 55.) Trivandrum : Government Prees, 1917.

____. Mattavilāsa. Trans. L. D. Barnett in BSOS, V (1930), 697-710.

*Maitr ā yan ī ya Upan ī sad.* Ed. and trans. J.A.B. van Buitenen. The Hague : Mouton and Co., 1962.

Majumdar, B.P. 'Lakul ī ś a P ā ś upatas and their Temples in Medieval India,' JBRS, XXXIX (1953), 1-9.

Majumdar, Ramesh Chandra (ed.)*. The Age of Imperial Kanauj. Vol. IV of *The History and Culture of the Indian People.* Bombay : Bharatiya Vidya Bhavan, 1955.

____. (ed). *The Age of Imperial Unity.* Vol. II of same series. Bombay : Bharatiya Vidya Bhavan, 1951.

____. (ed). *The Classical Age.* Vol. III of same series. Bombay : Bharatiya Vidya Bhavan, 1954.

____. (ed.) *The Struggle for Empire,* Vol. V of same series. Bombay : Bharatiya Vidya Bhavan, 1957.

*Manu-smrti.* Trans. G. B ühler. Vol. XXV of SBE. Oxford : Oxford University Press, 1886.

*Matsya Purā na.* ( Ā nand ā ś ram Sanskrit Series,' No. 54.) Poona :

Ā nand ā ś ram Press, 1907.

Mehta, R. N. 'Karavan - The Seat of the Lakul ī ś a Sect,' Indian History Congress, *Proceedings of the Fourteenth Session,* Jaipur (1951), pp. 71-76.

Mitra, Rajendral ā la. 'On Human Sacrifies in ancient India,' JRASB, XLV (1876), 76-118.

Monier-Williams, Monier. *A Sanskrit-English Dictionary.* Photo reprint of 1899 1st edition. Delhi : Motilal Banarsidass, 1963.

Mysore Gazetteer. New Edition edited by C. Hayavadana Rao but but mostly based on B. L. Rice's original edition. 5 vols. Bangalore: Government Press. 1927 - 30.

Nandimath, S.. C. *A Handbood of Viraśaivism.* Dharwar : L.E. Association. 1942.

Narasimhachar, R. (ed. and trans). *Epigraphia Carnatica,* Vol. II (revised edition). Bangalore : Mysore Government Press, 1923.

Narasimhaswami, H. K. (ed), 'Bhairavakonda Inscription of Vikramaditya,' EI, XXXIII (1959-60), 78-81.

____. (ed.). 'Dommara-Nandyala Plates of Punyakumara ; 10th Year.' EI, XXVII (1947-8), 268-76.

*Pañcatantra.* Ed. N ā r ā yana R ā ma Ā ch ā rya. Bombay : Nir ṇaya S ā agar Press, 1959.

Panchamukhi, R. S. (ed.) *Karnatak Inscriptions.* Vol. I. Dharwar : Kannada Research Office, 1941.

Pandey, Kanti Chandra, Bh ā skar ī . vol. III. ('Princess of Wales Sarasvati Bhavana Texts.' No. 84.) Lucknow : Superintendent, Printing and Stationery, U.P., 1954.

Panigrahi, Krishna Chandra, *Archaeological Remains at Bhubaneswar,* Bombay : Orient Longmans, 1961.

*Pāśupata-Sūtra.* With Kaundinya's *Pañcārthabhāsya* commentary. Ed. R. Ananthakrishna Sastri. ('Trivandrum Sanskrit Series,' No. 143.) Trivandrum : University of Travancore, 1940.

*Pāśupata-Sūtra.* Varient readings of several *Sūtras* edited by C. Chakravarti in IHQ. XIX, 270-1.

*Patañjali. Yogasūtra.* Ed. and trans. J. Ballantyne. 4th reprint, Calcutta Susil Gupta (India) Private Ltd., 1963.

Pathak, V. S. History of Saiva Cults in Northern India from Inscriptions. Varanasi : Dr. Ram Naresh Varma, 1960.

____. Ancient Historians of India -- A Study in Historical Biographies, Bombay : Asia Publishing House, 1966.

Pillai, J. M. Somasundaran. *Two Thousand Years of Tamil Literature.* Madras : By the author, 1959.

Pires, Edward A. *The maukharis.* B. G. Paul & Co., 1934.

Raghavan, V. (ed. and trans.) 'Tiruvorriyur Inscription of Chaturanana Pandita : 20th Year of Krishna III.' EI, XXVII (1947-8), 292-303.

Rahamāna, Abdula. *Samdeśa-rāsaka.* Ed. and trans Sri Jina Vijaya Muni. Bombay : Bharatīya Vidyā Bhavan, 1944.

Rājaśekhara. *Karpūramañjarī*. Ed. Sten Konow and trans. Charles Rockwell Lanman. ('Harvard Oriental Series,' Vol. IV) Cam bridge, Mass : Harvard University, 1901.

Rāmacandra. *Kaumudī-mitrānanda.* Ed. Muni Punyavijaya. Bhavanagar : Jaina Ātmānanda Granthamāla, 1917.

____. *Nalavilāsa.* Ed. G. K. K. Shrigondekar and Lalchandra B. Gandhi. ('Gaekwad's Oriental Series,' No. 29). Baroda : Central Library, 1926.

Rāmānuja. *śrībhāsya.* Ed. and trans. R.D. Karmarkar. 2 vols. Poona: University of Poona, 1959-62.

Rangacharya, V. Inscriptions of the Madras Presidency. 3 vols. Madras : Government Press, 1919.

Rangaswamy, M.A. Dorai. *The Religionand Philosophy of Tē vā ram.* 4 vols. in 2 books. Madras : University of Madras, 1958-59.

Rao, N. Lakshminarayan (ed.). South Indian Inscriptions. Vol. XI, Part II. Madras : Government Press, 1953.

Rao. R. Rama, 'Origin and Development of Siva-Worship with Special Reference to V ī ra ś aivism,' QJMS. IV (1924), 190-210 and 282-301.

Rao, T. A. Gopinatha (ed.). 'The Huzur Treasury Plates Belonging to the Visnu Temple at Tiruvalla,' TAS, II (1910), 131-207.

____. *Elements of Hindu Iconography.* 2 vols. Madras : The Law Print ing House, 1914-16.

Renou, Louis, and Filliozat, Jean. *L'Inde classique.* 2 vols. Paris : Payot, 1947-53.

Rice, B. Lewis (ed. and trans.). Epigraphia Carnatica, 12 vols. Bangalore : Mysore Government Press, 1886-1904.

Sakhare, M. R. History and Philosophy of Ling ā yat Religion. *Belgaum:* Mahavir Press, 1942.

*Saktisangama-tantra.* Ed. Benoytosh Bhattacharya. 3 vols. (Gaekwad's Orientalk Series,' Nos.61, 91 and 104.) Baroda : Central Library, 1932-47. (An intended final volume was never published.)

Saletore, Bhasker Anand. *Mediaeval Jainism : With Special Reference to the Vijayanagara Empire.* Bombay : Karnatak Publishing House, (1938).

Samkar ā c ā rya. *Brahma-S ū tra-bh ā sya.* Published together with V ā caspati Misra's Bh ā mat ī . Ā mal ā nanda-Sarasvat ī 's Kalpataru, and Appayad ī ksita's Parimala. 2d ed. Ed. Bh ā rgav S ā str ī . Bombay : Nirnaya S ā gar Press, 1938. (1st edition edited by Anantkrisna S ā str ī .

____. *Brahma-S ū tra-bh ā sya.* Trans. G. Thibaut. Vols. XXXIV and XXXVIII of SBE. Oxford : oxford University Press, 1904.

Sankalia, Hasmukh D. *The Archaeology of Gujarat.* Bombay : Natwarla and Co., 1941.

Sankhadhara. *Lataka-melaka.* Ed. Durg ā pras ā d. 3d ed. ('K ȧ vyam ā l ā No. 20.) Bombay : Nirnaya S ā g ā r Press, 1923.

Sansom. G. B. Japan : *A Short Cultural History.* Revised edition. New York : Appleton-Century-Crofts, Inc., 1943.

Sarkar, Jadunath. *A History of Dasnami Naga Sanyasis.* Allahabad : Sr Panchayata Akhara Mahanirvani, 1958.

Sastri, K. A. Nilakanta. The Colas, 2 vols. Madras : University of Madras 1935-7.

____. The *C ō las.* 2d ed. revised. Madras : University of Madras, 1955.

____. *Development of Religion in South India.* Bombay : Orient Longmans, 1963.

____. *A History of South India.* London : Oxford University Press, 1958.

____. (ed and trans) 'The Ko ḍ umb ā tur Inscription of Vikram-Kesar, JORM. VIII (1933). 1-10.

____. (ed.). *The Mauryas and Satavahanas.* Vol. II of A Comprehen sive History of India, Bombay : Orient Longmans, 1957.

Sastry, R. Shama, and Rao, N. Lakshminarayan (ed.). *South Indian In scriptions,* Vol. IX, Parts I and II. Madras : Government Press, 1939-41.

*Sat-cakra-nir ū pa ṇ a.* With *K ā l ā carana* commentary. Ed. and trans. J. Woodroffe as The Serpent Power, 7th ed. Madras : Ganesh & Co. (Madras) Privated Ltd., 1964.

S ā yana-M ā dhava. *Sarvadar ś ana-sa ṃ graha.* Edited with a Hindi translation by Uma Shankar Sharma. Varanasi : Chowkhamba Vidyabhawan, 1964.

____. Chapter of *Sarvadar ś ana-sa ṃ graha.* entitled 'Nakul ī ś a-P ā ś upata-dar ś ana,' Trans. Minoru Hara in IIJ, II (1958), 8-32.

Sayre, Farrand, *Diogenes of Sinope : A Study of Greek Cynicism.* Balti more : [Printed by J.H. Furst Company], 1938.

Schultz, F.A. *Die philosophisch-theologischen Lehren des Pā ś upata-Systems nach dem Pa ñ c ā rthabh ā sya und der Ratnat ī k ā .* Walldorf-Hessen : 1958.

Shahidullah, M. (ed. and trans.) *Les Chants Mystiques de K ā nha et de Saraha; les Doh a -kosa et les Cary a .* Paris : Adrien-Maisonneuve, 1928.

Sh a stri, Dakshinaranjan. 'The Lok ā yatikas and the K ā p a likas,' IHQ. VII (1931), 125-37.

*Ś iva Purā na V ā yav ī yasamhit ā .* Ed. Mallik ā rjunas ā stri. 2 vols. Sholapore : Dattapras a da Press, 1905-6.

*Skanda Pur ā n̈a.* 7 Vols. Bombay : Venkate ś vara Press, 1909-11.

*Skanda Purā na. Sū tasamhit ā .* With M ā dhav ā c ā rya's commentary. Ed. V. S. Panas ī kara. 3 vols. ( Ā nand ā ś rama-samskrita-granth ā valih.' No. 24.) Poona : M.C. Apte, 1893.

Samadeva *Kath ā sarits ā gar.* Ed. Durg ā pras ā d and K.P. Parab. Bombay: Nirnaya Sagar Pras, 1889.

____. *Kath a sarits a gara.* Trans. C. H. Tawney as *The Ocean of Story.* 10 vols. London : Chas. J. Sawyer, 1924-8.

Sreenivasachar, P. (ed. and trans.) *A Corpus of Inscriptions in the Telingana Districts of H.E.H. the Nizam's Dominions.* Vol. XIII, Part II, of HAS, Hyderabad : 1940.

*Sr ī harsa. Naisadhacarita.* Translated, with extensive notes and extracts from several commentaries, by Krishna Kanta handiqui. 2d ed. revised. ('Deccan College Monograph series,' No. 14.) Poona : 1956.

Subandhu. *V a saradatt ā .* Ed. and trans. Louis H. Gray. Reprint of 1913 edition or york : Ams. Press Inc. 1965.

Subbaiah, A. Venkata. 'A Twelfth Century University in Mysore,' QJMS, VII (1917), 157-96.

Thapar, Romila, *A ṡ oka and the Decline of the Mauryas*. London : Ox ford University Press, 1961.

Trivikrama-bhatta. *Nalacamp ū* . With Candap āla's *Visamapadaprak āṡ a* Ed. Durg ṡ pras ā d and Sivadatta. 3d ed. Bombay : Nirnaya S ā gar Press, 1931.

Tucci, Giuseppe. 'Animadversiones Indicae,' JRASB, n.s. XXVI (1930), 125-60.

Um āpati. *Sivaprak āṡ am*. Trans. Henry R. Hoisington as 'Siva-Pirak āsam, - Light of Siva' in JAOS, IV (1854), 125-244.

Upadhyay, Vasudeva. *Socio-Religious Condition of North India* (700-1200 A.D.). ('Chowkhamba Sanskrit Studies,' Vol. XXXIX.) Varanasi : Chowkhamba Sanskrit Series Office, 1964.

V ācaspati Mi ṡ ra. See ṡ amkar āc ārya.

La Vall e′ e Poussin, Louis de. 'T āntrism (Buddhist),' ERE, XII, 193-97.

***V ā mana Pur ā na,*** **Bombay : Venkate ṡ vara Press, 1908.**

*Var ā hamihira. Brhajj ā taka,* Ed. and trans. V. Subrahmanya Sastri as Brihat Jataka. Mysore : Government Branch Press, 1929.

____. *B ṛ hajj ā taka.* With Utpala's commentary. Bombay : 1863.

____. *B ṛ hatsamhit ā* . Ed. H. Kern. ('Bibiotheca India.') Calcutta : 1865.

____. *B ṛ hatsamhit ā* . trans. H. Kern in JRAS, n.s. VII (1875), 81-134. (Translation only up to chapter 134).

____. *B ṛ hatsamhit ā* . 2 vols. Ed. and trans. V. Subramanya Sastri. Bangalore : V. B. Soobbiah and Sons, 1947.

*V ā sistha Dharmas u tra.* Trans. G. B ü hler. Vol. XIV of SBE. Oxford : The Clarendon Press, 1882.

*V ā yu Pur ā na.* (' *Ānand āṡ ram* Sanskrit Series,' No. 45.) Poona : *Ānand āṡ ram* Press, 1905.

Venkayya, V. (ed.) 'Triplicane Inscription of Dantivarman,' EI. VIII, 290-96.

Vidy ā bh ū sana, Satis Chandra. 'Influence of Aristotle on the Development of the Syllogism in Indian Logic,' JRAS for 1918, pp. 469-88.

Vinayacandra. *Mallin ā tha-carita.* Ed. Hargovinddas and Bechardas. Benares : Harshchand Bhurabhai, 1911.

*Visnu Pur ā na.* Trans. H. H. Wilson. 3rd ed. Calcutta : Punthi Pustak, 1961. (First publixhed in 1840)

*Vis ṇ u-sm ṛ iti.* Trans. J. Jolly. Vol. VII of SBE. Oxford : The Clarendon Press, 1880. Yyas, Akshaya Keerty (ed.) 'Paldi Inscription of Guhila Arisimha, V. S. 1173,' EI, XXX, 8ff.

Vy ā s ā cala. *Sa ṃ kara-vijaya.* Ed. T. Chandrasekharan. Madras : Government Press, 1954.

Watters, Thomas, On *Yuan Chwang's Travels in India.* 2 vols. London : Royal Asiatic Society, 1904.

*Y ā j ñ avalkya-sm ṛ ti.* With Vij ñā ne ś vara's Mit ā ksara commentary. Ed. N. R. Ā ch ā rya. 5th ed. Bombay : Nirnaya S ā gar Press, 1949.

Ya ś ahp ā la. *Mohar ā japar ā jaya.* Ed. Muni Chaturavijaya. ('Gaekwad's Oriental Series,' No. 9.) Baroda : Central Library, 1918.

Yazdani, G. (ed.) *The Early History of the Deccan.* 2 vols. London : Oxford University Press, 1960.

Zimmer, Heinrich. *The King and the Corpse.* New York : Pantheon Books, 1948.

# ವಿಶಿಷ್ಟ ಪದಸೂಚಿ

ಈ ಮುಂದಿನಂತೆ ಸಂಕ್ಷಿಪ್ತಗಳನ್ನು ಬಳಸಲಾಗಿದೆ : ಕಾ. ಯ : ಕಾಳಾಮುಖ ಯತಿ. ಕಾ. ದೇ ಕಾಳಾಮುಖ ದೇವಾಲಯ, ಟಿ : ಅಡಿ ಟಿಪ್ಪಣಿ

# ಕಾಪಾಲಿಕರು ಮತ್ತು ಕಾಳಾಮುಖರು

ಕಾಪಾಲಿಕ ಮತ್ತು ಕಾಳಾಮುಖ ಭಾರತದಲ್ಲಿ ಮಧ್ಯಯುಗದಲ್ಲಿದ್ದ ಎರಡು ಶೈವ ಪಂಥಗಳು. ಭಾರತದ ನೆಲದಲ್ಲಿ ಹುಟ್ಟಿದ ಯಾವುದೇ ಧಾರ್ಮಿಕ ಪಂಥ ಏಕಗಾಮಿಯಾಗಿ ಹರಿದದ್ದಿಲ್ಲ. ತನ್ನ ಕಾಲದಲ್ಲಿ ಪ್ರಬಲವಾಗಿದ್ದ ಅನ್ಯಧರ್ಮೀಯ ಪಂಥಗಳ ಜೊತೆಗೆ ವಾಗ್ವಾದಗಳನ್ನು ಸೃಷ್ಟಿಸಿಕೊಂಡು ಆರೋಪ ಪ್ರತ್ಯಾರೋಪಗಳ ಸಮರಮುಖೀ ವಾತಾವರಣದಲ್ಲಿ ಉಸಿರಾಡಿದ್ದೇ ಹೆಚ್ಚು. ಸಿದ್ಧಾಂತ ಶಿಖಾಮಣಿಗಳ ಅರ್ಥಸಂಕೋಚದೃಷ್ಟಿ ಹಾಗೂ ಮತೀಯ ತತ್ವನಿಷ್ಠೆಯ ಜಡಭಾವದ ಪರಿಣಾಮ ಈ ಸಮರಮುಖೀ ವಾತಾವರಣ. ಈ ಕಾರಣದಿಂದಾಗಿಯೇ ಕಾಳಾಮುಖ ಮತ್ತು ಕಾಪಾಲಿಕಗಳು ತಮಗೆ ಸಂಬಂಧಿಸಿದ ಯಾವುದೇ ಆಕರ ಗ್ರಂಥಗಳನ್ನು ಉಳಿಸಿಕೊಳ್ಳದೇ ಹೋದವು. ಈ ಎರಡೂ ಪಂಥಗಳ ಅಧ್ಯಯನಕ್ಕೆ ಎದುರಾಳಿ ಪಂಥಗಳಲ್ಲಿ ವಿರೋಧಭಾವದಲ್ಲಿ ದಾಖಲಾದಂತೆ ಉಳಿದಿರುವ ವಿಚಾರಗಳನ್ನು ಸಂಗ್ರಹಿಸುವುದರ ಜೊತೆಗೆ ಲಭ್ಯವಿರುವ ಅಪರೂಪದ ಇತರೆ ಆಕರಗಳನ್ನೂ ಸಂಗ್ರಹಿಸಿ ವ್ಯಾಪಕ ಕ್ಷೇತ್ರಕಾರ್ಯದ ಮುಖೇನ ವಿದ್ವಾಂಸರಾದ ಡೇವಿಡ್ ಎನ್. ಲಾರೆಂಜನ್ ಅವರು ಕಾಪಾಲಿಕರು ಕಾಳಾಮುಖರು – ಎರಡು ಶೈವಸಂಪ್ರದಾಯಗಳು – ಎಂಬ ಕೃತಿಯನ್ನು ರಚನೆ ಮಾಡಿದ್ದಾರೆ. ಈ ಎರಡೂ ಸಿದ್ಧಾಂತ ಮತ್ತು ಸಂಪ್ರದಾಯಗಳ ಮತಾಚರಣೆಗಳನ್ನು ಕುರಿತಾಗಿ ಇರುವ ವಿಭಿನ್ನ ಬಗೆಯ ವ್ಯಾಖ್ಯಾನಗಳನ್ನು ವಿಶ್ಲೇಷಿಸುವಾಗ ಲೇಖಕರು ತೋರುವ ಎಚ್ಚರ ಸತ್ಯಶೋಧಕ ಭಾವದ ವಿವೇಕದಿಂದ ಕೂಡಿದೆ.

: ಪ್ರೊ II ಎಸ್. ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಬೆಂಗಳೂರು - ೨

ಬೆಲೆ : ರೂ 100 /-

ISBN : 81-7713-186-9